ಸಂಪುಟ ೨೫
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ-೧೯೯೨

(ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ ವಿಶೇಷಾಂಕ)

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು :

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯಾ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಸಂಪುಟ ಃ ೨೫ ಸಂಚಿಕೆ ಃ ೧

ಗೌರವ ಸಂಪಾದಕರು
ಡಾ. ಎಸ್. ರಾಮೇಗೌಡ
ಕುಲಪತಿಗಳು

ಸಂಪಾದಕರು
ಡಾ. ವೀರಣ್ಣ ರಾಜೂರ
ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೫ ಸಂಚಿಕೆ : ೧

ಅಗಸ್ಟ – ೧೯೯೨

ಸ್ವಾತಂತ್ರ್ಯೋತ್ಸವ ಸಂಚಿಕೆ


(ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿಶೇಷಾಂಕ)

ಪ್ರಕಾಶಕರು
ಶ್ರೀ ಸದಾನಂದ ಕನವಳ್ಳಿ
ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ. ಧಾರವಾಡ

ಮುದ್ರಕರು
ಶ್ರೀ ಜಿ. ಬಿ. ಮನ್ವಾಚಾರ
ನಿರ್ದೇಶಕರು,
ಕ. ವಿ. ವಿ. ಮುದ್ರಣಾಲಯ, ಧಾರವಾಡ

ಪರಿವಿಡಿ

• •



ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ

ಮಾಸ್ತಿ ಜೀವನ ಹಾಗೂ ಸಾಹಿತ್ಯ

• ಜಿ. ಎಂ. ಹೆಗಡೆ

ಹೊಸಗನ್ನಡ ಸಾಹಿತ್ಯದ ಉತ್ಕರ್ಷಕ್ಕಾಗಿ ದುಡಿದ ಮಹನೀಯರಲ್ಲಿ ಮಾಸ್ತಿಯವರು ಅಗ್ರಗಣ್ಯರಾಗಿದ್ದಾರೆ. 'ಶ್ರೀನಿವಾಸ' ಕಾವ್ಯನಾಮದ ಮಾಸ್ತಿಯವರು ಮಾಡಿದ ಸಾಹಿತ್ಯ ಸಾಧನೆ ಅನನ್ಯವಾದದ್ದಾಗಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿಯ ಅಭ್ಯುದಯಕ್ಕಾಗಿ ಶ್ರಮಿಸಿದ ಮಾಸ್ತಿಯವರ ಚೇತನ ಸಾಹಿತ್ಯಮಾಧ್ಯಮದ ಮೂಲಕ ಲೋಕಕಲ್ಯಾಣವನ್ನು ಬಯಸುತ್ತದೆ. ಅಪಾರವಾದ ಮಾನವಾನುಕಂಪೆ, ಸತ್ಯ, ಶಾಂತಿ, ಪ್ರೀತಿ ಮೊದಲಾದ ಜೀವನ ಮೌಲ್ಯಗಳನ್ನು ತಮ್ಮ ಸಾಹಿತ್ಯದ ಮೂಲಕ ಹರಡುತ್ತ ಬಂದ ಮಾಸ್ತಿಯವರು ಕನ್ನಡ ಸಂಸ್ಕೃತಿಯನ್ನು ರೂಪಿಸಿದ ಮಹಾಲೇಖಕರಾಗಿದ್ದಾರೆ.[1] ಭಾರತೀಯ ಸಮಕಾಲೀನ ಸಾಹಿತ್ಯದಲ್ಲಿ ಅವರು ಮಹಾಮಾನವತಾವಾದಿ ಲೇಖಕರಾಗಿ ಪ್ರಸಿದ್ಧರಾಗಿದ್ದಾರೆ. ಸಂವೇದನಾಶೀಲವಾದ ಪ್ರತಿಭೆ, ವಿಸ್ತಾರವಾದ ಅನುಭವ ಪ್ರಪಂಚ, ವಿಶಾಲವಾದ ಸಾಹಿತ್ಯಾಭಿರುಚಿಯ ದ್ಯೋತಕವಾಗಿ ಮೂಡಿ ಬಂದ ಅವರ ಸಾಹಿತ್ಯಕೃತಿಗಳು ಕನ್ನಡ ಸಾರಸ್ವತ ಲೋಕದ ಅಪಾರ ಮನ್ನಣೆಗೆ ಪಾತ್ರವಾಗಿವೆ. ಬೇಂದ್ರೆಯವರು ಕನ್ನಡ ಭಾವಗೀತೆಗೆ ಹರಿಕಾರರಾದಂತೆ ಕನ್ನಡ ಗದ್ಯಸಾಹಿತ್ಯದ ಉತ್ಕರ್ಷಕ್ಕೆ ಮಾಸ್ತಿಯವರ ಕೊಡುಗೆ ಅಮೂಲ್ಯವಾಗಿದೆ.

ಮಾಸ್ತಿ ಜೀವನದರ್ಶನ

ಮಾಸ್ತಿಯವರು ಬೃಹತ್ ಪ್ರಮಾಣದ ಸಾಹಿತ್ಯ ಸೃಷ್ಟಿಸಿರುವಂತೆಯೇ ಅವರ ಬದುಕೂ ಸಮೃದ್ಧವಾದದ್ದಾಗಿದೆ. ಕನ್ನಡ ನಾಡಿನಲ್ಲಿ ದೊಡ್ಡ ಬದುಕನ್ನು ಬದುಕಿ ಲೋಕಮನ್ನಣೆಗೆ ಪಾತ್ರರಾದ ಮಾಸ್ತಿಯವರು 'ಪೌಯಾತ್' ಅಥವಾ 'ದೊಡ್ಡಮನೆ' ಮನೆತನದವರು. ಈ ಮನೆತನದ ಪುಣ್ಯ ಸ್ತ್ರೀಯೊಬ್ಬಳು ಗಂಡ ಸತ್ತಾಗ ಸಹಗಮನ ಮಾಡಿ ಮಹಾಸತಿ ಯಾದುದರಿಂದಲೇ 'ಮಾಸ್ತಿ' ಎಂಬ ಹೆಸರು ಅವರ ಮನೆತನಕ್ಕೆ ಬಂದುದು. ಕೋಲಾರ ಜಿಲ್ಲೆಯ ಮಾಸ್ತಿ ಗ್ರಾಮದಲ್ಲಿ ೧೮೯೧ ಜೂನ್ ೬ ರಂದು ಮಾಸ್ತಿಯವರು ಈ ಮನೆತನದಲ್ಲಿ ಜನಿಸಿದಾಗ ದೊಡ್ಡಮನೆ ಬಡತನದ ಬವಣೆಯಲ್ಲಿ ನಲುಗಿತ್ತು.

ಸಾಹಿತ್ಯ ಪ್ರೇರಣೆ

ತಮ್ಮ ಬಾಲ್ಯ ಜೀವನವನ್ನು ಬಡತನದಲ್ಲಿ ಕಳೆದ ಮಾಸ್ತಿಯವರು ಚಿಕ್ಕಂದಿನಲ್ಲಿರುವಾಗಲೇ ಸಾಹಿತ್ಯಾಭಿರುಚಿ ಪಡೆದಿದ್ದರು. ಅವರ ಮೇಲೆ ಮೊದಲು ಪರಿಣಾಮ ಮಾಡಿದ ಕಾವ್ಯ ಲಕ್ಷ್ಮೀಶನ ಜೈಮಿನಿ ಭಾರತ, ಬಾಲಬೋಧೆಯ ಹಾಡುಗಳು, ಗೋವಿನ ಕಥೆ. ಇವುಗಳ ಪದ್ಯಗಳನ್ನು ಕೇಳುತ್ತ ಮಾಸ್ತಿಯವರ ಎಳೆಯ ಮನಸ್ಸಿನಲ್ಲಿ ಭಾವುಕತೆ ಉಂಟಾಯಿತು. ಶಿವಾರಪಟ್ಟಣದ ಶಾಲೆಯಲ್ಲಿ ನಾರಣಪ್ಪನವರು ಹೇಳಿದ ಕಾಳಿದಾಸನ ಕಥೆಗಳು, ಅಜವಿಲಾಪದ ಪದ್ಯಗಳು

ಮಾಸ್ತಿಯವರಿಗೆ ಪರಿಚಿತವಾದವು. ಕುರುಬನಾದ ಕಾಳಿದಾಸ ಸರಸ್ವತಿಯ ಕೃಪೆಯಿಂದ ಮಹಾಕವಿಯಾದ ಕಥೆ ಅವರ ಆಸಕ್ತಿಯನ್ನು ಕೆರಳಿಸಿತು. ಮನೆಯಲ್ಲಿ ತಾತನಿಂದ ತೆಲುಗು ಕವಿ ಶ್ರೀನಾಥ, ಬೊಮ್ಮನ, ಪೋತನ ಕವಿಗಳ ಕಥೆಗಳನ್ನು ಮಾಸ್ತಿ ಕೇಳಿದರು. ಒಂದೆಡೆ ಗುರುಗಳಿಂದಲೂ, ಇನ್ನೊಂದೆಡೆ ಹಿರಿಯರಿಂದಲೂ ಕವಿ ಕಥೆಗಳನ್ನು ಕೇಳಿದ ಮಾಸ್ತಿಯವರಿಗೆ "ಕಾವ್ಯ ಶ್ರೇಷ್ಠ ತತ್ವ, ಅದು ಸತ್ಯವನ್ನು ನುಡಿಯುತ್ತದೆ. ಕಾವ್ಯ ನುಡಿದದ್ದು ಸತ್ಯವಾಗುತ್ತದೆ. ಆದರೆ ಈ ಯೋಗ್ಯತೆ ಬರುವದಕ್ಕೆ ಅದು ಗುಣಪೂರ್ಣವಾಗಿರಬೇಕು, ದೋಷರಹಿತವಾಗಿರಬೇಕು. ಅತ್ಯುನ್ನತ ಕವಿತೆಯಲ್ಲೂ ಯೋಗ್ಯತೆ ಹೆಚ್ಚು ಕಡಿಮೆ ಇರುತ್ತದೆ''.[೫] ಎಂದು ಕಾವ್ಯದ ಬಗೆಗೆ ದೃಢವಾದ ತಿಳುವಳಿಕೆ ಉಂಟಾಯಿತು.

ಗ್ರಾಮೀಣ ಬದುಕಿನ ಸಂಪ್ರದಾಯ, ಹಬ್ಬ ಹರಿದಿನಗಳು, ಧಾರ್ಮಿಕ, ಸಾಂಸ್ಕೃತಿಕ ಪರಿಸರ ಮಾಸ್ತಿಯವರ ಬಾಲ್ಯ ಜೀವನದಲ್ಲಿ ವಿಪುಲ ಪ್ರಭಾವ ಬೀರಿದವು. ಮಾಸ್ತಿ ತಮ್ಮ ಕಾಲದ ಬುದ್ಧಿವಂತ ವಿದ್ಯಾರ್ಥಿಯಾಗಿ ಬೆಳೆಯತೊಡಗಿದರು. ಹೈಸ್ಕೂಲಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದ ಮಾಸ್ತಿಯವರು ವಾರಾನ್ನ ಮಾಡಿಕೊಂಡು ಅಭ್ಯಾಸ ಮಾಡಿದರು. ಸುಬ್ಬಕೃಷ್ಣಯ್ಯ ಹಾಗೂ ವರದಾಚಾರ್ಯರ ಪಾಠಗಳನ್ನು ಕೇಳಿ ಮಾಸ್ತಿಯವರು ಶೇಕ್ಸಪಿಯರ್ ಸ್ಕಾಟ್ ಮೊದಲಾದವರ ಸಾಹಿತ್ಯ ವ್ಯಾಸಂಗವನ್ನು ಮಾಡಿದರು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಮದ್ರಾಸ್ ಪ್ರಾಂತಕ್ಕೆ ಪ್ರಥಮ ಸ್ಥಾನ ಪಡೆದ ಮಾಸ್ತಿಯವರು ಬೆಂಗಳೂರಿನಲ್ಲಿ ಬಿ.ಎ. ಹಾಗೂ ಮದ್ರಾಸಿನಲ್ಲಿ ಇಂಗ್ಲೀಷ್ ಎಂ.ಎ. ಅಧ್ಯಯನ ಮಾಡಿ ಪ್ರಥಮ ಸ್ಥಾನ ಪಡೆದರು. ಮಾಸ್ತಿಯವರು ಕನ್ನಡ, ಭಾರತೀಯ ಹಾಗೂ ಇಂಗ್ಲೀಷ್ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದುದರಿಂದ ಕನ್ನಡದಲ್ಲೂ ಅಂಥ ಶ್ರೇಷ್ಠ ಸಾಹಿತ್ಯ ರಚಿಸಬೇಕೆಂದು ಆಶಿಸಿದರು. ಅವರ ಈ ಅಭಿಲಾಷೆಗೆ ತಕ್ಕ ಸಮಕಾಲೀನ ಸನ್ನಿವೇಶವಿತ್ತು. ಆಗತಾನೆ ಕನ್ನಡ ನವೋದಯ ಕಣ್ಣು ತೆರೆಯತೊಡಗಿತ್ತು. ಯೌವ್ವನದ ಈ ಆಸೆ ಕನಸುಗಳನ್ನು ಗರಿಗೆದರಿಸಿಕೊಳ್ಳುವ ಅವಕಾಶ ಮಾಸ್ತಿಯವರಿಗೆ ಪ್ರಾಪ್ತವಾಯಿತು.

ವೃತ್ತಿಜೀವನ, ಕನ್ನಡ ಸೇವೆ

ವ್ಯಾಸಂಗಜೀವನದಲ್ಲಿರುವಾಗಲೇ ಪಂಕಜಮ್ಮನವರೊಂದಿಗೆ ವಿವಾಹವಾದ ಮಾಸ್ತಿಯವರು ಆದರ್ಶಸಂಸಾರವನ್ನು ನಡೆಸಲು ಮುಂದಾದರು. ೧೯೧೪ ರಲ್ಲಿ ಅವರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ತೇರ್ಗಡೆಯಾಗಿ ಅಸಿಸ್ಟೆಂಟ್ ಕಮೀಶನರ್ ಆಗಿ ಸರಕಾರದ ಸೇವೆಗೆ ತೊಡಗಿದರು. ಸರಕಾರದ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳಾಗಿ ಕಾರ್ಯಮಾಡುವಾಗ ಮಾಸ್ತಿಯವರು ಕನ್ನಡ ನಾಡನ್ನೆಲ್ಲಾ ಸುತ್ತಿದರು. ನಾಡ ಜನಜೀವನವನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದರು. ಅವರ ಅಧಿಕಾರಿ ಜೀವನದ ಜೊತೆಗೆ ಅವರ ಸಾಹಿತ್ಯಜೀವನವೂ ಅಭಿವೃದ್ಧಿ ಹೊಂದಿರುವದು ಗಮನಾರ್ಹ ಸಂಗತಿಯಾಗಿದೆ. ಸರಕಾರದ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯ ಮಾಡುವಾಗ ಕನ್ನಡದ ಅನುಷ್ಠಾನಕ್ಕಾಗಿ ಶ್ರಮಿಸಿದ ಮಾಸ್ತಿಯವರು ಮೈಸೂರು ಪ್ರಭುಗಳಿಂದ ಸಾರ್ವಜನಿಕ ಸೇವೆಗಾಗಿ ಕೊಡುವ 'ರಾಜಸೇವಾ ಪ್ರಸಕ್ತ'

ಗೌರವವನ್ನು ಪಡೆದಿದ್ದರು. ಆದರೆ ೨೯ ವರ್ಷಗಳ ಕಾಲ ಉನ್ನತ ಸೇವೆ ಮಾಡಿದ ಮಾಸ್ತಿಯವರ ಸೇವಾ ಹಿರಿತನವನ್ನು ಕಡೆಗಣಿಸಿ ಅವರಿಗಿಂತ ಕಿರಿಯರಿಗೆ ರಾಜಕೀಯ ಕಾರಣಗಳಿಂದ ಮಂತ್ರಿಸ್ಥಾನಕ್ಕೆ ಮಹಾರಾಜರು ಆಯ್ಕೆ ಮಾಡಿದುದು ಮಾಸ್ತಿಗೆ ಖೇದವುಂಟಾಗಿ ಅಧಿಕಾರ ತ್ಯಜಿಸಿದರು (೧೯೪೩). ಇದು ಅವರ ಸ್ವಾಭಿಮಾನದ ದ್ಯೋತಕವಾಗಿದೆ.

ಮಾಸ್ತಿಯವರ ನಿವೃತ್ತಿಯಿಂದ ಸರಕಾರೀ ಸೇವಾಕ್ಷೇತ್ರಕ್ಕೆ ನಷ್ಟವಾಗಿದ್ದರೂ ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ಅತಿಶಯವಾದ ಲಾಭವಾಯಿತೆಂದು ಹೇಳಬಹುದು. ಸರಕಾರದ ಕೆಲಸ ತ್ಯಜಿಸಿದ ಮಾಸ್ತಿಯವರು ಕನ್ನಡ ಭಾಷಾ ಸಾಹಿತ್ಯದ ಅಭಿವೃದ್ಧಿಗೆ ದುಡಿಯಲು ಅಣಿಯಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ನಾಡಿನುದ್ದಗಲಕ್ಕೂ ಸಂಚರಿಸಿ ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಮುಂದಾದರು. ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದರು. ಹೊಸಗನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿ ಅದರ ವೈವಿಧ್ಯಕ್ಕೆ ಕಾರಣರಾದರು. 'ಜೀವನ' ಮಾಸಪತ್ರಿಕೆಯ ಸಂಪಾದಕರಾಗಿ ೨೧ ವರ್ಷಕಾಲ ಕಾರ್ಯಮಾಡಿದರು. ಅವರು 'ಜೀವನ ಕಾರ್ಯಾಲಯ' ಕಟ್ಟಿ ಬೆಳೆಸಿದ ಕಾರ್ಯ ಉಲ್ಲೇಖನೀಯವಾದದ್ದಾಗಿದೆ.

ಸಾಹಿತ್ಯ ನಿರ್ಮಾಪಕ, ಪೋಷಕ

ಮಾಸ್ತಿಯವರು ಕನ್ನಡದ ಖ್ಯಾತ ಕವಿ ಲೇಖಕರ ಸಾಹಿತ್ಯಿಕ ಜೀವನ ವಿಕಸಿಸುವಂತೆ ಮಾಡಿದ ವಿಷಯ ಗಮನಾರ್ಹವಾದುದು. ವರಕವಿ ಬೇಂದ್ರೆಯವರ ಕಾವ್ಯವನ್ನು ಮೆಚ್ಚಿ ಉತ್ತೇಜನ ನೀಡಿ ಅವರನ್ನು ನಾಡಿನ ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ದು ಸಭೆಗಳಲ್ಲಿ ಪರಿಚಯಿಸಿ ಬೇಂದ್ರೆ ಕಾವ್ಯದ ಸೊಗಸನ್ನು ಹರಡುವಂತೆ ಮಾಡಿದರು, ಅವರು ಕಷ್ಟದಲ್ಲಿದ್ದಾಗ ಆರ್ಥಿಕ ನೆರವು ನೀಡಿದರು. ಹಾಗೆಯೇ ಜಿ.ಪಿ. ರಾಜರತ್ನಂ ಅವರು ಸಾಹಿತ್ಯ ಸೇವೆಗೆ ತೊಡಗಲು ಮಾಸ್ತಿಯವರ ಪ್ರೇರಣೆಯೇ ಮುಖ್ಯ ಕಾರಣವಾಗಿದೆ. ಕುವೆಂಪು ಅವರ 'ಕೊಳಲು', ಬೇಂದ್ರೆಯವರ 'ಗರಿ', ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹಳ್ಳಿಯ ಚಿತ್ರಗಳು' ದೇವುಡು ಅವರ 'ವಿಚಾರಣೆ', ಪು.ತಿ.ನ. ಅವರ 'ಹಣತೆ', ಕೈಲಾಸಂ ಅವರ 'ಹುತ್ತದಲ್ಲಿ ಹುತ್ತ' ಇವುಗಳೆಲ್ಲಾ ಬೆಳಕು ಕಂಡುದು ಮಾಸ್ತಿಯವರು ಆರಂಭಿಸಿದ 'ಲೇಖಕ ಸಹಾಯನಿಧಿ' ಯೋಜನೆಯಿಂದಲೇ. ಶಿವರಾಮ ಕಾರಂತರಿಗೂ ಮಾಸ್ತಿ, ಗ್ರಂಥಪ್ರಕಟಣೆಗೆ ನೆರವಾಗಿದ್ದಾರೆ. ಹೀಗೆ ಮಾಸ್ತಿಯವರು ಸಾಹಿತ್ಯ ನಿರ್ಮಾಪಕ, ಪೋಷಕರಾಗಿ ಸ್ಮರಣೀಯರಾಗಿದ್ದಾರೆ.

ಪ್ರಶಸ್ತಿ, ಗೌರವ

ಮಾಸ್ತಿಯವರ ಸಾಹಿತ್ಯ ಸೇವೆಯನ್ನು ಕನ್ನಡ ಜನತೆ ಬಹು ಕಾಲದಿಂದಲೂ ಗೌರವಿಸಿ ಸನ್ಮಾನಿಸುತ್ತಾ ಬಂದಿದೆ. ಅವರು ಬಹುಹಿಂದೆಯೇ ೧೯೨೯ರ ಬೆಳಗಾಂವಿ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯವು ಮಾಸ್ತಿಯವರಿಗೆ ೧೯೫೬ರಲ್ಲಿ ಗೌರವ ಡಿ.ಲಿಟ್. ಪ್ರಶಸ್ತಿ ನೀಡಿದೆ. ೧೯೬೮ ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿ ಅವರ 'ಸಣ್ಣ ಕತೆಗಳು' ಸಂಕಲನಕ್ಕೆ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೭೪ ರಲ್ಲಿ ಅವರು ಕೇಂದ್ರ ಸಾಹಿತ್ಯ ಅಕಾಡಮಿಯ ಫೆಲೋ ಆಗಿ ಗಣ್ಯರಾಗಿದ್ದರು. ಭಾರತದ ಹೆಸರಾಂತ ಪಿ.ಇ.ಎನ್. ಸಂಸ್ಥೆಯ

ಅಧ್ಯಕ್ಷರಾಗಿ ೧೯೭೬ ರಲ್ಲಿ ಆಯ್ಕೆಯಾಗಿದ್ದರು. ಅವರ ಸಾಹಿತ್ಯ ಮತ್ತು ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಎರಡು ದೊಡ್ಡ ಅಭಿನಂದನ ಗ್ರಂಥಗಳು 'ಶ್ರೀನಿವಾಸ' (೧೯೭೨) ಹಾಗೂ 'ಶ್ರೀನಿವಾಸ ಸಾಹಿತ್ಯ' (೧೯೭೪) ಅವರಿಗೆ ಸಮರ್ಪಿಸಲ್ಪಟ್ಟಿವೆ. ೧೯೮೨ ರಲ್ಲಿ ವರ್ಧಮಾನ ಪ್ರಶಸ್ತಿ ಅವರ 'ಕಾಳಿದಾಸ' ನಾಟಕಕ್ಕೆ ನೀಡಲಾಗಿದೆ. ೧೯೮೩ ರ ಭಾರತೀಯ ಜ್ಞಾನಪೀಠ ಪ್ರಶಸ್ತಿ ಮಾಸ್ತಿಯವರ 'ಚಿಕ್ಕವೀರ ರಾಜೇಂದ್ರ' ಕಾದಂಬರಿಗೆ ಲಭಿಸಿದ್ದು. ಇದರಿಂದ ಭಾರತದ ಸರ್ವೋತ್ಕೃಷ್ಟ ಸಾಹಿತ್ಯ ಪ್ರಶಸ್ತಿಯನ್ನು ಅವರು ಪಡೆದಂತಾಗಿದೆ.

ಕೌಟುಂಬಿಕ ಜೀವನ

ಮಾಸ್ತಿಯವರ ಸಾಂಸಾರಿಕ ಜೀವನವು ಆದರ್ಶಮಯವಾದದ್ದು. ಅವರು ಬಾಳಿನಲ್ಲಿ ಬಡತನ–ಸಿರಿತನಗಳೆರಡನ್ನೂ ಕಂಡವರು. ಬದುಕಿನ ಬಗೆಗೆ ಜೀವನದ ಕೊನೆಯ ಕ್ಷಣದವರೆಗೂ ಲವಲವಿಕೆಯನ್ನಿಟ್ಟುಕೊಂಡವರು. ಸಾರ್ಥಕವೂ ಸಮೃದ್ಧವೂ ಆದ ಜೀವನವನ್ನು ನಡೆಸಬೇಕೆಂಬ ಆದರ್ಶವಾದದಲ್ಲಿ ತಮ್ಮ ಬದುಕಿನ ಜೀವನದೃಷ್ಟಿಯನ್ನು ಇಟ್ಟುಕೊಂಡವರು. ಆದ್ದರಿಂದಲೇ ಶೇಕ್ಸಪಿಯರ, ಕಾಳಿದಾಸರ ಸಾಹಿತ್ಯದಲ್ಲಿ ಬರುವ ಆದರ್ಶ ಪ್ರೇಮಿಗಳ ಮಾದರಿಯಲ್ಲಿ ತಮ್ಮ ಪ್ರೇಮಮಯವಾದ ಜೀವನ ನಡೆಸಿದ್ದಾರೆ. ಕಷ್ಟಮಯವಾದ ಬಾಳಿನಲ್ಲಿ ಮಾನವಚೇತನ ಕ್ರಿಯಾಶೀಲವಾದ ಗೆಲುವನ್ನು ಸಾಧಿಸಬೇಕೆಂಬ ಆಶಯ ಮಾಸ್ತಿಯವರದು. ಅವರಿಗೆ ಆರು ಜನ ಹೆಣ್ಣುಮಕ್ಕಳು. ೧೯೬೯ ರಲ್ಲಿ ಮಾಸ್ತಿಯವರನ್ನು ಅಗಲಿದ ಸೌ. ಪಂಕಜಮ್ಮನವರು ಆದರ್ಶ ಗೃಹಿಣಿಯಾಗಿದ್ದರು. ಮಾಸ್ತಿಯವರ ಕೌಟುಂಬಿಕ ಜೀವನದಲ್ಲೂ ಏರಿಳಿವುಗಳಿವೆ. ಅವುಗಳನ್ನೆಲ್ಲಾ ಮೀರಿ ನಿಂತ ಮೇರು ವ್ಯಕ್ತಿತ್ವ ಅವರದು.

ಜೀವನ ದೃಷ್ಟಿ

ಮಾಸ್ತಿಯವರ ಚೇತನ ದೈವಶ್ರದ್ಧೆಯಿಂದಲೇ ಬೆಳವಣಿಗೆ ಹೊಂದುತ್ತ ಬಂದಿದೆ. ಮಾಸ್ತಿಯವರು ಉಪಾಸಿಸುವ ದೇವರು ಸರ್ವಮಾನವರುಲ ಆರಾಧಿಸುವ ಆರಾಧ್ಯ ದೈವವೇ ಆಗಿದೆ. ಸುಸಂಸ್ಕೃತವಾದ ನಡೆನುಡಿ,ಪರಿಶುದ್ಧ ಮನಸ್ಸು, ಋಜು ಜೀವನ ಮಾಸ್ತಿಯವರ ಆದರ್ಶ. ಅವರ ಬಾಳಿನುದ್ದಕ್ಕೂ ನಿರ್ಮಲಾಂತಃಕರಣ, ಕರುಣೆ, ಮಾನವ ಪ್ರೀತಿ ತೋರುತ್ತ ಬಂದಿದ್ದಾರೆ. ವ್ಯಕ್ತಿಜೀವನದಲ್ಲಿ, ಸಮಾಜಜೀವನದಲ್ಲಿ, ರಾಷ್ಟ್ರ ಜೀವನದಲ್ಲಿ ನೈತಿಕ ಮೌಲ್ಯಗಳ ಉಳಿವಿಗೆ ಅವರು ಸತತ ಕರೆಕೊಡುತ್ತ ಬಂದಿದ್ದಾರೆ. ಪರಂಪರಾಗತ ಬದುಕಿನ ಆದರ್ಶವನ್ನು ಮಾಸ್ತಿಯವರು ಮನ್ನಿಸುತ್ತ ಬಂದಿದ್ದರೂ ಆಧುನಿಕ ಜೀವನ ಪರಕೀಯ ಮೌಲ್ಯಗಳಿಗೆ ಶರಣಾಗಬಾರದೆಂದು ದೃಢ ನಿಲವು ತಳೆದಿದ್ದಾರೆ.

ಮಾಸ್ತಿಯತುವರ ಸಮಗ್ರ ಬದುಕನ್ನು ಕಂಡಾಗ ಅವರ ಉನ್ನತ ಚೇತನದ ಬೆಳವಣಿಗೆಯ ವಿವಿಧ ಘಟ್ಟಗಳ ಪರಿಚಯವಾಗುತ್ತದೆ. ಅವರು ಋಜು ಸ್ವಭಾವದ ಸಾತ್ವಿಕರು. ತಮಗೆ ಸರಿಕಂಡದ್ದನ್ನು ಪ್ರತಿಪಾದಿಸುವದರಲ್ಲಿ ಧೈರ್ಯಶಾಲಿಗಳು. ಕಹಿಯೆಂದು ತೋರಿದರೂ ಸತ್ಯವನ್ನು ಹೇಳದೆ ಬಿಡದ ಸತ್ಯಶಾಲಿಗಳು. ತಮ್ಮ ಆತ್ಮಚರಿತೆ 'ಭಾವ'ದಲ್ಲಿ ತಮ್ಮ ಬದುಕಿನ ಸಿಹಿ ಕಹಿ ಅನುಭವಗಳನ್ನು ಮೆಲುಕು ಹಾಕುವದರಲ್ಲಿ ಪ್ರಾಮಾಣಿಕತೆಯನ್ನು, ಅನನ್ಯವಾದ ಜೀವನಶ್ರದ್ಧೆಯನ್ನು

ಅವರು ತೋರಿದ್ದಾರೆ. ತಮ್ಮ ಜೀವನ ಸುಖವುಂಡ ಜಯಕಂಡ ಜೀವನವೆಂದು ಅವರು ಹೇಳಿದ್ದಾರೆ. ಬಾಳಿನಲ್ಲಿ ೯೫ ವರ್ಷಗಳನ್ನು ಸರಿಯಾಗಿ ಪೂರೈಸಿ ಹುಟ್ಟು ಹಬ್ಬದ ದಿನವೇ (ಜೂನ್ ೬, ೧೯೮೬) ತಾವು ಅಪಾರವಾಗಿ ಪ್ರೀತಿಸಿದ ಕನ್ನಡದ ನೆಲವನ್ನು ಬಿಟ್ಟು ಇಹಲೋಕ ಯಾತ್ರೆ ಕೈಕೊಂಡ ಮಾಸ್ತಿಯವರು ಕನ್ನಡ ಸಂಸ್ಕೃತಿಯ ಮಹಾ ಚೇತನವಾಗಿದ್ದರು.

ಮಾಸ್ತಿ ಸಾಹಿತ್ಯಪ್ರಪಂಚ

ಮಾಸ್ತಿಯವರ ಸಾಹಿತ್ಯ ಕಡಲಿನ ವಿಸ್ತಾರವನ್ನೂ, ಬೆಳದಿಂಗಳಿನ ಮಾಧುರ್ಯವನ್ನೂ ಪಡೆದು ವಿಜೃಂಭಿಸಿದೆ. ರಂಗನ ಮದುವೆ (೧೯೧೦) ಯಿಂದ 'ಮಾಯಣ್ಣನ ಕನ್ನಡಿ' (೧೯೮೫) ಯವರೆಗೆ ೭೫ ವರ್ಷಗಳ ಹರಹನ್ನು ಪಡೆದಿರುವಂಥದು. ಹೊಸಗನ್ನಡ ಸಾಹಿತ್ಯದಲ್ಲಿ ಮಾಸ್ತಿಯವರು ರಚಿಸಿದ ಸಾಹಿತ್ಯ ಪ್ರಪಂಚ ವೈವಿಧ್ಯಮಯವಾದದ್ದಾಗಿದೆ. ಕಾವ್ಯ, ಸಣ್ಣಕತೆ, ನಾಟಕ, ಕಾದಂಬರಿ, ವಿಮರ್ಶೆ, ಜೀವನಚರಿತ್ರೆ, ಆತ್ಮಚರಿತ್ರೆ, ಸಂಪಾದಕೀಯ, ಅನುವಾದ, ಜಾನಪದ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ಅವರು ಅನುಪಮವಾದ ಸಾಹಿತ್ಯ ರಚಿಸಿದ್ದು ಅವು ನಮ್ಮ ನವೋದಯ ಸಾಹಿತ್ಯದ ವೈವಿಧ್ಯವನ್ನೂ, ಉತ್ತಮಿಕೆಯನ್ನೂ ಸಾರುತ್ತವೆ. ನಮ್ಮ ನವೋದಯ ಲೇಖಕರು ತಮ್ಮ ಪ್ರತಿಭೆಯನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿದ್ದನ್ನು ಸಮಕಾಲೀನ ಎಲ್ಲ ಲೇಖಕರಲ್ಲಿ ಗುರುತಿಸಬಹುದು. ಬಿ.ಎಂ.ಶ್ರೀ, ಡಿ.ವಿ.ಜಿ. ಮಾಸ್ತಿ, ಕುವೆಂಪು, ಬೇಂದ್ರೆ, ಪು.ತಿ.ನ. ಮೊದಲಾದ ಲೇಖಕರ ಒಟ್ಟು ಸಾಹಿತ್ಯ ಇಂತಹ ವೈವಿಧ್ಯದ ಕುರುಹಾಗಿದೆ. ಯುಗಧರ್ಮದ ಆಶಯದಂತೆ ಮಾಸ್ತಿ ಸಾಹಿತ್ಯ ನಿರ್ಮಿತಿಯಾದುದು ಎದ್ದು ಕಾಣುವ ಅಂಶ. ಇಂತಹ ಸಾಹಿತ್ಯ ನಿರ್ಮಿತಿಗೆ ಬೇಕಾದ ವಿಸ್ತಾರವಾದ ಅನುಭವಪ್ರಪಂಚ, ಅದರ ಅಭಿವ್ಯಕ್ತಿಗೆ ತಕ್ಕ ಪ್ರತಿಭಾಶಕ್ತಿ, ಕಲಾಭಿರುಚಿ, ಆಳವಾದ ಸಾಹಿತ್ಯ ವ್ಯಾಸಂಗದ ಹಿನ್ನೆಲೆ ಮಾಸ್ತಿಯವರಲ್ಲಿದೆ. ಆದ್ದರಿಂದಲೇ ಅವರು ರಚಿಸಿದ ಸಾಹಿತ್ಯ, ಬಹುವರ್ಣಗಳಿಂದ ಚೇತೋಹಾರಿಯಾಗಿದೆ. ಮಾಸ್ತಿಯವರು ಕನ್ನಡ ಹಾಗೂ ಇಂಗ್ಲೀಷ ಭಾಷೆಗಳೆರಡರಲ್ಲೂ ಸಮಾನ ಪ್ರಭುತ್ವ ಹೊಂದಿರುವದರಿಂದ ಅವೆರಡೂ ಭಾಷೆಗಳಲ್ಲಿ ಅವರು ಕೃತಿ ರಚನೆ ಮಾಡಿದ್ದು ಅವುಗಳ ಸಂಖ್ಯೆ ೧೩೨. ಇವುಗಳಲ್ಲಿ ಐದು ಸಂಪಾದಿತ ಕೃತಿಗಳು ಸೇರಿವೆ. ಇವುಗಳಲ್ಲಿ ಮಾಸ್ತಿ ಸಾಹಿತ್ಯಿಕ ವ್ಯಕ್ತಿತ್ವ ಪ್ರತಿಫಲಿತವಾಗಿದೆ.

ಕಾವ್ಯ

ಕನ್ನಡ ಕಾವ್ಯಪ್ರಪಂಚಕ್ಕೆ ಮಾಸ್ತಿಯವರ ಕೊಡುಗೆ ಅಮೂಲ್ಯವಾದದ್ದಾಗಿದೆ. ಭಾವಗೀತೆ, ಸುನೀತ, ಕಥನಕವನ, ಮಹಾಕಾವ್ಯವನ್ನು ಅವರು ರಚಿಸಿದ್ದಾರೆ. 'ಬಿನ್ನಹ' (೧೯೨೨), 'ಅರುಣ' (೧೯೨೪), 'ತಾವರೆ'(೧೯೩೦), 'ಚೆಲುವು'(೧೯೩೧), 'ಸುನೀತ'(೧೯೪೬), 'ಮನವಿ' (೧೯೫೧), 'ಸಂಕ್ರಾಂತಿ' (೧೯೬೯) ಇವು ಮಾಸ್ತಿಯವರ ಭಾವಗೀತಾ ಸಂಕಲನಗಳು. ಸಾಮಾರು ೧೮೦ ಭಾವಗೀತಗಳನ್ನು ಬರೆದಿರುವ ಮಾಸ್ತಿಯವರ ಭಾವಗೀತೆಗಳಲ್ಲಿ ಭಾವಲೋಕದ ಅಬ್ಬರ, ಉದ್ವೇಗ ಕಾಣಿಸುವದಿಲ್ಲ. ಆದರೆ ಮಾನವ ಜೀವನದ ಅಂತರಂಗದ ಭಾವಗಳನ್ನು ಸಂಯಮದಿಂದ ಸಹಜ ಸುಂದರವಾಗಿ ಮಾಸ್ತಿಯವರು ಚಿತ್ರಿಸಿದ್ದಾರೆ. "ಕಾವ್ಯದಲ್ಲಿ ಮಾಸ್ತಿಯವರ ದೃಷ್ಟಿ

ಧಾರ್ಮಿಕವಾದದ್ದು. ಆಧ್ಯಾತ್ಮಿಕವಾದದ್ದಲ್ಲ. ನಮ್ಮ ಧರ್ಮದ ಉತ್ತಮ ಮೌಲ್ಯಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ ಸಹಿಷ್ಣುತೆಯನ್ನು ಅಂತರಂಗದ ಅವಿಭಾಜ್ಯಾಂಶವನ್ನಾಗಿ ಮಾಡಿಕೊಂಡು, ಈ ಪ್ರಪಂಚವೆಲ್ಲವೂ ಪರಮಾತ್ಮನ ಲೀಲೆ ಎಂಬ ಶ್ರದ್ಧೆಯ ಭದ್ರ ಬುನಾದಿಯ ಮೇಲೆ ಇವರು ತಮ್ಮ ವಿಚಾರಗಳ ಹಂದರವನ್ನು ಹಬ್ಬಿಸುತ್ತಾರೆ. ಹೀಗಾಗಿ ಇವರ ಕಾವ್ಯಮೌಲ್ಯ ಸಂಶೋಧಕವಲ್ಲ, ಮೌಲ್ಯನಿಷ್ಠ''.[೩] ನಿಸರ್ಗದ ದೃಶ್ಯಗಳು, ಅಂತರಂಗದ ಅವಲೋಕನ, ತಾವು ಕಂಡ ವ್ಯಕ್ತಿಗಳ ಬಗ್ಗೆ ಮಾಸ್ತಿಯವರು ಕವಿತೆಗಳನ್ನು ರಚಿಸಿರುವರು. ಅವರ ಕವಿತೆಗಳು ಮಾನವ ಜೀವನದ ಅನುಭೂತಿಯನ್ನು, ಅರ್ಥಪೂರ್ಣತೆಯನ್ನು ಸಾರುತ್ತವೆ. ಭಾವ ಭಾಷೆಗಳ ಸುಂದರ ಸಮನ್ವಯದ ಜೊತೆಗೆ ವಿಚಾರ ವಿಸ್ತಾರವೂ ಅವರ ಕವಿತೆಗಳಲ್ಲಿದೆ.

ಕನ್ನಡದಲ್ಲಿ ಸರಳರಗಳೆ ಹಾಗೂ ಸುನೀತವನ್ನು ಶಕ್ತಿಶಾಲಿಯಾಗಿ ಪ್ರಯೋಗಿಸಿದವರಲ್ಲಿ ಮಾಸ್ತಿಯವರು ಮೊದಲಿಗರಾಗಿದ್ದಾರೆ. ಅವರ ಮಲಾರವು (೧೯೩೧) ೮೨ ವಿವಿಧ ರೀತಿಯ ಸುನೀತಗಳನ್ನೊಳಗೊಂಡು ವಿಶಿಷ್ಟವಾದದ್ದಾಗಿದೆ. 'ಹರಿದು ತುಂಡಾಗಿಹುದು ಇಂದು ಕನ್ನಡನಾಡು.......' ಎಂಬ ಮಾಸ್ತಿಯವರ ಕವಿತೆಯ ಸಾಲುಗಳು ಕನ್ನಡನಾಡನ್ನು ಸಾಂಸ್ಕೃತಿಕವಾಗಿ ಒಂದಾಗಿಸುವಲ್ಲಿ ಪ್ರೇರಕಶಕ್ತಿಯಾಗಿರುವದನ್ನು ಕಾಣಬಹುದು. ಬಿ.ಎಂ.ಶ್ರೀ, ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಮಹನೀಯರನ್ನು ಕುರಿತ ಮಾಸ್ತಿಯವರ ಸುನೀತಗಳು ಅರ್ಥಪೂರ್ಣವಾಗಿವೆ. ಮಾಸ್ತಿಯವರ 'ನವರಾತ್ರಿ' (ಐದು ಸಂಪುಟಗಳು) ಕನ್ನಡದ ವಿಶಿಷ್ಟ ಕಥನ ಕವನಗಳ ಗುಚ್ಛವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಉತ್ಸವವಾದ ನವರಾತ್ರಿಯ ಸಂದರ್ಭದಲ್ಲಿ ಹುಟ್ಟಿಕೊಂಡ ಇಲ್ಲಿಯ ಕಥನ ಕವನಗಳು ಕನ್ನಡ ಕವಿಕುಲದ ಇತಿಹಾಸವನ್ನು ಬಿತ್ತರಿಸುತ್ತವೆ. ಚಾಸರನ ಕ್ಯಾಂಟರ್‌ಬರಿ ಟೇಲ್ಸನ್ನು ನೆನಪಿಗೆ ತರುವ 'ನವರಾತ್ರಿ' ಕನ್ನಡದ ವಿಶಿಷ್ಟ ಸಾಹಿತ್ಯ ರಚನೆಯಾಗಿದೆ. ಈ ಕಥನ ಕವನಗಳ ಭಾವಭಾಷೆಗಳೂ ಮನಸೆಳೆಯುತ್ತವೆ. ಮಾಸ್ತಿಯವರ 'ಗೌಡರಮಲ್ಲಿ' (೧೯೪೦), 'ರಾಮನವಮಿ' (೧೯೪೧), 'ಮೂಕನ ಮಕ್ಕಳು' (೧೯೪೩) ಸಂಕಲನಗಳೂ ಉತ್ಕೃಷ್ಟ ಕಥನಕವನಗಳಾಗಿವೆ.

ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ' (೧೯೭೨) ೯೦೯೬ ಪಂಕ್ತಿಗಳ ಒಂದು ಮಹಾಕಾವ್ಯ. ರಾಮಾಯಣ ಮಹಾಕಾವ್ಯವನ್ನು ,ಮಾಸ್ತಿಯವರು ಇಲ್ಲಿ ನೂತನ ವಿಚಾರ, ಚಿಂತನಕ್ರಮದಿಂದ ಪುನಃ ಸೃಷ್ಟಿಸಿದ್ದಾರೆ. ರಾಮಾಯಣವನ್ನು ಧಾರ್ಮಿಕ ಕೃತಿಗಿಂತ ಕಾವ್ಯದೃಷ್ಟಿಯಿಂದಲೇ ನೋಡಬೇಕೆಂದೂ, ಹಾಗೂ ಕಾವ್ಯನಾಯಕನಾದ ಶ್ರೀರಾಮನನ್ನು ಮಾನವೀಯ ಆದರ್ಶದ ಪ್ರತಿನಿಧಿಯೆಂತಲೂ ಅವರು ಚಿತ್ರಿಸಿದ್ದಾರೆ. ಮೂಲಕಾವ್ಯದಲ್ಲಿ ತುಂಬಿಕೊಂಡ ಪ್ರಕ್ಷಿಪ್ತ ಭಾಗಗಳನ್ನು ಹೊರತುಪಡಿಸಿ ರಾಮ ಪಟ್ಟಾಭಿಷೇಕದವರೆಗೆ ಕಾವ್ಯಕ್ಕೆ ಮಂಗಳ ಹಾಡಲಾಗಿದೆ. ಭಾರತೀಯ ಸಾಂಪ್ರದಾಯಿಕ ದೃಷ್ಟಿ ಹಾಗೂ ಆಧುನಿಕ ಮಹಾಕಾವ್ಯ ಕಲ್ಪನೆಗಳಿಂದ ಕನ್ನಡ ರಾಮಾಯಣ ಸಾಹಿತ್ಯದಲ್ಲಿ 'ಶ್ರೀರಾಮ ಪಟ್ಟಾಭಿಷೇಕ'ಕ್ಕೆ ಮಹತ್ವದ ಸ್ಥಾನವಿದೆ.[೪]

ಸಣ್ಣಕಥೆ

ಕನ್ನಡ ಸಾರಸ್ವತ ಪ್ರಪಂಚದಲ್ಲಿ ಮಾಸ್ತಿಯವರು ಕಥೆಗಾರರೆಂದೇ ಪ್ರಸಿದ್ಧರು. ಈವರೆಗೆ

ಅವರ 'ಸಣ್ಣ ಕಥೆಗಳು' ಹದಿನೈದು ಸಂಪುಟಗಳಲ್ಲಿ ಒಟ್ಟು ನೂರು ಕತೆಗಳನ್ನು ಅವರು ರಚಿಸಿದ್ದಾರೆ. ಅವರ ಸಮಗ್ರ ಕಥೆಗಳನ್ನು ೧) ಸಾಮಾಜಿಕ ಕಥೆಗಳು ೨) ಐತಿಹಾಸಿಕ ಕಥೆಗಳು ೩) ಪೌರಾಣಿಕ ಕಥೆಗಳು, ೪) ಮಹಾಚೇತನಗಳನ್ನು ಕುರಿತ ಕಥೆಗಳು ಎಂದು ಸ್ಥೂಲವಾಗಿ ವಿಂಗಡಿಸಿ ಹೇಳಬಹುದು. ಈ ಎಲ್ಲ ಕಥೆಗಳಲ್ಲಿ ಮಾಸ್ತಿಯವರ ಅಖಂಡ ಜೀವನದೃಷ್ಟಿ ಮನುಷ್ಯನ ಸ್ವಭಾವದ ವಿವಿಧ ಪರಿಗಳು ಮೂಡಿಬಂದಿವೆ. ಅವರ ಮೊದಲ ಕಥೆ 'ರಂಗನ ಮದುವೆ' ೧೯೧೦ ರಲ್ಲಿ ಪ್ರಕಟವಾಗಿದ್ದು ಸುಮಾರು ೭೫ ವರ್ಷಗಳ ಹರವು ಅವರ ಕಥೆಗಳಿಗಿದೆ. ಮಾಸ್ತಿಯವರ ಸಾಮಾಜಿಕ ಕಥೆಗಳ ಆಶಯ ಜೀವನ ಶ್ರದ್ಧೆಯನ್ನು ಪ್ರತಿಬಿಂಬಿಸುವದಾಗಿದೆ. 'ವೆಂಕಟಶಾಮಿಯ ಪ್ರಣಯ', 'ಕೃಷ್ಣಮೂರ್ತಿಯ ಹೆಂಡತಿ', 'ವೆಂಕಟಿಗನ ಹೆಂಡತಿ', 'ಕಾಮನ ಹಬ್ಬದ ಒಂದು ಕತೆ', 'ದುರದೃಷ್ಟದ ಹೆಣ್ಣು', 'ಚಟ್ಟೇಕಾರ ತಾಯಿ' ಮೊದಲಾದ ಕಥೆಗಳು ಹೃದಯಸ್ಪರ್ಶಿಯಾದ ಅನುಭವವನ್ನು ಪ್ರಕಟಪಡಿಸುತ್ತವೆ. ಮಾಸ್ತಿಯವರ ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳಲ್ಲಿ ಪ್ರಾಚೀನ ಕಾಲದಿಂದ ಇಂದಿನವರೆಗೆ ಗುಪ್ತಗಾಮಿಯಾಗಿ ಹರಿದು ಬಂದ ಸಂಸ್ಕೃತಿಯ ಪ್ರವಾಹವನ್ನು ಕಾಣಬಹುದು. ಇವುಗಳಲ್ಲಿ ಘನವಾದ ಸಂಸ್ಕಾರದ ಮೂಲ ಸೆಲೆಯ ಅನ್ವೇಷಣೆಯಿದೆ. 'ಮಸುಮತ್ತಿ'ಯಲ್ಲಿ ಭಾರತೀಯ ಪ್ರಾಚೀನ ಪರಂಪರೆಯ ವೈಭವದ ಅವಶೇಷದ ಬಗೆಗೆ ಆಳವಾದ ಚಿಂತನೆಯಿದೆ. 'ಬಾದಶಹನ ದಂಡನೆ', 'ನಿಜಗಲ್ಲಿನ ರಾಣಿ', 'ಪಂಡಿತನ ಮರಣಶಾಸನ', 'ಸಾರಿಪುತ್ರನ ಕಡೆಯ ದಿನಗಳು', 'ಪ್ರಿಯದರ್ಶಿ ಅಶೋಕ', ಮೊದಲಾದವುಗಳ ಐತಿಹಾಸಿಕ ಆವರಣ ವರ್ತಮಾನಕ್ಕೆ ಇರುವ ಅವಿಚ್ಛಿನ್ನತೆಯನ್ನು ತೋರಿಸುತ್ತದೆ. 'ಹೇಮಕೂಟದಿಂದ ಬಂದಮೇಲೆ', 'ಗೌತಮಿ ಹೇಳಿದ ಕತೆ', 'ಮಂತ್ರೋದಯ' ವಸ್ತು ಮತ್ತು ಶೈಲಿಯ ದೃಷ್ಟಿಯಿಂದ ಅನನ್ಯವಾಗಿವೆ. ಸಾಹಿತ್ಯದಲ್ಲಿ ಸಣ್ಣಕಥೆ ಮೈನರ್ ಫಾರಂ ಆಗಿದ್ದರೂ ಅದನ್ನು ಬರೆದು ಮಾಸ್ತಿಯವರು ಮೇಜರ್ ರೈಟರ್ ಆಗಿದ್ದಾರೆ.

ಮಾಸ್ತಿಯವರು ತಮ್ಮ ಕಥೆಗಳಲ್ಲಿ ಚಿತ್ರಿಸಿದ ಪಾತ್ರ ಪ್ರಪಂಚ ವೈವಿಧ್ಯಮಯವಾಗಿದೆ. ಮಾನವ ಜೀವನದ ವೈಯಕ್ತಿಕ ಬದುಕಿನ ನೋವು ನಲಿವುಗಳನ್ನು ಅವರ ಕತೆಗಳು ಚಿತ್ರಿಸುತ್ತವಾದರೂ ಮಾನವ ಚೇತನದ ಜೀವಂತ ಪ್ರವಾಹವನ್ನು ಪ್ರತಿಬಿಂಬಿಸುವದೇ ಅವುಗಳ ಉದ್ದೇಶವಾಗಿದೆ. ಮಾಸ್ತಿಯವರ ಕಥೆಗಳು ಯಾವುದೇ ರಚನಾತಂತ್ರದ ದೃಷ್ಟಿಯಿಂದ ಮಾತ್ರ ಯಶಸ್ವಿಯಾಗಿರದೆ ಜೀವನದ ಮೂಲಭೂತವಾದ ತತ್ವಗಳನ್ನು ವ್ಯಕ್ತಿ ಶಕ್ತಿಗಳ ಘನತೆ ಗೌರವಗಳನ್ನು ಪ್ರತಿಮಿಸುವದರ ಮೂಲಕವೂ ಕನ್ನಡದಲ್ಲಿ ಶ್ರೇಷ್ಠವಾಗಿವೆ. ಅವರ ಕೆಲವು ಕಥೆಗಳು ಪಾತ್ರಗಳ ಅಂತರಂಗದರ್ಶನ ಮಾಡಿಸಿದರೆ ಇನ್ನು ಕೆಲವು ಕಥೆಗಳು ಸಂಗತಿ, ಸನ್ನಿವೇಶಗಳನ್ನು ಬಿಡಿಸಿ ಸಾಕಾರಗೊಳಿಸುತ್ತವೆ. ಮಾಸ್ತಿಯವರ ಕಥೆಗಳಲ್ಲಿಯ ಧಾರ್ಮಿಕ ಅಂಶಗಳು ವಿಶೇಷ ಪರಿಭಾವನೆಗೆ ಪಾತ್ರವಾಗಿವೆ. ಅವರು ಚಿತ್ರಿಸಿದ ಪರಂಪರಾಗತ ಸಂಸ್ಕೃತಿಯ ಆದರ್ಶಗಳು ಬದಲಾಗುತ್ತಿರುವ ಆಧುನಿಕ ಜೀವನದಲ್ಲಿ ಅಸ್ತಿತ್ವವನ್ನು ವ್ಯಕ್ತಪಡಿಸಿರುವದೂ ಕಂಡುಬರುತ್ತಿದೆ.' ಮನುಷ್ಯ ಪ್ರಪಂಚದ ನೂರಾರು ಬಗೆಯ ಮನೋಧರ್ಮ ಜೀವನ ವೈವಿಧ್ಯ, ಹೃದಯಸ್ಪರ್ಶಿ ಚಿತ್ರ ಮಾಸ್ತಿಯವರ ಕಥೆಗಳಲ್ಲಿ ಅಭಿವ್ಯಕ್ತವಾಗಿದೆ.

ಕಾದಂಬರಿ

ಮಾಸ್ತಿಯವರ ಸುಬ್ಬಣ್ಣ (೧೯೨೮) ಕನ್ನಡ ಕಥಾ ಸಾಹಿತ್ಯದಲ್ಲಿ ಒಂದು ಅದ್ವಿತೀಯವಾದ ಕೃತಿ. ಇದು ಸಂಗೀತಗಾರನೊಬ್ಬನ ಕರುಣಕಥೆಯನ್ನು ಪ್ರತಿಮಿಸುತ್ತದೆ. ಸುಬ್ಬಣ್ಣನ ಸಾತ್ವಿಕ ಜೀವನ, ಬಾಲ್ಯವಿವಾಹ, ಕೌಟುಂಬಿಕ ಜೀವನದ ವಿರಸ, ನೀರೂಳ ಸಹವಾಸ, ಕಲೆಯ ಪೂರ್ಣತೆಗಾಗಿ ಪಟ್ಟಪಾಡು– ಹೀಗೆ ಒಂದು ಆದರ್ಶ ಜೀವನದ ವಿಕಾಸದ ವಿವಿಧ ಮಜಲುಗಳನ್ನು ಮಾಸ್ತಿಯವರು ಜೀವನದ ಸ್ಮೃತಿಚಿತ್ರಮಾಲೆಯನ್ನಾಗಿಸಿದ್ದಾರೆ. ಇಲ್ಲಿಯೂ ಮಾನವ ಚೇತನ ಯಾತ್ರೆಯ ವಿಕಾಸವನ್ನು ನಾವು ಕಾಣಬಹುದು. 'ಚೆನ್ನಬಸವನಾಯಕ', (೧೯೪೯) ಮತ್ತು 'ಚಿಕ್ಕವೀರ ರಾಜೇಂದ್ರ' (೧೯೫೬) ಮಾಸ್ತಿಯವರ ಎರಡು ದೊಡ್ಡ ಐತಿಹಾಸಿಕ ಕಾದಂಬರಿಗಳಾಗಿವೆ. ಚೆನ್ನಬಸವನಾಯಕ' ಕಾದಂಬರಿಯು ಬಿದನೂರು ನಾಯಕ ಮನೆತನದ ಪತನದ ದುರಂತ ಕಥೆಯನ್ನು ಬಿತ್ತರಿಸುತ್ತದೆ. ಬಿದನೂರಿನ ರಾಣಿ ವೀರಮ್ಮಾಜಿ, ಅವಳ ಮಗ ಚೆನ್ನಬಸವ ಹಾಗೂ ಹೈದರಾಲಿಯ ರಾಜ್ಯವಿಸ್ತರಣೆಯ ಆಕಾಂಕ್ಷೆಯಿಂದಾಗಿ ವೈಯಕ್ತಿಕ ನೆಲೆಯಲ್ಲಿ, ರಾಜಕೀಯ ನೆಲೆಯಲ್ಲಿ ರಾಜಮನೆತನವು ನಾಶವಾಯಿತೆಂಬುದನ್ನು ಚಿತ್ರಿಸಲಾಗಿದೆ. ಇಲ್ಲಿ ಇತಿಹಾಸದ ಸಂಗತಿಯು ಕಲ್ಪನೆಯ ಹಂದರದಲ್ಲಿ ಬಿತ್ತರಗೊಂಡಿದೆ. ಕ್ಷೋಭೆಯ ನಡುವೆಯೂ ಮಾನವಕುಲದ ಮೂಲಭೂತ ಮೌಲ್ಯಗಳ ಪ್ರತಿಪಾದನೆ ಮಾಡುವದೇ ಈ ಕಾದಂಬರಿಯ ಉದ್ದೇಶವಾಗಿದೆ.

ಮಾಸ್ತಿಯವರ 'ಚಿಕವೀರ ರಾಜೇಂದ್ರ' ಕಾದಂಬರಿಯಲ್ಲಿ ಕೊಡಗಿನ ಅರಸು ಮನೆತನದ ಅವಸಾನವನ್ನು, ಬ್ರಿಟಿಶ್ ಸಾಮ್ರಾಜ್ಯಶಾಹಿ ಭಾರತವನ್ನು ಆಕ್ರಮಿಸಿದ ರೀತಿಯನ್ನು ಮಾಸ್ತಿಯವರು ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾರೆ. ಕೊಡಗಿನ ಕೊನೆಯ ಅರಸು ಚಿಕವೀರರಾಜೇಂದ್ರನ ವೈಯಕ್ತಿಕ ಜೀವನದ ಅವನತಿಯ ದುರಂತವು ರಾಜವಂಶದ ಮುಕ್ತಾಯಕ್ಕೆ ನಾಂದಿ ಹಾಡಿತೆಂದು ಹೇಳುವಾಗ ದೈವಸಂಕಲ್ಪವು ಅಂದರೆ ವಿಧಿಯ ಕೈವಾಡ ಹಾಗೂ ಸ್ವಭಾವಗತ ದೌರ್ಬಲ್ಯ ದುರಂತದ ಹಿನ್ನೆಲೆಯಾಗಿರುವದನ್ನು ಲೇಖಕರು ಗುರುತಿಸಿದ್ದಾರೆ. "ಈ ಕಾದಂಬರಿಯ ನಿಜವಾದ ಮಹತ್ವವಿದ್ದುದು ನೈತಿಕ ಮತ್ತು ಧಾರ್ಮಿಕ ಮೌಲ್ಯಗಳ ಖಚಿತವಾದ ಪ್ರತಿಪಾದನೆಯಲ್ಲಿ, ಎಲ್ಲ ನಿಗೂಢ ಆಯಾಮಗಳೊಂದಿಗೆ ಕೆಟ್ಟದ್ದನ್ನು ಕೆಟ್ಟದ್ದೆಂದು ಸೂಕ್ಷ್ಮವಾಗಿ ಚಿತ್ರಿಸುವಲ್ಲಿ ಹಾಗೂ ಕಥನಕ್ರಿಯೆಯಲ್ಲಿ ಮೊದಲಿನಿಂದ ಕೊನೆಯವರೆಗೂ ಹಾಸುಹೊಕ್ಕಾಗಿ ಕೆಲಸ ಮಾಡುವ ಅನುಕಂಪಯುಕ್ತ ವಿವೇಕದ ಪ್ರಜ್ಞೆಯಲ್ಲಿ ಎಂದು ಹೇಳಬಹುದು".[೯] ಹೀಗೆ ಈ ಕಾದಂಬರಿಯಲ್ಲಿ ಚಿತ್ರಿತವಾದ ದುರಂತ ಪ್ರಜ್ಞೆ ಕಾದಂಬರಿಯ ಕೇಂದ್ರ ಆಶಯವೆಂಬ ವಿಚಾರವನ್ನು ವಿಮರ್ಶಕರು ವಿವೇಚಿಸಿದ್ದಾರೆ.[೯] ಒಟ್ಟನಲ್ಲಿ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು ಬಹುಮುಖವಾದ ಚರ್ಚೆ, ವಿಭಿನ್ನ ಅಭಿಪ್ರಾಯಗಳಿಗೆ ಪಾತ್ರವಾಗಿವೆಯೆಂಬುದು ಗಮನಾರ್ಹ. ಮಾಸ್ತಿಯವರ 'ಶೇಷಮ್ಮ' (೧೯೭೬) ಕಾದಂಬರಿಯಲ್ಲೂ ಕೌಟಂಬಿಕ ಜೀವನದ ಪ್ರಭಾವ ಪೂರ್ಣವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿರುವದನ್ನು ನಾವು ಗುರುತಿಸಬಹುದು.

ನಾಟಕ

ಕನ್ನಡ ನಾಟಕ ಸಾಹಿತ್ಯಕ್ಕೆ ಮಾಸ್ತಿಯವರು ಗಣನೀಯ ಕೊಡುಗೆ ಕೊಟ್ಟಿದ್ದಾರೆ. ಅವರ ಆರಂಭದ ನಾಟಕಗಳಾದ 'ಶಾಂತಾ' (೧೯೨೩), 'ಸಾವಿತ್ರಿ' (೧೯೨೩), ಉಷಾ (೧೯೨೭) ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿ ರೂಪುಗೊಂಡಿವೆ. ಮಾಸ್ತಿಯವರ ಯಶೋಧರಾ (೧೯೩೩) ಹಾಗೂ ಕಾಕನಕೋಟೆ (೧೯೩೮) ಕನ್ನಡ ನಾಟಕ ಸಾಹಿತ್ಯದ ಅತ್ಯುತ್ತಮ ಕೃತಿಗಳಲ್ಲಿ ನಿಲ್ಲುವಂಥವು. ಇವೆರಡೂ ರಂಗಪ್ರಯೋಗ ದೃಷ್ಟಿಯಿಂದ ಯಶಸ್ವಿ ನಾಟಕಗಳಾಗಿವೆ. ಮಾಸ್ತಿಯವರು ಹರಿಜನ ಸಂತನ ಮೇಲೆ ಬರೆದ 'ತಿರುಪಾಣಿ' (೧೯೩೭) ನಾಟಕವೂ ಗಮನಾರ್ಹವಾದುದು. 'ತಾಳಿಕೋಟೆ' (೧೯೨೯),'ಮಂಜುಳಾ' (೧೯೩೦), 'ಶಿವಛತ್ರಪತಿ' (೧೯೩೨), 'ಮಾಸತಿ' (೧೯೫೩), 'ಅನಾರ್ಕಳಿ' (೧೯೫೫), 'ಪುರಂದರದಾಸ' (೧೯೬೪), 'ಕನಕಣ್ಣ' (೧೯೬೫), 'ಭಟ್ಟರ ಮಗಳು' (೧೯೬೯) ಹಾಗೂ 'ಬಾನುಲಿ ದೃಶ್ಯಗಳು' (೧೯೭೪) ಎಂಬ ಏಳು ರೇಡಿಯೋ ನಾಟಕಗಳನ್ನು, 'ಕಾಳಿದಾಸ' (೧೯೭೮) ನಾಟಕವನ್ನು ಮಾಸ್ತಿಯವರು ರಚಿಸಿದ್ದು ಇವೆಲ್ಲಾ ಅವರ ನಾಟಕ–ಸಾಹಿತ್ಯ–ಪ್ರಪಂಚದ ವೈವಿಧ್ಯವನ್ನು ಸೂಚಿಸುತ್ತವೆ. 'ಯಶೋಧರಾ' 'ತಿರುಪಾಣಿ' ನಾಟಕಗಳಲ್ಲಿ ಕಾವ್ಯಗುಣ ಮಾಸ್ತಿಯವರ ವಿಶಿಷ್ಟತೆಯಾಗಿದೆ. ಪುರಾಣ, ಇತಿಹಾಸ, ಸಮಕಾಲೀನ ಸಮಾಜದ ವಸ್ತುವನ್ನು ಆಧರಿಸಿ ಮಾಸ್ತಿಯವರು ಕನ್ನಡ ನವೋದಯ ನಾಟಕ ಪರಂಪರೆಯಲ್ಲಿ ತಮ್ಮ ಕಲೆಗಾರಿಕೆಯನ್ನು ತೋರಿದ್ದಾರೆ.

ವಿಮರ್ಶೆ

ಕನ್ನಡ ವಿಮರ್ಶೆಯ ನಿರ್ಮಾಣದಲ್ಲೂ ಮಾಸ್ತಿಯವರು ಮಹತ್ತರವಾದ ಸೇವೆ ಸಲ್ಲಿಸಿದ್ದಾರೆ. ಹೊಸ ಸಾಹಿತ್ಯಕ್ಕೆ ಬೇಕಾದ ಸಾಹಿತ್ಯತತ್ವ, ವಿಮರ್ಶಾ ವಿಚಾರ, ಪ್ರಾಚೀನ ನವೀನ ಕವಿಕೃತಿಗಳ ವಿಮರ್ಶೆಯ ಮೂಲಕ ಅವರು ಸಾಹಿತ್ಯದ ಸತ್ವ ಶ್ರೀಮಂತಿಕೆ ಹೆಚ್ಚಿಸಲು ಕಾರಣರಾಗಿದ್ದಾರೆ. ಮಾಸ್ತಿಯವರ 'ಸಾಹಿತ್ಯ' (೧೯೨೪) ಗ್ರಂಥವು ಕನ್ನಡದ ಮೊಟ್ಟಮೊದಲನೆಯ ಸಾಹಿತ್ಯಮೀಮಾಂಸೆಯ ಕೃತಿಯಾಗಿದೆ. ಹೊಸಗನ್ನಡದ ನವೋದಯ ಕಾಲದಲ್ಲಿ ಕನ್ನಡದಲ್ಲಿ ಹೊಸ ಕಾವ್ಯತತ್ವಗಳು ಯಾವ ರೀತಿಯಲ್ಲಿ ನೆಲೆ ಪಡೆದವೆಂಬುದನ್ನು ನಾವು ಈ ಗ್ರಂಥದ ಮೂಲಕ ಅರಿತುಕೊಳ್ಳಬಹುದಾಗಿದೆ. ಮಾಸ್ತಿಯವರ 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬುದು ಕನ್ನಡದಲ್ಲಿ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ವಿವೇಚಿಸುವಲ್ಲಿ ಪ್ರವೃತ್ತವಾಗಿದೆ. ಭಾರತೀಯ ಸಾಹಿತ್ಯದ ಮೇರು ಕೃತಿಗಳಾದ ರಾಮಾಯಣ, ಮಹಾಭಾರತಗಳ ಮೇಲೆ ಬರೆದ ದೊಡ್ಡ ವಿಮರ್ಶೆಯ ಗ್ರಂಥಗಳಾದ ಮಾಸ್ತಿಯವರ 'ಆದಿಕವಿ ವಾಲ್ಮೀಕಿ', (೧೯೩೮೦) ಹಾಗೂ 'ಭ್ರಾಂತತೀರ್ಥ' (೧೯೫೨) ಕನ್ನಡದ ಅಭಿಜಾತ ಕೃತಿಗಳಾಗಿವೆ. ಕುವೆಂಪು ಹೇಳುವ ಹಾಗೆ "ಆದಿಕವಿ ವಾಲ್ಮೀಕಿ" ಬರಿಯ ವಿಮರ್ಶೆಯ ಗ್ರಂಥವಲ್ಲ, ಅದೊಂದು ರಸಕೃತಿ. ಕವಿ ಕೃತಿಯ ವಿಷಯವಾಗಿರುವ ಕವಿಕೃತಿ, ಲೋಕದ ಯಾವ ಉದ್ದಾಮ ಸಾಹಿತ್ಯಕ್ಕಾದರೂ ಅದು ಶ್ರೇಷ್ಠ ರತ್ನವಾಗಬಹುದಾದ ವಿಮರ್ಶನ ಗ್ರಂಥ,ವೆಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಕುವೆಂಪು 'ರಾಮಾಯಣದರ್ಶನಂ' ಮಹಾಕಾವ್ಯಕ್ಕೊ ಕೆಲವು ಸನ್ನಿವೇಶಗಳಲ್ಲಿ 'ಅದಿಕವಿ ವಾಲ್ಮೀಕಿ' ಪ್ರೇರಕವಾಗಿದೆ. 'ಆದಿಕವಿ ವಾಲ್ಮೀಕಿ'ಯಲ್ಲಿ ಸಂಶೋಧನ ವಿಮರ್ಶೆ, ರಸವಿಮರ್ಶೆ, ಮತ್ತು

ತೌಲನಿಕ ವಿಮರ್ಶೆಯ ಮುಖಗಳು ಚೆಲ್ಲುವರಿದಿದ್ದು ಇದರಿಂದ ನಮ್ಮ ನವೋದಯ ವಿಮರ್ಶೆಗೆ ಒಂದು ಭದ್ರವಾದ ನೆಲಗಟ್ಟನ್ನು ಮಾಸ್ತಿ ನಿರ್ಮಿಸಿದರೆಂದು ಹೇಳಬಹುದು. ಭಾರತ ತೀರ್ಥದಲ್ಲಿ ಮಾಸ್ತಿಯವರ ಸಾಂಸ್ಕೃತಿಕ ದೃಷ್ಟಿಯು ಪ್ರಧಾನವಾಗಿರುವದು ಗಮನಾರ್ಹ. ಕಾಳಿದಾಸನ 'ಮೇಘಸಂದೇಶ'ವನ್ನು ಕುರಿತ ಮಾಸ್ತಿಯವರ ವಿಮರ್ಶೆ ಎಸ್.ವಿ. ಪರಮೇಶ್ವರಭಟ್ಟರ ಭಾಷಾಂತರ ವೃಕ್ಷಕ್ಕೆ ಬೀಜವಾಯಿತೆಂಬುದು ಮಹತ್ವದ ಸಂಗತಿ. ಕನ್ನಡ ಜನಪದ ಸಾಹಿತ್ಯದ ಬಗೆಗೆ ಮಾಸ್ತಿ ಬರೆದ 'ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು' ಎಂಬುದು ಮೊದಲ ಬರಹಗಳಲ್ಲೊಂದಾಗಿದೆ. ಕನ್ನಡ ನವೋದಯದ ಜೊತೆಗೆ ಆರಂಭವಾದ ಜಾನಪದ ನವೋದಯದ ಸಂದರ್ಭದಲ್ಲಿ ಜನಪದ ಸಾಹಿತ್ಯದ ವಿಮರ್ಶೆ ಮಾಡಿದ ಮಾಸ್ತಿಯವರು ಅದರ ಕಡೆಗೆ ಜನತೆಯ ಆದರ ಹೆಚ್ಚುವಂತೆ ಮಾಡಿದ್ದಾರೆ. ಕನ್ನಡದ ಪ್ರಾಚೀನ ಕವಿಗಳಾದ ಪಂಪ, ಬಸವಣ್ಣ, ಕುಮಾರವ್ಯಾಸ, ಲಕ್ಷ್ಮೀಶ. ಕೀರ್ತನಕಾರರು, ಸರ್ವಜ್ಞ, ರತ್ನಾಕರವರ್ಣಿ, ಮುದ್ದಣ ಮೊದಲಾದ ಕವಿಗಳ ಬಗೆಗೆ ರಸಿಕ ವಿಮರ್ಶೆ ಬರೆದ ಮಾಸ್ತಿವರು ಹೊರ ಪ್ರಾಂತದ ಹಾಗೂ ವಿಶ್ವದ ಕವಿಕೃತಿಗಳಾದ ತಮಿಳು ವೈಷ್ಣವ ಪ್ರಬಂಧ, ರವೀಂದ್ರ ಸಾಹಿತ್ಯ, ಜರ್ಮನ್ ನಾಟಕಕಾರ ಗಯಟೆ, ಪರ್ಶಿಯನ್ ಕವಿ ಹಾಫೀಜ್, ಪಾಶ್ಚಾತ್ಯ ಸಂತ ಸಾಹಿತ್ಯ ಹೀಗೆ ವಿಶ್ವದ ಶ್ರೇಷ್ಠ ಕವಿ ಕೃತಿಗಳ ಬಗೆಗೆ ವಿಮರ್ಶೆಯನ್ನು ಬರೆದಿದ್ದಾರೆ. ಹೊಸಗನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ ಮಾರ್ಗಗಳಲ್ಲದೆ ನವೋದಯ ಪರಂಪರೆಯ ಹಿರಿಯ ಕವಿ ಕೃತಿಗಳ ಬಗೆಗೆ ಮಾಸ್ತಿಯವರು ಬರೆದ ವಿಮರ್ಶೆ ಉಲ್ಲೇಖನೀಯವಾದದ್ದು. ಬೇಂದ್ರೆಯವರ 'ನಾದಲೀಲೆ' ಗೆ ಬರೆದ ಮಾಸ್ತಿಯವರ ವಿಮರ್ಶೆ ಕನ್ನಡ ವಿಮರ್ಶೆಯಲ್ಲಿ ಕ್ಲಾಸಿಕ್ ಆಗಿದೆಯೆಂದು ಕುರ್ತಕೋಟಿ, ಅನಂತಮೂರ್ತಿ ಮೊದಲಾದ ವಿಮರ್ಶಕರು ಎತ್ತಿ ಹೇಳಿದ್ದಾರೆ. ಮಾಸ್ತಿ ವಿಮರ್ಶೆಯಿಂದ ಪ್ರೇರಣೆ ಪಡೆದ ಲೇಖಕರೂ ತಮ್ಮ ಸಾಹಿತಮಾರ್ಗ ಕಂಡುಕೊಂಡಿದ್ದಾರೆ. ಮಾಸ್ತಿಯವರು 'ಸತಿಹಿತೈಷಿಣಿ ಗ್ರಂಥಮಾಲ'ಯ ಬಗೆಗೆ ಬಹು ಹಿಂದೆಯೇ ಬರೆದ ಅವರ ವಿಮರ್ಶೆ ಇವತ್ತಿನ ವಿಮರ್ಶೆಯನ್ನು ಹೋಲುತ್ತದೆಂದು ಹೇಳಬಹುದು. ಅಂದರೆ ಆ ಕಾಲದಲ್ಲಿ ಅದು ಕಟುವಾಯಿತೆಂದು ಅವರೇ ಮುಂದೊಂದು ಸಂದರ್ಭದಲ್ಲಿ ವಿದಿತಪಡಿಸಿದರು. ಹೀಗೆ ಕನ್ನಡ ವಿಮರ್ಶೆಯ ಪ್ರಪಂಚದಲ್ಲಿ ಮಾಸ್ತಿಯವರು ಮಾಡಿದ ಮಹತ್ವದ ಮೊದಲ ಕಾರ್ಯ ಕನ್ನಡದ ನವೋದಯ ಸಾಹಿತ್ಯದ ಉತ್ಕರ್ಷಕ್ಕೆ ಕಾರಣವಾಯಿತೆಂಬುದು ಗಮನಾರ್ಹ.

ಜೀವನ ಚರಿತ್ರೆ

ವಿಶ್ವಕವಿ ರವೀಂದ್ರರ ಜೀವನ ಹಾಗೂ ಕೃತಿಗಳ ಸಮಗ್ರ ಸಮೀಕ್ಷೆಯನ್ನು ನೀಡುವ ಮಾಸ್ತಿಯವರ 'ರವೀಂದ್ರನಾಥ ಠಾಕೂರ' (೧೯೩೫) ಕನ್ನಡ ರವೀಂದ್ರಸಾಹಿತ್ಯದಲ್ಲಿ ಮುಖ್ಯವಾದ ಗ್ರಂಥ. ವಂಗಕವಿಯ ಈ ಜೀವನಚರಿತ್ರೆ ಅವರ ಬಹುಮುಖ ಸಾಧನೆಗಳನ್ನು ಪರಿಚಯಿಸುತ್ತಿದೆ. ವಿಭೂತಿ ಪುರುಷ ರಾಮಕೃಷ್ಣ ಪರಮಹಂಸರನ್ನು ಕುರಿತ 'ಶ್ರೀ ರಾಮಕೃಷ್ಣ' (೧೯೩೬) ಮಾಸ್ತಿಯವರ ಇನ್ನೊಂದು ಜೀವನಚರಿತ್ರೆ. ಇವೆರಡರಲ್ಲಿ ಮಹಾಪುರುಷರ ಚೇತನ ಸಾಧನೆ ಸಂದೇಶಗಳನ್ನು ವಸ್ತುನಿಷ್ಠವಾಗಿ ಕಾಣುವ ಮಾಸ್ತಿಯವರ ಅವಲೋಕನಕ್ರಮ ಆದರಣೀಯವಾಗಿದೆ.

ಆತ್ಮಚರಿತ್ರೆ

ಮಾಸ್ತಿಯವರ 'ಭಾವ' (೧೯೬೮–೬೯) ಅವರ ೭೮(೧೮೮೧–೧೯೬೯) ವರ್ಷಗಳ ಬಾಳ ಅನುಭವ, ಚಿಂತನೆ, ಬದುಕಿನ ವಿಸ್ತಾರವನ್ನು ೧೩೫೦ ಪುಟಗಳಲ್ಲಿ ಚಿತ್ರಿಸುತ್ತದೆ. ಮಾಸ್ತಿಯವರು "ಆಧುನಿಕ ಕನ್ನಡದ ಸಾಂಸ್ಕೃತಿಕ ಶಿಲ್ಪಿಗಳಲ್ಲಿ ಒಬ್ಬರು. ಹೀಗೆ ಅವರ ಜೀವನ ಸಹಜವಾಗಿಯೇ ಸಮೃದ್ಧವಾದದ್ದು. ಮಾಸ್ತಿಯವರಂಥವರು ತಮ್ಮ ಜೀವನದ ಕಥೆಯನ್ನು ಹೇಳಿಕೊಳ್ಳವಾಗ ಅದು ಬರಿಯ ವ್ಯಕ್ತಿಯ ಚರಿತ್ರೆಯಷ್ಟೇ ಆಗಿ ನಿಲ್ಲುವುದಿಲ್ಲ. ಅದು ಒಂದು ಜನದ ಸಮಗ್ರ ಜೀವನದ ಇತಿಹಾಸವಾಗುತ್ತದೆ. ಜೀವನವನ್ನೇ ಕುರಿತಂತೆ ಒಂದು ಪರಿಣತ ದೃಷ್ಟಿಯ ಪ್ರತಿಪಾದನೆಯಾಗುತ್ತದೆ"[೧೦] ಎಂಬುದನ್ನು 'ಭಾವ' ತಿಳಿಸುತ್ತದೆ. 'ಭಾವ' ಮಾಸ್ತಿಯವರ ಚೇತನ ವಿಕಾಸವನ್ನು ಪರಿಚಯಿಸಿದರೆ 'ಸಾಹಿತ್ಯಪ್ರೇರಣೆ' (೧೯೭೫) ಅವರ ಸೃಜನಶೀಲ ಸಾಹಿತ್ಯಪ್ರತಿಭೆಯ ವಿವಿಧ ಮುಖಗಳ ಬೆಳವಣಿಗೆಯ ಸುಂದರ ಚಿತ್ರವನ್ನು ನೀಡುತ್ತದೆ. ಸಮಕಾಲೀನ ಸಾಹಿತ್ಯ ಸನ್ನಿವೇಶ, ಕ್ರಿಯೆ ಪ್ರತಿಕ್ರಿಯೆಯನ್ನು ದಾಖಲಿಸುವ 'ಸಾಹಿತ್ಯಪ್ರೇರಣೆ' ಒಂದು ಅರ್ಥಪೂರ್ಣ ಅಪರೂಪದ ಗ್ರಂಥ.

ಭಾಷಾಶಾಸ್ತ್ರ

'ನಮ್ಮ ನುಡಿ' (೧೯೬೦) ಮಾಸ್ತಿಯವರು ಬರೆದ ಕನ್ನಡ ಭಾಷಾಶಾಸ್ತ್ರ ಗ್ರಂಥ. 'ನಮ್ಮ ನುಡಿಯ ಪ್ರಮುಖ ವೈಶಿಷ್ಟವೆಂದರೆ ಹೆಸರುಗಳ ಸಾಂಸ್ಕೃತಿಕ ಅಧ್ಯಯನ. ಕನ್ನಡ ಶಬ್ದ ಭಂಡಾರದಲ್ಲಿರುವ ವ್ಯಕ್ತಿನಾಮ, ಸ್ಥಳನಾಮಗಳ ಅಧ್ಯಯನವನ್ನು ಮಾಸ್ತಿಯವರು ವ್ಯಾಪಕವಾಗಿ ಕೈಕೊಂಡಿರುವರಲ್ಲದೆ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿರುವದು ಅವರ ವಿಶೇಷ ಕೊಡುಗೆಯಾಗಿದೆ.

ಇತರ ಗದ್ಯಕೃತಿಗಳು

ಮಾಸ್ತಿಯವರ 'ಕರ್ನಾಟಕದ ಜನತೆಯ ಸಂಸ್ಕೃತಿ' ಗ್ರಂಥವು ನಾಡಿನ ಸಂಸ್ಕೃತಿಯ ವಿಕಾಸವನ್ನು ಚಿತ್ರಿಸುತ್ತದೆ. 'ಪ್ರಸಂಗ'ದ ಐದು ಸಂಪುಟಗಳಲ್ಲಿ ನಾಡು, ನುಡಿ, ಸಾಹಿತ್ಯದ ವಿವಿಧ ವಿಷಯಗಳ ಬಗ್ಗೆ ಮಾಸ್ತಿಯವರು ಲೇಖನಗಳನ್ನು ಬರೆದಿದ್ದಾರೆ. 'ಚಿಂತನ' ಗ್ರಂಥದಲ್ಲಿ ಬಾಳಿಗೆ ಬೇಕಾದ ನೈತಿಕ ಮೌಲ್ಯಗಳ ವಿಚಾರತರಂಗಗಳಿವೆ. 'ಪೂಜನ'ವು (೧೯೫೧) ಮಾಸ್ತಿಯವರು ಸಮಕಾಲೀನ ಬೇರಬೇರೆ ಲೇಖಕರ ಕೃತಿಗಳಿಗೆ ಬರೆದ ಮುನ್ನುಡಿಯ ಮಾಲೆಯಾಗಿದೆ. 'ಅರ್ಚನ' (೧೯೭೯) ೫೯ ಸ್ಮರಣೀಯ ವ್ಯಕ್ತಿ ವೈಶಿಷ್ಟವನ್ನು ಸೂಚಿಸುವ ಲೇಖನ ಸಂಪುಟವಾಗಿದೆ. ಮಾಸ್ತಿಯವರ ಸಾಹಿತ್ಯ (೧೯೬೭) ಹಾಗೂ ಪತ್ರಗಳು (೧೯೭೭) ಕನ್ನಡ ಪತ್ರಸಾಹಿತ್ಯ ಗ್ರಂಥಗಳು. ತಮ್ಮ ಬಾಳ ಕೊನೆಯ ದಿನಗಳಲ್ಲಿ ಬರೆದ 'ಅಂತರಗಂಗೆ' (೧೯೮೨) ಹಾಗೂ 'ಧರ್ಮ ಸಂರಕ್ಷಣೆ' (೧೯೮೩) ನಮ್ಮ ಧರ್ಮ ಸಂಸ್ಕೃತಿಗಳ ಬಗೆಗಿನ ಅವರ ವ್ಯಾಪಕ ಚಿಂತನೆಯ ಗ್ರಂಥಗಳಾಗಿವೆ.

ಅನುವಾದ ಸಾಹಿತ್ಯ

ಬಸವಣ್ಣನವರ ವಚನಗಳನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ಅವುಗಳ ಹಿರಿಮೆಯನ್ನು ಪಾಶ್ಚಾತ್ಯ ಪ್ರಪಂಚಕ್ಕೆ ಮೊದಲಿಗೆ ಪರಿಚಯಿಸಿದ ಕೀರ್ತಿಯೂ ಮಾಸ್ತಿಯವರಿಗೆ ಸಲ್ಲುತ್ತದೆ. ಅವರ "Sayings of Basavanna" ಎಂಬುದು ಬಸವಣ್ಣನವರ ವಚನಗಳ ಆಂಗ್ಲ ಭಾಷೆಯ ಉತ್ಕೃಷ್ಟ ಅನುವಾದ ಕೃತಿ. ವಿಶ್ವದ ಮಹಾನಾಟಕಕಾರ ಶೇಕ್ಸಪಿಯರನ ನಾಟಕಗಳೆಂದರೆ ಮಾಸ್ತಿಯವರಿಗೆ ಅಪಾರ ಆಸಕ್ತಿ. ಅವರ ಶೇಕ್ಸಪಿಯರ್ ಸಾಹಿತ್ಯಾಸಕ್ತಿ, ಸಹೃದಯತೆಯ ಫಲವಾಗಿ ಇಂಗ್ಲೀಷಿನ ಅವನ ಅನೇಕ ನಾಟಕಗಳನ್ನು ಕನ್ನಡಕ್ಕೆ ತಂದ ಶ್ರೇಯಸ್ಸು ಮಾಸ್ತಿಯ ವರದಾಗಿದೆ. ಶೇಕ್ಸಪಿಯರ್‌ನ ಹ್ಯಾಮ್ಲೆಟ್ (೧೯೫೮), 'ಚಂಡಮಾರುತ' (೧೯೫೯) 'ಲಿಯರ್ ಮಹಾರಾಜ' (೧೯೫೯), 'ದ್ವಾದಶರಾತ್ರಿ' (೧೯೫೯), 'ಶೇಕ್ಸಪಿಯರ್ ದೃಶ್ಯಗಳು' ಭಾಗ ೨ (೧೯೬೪), 'ಆಯ್ದ ದೃಶ್ಯಗಳು' ಹಾಗೂ ಶೇಕ್ಸಪಿಯರ್ ದೃಶ್ಯಗಳು ಭಾಗ೩ (೧೯೬೪), ಇದರಲ್ಲಿ ಹೆನ್ರಿ IV ಹೆನ್ರಿ V ನಾಟಕಗಳ ಅನುವಾದ ಮೂಡಿ ಬಂದಿವೆ. ಇವುಗಳ ಅನುವಾದಸೊಗಸು, ಸಾಹಿತ್ಯಗುಣ, ಕಾವ್ಯಾಂಶಗಳು ಮಾಸ್ತಿಯವರ ವ್ಯಾಪಕ ನಾಟ್ಯಾಭಿರುಚಿಯ ಪ್ರತೀಕಗಳಾಗಿವೆ. ತಮಿಳು ವೈಷ್ಣವ ಪ್ರಬಂಧಗಳು ಹಾಗೂ ರವೀಂದ್ರ ಸಾಹಿತ್ಯದ ಕಾವ್ಯಭಾಗಗಳನ್ನು ಮಾಸ್ತಿಯವರು ಕಾವ್ಯರೂಪದಲ್ಲಿ ಅನುವಾದಿಸಿರುವದೂ ಗಮನಾರ್ಹ. ಕನ್ನಡ ನವೋದಯ ಕಾವ್ಯದ ಬೆಳವಣಿಗೆಯ ಸಂದರ್ಭದಲ್ಲಿ ಮಾಸ್ತಿಯವರು ಈ ರೀತಿಯ ಅನುವಾದದ ಮೂಲಕ ಮಾಡಿದ ಹೊಸ ಪ್ರಯೋಗ, ನವೀನ ಭಾಷೆಯ ಬಳಕೆ ಅರ್ಥಪೂರ್ಣವಾಗಿದೆ.

ಪತ್ರಿಕಾ ಸಂಪಾದಕೀಯ

'ಜೀವನ' ಪತ್ರಿಕೆಯ ಸಂಪಾದಕರಾಗಿ ಅದನ್ನು ೨೧ ವರ್ಷಗಳ ಕಾಲ ನಡೆಸಿ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ಜೀವನದಲ್ಲಿ ಮಹತ್ವದ ಪತ್ರಿಕೆಯನ್ನಾಗಿಸಿದವರು ಮಾಸ್ತಿಯವರು. ಹೊಸಗನ್ನಡ ಸಾಹಿತ್ಯದ ಬೆಳವಣಿಗೆಗೆ 'ಜೀವನ' ಪತ್ರಿಕೆ ಮಾಡಿದ ಕಾರ್ಯ ಅನುಪಮವಾದದ್ದು. ಕನ್ನಡದ ತರುಣ ಬರಹಗಾರರಿಗೆ ಉತ್ತೇಜನ ನೀಡುತ್ತ ಬಂದ ಈ ಪತ್ರಿಕೆಯಲ್ಲಿಯೇ ಇಂದಿನ ಪ್ರಸಿದ್ಧ ಬರಹಗಾರರ ಮೊದಲ ಬರಹ ಪ್ರಕಟವಾಗಿರುವದು ಕುತೂಹಲಕರ ಅಂಶ. ನಮ್ಮ ನಾಡಿನ ಸಾಹಿತಿಗಳಲ್ಲದೆ ವಿಚಾರವಂತರಿಗೂ ಸಾಮಾಜಿಕರಿಗೂ 'ಜೀವನ' ಪತ್ರಿಕೆ ಆದರಣೀಯ ವಾಗಲು ಕಾರಣ ಅದರಲ್ಲಿ ಮಾಸ್ತಿಯವರು ಬರೆಯುತ್ತಿದ್ದ ಸಂಪಾದಕೀಯಗಳು. ಈ 'ಸಂಪಾದಕೀಯ'ಗಳು (೧೯೬೭) ೫ ಸಂಪುಟಗಳ ರೂಪದಲ್ಲಿ ಪ್ರಕಟವಾಗಿವೆ. ಲೋಕ ಜೀವನವನ್ನು ನಮ್ಮ ಸಂಸ್ಕೃತಿಯ ಬೆಳಕಿನಲ್ಲಿ ವಿವೇಚಿಸಿರುವದು ಮಾಸ್ತಿಯವರ ಸಂಪಾದಕೀಯಗಳ ಪ್ರಮುಖ ವೈಶಿಷ್ಟ್ಯವಾಗಿದೆ. ಸಮಕಾಲೀನ ನಾಡು, ರಾಷ್ಟ್ರ, ಲೋಕಜೀವನದ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ವಿಷಯಗಳ ಅಧ್ಯಯನಕ್ಕೆ ಇವು ಸಾಮಗ್ರಿಗಳಾಗಿವೆ.

ಮಾಸ್ತಿಯವರ ಸಮಗ್ರ ಸಾಹಿತ್ಯದ ಅಭಿವ್ಯಕ್ತಿ ಸತ್ವ ನಾಡ ಸಂಸ್ಕೃತಿಯನ್ನು ಚಿತ್ರಿಸುವದಾಗಿದೆ. ಅವರು ಅಪ್ಪಟ ಪ್ರಜಾಪ್ರಭುತ್ವವಾದಿಗಳು. ಭಾರತೀಯ ಪರಂಪರಾಗತ ಮೌಲ್ಯಗಳೇ ಆಧುನಿಕ ಬದುಕಿಗೆ ಆದರ್ಶವಾಗಬೇಕೆಂಬ ಪ್ರತಿಪಾದನೆಯನ್ನು ತಮ್ಮ

ಸಾಹಿತ್ಯದ ಮೂಲಕ ಅವರು ಮಾಡುತ್ತ ಬಂದಿದ್ದಾರೆ. ರಾಷ್ಟ್ರೀಯ ಭಾವೈಕ್ಯತೆ ಸಮಗ್ರತೆಯ ಬಗ್ಗೆ ಅವರು ಕರೆಕೊಡುತ್ತ ಬಂದಿದ್ದರೂ ಕನ್ನಡದ ಸರ್ವತೋಮುಖ ಏಳಿಗೆಯ ಬಗೆಗೆ ಎಚ್ಚರದ ವಾಣಿಯಾಗಿ ನಾಡ ಜೀವನದ ಉಚ್ಚ ಪರಂಪರೆಯನ್ನು ಎತ್ತಿ ಹಿಡಿದಿದ್ದಾರೆ. ಮಾನವೀಯ ಅಂತಃಕರಣ, ಮನುಷ್ಯಚೇತನದ ಘನತೆ, ಪ್ರಬುದ್ಧ ಜೀವನದರ್ಶನ ಅವರ ಸಾಹಿತ್ಯದ ಶ್ರೇಷ್ಠತೆಯ ಗುಣಧರ್ಮವಾಗಿದೆ.

ಕನ್ನಡ ನಾಡು ಈಗ ಮಾಸ್ತಿ ಶತಮಾನೋತ್ಸವದ ಸಂಭ್ರಮದಲ್ಲಿದೆ. ನೂರು ವರ್ಷಗಳ ಹಿಂದೆ ಹುಟ್ಟಿದ ಚೇತನವೊಂದು ೯೫ ವರ್ಷಗಳ ಕಾಲ ಬಾಳಿ ಉನ್ನತ ಸಾಹಿತ್ಯ ಪರಂಪರೆಯನ್ನು ಕನ್ನಡದಲ್ಲಿ ನಿರ್ಮಾಣಮಾಡಿರುವದು ಈ ಶತಮಾನದ ಸಾಹಿತ್ಯದ ವೈಶಿಷ್ಟ್ಯವಾಗಲಿದೆ. ಗಿಡಮರಗಳಿಗೆ ಹೂ ಹಣ್ಣುಗಳು ಬರುವಂತೆ ಮೂಡಿಬಂದ ಮಾಸ್ತಿ ಸಾಹಿತ್ಯ ಕನ್ನಡ ನವೋದಯ ಸಾಹಿತ್ಯದ ಉತ್ಕರ್ಷದ ಪ್ರತೀಕವೂ ಆಗಿದೆ. ಬೇಂದ್ರೆಯವರು ಮಾಸ್ತಿಯವರ ಬಗ್ಗೆ ಬರೆದ ಕವಿತೆಯಲ್ಲಿ ಹೇಳಿದಂತೆ ಚಿಪ್ಪಿನ ಸ್ವಾತಿ ಹನಿಯೇ ಮುತ್ತಾದಂತೆ ಬೆಳೆದ ಮಾಸ್ತಿ ವ್ಯಕ್ತಿತ್ವ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಸ್ವಾತಿ ಮುತ್ತಾಗಿದೆ. ಅವರ ಜೀವನ ಹಾಗೂ ಸಾಹಿತ್ಯದಲ್ಲಿ ಜ್ಞಾನದ ಬೆಳಕು ಮತ್ತು ಹೃದಯದ ಮಾಧುರ್ಯ ಸಂಗಮಿಸಿದೆ.

ಅಡಿಟಿಪ್ಪಣಿಗಳು

೧. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ. ಪುಟ ೨೭೮

೨. ಮಾಸ್ತಿ : ಸಾಹಿತ್ಯ ಪ್ರೇರಣೆ. ಪುಟ ೬.

೩. ಗೋಪಾಲಕೃಷ್ಣ ಅಡಿಗ : 'ಮಾಸ್ತಿಯವರ ಕವಿತೆ' ಸಾಕ್ಷಿ ೧೫. ಪುಟ ೭.

೪. ವಿ.ಎಂ. ಇನಾಮದಾರ್ ಅವರು ಬರೆದ 'ಶ್ರೀರಾಮ ಪಟ್ಟಾಭಿಷೇಕ – ಒಂದು ಸಮಾಲೋಕನ' ಎಂಬ ಗ್ರಂಥವು ಈ ಕಾವ್ಯದ ವಿವರವಾದ ಸಮೀಕ್ಷೆಯನ್ನು ನೀಡುತ್ತದೆ ನೋಡಿ.

೫. ಗಿರಡ್ಡಿ ಗೋವಿಂದರಾಜ : 'ಸಣ್ಣಕತೆಯ ಸ್ವರೂಪ ಮತ್ತು ಮಾಸ್ತಿ' – ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ. ಪುಟ ೧೮೨

೬. ಕೆ.ಜಿ. ನಾಗರಾಜಪ್ಪ : 'ಮಾಸ್ತಿ ಕಥಾ ಜಗತ್ತಿನಲ್ಲಿ ಧಾರ್ಮಿಕ ನೆಲೆಗಳು'–ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ ಗ್ರಂಥದ ಲೇಖನವನ್ನು ನೋಡಬಹುದು.

೭. 'ಶ್ರೀನಿವಾಸ 'ಸಂಭಾವನಾ' ಗ್ರಂಥದಲ್ಲಿ ಎಂ.ಜಿ. ಕೃಷ್ಣಮೂರ್ತಿಯವರು ಬರೆದ ಮಾಸ್ತಿ ಕಥೆಗಳ ಕುರಿತಾದ ವಿಮರ್ಶೆಯ ಲೇಖನ ಗಮನಾರ್ಹವಾದುದು.

೮. ಶಾಂತಿನಾಥ ದೇಸಾಯಿ: ಚಿಕವೀರ ರಾಜೇಂದ್ರ–ಒಂದು ವಿಮರ್ಶಾತ್ಮಕ ಟಿಪ್ಪಣಿ, ಪ್ರಬುದ್ಧ ಕರ್ನಾಟಕ ಮಾಸ್ತಿ ಸಂಚಿಕೆ (267) ಸಂಪುಟ ೬೭ ಸಂಚಿಕೆ ೨.

೯. ಟಿ.ಪಿ. ಅಶೋಕ: 'ಚಿಕವೀರ ರಾಜೇಂದ್ರ' ಕಾದಂಬರಿಯಲ್ಲಿ ದುರಂತ ಪ್ರಜ್ಞೆ. ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ (ಪುಟ ೫೫–೭೪) ಈ ಲೇಖನವು ಪರಿಶೀಲನಾರ್ಹವಾಗಿದೆ.

೧೦. ಹಾ.ಮಾ. ನಾಯಕ ಅವರ ಕೆಲಸುಡಿ : ಜಿ.ಎಂ. ಹೆಗಡೆ ಅವರ ಮಾಸ್ತಿಯವರ ವಿಮರ್ಶೆ ಒಂದು ಅಧ್ಯಯನ ಗ್ರಂಥದಲ್ಲಿ.

೧೧. ಹಾ.ಮಾ. ನಾಯಕ : ಸಾಹಿತ್ಯ ಸಲ್ಲಾಪ ಪುಟ ೩೦೧–೩೦೨.

ಮಾಸ್ತಿ ಸಾಹಿತ್ಯ ಸೂಚಿ

೧. ರಂಗನ ಮದುವೆ	ಸಣ್ಣಕತೆ	೧೯೧೦–೧೧
೨. ಇತರ ಹತ್ತು ಕತೆಗಳು	ಸಣ್ಣಕತೆ	೧೯೧೧–೨೦
೩. ಕೆಲವು ಸಣ್ಣ ಕತೆಗಳು	ಸಣ್ಣಕತೆ	೧೯೧೧–೨೦
೪. ಬಿನ್ನಹ	ಕಾವ್ಯ	೧೯೨೨
೫. ಶಾಂತಾ	ನಾಟಕ	೧೯೨೩
೬. ಸಾವಿತ್ರಿ	ನಾಟಕ	೧೯೨೩
೭. ಸಣ್ಣಕತೆಗಳು	ಸಣ್ಣಕತೆ	೧೯೨೪
೮. ಸಾಹಿತ್ಯ	ಸಾಹಿತ್ಯ ಮೀಮಾಂಸೆ	೧೯೨೪
೯. ಅರುಣ	ಕಾವ್ಯ	೧೯೨೪
೧೦. ವಿಮರ್ಶೆ–೧	ವಿಮರ್ಶೆ	೧೯೨೪
೧೧. ಉಷಾ	ನಾಟಕ	೧೯೨೭
೧೨. ಸುಬ್ಬಣ್ಣ	ನೀಳ್ಗತೆ	೧೯೨೮
೧೩. ತಾಳೀಕೋಟೆ	ನಾಟಕ	೧೯೨೯
೧೪. ವಿಮರ್ಶೆ–೨	ವಿಮರ್ಶೆ	೧೯೨೯
೧೫. ನಾಲ್ಕು ಸಣ್ಣಕತೆಗಳು	ಸಣ್ಣಕತೆ	೧೯೩೦
೧೬. ಕನ್ನಡದ ಸೇವೆ	ಉಪನ್ಯಾಸ	೧೯೩೦
೧೭. ಮಂಜುಳ	ನಾಟಕ	೧೯೩೦
೧೮. ತಾವರೆ	ಕಾವ್ಯ	೧೯೩೦
೧೯. ಕರ್ನಾಟಕದ ಜನತೆಯ ಸಂಸ್ಕೃತಿ	ಉಪನ್ಯಾಸ ಪ್ರಬಂಧ	೧೯೩೧
೨೦. ಚೆಲುವು	ಕಾವ್ಯ	೧೯೩೧
೨೧. ಶಿವ ಛತ್ರಪತಿ	ನಾಟಕ	೧೯೩೨
೨೨. ವಿಮರ್ಶೆ–೩	ವಿಮರ್ಶೆ	೧೯೩೩
೨೩. ಯಶೋಧರಾ	ನಾಟಕ	೧೯೩೩
೨೪. ಮಲಾರ	ಕಾವ್ಯ	೧೯೩೩
೨೫. ಸಣ್ಣಕತೆಗಳು–೪	ಸಣ್ಣಕತೆ	೧೯೩೪
೨೬. ರವೀಂದ್ರನಾಥ ಠಾಕೂರ	ಜೀವನಚರಿತ್ರೆ	೧೯೩೫
೨೭. Sayings of Basavanna	Translation	೧೯೩೫
೨೮. ಶ್ರೀರಾಮಕೃಷ್ಣ	ಜೀವನಚರಿತ್ರೆ	೧೯೩೬
೨೯. ಸಣ್ಣಕತೆಗಳು–೫	ಸಣ್ಣಕತೆ	೧೯೩೬
೩೦. ತಿರುಪಾಣಿ	ನಾಟಕ	೧೯೩೭
೩೧. Popular culture in karnatak	Essays on culture	೧೯೩೭
೩೨. ಕಾಕನಕೋಟೆ	ನಾಟಕ	೧೯೩೮
೩೩. ಆದಿಕವಿ ವಾಲ್ಮೀಕಿ	ವಿಮರ್ಶೆ	೧೯೩೮

೩೪.	ವಿಮರ್ಶೆ–೪	ವಿಮರ್ಶೆ	೧೯೩೯
೩೫.	ಗೌಡರಮಲ್ಲಿ	ಕಾವ್ಯ	೧೯೪೦
೩೬.	ಸಣ್ಣಕತೆಗಳು–೬	ಸಣ್ಣಕತೆ	೧೯೪೦
೩೭.	The poetry of valmiki	Critical work	೧೯೪೦
೩೮.	ರಾಮನವಮಿ	ಕಾವ್ಯ	೧೯೪೧
೩೯.	ಮೂಕನ ಮಕ್ಕಳು	ಕಾವ್ಯ	೧೯೪೩
೪೦.	Subbanna	Fiction	೧೯೪೩
೪೧.	Short stories-1	Short Story	೧೯೪೩
೪೨.	Short Stories-2	Short Story	೧೯೪೩
೪೩.	Short Stories-3	Short Story	೧೯೪೪
೪೪.	Short Stories-4	Short Story	೧೯೪೪
೪೫.	ತಾಯಿಯ ತಮ್ಮಡಿ	ಉಪನ್ಯಾಸ ಪ್ರಬಂಧ	೧೯೪೪
೪೬.	ನವರಾತ್ರಿ–೧	ಕಾವ್ಯ	೧೯೪೪
೪೭.	ನವರಾತ್ರಿ–೨	ಕಾವ್ಯ	೧೯೪೫
೪೮.	ಚಿತ್ರಾಂಗದ	ಅನುವಾದ	೧೯೪೫
೪೯.	ನವರಾತ್ರಿ–೩	ಕಾವ್ಯ	೧೯೪೬
೫೧.	ಸುನೀತ	ಕಾವ್ಯ	೧೯೪೬
೫೧.	ಪ್ರಸಂಗ–೧	ವಿಮರ್ಶೆ	೧೯೪೬
೫೨.	Ravindranath Tagore	Biography	೧೯೪೬
೫೩.	ಸಣ್ಣ ಕತೆಗಳು–೭	ಸಣ್ಣಕತೆ	೧೯೪೭
೫೪.	ಸಣ್ಣ ಕತೆಗಳು–೮	ಸಣ್ಣಕತೆ	೧೯೪೭
೫೫.	ನವರಾತ್ರಿ–೪	ಕಾವ್ಯ	೧೯೪೮
೫೬.	ಸಣ್ಣ ಕತೆಗಳು–೯	ಸಣ್ಣಕತೆ	೧೯೪೯
೫೭.	ಚೆನ್ನಬಸವನಾಯಕ	ಕಾದಂಬರಿ	೧೯೫೦
೫೮.	ಸಣ್ಣ ಕತೆಗಳು–೧೦	ಸಣ್ಣಕತೆ	೧೯೫೦
೫೯.	ಮನವಿ	ಕಾವ್ಯ	೧೯೫೧
೬೦.	ಪೂಜನ	ಮುನ್ನುಡಿ/ವಿಮರ್ಶೆ	೧೯೫೧
೬೧.	ಚಿಂತನ	ವಿಚಾರ	೧೯೫೨
೬೨.	ಭಾರತತೀರ್ಥ	ವಿಮರ್ಶೆ	೧೯೫೨
೬೩.	ನವರಾತ್ರಿ–೫	ಕಾವ್ಯ	೧೯೫೩
೬೪.	ಮಹಾಸತಿ	ನಾಟಕ	೧೯೫೩
೬೫.	ಅನಾರ್ಕಲಿ	ನಾಟಕ	೧೯೫೫
೬೬.	ಚಿಕವೀರ ರಾಜೇಂದ್ರ	ಕಾದಂಬರಿ	೧೯೫೬
೬೭.	ಕನ್ನಡಲೆಂಕ	ಉಪನ್ಯಾಸ ಪ್ರಬಂಧ	೧೯೫೭
೬೮.	ಸಣ್ಣಕತೆಗಳು–೧೧	ಸಣ್ಣಕತೆ	೧೯೫೭

೬೯. Chenna Basava Nayaka	Novel	೧೯೫೭
೭೦. ಹ್ಯಾಮ್ಲೆಟ್	ಷೇಕ್ಸಪಿಯರ್ ಅನುವಾದ	೧೯೫೮
೭೧. ಚಂಡಮಾರುತ	ಷೇಕ್ಸಪಿಯರ್ ಅನುವಾದ	೧೯೫೯
೭೨. ಲಿಯರ್ ಮಹಾರಾಜ	ಷೇಕ್ಸಪಿಯರ್ ಅನುವಾದ	೧೯೫೯
೭೩. ದ್ವಾದಶರಾತ್ರಿ	ಷೇಕ್ಸಪಿಯರ್ ಅನುವಾದ	೧೯೫೯
೭೪. ಶ್ರೀಕೃಷ್ಣ ಕರ್ಣಾಮೃತ	ಸಂಸ್ಕೃತ ಅನುವಾದ	೧೯೫೯
೭೫. ನಮ್ಮನುಡಿ	ಭಾಷಾಶಾಸ್ತ್ರ	೧೯೬೦
೭೬. ಷೇಕ್ಸಪಿಯರ್ ದೃಶ್ಯಗಳು–೧	೧೫ ಏಕಾಂಕಗಳು	೧೯೬೩
೭೭. ಪ್ರಸಂಗ–೨	ವಿಚಾರ	೧೯೬೩
೭೮. ಪುರಂದರದಾಸ	ನಾಟಕ	೧೯೬೪
೭೯. ಷೇಕ್ಸಪಿಯರ ದೃಶ್ಯಗಳು–೨	೯–ದೃಶ್ಯಗಳು	೧೯೬೪
೮೦. ಷೇಕ್ಸಪಿಯರ ದೃಶ್ಯಗಳು–೩	ಹೆನ್ರಿ ೪ ಹೆನ್ರಿ ೫ ಅನುವಾದ	೧೯೬೪
೮೧. ಪ್ರಸಂಗ–೩	ವಿಚಾರ/ವಿಮರ್ಶೆ	೧೯೬೫
೮೨. ಕನಕಣ್ಣ	ನಾಟಕ	೧೯೬೫
೮೩. ಸಣ್ಣಕತೆಗಳು–೧೨	ಸಣ್ಣಕತೆ	೧೯೬೫
೮೪. ಸಂಪಾದಕೀಯ–೧	ಸಂಪಾದಕೀಯ	೧೯೬೭
೮೫. ಸಂಪಾದಕೀಯ–೨	ಸಂಪಾದಕೀಯ	೧೯೬೭
೮೬. ಸಂಪಾದಕೀಯ–೩	ಸಂಪಾದಕೀಯ	೧೯೬೭
೮೭. ಸಂಪಾದಕೀಯ–೪	ಸಂಪಾದಕೀಯ	೧೯೬೭
೮೮. ಸಂಪಾದಕೀಯ–೫	ಸಂಪಾದಕೀಯ	೧೯೬೭
೮೯. ಸಾಹಿತ್ಯ ಲಾಲನೆ	ಪತ್ರಸಂಚಯ	೧೯೬೭
೯೦. ಪ್ರಸಂಗ–೪	ವಿಚಾರ/ವಿಮರ್ಶೆ	೧೯೬೭
೯೧. ಸಣ್ಣಕತೆಗಳು–೧೩	ಸಣ್ಣಕತೆ	೧೯೬೮
೯೨. Short Stories-5	Short Story	೧೯೬೮
೯೩. ಭಾವ–೧	ಆತ್ಮಚರಿತ್ರೆ	೧೯೬೯
೯೪. ಭಾವ–೨	ಆತ್ಮಚರಿತ್ರೆ	೧೯೬೯
೯೫. ಭಾವ–೩	ಆತ್ಮಚರಿತ್ರೆ	೧೯೬೯
೯೬. ಭಟ್ಟರ ಮಗಳು	ರೇಡಿಯೋ ನಾಟಕ	೧೯೬೯
೯೭. ಸಂಕ್ರಾಂತಿ	ಕಾವ್ಯ	೧೯೬೯
೯೮. ಸಾಹಿತ್ಯದಿಂದ ಆಗುವ ಕೆಲಸ	ಉಪನ್ಯಾಸ	೧೯೭೧
೯೯. ವಿಚಾರ	ವಿಚಾರ ಸಾಹಿತ್ಯ	೧೯೭೧
೧೦೦. ಶ್ರೀರಾಮ ಪಟ್ಟಾಭಿಷೇಕ	ಮಹಾಕಾವ್ಯ	೧೯೭೨
೧೦೧. ಬಾನುಲಿ ದೃಶ್ಯಗಳು	ರೇಡಿಯೋ ನಾಟಕ	೧೯೭೪
೧೦೨. ಸಾಹಿತ್ಯ ಪ್ರೇರಣೆ	ವಿಮರ್ಶೆ	೧೯೭೫
೧೦೩. Essays, Addresses	Essays, Addresses	೧೯೭೫

೧೦೪.	Rajaji Vol. I	Biography	೧೯೭೫
೧೦೫.	Rajaji Vol.II	Biography	೧೯೭೫
೧೦೬.	ಶೇಷಮ್ಮ	ಕಾದಂಬರಿ	೧೯೭೬
೧೦೭.	ನವರತ್ನ ರಾಮರಾವ್	ಉಪನ್ಯಾಸ	೧೯೭೬
೧೦೮.	ಪತ್ರಗಳು	ಪತ್ರ ಸಂಚಯ	೧೯೭೭
೧೦೯.	Shrimad Baghavadgeeta A Study	Critical work	೧೯೭೮
೧೧೦.	ಕಾಳಿದಾಸ	ನಾಟಕ	೧೯೭೮
೧೧೧.	ಸಣ್ಣಕತೆಗಳು—೧೪	ಸಣ್ಣಕತೆ	೧೯೭೯
೧೧೨.	ಆರಂಭದ ಆಂಗ್ಲ ಸಾಹಿತ್ಯ	ವಿಮರ್ಶೆ	೧೯೭೯
೧೧೩.	ನಮ್ಮ ಹೊಸ ಸಾಹಿತ್ಯದ ಆರಂಭ	ವಿಮರ್ಶೆ	೧೯೭೯
೧೧೪.	ಅರ್ಚನ	ವ್ಯಕ್ತಿಚಿತ್ರ	೧೯೭೯
೧೧೫.	Addreses	Addresses	೧೯೮೦
೧೧೬.	Kalidasa	Drama	೧೯೮೦
೧೧೭.	ಪ್ರಸಂಗ—೫	ವಿಚಾರ ವಿಮರ್ಶೆ	೧೯೮೦
೧೧೮.	ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ	ಕಥಾಸಾರ	೧೯೮೧
೧೧೯.	ಉತ್ತರಕಾಂಡ ವಿಚಾರ	ವಿಮರ್ಶೆ	೧೯೮೧
೧೨೦.	ಅಂತರಗಂಗೆ	ಭಾರತೀಯ ಸಂಸ್ಕೃತಿ ಚಿಂತನ	೧೯೮೨
೧೨೧.	ಅಜ್ಜನದಾರಿ	ನಾಟಕ	೧೯೮೩
೧೨೨.	ಧರ್ಮ ಸಂರಕ್ಷಣೆ	ಭಾರತೀಯ ಧರ್ಮ ವಿಚಾರ	೧೯೮೩
೧೨೩.	Thoughts on Religion	Essay on Religion	೧೯೮೩
೧೨೪.	Thinking of my life	Autobiography	೧೯೮೩
೧೨೫.	ಸಣ್ಣಕತೆಗಳು—೧೫	ಸಣ್ಣಕತೆ	೧೯೮೪
೧೨೬.	ವಿಮಲ ಮರಿಯಾನ್	ನಾಟಕ	೧೯೮೫
೧೨೭.	ಮಾತುಗಾರ ರಾಮಣ್ಣ	ನಾಟಕ	೧೯೮೫

ಸಂಪಾದಿತ ಕೃತಿಗಳು

೧.	ಸಂಭಾವನೆ : 'ಶ್ರೀ'ಯವರಿಗೆ ಅರ್ಪಿಸಿದ ಕನ್ನಡದ ಮೊದಲ ಸಂಭಾವನಾ ಗ್ರಂಥ	೧೯೪೧
೨.	ಬಿಜ್ಜಳರಾಯ ಚರಿತೆ	೧೯೫೪
೩.	ಕರ್ನಾಟಕ ಭಾರತ ಕಥಾಮಂಜರಿ : ಕುವೆಂಪು ಅವರೊಂದಿಗೆ ಸಂಪಾದಿಸಿದ ಗ್ರಂಥ	೧೯೫೮
೪.	ಸರ್ ವಿಶ್ವೇಶ್ವರಯ್ಯ	೧೯೬೦
೫.	ರವೀಂದ್ರ ಪ್ರಶಸ್ತಿ	೧೯೬೨
೬.	ರವೀಂದ್ರ ಪೂಜನ	೧೯೬೩
೭.	ವಿಶ್ವ ಮಾನವನೆಡೆಗೆ	೧೯೬೪

ಮಾಸ್ತಿ ಅಧ್ಯಯನ ಸೂಚಿ

❐ ❐

ಸಣ್ಣಕತೆಯ ಸ್ವರೂಪ

• ಗಿರಡ್ಡಿ ಗೋವಿಂದರಾಜ

ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಸಣ್ಣಕತೆ ಅತ್ಯಂತ ಪ್ರಾಚೀನವಾದದ್ದು. ಬಹುಶಃ ಕಾವ್ಯದ ಜೊತೆಗೆ ಅದೂ ಹುಟ್ಟಿರಬೇಕು. ಅಕ್ಷರವಿದ್ಯೆ ಇಲ್ಲದ ಜನಾಂಗಗಳಲ್ಲೂ ಕೂಡ ಜಾನಪದ ಸಾಹಿತ್ಯದ ಒಂದು ಪ್ರಕಾರವಾಗಿ ಅದು ಅಸ್ತಿತ್ವದಲ್ಲಿದೆ. ಶಿಷ್ಟಸಾಹಿತ್ಯದಲ್ಲೂ ಅದರ ರೂಪಗಳು ಅರೇಬಿಯನ್ ನೈಟ್ಸ್ ಕತೆಗಳಂತೆ, ಪಂಚತಂತ್ರ, ಕಥಾಸರಿತ್ಸಾಗರಗಳ ಕತೆಗಳಂತೆ ಸಾಕಷ್ಟು ಜನಪ್ರಿಯವಾಗಿವೆ. ಆದರೆ ಇಂದಿನ ಆಧುನಿಕ ಸಣ್ಣಕತೆ ಅವುಗಳಿಂದ ತೀರಾ ಭಿನ್ನವಾದದ್ದು. ಇಂದಿನ ಆಧುನಿಕ ರೂಪದಲ್ಲಿ ಅದು ಸಾಹಿತ್ಯ ಪ್ರಕಾರಗಳಲ್ಲೆಲ್ಲ ಅತ್ಯಂತ ಅರ್ವಾಚೀನವಾದದ್ದು. ಕಾದಂಬರಿ ಇಂಗ್ಲೀಷಿನಲ್ಲಿ ಹದಿನೇಳನೆ ಶತಮಾನದ ಕೊನೆಗೆ ಆರಂಭವಾಗಿ, ಹದಿನೆಂಟನೆ ಶತಮಾನದಲ್ಲಿ ಬೆಳೆದು, ಹತ್ತೊಂಬತ್ತನೆ ಶತಮಾನದಲ್ಲಿ ಪ್ರಬುದ್ಧವಾದ ಒಂದು ಹೊಸ ಸಾಹಿತ್ಯಪ್ರಕಾರವಾದರೆ, ಸಣ್ಣಕತೆ ಹತ್ತೊಂಬತ್ತನೆ ಶತಮಾನದ ತೀರ ಹೊಸ ಬೆಳವಣಿಗೆ. ನಮ್ಮ ಕಾಲಕ್ಕೆ ಅತ್ಯಂತ ಜನಪ್ರಿಯ ಸಾಹಿತ್ಯಪ್ರಕಾರವಾಗಿ ಸಣ್ಣಕತೆ ರೂಪಗೊಂಡಿದೆ.

ಹೊಸ ಸಾಹಿತ್ಯಪ್ರಕಾರಗಳಾದ್ದರಿಂದ ಕಾದಂಬರಿ ಮತ್ತು ಸಣ್ಣಕತೆಗಳೆರಡೂ ವಿಮರ್ಶಕರ ಅವಜ್ಞೆಗೆ ತುತ್ತಾಗುತ್ತ ಬಂದವು. ಹದಿನೆಂಟನೆ ಶತಮಾನದಲ್ಲಿ ಹೆನ್ರಿ ಫೀಲ್ಡಿಂಗ್, ಸ್ಯಾಮುಏಲ್ ರಿಚರ್ಡ್‌ಸನ್‌ರಂಥ ಮಹತ್ವದ ಕಾದಂಬರಿಕಾರರು ಬಂದರೂ ವಿಮರ್ಶಕರು ಅವರನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ವಿಲಿಯಂ ಥ್ಯಾಕರೆ, ಚಾರ್ಲ್ಸ್ ಡಿಕನ್ಸ್‌ರು ಜನಪ್ರಿಯತೆಯ ತುತ್ತತುದಿ ಮುಟ್ಟಿದ ಹತ್ತೊಂಬತ್ತನೆ ಶತಮಾನದಲ್ಲೂ ಅವರಿಗೆ ವಿಮರ್ಶೆಯ ಮನ್ನಣೆ ದೊರೆಯಲಿಲ್ಲ. ಟಾಲ್‌ಸ್ಟಾಯ್, ದೊಸ್ತೊವ್‌ಸ್ಕಿ ಮೊದಲಾದ ಪ್ರಸಿದ್ಧ ರಷ್ಯನ್ ಕಾದಂಬರಿಕಾರರ ಕೃತಿಗಳು ಪಾಶ್ಚಿಮಾತ್ಯ ಭಾಷೆಗಳಿಗೆ ಅನುವಾದವಾಗಿ ಬಂದಮೇಲೆ ಕಾದಂಬರಿ ಒಂದು ಗಂಭೀರವಾದ ಸಾಹಿತ್ಯಪ್ರಕಾರವಾಗಿ ಸ್ವೀಕೃತವಾಯಿತು.

ಆದರೂ ಅದಕ್ಕೆ ತನ್ನದೇ ಆದ ಸಾಹಿತ್ಯಮೀಮಾಂಸೆ ಹುಟ್ಟಿಕೊಳ್ಳಲು ಬಹಳ ತಡವಾಯಿತು. ಆರಂಭದಲ್ಲಿ ಕಾದಂಬರಿಯನ್ನು ನಾಟಕದ ಮಾನದಂಡಗಳಿಂದಲೇ ವಿಮರ್ಶಿಸುವ ಪರಿಪಾಠವಿತ್ತು. ನವ್ಯವಿಮರ್ಶೆ ಬಂದಾಗ ಅದು ಸಾಹಿತ್ಯಪ್ರಕಾರಗಳಲ್ಲಿಯ ವಿಶಿಷ್ಟ ಜೀವನ ಪ್ರಭೇದಗಳನ್ನು ಅಷ್ಟು ಮುಖ್ಯವೆಂದು ಪರಿಗಣಿಸಲಿಲ್ಲವಾದ್ದರಿಂದ ಕಾದಂಬರಿಯ ಪ್ರಕಾರ ವಿಶಿಷ್ಟ ಸಾಹಿತ್ಯಮೀಮಾಂಸೆಯನ್ನು ರೂಪಿಸಿಕೊಳ್ಳುವ ಪ್ರಸಂಗವೇ ಬರಲಿಲ್ಲ. ನಂತರ ಹೆನ್ರಿ ಜೇಮ್ಸ್ ನಿರೂಪಣೆಯ ದೃಷ್ಟಿಕೋನದಲ್ಲಿ ಕಾದಂಬರಿಯ ವಿಶಿಷ್ಟತೆಯನ್ನು ಗುರುತಿಸಿದ ಮೇಲೆ, ಅದರ ಆಧಾರದಿಂದ ಪರ್ಸಿ ಲಬಕ್ ಹಾಗೂ ವೇಯ್ನ್ ಸಿ. ಬೂತ ಕಾದಂಬರಿಯ ಪ್ರಕಾರದ ವಿಶಿಷ್ಟ ಸಾಹಿತ್ಯಮೀಮಾಂಸೆಯನ್ನು ಬೆಳೆಸಿದರು.

ಆದರೆ ಕಾದಂಬರಿಗಿಂತಲೂ ಈಚಿನ ಸಾಹಿತ್ಯ ಪ್ರಕಾರವಾದ ಸಣ್ಣಕತೆಗೆ ಆ ಭಾಗ್ಯ ಇರಲಿಲ್ಲ. ಡಿಕನ್ಸ, ಸ್ಟೀವನ್‌ಸನ್, ಆ್ಯಂಟನಿ ಟ್ರೊಲಪ್ ಮೊದಲಾದ ಹತ್ತೊಂಬತ್ತನೆ ಶತಮಾನದ ಕಾದಂಬರಿಕಾರರು ಸಣ್ಣಕತೆಗಳನ್ನು ಬರೆದರಾದರೂ ವಿಮರ್ಶಕರು ಅವುಗಳಿಗೆ ಅಷ್ಟಾಗಿ ಲಕ್ಷ್ಯ ಕೊಡಲಿಲ್ಲ. ಟಾಲಸ್ಟಾಯ್‌ನ ಕಾದಂಬರಿಗಳಿಗೆ ಸಿಕ್ಕ ಗೌರವ ಅವನ ಸಣ್ಣಕತೆಗಳಿಗೆ ಸಿಗಲಿಲ್ಲ. ರಷ್ಯದ ಆ್ಯಂಟನ್ ಚೆಕೋವ್, ಫ್ರಾನ್ಸಿನ ಗಾಯದ ಮೊಪಾಸಾ ಮೊದಲಾದವರು ಸಣ್ಣಕತೆಗೆ ಗೌರವ ತಂದರೂ ಅದು ಪರದೇಸಿಯಾಗಿಯೇ ಉಳಿಯಿತು. ಅಮೇರಿಕದಲ್ಲಿ ಎಡ್ಗರ್ ಆ್ಯಲನ್ ಪೊ. ನಾಥಾನಿಯನ್ ಹಾಥಾರ್ನ, ಓ ಹೆನ್ರಿ ಮೊದಲಾದವರು ವಿಪುಲ ಸಂಖ್ಯೆಯಲ್ಲಿ ಸಣ್ಣಕತೆಗಳನ್ನು ಬರೆದು ಪ್ರಸಿದ್ಧಿಗೆ ಬಂದರು. ಇಂಗ್ಲಂಡಿನಲ್ಲಿಯೂ ಆರ್ನಲ್ಡ್ ಜೆನೆಟ್,, ಸಾಮರ್ಸೆಟ್ ಮಾಮ್, ಎಚ್. ಜಿ. ವೇಲ್ಸ್, ತಾಮಸ್ ಹಾರ್ಡಿ ಮೊದಲಾದವರು ಉತ್ತಮ ಮಟ್ಟದ ಅನೇಕ ಕತೆಗಳನ್ನು ಬರೆದರು. ಆದರೆ ಇಂಗ್ಲಿಷ್ ವಿಮರ್ಶೆ ಅವರ ಕಾದಂಬರಿಗಳಿಗೆ ಮಾತ್ರ ಸೀಮಿತವಾಗಿದೆಯೇ ಹೊರತು ಈ ಲೇಖಕರನ್ನು ಸಣ್ಣತಕೆಗಾರರೆಂದು ಗುರುತಿಸುವದಿಲ್ಲ. ಇಂಗ್ಲಿಷ್ ವಿಮರ್ಶೆ ಸಾಹಿತ್ಯದ ಯಾವ ಇತಿಹಾಸದಲ್ಲೂ ಸಣ್ಣಕತೆಗೆ ಪ್ರತ್ಯೇಕ ಸ್ಥಾನ ಸಿಕ್ಕಿಲ್ಲ.

ಹೀಗಾಗಿ ಸಣ್ಣಕತೆ ಇಂದಿಗೂ ಸಾಹಿತ್ಯವಿಮರ್ಶೆಯಲ್ಲಿ ನಿರ್ಲಕ್ಷಿತ ಸಾಹಿತ್ಯ ಪ್ರಕಾರವಾಗಿಯೇ ಉಳಿದಿದೆ. ಆದರೆ ನಿಯತಕಾಲಿಕಗಳಿಂದಾಗಿ ಅದರ ಬೇಡಿಕೆ ಏರುತ್ತಲೇ ನಡೆದಿದೆ. ಅದರಿಂದಾಗಿಯೇ ಏನೆನೂ, ಅದೊಂದು ವ್ಯಾಪಾರಿ ಸರಕಿನಂತೆ ಪರಿಗಣಿತವಾಗಿದೆ. ಓದುಗರಿಗೆ ಬೇಕಾದ ಇಂಥ ಕತೆಗಳನ್ನು ಬರೆಯುವದು ಹೇಗೆ, ಅವುಗಳನ್ನು ಪತ್ರಿಕೆಗಳಿಗೆ ಮಾರುವದು ಹೇಗೆ–ಇತ್ಯಾದಿಗಳನ್ನು ವಿವರಿಸುವ ಪುಸ್ತಕಗಳು ಪೇಟೆಗೆ ಬಂದಿವೆ. ಆದರೆ ಅದನ್ನೊಂದು ವಿಶಿಷ್ಟ ಸಾಹಿತ್ಯಪ್ರಕಾರಗಳಿಗಿಂತ ಅದರಲ್ಲೂ ವಿಶೇಷವಾಗಿ ಕಾದಂಬರಿಗಿಂತ– ಹೇಗೆ ಭಿನ್ನ ಎಂದು ಗುರುತಿಸುವ, ಅದರ ವಿಶಿಷ್ಟ ಸಾಧ್ಯತೆಗಳನ್ನು ಎತ್ತಿತೋರಿಸುವ ಪ್ರತ್ಯೇಕ ಸಾಹಿತ್ಯ ಮೀಮಾಂಸೆ ಬೆಳೆದಿಲ್ಲ. ಸದ್ಯಕ್ಕೆ ಕಾದಂಬರಿ ವಿಮರ್ಶೆಗೆ ಬಳಸುವ ಮಾನದಂಡಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಸಣ್ಣಕತೆಯ ವಿಮರ್ಶೆಗೂ ಬಳಸಲಾಗುತ್ತಿದೆ. ಅನೇಕ ಸಲ, ನವ್ಯವಿಮರ್ಶೆ ಬಳಕೆಗೆ ತಂದ ಕಾವ್ಯವಿಮರ್ಶೆಯ ಮಾನದಂಡಗಳೂ ಕೆಲಸಮಾಡುತ್ತಿವೆ.

ಸಣ್ಣಕತೆ ಮತ್ತು ಕಾದಂಬರಿಗಳ ನಡುವೆ ಅನೇಕ ಸಾಮ್ಯಗಳಿವೆ ಎಂಬುದು ಮೇಲೆಯೇ ಕಾಣುತ್ತದೆ. ಕಥೆ, ವಸ್ತು, ಪಾತ್ರಗಳು, ಸಂಭಾಷಣೆ, ಹಿನ್ನೆಲೆ, ನಿರೂಪಣೆಯ ದೃಷ್ಟಿಕೋನ, ಜೀವನದೃಷ್ಟಿ ನಾಟ್ಯೀಕರಣ ಇತ್ಯಾದಿ ಮೂಲಘಟಕಗಳು ಎರಡರಲ್ಲೂ ಇವೆ. ಆದರೂ ಅವೆರಡೂ ಸಾಹಿತ್ಯಪ್ರಕಾರಗಳು ಒಂದೇ ಅಲ್ಲ ಎನ್ನುವದೂ ಸ್ಪಷ್ಟವಿದೆ. ಸಣ್ಣಕತೆ ಕಾದಂಬರಿಯ ಸಂಕ್ಷಿಪ್ತರೂಪ ಅಲ್ಲವೆಂದು ನೇತ್ಯಾತ್ಮಕವಾಗಿ ಹೇಳುವದು ಸುಲಭ. ಆದರೆ ಅದು ಕಾದುಂಬರಿಯಿಂದ ಮೂಲಭೂತವಾಗಿ ಎಲ್ಲಿ ಮತ್ತು ಹೇಗೆ ಭಿನ್ನವಾಗುತ್ತದೆಂದು ಹೇಳುವದು ಕಷ್ಟ. ಅಂತೆಯೇ ಮಾಸ್ತಿಯವರ "ಸುಬ್ಬಣ್ಣ"ದಂಥ ಒಂದು ಕೃತಿ ಸಣ್ಣಕತೆಯೋ ಕಾದಂಬರಿಯೊ ಎಂಬ ಪ್ರಶ್ನೆ ನಮ್ಮ ವಿಮರ್ಶೆಯಲ್ಲಿ ಮತ್ತೆ ಮತ್ತೆ ಬಂದಿದೆ. ಒಂದು ಕೃತಿ ಯಾವ ಸಾಹಿತ್ಯಪ್ರಕಾರಕ್ಕೆ ಸೇರಿದರೇನು, ಅದು ಒಂದು ಸಾಹಿತ್ಯ ಕೃತಿಯಾಗಿ ಯಶಸ್ವಿಯಾದರೆ ಸಾಕು ಎಂದು ಈ ಪ್ರಶ್ನೆಯನ್ನು ತಳ್ಳಿಹಾಕುವಂತಿಲ್ಲ. ಯಾಕೆಂದರೆ ಪ್ರತಿಯೊಂದು ಸಾಹಿತ್ಯಪ್ರಕಾರವೂ ಗ್ರಹಿಸುವ

ಜೀವನದ ಸ್ವರೂಪ ಭಿನ್ನವಾಗಿರುತ್ತದೆ. ಮತ್ತು ಅದು ಜೀವನವನ್ನು ಗ್ರಹಿಸುವ ರೀತಿ ಕೂಡ ಅದಕ್ಕೇ ವಿಶಿಷ್ಟವಾದ ಸ್ಥಾಪಿತ ರೂಢಿ (conventions)ಗಳಿರುತ್ತವೆ. ಪ್ರತಿಯೊಂದು ಸಾಹಿತ್ಯಕೃತಿಯೂ ತಾನು ಯಾವ ಸಾಹಿತ್ಯಪ್ರಕಾರಕ್ಕೆ ಸೇರಿದ್ದೆಂದು ಗುರುತಿಸಿಕೊಳ್ಳುವ ಮೂಲಕವೇ ಓದುಗರು ಆ ರೂಢಿಗಳನ್ನು ಸಹಜವೆಂದು ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತದೆ. ನಾಟಕದಲ್ಲಿ ಸಹಜವೆನ್ನಿಸುವ ಒಂದು ಸಂಗತಿ ಕಾದಂಬರಿಯಲ್ಲಿ ಅಸಹಜವೆನಿಸಬಹುದು. ಆದ್ದರಿಂದಲೇ ಸಣ್ಣಕತೆ ಕಾದಂಬರಿಗಿಂತ ಎಲ್ಲಿ ಭಿನ್ನ ಎಂಬ ಪ್ರಶ್ನೆ ಮುಖ್ಯವಾಗುತ್ತದೆ.

ಪ್ರಸಿದ್ಧ ಕತೆಗಾರ ಫ್ರ್ಯಾಂಕ್ ಓ'ಕಾನರ್ (೧೯೬೫:೨೮) ಸಣ್ಣಕತೆ ಮತ್ತು ಕಾದಂಬರಿಗಳ ನಡುವಿನ ಅಂತರ ಉದ್ದದ್ದಲ್ಲ ಎಂದು ಸ್ಪಷ್ಟಪಡಿಸುತ್ತ, ಸಣ್ಣಕತೆಯನ್ನು ಶುದ್ಧ ಕಥನಕಲೆ ಎಂದೂ, ಕಾದಂಬರಿಯನ್ನು ಆನ್ವಯಿಕ ಕಥನಕಲೆ ಎಂದೂ ಕರೆಯುತ್ತಾನೆ. ಅವನ ಪ್ರಕಾರ ಕಾದಂಬರಿ ಒಂದು ಮಹಾ ಜನಪ್ರಿಯ ಕಲೆ, ಮತ್ತು ಜನಪ್ರಿಯ ಕಲೆಯ ಅನೇಕ ಅಶುದ್ಧ ಅಂಶಗಳು ಅದರಲ್ಲಿ ಸೇರಿಕೊಂಡಿವೆ. ಆದರೆ ಸಣ್ಣಕತೆ ಹೀಗೆ ಸುಲಭವಾಗಿ ಒಪ್ಪಂದ ಮಾಡಿಕೊಳ್ಳಲು ಬಾರದಂಥದು.... ಅದರ ಸಂಕ್ಷಿಪ್ತತೆಯೇ ಅದಕ್ಕೆ ಆ ಗುಣವನ್ನು ಕೊಡುತ್ತದೆ.

ಅತ್ಯಂತ ಮುಖ್ಯವಾದ ಮಾತೆಂದರೆ, ಕಾದಂಬರಿ ಒಂದು ಮೇಜರ್ ಸಾಹಿತ್ಯಪ್ರಕಾರವಾದರೆ, ಸಣ್ಣಕತೆ ಒಂದು ಮೈನರ್ ಸಾಹಿತ್ಯಪ್ರಕಾರ. ಮೂಲಭೂತವಾಗಿಯೇ ಕಾದಂಬರಿಯು ಒಳಗೊಳ್ಳುವ ಜೀವನದ ಹರವು, ಗುಣ, ಸಂಕೀರ್ಣತೆ, ವಿವರ, ಸೂಕ್ಷ್ಮಗಳನ್ನು ಸಣ್ಣಕತೆ ಮೈನರ್ ಸಾಹಿತ್ಯಪ್ರಕಾರವಾಗಿ ಒಳಗೊಳ್ಳುವದು ಸಾಧ್ಯವಿಲ್ಲ. ಕಾದಂಬರಿಗೆ ಇಡೀ ಜೀವನ ಅಥವಾ ಸಮಾಜವೇ ಪರಾಮರ್ಶೆಯ ಚೌಕಟ್ಟಾಗಿದೆ. ಅಲ್ಲಿ ಚಿತ್ರಿತವಾಗುವ ಜೀವನ, ಕಾಲಾವಧಿ, ಸಮಾಜಗಳನ್ನು ಅವುಗಳ ವಿಶಾಲ ಅರ್ಥದಲ್ಲಿ ನೋಡಬಹುದು. ಅಂತೆಯೇ ಕಾದಂಬರಿ ಒಂದು ಜನಾಂಗದ, ಇಲ್ಲವೆ ಒಂದು ಸಮಾಜದ, ಇಲ್ಲವೆ ಒಂದು ಕಾಲಾವಧಿಯ ಕಥೆಯಾಗಬಹುದು. ಅದರಿಂದಾಗಿ ಕಾದಂಬರಿಯ ಲೋಕದರ್ಶನವೂ ವಿಶಾಲವಾಗುತ್ತದೆ, ಮಹತ್ವದ್ದಾಗುತ್ತದೆ. ಆದರೆ ಸಣ್ಣಕತೆಗೆ ಈ ಹರವು ಇಲ್ಲ. ಅದು ಮುಖ್ಯವಾಗಿ ವೈಯಕ್ತಿಕ ಕಲೆ. ಸ್ವಭಾವತ: ಅದು ರೊಮ್ಯಾಂಟಿಕ್ ಜಾತಿಯದು. ಅಲ್ಲಿ ಜೀವನ, ಸಮಾಜ, ಜನಾಂಗಗಳು ಹಿನ್ನೆಲೆಯಾಗಿ ಮಾತ್ರ ಬರಲು ಸಾಧ್ಯ. ಈ ಹಿನ್ನೆಲೆಯ ಆಸರೆಯಲ್ಲಿ ಒಂದೆರಡು ವ್ಯಕ್ತಿಗಳ ಬದುಕಿನ ಒಂದು ಅನುಭವ, ಅನಿಸಿಕೆ, ಬದಲಾವಣೆ, ಮಿಂಚು, ಒಳನೋಟಗಳನ್ನು ಅದು ತೀಕ್ಷ್ಣ ರೂಪದಲ್ಲಿ ಕೊಡಬಲ್ಲದು. ಅದರಲ್ಲಿ ಹೊಳೆಯುವ ಅರ್ಥ ಸಂಪೂರ್ಣ ಅಥವಾ ಶಾಶ್ವತ ಅರ್ಥವಾಗಿರದೆ ಸಂಚಾರೀ ಜಾತಿಗೆ ಸೇರಿದ ಆಂಶಿಕ ಅರ್ಥವಾಗಿರುತ್ತದೆ. ಜೀವನದ ಒಂದು ಸಾಧ್ಯತೆಯಾಗಿರುತ್ತದೆ. ಕಾದಂಬರಿಯಲ್ಲಿ ಇಂಥ ಹಲವು ಅರ್ಥಗಳು ಒಂದಕ್ಕೊಂದು ಘರ್ಷಿಸುತ್ತ ಸಮತೋಲುಗೊಳಿಸುತ್ತ, ಪುಷ್ಟೀಕರಿಸುತ್ತ ಒಂದು ಅರ್ಥಸಂಕೀರ್ಣವನ್ನು ನಿರ್ಮಿಸುತ್ತವೆ. ಕಾದಂಬರಿ ಒಂದೆರಡೇ ಪಾತ್ರಗಳನ್ನು ಕುರಿತದ್ದಾದಾಗಲೂ ಈ ಮಾತು ನಿಜ. ಅಂತೆಯೇ ಅದರ ಜೀವನದರ್ಶನ ಸಮಗ್ರವಾಗಿರುತ್ತದೆ. ಆದರೆ ಸಣ್ಣಕತೆಯು ಪ್ರಕಟಿಸುವ ದರ್ಶನ ಬಹಳ ಸೀಮಿತವಾಗಿರುತ್ತದೆ.

ಈ ಎರಡೂ ಸಾಹಿತ್ಯಪ್ರಕಾರಗಳ ನಡುವಿನ ವ್ಯತ್ಯಾಸವನ್ನು ಮಾರ್ಕ ಶೋರರ್ (೧೯೫೦) ಇನ್ನೊಂದು ಸೂಕ್ಷ್ಮ ಸಂಗತಿಯ ಮೂಲಕ ವಿವರಿಸುತ್ತಾನೆ. ಅವನ ಪ್ರಕಾರ ಸಣ್ಣಕತೆ ನೈತಿಕ ಅರಿವಿನಲ್ಲಿಯ(moral awareness) ಬದಲಾವಣೆಯನ್ನು ತೋರಿಸಿದರೆ, ಕಾದಂಬರಿ ನೈತಿಕ ಬದುಕಿನಲ್ಲಿಯ (moral being) ಬದಲಾವಣೆಯನ್ನು ತೋರಿಸುತ್ತದೆ. ನೈತಿಕ ಅರಿವಿನ ಮೂಲಕವೇ ನೈತಿಕ ಬೆಳವಣಿಗೆ ಸಾಧಿಸಬೇಕು. ಆದರೆ ಅರಿವೇ ಬೆಳವಣಿಗೆಯಲ್ಲ. ಕಾದಂಬರಿ ನೈತಿಕ ಬೆಳವಣಿಗೆಯನ್ನು ಹಂತ ಹಂತವಾಗಿ, ನಿಧಾನವಾಗಿ ಚಿತ್ರಿಸುತ್ತದೆ. ಸಣ್ಣಕತೆಯಲ್ಲಿ ಈ ಬೆಳವಣಿಗೆಯ ಪ್ರಕ್ರಿಯೆಯನ್ನು ಚಿತ್ರಿಸಲು ಅವಕಾಶವಿಲ್ಲ. ಅದು ಬಹಳ ವಿಶಾಲವಾದ ಭಿತ್ತಿಯನ್ನು ಅಪೇಕ್ಷಿಸುತ್ತದೆ. ಅದು ಕಾದಂಬರಿಗೆ ಮಾತ್ರ ಸಾಧ್ಯ. ಸಣ್ಣಕತೆ ಅರಿವಿನಲ್ಲಾಗುವ ಬದಲಾವಣೆಯನ್ನು ಕೇವಲ ಮಿಂಚಿನಂತೆ ಸೂಚಿಸಿಬಿಡುತ್ತದೆ. ಶೋರರ್ ಈ ದೃಷ್ಟಿಯಿಂದ ಸಣ್ಣಕತೆಯನ್ನು ನೈತಿಕ ಸಾಕ್ಷಾತ್ಕಾರದ ಕಲೆ (art of moral revelution) ಎಂದೂ, ಕಾದಂಬರಿಯನ್ನು ನೈತಿಕ ವಿಕಾಸದ ಕಲೆ (art of moral evolution) ಎಂದೂ, ಕರೆಯುತ್ತಾನೆ (೧೯೫೦:೪೩೩). ಎರಡರಲ್ಲೂ ಬದಲಾವಣೆ ಇದೆ. ಕತೆಯೇ ಆಗಲಿ, ಕಾದಂಬರಿಯೇ ಆಗಲಿ–ತಾನು ಆರಂಭಿಸಿದ ನೆಲೆಯಲ್ಲಿಯೇ ಕೊನೆಗೊಳ್ಳುವದಿಲ್ಲ. ಆದರೆ ಸಣ್ಣಕತೆಯಲ್ಲಿ ಈ ಬದಲಾವಣೆ ಮಿಂಚಿನಂತೆ ನಡೆದುಹೋದರೆ, ಕಾದಂಬರಿಯಲ್ಲಿ ವಿರಾಮವಾಗಿ ಬೆಳೆಯುತ್ತದೆ. ಈ ಎರಡೂ ಸಾಹಿತ್ಯಪ್ರಕಾರಗಳಲ್ಲಿಯ ರಾಚನಿಕ ವ್ಯತ್ಯಾಸಗಳು ಈ ಅಂತರದ ಪರಿಣಾಮಗಳಾಗಿವೆ. ನೈತಿಕ ವಿಕಾಸದ ಚಿತ್ರಣಕ್ಕೆ ಸಂಕೀರ್ಣವಾದ ಸಾಮಾಜಿಕ, ಮಾನಸಿಕ ವ್ಯವಸ್ಥೆ ಬೇಕಾಗುತ್ತದೆ. ಆ ವಿಕಾಸವನ್ನು ಅಧಿಕೃತಗೊಳಿಸಲು ಪರೀಕ್ಷಿಸಲು ಸಂಕೀರ್ಣ ಮನುಷ್ಯ ಸಂಬಂಧಗಳು ಬೇಕಾಗುತ್ತವೆ. ಮುಖ್ಯ ಕಥಾವಸ್ತುವಿಗೆ ಸಮಾಂತರವಾಗಿ ಇಲ್ಲವೆ ವೈದೃಶ್ಯವಾಗಿ ಉಪಕಥಾವಸ್ತುಗಳು ಬೇಕಾಗುತ್ತವೆ. ಸಣ್ಣಕತೆ ಈ ಗೊಡವೆಗೆ ಹೋಗದೆ ನೈತಿಕ ಸಾಕ್ಷಾತ್ಕಾರವನ್ನು ಒಂದು ಅನಿಸಿಕೆಯಂತೆ ತಟ್ಟನೆ ಮಿಂಚಿಸಿ ಬಿಡುತ್ತದೆ. ಬೆಳವಣಿಗೆಯ ಅಥವಾ ವಿಕಾಸದ ಪ್ರಕ್ರಿಯೆಯನ್ನು ಊಹೆಗೆ ಬಿಡುತ್ತದೆ. ಅದರ ಶಕ್ತಿ ಇರುವದು ಈ ಅನಿಸಿಕೆಯ ತೀವ್ರತೆಯಲ್ಲಿ. ಹೀಗೆ ಸಂಕ್ಷಿಪ್ತತೆಯೇ ಸಣ್ಣಕತೆಯ ಜೀವನ ದರ್ಶನದ ಸ್ವರೂಪವನ್ನು ನಿರ್ಧರಿಸುತ್ತದೆ.

ಸಣ್ಣಕತೆ ತನ್ನ ಸ್ವರೂಪದಲ್ಲೇ ಜನಾಂಗದಿಂದ, ಜನಸಮೂಹದಿಂದ ದೂರವಾದದ್ದು, ಮತ್ತು ಅದರ ಪರಾಮರ್ಶೆಯ ಚೌಕಟ್ಟು ಸಮಗ್ರ ಮಾನವಜೀವನವಾಗಲಾರದು ಎನ್ನುವ ಓ' ಕಾನರ್ (೧೯೬೫:೨೧) ಸಣ್ಣಕತೆಯನ್ನು ಕುರಿತು ಬರೆದ ತನ್ನ ಪುಸ್ತಕಕ್ಕೆ 'ಒಂಟಿದನಿ' (The Lonely Voice) ಎಂದು ಸಾಂಕೇತಿಕ ಹೆಸರಿಟ್ಟಿದ್ದಾನೆ. ಅವನ ಪ್ರಕಾರ ಸಣ್ಣಕತೆಗೆ ನಿಜವಾದ ಅರ್ಥದಲ್ಲಿ 'ನಾಯಕನಿಲ್ಲ. ಅವನು ಧೀರೋದಾತ್ತನೂ ಅಲ್ಲ, ಧೀರಲಲಿತನೂ ಅಲ್ಲ, ಧೀರೋದ್ಧತನೂ ಅಲ್ಲ. ಸಣ್ಣಕತೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯ ಪಾತ್ರಗಳು ಮುಳುಗಿಹೋದ ಜನರ ಗುಂಪಿಗೆ (submerged population group) ಸೇರಿದವರು. ಲೇಖಕನಿಂದ ಲೇಖಕನಿಗೆ, ಪೀಳಿಗೆಯಿಂದ ಪೀಳಿಗೆಗೆ ಇವರ ಸ್ವಭಾವ ಬದಲಾಗುತ್ತಹೋದರೂ ಅವರು ಮೂಲತಃ ಮುಳುಗಿಹೋದವರೇ ಇರುತ್ತಾರೆ. ಇವರು ಸಮಾಜದಿಂದ ಬಹಿಷ್ಕೃತರಾದವರು. ಹಾಗಾಗಿ ಸಮಾಜದ ಹೊರ ಅಂಚಿನಲ್ಲಿಯೇ ಸುಳಿದಾಡುವವರು. ಬರ್ನಾರ್ಡ್ ಬರ್ಗೊಂಜಿ

(೧೯೭೦) ಎಂಬ ವಿಮರ್ಶಕ ಓ' ಕಾನರ್‌ನ ವಾದವನ್ನು ಬೆಳೆಸುತ್ತ, ಸಣ್ಣಕತೆಯ ಪಾತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಶರು ಮತ್ತು ಅನಾಥರು ಎನ್ನುತ್ತಾನೆ (ಪು.೨೧೪). ಇದು ಬಹುಮಟ್ಟಿಗೆ ನಿಜ. ಆರೋಗ್ಯದ, ಜೀವನೋತ್ಸಾಹದ ಬದುಕನ್ನು ಗೆಲ್ಲುವ ಛಲದ ಪಾತ್ರಗಳು ಸಣ್ಣಕತೆಯಲ್ಲಿ ಅಪರೂಪ. ಬರ್ಗೊಂಜಿ ಹೇಳುವಂತೆ ಮಹತ್ವದ ಸಣ್ಣಕತೆಗಳೆಲ್ಲ ಪಾಶವೀ ಪರಿಸರದ ಹಿಡಿತದಲ್ಲಿ ಸಿಕ್ಕು ಸೋತ ಮಾನವೀಯ ಆಶೋತ್ತರಗಳ ಕಲಾತ್ಮಕ ಚಿತ್ರಣಗಳಾಗಿವೆ (೧೯೭೦:೨೧೪).

ಸಾಹಿತ್ಯಕ್ಕೆ ಸೋಲು ಹೊಸ ವಸ್ತುವೇನೂ ಅಲ್ಲ. ದೈವ ಸಮಾಜ ಅಥವಾ ತನ್ನೊಳಗಿನದೇ ಇನ್ನೊಂದು ಶಕ್ತಿಯ ವಿರುದ್ಧ ಹೋರಾಡಿ ಸೋಲುವ ಮನುಷ್ಯನ ಅವಸ್ಥೆಯನ್ನು ಸಾಹಿತ್ಯ ಚಿತ್ರಿಸುತ್ತಲೇ ಬಂದಿದೆ. ಗ್ರೀಕರ ದುರಂತನಾಟಕಗಳ ಮುಖ್ಯ ವಸ್ತುವೇ ಇದಲ್ಲವೇ? ಆದರೆ ದುರಂತ ನಾಟಕಗಳಲ್ಲಿಯ ಮಾನವೀಯ ಸೋಲಿಗೂ, ಸಣ್ಣಕತೆ ಚಿತ್ರಿಸುವ ಮಾನವೀಯ ಸೋಲಿಗೂ ಮೂಲಭೂತವಾದ ವ್ಯತ್ಯಾಸವಿದೆ. ದುರಂತ ನಾಟಕಗಳಲ್ಲಿ ಸೋಲಿನ ಮುಂಚೆ ಹೋರಾಟವಿದೆ. ಈ ಹೋರಾಟ ಅಸಮಬಲಗಳ ನಡುವೆ ನಡೆಯುವಂಥದು. ಅದರಲ್ಲಿ ಮನುಷ್ಯ ಸೋಲುವದು ಅನಿವಾರ್ಯ. ಅದು ಗೊತ್ತಿದ್ದೂ ನಾಯಕ ಶರಣಾಗುವದಿಲ್ಲ. ತನ್ನೆಲ್ಲ ಸಾಮರ್ಥ್ಯವನ್ನು ಪಣಕ್ಕೊಡ್ಡಿ ಹೋರಾಡುತ್ತಾನೆ. ಅಂತೆಯೇ ಅವನು ಕೊನೆಯಲ್ಲಿ ಸೋತರೂ ನೈತಿಕ ವಿಜಯ ಸಾಧಿಸುತ್ತಾನೆ. ಈ ದುರಂತದಲ್ಲಿ ಮನುಷ್ಯನ ಅದಮ್ಯ ಚೇತನ ತನ್ನ ಘನತೆಯನ್ನು ಮೆರೆಯುತ್ತದೆ. ಆದರೆ ಸಣ್ಣಕತೆಯ ನಾಯಕನಿಗೆ ಈ ದುರಂತದ ಘನತೆ ಇಲ್ಲ. ಅವನದು ಅವಮಾನಕರವಾದ ಸೋಲು, ಹೋರಾಟವಿಲ್ಲದ ಸೋಲು. ಹೆಚ್ಚಿನ ಕತೆಗಳು ನಾಯಕನನ್ನು ಅಸಹಾಯ ಸ್ಥಿತಿಯಲ್ಲಿ ನಿಲ್ಲಿಸಿ ಸಂದಿಗ್ಧತೆಯಲ್ಲಿ ಮುಕ್ತಾಯವಾಗುತ್ತವೆ.

ಇಂಥ ದುರ್ಬಲ ವ್ಯಕ್ತಿಗಳಾಗಲಿ, ಮನುಷ್ಯನ ಇಂಥ ಅಸಹಾಯ ಸ್ಥಿತಿಯಾಗಲಿ ಜೀವನದಲ್ಲಿ ಇಲ್ಲವೆಂದಲ್ಲ. ಆದರೆ ಬರ್ಗೊಂಜಿ ಹೇಳುವಂತೆ, ಇಂಥ ಬಲಿಪಶುಗಳನ್ನು ಕುರಿತು ಬರೆಯುವದಕ್ಕೂ ಜಗತ್ತು ಅಂಥವರಿಂದಲೇ ತುಂಬಿದೆಯೆಂದು ನೋಡುವದಕ್ಕೂ ಅರ್ಥಪೂರ್ಣವಾದ ವ್ಯತ್ಯಾಸವಿದೆ (೧೯೭೦:೨೧೪). ಸಣ್ಣಕತೆಗಾರ ಜೀವನದ ವಾಸ್ತವತೆಯನ್ನು ಚಿತ್ರಿಸುತ್ತಿರಬಹುದು. ಆದರೆ ಅವನು ಚಿತ್ರಿಸುತ್ತಿರುವದು ಜೀವನದ ಸಮಗ್ರ ವಾಸ್ತವತೆಯನ್ನಲ್ಲ ಕೇವಲ ಅದರ ಒಂದು ಮುಖವನ್ನು ಮಾತ್ರ ಈ ಮುಖವನ್ನು ಮಾತ್ರವೇ ಆರಿಸಿ ಚಿತ್ರಿಸುವದಕ್ಕೆ ಯಾವುದೇ ಒಬ್ಬ ಲೇಖಕ ವೈಯಕ್ತಿಕವಾಗಿ ಜವಾಬ್ದಾರನಲ್ಲ. ಜೀವನದ ಬಗ್ಗೆ ಸಣ್ಣಕತೆಯ ಸ್ವಭಾವದಲ್ಲೇ ಈ ಬಗೆಯ ಪೂರ್ವಗ್ರಹಿಕೆಗಳು ಅಡಗಿಕೊಂಡಿವೆ. ನಮ್ಮ ಇಡಿಯ ಜೀವನವೇ ಹೀಗೆ ರೋಗಗ್ರಸ್ತವಾಗಿ ಬಿಕ್ಕಟ್ಟಿನ ವಾತಾವರಣದಲ್ಲಿ ತೊಳಲಾಡುತ್ತಿದೆ ಎಂಬಂತೆ ಸಣ್ಣಕತೆ ಭಾವಿಸುತ್ತದೆ. ಇದು ಸಮಗ್ರ ಸತ್ಯವಲ್ಲ. ಆದರೆ ಸಣ್ಣಕತೆ ತನ್ನ ಸ್ವರೂಪದಲ್ಲಿಯ ವಿಶಿಷ್ಟ ಗುಣಧರ್ಮದಿಂದಾಗಿಯೇ ಜೀವನದ ವೈವಿಧ್ಯಪೂರ್ಣವಾದ ಅನುಭವಗಳಿಂದ ಸಾಣಿಸಿ ತೆಗೆದು ನೋವು, ಸೋಲು, ಅನಾಥತೆಯ ಅನುಭವಗಳನ್ನು ಮಾತ್ರ ಹಿಡಿದುಕೊಳ್ಳುತ್ತಿರುವಂತಿದೆ. ಅದರಿಂದಾಗಿಯೇ, ಸಣ್ಣಕತೆಯನ್ನು ತನ್ನ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಆಯ್ದುಕೊಳ್ಳುವ ಲೇಖಕ ಜೀವನವನ್ನು ಹಾಗೆ ನೋಡುವದು, ಅಂಥ ಅನುಭವಗಳನ್ನೇ ಆಯ್ಕೆ ಮಾಡಿಕೊಳ್ಳುವದು ಅನಿವಾರ್ಯವಾಗುತ್ತದೆ.

ಈ ವಿಷಯವನ್ನು ಇನ್ನೊಂದು ರೀತಿಯಲ್ಲಿ ನೋಡುವದಾದರೆ, ಜೀವನ ಹೀಗಿದೆ ಎಂದು ಭಾವಿಸುವ ಲೇಖಕನೇ ಸಣ್ಣಕತೆಯ ಮಾಧ್ಯಮವನ್ನು ಆಯ್ಕೆಮಾಡಿಕೊಳ್ಳುತ್ತಾನೆ ಎನ್ನಬಹುದು. ಈ ಅರ್ಥದಲ್ಲಿ ಸಾಹಿತ್ಯಪ್ರಕಾರವಾಗಿ ಸಣ್ಣಕತೆಯ ಆಯ್ಕೆ ಮತ್ತು ಒಂದು ವಿಶಿಷ್ಟ ಜೀವನದೃಷ್ಟಿಯ ಆಯ್ಕೆ ಒಂದೇ ಆಗುತ್ತದೆ.

ಸಣ್ಣಕತೆಯ ರಚನೆಯಲ್ಲಿ ವಿವರಗಳ ನಿರ್ದಿಷ್ಟತೆ, ಸಾಧನಗಳ ಮಿತವ್ಯಯ, ಪರಿಣಾಮದ ಏಕಾಗ್ರತೆಗಳ ಮಹತ್ವವನ್ನು ಬಹಳಷ್ಟು ಜನ ಎತ್ತಿಹೇಳಿದ್ದಾರೆ. ಸಣ್ಣಕತೆಯ ಅವಕಾಶ ಸೀಮಿತವಾಗಿರುವದರಿಂದ ಅದರಲ್ಲಿ ಶಬ್ದಗಳನ್ನು ದುಂದುಮಾಡುವಂತಿಲ್ಲ. ವಿವರಗಳೆಲ್ಲ ಕೇಂದ್ರ ಉದ್ದೇಶವನ್ನೇ ಪೋಷಿಸಬೇಕು. ಇದರಿಂದಾಗಿ ಸಣ್ಣಕತೆಗೆ (ಬಹುಶಃ ಭಾವಗೀತೆಯೊಂದನ್ನು ಬಿಟ್ಟು) ಉಳಿದ ಯಾವದೇ ಸಾಹಿತ್ಯ ಪ್ರಕಾರಕ್ಕೂ ಇಲ್ಲದಷ್ಟು ಕರ್ಷಣ, ಬಿಗಿ ಬರುತ್ತದೆ. ಅಂತೆಯೇ ಕಲಾತ್ಮಕತೆಯ ಪ್ರದರ್ಶನಕ್ಕೆ ಇದು ಹೇಳಿಮಾಡಿಸಿದ ಸಾಹಿತ್ಯಪ್ರಕಾರವೆನಿಸಿದೆ. ಕಾದಂಬರಿಕಾರ ತನ್ನ ವಸ್ತುವನ್ನು ಸಡಿಲಗೊಳಿಸಿ ನಿಧಾನವಾಗಿ ಬೆಳೆಸಬಹುದು. ಅಲ್ಲಲ್ಲಿ ಆರಾಮಾಗಿ ನಿಂತು ಹರಟೆಹೊಡೆಯಬಹುದು. ನಾಟಕಕಾರ ತನ್ನ ದುರಂತಕಥೆಗೆ ಸಮಾಂತರವಾಗಿ ಇನ್ನೊಂದು ಉಪಕಥೆಯನ್ನು ಸೇರಿಸಿ ವೈದಿಕನೋ ಪರಿಹಾರವನ್ನು ಒದಗಿಸಬಹುದು. ಇಬ್ಬರೂ ಆಗಾಗ ಸ್ವಲ್ಪ ಉಸಿರೆಳೆದುಕೊಂಡು ಸಿಳ್ಳು ಹೊಡೆಯಬಹುದು. ಆದರೆ ಸಣ್ಣಕತೆಯಲ್ಲಿ ಹಾಗೆ ಮಾಡಲು ಬರುವದಿಲ್ಲ. ಅದರಿಂದಾಗಿ ಸಣ್ಣಕತೆಯಲ್ಲಿ ಉದ್ದಕ್ಕೂ ಒಂದು ಬಗೆಯ ತೀವ್ರತೆ, ಕರ್ಷಣ ತುಂಬಿಕೊಂಡಿರುತ್ತದೆ. ಅದು ಸಣ್ಣಕತೆಯಲ್ಲಿಯ ಜೀವನದರ್ಶನ, ವಿಷಣ್ಣತೆಯನ್ನು ಇನ್ನಷ್ಟು ಕಟುವಾಗಿಸುತ್ತದೆ. ಅದೇ, ಕಾದಂಬರಿ ಈ ಬಗೆಯ ಕರ್ಷಣವನ್ನು ಸ್ವಲ್ಪವೂ ತಡೆದುಕೊಳ್ಳುವಂತಿಲ್ಲ. ಬಹುಬೇಗ ಅದು ಅಸಹನೀಯವಾಗಿ ಬಿಡುತ್ತದೆ. ಕಾದಂಬರಿ ಸ್ವಭಾವ ಸಹಜವಾಗಿಯೇ ಸಡಿಲವಾದ ರಚನೆಯನ್ನು ಅಪೇಕ್ಷಿಸುತ್ತದೆ.

ಸಣ್ಣಕತೆಯ 'ಪರಿಣಾಮದ ಏಕತೆ'ಯನ್ನೇ ತೆಗೆದುಕೊಳ್ಳಿ. ಎಡ್ಗರ್ ಆ್ಯಲಿನ್ ಪೋ ಆ ಬಗ್ಗೆ ಒತ್ತುಕೊಟ್ಟು ಹೇಳುತ್ತಾನೆ. ಸಣ್ಣಕತೆ ಬಿಟ್ಟಬಾಣದಂತೆ ತನ್ನೆಲ್ಲ ವಿವರಗಳ ಮೂಲಕ ಕೊನೆಯ ಪರಿಣಾಮದ ಕಡೆಗೆ ವೇಗವಾಗಿ ಓಡುತ್ತಿರುತ್ತದೆ. ಈ ಪರಿಣಾಮ ಏಕಮುಖಿಯಾದುದು. ಕೊನೆಯಲ್ಲಿ ವಿಷಣ್ಣ ಭಾವವನ್ನು ಉಳಿಸುವಂಥದು. ಅದರ ಏಕಾಗ್ರತೆಯಿಂದಾಗಿಯೇ ಈ ವಿಷಣ್ಣತೆಯ ಹೊರತಾಗಿ ಬದುಕಿನ ಹಲವು ಬೇರೆ ಸಾಧ್ಯತೆಗಳನ್ನು ಅದು ಒಟ್ಟಿಗೆ ಗ್ರಹಿಸುವದಿಲ್ಲ. ಎಂದರೆ ಜೀವನದರ್ಶನ ಏಕಮುಖಿಯಾಗುತ್ತದೆ.

ಸಣ್ಣಕತೆಯ ಮೂಲ ವಿನ್ಯಾಸ ಸಾಕಷ್ಟು ಪರಿಚಿತವಾದದ್ದು. ಮನುಷ್ಯಲೋಕದ ಮಾದರಿಗಳಾಗಿ ಎರಡು ಮೂರು ಪಾತ್ರಗಳ ಆಯ್ಕೆ, ಆ ಪಾತ್ರಗಳು ತೀರಾ ಉದಾತ್ತವೂ ಅಲ್ಲ, ತೀರಾ ಅಸಹ್ಯವೆನಿಸುವಷ್ಟು ಹೀನವೂ ಅಲ್ಲ. ಅವುಗಳನ್ನು ಆಯ್ದ ಕೆಲವೇ ವಿವರಗಳಲ್ಲಿ ವಿಶಿಷ್ಟೀಕರಿಸುವದು. ಅವುಗಳ ಬಲ ಮತ್ತು ಮುಖ್ಯವಾಗಿ ದೌರ್ಬಲ್ಯಗಳನ್ನು ಸಹಾನುಭೂತಿಪರ ತಿಳುವಳಿಕೆ ಮತ್ತು ನಿರ್ಲಿಪ್ತತೆಗಳ ಯುಕ್ತ ಸಮನ್ವಯದಿಂದ ಓದುಗರ ಗಮನಕ್ಕೆ ತರುವದು. ನಂತರ ಕಥೆ ಆಯ್ದ ಒಂದೆರಡು ಸನ್ನಿವೇಶಗಳ ಮೂಲಕ ದೃಢವಾಗಿ, ಮಿತವ್ಯಯದೊಂದಿಗೆ

ಸೋಲಿನ ಕ್ಷಣದತ್ತ ಚಲಿಸುತ್ತದೆ. ನಂತರ ಇಳಿಕೆ, ಅದರಲ್ಲಿ ಮತ್ತೆ ಕರುಣ–ವ್ಯಂಗ್ಯಗಳ ಯುಕ್ತ ಮಿಶ್ರಣ.

ಬರ್ಗೊಂಜಿ ಕೊಡುವ ಸಣ್ಣ ಕತೆಯ ಈ ಮೂಲ ವಿನ್ಯಾಸದ ವಿಶ್ಲೇಷಣೆ (೧೯೭೦:೨೧೫)ಯ ಜೊತೆಗೆ ಸಣ್ಣಕತೆಗಳ ವಿಶಿಷ್ಟವೆಂದು ಪ್ರಸಿದ್ಧಿ ಪಡೆದಿರುವ ಆಕಸ್ಮಿಕ ತಿರುವಿನ ಅಥವಾ ಅನಿರೀಕ್ಷಿತ ಮುಕ್ತಾಯವನ್ನು ನೋಡಬಹುದು. ಇಂಥ ಕತೆ ತನ್ನೆಲ್ಲ ವಿವರಗಳ ಮೂಲಕ ಒಂದು ನಿರ್ದಿಷ್ಟ ನಿರೀಕ್ಷೆಯನ್ನು ಬೆಳೆಸುತ್ತ ಹೋಗಿ, ಕೊನೆಗೆ ಆ ನಿರೀಕ್ಷೆಗೆ ಆಘಾತ ಕೊಟ್ಟು ನಿರೀಕ್ಷೆಗೆ ವಿರುದ್ಧವಾದ ಸ್ಥಿತಿಯಲ್ಲಿ ಮುಕ್ತಾಯವಾಗುತ್ತದೆ. ಕಲಾತ್ಮಕವಾಗಿ ಇದು ಕೇವಲ ಚಮತ್ಕಾರದ ಬರವಣಿಗೆಯಲ್ಲ. ಇಂಥ ಕತೆ ಒಂದು ನಿರೀಕ್ಷೆಯನ್ನು ಹುಟ್ಟಿಸುತ್ತ ಹೋಗುವಾಗಲೇ ಅದಕ್ಕೆ ವಿರುದ್ಧವಾದ ತಿರುವಿಗೆ ಅಗತ್ಯವಾದ ಅಂಶಗಳನ್ನು ಗುಪ್ತವಾಗಿ, ಸೂಕ್ಷ್ಮವಾಗಿ ಒಳಗೊಂಡಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಕತೆಯ ಧಾಟಿಯಲ್ಲೇ ಆ ಅಂಶಗಳು ಅಂತರ್ಗತವಾಗಿರುತ್ತವೆ. ಅಂತೆಯೇ ತಿರುವು ಆಶ್ಚರ್ಯಕರವೆನಿಸಿದರೂ ಅಸಹಜವೆನಿಸುವದಿಲ್ಲ. ಓ.ಹೆನ್ರಿಯ 'ಗಿಫ್ಟ್ ಆಫ್ ದಿ ಮೇಜಾಯ್', ಮೊಪಾಸಾನ 'ದಿ ನೆಕ್‌ಲೇಸ್' ಮೊದಲಾದ ಪ್ರಸಿದ್ಧ ಕತೆಗಳಲ್ಲಿ ಈ ಬಗೆಯ ಕುಶಲ ಬರವಣಿಗೆಯನ್ನು ಕಾಣಬಹುದು. ಇಂಥ ಕತೆ ತನ್ನ ನಿಜವಾದ ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಮುಚ್ಚಿಟ್ಟುಕೊಂಡು, ಕೊನೆಯ ತಿರುವಿನಲ್ಲಿ ಒಮ್ಮೆಲೆ ಸ್ಫೋಟಿಸಿಬಿಡುತ್ತದೆ. ಆದರೆ ಹೀಗೆ ಸ್ಫೋಟವಾಗುವ ಅರ್ಥ ಯಾವದು? ಬದುಕಿನ ಕ್ರೂರ ವ್ಯಂಗ್ಯ, ದೈವದ ಕಣ್ಣುಮುಚ್ಚಾಟ, ವ್ಯರ್ಥಹಾನಿ, ಸೋಲು. ಮೊದಲಿನಿಂದಲೇ ಸೋಲಿನ ನಿರೀಕ್ಷೆ ಹುಟ್ಟಿಸಿ, ಆಕಸ್ಮಿಕ ತಿರುವಿನಲ್ಲಿ ಅದನ್ನು ಹುಸಿಗೊಳಿಸಿ ಗೆಲ್ಲುವ ಕತೆಗಳು ಈ ತಂತ್ರದಲ್ಲಿ ಯಾಕೆ ಸಹಜವಾಗುವದಿಲ್ಲ–ಎಂಬುದು ಕುತೂಹಲದ ಪ್ರಶ್ನೆ. ಈ ದೃಷ್ಟಿಯಿಂದ ನೋಡಿದರೆ ಆಕಸ್ಮಿಕ ತಿರುವು ಸಣ್ಣಕತೆಗೆ ವಿಶಿಷ್ಟವಾಗಿರುವದು ಆಕಸ್ಮಿಕವೆಂದೇನೂ ಅನಿಸುವದಿಲ್ಲ. ಬದುಕಿನ ಕ್ರೂರ ವ್ಯಂಗ್ಯಗಳನ್ನು ಬಿಡಿಬಿಡಿಯಾಗಿ ಎತ್ತಿತೋರಿಸಲು ಸಣ್ಣಕತೆ ಅತ್ಯಂತ ಸೂಕ್ತವಾದ ಸಾಹಿತ್ಯಪ್ರಕಾರ.

ಈಚಿನ ಸಾಹಿತ್ಯವಿಮರ್ಶೆ 'ದೀಕ್ಷಾಕಥೆ' (Initiation Story) ಎಂಬ ಸಣ್ಣಕತೆಯ ಪ್ರಭೇದವೊಂದನ್ನು ಗುರುತಿಸಿದೆ. ಅನಿರೀಕ್ಷಿತ ತಿರುವಿನಂತೆ ಇದು ತಂತ್ರಕ್ಕೆ ಸಂಬಂಧಿಸಿದ್ದಲ್ಲ, ವಿಷಯಕ್ಕೆ ಸಂಬಂಧಿಸಿದ್ದು. ಆದರೆ ಇದೂ ಕೂಡ ಸಣ್ಣಕತೆಗೆ ವಿಶಿಷ್ಟವಾದದ್ದು. ಬಹಳಷ್ಟು ಸಂಖ್ಯೆಯಲ್ಲಿ ಈ ಬಗೆಯ ಕತೆಗಳು ಬಂದಿವೆ. ಈ ಪ್ರಭೇದವನ್ನು ಗುರುತಿಸಿ ಹೆಸರು ಕೊಟ್ಟ ಬ್ರೂಕ್ಸ ಮತ್ತು ವಾರನ್‌ರು (೧೯೫೯) ಈ ಕತೆಗಳ ವಸ್ತುವನ್ನು ಕೆಡುಕಿನ ಶೋಧ ಎಂದು ಅರ್ಥೈಸುತ್ತಾರೆ (ಪು.೭೫). ಎಳೆಯ ವಯಸ್ಸಿನ ಮಕ್ಕಳು ವಯಸ್ಸಿಗೆ ಬರುವ, ಮುಗ್ಧತೆಯನ್ನು ಕಳೆದುಕೊಳ್ಳುವ, ದೊಡ್ಡವರ ಜಗತ್ತನ್ನು ನೋಡಿ ಗೊಂದಲಗೊಳ್ಳುವ, ಸಮಾಜದೊಂದಿಗೆ ಒಪ್ಪಂದಕ್ಕೆ ಬರುವ, ತನ್ನನ್ನೇ ತಾನು ಅರಿತುಕೊಳ್ಳುವ ಸ್ಥಿತ್ಯಂತರಗಳನ್ನು ಈ ಕತೆಗಳು ಚಿತ್ರಿಸುತ್ತವೆ. ಹೆಮಿಂಗ ವೇ ಇಂಥ ಅನೇಕ ಕತೆಗಳನ್ನು ಬರೆದಿದ್ದಾನೆ. ಅವುಗಳಲ್ಲಿ 'ಕೊಲೆಗಾರರು' (The killers) ಹೆಚ್ಚು ಪ್ರಸಿದ್ಧವಾದ ಕತೆ. ಇಂಥ ಕತೆಗಳ ಹಿಂದೆ ಈಡನ್ ತೋಟದಲ್ಲಿ ಜ್ಞಾನವೃಕ್ಷದ ಹಣ್ಣು ತಿಂದು ಮುಗ್ಧತೆಯಿಂದ ಪತನಗೊಂಡ ಆದಿಮನುಷ್ಯನ ಮೂಲಪಾಪದ ಆರ್ಷರೂಪವನ್ನು ಗುರುತಿಸುವ ಲೆಸ್ಲಿ ಫೀಡ್ಲರ್ (೧೯೫೫:೪೧) ಇದು ಜ್ಞಾನದ ಮೂಲಕ ಪ್ರಬುದ್ಧತೆಗೆ

ಮುಗ್ಧತೆಯ ಪತನ ಎಂದು ವರ್ಣಿಸುತ್ತಾನೆ. ಕನ್ನಡದಲ್ಲಿ ಕೆ. ಸದಾಶಿವರ 'ರಾಮನ ಸವಾರಿ ಸಂತೆಗೆ ಹೋದದ್ದು', ಅನಂತಮೂರ್ತಿಯವರ 'ಘಟಶ್ರಾದ್ಧ', ಶಾಂತಿನಾಥ ದೇಸಾಯಿಯವರ 'ಚಂದೂ' ಇಂಥ ಕತೆಗಳು. ಇವೆಲ್ಲ ಲೋಕದ ಅರ್ಥವನ್ನು ತಿಳಿದುಕೊಂಡ ಸಂಭ್ರಮದಲ್ಲಿ ಕೊನೆಗೊಳ್ಳದೆ, ದಿಗ್ಭ್ರಮೆಯಲ್ಲಿ, ಏನನ್ನೊ ಅಮೂಲ್ಯವಾದದ್ದನ್ನು ಕಳೆದುಕೊಂಡ ನೋವಿನಲ್ಲಿ, ಬೆಡವಾದ ಇನ್ನೇನನ್ನೋ ಪಡೆದುಕೊಂಡ ವಿಷಾದದಲ್ಲಿ ಕೊನೆಗೊಳ್ಳುವದು ಕುತೂಹಲಕಾರಿಯಾಗಿದೆ. ಈ ಸಂಗತಿ ಕೂಡ ಸಣ್ಣಕತೆಯು ಆಯ್ದುಕೊಳ್ಳುವ ಅನುಭವಗಳ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿಯೂ ಕೇವಲ ಹೊಳೆಯುವಿಕೆ, ಪ್ರಜ್ಞೆಯಲ್ಲಿ ನಡೆಯುವ ಅಸ್ಪಷ್ಟ ಚಲನೆ ಮುಖ್ಯವಾಗುತ್ತದೆಯೇ ಹೊರತು ಇತ್ಯಾತ್ಮಕವಾದ ಬೆಳವಣಿಗೆಯ ಚಿತ್ರಣ ಇರುವದಿಲ್ಲ. ಒಟ್ಟಿನಲ್ಲಿ ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಸಣ್ಣಕತೆಯ ಒಂದು ಪ್ರಭೇದವಾಗಿ ದೀಕ್ಷಾಕಥೆ ಪತನದ ಅನುಭವಗಳಿಗೆ ಸೀಮಿತವಾಗಿರುವದು.

ಹೀಗೆ ಸಣ್ಣಕತೆ ಒಂದು ಸಾಹಿತ್ಯಪ್ರಕಾರವಾಗಿ ತನ್ನ ಸ್ವಭಾವ–ಸ್ವರೂಪಗಳಲ್ಲಿಯೇ ಅನೇಕ ಮಿತಿಗಳನ್ನು ಹಾಗೂ ಆರೋಗ್ಯಕರವಲ್ಲದ ಅಂಶಗಳನ್ನು ಹೊಂದಿರುವಂತಿದೆ. ಅದು ಕೊಡುವ ಜೀವನದರ್ಶನವು ಸೀಮಿತವೂ ಆರೋಗ್ಯಕರವಲ್ಲದ್ದೂ ಆಗಿದೆ. ಅದಕ್ಕಾಗಿಯೇ ಏನೊ, ಕೇವಲ ಸಣ್ಣಕತೆಗಳ ಮೂಲಕವೇ ಮೇಜರ್ ಎಂದು ಕರೆಯಬಹುದಾದ ಲೇಖಕರು ಜಾಗತಿಕ ಸಾಹಿತ್ಯದಲ್ಲಿಯೇ ಅಪರೂಪ. ಒಂದು ಸಾಹಿತ್ಯಪ್ರಕಾರವಾಗಿ ಸಣ್ಣಕತೆ ಮುಖ್ಯವಾಗಿ ಮೈನರ್ ಪ್ರತಿಭೆಗೆ ತನ್ನನ್ನು ತಾನು ಕೃತಾರ್ಥಗೊಳಿಸಿಕೊಳ್ಳಲು ಅವಕಾಶ ನೀಡುತ್ತದೆಂಬ ಮಾತೂ ಇದೆ. ಸಣ್ಣಕತೆಗಳನ್ನು ಬರೆದವರೆಲ್ಲ ಅನೇಕ ಜನ ಮಹತ್ವದ ಸಾಹಿತಿಗಳಿದ್ದಾರೆ. ಚೆಕಾವ್, ಮೊಪಾಸಾ, ಟಾಲ್‌ಸ್ಟಾಯ್, ಹೆಮಿಂಗ್‌ವೇ, ಲಾರೆನ್ಸ್ ತಟ್ಟನೆ ನೆನಪಿಗೆ ಬರುತ್ತಾರೆ. ಆದರೆ ಇವರಲ್ಲಿ ಯಾರೂ ಕೇವಲ ಸಣ್ಣಕತೆಗಳನ್ನೇ ಬರೆದವರಲ್ಲ. ಚೆಕಾವ್‌ನ ಕತೆಗಳಿಗಿಂತ ಅವನ ನಾಟಕಗಳು ನಿಸ್ಸಂದೇಹವಾಗಿ ಶ್ರೇಷ್ಠಮಟ್ಟದವು. ಟಾಲ್‌ಸ್ಟಾಯ್‌ನ ಕಾದಂಬರಿಗಳ ಮುಂದೆ ಅವನ ಸಣ್ಣಕತೆಗಳು ನಿಲ್ಲಲಾರವು. ಲಾರೆನ್ಸ್, ಹೆಮಿಂಗ್‌ವೇ ಮುಖ್ಯ ಲೇಖಕರಾಗುವದು ಅವರ ಕಾದಂಬರಿಗಳ ಮೂಲಕ. ಮೊಪಾಸಾ ಕೂಡ ಕಾದಂಬರಿ ಬರೆದವನೇ.

ಈ ವಿದ್ಯಮಾನಕ್ಕೆ ಸಣ್ಣಕತೆ ಒಂದು ಮೈನರ್ ಸಾಹಿತ್ಯಪ್ರಕಾರವೆಂಬುದೊಂದೇ ಕಾರಣವಲ್ಲ. ಹಾಗೆ ನೋಡಿದರೆ ಈಗ ನಾವು ಯಾವದನ್ನು 'ಕವಿತೆ' ಎಂದು ಕರೆಯುತ್ತಿದ್ದೇವೊ ಅದು ಕೂಡ ಒಂದು ಮೈನರ್ ಸಾಹಿತ್ಯಪ್ರಕಾರವೇ. ಅದಕ್ಕೂ ಅದರದೇ ಆದ ಮಿತಿಗಳಿವೆ. ಆದರೂ ಅದು ಜೀವನದರ್ಶನದಲ್ಲಿ ಸೀಮಿತವಾಗಿಲ್ಲ. ಅನಾರೋಗ್ಯಕರವೂ ಆಗಿಲ್ಲ. ಜೀವನದ ಎಲ್ಲ ಬಗೆಯ ಭಾವ, ಅನುಭವಗಳಿಗೂ ಅದು ಸೂಕ್ಷ್ಮ ಹಾಗೂ ಸಂಕೀರ್ಣ ಮಾಧ್ಯಮವಾಗಿ ಕೆಲಸ ಮಾಡಿದೆ. ಆದ್ದರಿಂದಲೇ ಕೇವಲ ಚಿಕ್ಕಪುಟ್ಟ ಕವಿತೆಗಳನ್ನು ಬರೆದೂ ಅನೇಕರು ಮಹತ್ವದ ಕವಿಗಳೆನಿಸಿದ್ದಾರೆ. ಇಂಗ್ಲೀಷಿನಲ್ಲಿ ಡಬ್ಲ್ಯೂ.ಬಿ. ಯೇಟ್ಸ್ ಅಂಥ ಕವಿ. ಕನ್ನಡದಲ್ಲಿ ಬೇಂದ್ರೆ, ಅಡಿಗ ಅಂಥ ಕವಿಗಳು. ಆದರೆ ಸಣ್ಣಕತೆಯ ವಿಷಯದಲ್ಲಿ ಅಂಥ ಮಾತನ್ನು ನಿಸ್ಸಂದಿಗ್ಧವಾಗಿ ಹೇಳುವದು ಕಠಿಣ.

ಸಣ್ಣಕತೆಗೆ ಸಂಬಧಿಸಿದಂತೆ ಇನ್ನೂ ಒಂದು ಕುತೂಹಲಕರವಾದ ಸಂಗತಿ ಇದೆ. ಅದು ಇಂಗ್ಲೆಂಡಿನಲ್ಲಿ ಅಷ್ಟು ಹುಲುಸಾಗಿ ಬೆಳೆಯಲಿಲ್ಲ. ಆದರೆ ಅಮೇರಿಕೆಯಲ್ಲಿ ಅದು ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. ಅನೇಕ ಜನ ಮಹತ್ವದ ಲೇಖಕರನ್ನು ಆಕರ್ಷಿಸಿತು. ರಶ್ಯ, ಫ್ರಾನ್ಸ್ ದೇಶಗಳಲ್ಲೂ ಮಹತ್ವದ ಕತೆಗಾರರು ಕಾಣಿಸಿಕೊಂಡರು. ಆ ದೇಶಗಳಲ್ಲಿ ಸಣ್ಣಕತೆಯ ಸ್ವಭಾವಕ್ಕೆ ಹೊಂದುವ ಜೀವನ, ಪಾತ್ರಗಳು ಹೆಚ್ಚಾಗಿದ್ದುದೇ ಅದಕ್ಕೆ ಕಾರಣವಾಗಿರಬಹುದೆ? ಯಾಕೆಂದರೆ, ಪ್ರತಿಯೊಂದು ಕಾಲಮಾನವೂ ತನ್ನ ಬದುಕಿಗೆ ಯುಕ್ತವಾದ ಸಾಹಿತ್ಯಪ್ರಕಾರವನ್ನು ಬೆಳೆಸಿಕೊಂಡು ಅಭಿವ್ಯಕ್ತಿ ಪಡೆಯಲು ಯತ್ನಿಸುವದನ್ನು ಇತಿಹಾಸದ ಉದ್ದಕ್ಕೂ ಕಾಣುತ್ತೇವೆ.

ಭಾರತೀಯ ನವೋದಯದ ಕಾಲದಲ್ಲಿ ಎಲ್ಲ ಭಾರತೀಯ ಭಾಷೆಗಳಿಗೂ ಸಣ್ಣಕತೆ ಕಾಲಿರಿಸಿತು. ಸ್ವಲ್ಪೇ ಕಾಲದಲ್ಲಿ ಜನಪ್ರಿಯ ಸಾಹಿತ್ಯಪ್ರಕಾರವಾಗಿ ಬೆಳೆಯಿತು. ಆಧುನಿಕ ಭಾರತೀಯ ಭಾಷೆಗಳ ಯಾವ ಸಾಹಿತ್ಯದ ಇತಿಹಾಸವೂ ಸಣ್ಣಕತೆಯಲ್ಲಿಯ ಸಾಧನೆಯನ್ನು ಅಲಕ್ಷಿಸುವಂತಿಲ್ಲ. ಕನ್ನಡದಲ್ಲಿ ನವೋದಯ ಕಾಲದಲ್ಲಿ ಎಲ್ಲ ಮಹತ್ವದ ಲೇಖಕರೂ ಸಣ್ಣಕತೆ ಬರೆದಿದ್ದಾರೆ. ಪ್ರಗತಿಶೀಲರಿಗೆ ಸಣ್ಣಕತೆಯೇ ಮುಖ್ಯ ಮಾಧ್ಯಮವಾಯಿತು. ನವ್ಯ ಕಾಲದ ಗೋಳಾಡುವ ನಾಯಕನಿಗೆ ಅದು ಅದ್ಭುತವಾಗಿ ಹೊಂದಿಕೊಂಡಿತು. ನವ್ಯದ ನಂತರದ ಬಂಡಾಯ ಸಾಹಿತ್ಯದಲ್ಲೂ ಅದು ಕ್ರಿಯಾಶೀಲವಾಗೇ ಇದೆ. ಈ ಕಾಲಾವಧಿಗಳಲ್ಲಿ ಸಣ್ಣಕತೆಯ ಆಕಾರ, ತಂತ್ರಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದರೂ ಅದು ಜೀವನವನ್ನು ನೋಡುವ ದೃಷ್ಟಿಯಲ್ಲಿ. ಮೂಲಭೂತವಾದ ಬದಲಾವಣೆಯಾದಂತೆ ಕಾಣುವದಿಲ್ಲ. ಅದೇ ದುರ್ದೈವಿ ಪಾತ್ರಗಳು, ಅದೇ ಸೋಲು, ವಿಷಣ್ಣತೆ, ಸಂದಿಗ್ಧತೆ, ಅನಾಥತೆ, ಗೋಳು. ನಮ್ಮ ಆಧುನಿಕ ಸಮಾಜದ ಬದಲಾವಣೆಯ ಈ ಹಂತದಲ್ಲಿ ಈ ಬಗೆಯ ಅನುಭವ ಮತ್ತು ಮನಸ್ಥಿತಿ ಹೆಚ್ಚು ವ್ಯಾಪಕವಾಗಿರುವದೇ ಸಣ್ಣಕತೆ ನಮ್ಮಲ್ಲಿ ಇಷ್ಟು ಕ್ರಿಯಾಶೀಲವಾಗಿರಲು ಕಾರಣವಾಗಿರಬೇಕು.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡದಲ್ಲಿ ಮಾಸ್ತಿಯವರ ಸಣ್ಣಕತೆಗಳು ಅಪವಾದವಾಗಿರುವಂತೆ ಕಾಣುತ್ತದೆ. ಅವರು ಬೇರೆ ಯಾವ ಸಾಹಿತ್ಯಪ್ರಕಾರದಲ್ಲಿ ಬರೆಯದಿದ್ದರೂ ಅವರ ಸಣ್ಣಕತೆಗಳ ಆಧಾರದ ಮೇಲೆಯೇ ಅವರನ್ನು ಒಬ್ಬ ಮೇಜರ್ ಲೇಖಕ ಎಂದು ಗುರುತಿಸುವದು ಸಾಧ್ಯ. ಹೀಗೆ ಸಣ್ಣಕತೆಯಂಥ ಒಂದು ಮೈನರ್ ಸಾಹಿತ್ಯಪ್ರಕಾರದ ಮೂಲಕವೇ ಅವರು ಮೇಜರ್ ಲೇಖಕರಾಗಿ ಬೆಳೆದದ್ದು ಒಂದು ಅಪರೂಪದ ಸಂಗತಿ ಎಂದೇ ಹೇಳಬೇಕು.

ಸಣ್ಣಕತೆ ಹೀಗೆ ತನ್ನ ಸ್ವಭಾವದಿಂದಲೇ ಒಂದು ಅಸ್ವಸ್ಥ ಸಾಹಿತ್ಯಪ್ರಕಾವಾಗಿದ್ದಲ್ಲಿ, ಅದರ ಜೀವನದರ್ಶನದಲ್ಲಿ ಸೋಲೇ ಮುಖ್ಯವಾಗಿದ್ದಲ್ಲಿ ಮಾಸ್ತಿಯವರ ಜೀವನದರ್ಶನದಲ್ಲೂ ಅದು ಇದ್ದಿರಬೇಕಲ್ಲವೆ? ಮೈನರ್ ಸಾಹಿತ್ಯಪ್ರಕಾರದಲ್ಲಿ ಬರೆದುದರಿಂದ ಆ ದರ್ಶನ ಸೀಮಿತವೂ ಆಗಿರಬೇಕಲ್ಲವೆ? ಆಶ್ಚರ್ಯದ ಸಂಗತಿ ಎಂದರೆ, ಅದು ವಾಸ್ತವದಲ್ಲಿ ಹಾಗಿಲ್ಲ. ಅವರ ಕತೆಗಳಲ್ಲೂ ಸಣ್ಣಕತೆಗೆ ವಿಶಿಷ್ಟವಾದ ಸಮಾಜದ ಬಲಿಪಶುಗಳು, ದುರ್ದೈವಿಗಳು, ನೊಂದವರು, ಅನಾಥರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ವೆಂಕಟಶಾಮಿ, ಅಂಜಪ್ಪ, ಗೌತಮಿ, ವೆಂಕಟಿಗ, ಚಂದ್ರವದನಾ,

ಚಿಕ್ಕಮ್ಮ, ಚೆನ್ನಮ್ಮ, ಆಚಾರ್ಯರ ಪತ್ನಿ, ಸಾವಿತ್ರಮ್ಮ, ಚಟ್ಟೇಕಾರ ತಾಯಿ... ಹೀಗೇ ಇನ್ನೂ ಅನೇಕ ಜನ. ಆದರೆ ಮಾಸ್ತಿಯವರ ಕತೆಗಳು ಸೋಲಿನಲ್ಲಿ, ವಿಷಣ್ಣತೆಯಲ್ಲಿ ಕೊನೆಗೊಳ್ಳುವದಿಲ್ಲ. ಅವರ ಪಾತ್ರಗಳು ಸಾಮಾನ್ಯ ಜನರೇ ಆದರೂ ತಮ್ಮ ಅಂತಶ್ಶಕ್ತಿಯ ಮೂಲಕ ಬದುಕಿನ ನೋವನ್ನು ಗೆಲ್ಲಬಲ್ಲವರಾಗಿದ್ದಾರೆ. ತಮ್ಮ ಅಹಂಭಾವರಹಿತ ಉದಾತ್ತತೆಯಿಂದ ನಮ್ಮ ಗೌರವಕ್ಕೆ ಪಾತ್ರರಾಗುತ್ತಾರೆ. ಉದಾತ್ತತೆ ಅವರಿಗೆ ಸುಲಭವಾಗಿ ಬಂದದ್ದೇನೂ ಅಲ್ಲ. ನೋವನ್ನು ಗೆಲ್ಲುವ ಶಕ್ತಿಯನ್ನು ಅವರು ಜೀವನದಲ್ಲಿ ಸಾಕಷ್ಟು ಬೆಲೆ ಕೊಟ್ಟೇ ಗಳಿಸಿಕೊಳ್ಳುತ್ತಾರೆ. ಆದರೆ ಆ ಪ್ರಕ್ರಿಯೆಯನ್ನು ಚಿತ್ರಿಸುವ ಅವಕಾಶ ಸಣ್ಣಕತೆಯಲ್ಲಿ ಇರಲು ಸಾಧ್ಯವಿಲ್ಲದ್ದರಿಂದ ಅದು ಯುಕ್ತಸಮಯದಲ್ಲಿ ಛಕ್ಕನೆ ಪ್ರಕಟವಾಗುತ್ತದೆ. ಅವರ ಕತೆಗಳು ದುರಂತದಲ್ಲಿ, ಮನುಷ್ಯಚೇತನದ ಸೋಲಿನಲ್ಲಿ ಕೊನೆಗೊಳ್ಳುವದಿಲ್ಲ.

ಮಾಸ್ತಿಯವರ ಸಣ್ಣಕತೆಗಳು ಹೀಗೆ ಭಿನ್ನವಾದ, ಸಣ್ಣಕತೆಯ ಸ್ವಭಾವಕ್ಕೆ ವಿರುದ್ಧವಾದ ಜೀವನದೃಷ್ಟಿಯನ್ನು ಕೊಡಲು ಸಾಧ್ಯವಾಗಿರುವದಕ್ಕೆ ಒಂದು ಮುಖ್ಯ ಕಾರಣವೇಂದರೆ, ಅವರ ಕತೆಗಳು ತಮ್ಮ ಸ್ವರೂಪದಲ್ಲಿ ಪಶ್ಚಿಮದ ಆಧುನಿಕ ಸಣ್ಣಕತೆಗಿಂತ ಭಿನ್ನವಾಗಿರುವದು. ಅವರಿಗೆ ಸಣ್ಣಕತೆ ಬರೆಯಲು ಪ್ರೇರಣೆ ದೊರೆತದ್ದು ಪಶ್ಚಿಮದ ಸಣ್ಣಕತೆಯ ಮಾದರಿಯಿಂದಲೇ ಆದರೂ ಅವರಿಗೆ ಆದರ್ಶವಾದದ್ದು ಭಾರತದ ಪ್ರಾಚೀನ ಕಥಾಪರಂಪರೆಯ ಮಾದರಿ.* ಅವರ ನೂರು ಕತೆಗಳಲ್ಲಿ ಆಕಸ್ಮಿಕ ತಿರುವಿನ ಒಂದು ಕತೆಯೂ ಇಲ್ಲವೆಂಬುದು ಆಕಸ್ಮಿಕವಲ್ಲ. ಬದುಕಿನ ಕ್ರೂರ ವ್ಯಂಗ್ಯ ಸ್ಥಾಯಿಯಾಗುವದರಲ್ಲಿ ಅವರಿಗೆ ವಿಶ್ವಾಸ ಇಲ್ಲದಿರುವದರಿಂದಲೇ ಅವರಿಗೆ ಆ ತಂತ್ರ ಉಪಯೋಗಬೀಳಲಿಲ್ಲ.

ಎರಡನೆಯದಾಗಿ, ಭಾರತೀಯ ಸಾಹಿತ್ಯಪರಂಪರೆಗೆ ದುರಂತ ಅಪರಿಚಿತವೆಂಬುದನ್ನೂ ಇಲ್ಲಿ ನೆನೆಯಬಹುದು. ಆ ಕಾರಣಕ್ಕಾಗಿಯೇ ಭಾರತೀಯ ಸಾಹಿತ್ಯ ತನ್ನ ವಿಶಿಷ್ಟ ಜೀವನ ದರ್ಶನಕ್ಕೆ ತಕ್ಕದಾದ ಸಾಹಿತ್ಯರೂಪಗಳನ್ನು ಬೆಳೆಸಿಕೊಂಡಿತು. ಮಾಸ್ತಿ ಭಾರತೀಯ ಸಾಹಿತ್ಯಪರಂಪರೆಯೊಂದಿಗೆ ಅರ್ಥಪೂರ್ಣವಾಗಿ ತಮ್ಮನ್ನು ಗುರುತಿಸಿಕೊಂಡವರು. ಹಾಗೆಯೇ, ತಮ್ಮ ಜೀವನದೃಷ್ಟಿಯಲ್ಲೂ ಅವರು ಭಾರತೀಯ ಜೀವನದರ್ಶನವನ್ನು ಒಪ್ಪಿಕೊಂಡವರು. ಜೀವನದಲ್ಲಿ ನೋವು ಇದೆ, ಆದರೆ ಅದು ಅಪರಿಹಾರ್ಯವಲ್ಲ, ಅಜಿಂಕ್ಯವಲ್ಲ ಎಂಬುದು ಅವರ ನಂಬಿಕೆ. ಅದರಿದಾಗಿಯೇ ಬದುಕಿನ ಭಿನ್ನ ಭಿನ್ನ ನೋವುಗಳನ್ನು ಅವರ ಪಾತ್ರಗಳು ತಮ್ಮ ಯೋಗ್ಯತೆಗೆ ತಕ್ಕಂತೆ ಎದುರಿಸಿ ಗೆಲ್ಲುತ್ತವೆ.

ಆದರೆ ಈ ಗೆಲ್ಲುವಿಕೆ ಕೂಡ ಅವರ ಕತೆಗಳಲ್ಲಿ ಒಂದು ಯಾಂತ್ರಿಕ ಕ್ರಿಯೆಯಾಗಿ, ನೋವಿಗೆ ಸುಲಭವಾದ ಪರಿಹಾರವಾಗಿ ಬಂದಿಲ್ಲವೆಂಬುದು ಮಹತ್ವದ ಸಂಗತಿ. ನೋವಿನ ಆಳ ಮತ್ತು ಗೆಲ್ಲುವಿಕೆಯ ವೈವಿಧ್ಯದಿಂದಾಗಿ ಅವರ ಸಣ್ಣಕತೆಗಳಿಗೆ ಒಂದು ವಿಶಿಷ್ಟವಾದ, ಮೇಜರ್ ಲೇಖಕನಲ್ಲಿ ಮಾತ್ರ ಕಾಣುವ ಸಮಗ್ರವಾದ ಕೇಂದ್ರದರ್ಶನ ಒದಗಿಬಂದಿದೆ, ಮತ್ತು ಆ ಮೂಲಕ ಸಣ್ಣಕತೆಯ ಮಿತಿಗಳನ್ನು ದಾಟುವದು ಅವರಿಗೆ ಸಾಧ್ಯವಾಯಿತು.

* ಈ ವಿಷಯವನ್ನು 'ಕನ್ನಡ ಕಥಾಪರಂಪರೆ ಮತ್ತು ಮಾಸ್ತಿ' ಎಂಬ ಲೇಖನದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದೇನೆ. ನೋಡಿರಿ "ಮಾಸ್ತಿಯವರ ಸಾಹಿತ್ಯ", ಸಂ.ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ೧೯೬೬.

ಯಾವಾಗ ಕನ್ನಡ ಸಣ್ಣಕತೆ ಭಾರತೀಯ ಮಾದರಿಯಿಂದ ದೂರ ಸರಿಯತೊಡಗಿತೊ, ಯಾವಾಗ ಪಶ್ಚಿಮದ ಮಾದರಿಗೆ ಹೆಚ್ಚು ಹೆಚ್ಚು ಸಮೀಪವಾಗುತ್ತ ಹೋಯಿತೋ ಆಗ ಅದು ಸೋಲಿನ, ಗೋಳಿನ ಕತೆಯಾಗುತ್ತ ಹೋಯಿತು.

ಅದನ್ನೀಗ ಮತ್ತೆ ಒಂದು ಸ್ವಸ್ಥ ಜೀವನದೃಷ್ಟಿಯ ಆರೋಗ್ಯಪೂರ್ಣ ಸಾಹಿತ್ಯಪ್ರಕಾರವಾಗಿ ಬದಲಿಸುವದು, ಬೆಳೆಸುವದು ಸಾಧ್ಯವೆ ?

ಉಲ್ಲೇಖಗಳು

1. Bergonzi, Bernard (1970), The sitration of the Navel, Macmillan: London.

2. Brooks, Cloanth and Robert Penn Warren(1943), Understanding Fiction, Appleton-Century-Crofts : New York.

3. Fiedler, Leslie (1958), 'From Redemption to Initiation', New Leader-41.

4. O'Connor, Frank(1965), The Lonely Voice, Macmillan: London.

5. Sehorer, Mark (1950), The story, Engliton Cliffs : N.J.

ಮಹತ್ವದ ಸಾಹಿತಿಯ ಮಾಧ್ಯಮವಾಗಿ ಸಣ್ಣಕಥೆ

• ಕೀರ್ತಿನಾಥ ಕುರ್ತಕೋಟಿ

ಸಣ್ಣಕತೆ, ತನ್ನ ಹೆಸರಿಗೆ ತಕ್ಕಂತೆ ಬಹಳ ಪರಿಮಿತವಾದ ವ್ಯಾಪ್ತಿಯುಳ್ಳ ಸಾಹಿತ್ಯ ಪ್ರಕಾರವಾಗಿದೆ. ಅದಕ್ಕಾಗಿಯೇ ಈ ಪ್ರಕಾರವನ್ನು ಗದ್ಯದಲ್ಲಿಯ ಭಾವಗೀತೆ ಎಂದು ಕರೆದವರಿದ್ದಾರೆ. ಆದರೆ ಸಣ್ಣಕತೆಗೂ ಭಾವಗೀತೆಗೂ ಇರುವ ಮಹತ್ವದ ಅಂತರವನ್ನು ಮರೆಯುವಂತಿಲ್ಲ. ಮಹಾಕಾವ್ಯ ಮತ್ತು ಗೀತಗಳು ಜೊತೆಯಾಗಿಯೇ ಬೆಳೆದುಬಂದ ಕಾವ್ಯ ಪ್ರಕಾರಗಳು. ಆದರೆ ಅವುಗಳ ಸಂವೇದನೆಯ ವ್ಯಾಪ್ತಿ ಬೇರೆ ಬೇರೆಯಾಗಿರುವಂಥದು. ಆದರೆ ಇದೇ ಮಾತನ್ನು ಕಾದಂಬರಿ ಮತ್ತು ಸಣ್ಣಕತೆಗಳ ಮಟ್ಟಿಗೆ ಹೇಳುವಂತಿಲ್ಲ. ಕಾದಂಬರಿ ಮತ್ತು ಸಣ್ಣಕತೆ ಇವು ಬಳಸುವ ಸಂವೇದನೆ ಒಂದೇ ಬಗೆಯದಾಗಿದೆ.

ಕಾದಂಬರಿಯಂತೆ ಸಣ್ಣಕತೆ ಒಂದು ಪ್ರಮುಖವಾದ ಸಾಹಿತ್ಯಪ್ರಕಾರವಲ್ಲ. ಈ ಪ್ರಕಾರದ ಸಾಹಿತ್ಯಿಕ ಪ್ರಭಾವ ದೀರ್ಘಕಾಲದವರೆಗೆ ಉಳಿಯುವಂಥದ್ದಲ್ಲ. ಒಂದು ಕಾದಂಬರಿ ನೀಡುವ ಅನುಭವದ ಸಮಗ್ರತೆಯನ್ನು ನಾವು ಒಂದು ಸಣ್ಣಕತೆಯಿಂದ ನಿರೀಕ್ಷಿಸುವಂತಿಲ್ಲ. ಸಣ್ಣಕತೆಯ ವ್ಯಾಪ್ತಿ ಚಿಕ್ಕದಾಗಿರುವದರಿಂದ ಜೀವನದ ಅರ್ಥಪೂರ್ಣವಾದ ಸನ್ನಿವೇಶದ ಒಂದು ಕ್ಷಣಿಕ ಅವಲೋಕನ ಮಾತ್ರ ಕಥೆಯ ಮೂಲಕವಾಗಿ ಸಾಧ್ಯವಾಗಬಹುದು. ಕತೆಯಲ್ಲಿ ಕಾಣುವ ನೋಟ ಧ್ವನಿಪೂರ್ಣವಾಗಿದ್ದರೆ–ಜೀವನದ ಸಮಗ್ರತೆಯನ್ನು ಸೂಚಿಸುವ ಸಾಮರ್ಥ್ಯ ಅದಕ್ಕಿದ್ದರೆ– ಸಮಗ್ರತೆಯ ಅನುಭವವಿಲ್ಲದಿದ್ದರೂ ಅದರ ತಿಳುವಳಿಕೆಯಾದರೂ ಓದುಗನಿಗೆ ಸಿಗಬಹುದು. ಮರಳ ಕಣದಲ್ಲಿ ವಿಶ್ವವನ್ನು, ಕ್ಷಣದ ಅವಕಾಶದಲ್ಲಿ ಅನಂತತೆಯನ್ನು ಸೆರೆಹಿಡಿಯುವ ಶಕ್ತಿ ಭಾಷೆಗಿದೆಯೇ ಎಂದು ಪರೀಕ್ಷಿಸಬಹುದು. ಇದೇ ಕಾರಣಕ್ಕಾಗಿ ಸಣ್ಣಕತೆಯ ಬರವಣಿಗೆ ಯಾವಾಗಲೂ ಧ್ವನಿಪೂರ್ಣತೆಯ ಕಡೆಗೆ, ವ್ಯಂಗ್ಯದ ಕಡೆಗೆ, ಅನುಭವದ ಬೆಳವಣಿಗೆಗಿಂತ ಅದರ ಸಾರವನ್ನಷ್ಟೇ ಹಿಡಿಯುವದರ ಕಡೆಗೆ, ಪ್ರಯತ್ನ ಮಾಡುತ್ತಲೇ ಇರುತ್ತದೆ. ಆದರೆ ಇದೆಲ್ಲ ಸಣ್ಣಕತೆಯ ಆದರ್ಶ ಮಾತ್ರವಾಗಿದೆ. ಈ ಆದರ್ಶವನ್ನು ಸಾಧಿಸುವದಕ್ಕೆ ಸಣ್ಣಕತೆ ಹಲವಾರು ತಂತ್ರವಿಶೇಷಗಳನ್ನು ಬಳಕೆಗೆ ತರುತ್ತದೆ. ಈ ಎಲ್ಲ ತಂತ್ರಗಳ ಅಭ್ಯಾಸ ಕೂಡ ಹಲವಾರು ದೃಷ್ಟಿಯಿಂದ ಪ್ರಯೋಜನಕಾರಿಯಾಗಿದೆ.

ಇದರಲ್ಲಿ ಮುಖ್ಯವಾಗಿರುವ ತಂತ್ರವೆಂದರೆ ಕತೆಯ ಸ್ವರೂಪ ಒಂದು ಒಡಗತೆಯ ಸ್ವರೂಪವನ್ನು ತಾಳುವದು. ನಮ್ಮ ಹಳೆಯ 'ಪಂಚತಂತ್ರ' ಮತ್ತು ಹಿತೋಪದೇಶದ ಕತೆಗಳು ಈ ಬಗೆಯವಾಗಿವೆ. ಪಂಚತಂತ್ರದ ಕಥೆಗಳು ಹೆಚ್ಚಾಗಿ ಪ್ರಾಣಿಗಳ ಕಥೆಗಳಾಗುವದಕ್ಕೆ ಇದೇ ಕಾರಣವಾಗಿದೆ. ಉದಾಹರಣೆಗೆ ಮೊಸಳೆ ಮತ್ತು ಮಂಗ ಇವುಗಳ ಸ್ನೇಹದ ಕಥೆಯನ್ನೇ

ನೋಡಬಹುದು. ನೀರಲಗಿಡದಲ್ಲಿಯ ಮಂಗ ನದಿಯಲ್ಲಿಯ ಮೊಸಳೆಯೊಂದಿಗೆ ಸ್ನೇಹದಿಂದ ಇರುವದೇ ಒಂದು ಅಸಾಧ್ಯವೆನ್ನಬಹುದಾದ ಘಟನೆಯಾಗಿದೆ. ಆದರೆ ಕಥೆಯಲ್ಲಿ ಈ ಘಟನೆ ನಂಬಿಕೆ ಮತ್ತು ಅಪನಂಬಿಕೆಗಳನ್ನು ಕೂಡಿಯೇ ಹುಟ್ಟಿಸುತ್ತದೆಂಬ ಮಾತು ಕತೆಯ ಉದ್ದೇಶದ ದೃಷ್ಟಿಯಿಂದ ಲಾಭದಾಯಕವಾಗಿದೆ. ಈ ಕಥೆಯನ್ನು ನಂಬಿ ಮೊಸಳೆ ಮಂಗಗಳ ಸ್ನೇಹದ ಪರಿಣಾಮವೇನಾಯಿತೆಂಬುದನ್ನು ತಿಳಿಯುವ ಕುತೂಹಲ ಒಂದು ಕಡೆಗಿದ್ದರೆ, ಈ ಕಥೆಯನ್ನು ನಂಬದೆ ಈ ಘಟನೆಯ ಅರ್ಥವೇನಿರಬಹುದೆಂದು ಶೋಧಿಸುವ ಕುತೂಹಲ ಇನ್ನೊಂದು ಕಡೆಗಿರುತ್ತದೆ. ತನ್ನ ಹೃದಯವನ್ನು ನೀರಲಗಿಡದ ಮೇಲೆ ಮರೆತು ಬಂದಿದ್ದೇನೆಂದು ಮಂಗ ಹೇಳಿದಾಗ ಮಂಗನ ಚಾತುರ್ಯವನ್ನು ಮೆಚ್ಚುವದಲ್ಲದೆ ಅದು ಪಾರಾಗಿ ಬಂದದ್ದಕ್ಕೆ ಮನಸ್ಸು ಹಗುರಾಗುತ್ತದೆ. ಆದರೆ ನಡೆದಿರುವ ಕಥೆ ವಾಸ್ತವವೆಂದು ನಂಬದಿರುವದರಿಂದ ಹೃದಯವನ್ನು ದೂರವಿಟ್ಟು ನಡೆದಿರುವ ಈ ಸ್ನೇಹದ ಹಿಂದಿನ ಕ್ರೌರ್ಯವನ್ನು ಅರಿಯುವದರ ಕಡೆಗೆ ಮನಸ್ಸು ತವಕಗೊಳ್ಳುತ್ತದೆ. ಕಥೆ ಏನಿದ್ದರೂ ಅದು ಭಾಷೆಯ ಒಂದು ಸೃಷ್ಟಿಯಾಗಿ, ಜೀವಂತವಾದ ಅನುಭವ ಮತ್ತು ಅಮೂರ್ತವಾದ ಸತ್ಯ ಇವುಗಳನ್ನು ಒಂದುಗೂಡಿಸಿಕೊಂಡು ಒಂದು ಹೊಸದಾದ ಅರ್ಥಗಳ ಸಂಕುಲವಾಗುತ್ತದೆ. ಮತ್ತು ಈ ಅರ್ಥಸಂಕುಲ ಜಗತ್ತಿನ ಗೂಢ ವ್ಯಾಪಾರವನ್ನು ಪ್ರತಿಬಿಂಬಿಸುವ ಕನ್ನಡಿಯಾಗುತ್ತದೆ. ಕತೆ ಒಡಗತೆಯಾಗುವದರ ಪ್ರಯೋಜನ ಇದಾಗಿದೆ.

ಆದರೆ ಯಾವದೇ ಒಡಗತೆಯಾಗಲಿ ಅದಕ್ಕೆ ಅಮೂರ್ತ ತತ್ವದ ಹೆದರಿಕೆ ತಪ್ಪಿದ್ದಲ. ವ್ಯಾವಹಾರಿಕ ಜಾಣ್ಮೆ, ಲೋಕನೀತಿ, ಮೊದಲಾದವುಗಳ ಅಭಿವ್ಯಕ್ತಿಗೆ ಈ ಪ್ರಕಾರ ಅನುಕೂಲವಾಗಬಹುದಾದರೂ ಜೀವನದ ಆಂತರಿಕ ಸತ್ಯ, ದೈವ ಮರಣಗಳಂಥ ತಿಳಿವಿನಾಚೆಗಿನ ತತ್ವಗಳು ಇವುಗಳ ಅಭಿವ್ಯಕ್ತಿ ಈ ಕತೆಗಳಲ್ಲಿ ಸಂಕುಚಿತವಾಗಬಹುದು. ಇದು ಅಲ್ಲದೆ ಅವಾಸ್ತವಿಕ ಘಟನೆಗಳನ್ನು ದೂರವಿರಿಸಿ ವಾಸ್ತವ ಸತ್ಯಗಳ ಅಭಿವ್ಯಕ್ತಿಗೆ ಸಾಹಿತ್ಯ ಮನಸ್ಸು ಮಾಡಿದ ಮೇಲೆ ಈ ಬಗೆಯ ಬರವಣಿಗೆ ಅಸಾಧ್ಯವಾಯಿತು. ಆಗ ಹೊಸ ಹೊಸ ಮಾರ್ಗಗಳ ಆವಿಷ್ಕಾರ ಅನಿವಾರ್ಯವಾಯಿತು. ಯಶವಂತ ಚಿತ್ತಾಲರ 'ಪಯಣ' ಮತ್ತು 'ಆಟ'ದಂಥ ಕತೆಗಳು ಅನುಭವದ ರೂಪಕಾತ್ಮಕತೆಯನ್ನೂ ಸೂರೆಗೈದು ಕತೆಯ ಅರ್ಥವಿಸ್ತಾರಕ್ಕೆ ಅನುವು ಮಾಡಿಕೊಟ್ಟವು. ರಾಘವೇಂದ್ರ ಖಾಸನೀಸರ 'ತಬ್ಬಲಿಗಳು'ದಂಥ ಕತೆಗಳು ಅನುಭವದ ಪ್ರತ್ಯಭಿಜ್ಞಾನದಿಂದ ಹೊಸ ಅರ್ಥಗಳನ್ನೂ ನಿರ್ಮಿಸಲು ಪ್ರಯತ್ನ ಮಾಡಿದವು. ಆದರೆ ಆಧುನಿಕ ಸಣ್ಣಕತೆ ಉಪಯೋಗಿಸುವ ಈ ತಂತ್ರಗಳೆಲ್ಲ ಕಾವ್ಯತಂತ್ರಗಳೆಂಬುದನ್ನು ಮರೆಯಲಾಗದು. ಕವಿತೆ ಉಪಯೋಗಿಸುವ ಪ್ರತಿಮೆ ಮತ್ತು ರೂಪಕ ಹೊಸದಾಗಿ ಉನ್ಮೇಷಗೊಳ್ಳುವ ಶಕ್ತಿ ಇರುತ್ತದೆ. ಒಂದು ಶಬ್ದಕ್ಕೆ ಹಲವು ಅರ್ಥಗಳನ್ನು ಸ್ಫುರಿಸುವ ಶಕ್ತಿ ಯೋಗಿಸುವ ಪ್ರತಿಮೆ ಮತ್ತು ರೂಪಕವಾದಾಗ, ಪ್ರತೀಕವಾದಾಗ ಅದರ ಶಕ್ತಿ ಇನ್ನೂ ಹೆಚ್ಚಾಗುತ್ತದೆ. ಕವಿತೆಯಂತೆ ಸಣ್ಣಕತೆಯೂ ಇದನ್ನು ಉಪಯೋಗಿಸಿಕೊಂಡರೆ ಪ್ರಯೋಜನಕಾರಿಯಾಗುತ್ತದೆ.

ಸಣ್ಣಕತೆಯಂಥ ಚಿಕ್ಕ ಸಾಹಿತ್ಯಪ್ರಕಾರವನ್ನು ಬೆಳೆಸಿಕೊಂಡು ಅದಕ್ಕೆ ಒಂದು ಗೌರವವನ್ನು

ತಂದುಕೊಟ್ಟ ಪ್ರಮುಖ ಲೇಖಕರ ಸಂಖ್ಯೆ ಅಷ್ಟೇನೂ ದೊಡ್ಡದಲ್ಲ. ತಟ್ಟನೆ ನೆನಪಿಗೆ ಬರುವ ಹೆಸರುಗಳೆಂದರೆ ರಶಿಯಾದ ಟಾಲ್‌ಸ್ಟಾಯ್, ಮತ್ತು ಚೆಕಾವ್, ಫ್ರಾನ್ಸಿನ ಮೊಪಸಾ ಮತ್ತು ನಮ್ಮ ದೇಶದ ರವೀಂದ್ರನಾಥ ಠಾಕೂರ ಮತ್ತು ಪ್ರೇಮಚಂದರು. ಕನ್ನಡದಲ್ಲಿ ಇಂಥ ಲೇಖಕರೆಂದರೆ ಮಾಸ್ತಿಯವರೆಂದೇ ಹೇಳಬೇಕು. ಮಾಸ್ತಿಯವರ ಕೈಯಲ್ಲಿ ಸಣ್ಣಕತೆಗೆ ಈ ಗೌರವ ಪ್ರಾಪ್ತವಾದದ್ದಕ್ಕೆ ಕಾರಣವೆಂದರೆ ಅವರ ಪರಿಣತ ಪ್ರಜ್ಞೆಯೆಂದೇ ಹೇಳಬೇಕು. ಅವರ ಮೊದ ಮೊದಲಿನ ಕತೆಗಳಲ್ಲಿ ಕೂಡಾ 'ಒಂದು ಹಳೆಯ ಕತೆ' ಮತ್ತು 'ಸಾರಿಪುತ್ರನ ಕೊನೆಯ ದಿನಗಳು' ಇಂಥ ಕತೆಗಳು ಇರುವದನ್ನು ನೋಡಿದಾಗ ಪೂರ್ಣತೆಯ ದರ್ಶನ ಯಾವಾಗಲೂ ಅವರ ಬರೆವಣಿಗೆಯ ಲಕ್ಷಣವಾಗಿತ್ತೆಂದು ಗೊತ್ತಾಗುತ್ತದೆ. 'ಸಾರಿಪುತ್ರನ ಕೊನೆಯ ದಿನಗಳು' ಕತೆಯಲ್ಲಿಯ ಮುಖ್ಯ ವಸ್ತುವೆಂದರೆ ಸನ್ಯಾಸಿ ಅನುಭವಿಸುವ ನಷ್ಟ. ಒಂದು ಜೀವದ ಉದ್ಧಾರವೆಂದರೆ ಜೊತೆಯಲ್ಲಿರುವ ಜೀವವೊಂದನ್ನು ತ್ಯಜಿಸಬೇಕಾಗಿ ಬಂದರೆ, ಅಂಥ ತ್ಯಾಗ ಅನಿವಾರ್ಯವಾಗಿದ್ದರೆ, ವೈರಾಗ್ಯದ ಬೆಲೆ ಏನು ಎಂದು ಹುಟ್ಟುವ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಇದೇ ಪ್ರಶ್ನೆ ಇನ್ನೊಂದು ರೂಪದಲ್ಲಿ 'ಒಂದು ಹಳೆಯಕತೆ'ಯಲ್ಲಿಯೂ ಇದೆ. ಈ ಪ್ರಶ್ನೆ ಎಷ್ಟು ಮಹತ್ವದ್ದಾಗಿದೆಯೆಂದರೆ ಅದರ ಅಭಿವ್ಯಕ್ತಿಗೆ ಒಂದು ಕತೆ ಸಾಕಾಗುವದಿಲ್ಲ. ಮಾಸ್ತಿಯವರು ಮುಂದೆ ಬರೆದ 'ಆಚಾರ್ಯರ ಪತ್ನಿ' 'ಆ್ಯನ್ ಶೇಕ್ಸಪಿಯರ್' 'ಟಾಲಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು' ಇಂಥ ಕತೆಗಳಲ್ಲಿ ಕೂಡ ಈ ಪ್ರಶ್ನೆ ಮಹತ್ವದ್ದಾಗಿದೆ. ಇವು ಹೇಳಿಕೇಳಿ ಪ್ರಸಿದ್ಧ ವಸ್ತುಗಳುಳ್ಳ ಕತೆಗಳು. ಇದಲ್ಲದೆ ದುರದೃಷ್ಟದ ಹೆಣ್ಣು ಮತ್ತು 'ಸನ್ಯಾಸವಲ್ಲದ ಸನ್ಯಾಸ'ದಂಥ ಕಲ್ಪಿತ ವಸ್ತುಗಳ ಕತೆಗಳಲ್ಲಿ ಕೂಡ ಈ ಪ್ರಶ್ನೆ ತಲೆಯೆತ್ತಿದೆ. ಈ ಕತೆಗಳಲ್ಲಿರುವದು ಮಹಾವ್ಯಕ್ತಿಗಳ ವೈರಾಗ್ಯದ ಬಗ್ಗೆ ಸಿಟ್ಟಲ್ಲ, ಅಥವಾ ಪರಿತ್ಯಕ್ತ ಪತ್ನಿಯರ ಬಗ್ಗೆ ಕನಿಕರವೂ ಅಲ್ಲ. ಅಲ್ಲಿ ಮುಖ್ಯವಾಗುವದು ಯಾವುದೋ ಪರಿಪೂರ್ಣತೆಯನ್ನು ಪಡೆಯಬೇಕಾದರೆ ಬೇರೆ ಬೆಲೆಯುಳ್ಳ ವಸ್ತುವನ್ನು ಕಳೆದುಕೊಳ್ಳಬೇಕಾದ ಅನಿವಾರ್ಯವಾದ ದುರಂತ ಸ್ಥಿತಿ. ಬುದ್ಧದೇವ ಮನೆಯನ್ನು ಬಿಟ್ಟು ಲೋಕವನ್ನು ಹಿಡಿದುಕೊಂಡ ಎಂಬ ಪ್ರಸಂಗ ಗೌರವಕ್ಕೆ ಯೋಗ್ಯವಾದದ್ದು. ಆದರೆ ಅವನು ಹಿಡಿದುಕೊಂಡ ಲೋಕದಲ್ಲಿ ಯಶೋಧರೆಗೆ ಸ್ಥಾನವಿಲ್ಲದಿರುವದು ದುರ್ವಿಪಾಕದ ಪ್ರತಿಮೆಯಾಗುತ್ತದೆ. ಇದಕ್ಕೆ ಕಾರಣ ಲೋಕದ ಅಪೂರ್ಣತೆಯಾಗಿರಬಹುದು. ದೈವಗತಿಯ ವೈಚಿತ್ರ್ಯವಾಗಿರಬಹುದು. ಆದರೆ ಅದೇನಿರಬಹುದೆಂದು ತಿಳಿಯುವ ತವಕ ಮಾತ್ರ ಪ್ರತಿಯೊಂದು ಕತೆಯಲ್ಲಿ ಮಿಡಿಯುತ್ತಿದೆ. ಅದೇನೇ ಇದ್ದರೂ ವಸ್ತು ಕತೆಯಿಂದ ಕತೆಗೆ ಹರಿಯುತ್ತ ಅನಿರೀಕ್ಷಿತವಾದ ರೀತಿಯಲ್ಲಿ ಬೆಳವಣಿಗೆಯನ್ನು ಪಡೆದಿರುವದು ಮಹತ್ವದ ಮಾತಾಗಿದೆ.

ಈ ಮಾತಿಗೆ ಇನ್ನೊಂದು ಉದಾಹರಣೆಯನ್ನು ಕೊಡುವವಾದರೆ ಮಾಸ್ತಿಯವರ ಕತೆಗಳಲ್ಲಿ ಹೆಣ್ಣಾದವಳು ಹೆಂಡತಿಯಾಗುವ ವಿಷಯ. ಹೆಣ್ಣು ತಾಯಿಯಾಗುವದು ಮಾಸ್ತಿಯವರ ಕತೆಗಳ ಪ್ರಕಾರ ಕತೆಯ ಪರಿಪ್ರೇಕ್ಷ್ಯದಲ್ಲಿ ಬರುವ ಅಗತ್ಯವಿಲ್ಲ. ತಾಯಿ ದೇವರಂತೆ ಕತೆಯಾಗದ ವಸ್ತುವಾಗಿದೆ. ಆದರೆ ಹೆಂಡತಿಯ ವಿಷಯ ಅದಲ್ಲ. ಕೃಷ್ಣಮೂರ್ತಿಯ ಹೆಂಡತಿ, ವೆಂಕಟಿಗನ ಹೆಂಡತಿ ಹೀಗೆ ಕತೆಯ ಶೀರ್ಷಿಕೆಯಲ್ಲಿಯೇ ಉಲ್ಲೇಖವನ್ನು ಪಡೆದ ಹೆಂಡಂದಿರಷ್ಟೇ ಅಲ್ಲದೆ

ಇನ್ನೂ ಅನೇಕ ಹೆಂಡಂದಿರಿದ್ದಾರೆ. ಚನ್ನಮ್ಮ, ಚಿಕ್ಕವ್ವ, 'ನಮ್ಮ ಮೇಷ್ಟರು' ಕತೆಯ ಮೇಷ್ಟರ ಹೆಂಡತಿ, ಸಾರಿಪುತ್ರ, ರಾಮಾನುಜಾಚಾರ್ಯರು, ಶೇಕ್ಸಪಿಯರ್, ಟಾಲ್‌ಸ್ಟಾಯ್ ಇವರ ಪತ್ನಿಯರು—ಹೀಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದಾಗಿದೆ. ಹೆಂಡತಿಯಾಗುವದು ಒಂದು ಲೌಕಿಕ ವಸ್ತುವಾಗಿದ್ದು ಅದರ ಸಮಸ್ಯೆಗಳು ಬಹಳ ಮತ್ತು ಸಂಕೀರ್ಣವೂ ಹೌದು. ನೂರಕ್ಕೆ ತೊಂಬತ್ತರಷ್ಟು ಸಾಮಾಜಿಕ ಸಮಸ್ಯೆಗಳಿಗೆ ಬಲಿಯಾಗುವವಳು ಈ ಹೆಂಡತಿ. 'ಕಾಮನ ಹಬ್ಬದ ಕತೆ'ಯ ಸಾವಿತ್ರಮ್ಮನಂತೆ ಅಲೌಕಿಕವೆನ್ನಬಹುದಾದ ನಂಬಿಕೆ ಹಾಗೂ ಮನೋಧೈರ್ಯಗಳಿಂದ ಸಮಸ್ಯೆಗಳಿಂದ ಪಾರಾಗುವವರು ಇರಬಹುದಾದರೂ 'ಕೃಷ್ಣಮೂರ್ತಿಯ ಹೆಂಡತಿ'ಯಂತೆ ಸತ್ತು ಹೋಗುವವರೇ ಹೆಚ್ಚು. ಅದೇನೇ ಇದ್ದರೂ ಈ ವಸ್ತು ಮಾಸ್ತಿಯವರ ಕತೆಗಳಿಗೆಲ್ಲ ಅರ್ಥಪೂರ್ಣವಾದ ಐಕ್ಯವನ್ನು ತಂದುಕೊಟ್ಟಿದೆ.

ಈ ಐಕ್ಯದ ಸೂತ್ರ ಮೇಲುನೋಟಕ್ಕೆ ಕಾಣಿಸುವದಕ್ಕಿಂತ ಹೆಚ್ಚು ಮಹತ್ವದ್ದಾಗಿದೆ. ವಸ್ತುಗಳಲ್ಲಿಯ ಐಕ್ಯದಿಂದಾಗಿ ಈ ಎಲ್ಲ ಕತೆಗಳೂ ಕೂಡಿ ಒಂದು ಕೃತಿ ಎಂದು ನೋಡುವದು ಸಾಧ್ಯವಿದೆ. ಈ ಕತೆಗಳಲ್ಲಿಯ ಪಾತ್ರಗಳೆಲ್ಲ ಒಂದೇ ಜನಾಂಗಕ್ಕೆ ಸೇರಿದ ವ್ಯಕ್ತಿಗಳು ಮತ್ತು ಪ್ರತಿಯೊಂದು ಪಾತ್ರ ತನ್ನ ಜನಾಂಗದ ಸ್ಮೃತಿಯನ್ನು, ಪ್ರಜ್ಞೆಯನ್ನು ಕಾಯ್ದುಕೊಂಡು ಬಂದಿದೆ. ಚಟ್ಟೇಕಾರ ತಾಯಿ, ಚಿಕ್ಕವ್ವ ಮತ್ತು ಬೈಚೇಗೌಡನ ತಾಯಿಗಿಂತ ಭಿನ್ನವಾದ ಜನಾಂಗದಲ್ಲಿ ಬೆಳೆದುಬಂದವಳಾದರೂ ಅವಳ ಮಾತುಕತೆ, ಶೀಲ, ತಿಳುವಳಿಕೆಗಳಲ್ಲಿ ಭಿನ್ನವಾದದ್ದೇನೂ ಕಾಣುವದಿಲ್ಲ. ಆ್ಯನ್ ಶೇಕ್ಸಪಿಯರನ ಸಮಸ್ಯೆ ಮತ್ತು ಆಚಾರ್ಯರ ಪತ್ನಿ, ಸಾರಿ ಪುತ್ರನ ಹೆಂಡತಿ ಇವರ ಸಮಸ್ಯೆ ಒಂದೇ ಆಗಿರುವದು ಕತೆಯಲ್ಲಿ ವಿದಿತವಾಗುತ್ತದೆ. ಮನುಷ್ಯ ಜೀವನದಲ್ಲಿ ಆಳವಾಗಿ ಹುದುಗಿಕೊಂಡ ಅಂತರಾರ್ಥವನ್ನು ತೆರೆದು ತೋರಲೆಂದೇ ಹುಟ್ಟಿದ ವ್ಯಕ್ತಿಗಳು ಈ ಕತೆಗಳಲ್ಲಿದ್ದಾರೆ. ಈ ಕತೆಗಳನ್ನು ಒಂದೊಂದಾಗಿ ಆರಿಸಿಕೊಂಡು ವಿಮರ್ಶೆ ಮಾಡುತ್ತ ಹೋದರೆ ಅವುಗಳಲ್ಲಿ ಕೆಲವು ದೋಷಗಳು ಕಾಣಬಹುದು. ಮಾಸ್ತಿಯವರು ಸಂಪ್ರದಾಯನಿಷ್ಠತೆಯನ್ನೇ ಎತ್ತಿಹಿಡಿಯುವವರೆಂದು ದೂರಲು ಆಗ ಅವಕಾಶವಿದೆ. ಈ ಕತೆಗಳಲ್ಲಿಯ ಹೆಣ್ಣುಮಕ್ಕಳು ಅಸಹಾಯಸ್ಥಿತಿಯನ್ನು ತಾಳ್ಮೆ ಎಂದು ಕರೆದು ಅದೇ ಸರಿಯಾದ ಮಾರ್ಗ ಎಂದು ತಿಳಿದಿರುವದು ಸರಿಯೇ ಎಂದು ಪ್ರಶ್ನೆ ಕೇಳಬಹುದು. ಇದೇ ಜಾತಿಯ ಹಲವಾರು ಪ್ರಶ್ನೆಗಳು ಹುಟ್ಟಬಹುದು. ಆದರೆ ಈ ಕತೆಗಳನ್ನೆಲ್ಲ ಒಟ್ಟಾಗಿ ನೋಡಿದಾಗ, ಈ ಕತೆಗಳು ಕೂಡಿಕೊಂಡು ಹುಟ್ಟಿಸುವ ಅರ್ಥ ಕತೆಗಳ ಪ್ರತ್ಯೇಕ ಅರ್ಥಗಳ ಬೇರೀಜು ಮಾತ್ರವಲ್ಲ ಎಂದು ಗೊತ್ತಾಗುತ್ತದೆ. 'ಮುನೀಶ್ವರಮಠ'ದ ರಾಜಮ್ಮ 'ಚೆನ್ನಮ್ಮ' ಕತೆಯ ಚೆನ್ನಮ್ಮ ವಿಧಿಯ ಮಾತಾಡುತ್ತಾರೆ. ಇವರಲ್ಲಿ ಒಬ್ಬಳೇ ಆ ಮಾತಾಡಿದಾಗ ಅದನ್ನು ಅಸಹಾಯಸ್ಥಿತಿಯ ಸಮರ್ಥನೆ ಎನ್ನಬಹುದು. ಆದರೆ ಅರ್ಥ ಬದಲಾಗುತ್ತದೆ. ಚೆನ್ನಮ್ಮನಿಗೆ ಜೀವನವೆಂದರೆ ಮೊರದಿಂದ ನೆಲಕ್ಕೆ ಬಿದ್ದ ಅಕ್ಕಿಯಾದರೆ ರಾಜಮ್ಮನಿಗೆ ಅದು ಬಣ್ಣ ಗಟ್ಟಿಯಲ್ಲದ ಸೀರೆ. ಉಟ್ಟು ಹರಿಯಬೇಕು ಅಷ್ಟೇ. ಗೌತಮಿಗೆ ಜೀವನವೆಂದರೆ ಗೊತ್ತಿಲ್ಲದ ಸೆಳವು, ಗೊತ್ತಿಲ್ಲದ ಸುಳಿಗಳಿಂದ ತುಂಬಿದ ನದಿ. ಮಾಸ್ತಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸುವ ಇಂಥ ಪ್ರತಿಮೆಗಳ ಅರ್ಥ ಒಂದೇ ಆಗುವದಿಲ್ಲ, ಅಲ್ಲದೆ ಈ ಪ್ರತಿಮೆಗಳು ಕೂಡ ನಿಖರವಾದ

ಕಾವ್ಯಾರ್ಥವನ್ನು ಪ್ರಕಟಿಸುವ ರೂಪಕಗಳೂ ಅಲ್ಲ. ಇವು ಗಿಡದಲ್ಲಿಯೇ ಹುಟ್ಟಿ ಆ ಗಿಡದ ಆಯುಷ್ಯವನ್ನು, ಸಹಿಷ್ಣುತೆಯನ್ನು ಅಳೆದು ತೋರಿಸುವ ಉಂಗುರಗಳಾಗಿವೆ. ಇಷ್ಟೆಲ್ಲ ಹೇಳಿದ್ದರ ತಾತ್ಪರ್ಯ ಇಷ್ಟೇ ಮಾಸ್ತಿಯವರ ಕತೆಗಳಲ್ಲಿಯ ಘಟನೆಗಳ ಹೊಂದಾಣಿಕೆ ಮತ್ತು ಕತೆಗಳ ಇನ್ನೊಂದು ಹೊಂದಾಣಿಕೆ – ಈ ಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ. ಪ್ರತಿಯೊಂದು ಕತೆಗೂ ತನ್ನದೇ ಆದ ಒಂದು ಅರ್ಥವಿದೆ, ಆದರೆ ಅದೇ ಕೊನೆಯ ಮಾತಲ್ಲ. ಈ ಕತೆಯ ಅರ್ಥ ಉಳಿದ ಕತೆಗಳ ಅರ್ಥದೊಂದಿಗೆ ಕೂಡಿಕೊಳ್ಳಬೇಕು ಮತ್ತು ಅರ್ಥಾಂತರವನ್ನು ಪಡೆಯಬೇಕು. ಈ ಅರ್ಥಾಂತರದ ಉದ್ದೇಶವಿಲ್ಲದಿದ್ದರೆ ಮಾಸ್ತಿಯವರ ಕತೆಗಳು ಹುಟ್ಟುತ್ತಲೇ ಇರಲಿಲ್ಲವೆನ್ನುವಷ್ಟು ಇದು ಅನಿವಾರ್ಯವಾಗಿದೆ. ಮಾಸ್ತಿಯವರು ತಮ್ಮದೊಂದು ನಾಟಕದಲ್ಲಿ ಯಶೋಧರೆಯ ದುಃಖವನ್ನು ಚಿತ್ರಿಸಿದ್ದಾರೆ. ಅದು ಯಶೋಧರೆಯ ಬಗ್ಗೆ ಕನಿಕರದಿಂದಲ್ಲ. ಆದರೆ ಆ ದುಃಖದಲ್ಲಿ ಕಾಣುವ ಬುದ್ಧನ ಪ್ರತಿಬಿಂಬದಿಂದ ಬುದ್ಧನ ಜೀವನ ಅರ್ಥಾಂತರವನ್ನು ಪಡೆಯುತ್ತದೆ.

ಈ ಅರ್ಥಾಂತರವನ್ನು ಪಡೆಯುವದಕ್ಕಾಗಿ ಮಾಸ್ತಿಯವರು ಉಪಯೋಗಿಸುವ ತಂತ್ರವಿಶೇಷಗಳು ಅಭ್ಯಾಸಕ್ಕೆ ಯೋಗ್ಯವಾಗಿವೆ. ಅವು ಮೇಲುನೋಟಕ್ಕೆ ಬಹಳ ಸರಳವಾದ ಉಪಾಯಗಳಂತೆ ಕಾಣುತ್ತವೆ. ಆದರೆ ಅವು ನಾವು ಯೋಚಿಸುವಷ್ಟು ಸರಳವಾಗಿಲ್ಲ. ಕೆಳಗೆ ಕೊಟ್ಟಿರುವ ಈ ಮೂರು ಉದಾಹರಣೆಗಳನ್ನು ಪರೀಕ್ಷಿಸಬಹುದು.

(೧) ಹೀಗೆ ಯೋಚಿಸುತ್ತ ನಾನು ಅಲ್ಲಿ ಒಂದು ಮರದ ಕೆಳಗೆ ಕುಳಿತೆನು. ಒಂದು ಕೊಕ್ಕರೆ ಹಾರಿ ಬಂದು ಹೊಂಡದ ಒಂದು ಕೊನೆಯಲ್ಲಿ ಕುಳಿತಿತು. ಅದನ್ನು ನೋಡುತ್ತಿರಲು ನನ್ನ ಮನಸ್ಸಿನಲ್ಲಿ ಒಂದು ಸಂಗತಿ ತಾನೇ ಕತೆ ಕಟ್ಟಿಕೊಂಡಿತು.

(೨) ಅದು ಹದ್ದಲ್ಲ: ಎಲೆಯ ಮರೆಯಲ್ಲಿ ನನಗೆ ಕಾಣದೆ ಕುಳಿತಿದ್ದ ಒಂದು ಗರುಡ ಅದೆ. ಅದು ಮರದಿಂದ ಹಾರಿ ಗಾಳಿಗೆ ಏರಿತು. ರೆಕ್ಕೆ ಬಡಿದು ನಭವನ್ನು ಸೇರಿ ಸಾವಧಾನವಾಗಿ ಹಾಯತೊಡಗಿತು. ಎರಡು ಗರುಡ.... ಇವು ಹಾರುವದನ್ನು ಸ್ವಲ್ಪ ಹೊತ್ತು ನೋಡುತ್ತಿದ್ದ ಮೇಲೆ ಶ್ರೀರಾಮರು ನಮಗೆ ತಮ್ಮ ಅನುಭವದ ಒಂದು ಸಂಗತಿಯನ್ನು ಹೇಳಿದರು.

(೩) ಪಾರಿಜಾತ ಗಿಡದಿಂದ ಸುಖವಾದ ವಾಸನೆ ತಂಪಾಗಿ ಹಾಯ್ದು ಬಂತು. ಕೆಲವು ಕೆಳಗೆ ಉದುರಿಬಿದ್ದಿದ್ದವು. ಮಲ್ಲಿಗೆಯ ಪೊದೆಯಲ್ಲಿ ತುಂಬ ಎಲೆ ಹೂವಿಲ್ಲ ಸೇವಂತಿಗೆಯ ಪಾತಿಯಲ್ಲಿ ಅಲ್ಲಲ್ಲಿ ಚನ್ನಾಗಿ ಅರಳಿದ ಒಂದೆರಡು ದೊಡ್ಡ ಹೂ. ಕಟ್ಟೆಗಳಲ್ಲಿ ಗುಂಪು ಗುಂಪಾಗಿ ತುಳಸಿ ಒಂದು ಮೂಲೆಯಲ್ಲಿ ಬಾವಿ. ನಾವಿಬ್ಬರೂ ಹೋಗಿ ಬಾವಿಯ ತಡಿಯಲ್ಲಿ ನಿಂತೆವು.

ಇವುಗಳಲ್ಲಿ ಮೊದಲು ಕೊಟ್ಟಿರುವ ಎರಡು ಉದಾಹರಣೆಗಳು ಕತೆಗಳಿಗೆ ಜನ್ಮ ಕೊಟ್ಟ ಪ್ರತಿಮೆಗಳಾಗಿವೆ. ಮೊದಲನೆಯದು 'ಆಚಾರ್ಯರ ಪತ್ನಿ' ಕತೆಯೊಳಗಿನದು, ಎರಡನೆಯದು 'ವೆಂಕಟಿಗನ ಹೆಂಡತಿ' ಕತೆಯೊಳಗಿನದು. ಕತೆಹೇಳುವ ಲೇಖಕರಿಗೆ ಈ ಪ್ರತಿಮೆಗಳ ದರ್ಶನದಿಂದ ಮುಂದಿನ ಕತೆ ನೆನಪಾಗುತ್ತದೆ. ಆದರೆ ಇಲ್ಲಿ ಮಾಡುವ ಪ್ರಶ್ನೆಯೆಂದರೆ ಹೀಗೆ

ಆಕಸ್ಮಾತ್ತಾಗಿ ಕಂಡುಬರುವ ಪ್ರತಿಮೆಗೂ ಅವು ಸೂಚಿಸುವ ಕತೆಗೂ ಏನು ಸಂಬಂಧ? ಅದು ಕಾರ್ಯಕಾರಣ ಸಂಬಂಧವಲ್ಲ, ಅಥವಾ ಉಪಮಾನೋಪಮೇಯ ಸಂಬಂಧವೂ ಅಲ್ಲ. ನನಗೆ ತಿಳಿದ ಮಟ್ಟಿಗೆ ಆಕಸ್ಮಿಕವಾಗಿ ಕತೆಯ ಮೊದಲಲ್ಲಿ ಬರುವ ಪ್ರತಿಮೆ ಮುಂದಿನ ಕತೆಯಲ್ಲಿ ಅರ್ಥಾಂತರವನ್ನು ಸೂಚಿಸುತ್ತದೆ. ರಾಮಾನುಜಾಚಾರ್ಯರು ಒಂದು ಕಾಲಕ್ಕೆ ವಾಸಮಾಡಿದ್ದ ಸಾಲಿಗ್ರಾಮಕ್ಕೆ ಲೇಖಕರು ಹೋಗಿದ್ದಾಗ ಆಚಾರ್ಯರ ಮಹಿಮೆ ಅವರ ಮನಸ್ಸಿಗೆ ತಟ್ಟಿತು. ಹಿಂದಿನ ಕಾಲದ ಅವಶೇಷಗಳು ಹಿಂದಿನ ಜೀವನದ ನೆನಪನ್ನು ಮರುಕಳಿಸಿದವು. ಆದರೆ ಈ ಹಳೆಯ ಅವಶೇಷಗಳ ಪರಿಸರದಲ್ಲಿ ಹಾರಿ ಬಂದ ಕೊಕ್ಕರೆ ಆಚಾರ್ಯರು ಮತ್ತು ಅವರ ಪತ್ನಿ ಇವರ ಸಂಬಂಧವನ್ನು ಕುರಿತು ಹೊಸ ಸತ್ಯವೊಂದನ್ನು ಮಿಂಚುವಂತೆ ಮಾಡುತ್ತದೆ. ಎಲ್ಲರು ತಿಳಿದುಕೊಂಡಿರುವಂತೆ ಅದು ವಿರಸದ ಸಂಬಂಧವಲ್ಲ. ರಾಮಾನುಜಾಚಾರ್ಯರ ದಾಂಪತ್ಯದ ಸಂಬಂಧ ದ್ವೇಷದಿಂದ ಕೂಡಿರದೆ ಒಂದು ಅಪೂರ್ವವಾದ ತಿಳುವಳಿಕೆಯಿಂದ ಕೂಡಿದ್ದು ಎಂದು ಹೇಳಿದರೆ ಕತೆಗೆ ಹೊಸ ಅರ್ಥ ಬರುತ್ತದೆ. ಎರಡನೆಯ ಪ್ರತಿಮೆಯೂ ಹೆಚ್ಚು ಕಡಿಮೆ ಇದೇ ರೀತಿಯದು. ವೆಂಕಟಿಗ ತನ್ನ ಹೆಂಡತಿಯ ವಿಷಯದಲ್ಲಿ ತೋರಿಸುವ ವಾಸ್ತವತೆಯ ತಳಹದಿ ಈ ಗರುಡನ ಪ್ರತಿಮೆಯಲ್ಲಿದೆ. ಇನ್ನು ಮೂರನೆಯ ಉದಾಹರಣೆ 'ಕೃಷ್ಣಮೂರ್ತಿಯ ಹೆಂಡತಿ' ಕತೆಯೊಳಗಿನದು. ರಾತ್ರಿಯ ಹೊತ್ತು ಕಾಣೆಯಾದ ಕೃಷ್ಣಮೂರ್ತಿಯ ಹೆಂಡತಿಯನ್ನು ಹುಡುಕುತ್ತ ಅವಳ ತಾಯಿ ಮತ್ತು ಲೇಖಕ ತೋಟಕ್ಕೆ ಬರುತ್ತಾರೆ. ತೋಟದ ಬಾವಿಯಲ್ಲಿ ಅವಳು ಬಿದ್ದು ಸತ್ತಿದ್ದಾಳೆ. ಸಾವಿನ ಭೀಕರತೆ ವಾತಾವರಣದಲ್ಲಿ ತುಂಬಿಕೊಂಡಿರುವಾಗ ಈ ಮೋಹಕವಾದ ನಿಸರ್ಗ ವರ್ಣನೆ ಬರುತ್ತದೆ. ಈ ವರ್ಣನೆಯ ಸೌಂದರ್ಯ ಮತ್ತು ಪರಿಸ್ಥಿತಿಯ ಭೀಕರತೆ ಇವುಗಳ ನಡುವಿನ ವೈದೃಶ್ಯ ಹೊಸ ಅರ್ಥವನ್ನು ಸೂಚಿಸುತ್ತದೆ. ಒಂದು ರೀತಿಯಲ್ಲಿ ಕೃಷ್ಣಮೂರ್ತಿಯ ಹೆಂಡತಿಯ ಸಾವು ಜೀವಂತ ನರಕದಿಂದ ಬಿಡುಗಡೆ ಅಷ್ಟೇ ಅಲ್ಲದೆ, ಅವಳ ಜೀವದ ವಿಸ್ಮಯಕರವಾದ ರೂಪಾಂತರವೂ ಆಗಿದೆ. ಅವಳ ಸುಮುಖವಾದ ದಾಂಪತ್ಯದಲ್ಲಿ ವ್ಯಕ್ತವಾಗಬೇಕಾಗಿದ್ದ ಅವಳ ಜೀವದ ಚೆಲುವು ಈಗ ನಿಸರ್ಗದ ಚೆಲುವಿನಲ್ಲಿ ವ್ಯಕ್ತವಾಗುತ್ತದೆ. ಚಂದ್ರ ಮುಳುಗಿ ಮೂಡಲಲ್ಲಿ ಸೂರ್ಯ ಹುಟಬಂದ ಎಂಬ ಮುಂದಿನ ವರ್ಣನೆ ಈ ಸತ್ಯವನ್ನು ಗಟ್ಟಿಗೊಳಿಸುತ್ತದೆ. ಕಥನಕ್ಕೆ ಇರುವ ಸ್ವಂತ ಅರ್ಥದಲ್ಲಿ ವರ್ಣನೆ ತನ್ನ ಅರ್ಥವನ್ನು ಹೊಸದಾಗಿ ತಂದು ಸೇರಿಸಿರುವದು ಸ್ಪಷ್ಟವಾಗಿ ಕಾಣುತ್ತದೆ.

ಸಣ್ಣಕತೆಯ ತನ್ನ ವ್ಯಾಪ್ತಿಯ ಮಿತಿಯನ್ನು ಮೀರುವದಕ್ಕಾಗಿ ಕೆಲವು ತಂತ್ರಗಳನ್ನು ಉಪಯೋಗಿಸಿದೆಯೆಂದು ಈ ಮೊದಲೇ ಹೇಳಲಾಗಿದೆ. ಆದರೆ ಆ ಲೇಖಕರು ಉಪಯೋಗಿಸಿರುವ ತಂತ್ರಗಳು ಕಾವ್ಯದ ತಂತ್ರಗಳಾಗಿವೆ. ಕತೆ ಒಡಗತೆಯಾಗುವದು, ಒಂದು ಕೇಂದ್ರ ಪ್ರತೀಕದ ಸುತ್ತ ಕತೆ ಹೆಣೆಯುವದು, ರೂಪಕಾತ್ಮಕತೆಯನ್ನು ಅವಲಂಬಿಸುವದು. ಮಾಸ್ತಿಯವರ ಕತೆಗಳಲ್ಲಿ ಇಂಥ ತಂತ್ರಗಳ ಉಪಯೋಗವಿಲ್ಲವೆಂದಲ್ಲ. ಆದರೆ ಅದು ಬಹಳ ಅಪರೂಪ. ಮಾಸ್ತಿಯವರು ನವೋದಯದ ಶ್ರೇಷ್ಠ ಗದ್ಯಕಾರರು, ಅವರು ಉಪಯೋಗಿಸಿರುವ ತಂತ್ರಗಳೆಲ್ಲ ಹೆಚ್ಚಾಗಿ ಗದ್ಯದ ತಂತ್ರಗಳಾಗಿವೆ. ಗದ್ಯ ಸ್ವತಂತ್ರವಾದ ರೀತಿಯಲ್ಲಿ ಸಾಹಿತ್ಯವನ್ನು ಹುಟ್ಟಿ ಬೆಳೆಸಿದ್ದು ನಮ್ಮ ನವೋದಯ ಸಾಹಿತ್ಯದ ಕಾಲದಲ್ಲಿಯೇ ಎಂಬುದನ್ನು ಮರೆಯುವಂತಿಲ್ಲ.

ಕಾವ್ಯತಂತ್ರಗಳನ್ನು ಉಪಯೋಗಿಸದೆ ಗದ್ಯ ಸಾಹಿತ್ಯವಾಗುವದು ಹೇಗೆ? ಅದು ಉಪಯೋಗಿಸುವ ತಂತ್ರಗಳು ಯಾವವು ಎಂಬುದರ ಬಗ್ಗೆ ಇನ್ನೂ ಅಭ್ಯಾಸವಾಗಬೇಕಾಗಿದೆ. 'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಕೊನೆಕೊನೆಯ ಭಾಗದಲ್ಲಿ ಮಾಸ್ತಿಯವರು ಕಥನ ಮತ್ತು ವರ್ಣನೆ ಇವೆರಡನ್ನು ಬೇರೆ ಬೇರೆಯಾಗಿಟ್ಟು ಅವೆರಡರ ಜೋಡಣೆ ಕಣ್ಣಿಗೆ ಕಾಣುವಂತೆ ಮಾಡಿರುವದು ಗದ್ಯ ಉಪಯೋಗಿಸುವ ಮಹತ್ವದ ತಂತ್ರವಾಗಿದೆ. ನೇರವಾದ ಕಥನ ಕತೆಯೊಳಗಿನ ಸಂಗತಿಗಳನ್ನು ಮಾತ್ರ ಹೇಳುತ್ತದೆ. ಈ ಘಟನೆಗಳನ್ನು ಒಂದಾದ ಮೇಲೊಂದರಂತೆ, ಸಂದುಬಿಡದೆ ಹೇಳುವ ಕ್ರಮದಲ್ಲಿ ಕಥೆಯ ಅರ್ಥ ಪ್ರವಾಹವಾಗಿ ಹರಿದುಬಂದು ಕೊನೆಯಲ್ಲಿ ಪ್ರಕಟವಾಗಬೇಕು. ಈ ಕ್ರಮ ಶಬ್ದಾರ್ಥ ವಾಕ್ಯದ ಗುಂಟ ಹರಿದು ಬಂದು ಅರ್ಥ ಪ್ರಕಟವಾಗುವ ರೀತಿಯಾಗಿದೆ. ಆದರೆ ವರ್ಣನೆ ಕ್ರಮ ಭಿನ್ನವಾದದ್ದು. ವರ್ಣನೆಯ ಚಿಂತೆ ಕೇವಲ ಸೌಂದರ್ಯದ್ದಾಗಿರದೆ ಘಟನೆಗಳ ಮೌಲ್ಯವನ್ನು ಕುರಿತು ಕೂಡ ಅದಕ್ಕೆ ಕಾಳಜಿಯಿರುತ್ತದೆ. ವರ್ಣನೆ ಕತೆಯ ಓಟವನ್ನು ನಿಲ್ಲಿಸುತ್ತದೆಯೇ ಹೊರತು ಅದನ್ನು ಬೇರೆ ದಿಕ್ಕಿಗೆ ತಿರುಗಿಸುವದಿಲ್ಲ. ಕತೆ ವರ್ಣನೆಯ ಮೂಲಕ ತನ್ನ ಅಳವಿಗೆ ಮೀರಿದ ಬೇರೆ ಅರ್ಥವನ್ನು, ಮೌಲ್ಯವನ್ನು ಪಡೆದುಕೊಂಡಂತಾಗುತ್ತದೆ.

'ನಮ್ಮ ಮೇಷ್ಟರು', 'ಉಗ್ರಪ್ಪನ ಉಗಾದಿ' ಇಂಥ ಕತೆಗಳಲ್ಲಿ ಮಾಸ್ತಿಯವರು ಗದ್ಯಕ್ಕೆ ಮಾತ್ರ ಮೀಸಲಾಗಿರುವ ಕಥನ ತಂತ್ರವನ್ನು ಅವಲಂಬಿಸಿದ್ದಾರೆ. 'ನಮ್ಮ ಮೇಷ್ಟರು' ಕತೆಯಲ್ಲಿ ಹಳ್ಳಿಯ ಒಂದು ಶಾಲೆಯಲ್ಲಿ ಬೆಳಗಿನ ಹೊತ್ತು ನಡೆಯುವ ಘಟನೆಗಳ ಕ್ರಮವಾದ ಕಥನವಿದೆ. ಶಾಲೆಯಲ್ಲಿ ಇನ್ಸ್‌ಪೆಕ್ಟರು ಬಂದು ಪರಿಸ್ಥಿತಿಯ ಬಿಗುವು ಹೆಚ್ಚಾದಾಗ ಅಲ್ಲಿ ಬಿರುಗಾಳಿಯಂತೆ ಬಂದಿದ್ದ ಮೇಷ್ಟರ ಹೆಂಡತಿ ಪರಿಸ್ಥಿತಿಯ ಗೊಂದಲವನ್ನು ಹೆಚ್ಚಿಸುತ್ತಾಳೆ. ಅವಳನ್ನು ಒಬ್ಬ ವಿದ್ಯಾರ್ಥಿನಿಯೆಂದೇ ಭ್ರಮಿಸಿದ್ದ ಇನ್ಸ್‌ಪೆಕ್ಟರು 'ಒಳ್ಳೇ ಬಲಿತ ಹುಡುಗಿಯನ್ನೇ ಹಿಡಿದಿದ್ದೀರಿ' ಎಂದಾಗ ಮೇಷ್ಟರ ಹೆಂಡತಿಗೆ ಅಪಮಾನವಾಗಿ ಅವಳು ಜಗಳವಾಡುತ್ತಾಳೆ. ನ್ಯಾಯವಾಗಿ ಇಲ್ಲಿ ಕತೆ ಮುಗಿಯಬೇಕು, ಆದರೆ ಮುಗಿಯುವದಿಲ್ಲ. ಮೇಷ್ಟರ ಹೆಂಡತಿ ಸತ್ತು ಇಪ್ಪತ್ತು ವರ್ಷಗಳಾದ ಮೇಲೆ ಅವಳ ಮನಸ್ಸು ಎಷ್ಟು ಒಳ್ಳೆಯದಿತ್ತೆಂದು ಮೇಷ್ಟರು ತಿಳಿಸುತ್ತಾರೆ. ಕಾಲದ ಈ ಅಂತರ ಹಳೆಯ ಹುಣ್ಣುಗಳನ್ನು ಮಾಯಿಸುತ್ತದೆ. ಆದರೆ ಕಾಲಕ್ರಮ ಕಥನಕ್ರಮದಲ್ಲಿ ರೂಪಾಂತರಗೊಂಡು ಕತೆಯ ಅರ್ಥಗಳನ್ನು ಬಿತ್ತಿ ಬೆಳೆಸುತ್ತದೆ. 'ಉಗ್ರಪ್ಪನ ಉಗಾದಿ' ಕತೆಯಲ್ಲಿ ಘಟನೆಗಳು ವಾಕ್ಯದಲ್ಲಿಯ ಶಬ್ದಗಳಂತೆ ಒಂದು ಕ್ರಮದಲ್ಲಿ ನಡೆಯುತ್ತ ಇಡೀ ಕತೆಯೇ ಒಂದು ದೊಡ್ಡ ವಾಕ್ಯವಾಗಿ ಅರ್ಥವನ್ನು ಕಟ್ಟಿಕೊಳ್ಳುವ ಈ ರೀತಿ ಗದ್ಯದ್ದು ಎನ್ನುವದನ್ನು ಬೇರೆ ಹೇಳಬೇಕಾಗಿಲ್ಲ. ಇದೇ ತಂತ್ರ ಹೆಚ್ಚು ಪರಿಷ್ಕೃತವಾದಾಗ 'ಮಂತ್ರೋದಯ' ದಂಥ ಕಥೆ ಹುಟ್ಟಿಕೊಳ್ಳುತ್ತದೆ. 'ಮಂತ್ರೋದಯ' ಕತೆಯ ನಾಯಕನಾದ ಮಹರ್ಷಿ ವಾಮದೇವ ಸರಿಯಾಗಿ ನೂರು ವರ್ಷಗಳ ವರೆಗೆ ಬಾಳಿ ಕೊನೆಯ ದಿನ ಪರಂಧಾಮಕ್ಕೆ ಹೋಗುವ ಸನ್ನಿವೇಶ ಇಲ್ಲಿ ಚಿತ್ರಿತವಾಗಿದೆ. ಆದರೆ ಈ ಕತೆ ಉಪಯೋಗಿಸುವ ತಂತ್ರ ಕತೆಯ ಪರಿಸರ ವೇದಕಾಲದ್ದು. ಪರಿಸರದ ವಿವರಗಳನ್ನು ಮಾಸ್ತಿಯವರು ಈಶಾವಾಸ್ಯ ಉಪನಿಷತ್ತಿನಿಂದ ತೆಗೆದುಕೊಂಡಿದ್ದಾರೆ. ಕುಲಪತಿಯ ಆಶ್ರಮ, ಗಿಡಬಳ್ಳಿಗಳು, ಅಶ್ವತ್ಥವೃಕ್ಷದ ಕೆಳಗಿನ ವಿಶಾಲವಾದ

ಕಟ್ಟೆ ಇವುಗಳ ವರ್ಣನೆ ಉಪನಿಷತ್ತಿನಲ್ಲಿಲ್ಲ. ಆದರೆ ಇವುಗಳನ್ನು ಬಿಟ್ಟು ಬೇರೆ ಕೆಲವು ವಿವರಗಳಿವೆ. ಮಹರ್ಷಿ ಬದುಕಿದ ನೂರು ವರ್ಷ, ಹೋಮಾಗ್ನಿ, ಸಂಜೆಯ ಹೊತ್ತು ಮುಳುಗುವ ಸೂರ್ಯ ಮತ್ತು ಉದಯಿಸುವ ಚಂದ್ರ ಇವೆಲ್ಲ ಉಪನಿಷತ್ತಿನೊಳಗಿನವು. ಆದರೆ ಉಪನಿಷತ್ತಿನಲ್ಲಿ ಈ ವಿವರಗಳು ಪರಿಸರದ ವಿವರಗಳಲ್ಲ. ಆದರೆ ಪ್ರತೀಕಗಳು. 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ। ತತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ, ಸಂಜೆಯ ಸೂರ್ಯನ ಹಿರಣ್ಮಯವಾದ ಬೆಳಕಿನ ಪಾತ್ರೆ ಲೋಕದ ಮುಖವನ್ನು ಮುಚ್ಚಿತ್ತು ಎಂಬ ಮಾಸ್ತಿಯವರ ವರ್ಣನೆ. ಉಪನಿಷತ್ತಿನ ಪ್ರತೀಕಗಳನ್ನು ಪರಿಸರದ ವಿವರಗಳಲ್ಲಿ ಭಾಷಾಂತರಿಸುತ್ತದೆ. ಇನ್ನು ಕತೆಯಲ್ಲಿಯ ಸ್ವತಂತ್ರವಾದ ವಿವರಗಳು ಕೂಡ ಸೂಕ್ಷ್ಮವಾಗಿ ಪರಿಶೀಲಿಸಿದರೆ ಉಪನಿಷತ್ತಿನಲ್ಲಿಯ ವಿವರಗಳಿಂದಲೇ ಬಂದದ್ದೆಂದು ಕಾಣುತ್ತದೆ. ಮಹರ್ಷಿಯನ್ನು ಕಾಣಲು ಬೇರೆ ಋಷಿಗಳು ಬಂದಾಗ ಅವನು ಮಲ್ಲಿಗೆ ಬಳ್ಳಿಯ ಮಡಿಯನ್ನು ಸರಿ ಮಾಡುತ್ತಿರುತ್ತಾನೆ. ಇದನ್ನು ನೀವೇ ಏಕೆ ಮಾಡಬೇಕು ಎಂದು ಅವರು ಕೇಳಿದಾಗ ಇದು ನನಗೆ ಕಷ್ಟದ ಕೆಲಸವಲ್ಲ ಎಂದು ಕೈ ತೊಳೆದುಕೊಳ್ಳುತ್ತಾನೆ. 'ನ ಕರ್ಮ ಲಿಪ್ಯತೇ ನರೇ' ಎಂಬ ಮಾತಿನ ಮೂರ್ತವಾದ ಗದ್ಯಾರ್ಥವಾಗಿದೆ.

ಈಶಾವಾಸ್ಯದ ಎಂಟನೆಯ ಮಂತ್ರದಲ್ಲಿ ಒಂದು ಮಾತು ಬರುತ್ತದೆ. ದೇವರಿಗೆ ತನ್ನ ಜೀವನವನ್ನೆಲ್ಲ ಒಪ್ಪಿಸಿಕೊಟ್ಟ ಮನುಷ್ಯ ಕರ್ಮಗಳ ಬಂಧನದಿಂದ ಬಿಡುಗಡೆಯನ್ನು ಪಡೆಯುವುದಲ್ಲದೆ ಸ್ವತಂತ್ರನೂ ಆಗುತ್ತಾನೆ. ಇಹ ಮತ್ತು ಪರಗಳಲ್ಲಿ ವಿರೋಧವನ್ನು ಕಾಣದ ಮಹರ್ಷಿಗೆ ಮೃತ್ಯುವೆನ್ನುವದು ಈ ಅವಿರೋಧವನ್ನು ಅನುಭವಿಸಲು ಸಹಾಯಮಾಡುತ್ತದೆ. ಮಹರ್ಷಿಯೇ ಹೇಳಿದ ಮಾತೆಂದರೆ 'ಮಾನವನ ಉಪನಿಷತ್ತು ಮಾತಿನಲ್ಲಿದ್ದರೆ ಈಶನ ಉಪನಿಷತ್ತು ಲೋಕದಲ್ಲಿದೆ', ಮಾಸ್ತಿಯವರು ಇಲ್ಲಿ ಉಪಯೋಗಿಸುವ ತಂತ್ರವೆಂದರೆ ಲೋಕದ ಉಪನಿಷತ್ತನ್ನು ಮಾತಿನಲ್ಲಿ ಭಾಷಾಂತರಿಸುವದು. ಮಾಸ್ತಿಯವರು ತಮ್ಮ ಉಳಿದ ಕತೆಗಳಲ್ಲಿ ಉಪಯೋಗಿಸಿದ ಗದ್ಯದ ಈ ತಂತ್ರವನ್ನು ನಿಯಮಶೀಲವಾಗಿ ಉಪಯೋಗಿಸಿ ಪಡೆದಿರುವ ಉತ್ಕೃಷ್ಟವಾದ ಫಲವೆಂದರೆ ಈ ಕತೆಯೆಂದು ಹೇಳಬಹುದು.

❑❑

ಮಾಸ್ತಿಯವರ ಕಥೆಗಳಲ್ಲಿ ಮಹಿಳೆ

• ಶಾಲಿನಿ ರಘುನಾಥ

ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿಮಾಡಿದ್ದರೂ ಅವರನ್ನು ಮುಖ್ಯವಾಗಿ ಸಣ್ಣಕತೆಗಾರರೆಂದೇ ಗುರುತಿಸಲಾಗುತ್ತದೆ. ಅವರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದ್ದು, ಭಾರತೀಯ ಸಮಾಜ ಹೊಸಬದಲಾವಣೆಗಳಿಗೆ ತೆರೆದುಕೊಳ್ಳತೊಡಗಿದ್ದ ಕಾಲದಲ್ಲಿ. ಆಗ ಮಾಸ್ತಿ, ಸಂಪ್ರದಾಯದಲ್ಲಿರುವ ಒಳಿತನ್ನು ಇಟ್ಟುಕೊಂಡು ಬದಲಾಗುತ್ತಿರುವ ಸಮಾಜದ ಅವಶ್ಯಕತೆಗನುಸಾರವಾಗಿ ಹೊಸ ಉತ್ತಮಾಂಶಗಳನ್ನು ಅಳವಡಿಸಿಕೊಂಡು ಸಾಹಿತ್ಯದ ಮೂಲಕ ಹೊಸತನ್ನು ಸಾಧಿಸಲು ಪ್ರಯತ್ನಿಸಿದರು. ಪಾತ್ರಗಳ ಕ್ರಿಯೆಗಿಂತ ಅವರ ಸ್ವಭಾವ ವಿಶ್ಲೇಷಣೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಈ ಕಾರಣದಿಂದ ಅವರ ಕತೆಗಳಲ್ಲಿ 'ಉದಾರ ಮಾನವತಾದಿ' ಧೋರಣೆ ಗೋಚರಿಸಿತು. ವ್ಯಾಪಕವಾದ ಜೀವನಾನುಭವ, ಆಳವಾದ ಜೀವನ ಶ್ರದ್ಧೆ ಮಾನವೀಯ ಅನುಕಂಪ ಇವುಗಳಿಂದ ಪರಿಪಕ್ವಗೊಂಡ ಮನಸ್ಸು ಅವರದ್ದು. ಜೊತೆಯ ಜೀವನದಲ್ಲಿ ಸಹಾನುಭೂತಿಯಿಂದ ಬೆರೆತು ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವ ಆಸೆಯಿಂದ ತಾವು ಕತೆಗಳನ್ನು ಬರೆದುದಾಗಿ ಮಾಸ್ತಿ ಹೇಳಿಕೊಂಡಿದ್ದಾರೆ. ಅಂತಯೇ ಆತ್ಮೀಯರೊಂದಿಗೆ ಮಾತನಾಡುವ ಆಪ್ತಶೈಲಿಯಲ್ಲಿ ಅವರ ಕತೆಗಳು ನಿರೂಪಿಸಲ್ಪಟ್ಟವೆ. ಅವರ ದೃಷ್ಟಿಯಲ್ಲಿ ಕತೆ ಎಂದರೆ 'ಒಂದು ದರ್ಶನವನ್ನು ಹೊಮ್ಮಿಸುವ ರಚನೆ'.[?]

ಮಾಸ್ತಿಯವರ ಕತೆಗಳನ್ನು ಅಧ್ಯಯನಿಸುವ ಮುನ್ನ ಅವರ ಕಥಾರಚನೆಯಲ್ಲಿ ಕಂಡುಬರುವ ಮಿತಿಗಳನ್ನು ಅರಿತುಕೊಳ್ಳವುದು ವಿಹಿತ. ಮೊದಲನೆಯದಾಗಿ, ಸಣ್ಣಕತೆಯ ಸ್ವರೂಪದಲ್ಲಿಯೇ ಒಂದು ಮಿತಿ ಇದೆ. ಕಾದಂಬರಿಯ ವಿಶಾಲ ಹರಹು ಅದಕ್ಕೆ ದೊರೆಯದು. ಜೊತೆಗೆ ಸಣ್ಣಕತೆಗಳಲ್ಲಿ ಸಮಾಜ ಅಷ್ಟು ಮುಖ್ಯವಾಗುವದಿಲ್ಲ. ಎರಡನೆಯದಾಗಿ, ಮಾಸ್ತಿ ತಮ್ಮ ಕತೆಗಳಿಗೆ ಬಳಸಿಕೊಂಡ ತಂತ್ರವೂ ಅವರಿಗೆ ಕೆಲವು ಮಿತಿಗಳನ್ನು ಹೇರಿದೆ. ಕತೆಗಳನ್ನು ಮಾಸ್ತಿ ನೇರವಾಗಿ ಹೇಳುವುದೇ ಇಲ್ಲ. ಅವರ ಕತೆಗಳು ಯಾರೋ,ಯಾರಿಗೋ ಯಾವಾಗಲೋ ಹೇಳಿದಂತಿರುತ್ತವೆ. ಅಂದರೆ, ಕತೆ ನಡೆದ ಕಾಲಕ್ಕೂ ಅದನ್ನು ನಿರೂಪಿಸುತ್ತಿರುವ ಕಾಲಕ್ಕೂ ಮಧ್ಯೆ ಸಾಕಷ್ಟು ಅಂತರವಿರುತ್ತದೆ. ವರ್ತಮಾನದಲ್ಲಿ ಅಥವಾ ಘಟನೆ ನಡೆಯುತ್ತಿದ್ದಂತೆ ನಿರೂಪಿಸುವ ತಂತ್ರ–ಹೆಚ್ಚು ಆವೇಶಭರಿತವಾಗಿರುತ್ತದೆ, ಭಾವನೆಗಳು ತೀವ್ರತರದ್ದಾಗಿರುತ್ತವೆ. ಆದರೆ ಮಾಸ್ತಿಯವರಲ್ಲಿ ಘಟನೆಯ ಕಾವುಗಳೆಲ್ಲ ಆರಿದ ಮೇಲೆ, ನಿರೂಪಣೆ ಪ್ರಾರಂಭವಾಗುತ್ತದೆ. ಆದುದರಿಂದಲೇ ಅವರ ಕತೆಗಳನ್ನು ಕುರಿತು 'ನಿರುದ್ವಿಗ್ನ ಅವಲೋಕನಶಕ್ತಿಯ' 'ಭಾವೋದ್ರೇಕ

ವಿಲ್ಲದ ಸಮಚಿತ್ತದ' 'ಮಾಗಿದ ಜೀವನಾನುಭವದ ಪರಿಪಾಕದ' ಕತೆಗಳೆಂದು ವಿಮರ್ಶಕರು ಕರೆದಿದ್ದಾರೆ.[೨] ಮೂರನೆಯದಾಗಿ, ಮಾಸ್ತಿ ನವ್ಯರಂತೆ ಪರಂಪರೆಯನ್ನು ವಿಶೇಷವಾಗಿ ಪ್ರಶ್ನಿಸುವ, ವ್ಯಕ್ತಿತ್ವವನ್ನು ಶೋಧಿಸುವ ಸಾಹಸಕ್ಕೆ ಹೋಗುವುದಿಲ್ಲ. ಸಾಂಪ್ರದಾಯಿಕ ಕೌಟುಂಬಿಕ ಚೌಕಟ್ಟಿನೊಳಗೇ ವ್ಯಕ್ತಿಗಳ ಆಗು–ಹೋಗುಗಳನ್ನು, ಗುಣ–ಸ್ವಭಾವಗಳನ್ನು ಚಿತ್ರಿಸುವ ಪ್ರಯತ್ನ ಮಾಡುತ್ತಾರೆ. ಇಂಥ ಮಿತಿಗಳ ಮಧ್ಯೆಯೂ ಮಾಸ್ತಿ ಅಗಾಧವಾದುದನ್ನು ಸಾಧಿಸಿದ್ದಾರೆ. ಮುಂದೆ ಬಂದ ನವ್ಯ ಪ್ರವೃತ್ತಿಯವರಿಗೆ ಮಾಸ್ತಿ ರುಚಿಸಿದಂತೆ ಕಾಣಿಸದಿದ್ದರೂ, ನಂತರದಲ್ಲಿ ಬರೆಯತೊಡಗಿದ ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರು ಮಹಾದೇವ ಮುಂತಾದವರಲ್ಲಿ ಮಾಸ್ತಿ ಪರಂಪರೆ ಮುಂದುವರಿಕೆ ಪಡೆದುಕೊಂಡಿರುವುದನ್ನು ಕನ್ನಡ ಸಾರಸ್ವತಲೋಕ ಈಗಾಗಲೇ ಗಮನಿಸಿದೆ.

ಪ್ರಸ್ತುತ ಪ್ರಬಂಧ ಮಾಸ್ತಿಯವರ ಕತೆಗಳಲ್ಲಿ ಮಹಿಳೆಯ ಚಿತ್ರಣವನ್ನು ಕುರಿತದ್ದು ಮುಕ್ತಮಾನವತಾವಾದದ ದೃಷ್ಟಿಯಿಂದಲೇ ಸ್ತ್ರೀಯನ್ನು ಅವಳ ವೈವಿಧ್ಯಮಯವಾದ ಬದುಕನ್ನು ಮಾಸ್ತಿ ನೋಡಿದ್ದಾರೆ. ಗಂಡು–ಹೆಣ್ಣುಗಳ ಸಂಬಂಧದ ಚಿತ್ರಣ ಸಾಕಷ್ಟು ವ್ಯಾಪಕವಾಗಿಯೇ ಅವರ ಕತೆಗಳಲ್ಲಿ ನಿರೂಪಿತವಾಗಿದೆ. ಗಂಡು–ಹೆಣ್ಣಿನ ಆಕರ್ಷಣೆ ಸಹಜವಾದುದೆಂದು ಭಾವಿಸುವ ಮಾಸ್ತಿ ಸಂಪ್ರದಾಯವನ್ನು ತೀವ್ರವಾಗಿ ಕೆಣಕದೆ, ಸಮಸ್ಯೆಯ ಸಾಮಾಜಿಕ ಮೂಲಕ್ಕೂ ವಿಶೇಷವಾಗಿ ಹೋಗದೆ, ವೈಯಕ್ತಿಕ ಹಂತದಲ್ಲಿ, ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿದ ಪಾತ್ರಗಳನ್ನು ಸೃಷ್ಟಿಸುತ್ತಾರೆಂದು ಅಭಿಪ್ರಾಯಪಡಲಾಗುತ್ತದೆ.[೪] ಆದರೆ ನವ್ಯ ಲೇಖಕರಂತೆ ಅವರು ಲೈಂಗಿಕ ಸ್ವಚ್ಛಂದತೆಯನ್ನು ಒಂದು ಇತ್ಯಾತ್ಮಕ ಅಂಶವೆಂಬಂತೆ ಸ್ವೀಕರಿಸುವುದಿಲ್ಲ. ಸಾಮಾಜಿಕ ಜವಾಬ್ದಾರಿ ವ್ಯಕ್ತಿಗೆ ಸಂಬಂಧಿಸಿದ್ದು. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಭಾವದ ಹಿನ್ನಲೆಯಲ್ಲಿ ತನ್ನದೇ ಆದ ಪರಿಹಾರ ಕಂಡುಕೊಳ್ಳಬೇಕೆನ್ನುವದು ಅವರ ಅಭಿಪ್ರಾಯ. ಒಳಿತಿಗಾಗಿಯೇ ನಡೆಯುವ ಸಾಮಾಜಿಕ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಸುಧಾರಣಾವಾದಿಯ ನಿಲುವು ಮಾಸ್ತಿಯವರದ್ದು.

ಹೆಣ್ಣಿನ ಬಗ್ಗೆ ಮಾಸ್ತಿಯವರಿಗೆ ಗೌರವ ಅಪಾರ. ಅವಳ ಅಸಹಾಯಕತೆ, ದುಃಖ–ದುಮ್ಮಾನಗಳಿಗೆ ಅವರ ಹೃದಯ ಬಹುವಾಗಿ ಮಿಡಿದಿದೆ. ಹೆಣ್ಣಿನ ದುಃಖಕ್ಕೆ ಕಾರಣವಾದ ಸಮಾಜದ ಮೇಲೆ ಅವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ. ಅವರ ಅನೇಕ ಕತೆಗಳಲ್ಲಿ ಹೆಣ್ಣು ಕೇಂದ್ರಬಿಂದುವಾಗಿದ್ದಾಳೆ. ಕೇವಲ ಸುಗುಣೆ, ದುಷ್ಟೆ ಎಂಬ ಬಿಳುಪು–ಕಪ್ಪಿನ ಗುಣ ಸ್ವಭಾವಕ್ಕೆ ಎರವಾಗದೇ, ಮಾನವ ಸ್ವಭಾವದ ವಿವಿಧ–ವಿಚಿತ್ರ ನಡವಳಿಕೆಗಳನ್ನು ವ್ಯಕ್ತಪಡಿಸುವ ಹೆಣ್ಣುಗಳನ್ನು ಮಾಸ್ತಿ ತಮ್ಮ ಕತೆಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ. ಈ ಕಾರಣದಿಂದಲೇ ಸಾಂಪ್ರದಾಯಿಕ ಸಾಮಾಜಿಕ ಚೌಕಟ್ಟಿನಲ್ಲಿಯೂ ನಮಗೆ ಹೆಣ್ಣಿನ ವಾಸ್ತವಿಕ ಹಾಗೂ ವೈವಿಧ್ಯಪೂರ್ಣ ಚಿತ್ರಣ ಮಾಸ್ತಿಯವರಲ್ಲಿ ದೊರೆಯಲು ಸಾಧ್ಯವಾಗಿದೆ.

ಮಾಸ್ತಿಯವರ ಸಮಗ್ರ ಕತೆಗಳ ಮೇಲೆ ಕಣ್ಣೋಡಿಸಿದರೆ, ಪ್ರಥಮವಾಗಿ ನಮ್ಮ ಕಣ್ಣಿಗೆ ಬೀಳುವ ಸ್ತ್ರೀ ಪಾತ್ರಗಳು ಕಾರಣಾಂತರದಿಂದ ಗಂಡನಿಂದ ದೂರವಾದವು. ಮಾಸ್ತಿ ಇಂಥ ಪಾತ್ರಗಳ ಬಗ್ಗೆ ಅನುಕಂಪ ತೋರಿಸುತ್ತಾರೆ. ಆದರೆ ಅದೇ ಸಂದರ್ಭದಲ್ಲಿ ಆ ಪಾತ್ರ ಸನ್ನಿವೇಶದ ಪರಿಣಾಮದಿಂದಲೇ ಗಟ್ಟಿಗೊಂಡು ತನ್ನೆಲ್ಲ ಸಮಸ್ಯೆಗಳನ್ನು, ದುಃಖಗಳನ್ನು ಎದುರಿಸಿ ಸಿಲ್ಲಬಲ್ಲ ವ್ಯಕ್ತಿತ್ವವನ್ನು ಪಡೆದುಕೊಳ್ಳುವಂತೆ ಚಿತ್ರಿಸುತ್ತಾರೆ.

ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಹೆಚ್ಚಿನ ಶೋಷಣೆಗೆ ಅಥವಾ ದುಃಖಕ್ಕೆ ಒಳಗಾಗಿದ್ದಾಳೆ. ಅದರಲ್ಲೂ ಬೇಜವಾಬ್ದಾರಿ ಗಂಡಸಿನ ಕೈ ಹಿಡಿದರಂತೂ ಅವಳು ನಿತ್ಯ ಕಣ್ಣೀರಿನಲ್ಲಿ ಕೈ ತೊಳೆಯಬೇಕು. ತನ್ನ ಹಾಗೂ ಮಕ್ಕಳ ಯೋಗಕ್ಷೇಮವನ್ನಲ್ಲದೇ ಅತ್ತೆ–ಮಾವಂದಿರ, ಮತ್ತೆ ಸಂಬಂಧಿಕರ ಪೋಷಣೆಯ ಭಾರವನ್ನು ಕೆಲವೊಮ್ಮೆ ಹೊರಬೇಕಾಗುತ್ತದೆ. ಕೈ ಹಿಡಿದ ಹೆಂಡತಿಯನ್ನು ತ್ಯಜಿಸುವ ಅಥವಾ ಅವಳಿಂದ ದೂರವಾಗುವ ಮಾಸ್ತಿಯವರ ಕತೆಗಳಲ್ಲಿ **ಕಾಮನ ಹಬ್ಬದ ಕತೆ, ಮುನೀಶ್ವರನ ಮಠ, ಸನ್ಯಾಸವಲ್ಲದ ಸನ್ಯಾಸ, ಮೇಲೂರಿನ ಲಕ್ಷ್ಮಮ್ಮ, ಕೃಷ್ಣಮೂರ್ತಿಯ ಹೆಂಡತಿ, ಆಚಾರ್ಯರ ಪತ್ನಿ, ಸಾರಿಪುತ್ರನ ಕೊನೆಯ ದಿನಗಳು** ಮುಂತಾದವು ಮುಖ್ಯವೆನಿಸುತ್ತವೆ. **ಕಾಮನ ಹಬ್ಬದ ಕತೆ**ಯಲ್ಲಿ, ಮನೆಬಿಟ್ಟು ಸ್ವಾಮಿಯ ಹಿಂದೆ ಓಡಿಹೋದ ಶೀನಿ, ಕಾಮನ ಹಬ್ಬದ ದಿನ ಮತ್ತೆ ಊರಿಗೆ ಹಿಂತಿರುಗಿ ಬರುತ್ತಾನೆ. ವೈಧವ್ಯವನ್ನು ಮುಂದಿನ ಜನ್ಮದಲ್ಲಾದರೂ ಹೋಗಲಾಡಿಸಿಕೊಳ್ಳಲು ಆಚರಿಸಿದ ಸಾವಿತ್ರಮ್ಮನ ವ್ರತ, ಈ ಜನ್ಮದಲ್ಲಿಯೇ ಫಲಕೊಡುತ್ತದೆ. ಶೀನಿ ಜೀವಂತವಾಗಿ ಹಿಂತಿರುಗಿ ಬಂದದ್ದು ಎಷ್ಟು ಆಕಸ್ಮಿಕವೋ, ಸಾವಿತ್ರಿ ಅವನಿಗಾಗಿ ಪರಿತಪಿಸುತ್ತಾ ವ್ರತ–ನೇಮಗಳನ್ನು ಆಚರಿಸಿದ್ದೂ ಅಷ್ಟೇ ಸತ್ಯ. ಇಂಥ ಕತೆಗಳಲ್ಲಿ ಮಾಸ್ತಿ ವ್ರತ–ನಂಬಿಕೆಗಳು ಹೆಚ್ಚಾಗಿ ಹೆಣ್ಣಿನಲ್ಲಿ ಮನೆಮಾಡಿಕೊಂಡಿರುವದನ್ನು ಮತ್ತು ಕಾಕತಾಳೀಯವೆಂಬಂತೆ ಅಂಥ ನಂಬಿಕೆಗಳು ನಿಜವಾಗಿರುವುದನ್ನು ತೋರಿಸುತ್ತಾರೆ. ಹೀಗಾಗಿ ನಂಬಿಕೆಗಳ ರಹಸ್ಯ ಇಂಥಲ್ಲಿ ಬಯಲಾಗುವ ಸಾಧ್ಯತೆಗಳೇ ಇಲ್ಲವಾಗುತ್ತವೆ. ಮುನೀಶ್ವರನ ಮಠವಲ್ಲಿ ಹೆಂಡತಿಯ ನಡತೆಯ ಬಗ್ಗೆ ಸಂಶಯಪಟ್ಟು, ಮನೆ ಬಿಟ್ಟು ಹೊರಟುಹೋದ ರಾಮಯ್ಯ ಮುನೀಶ್ವರನ ರೂಪವಲ್ಲಿ ಊರಿಗೆ ಬಂದಾಗ, ರಾಜಮ್ಮ ಅವನ ಗುರುತು ಹಿಡಿಯುತ್ತಾಳೆ. ಅವಳು ಪರಿಪರಿಯಿಂದ ಬೇಡಿಕೊಂಡರೂ ಕೇಳದೆ, ಮತ್ತೆ ಊರುಬಿಟ್ಟು ಹೋಗುತ್ತಾನೆ. ಪತಿವಿರಹ ಸೈರಿಸಲಾರದೇ ಹುಚ್ಚಿಯಾಗಿ ಬೀದಿಪಾಲಾಗಿ ಸಾಯುತ್ತಾಳೆ, ಆ ಹೆಣ್ಣು. ಈ ಸಂದರ್ಭದಲ್ಲಿ ರಾಮಯ್ಯನ ವರ್ತನೆಯ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯವನ್ನು ಕುರಿತು ಮಾಸ್ತಿ ಕೆಲವು ಮಾತನ್ನಾಡಿದ್ದಾರೆ. 'ಹೆಂಡತಿ ತಪ್ಪಿ ನಡೆದರೆ ಗಂಡ ಅವಮಾನಪಡುವದು ಏಕೆ ಎನ್ನುವುದನ್ನು ನಿಶ್ಚಯವಾಗಿ ಹೇಳುವುದು ಕಷ್ಟ . ಪ್ರಾಯಶಃ ಈ ಅವಮಾನದ ಮುಖ್ಯ ಕಾರಣ ತಾನು ಜೀವನದಲ್ಲಿ ಸೋತೆ ಎಂಬ ಭಾವವಿರಬೇಕು. ಹೆಂಡತಿಯನ್ನು ಒಪ್ಪಿಸಿ ಅವಳ ಮನಸ್ಸನ್ನು ತನ್ನದಾಗಿ ಉಳಿಸಿಕೊಳ್ಳುವ ಭಾರ ಗಂಡನದು. ಈ ಹೊಣೆಯನ್ನು ಇವನು ಸಾಧಿಸಲಿಲ್ಲ ಜೀವನದ ಪರೀಕ್ಷೆಯಲ್ಲಿ ಸೋತನು.

ಹೆಂಡತಿ ಸರಿಯಾದವಳಾಗಿದ್ದು ಗಂಡನ ಯೋಗ್ಯತೆ ಕಡಿಮೆಯಾಗಿದ್ದರೆ ಮಾತ್ರ ಈ ವಾದ ಅನ್ವಯಿಸುವದಿಲ್ಲ." ಹೀಗೆ ಹೇಳುವಲ್ಲಿ ಗಂಡಿಗೊಂದು ನೀತಿ, ಹೆಣ್ಣಿಗೊಂದು ನೀತಿ ಇರುವ ಸಾಮಾಜಿಕ ನ್ಯಾಯವನ್ನು ಸಾತ್ವಿಕ ರೀತಿಯಲ್ಲಿಯೇ ಮಾಸ್ತಿ ವಿರೋಧಿಸಿರುವದನ್ನು ಗಮನಿಸಬಹುದು. **ಸನ್ಯಾಸವಲ್ಲದ ಸನ್ಯಾಸದಲ್ಲಿ** ತಾನು ಪ್ರೀತಿಯಿಂದ ತಂದ ಎಳೆಬೆಂಡಿಕಾಯಿ ಹುಳಿಯನ್ನು ತಕ್ಷಣವೇ ಮಾಡಿ ಹಾಕಲಿಲ್ಲವೆಂದು ಕೋಪಗೊಂಡು ಮನೆ ಬಿಟ್ಟು ಹೊರಟುಹೋದ ಮೇಷ್ಟ್ರು ನರಸಿಂಹಯ್ಯ, ಸನ್ಯಾಸಿಯಾಗಿ ಮತ್ತೆ ಅದೇ ಊರಿಗೆ ಹಿಂತಿರುಗಿದಾಗ ಅತ್ತೆಯಮನೆಯಲ್ಲಿ ಹೆಂಡತಿ ಮಾಡಿದ ಬೆಂಡೆಕಾಯಿ ಹುಳಿಯನ್ನುಂಡು ಹಳೆಯ ಜೀವನವನ್ನು ಜ್ಞಾಪಿಸಿಕೊಳ್ಳುತ್ತಾನೆ. ಇದನ್ನೇ ಕಾಯುತ್ತಿದ್ದ ಅವನ ಅತ್ತೆ, ನಮ್ಮ ಮನೆ, ನನ್ನ ಹೆಂಡತಿ ಅಂತ ಬಾಳೋದಕ್ಕೆ ಸಮ ಇನ್ನು ಬಾಳುವೆಯುಂಟೇ? ದೊಡ್ಡಮನಸ್ಸು ಮಾಡಿ ಹೆಂಡತೀನ ಒಪ್ಪಿಕೊಳ್ಳಿ ಜೊತೆಯಾಗಿ ಬಾಳಿ, ಸನ್ಯಾಸ ಸಾಕು ಎನ್ನುತ್ತಾಳೆ. ಅಂತೂ ಬೆಂಡೇಕಾಯಿ ಹುಳಿಯಿಂದಲೇ ಸನ್ಯಾಸಿಯಾದ ನರಸಿಂಹಯ್ಯ ಮತ್ತೆ ಆ ಹುಳಿಯಿಂದಲೇ ಸನ್ಯಾಸವನ್ನು ತ್ಯಜಿಸುವಂತಾಗುತ್ತದೆ. ಅಂತೂ ಕ್ಷುಲ್ಲಕ ಕಾರಣಗಳಿಗಾಗಿ ಮನೆಬಿಟ್ಟು ಹೋಗುವ ಗಂಡಸಿನ ಬಗ್ಗೆ ಆದರ ತೋರಿಸಿದ ಮಾಸ್ತಿ, ಈ 'ಗಂಡಸರು'ಗಳಿಗೆ ಜ್ಞಾನೋದಯವಾಗುವ ಹೊತ್ತಿಗೆ ಹೆಣ್ಣಿನ ಜೀವನದಲ್ಲಿ ಎಷ್ಟೋ ಕಠಿಣತರ ಸನ್ನಿವೇಶಗಳು ಬಂದು ಹೋಗಿರುವುದನ್ನು ಚಿತ್ರಿಸಿ, ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ಇಷ್ಟಾದರೂ 'ತಗ್ಗಿ ಬಾಳಬೇಕಾದವಳು ಹೆಣ್ಣೇ' ಎಂಬ ಇಂಗಿತ ಮಾತ್ರ ಬದಲಾದಂತಿಲ್ಲ.

ಮೇಲೂರಿನ ಲಕ್ಷ್ಮಮ್ಮ–ಕುರುಡುತಾಯಿ–ಮಕ್ಕಳ ದಾರುಣವಾದ ಕತೆ. ಅಸಹಾಯ ನೋವನ್ನು ಬದುಕಿನ ಕ್ರೌರ್ಯವನ್ನು ಮಾಸ್ತಿ ಸಂಯಮದಿಂದಲೇ ಇಲ್ಲಿ ಚಿತ್ರಿಸುತ್ತಾರೆ. ತಾಯಿಯಷ್ಟೇ ಅಲ್ಲ, ಇಬ್ಬರು ಹೆಣ್ಣುಮಕ್ಕಳೂ ಕುರುಡರಾಗಿರುವುದು, ಸನ್ನಿವೇಶದ ದಾರುಣತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಅಪ್ರಾಪ್ತವಯಸ್ಸಿನಲ್ಲಿ ಆ ಮಕ್ಕಳಿಬ್ಬರೂ ಸತ್ತು, ಮುಂದೆ ಅವರು ದುಃಖಪಡುವುದು–ಯಾತನೆಯನ್ನು ಅನುಭವಿಸುವುದು ಕಡಿಮೆಯಾಯಿತೆಂದೆನ್ನಿಸಿದರೂ ಬೇಜವಾಬ್ದಾರಿಯ ಗಂಡ, ವೈರಾಗ್ಯಹೊಂದಿ ಊರು ಬಿಟ್ಟು ಕಾಶಿಗೆ ಹೋಗುವದು ಸರಿಯೆನ್ನಿಸುವುದಿಲ್ಲ. ಗಂಡನಿಗಾಗಿ ಪರಿತಪಿಸುತ್ತಿರುವ ಮಕ್ಕಳನ್ನು ಕಳೆದುಕೊಂಡ ಲಕ್ಷ್ಮಮ್ಮನ ನೋವಿಗೆ ಪರಿಹಾರವೇ ಇಲ್ಲ. ಅವನನ್ನು ಹುಡುಕುತ್ತಾ ಅಲೆದು ಅವಳು ಹುಚ್ಚಿಯಾಗುತ್ತಾಳೆ. ಕೃಷ್ಣಮೂರ್ತಿಯ ಹೆಂಡತಿಯಲ್ಲೂ ಗಂಡ ಸತ್ತಿದ್ದು ತಿಳಿಯದೇ ಅವನ ಬರುವಿಕೆಗಾಗಿ ಕಾದುಕುಳಿತುಕೊಂಡಿರುವ ಅವನ ಹೆಂಡತಿ, ಗಂಡ ಮರಣಹೊಂದಿರುವ ಸುದ್ದಿಯನ್ನು ಕದ್ದು ಕೇಳಿದವಳೇ ಆಘಾತ ಹೊಂದಿದವಳಾಗಿ, ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕತೆಯ ಕೊನೆಯಭಾಗದಲ್ಲಿ ಉಳಿದವರು ಅವಳಿಗಾಗಿ ಹುಡುಕುವ ಆತಂಕದ ದೃಶ್ಯ ಮನಕಲಕುವಂತಿದೆ. ಜೊತೆಗೆ ಆ ಬಾವಿಯ ಸುತ್ತ–ಮುತ್ತಲಿನ ಪ್ರಶಾಂತ ವಾತಾವರಣವನ್ನು ವರ್ಣಿಸುವವರ ಮೂಲಕ ವಾಸ್ತವಕ್ಕೆ ವೈದೃಶ್ಯವನ್ನು ಕಲ್ಪಿಸಿ ದುರಂತದ ಪರಿಣಾಮವನ್ನು ಹೆಚ್ಚಿಸುವ ಕತೆಗಾರನ ತಂತ್ರ ಪರಿಣಾಮಕಾರಿಯಾಗಿ ಮೂಡಿಬಂದಿದೆ. ೪೦

ವರ್ಷಗಳ ಹಿಂದೆಯೇ ಮನೆಬಿಟ್ಟು ಹೋಗಿ ಸನ್ಯಾಸಿಯಾಗಿದ್ದ ಆಚಾರ್ಯರನ್ನು ಹುಡುಕಿಕೊಂಡು ಬಂದ ಅವರು ಜ್ವರದಿಂದ ನರಳುತ್ತಿರುವಾಗ, ಸ್ಪರ್ಶಮಾತ್ರದಿಂದ ತನ್ನ ಮೇಲೆ ಆ ಜ್ವರವನ್ನು ತಂದುಕೊಂಡು ಪತಿಯ ಆಯುಷ್ಯ–ಆರೋಗ್ಯಗಳನ್ನು ಹೆಚ್ಚಿಸಿದ ತ್ಯಾಗಮಯಿ, ಆಚಾರ್ಯರ ಪತ್ನಿ ತನ್ನ ಮೊಂಡತನವೇ ಗಂಡನ ಸನ್ಯಾಸಕ್ಕೆ ಕಾರಣವೆಂಬ ಕೊರಗೇ ನಾಲ್ವತ್ತು ವರ್ಷಗಳ ಮೇಲೆ ಅವಳಿಂದ ಇಂಥ ಜೀವತ್ಯಾಗವನ್ನು ಮಾಡಿಸುತ್ತದೆ. ಆದರೆ ಹೆಣ್ಣಿಗಿರುವ ಈ ರೀತಿಯ ಆತ್ಮಶೋಧನ ಅಥವಾ ಪಶ್ಚಾತ್ತಾಪ, ಪ್ರಾಯಶ್ಚಿತ ಕಲ್ಪನೆಗಳು ಮಾಸ್ತಿಯವರ ಗಂಡು ಪಾತ್ರಗಳಲ್ಲಿ ಎಲ್ಲಿಯೂ ಕಂಡುಬರುವದಿಲ್ಲ. ಸಾರಿಪುತ್ರನ ಕೊನೆಯದಿನಗಳಲ್ಲಿ ಮನೆಬಿಟ್ಟು ಹೋದ ನರಸಿಂಹಶರ್ಮ, ಬೌದ್ಧಭಿಕ್ಷು ಸಾರಿಪುತ್ರನಾಗಿ ಊರಿಗೆ ಬರುತ್ತಾನೆ. ಗಂಡನಿಲ್ಲದಿದ್ದಾಗಲೂ ವೇದವತಿ ತನ್ನ ಅತ್ತೆ–ಮಾವಂದಿರನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಅವನು ಹಿಂತಿರುಗಿ ಬಂದಾಗಲೂ ಬೇಸರ ವ್ಯಕ್ತಪಡಿಸದೇ ಅವನಿಂದಲೇ ದೀಕ್ಷೆಪಡೆದು ಭಿಕ್ಷುಣಿಯಾಗಿ ಅಜಂತಾ–ಬೌದ್ಧ ವಿಹಾರಗಳ ನಿರ್ಮಾಣಕಾರ್ಯದಲ್ಲಿ ತನ್ನ ಸಹಾಯಸಲ್ಲಿಸುತ್ತಾಳೆ. ಇಲ್ಲಿ, ಹೆಣ್ಣಿನ ಸಹನೆ–ತ್ಯಾಗ ಮನೋಭಾವಗಳಿಗೆ ಪ್ರಾಶಸ್ತ್ಯಕೊಡಲಾಗಿದೆ. ನರಸಿಂಹಶರ್ಮ–ಸಾರಿಪುತ್ರನಾದದ್ದು ಅವನ ಜೀವನದಲ್ಲಿ ಬಹುದೊಡ್ಡ ತಿರುವಾಗಿದ್ದರೂ ಸಹ ತಂದೆ–ತಾಯಿ, ಹೆಂಡತಿಯರ ವಿಷಯದಲ್ಲಿ ಅವನು ಕರ್ತವ್ಯ ವಿಮುಖನೇ. ಆದರೆ ಅವನ ಇಂಥ ಬೇಜವಾಬ್ದಾರಿ ನಡತೆಗೆ ವೇದವತಿಯಿಂದ ಯಾವುದೇ ರೀತಿಯ ಆಕ್ಷೇಪ ಅಥವಾ ವಿರೋಧ ವ್ಯಕ್ತಪಡಿಸದಿರುವದು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗುಡಿಗಿರುವ ಸ್ವಾತಂತ್ರ್ಯ ಹಾಗೂ ಯಾವುದೇ ಸಂದರ್ಭದಲ್ಲಿಯೂ ಹೆಣ್ಣು ತುಟಿಪಿಟಿಕ್ಕೆನ್ನಿಸದೇ ಎಲ್ಲವನ್ನು ಸಹಿಸಿಕೊಂಡಿರಬೇಕೆನ್ನುವ ಸಾಮಾಜಿಕ ಮನೋಭಾವದಲ್ಲಿರುವ ದೋಷ. ಇದ್ದುದರಲ್ಲಿ ಕೊನೆಗೆ ತಾನು ಭಿಕ್ಷುಣಿಯಾಗಿ ಒಂದು ರೀತಿಯ ಸ್ವಾತಂತ್ರ್ಯವನ್ನು ಅವಳು ಪಡೆದುಕೊಂಡಳೆಂಬುದು ಸಮಾಧಾನದ ಸಂಗತಿ.

ಹೀಗೆ ಯಾವುದೇ ಕಾರಣಕ್ಕಾಗಿ ಗಂಡನಿಂದ ಅಗಲಿದ ಹೆಣ್ಣುಗಳು,ದಾರುಣವಾದ ತಮ್ಮ ದುಃಖ ಸಹಿಸಿಕೊಳ್ಳಲಾಗದೇ ಹುಚ್ಚರಾಗುತ್ತಾರೆ, ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅಪರೂಪಕ್ಕೆಂಬಂತೆ ಓಡಿಹೋದ ಗಂಡ ಹಿಂತಿರುಗಿ ಬಂದು ಮತ್ತೆ ಸಂಸಾರಿಯಾಗಿ ಜೊತೆಗೂಡುತ್ತಾನೆ. ವಸ್ತುವನ್ನು ಹೆಚ್ಚು ವಿಸ್ತರಿಸದೇ, ಭಾವವನ್ನು ಹಿಂಜದೇ ಘಟನೆಗಳನ್ನು ಕೇವಲ ಕೆಲವು ರೇಖೆಗಳಲ್ಲಿ ಚಿತ್ರಿಸಿ, ಓದುಗರ ಮೇಲೆ ಅಗಾಧ ಪರಿಣಾಮವುಂಟಾಗುವಂತೆ ಮಾಡುವ ಮಾಸ್ತಿಯವರ ಶೈಲಿ ಅನನ್ಯವಾದುದು. ಕ್ರಿಯೆಗಿಂತ ಪಾತ್ರಗಳ ನಡವಳಿಕೆಗೆ, ಸ್ವಭಾವ ವಿಶ್ಲೇಷಣೆಗೆ ಅವರು ಹೆಚ್ಚು ಒತ್ತುಕೊಡುವದನ್ನು ಗಮನಿಸಬೇಕು. ಇಂಥಲ್ಲಿ ಮಾಸ್ತಿ ಸಾಂಪ್ರದಾಯಿಕ ಕತೆಗಾರರಿಂದ ಭಿನ್ನರಾಗಿ ನಿಲ್ಲುತ್ತಾರೆ. ಕಾರಂತ, ಭೈರಪ್ಪ ಮುಂತಾದವರ ಕಾದಂಬರಿಗಳಲ್ಲಿಯೂ ಮನೆಬಿಟ್ಟು ಓಡಿ ಹೋಗುವ, ಸನ್ಯಾಸಿಯಾಗುವ ಗಂಡುಗಳನ್ನು ನಾವು ನೋಡುತ್ತೇವಾದ್ದರಿಂದ ನವೋದಯಕಾಲದ ಸಮಾಜದಲ್ಲಿ ಇಂಥ ಘಟನೆಗಳು ಅಲ್ಲಲ್ಲಿ ಜರುಗುತ್ತಿದ್ದು, ಸಂವೇದನಾಶೀಲ ಲೇಖಕರ ಮನಸ್ಸನ್ನು ಅವು ಗಾಢವಾಗಿ ಕಲಕಿರಬೇಕು

ಎಂದೆನ್ನಿಸುತ್ತದೆ. ಇಂಥಲ್ಲಿ ಸಾಮಾಜಿಕ ನ್ಯಾಯದ ಕಲ್ಪನೆ ಹಾಗೂ ತನ್ನ ತಪ್ಪಿಲ್ಲದೇ ದುಃಖವನ್ನು ಅನುಭವಿಸಬೇಕಾಗಿ ಬಂದ ಹೆಣ್ಣನ್ನು ಕುರಿತು ಅನುಕಂಪ ಮಾಸ್ತಿಯವರ ಕತೆಗಳಲ್ಲಿ ವ್ಯಕ್ತವಾಗಿದೆ. ಆದರೆ ರಾಜೇಂದ್ರ ಚೆನ್ನಿ ಈಗಾಗಲೇ ಗಮನಿಸಿರುವಂತೆ ಮಾಸ್ತಿ ವ್ಯಕ್ತಿಯ ಸ್ವಭಾವದ ಪರಿಧಿಯ ಆಚೆಗಿರುವ ವ್ಯವಸ್ಥೆಯನ್ನು ಕೆದಕುವಂತೆ ಬರೆಯುವದಿಲ್ಲ ಎನ್ನುವುದೊಂದು ಕೊರತೆಯಾಗಿದೆ.

ಮಾಸ್ತಿಯವರು, ಕುಟುಂಬ ವ್ಯವಸ್ಥೆಯನ್ನು ಪುರಸ್ಕರಿಸುವವರು. ಹೆಣ್ಣಾಗಲೀ ಗಂಡಾಗಲೀ ಆದಷ್ಟು ಈ ಚೌಕಟ್ಟಿನೊಳಗೆ ವ್ಯವಹರಿಸುವಂತೆ ತಮ್ಮ ಪಾತ್ರಗಳನ್ನು ರಚಿಸುತ್ತಾರೆ. ಈ ವ್ಯವಸ್ಥೆಯಲ್ಲಿ ದೋಷವೇನಾದರೂ ಕಂಡುಬಂದಲ್ಲಿ ಮಾತ್ರ, ಅಂದರೆ ಉದಾಹರಣೆಗೆ ಗಂಡ ನಪುಂಸಕನಿದ್ದಲ್ಲಿ ಅಥವಾ ಗಂಡು–ಹೆಣ್ಣು ಇನ್ನು ಕೂಡಿ ಬಾಳಲು ಸಾಧ್ಯವೇ ಇಲ್ಲದ ಪರಿಸ್ಥಿತಿ ಬಂದೊದಗಿದಾಗ, ಈ ವ್ಯವಸ್ಥೆಯನ್ನು ಮೀರಿ ಬದುಕಲು ತಮ್ಮ ಪಾತ್ರಗಳಿಗೆ ಕೆಲಮಟ್ಟಿನ ಅವಕಾಶ ಕೊಡುತ್ತಾರೆ. ಆದರೂ ಮತ್ತೊಂದು ರೀತಿಯಲ್ಲಿ, ಅವರು ಅನಿವಾರ್ಯವಾಗಿ ಮರಳಿ ಅಂಥದೇ ಚೌಕಟ್ಟಿನೊಳಗೆ ಕಾಲಿರಿಸುವಂತೆ ಮಾಡುವದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ. ಕುರ್ತುಕೋಟಿಯವರು ಮಾಸ್ತಿಯವರಲ್ಲಿ ಕೆಲವೊಮ್ಮೆ ಹೆಣ್ಣು ಹೆಂಡತಿಯಾಗುವದು ಒಂದು ಸಂಕೀರ್ಣವಾದ ಸಮಸ್ಯೆ ಎಂದು ಹೇಳಿದ್ದು ಪ್ರಾಯಶಃ ಈ ಅರ್ಥದಲ್ಲಿಯೇ. ಇದಕ್ಕೆ ಉದಾಹರಣೆಯಾಗಿ ವೆಂಕಟಿಗನ ಹೆಂಡತಿ ಕಥೆ ನೋಡಬಹುದು. ಶ್ರೀಮಂತನೊಬ್ಬನ ಆಕರ್ಷಣೆಗೆ ವೆಂಕಟಿಗನನ್ನು ಬಿಟ್ಟುಹೋದ ಅವನ ಹೆಂಡತಿ, ಆ ಶ್ರೀಮಂತ ಮತ್ತೆ ಬೇರೆ ಹೆಣ್ಣುಗಳನ್ನು ಆಶಿಸತೊಡಗಿದಾಗ, ತಾನು ಮಾಡಿದ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಾಳೆ. ಅವನ ಕೀಳುನುಡಿಗಳಿಂದ ಮುನಿದ ಆಕೆ ಅವನ ಸಂಬಂಧವನ್ನು ಕೊಡವಿಕೊಂಡು ಮತ್ತೆ ವೆಂಕಟಿಗನ ಬಳಿ ಬರುತ್ತಾಳೆ. 'ನನ್ನ ದೇವರು ತಿರುಗಿ ಸಿಕ್ಕಿದೆ. ಬದುಕಿಸಿದರೆ ಬದುಕಿಸು, ಸಾಯಿಸಿದರೆ ಸಾಯಿಸು' ಎಂದು ಕಾಲಿಗೆ ಬಿದ್ದು ಬೇಡಿಕೊಳ್ಳುತ್ತಾಳೆ. ಈ ಸಂದರ್ಭದ ಸ್ವಾರಸ್ಯವೆಂದರೆ, ವೆಂಕಟಿಗ ಯಾವುದೇ ವ್ಯಾಕುಲ–ಬೇಗುದಿಗಳಿಲ್ಲದೇ ಅವಳನ್ನು ಹಾಗೂ ತನ್ನದಲ್ಲದ ಮಗುವನ್ನು ಸ್ವೀಕರಿಸಿದುದು. ಏಕೆಂದರೆ, ಸುತ್ತಲಿನ ಸಮಾಜ, ಅವಳ ತಾಯಿ–ಅತ್ತೆ ಮುಂತಾದವರೇ ಅಡ್ಡ ದಾರಿ ಹಿಡಿದ ಹೆಣ್ಣನ್ನು, ಉದಾರವಾಗಿ ಕಾಣುವ ಸ್ಥಿತಿಯಲ್ಲಿ ಇಲ್ಲದಾಗ, ವೆಂಕಟಿಗ, ಸಾಮಾನ್ಯ ಗಂಡಸಿನಲ್ಲಿ ತೋರದ ಉದಾರತೆಯನ್ನು ತೋರಿಸುತ್ತಾನೆ. ನಿರೂಪಕ ಪ್ರಶ್ನಿಸಿದ್ದಕ್ಕೆ 'ಏನೂ ತಿಳಿಯದವಳು ಸ್ವಾಮಿ' ಎನ್ನುತ್ತಾನೆ. ಸಂಶಯದ ಸುಳಿಯಲ್ಲಿಯೇ ಸಿಲುಕಿ, ಹೆಣ್ಣನ್ನು ಫಾಸಿಗೊಳಿಸುತ್ತಲೇ ಚಿತ್ರಹಿಂಸೆಕೊಡುತ್ತಲೇ ಬದುಕುವ ಸಾಮಾನ್ಯ ಗಂಡಿಗಿಂತ ವೆಂಕಟಿಗ ಇಲ್ಲಿ ಭಿನ್ನನಾಗಿದ್ದಾನೆ. ಒಂದು ಅರ್ಥದಲ್ಲಿ ಅಪವಾದದ ಪಾತ್ರವೂ ಆಗಿದ್ದಾನೆ. ಈ ಕತೆಯಲ್ಲಿ ವೆಂಕಟಿಗನ ಹೆಂಡತಿಗೆ ತನ್ನ ತಪ್ಪಿನ ಅರಿವಾಗಿರುವದು ಲೇಖಕರಿಗೆ ಮಹತ್ವದ ಸಂಗತಿಯಾಗಿ ಕಂಡಿದೆ. ಆದರೆ ಆಂಗ್ಲನೌಕಾ ಕ್ಯಾಪ್ಟನ್ ಕಥೆಯಲ್ಲಿ ನಡೆಯುವ ಘಟನೆಯೇ ಬೇರೆ ರೀತಿಯದು. ಆ ಕ್ಯಾಪ್ಟನ್ ತನ್ನ ಹೆಂಡತಿಯ ನಿಷ್ಠೆಯನ್ನು ಅರಿತವನು. ತನ್ನ

ಮೇಲಿನ ಸೇಡಿಗಾಗಿ ತಾನಿಲ್ಲದಾಗ ತನಗಾಗದವರು ತನ್ನ ಹೆಂಡತಿಯನ್ನು ಕೆಡಿಸಿದ್ದಾರೆ ಎಂಬುದನ್ನು ತಿಳಿದವನು. ಪರಿಸ್ಥಿತಿ ಹೀಗಿದ್ದಾಗಲೂ ಅವಳನ್ನು ಪುನಃ ಸ್ವೀಕರಿಸಲು ಅವನು ಹಿಂದು–ಮುಂದು ನೋಡುತ್ತಾನೆ. ಆದರೆ ನಿರೂಪಕರ ಉಪದೇಶದಿಂದ ಕ್ಷಮೆಗಿಂತ ದೊಡ್ಡದು ಬೇರಿಲ್ಲವೆಂದರಿತು ಅವಳನ್ನು ಕ್ಷಮಿಸುತ್ತಾನೆ. ವೆಂಕಟಿಗನ ಹೆಂಡತಿ ಮತ್ತು ಆಂಗ್ಲನೌಕಾಕ್ಯಾಪ್ಟನ್ ಈ ಎರಡೂ ಕತೆಗಳನ್ನು ಒಂದರ ಬದಿಗೊಂದು ಇಟ್ಟು ನೋಡಿದಾಗ, ಭಾರತಿಯನಾದ ವೆಂಕಟಿಗನಲ್ಲಿ ಕಾಣುವ ಉದಾರಗುಣ, ಆಂಗ್ಲಕ್ಯಾಪ್ಟನ್‌ನಲ್ಲಿ ಕಂಡುಬಾರದಿರುವುದು ಒಂದು ದೃಷ್ಟಿಯಿಂದ ಆಶ್ಚರ್ಯವೆನಿಸುತ್ತದೆ. ಆದ್ದರಿಂದ ಆ ದೇಶ, ಈ ದೇಶದ ಜನರು, ಗಂಡು, ಹೆಣ್ಣು ಎಂಬ ಭೇದಗಳನ್ನು ಎಣಿಸುವ ಪಾತ್ರಗಳ ವೈಯಕ್ತಿಕ ನಿಲುವಿನ ಗಟ್ಟಿತನದ ಮೇಲೆ ಮಾಸ್ತಿಯವರ ಕತೆ ನಿಲ್ಲುತ್ತದೆ ಎಂದು ಭಾವಿಸಬೇಕಾಗುತ್ತದೆ.

ಈ ಮೇಲಿನ ಎರಡೂ ಕತೆಗಳಿಗಿಂತ ಭಿನ್ನಸ್ವರೂಪದ್ದು ಮತ್ತು ವಿಶಿಷ್ಟವಾದ್ದು, ಗೌತಮಿ ಹೇಳಿದ ಕತೆ. ಇಲ್ಲಿ ಗೌತಮಿ, ಹೆಣ್ಣಿನ ಕಾಮದ, ಸೆಳವಿನ, ಆದಿಶಕ್ತಿಯ ಸಂಕೇತವಾಗಿದ್ದಾಳೆ. ಭಾರದ್ವಾಜನನ್ನು ಪ್ರೀತಿಸಿದವಳು, ಅವನ ಮರಣದಿಂದಾಗಿ ದತ್ತ–ಕಾಶ್ಯಪನಲ್ಲಿ ತನ್ನ ಕಾಮ–ಪ್ರೇಮವನ್ನು ತೋಡಿಕೊಳ್ಳುತ್ತಾಳೆ. ಆದರೆ ಅವಳು 'ನೀನು ನನ್ನನ್ನು ಕಾಪಾಡಬೇಕು,ಪರೀಕ್ಷೆ ಮಾಡಬೇಡ. ನೀನು ಹೆಣ್ಣು, ಆದಿಶಕ್ತಿ, ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ, ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಟಮಾಡಿದೆಯೊ ನಾನು ಬಟ್ಟೆಗೆಟ್ಟೆ ' ಈ ಮಾತನ್ನು ಕೇಳಿದ ಮಾಲಿನಿಗೂ ತನ್ನಲ್ಲಿರುವ ಶಕ್ತಿಯು ಅರಿವಾಗುತ್ತದೆ. ಹೀಗೆ ಇಬ್ಬರೂ ಬದುಕಿಕೊಳ್ಳುತ್ತಾರೆ. ರಾಜೇಂದ್ರ ಚೆನ್ನಿ ಗಮನಿಸಿದಂತೆ ಕತೆಯ ಕೇಂದ್ರ ವಿರುವುದು ಪ್ರವೃತ್ತಿಯ ಅದಮ್ಯವಾದ ನಿಗೂಢತೆಯಲ್ಲಿ. ಆಸೆ ಹೇಗೆ ನಿಗೂಢವೋ ಅದನ್ನು ತಡೆಯಬಲ್ಲ ಶಕ್ತಿ ಕೂಡ. ಕಾಮಿಸಿ ಬಂದ ಹೆಣ್ಣು ಅಷ್ಟೇ ಪ್ರಭಲವಾದ ಇನ್ನೊಂದು ಪವೃತ್ತಿಯಿಂದಾಗಿ ಸಂತೈಸುವ ತಾಯಿ ಆಗುವುದು ಬಹಳ ಸತ್ವಪೂರ್ಣವಾಗಿ ಚಿತ್ರಿತವಾಗಿದೆ. ಗೌತಮಿಗೆ ಕಾಮವನ್ನು ನಿಗ್ರಹಿಸುವ ಶಕ್ತಿ ಇತ್ತು, ನಿಗ್ರಹಿಸಿದಳು, ಗೌರವಪಾತ್ರಳಾದಳು. ಆದರೆ ಬಾಳಿನ ಸಾಫಲ್ಯದಲ್ಲಿ ಕಾಮಕ್ಕಿರುವ ಸ್ಥಾನವನ್ನು ಅವಳು ಗುರುತಿಸಿದ್ದಾಳೆ. ಮದುವೆ ಎನ್ನುವ ಸಾಮಾಜಿಕ ಕಟ್ಟಳೆಯ ಮೂಲಕ ಆ ಪ್ರವೃತ್ತಿಯ ಸಫಲವಾದ ಈಡೇರಿಕೆಯಾಗಬೇಕೆನ್ನುವ ಸಂದೇಶ ಕೂಡ ಗೌತಮಿ, ಪ್ರಾಪ್ತವಯಸ್ಕಿನಲ್ಲಿ ಅನಸೂಯ, ಪ್ರಿಯಂವದರಿಗೆ ವಿವಾಹವಾಗಲು ಒತ್ತಾಯಿಸುವುದರಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲ, ಶಕುಂತಲೆ, ದುಷ್ಯಂತನನ್ನು ಪ್ರೇಮಿಸಿದ್ದನ್ನು ಅವಳು ಅರ್ಥಮಾಡಿಕೊಳ್ಳುವುದೂ, ಸಹಾನುಭೂತಿ ತೋರಿಸುವುದೂ ಈ ಹಿನ್ನೆಲೆಯಲ್ಲಿಯೇ. ಆದರೆ ಇಂತಹ ಪ್ರವೃತ್ತಿ, ನಿವೃತ್ತಿಗಳನ್ನು ಕುರಿತ ಆತಂಕಕಾರಿ ಪ್ರಶ್ನೆಗಳಿಗೆ ಮಾಸ್ತಿ ಉತ್ತರಗಳನ್ನಿರಿಸುವುದು ಕೌಟುಂಬಿಕ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಎಂಬುದನ್ನು ಗಮನಿಸದೇ ಇರಲು ಸಾಧ್ಯವಿಲ್ಲ.

ಮಾಸ್ತಿಯವರಂತಹ ಲೇಖಕರು ಎಲ್ಲವನ್ನೂ ವಾಚ್ಯವಾಗಿ ಹೇಳುವುದಿಲ್ಲ. 'ಅವರ ಪ್ರಕಟಿತ ಸಾಲುಗಳ ಹಿಂದಿನ ಅಪ್ರಕಟಿತ ಧ್ವನಿಗಳನ್ನು ಕೇಳಿಸಿಕೊಳ್ಳದಿದ್ದರೆ ನಮಗೇದೊಡ್ಡ ನಷ್ಟ'

ಎಂದಿದ್ದಾರೆ, ಟಿ.ಪಿ. ಅಶೋಕ. ಮಾಸ್ತಿ ಕತೆಗಳಲ್ಲಿ ವೈಚಾರಿಕತೆ ಇಲ್ಲವೆಂದಲ್ಲ. ಆದರೆ ಅದು ವ್ಯಕ್ತವಾಗುವದು ಆಲೋಚನೆಯ ನಂತರ ಪಾತ್ರಗಳು ಕೈಕೊಳ್ಳುವ ಅಂತಿಮ ನಿರ್ಧಾರದಲ್ಲಿ ಕ್ರಿಯೆಯಲ್ಲಿ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ವಿಚಾರದಿಂದ ಕೂಡಿದ ಆಚಾರದಲ್ಲಿ. ಎಂದೋ ನಡೆದ ಕತೆಯಾದ್ದರಿಂದ, ಕಾವು ಆರಿದ ಸಂಯಮದ ನಿರ್ಧಾರದ ನಡವಳಿಕೆಗಳಷ್ಟೇ ದಾಖಲಾಗಿರುತ್ತವೆ. ಮಧ್ಯದ ಸಂಘರ್ಷ ಕೆಲವೊಮ್ಮೆ ಊಹೆಗೆ ಬಿಟ್ಟ ವಿಷಯವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಹೇಮಕೂಟದಿಂದ ಬಂದಮೇಲೆ ಕತೆಯನ್ನು ನೋಡಬಹುದು. ಹೇಮಕೂಟದಿಂದ ಹಿಂತಿರುಗಿ ಹಸ್ತಿನಾವತಿಗೆ ಬಂದ ಶಕುಂತಲೆ, ಒಮ್ಮೆ ಕಣ್ವರ ಆಶ್ರಮಕ್ಕೆ ಬರುತ್ತಾಳೆ. ತನ್ನ ಜೀವನದ ಅತ್ಯಂತ ಸಂತೋಷದ ಗಳಿಗೆಯನ್ನು ಕಳೆದ ಜಾಗಕ್ಕೆ ಬಂದಾಗ, ಮೊದಲಿನ ಸಂತೋಷ ಆಕೆಗೆ ದೊರಕುವುದಿಲ್ಲ. ಆಗ ಅವಳು ‘ನೋವನ್ನು ಕಾಣದ ನಕ್ಕ ನಗೆಯೇ ನಗೆ, ನೊಂದನೋವನ್ನು ನುಂಗಿ ಆ ಮೇಲೆ ನಗುವ ನಗೆ ನಗೆಯಲ್ಲ’ ಎಂದು ಅಭಿಪ್ರಾಯಪಡುತ್ತಾಳೆ.[೧೧] ಇಂತಹ ಅನ್ನಿಸಿಕೆ ಅವಳಿಗುಂಟಾಗಬೇಕಾದರೆ ಹಿಂದೆ ಅವಳು ಅನುಭವಿಸಿದ ನೋವಿನ ತೀವ್ರತೆ ಎಷ್ಟಿರಬೇಡ? ಮತ್ತು ನಿಜವಾದ ಸುಖವನ್ನು ಹಿಂದೆ ಬಿಟ್ಟಿದ್ದೇನೆಂಬ ತಿಳಿವೂ ಅವಳಲ್ಲಿ ಉಂಟಾಗಿರುವದನ್ನು ನಾವು ಗಮನಿಸಬಹುದು.

ಕೌಟುಂಬಿಕ ಪರಿಸರದಲ್ಲಿ ಹೆಣ್ಣು ಹೆಚ್ಚು ಸುರಕ್ಷಿತ ಎಂಬುದು ಸಾಮಾನ್ಯ ಸಾಂಪ್ರದಾಯಿಕ ಭಾವನೆ. ಕುಟುಂಬದ ಏಳ್ಗೆಯಲ್ಲಿಯೇ ಅವಳ ಏಳ್ಗೆ ಅಡಗಿದೆ ಎನ್ನುವ ಮಾತೇನೋ ನಿಜ. ಆದರೆ ಕುಟುಂಬದ ಜವಾಬ್ದಾರಿ ಮಕ್ಕಳ ಜವಾಬ್ದಾರಿ ಯಾವ ಕಾಲಕ್ಕೂ ಗಂಡಿಗಿಂತ ಹೆಣ್ಣಿನ ಮೇಲೇ ಬೀಳುವುದು ಹೆಚ್ಚು. ಗಂಡು, ಸಣ್ಣ ಪುಟ್ಟ ವಿಷಯಗಳಿಗೆ ಬೇಸರಿಸಿಕೊಂಡು ಓಡಿಹೋಗದೆ, ಮನೆಯಲ್ಲಿಯೇ ಇದ್ದು ತನ್ನ ಕರ್ತವ್ಯವನ್ನು ಈಡೇರಿಸಿದರೆ ಸರಿ, ಅದಿಲ್ಲವಾದರೆ ಹೆಣ್ಣು ಒಂಟಿಯಾಗಿ ನಿಂತು ಎಲ್ಲ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕು. ಇದಕ್ಕೆ ಉದಾಹರಣೆಯಾಗಿ ನಾವು ನಳಿನಿಯತಂದೆ, ಚಟ್ಟೇಕಾರರತಾಯಿ, ಒಬ್ಬ ತಾಯಿ ಒಬ್ಬ ಮಗ, ಆಧುನಿಕ ಆಂಗ್ಲ ಶಕುಂತಲೆ ಮುಂತಾದ ಕತೆಗಳನ್ನು ನೋಡಬಹುದು. ನಳಿನಿಯ ತಾಯಿ ಲಕ್ಷ್ಮಮ್ಮ ಮಗಳ ಅಭ್ಯುದಯದ ಸಲುವಾಗಿ ಗಂಡ ಕೊಡುವ ಎಲ್ಲ ರೀತಿಯ ಉಪಟಳವನ್ನು ಸಹಿಸಿಕೊಳ್ಳುತ್ತಾಳೆ. ಅವನು ಅವಳನ್ನು ತೊರೆದಿದ್ದರೂ, ಉಪಾಧ್ಯಾಯಿನಿಯಾಗಿ ಕೆಲಸಮಾಡಿ ಮಗಳನ್ನು ಬೆಳೆಯಿಸುತ್ತಾಳೆ. ಮೊದಲು ಅವಳಿಗೆ ನಾನಾರೀತಿಯಲ್ಲಿ ತೊಂದರೆ ಕೊಟ್ಟ ಗಂಡನೇ ಕೊನೆಯಲ್ಲಿ ‘ನಾನು ನೀನು ಪಡದ ಉಳಿಸಿದ್ದ ಸಂಸಾರಸುಖ ಮಗಳಿಗೆ ಅಳಿಯನಿಗೆ ಲಭಿಸಲಿ ನಿನಗೂ ಜೀವನದಲ್ಲಿ ಸಮಾಧಾನ ದೊರೆಯಲಿ’[೧೨] ಎಂದು ಒಳಿತನ್ನು ಹಾರೈಸುವಷ್ಟರ ಮಟ್ಟಿಗೆ ಅಥವಾ ಅವನ ದುಷ್ಟತನ ಅಳಿಸುವಷ್ಟು ಪ್ರಭಾವಶಾಲಿಯಾಗಿ ನಳಿನಿಯ ತಾಯಿಯ ಸಂಯಮ, ತಾಳ್ಮೆ–ಒಳ್ಳೆತನಗಳು ಪ್ರಕಟವಾಗಿವೆ. ಚಟ್ಟೇಕಾರರ ತಾಯಿಯಲ್ಲಂತೂ ಗಂಡ ಕುಡುಕ. ಆ ತಾಯಿ ಮಕ್ಕಳನ್ನು ಕಷ್ಟಪಟ್ಟು ಬೆಳೆಸಿ ಒಂದು ದಾರಿಗೆ ಹಚ್ಚುತ್ತಾಳೆ. ಅಜ್ಜಿ ಅನುಭವಿಸಿದ ಯಾತನೆಗಳಿಂದ ರೋಸಿಹೋದ ಮೊಮ್ಮಗಳು ನರ್ಸ ಆಗಿ ಸ್ವತಂತ್ರವಾಗಿ

ಬಾಳಬಯಸುತ್ತಾಳೆ. ಅನಿವಾರ್ಯ ಕಾರಣದ ಹೊರತಾಗಿ, ಮದುವೆಯಾಗದೇ ಸ್ವತಂತ್ರವಾಗಿ ಜೀವನವನ್ನು ನಿರ್ವಹಿಸಲು ತಾವಾಗಿಯೇ ಬಯಸಿದ ಸ್ತ್ರೀ ಪಾತ್ರಗಳು ಮಾಸ್ತಿಯವರಲ್ಲಿ ವಿರಳ. ಆದರೂ ಹೆಣ್ಣಿನ ಬಗ್ಗೆ ಸಹಾನುಭೂತಿಯಿದ್ದ ಮಾಸ್ತಿ, ಚಟ್ಟೇಕಾರರ ತಾಯಿಯ ಮೊಮ್ಮಗಳಿಗೆ ಸ್ವತಂತ್ರವಾಗಿ ಜೀವನ ನಡೆಸುವ ಅವಕಾಶ ಕಲ್ಪಿಸಿಕೊಡುತ್ತಾರೆ. ತನ್ಮೂಲಕ ಮಹಿಳಾ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ್ದಾರೆ ಎನ್ನಬಹುದು. ಅದರಂತೆ ವಿವಾಹಪೂರ್ವ ಪ್ರಣಯ ಮತ್ತು ಮಾತೃತ್ವಗಳು ಸಾಮಾನ್ಯವಾಗಿ ಧರ್ಮಬಾಹಿರ. ಆದರೆ ಸಮಾಜದಲ್ಲಿ ಅಂತಹ ಘಟನೆಗಳು ನಡೆಯುತ್ತಿರುತ್ತವೆ. ಅಂತಹ ಸಂದರ್ಭದಲ್ಲಿ ಅದರಿಂದುಂಟಾಗುವ ಪರಿಣಾಮಗಳಿಗೆ ಗಂಡು–ಹೆಣ್ಣು ಇಬ್ಬರೂ ಜವಾಬ್ದಾರರಾಗಬೇಕು. ಹೇಮಕೂಟದಿಂದ ಬಂದ ಮೇಲೆ ಕತೆಯಲ್ಲಿ ದುಷ್ಯಂತನಿಂದ ತಿರಸ್ಕರಿಸಲ್ಪಟ್ಟ ಶಕುಂತಲೆ ಅನುಭವಿಸಿರಬಹುದಾದ ನೋವು–ಅಪಮಾನಗಳನ್ನು ಶಕುಂತಲೆಯ ಪ್ರಕಟಿತ ಮಾತುಗಳ ಹಿನ್ನೆಲೆಯಲ್ಲಿ ಓದುಗರೂ ಊಹಿಸಿಕೊಳ್ಳುವಂತೆ ಮಾಡಲಾಗಿದೆ. ಆದರೆ ಆಧುನಿಕ ಆಂಗ್ಲ ಶಕುಂತಲೆಯಲ್ಲಿ ಜೆನ್ನಿ, ಮದುವೆಗೆ ಮುನ್ನ ಲಯೋನೆಲ್‌ನಿಂದ ಪಡೆದ ಮಗುವನ್ನು ಅವನ ತಂದೆ–ತಾಯಿಯ ಬಳಿ ಒಯ್ದು ಅವರು ತನ್ನನ್ನು ಹಾಗೂ ಮಗುವನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾಳೆ. ಆಂಗ್ಲ ಸಮಾಜದ ಹಿನ್ನೆಲೆಯಲ್ಲಿಯೇ ಈ ಸಮಸ್ಯೆ ಬಗೆಹರಿಯುವದು ಕಷ್ಟ ಸಾಧ್ಯವೆನಿಸಿರುವಾಗ ಭಾರತೀಯ ಪರಂಪರಾಗತ ಸಮಾಜದಲ್ಲಂತೂ ಇದು ಸಾಧ್ಯವೇ ಇಲ್ಲವೆನ್ನುವ ಪರಿಸ್ಥಿತಿ. ಇದನ್ನೇ ಲೇಖಕರು ವ್ಯಂಗ್ಯವಾಗಿ, 'ದುಷ್ಯಂತನಿಗೆ ಅಪ್ಪ ಇರಲಿಲ್ಲ, ಶಕುಂತಲೆಯ ದುರದೃಷ್ಟ' ಎಂದು ನುಡಿಯುತ್ತಾರೆ.೧೩ ಜೋಗೋರ ಅಂಜಪ್ಪನ ಕೋಳಿ ಕತೆಯಲ್ಲಿಯೂ ಆ ಹುಡುಗಿ ಅತ್ತೆಯ ಸಂಶಯದ ಕಾಟದಿಂದ ತಪ್ಪಿಸಿಕೊಳ್ಳಲು ಅಂಜಪ್ಪನನ್ನು ಅಪರಾಧಿಮಾಡಿ ಜೈಲುಸೇರಿಸಿರಬಹುದಾದರೂ ಅವಳು ಅನೈತಿಕ ಸಂಬಂಧಗಳನ್ನು ಹೊಂದಿರುವುದಕ್ಕೆ ಅವಳ ಗಂಡ ಪೋಲಿಬಿದ್ದು ಅವಳಿಗೆ ಸುಖ ನೀಡಲು ಅಸಮರ್ಥನಾಗಿರುವದೇ ಕಾರಣವೆಂಬುದನ್ನು ತಿಳಿಸಲಾಗಿದೆ. ಮುಂದೆ ತಪ್ಪು ದಂಡವೆಂಬಂತೆ ಅಂಜಪ್ಪನಿಗೂ ಸುಖನೀಡುತ್ತಾಳೆ, ಆ ಹುಡುಗಿ. ಹೀಗೆ ಗಂಡನದೂ ತಪ್ಪಿರುವಾಗ ಅಡ್ಡಹಾದಿ ಹಿಡಿದ ಹುಡುಗಿಯದು ಮಾತ್ರ ತಪ್ಪು ಎಂಬ ಏಕಮುಖ ನೀತಿಯನ್ನು ಮಾಸ್ತಿ ಪ್ರತಿಪಾದಿಸಲಾರರು. ಅದರಂತೆ 'ಸರಿ' ಎಂದು ಎತ್ತಿಹಿಡಿಯಲಾರರು.

ಮಕ್ಕಳ ಭವಿಷ್ಯದ ಚಿಂತೆ ಎಲ್ಲ ತಾಯಂದಿರಿಗೂ ಇದೆ. ನಮ್ಮ ದೇಶದವಳಿರಲಿ, ಪರದೇಶದವಳಿರಲಿ, ತಾಯಿ–ತಾಯಿಯೇ; ಮಕ್ಕಳ ಸುಖಕ್ಕಾಗಿ ಪರಿತಪಿಸುವವಳೇ. **ನೆಪೋಲಿಯನ್‌ನ ಕೊನೆಯದಿನಗಳಲ್ಲಿ** ರಾಣಿ ಮೇರಿವಾಲಿಷ್ಕ, ನೆಪೋಲಿಯನ್ನನನ್ನು ತ್ಯಜಿಸಿ ದಳಪತಿಯನ್ನು ಮದುವೆಯಾಗಲೊಪ್ಪುವದು ಮಗನ ಅಭ್ಯುದಯಕ್ಕಾಗಿಯೇ. ರಾಣಿಹಾಟ್ ಷೇಪ ಸಿಟೂ ಅಕ್ಕ ತಮ್ಮ ಗಂಡ–ಹೆಂಡಿರಾಗುವ ಒಂದು ಪದ್ಧತಿಯ ಹಿನ್ನೆಲೆಯಲ್ಲಿ ಮೂಡಿ ಬಂದ ಕತೆ. ಸಾಮಾನ್ಯ ಹೆಣ್ಣಿಗೆ ದೊರೆಯಬಹುದಾದ ಸುಖ ಈ ರೀತಿ ಮದುವೆಯಾಗಿ ರಾಣಿಯಾದ ಹೆಣ್ಣಿಗೆ ದೊರೆಯದು. ಅಪಾರವಾದ ನೋವು–ಯಾತನೆಗಳನ್ನು ಅಂತರಿಕವಾಗಿ ಅನುಭವಿಸಿದ

ಹಾಟ್ ಷೇಪ್ ಸಿಟೂ, ತನ್ನ ಮಗಳು ಈ ವ್ಯವಸ್ಥೆಯಿಂದ ಹೊರಗಿರಬೇಕೆಂದು ಬಯಸುತ್ತಾಳೆ. ಆದರೆ ಅದು ಅಸಾಧ್ಯವೆಂಬುದು ಅರಿವಾದಾಗ, ತನ್ನಷ್ಟಾದರೂ ಸುಖ ತನ್ನ ಮಗಳಿಗೆ ದೊರೆಯಲಿ ಎಂದು ಹಾರೈಸುತ್ತಾಳೆ. ಹೀಗೆ ಸಂಪ್ರದಾಯದ ಕ್ರೂರ ವ್ಯವಸ್ಥೆಯಲ್ಲಿ ನರಳುವ ಹೆಣ್ಣಿನ ಮಾತೃವಾತ್ಸಲ್ಯದ ಪರಿಯನ್ನು ಈ ಕತೆ ಮನೋಜ್ಞವಾಗಿ ಚಿತ್ರಿಸುತ್ತದೆ. ಚಂದ್ರವದನಾದಲ್ಲಿ ಚಂದ್ರಾ ವೇಶ್ಯೆಯಾದರೂ ತಾಯಿಯಾಗಬೇಕೆಂಬ ಅದಮ್ಯ ಹಂಬಲವುಳ್ಳವಳು . ಮಾವನನ್ನು ವಿರೋಧಿಸಿ, ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುತ್ತಾಳೆ. ಹೀಗೆ ಮಾತೃತ್ವವನ್ನು ಎತ್ತಿ ಹಿಡಿಯುತ್ತಾ ಮಕ್ಕಳ ಏಳ್ಗೆಗಾಗಿ ತಮ್ಮ ಸರ್ವಸ್ವವನ್ನು ಧಾರೆ ಎರೆದ ಮಹಿಳೆಯರು ನಮಗೆ ಮಾಸ್ತಿ ಕತೆಗಳಲ್ಲಿ ದೊರೆಯುತ್ತಾರೆ.

ತಾಯಿ–ಮಕ್ಕಳ ಸಂಬಂಧದ ಬಗ್ಗೆ ಪರಿಶೀಲಿಸುವಾಗ ಮಾಸ್ತಿ ಬಣ್ಣಿಸಿದ ಮಲತಾಯಿ–ಮಕ್ಕಳ ಸಂಬಂಧವನ್ನೂ ನಾವು ವಿವೇಚಿಸಬಹುದು. ಇಂದಿರೆಯೋ ಅಲ್ಲವೋ ಕತೆಯಲ್ಲಿ ಸಾವಿತ್ರಿ, ಮಲಮಗ ಗೋಪಾಲನಿಗೆ ಜ್ವರ ಬಂದಾಗ, ಸರಿಯಾಗಿ ಆರೈಕೆ ಮಾಡದೇ ಅವನ ಸಾವಿಗೆ ಕಾರಣಳಾಗುತ್ತಾಳೆ. ಇದಕ್ಕೆ ವ್ಯತಿರಿಕ್ತವಾಗಿ, ಚಿಕ್ಕಮ್ಮ ಕತೆಯ ಚಿಕ್ಕವ್ವ ಮಲಮಗನನ್ನು ಅತ್ಯಂತ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದುದನ್ನು ಗಮನಿಸಬಹುದು. ಆದ್ದರಿಂದ ಮಾಸ್ತಿ ಹೆಣ್ಣಿನ ಯಾವುದೇ ಒಂದು ಮುಖವನ್ನು ಚಿತ್ರಿಸಿ ತಟಸ್ಥರಾಗಿ ಉಳಿಯುವುದಿಲ್ಲ, ಇನ್ನಿತರ ಸ್ವರೂಪ ಸಾಧ್ಯತೆಗಳನ್ನು ಗಮನಿಸುತ್ತಾರೆ.

ಕೆಲವು ಸಂದರ್ಭದಲ್ಲಿ ಪತಿ ಜೀವಂತವಿದ್ದಾಗ ಅವನ ನಡವಳಿಕೆಯಿಂದ ಹೆಣ್ಣು ಅನುಭವಿಸಿದ ನೋವು ಎಷ್ಟು ತೀವ್ರತರವಾಗಿರುತ್ತದೆ, ಅವನು ಸತ್ತಮೇಲೂ ಅವನ ಮೇಲಿನ ತಿರಸ್ಕಾರ ಮಾಯವಾಗುವದಿಲ್ಲ. ಉದಾಹರಣೆಗೆ ಆ್ಯನ್ ಷೇಕ್ಸಪಿಯರ್ ಕತೆಯಲ್ಲಿ ಅವಳು ಗಂಡನ ಬೆಲೆಯುಳ್ಳ ಹಾಸಿಗೆಯ ಮೇಲೊಮ್ಮೆ ಪರನಾರಿಯೊಬ್ಬಳು ಮಲಗಿರುವುದನ್ನು ನೋಡಿದವಳು, ಅವನು ಸತ್ತಮೇಲೆ, ಆ ಹಾಸಿಗೆಯನ್ನು ಮುಟ್ಟಲು ಕೂಡ ಇಷ್ಟಪಡುವದಿಲ್ಲ. ಅವಳ ಈ ಮೌನದ ತಿರಸ್ಕಾರ, ಅತ್ಯಂತ ಪರಿಣಾಮಕಾರಿಯಾಗಿ ಕತೆಯಲ್ಲಿ ಒಡಮೂಡಿ ಬಂದಿದೆ. ಬೆಬಿಲಾನ್ ಕುಮಾರಿ ಕತೆಯಲ್ಲಿ, ಆಕೆಯ ಗಂಡ ಮತ್ತೊಂದು ಲಗ್ನವಾದ ಸುದ್ದಿ ತಿಳಿಯುತ್ತಲೇ ಕೋಪಗೊಂಡ ಅವಳು, ಅವನಿಂದ ವಿಚ್ಛೇದನ ಪಡೆದು, ಸ್ವತಂತ್ರವಾಗಿ ಬದುಕುವ ತೀರ್ಮಾನ ಕೈಕೊಳ್ಳುತ್ತಾಳೆ. ಇದು ಗಂಡನನ್ನು ತಿರಸ್ಕರಿಸುವ ಮತ್ತೊಂದು ಸ್ವರೂಪ. ಗಂಡಸಿನ ಹೀನ ವರ್ತನೆಯಿಂದಾಗಿ ರೋಷ, ಕಹಿಭಾವನೆಗಳು ಚೆನ್ನಮ್ಮನಂತಹ ಹಳ್ಳಿಯ ಮುಗ್ಧ ಹೆಂಗಸಿನಲ್ಲಿಯೂ ವ್ಯಕ್ತವಾಗಬಲ್ಲದು. ಗಂಡನ ಅಸಹ್ಯಕರ ನಡತೆಯನ್ನು ಅವಳು ಸಾಕಷ್ಟು ಸಹಿಸಿಕೊಳ್ಳುತ್ತಾಳೆ. ಆದರೆ ಅವನ ಸ್ವಾರ್ಥ ಅವಳನ್ನು ಕಾರಾಗೃಹಕ್ಕೂ ತಳ್ಳುತ್ತದೆ. ಹೀಗೆ ಅವನ ಸ್ವಾರ್ಥ ಕ್ರೂರತೆಗಳ ನಿಜರೂಪದರ್ಶನವಾಗುತ್ತಲೇ, ಅವಳು ಕಠೋರಳಾಗುತ್ತಾಳೆ. ಪೋಲೀಸರ ಗುಂಡಿನೇಟಿಗೆ ಬಲಿಯಾಗಿ ಅವನು ಸತ್ತರೂ, ಶವ ನೋಡುವ ಮನಸ್ಸಾಗುವದಿಲ್ಲ

ಅವಳಿಗೆ. 'ಗಂಡ ಹೆಂಡರನ್ನು ಬಿಡಬೌದಲ್ಲ ಹೆಂಡರು ಗಂಡನ್ನ ಬಿಡೋದು ಅಂತ ಉಂಟು?'೧೪ ಎಂದು ಮೊದಲು ಪ್ರಶ್ನಿಸಿದ್ದ ಅವಳೇ ಕೊನೆಯಲ್ಲಿ ಅವನನ್ನು ಬಿಡಲು ತಯಾರಾಗುತ್ತಾಳೆ. ಆದರೆ ದೈವವಶಾತ್ ಅಷ್ಟರಲ್ಲಿಯೇ ಅವನು ಪ್ರಪಂಚವನ್ನೇ ಬಿಟ್ಟು ಹೋಗಬೇಕಾಗುತ್ತದೆ.

ಗಂಡು ಹೆಣ್ಣಿನ ಪ್ರೀತಿ ವಿವಾಹಬಂಧನದಲ್ಲಿ ಮಾತ್ರಸಾಧ್ಯ ಎಂಬ ಅಭಿಪ್ರಾಯ ಮಾಸ್ತಿಯವರದ್ದಲ್ಲ. ಈ ದೃಷ್ಟಿಯಿಂದ ಅವರು ಕೆಲಮಟ್ಟಿಗೆ ಉದಾರವಾದಿ ದೃಷ್ಟಿಕೋನವನ್ನು ಹೊಂದಿದ್ದಾರೆ. ಆಚಾರವಂತ ಅಯ್ಯಂಗಾರ ಕತೆಯಲ್ಲಿ ಕ್ರಿಶ್ಚಿಯನ್ ಹೆಂಗಸಿನೊಂದಿಗೆ ಕೂಡಿ ಬಾಳಿದ ಮಡಿವಂತ ಅಯ್ಯಂಗಾರರ ಕತೆ ಇದೆ. ಆಕೆ ಕಟ್ಟಿಕೊಂಡ ಹೆಂಡತಿ ಅಲ್ಲದಿದ್ದರೂ ಅಯ್ಯಂಗಾರರ ಆಸೆಯಂತೆ ಶ್ರೀವೈಷ್ಣವ ಸಂಪ್ರದಾಯದ ಪ್ರಕಾರವೇ ಅವರ ಅಂತ್ಯಕ್ರಿಯೆ ನಡೆಸುತ್ತಾಳೆ. ಆದರೆ ಇಲ್ಲಿಯ ವೈರುಧ್ಯವೆಂದರೆ ಕ್ರಿಶ್ಚಿಯನ್ ಹೆಂಗಸಿನೊಂದಿಗ ಬಾಳಿದ ಅಯ್ಯಂಗಾರರು ಪ್ರಗತಿಗಾಮಿಗಳೆನ್ನಿಸಿದರೆ, ಕೊನೆಯ ಆಚಾರವನ್ನು ಬಿಡಲು ತಯಾರಾಗದ ಅವರು ಪುರೋಗಾಮಿಗಳೆನ್ನಿಸುತ್ತಾರೆ. ಪ್ರಾಯಶಃ ಅನೇಕ ವ್ಯಕ್ತಿಗಳಲ್ಲಿ ಕಂಡುಬರುವ ದ್ವಂದ್ವ ಈ ಬಗೆಯದೆಂದೇ ತೋರುತ್ತದೆ. ಆದರೆ ಅವರನ್ನು ನಿಜವಾಗಿಯೂ ಪ್ರೀತಿಸಿದ ಆ ಕ್ರಿಶ್ಚಿಯನ್ ಹೆಂಗಸು ಅವರ ಕೊನೆಯ ಆಸೆಯನ್ನು ಈಡೇರಿಸಲು ಅದೆಷ್ಟು ಕಷ್ಟಪಡುತ್ತಾಳೆ ಎಂಬದನ್ನು ನೋಡಿದರೆ ನಿಜಕ್ಕೂ ಅವಳು ನಮ್ಮ ಗೌರವಾದರಗಳಿಗೆ ಪಾತ್ರಳಾಗುತ್ತಾಳೆ.

ಗಂಡನಿಗಿಂತ ಹೆಚ್ಚಿನ ತಿಳುವಳಿಕೆಯನ್ನು ವ್ಯಕ್ತಪಡಿಸುವ ಮತ್ತು ಶೀಲಪ್ರಜ್ಞೆ ಇರುವ ಹೆಣ್ಣುಗಳೂ ಮಾಸ್ತಿಕತೆಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪುತ್ರಕಾಮೇಷ್ಠಿಯ ಸೀತಮ್ಮನಿಗೆ ಮಗುವಿನ ಬಯಕೆ ಇದ್ದುದು ನಿಜ. ಇದಕ್ಕಾಗಿ ಸ್ವಾಮಿ ಮಾಡಿಸುವ ವ್ರತಕ್ಕೆ ಅವಳು ಮೊದಲು ಒಪ್ಪಿಕೊಂಡರೂ ನಂತರ ಆ ಸ್ವಾಮಿ ಹೆಣ್ಣಿನಾಸೆ ಹಣದಾಸೆಯುಳ್ಳವನು, ವ್ರತದ ಹೆಸರಿನಲ್ಲಿ ರಕ್ಷಿತನಗೈಯ್ಯುತ್ತಿದ್ದಾನೆ ಎಂಬುದು ಅರಿವಾಗುತ್ತಲೇ ಗಂಡನನ್ನು ವಿರೋಧಿಸಿ, ಮಕ್ಕಳ ಆಸೆಗಿಂತ ತನಗೆ ಶೀಲಮುಖ್ಯವೆಂಬುದನ್ನು ತೋರಿಸಿಕೊಡುತ್ತಾಳೆ. ಚಿಕ್ಕಮ್ಮ ಕತೆಯಲ್ಲಿ ಮಲಮಗ ತನ್ನನ್ನು ಬಯಸಿದ್ದಾನೆಂದು ಚಿಕ್ಕವ್ವ ಅರಿತಾಗ, ಗಂಡನಿಂದಲೂ ಅವನಿಗೆ ಪ್ರೋತ್ಸಾಹವಿದೆಯೆಂದು ತಿಳಿದಾಗ, ಆಶ್ಚರ್ಯಗೊಳ್ಳುತ್ತಾಳೆ. ಆದರೆ ಶೀಲರಕ್ಷಣೆ ಇಂಥ ವಾತಾವರಣದಲ್ಲಿ ಅಸಾಧ್ಯವೆಂದು ಭಾವಿಸಿ ಬಾವಿ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮುಪ್ಪಿನ ಚಪಲ ಕತೆಯಲ್ಲಿಯೂ ಎಕ್ಕಾರ್‌ಮನ್‌ನ ಹೆಂಡತಿ ತನ್ನ ಶೀಲರಕ್ಷಣೆಗಾಗಿ ಮುದುಕನ ವಿರೋಧ ಕಟ್ಟಿಕೊಳ್ಳಲು ಹಿಂದು–ಮುಂದು ನೋಡುವದಿಲ್ಲ. ಸುಶೀಲಾ ರಜಾಕರ ಕತೆಯಲ್ಲಿ ರಜಾಕರರು ತನ್ನನ್ನು ಕೆಡಿಸುತ್ತಾರೆಂದು ಗೊತ್ತಾದ ಕೂಡಲೇ ಸುಶೀಲಾ ಮನೆಯ ಹಿಂದಿನ ಭಾವಿಯಲ್ಲಿ ಹಾರಿ, ಪ್ರಾಣಬಿಡುತ್ತಾಳೆ. ಅವಮಾನ, ಶೀಲಹರಣಗಳನ್ನು ತಪ್ಪಿಸಿಕೊಳ್ಳುತ್ತಾಳೆ.

ಮಾಸ್ತಿಯವರ ಕತೆಗಳಲ್ಲಿ ಚಿತ್ರಿತವಾದ ಮಹಿಳಾ ಜಗತ್ತು ವೈವಿಧ್ಯಮಯವಾದುದು.

ಯಾವುದೇ ಪಾತ್ರವನ್ನು ಅವಾಸ್ತವಿಕ ಎನ್ನುವಂತಿಲ್ಲ. ಆದರೆ ಒಂದು ಪಾತ್ರದಂತೆ ಇನ್ನೊಂದು ಪಾತ್ರವಿಲ್ಲ. ಗಂಡ ನಪುಂಸಕನಾಗಿ ತನ್ನನ್ನು ವೇಶ್ಯೆಯಾಗಿಸಿದಾಗ, ಅದನ್ನು ವಿರೋಧಿಸಿ, ತಾನು ಒಲಿದವನನ್ನು ಮದುವೆಯಾಗಿ ಸುಖದಿಂದ ಬಾಳಬೇಕೆಂದು ಬಯಸಿದವಳು ದುರದೃಷ್ಟದ ಹೆಣ್ಣು. ಏಕೆಂದರೆ ತನಗಾದ ಅನ್ಯಾಯಕ್ಕಾಗಿ, ಪ್ರಿಯಕರನಿಂದ ಗಂಡನ ಕೊಲೆ ಮಾಡಿಸಲು ಹಿಂದೆಗೆಯದ ಆ ದಿಟ್ಟ ಹೆಣ್ಣು, ತಾನು ಬಯಸುವ ಸುಖಕ್ಕೆ ತೆತ್ತ ಬೆಲೆ ಅಪಾರ. ಮನುಷ್ಯ ಸ್ವಭಾವದಲ್ಲಿ ಕೆಲವೊಮ್ಮೆ ವಿಚಿತ್ರವಾದ ವರ್ತನೆಗಳು ಕಾಣಿಸಿಕೊಳ್ಳಬಹುದು. ಇದಕ್ಕೆ ನಿದರ್ಶನ ವಿಚಿತ್ರ ಪ್ರೇಮ. ಒಬ್ಬನಿಂದ ಪದವಿ, ಒಬ್ಬನಿಂದ ಜಾಣತನದ ಒಲವು, ಮತ್ತೊಬ್ಬನಿಂದ ರೂಪಿನ ಅನುಭವವನ್ನು ಪಡೆದ ವಿಚಿತ್ರ ಸ್ವಭಾವದ ಹೆಣ್ಣು ಪ್ರಭುವಿ, 'ಗಂಡು ಮಾಡಿದ್ದು ಸರಿಯಾದರೆ, ಹೆಣ್ಣಿಗೂ ಅದು ಸರಿ ಅನ್ನಿಸಬೇಕು' ಎಂಬ ತರ್ಕ ಈ ಕತೆಯದು.[೯]

ಹೆಣ್ಣಿನ ಸ್ವೇಚ್ಛಾಪ್ರವೃತ್ತಿಯನ್ನೂ ಮಾಸ್ತಿ ಗಮನಿಸಿದ್ದಾರೆ. ಅದುವರೆಗೆ ಸೋಲನ್ನೇ ಕಾಣದ ಇಸಡೋರಾ ಪ್ರಥಮ ಬಾರಿಗೆ ನಟ ಸ್ಟೆನಿಸಲಾವಸ್ಕಿಯಿಂದ ತಿರಸ್ಕೃತಳಾಗುತ್ತಾಳೆ. ಪತಿನಿಷ್ಠೆ ಮತ್ತು ಮಾತೃತ್ವ ಇವೆರಡನ್ನು ಇಚ್ಛಿಸಿದ ಹೆಣ್ಣು ಅವಳಾದ್ದರಿಂದ ಮಾಸ್ತಿ ಈ ಕತೆಯನ್ನು ನರ್ತಕಿಯ ಪರಾಭವ ಎಂದು ಕರೆದಿದ್ದಾರೆ. ನಿರ್ಲಿಪ್ತ, ನಿರುದ್ವಿಗ್ನ ಮನಸ್ಥಿತಿಯಲ್ಲಿ ಮಾಸ್ತಿ ಕತೆ ಬರೆಯುತ್ತಾರೆ ಎಂಬ ಅಭಿಪ್ರಾಯವಿದ್ದರೂ ಹೆಣ್ಣಿನ ಸಾರ್ಥಕ್ಯವನ್ನು ಅವರು ಯಾವುದರಲ್ಲಿ ಕಾಣಬಯಸುತ್ತಾರೆ ಎಂಬುದಕ್ಕೆ ಸೂಚನೆ ಈ ಕತೆಯಲ್ಲಿ ಕತೆಯ ತಲೆಬರಹದಲ್ಲಿ ದೊರೆಯುತ್ತದೆ. ಹೆಣ್ಣಿನಲ್ಲಿ ಇನ್ನೂ ವೈವಿಧ್ಯಮಯತೆಯನ್ನು ಕಾಣಬೇಕೆಂದರೆ ಲಿಯರ್‌ದೊರೆಯ ಮಗಳಂದಿರು ನೋಡಬೇಕು. ದರ್ಪದ ಗಾನೆರಿಲ್, ಮೊದ್ದುಮುಖದ ರೀಗನ್, ಸೌಮ್ಯಸ್ವಭಾವದ ಕಾರ್ಡಿಲಿಯಾ ಎಲ್ಲರೂ ಒಂದರ್ಥದಲ್ಲಿ ಹಟಮಾರಿಗಳೇ. ನಾಯಿಯಬಾಳು ತೀರ ವಿಚಿತ್ರವೆನ್ನಿಸುವ ಹೆಣ್ಣಿನ ಕತೆ. ಮಾನಸಿಕ ಸಮಸ್ಯೆಯೊಂದು ಈ ಕತೆಯೊಳಗೆ ತಳುಕುಹಾಕಿಕೊಂಡಿದೆ. ಚೀನುವನ್ನು ಮದುವೆಯಾಗಿ ಸುಖದಿಂದಿರಬಹುದಾಗಿದ್ದ ಮನು, ನಾಯಿ ಭೈರವನ ಕಣ್ಣು, ತನ್ನ ಮೃತ ಪತಿಯ ಕಣ್ಣೆನುತಿರುವುದನ್ನು ಗುರುತಿಸಿ ಚೀನುವನ್ನು ಕಂಡು ಬೊಗಳುವ ಅದರ ಇಂಗಿತವನ್ನರಿತವಳಂತೆ ಅದರೊಂದಿಗೆ ಬಾಳುವ ನಿರ್ಧಾರಮಾಡುತ್ತಾಳೆ. ಇಂಥ ಚಿತ್ರ–ವಿಚಿತ್ರ ಸ್ವಭಾವದ ಹೆಣ್ಣುಗಳನ್ನು ಮಾಸ್ತಿ ಸಹಾನುಭೂತಿಯಿಂದಲೇ ಚಿತ್ರಸಿರುವುದು ಒಂದು ದೊಡ್ಡ ಸಾಧನೆಯೆಂದೇ ಹೇಳಬೇಕು.

ದೇಶಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡ ವೀರವನಿತೆಯರ ಚಿತ್ರ, ಸಾವಿಯಬ್ಬೆ, ನಿಜಗಲ್ಲಿನ ರಾಣಿ, ಪೆನುಕೊಂಡೆಯ ಕೃಷ್ಣಮೂರ್ತಿ ಮುಂತಾದ ಕತೆಗಳಲ್ಲಿ ಕಾಣಿಸಿಕೊಂಡಿದೆ. ಸಾವಿಯಬ್ಬೆ, ಯುದ್ಧದಲ್ಲಿ ಹೋರಾಡುತ್ತಲೇ ವೀರಮರಣವನ್ನೈದಿದಳು. ನಿಜಗಲ್ಲಿನರಾಣಿ ಗಿರಿಜವ್ವೆ ತನ್ನ ತಮ್ಮನಿಂದಲೇ ರಾಜ್ಯಕ್ಕೆ ಕುತ್ತು ಎಂಬುದನ್ನರಿತು ಉಪಾಯದಿಂದಲೇ ಅವನನ್ನು ಕೋಟೆಯ ಮೇಲೆ ಕರೆದೊಯ್ದು, ಅವನೊಂದಿಗೆ ತಾನೂ ಕಂದರಕ್ಕೆ ಹಾರಿ ಪ್ರಾಣಬಿಡುತ್ತಾಳೆ. ಪೆನುಕೊಂಡೆಯ ರಾಣಿಯರು, ಶತ್ರುಗಳ ಕೈಗೆ ಸಿಗಬಾರದೆಂದು ನೆಲಮಾಳಿಗೆಯಲ್ಲಿಯೇ ಅವಿತುಕೊಂಡು, ಅಲ್ಲಿಯೇ ಪ್ರಾಣತ್ಯಜಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ದೋರನ ಕಂಬಳದರಾಣಿ ಅವಿವೇಕಿಯಾಗಿ

ವ್ಯವಹಾರ ಚಾತುರ್ಯಹೀನಳಾಗಿ, ಆ ಮೂಲಕವಾಗಿ ದೇಶಕ್ಕೆ ದೊಡ್ಡ ಗಂಡಾಂತರ ತಂದು ಹಾಕುತ್ತಾಳೆ. ನಾಡು–ಸಂಸ್ಕೃತಿ ಇವುಗಳನ್ನು ಕುರಿತ ಪ್ರಜ್ಞೆ ಅಭಿಮಾನಗಳನ್ನು ಆ ನಾಡಿನ ಮಹಿಳೆಯರಲ್ಲಿ ಗುರುತಿಸಿದರೆ ಆಶ್ಚರ್ಯವೆನ್ನಿಸದಿರಬಹುದು. ಆದರೆ ಮಸುಮತ್ತಿಯಂಥ ಕತೆಯಲ್ಲಿ ಕಂಡುಬರುವ ಎಮಿಲಿ ಪರದೇಶದ ಹೆಣ್ಣಾಗಿದ್ದರೂ ಕೂಡ ಇಂಡಿಯಾದ ಬಗ್ಗೆ ನಮ್ಮ ಸಂಸ್ಕೃತಿಯ ಬಗ್ಗೆ ಅವಳು ತೋರಿಸುವ ಕಳಕಳಿ ಮೆಚ್ಚುವಂತಹದು. ಈ ದೇಶದಲ್ಲಿ ಒಳ್ಳೆಯದು ಎಲಿದ್ದರೂ ತಮ್ಮ ದೇಶಕ್ಕೆ ಒಯ್ಯಬೇಕು ಎಂದು ಬಯಸುವ ಪರಂಗಿಗಳ ಕಣ್ಣನ್ನು ಅವಳು ತೆರೆಯಿಸುತ್ತಾಳೆ.

ಮಾಸ್ತಿಯವರ ಕತೆಗಳಲ್ಲಿ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ವಿವರಣೆ ಅನವಶ್ಯಕ. ಪಾತ್ರದ ಒಂದೇ ಮಾತು ಅಥವಾ ಒಂದು ಕ್ರಿಯೆ ನಮಗೆ ಅವರೆಂಥವರೆಂಬುದನ್ನು ಅರುಹಿ ಬಿಡುತ್ತದೆ. ಒಮ್ಮೆ ಸುಳಿದು ಹೋದಂತೆ ಚಿತ್ರಿತವಾದ ಶ್ರೀಕೃಷ್ಣನ ಅಂತಿಮದರ್ಶನದ ರುಕ್ಮಿಣಿಯ ಪಾತ್ರ ಮಾಸ್ತಿಯವರ ಹೆಣ್ಣುಗಳಲ್ಲಿಯೇ ಅತ್ಯಂತ ಶ್ರೇಷ್ಠವಾದ ಮತ್ತು ಪರಿಪಕ್ವ ಮನಸ್ಸಿನ ದೃಢಚಿತ್ತದ ಮಾದರಿಯದಾಗಿದೆ. ಕೃಷ್ಣನ ಸಾವನ್ನು ಅವಳು ಧೈರ್ಯದಿಂದಲೇ ಸ್ವೀಕರಿಸಬಲ್ಲವಳಾಗಿದ್ದಾಳೆ. ದೇಹವನ್ನು ಬಿಟ್ಟರೂ ಅವರು ನನ್ನನ್ನು ಒಂಟಿಯಾಗಿ ಬಿಟ್ಟು ಹೋಗುವುದಿಲ್ಲ ಜೊತೆಯಲ್ಲಿಯೇ ಇರುತ್ತಾರೆ ಎಂದು ಅರ್ಜುನನಿಗೆ ಅವಳು ತಿಳಿಹೇಳುತ್ತಾಳೆ.

ಮಾಸ್ತಿಯವರ ಪ್ರಸಿದ್ಧ ಕತೆಗಳಲ್ಲಿ ಮೊಸರಿನ ಮಂಗಮ್ಮನೂ ಒಂದು. ಗಂಡನಿಂದಲೂ ವಿಶೇಷ ಸುಖಕಾಣದೆ ಮಗನನ್ನು ಪ್ರೀತಿಯಿಂದ ಬೆಳೆಸಿ, ಸೊಸೆಗೊಪ್ಪಿಸಬೇಕಾಗಿ ಬಂದ ಮಂಗಮ್ಮ, ಮೊಮ್ಮಗನ ಮೇಲೂ ತನ್ನ ಅಧಿಕಾರ ಸ್ಥಾಪಿಸಲಾರದವಳಾಗಿದ್ದಾಳೆ. ಕತೆಯ ಪ್ರಾರಂಭದಲ್ಲಿಯೇ ಮಂಗಮ್ಮ ನಿರೂಪಕಿಗೆ ಗಂಡನ ಮೆಚ್ಚುಗೆಯನ್ನು ಹೇಗೆ ಗಳಿಸಬೇಕೆಂಬುದರ ಬಗ್ಗೆ ಅನೇಕ ಸಲಹೆಗಳನ್ನು ಕೊಡುವುದರಲ್ಲಿಯೇ ಅವಳ ಜೀವನದ ವ್ಯಂಗ್ಯವಿದೆ. ಮಗ ಸೊಸೆಯರೊಂದಿಗೆ ಜಗಳವಾಡಿ ಬೇರೆಯಾಗುಳಿದ ಅವಳಿಗೆ ಯಾವ ವಯಸ್ಸಿನಲ್ಲಿಯೂ ಹೆಣ್ಣು ಒಂಟಿಯಾಗಿ ಬಾಳುವುದು ಸಾಧ್ಯವಿಲ್ಲ ಎಂಬುದು ಅನುಭವಕ್ಕೆ ಬರುತ್ತದೆ. ಅವಳ ಹಣದ ಮೇಲೆ ಕಣ್ಣಿರುವ ಸೊಸೆ, ಅಜ್ಜಿ–ಮೊಮ್ಮಗನ ನಂಟನ್ನು ಮುಂದುಮಾಡಿಕೊಂಡು, ಒಡೆದ ಸಂಸಾರವನ್ನು ಒಂದುಗೂಡಿಸುವ ನಾಟಕವಾಡುತ್ತಾಳೆ. ಸದ್ಯಕ್ಕೇನೋ ಮಂಗಮ್ಮ ಹಾಲು ಮಾರುವುದನ್ನು ಸೊಸೆಗೆ ವಹಿಸಿ, ಮೊಮ್ಮಗನೊಂದಿಗೆ ಮನೆಯಲ್ಲಿಯೇ ಕುಳಿತು ಕಾಲಹರಣ ಮಾಡಬಹುದು. ಆದರೆ ಯಜಮಾನಿಕೆಯ ಪೈಪೋಟಿ ಮಾತ್ರ ಕೊನೆಗೊಂಡಿತೆಂದು ಹೇಳುವುದು ಕಷ್ಟ, ಅಷ್ಟೇ ಅಲ್ಲ, ಈ ಅತ್ತೆ–ಸೊಸೆಯರ ಯಜಮಾನಿಕೆಯ ಸಲುವಾಗಿ ಸಂಘರ್ಷದಲ್ಲಿ ಮಗ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದನ್ನು ಮಾಸ್ತಿ, ತುಂಬ ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಮಂಗಮ್ಮ ನಂಜಮ್ಮರಿಗೆ ಹೆಸರಾದರೂ ಇದೆ, ಆ ಮಗನಿಗೆ ಒಂದು ಹೆಸುರಕೂಡ ಇಲ್ಲವೆಂಬಂತೆ 'ಆ ತಾಯಿಯ ಮಗ' 'ಈ ಹೆಂಡತಿಯ ಗಂಡ'ನಾಗಿದ್ದಾನೆ. ಹೆಣ್ಣು–ಹೆಣ್ಣುಗಳಲ್ಲಿ ನಡೆಯುವ ಈ ಸಂಘರ್ಷಕ್ಕೆ ಕೊನೆ ಮೊದಲೆಂಬುದೇ ಇಲ್ಲ. ಅದು

ಎಂದೂ ಮುಗಿಯದ ಪೈಪೋಟಿ. 'ಹಳ್ಳಿಯಲ್ಲಾದರೆ ಮೊಸರು ಮಾರುವ ಮಂಗಮ್ಮನ ಮನೇಲಿ, ಪಟ್ಟಣದಲ್ಲಿ ಮೊಸರು ತಕ್ಕೊಳ್ಳುವ ತಂಗಮ್ಮನ ಮನೇಲಿ; ನಡೆಯುತ್ತಲೇ ಇದೆ ಈ ವ್ಯಾಪಾರ, ಕೊನೆಯ ಅಂಕಣದ ನಾಟಕ'[೧೭].

ಹೆಣ್ಣಿನ ವ್ಯಕ್ತಿತ್ವದ ಬಹುಮುಖಗಳ ಪರಿಚಯ ಮಾಸ್ತಿಯವರಿಗಿದೆ ಎನ್ನುವದು ಇದುವರೆಗೆ ತೋರಿಸಿರುವ ಅವರ ಕತೆಗಳಲ್ಲಿ ಕಂಡುಬರುವ ವೈವಿಧ್ಯಮಯ ಪಾತ್ರಚಿತ್ರಣದಿಂದ ತಿಳಿದು ಬಂದಿರಲಿಕ್ಕೆ ಸಾಕು. ಹೆಣ್ಣಿನ ಮುಗ್ಧತೆ,ಅಜ್ಞಾನಗಳನ್ನು ನಾವು ರಂಗಪ್ಪನ ದೀಪಾವಳಿ, ರಂಗಪ್ಪನ ಕೋರ್ಟ ಶಿಪ್ ಮುಂತಾದ ಕತೆಗಳಲ್ಲಿ ಕಾಣುತ್ತೇವೆ. ಸೂಕ್ಷ್ಮ ನಿರೀಕ್ಷಣಾ ಶಕ್ತಿಯನ್ನು ಹೊಂದಿರುವ ಮಾಸ್ತಿ, ತಿಳಿಹಾಸ್ಯಮಯವಾದ ಶೈಲಿಯಲ್ಲಿ ರೋಚಕವೆನ್ನಿಸುವ ಕತೆಗಳನ್ನು ಬರೆಯುತ್ತಾರೆ. ಹೆಣ್ಣನ್ನು ಕುರಿತು ಕೆಲವೊಮ್ಮೆ ನವಿರಾದ ಹಾಸ್ಯವನ್ನು, ವ್ಯಂಗ್ಯದನುಡಿಗಳನ್ನು ಪಾತ್ರಗಳಿಂದ ಹೇಳಿಸುವುದೂ ಉಂಟು. ಅವೆಲ್ಲವೂ ಮಾಸ್ತಿಯವರ ಅಭಿಪ್ರಾಯಗಳೇ ಎಂದು ಅಧಿಕೃತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಪುರುಷಪ್ರಧಾನ ಸಮಾಜ ಹೆಣ್ಣನ್ನು ಕಾಣುವ ದೃಷ್ಟಿಕೋನ ಅವುಗಳಲ್ಲಿ ಅಡಗಿರುತ್ತದೆಯಾದ್ದರಿಂದ ಅವು ಅಧ್ಯಯನಯೋಗ್ಯವೆನಿಸುತ್ತವೆ. ರಂಗಪ್ಪನ ದೀಪಾವಳಿ ಕತೆಯಲ್ಲಿ ಹೆಂಡತಿಯಬಳಿ ತಲೆ ಬಾಚಿಸಿಕೊಳ್ಳಲು ಬಯಸಿದ ನಿರೂಪಕರನ್ನು ಕುರಿತು ಅವರ ಹೆಂಡತಿ 'ಇಂದು ತಲೆಬಾಚಿಸಿಕೊಳ್ಳೋಣ ಎನ್ನಿಸಿತು, ನಾಳೆ ಯಾರನ್ನಾದರೂ ಮದುವೆಯಾಗೋಣ ಎಂದು ತೋರಬಹುದು' ಎಂದಿದ್ದಕ್ಕೆ ಅವರು 'ನಮ್ಮ ಮನೆಯಲ್ಲಿ ಆಗಾಗ ಕಾದಾಡುವ ಬೆಕ್ಕುಗಳ ಹೋರಾಟದ ಗದ್ದಲವನ್ನು ನಿಲ್ಲಿಸುವುದು ನನಗೆ ಸಾಕಾಗಿದೆ. ನಿನ್ನ ಜೊತೆಗೆ ಇನ್ನೊಬ್ಬ ಹೆಂಗಸನ್ನು ತಂದು ನೀವು ಹೋರಾಡುವದನ್ನು ನೋಡಿ ನಾನು ಬದುಕಿದ ಹಾಗಾಯಿತು' ಎಂದು ಲೇವಡಿಮಾಡುತ್ತಾರೆ. ರಂಗಪ್ಪನ ಕೋರ್ಟಶಿಪ್[೧೮] ನಲ್ಲಿ ರತ್ನಮ್ಮನ ಬರವಣಿಗೆಯನ್ನು ವರ್ಣಿಸುವಾಗ 'ಹೆಂಗಸರ ಮನಸ್ಸಿನಂತೆ ಡೊಂಕು ಡೊಂಕು' ಎನ್ನುತ್ತಾರೆ! [೧೯] ಅದೇ ಕತೆಯಲ್ಲಿಯೇ ಮತ್ತೊಂದೆಡೆ 'ಭಗವಂತನು ಸ್ತ್ರೀಯರ ಮಾರ್ದವವನ್ನು ಮರೆಸುವುದಕ್ಕೆ ಕಠಿಣವಾದ ಮಾತನ್ನೂ ಮಾತಿನ ಕಾಠಿಣ್ಯವನ್ನು ಮರೆಸುವದಕ್ಕೆ ಇಂಪಾದ ದನಿಯನ್ನೂ ಅವರಿಗೆ ಕೊಟ್ಟಿದ್ದಾನೆ' ಎನ್ನಲಾಗಿದೆ.[೨೦] ಮತ್ತೊಂದಡೆ ವ್ಯಂಗ್ಯದ ಧಾಟಿಯಲ್ಲಿ ರತ್ನಮ್ಮನ ಕೆಲಸ ರಂಗಪ್ಪನಿಗೆ ಬುದ್ದಿಹೇಳುವುದು' ಎಂದೂ ಬರೆಯುತ್ತಾರೆ.[೨೧]ಪೆಚ್ಚುಮೋರೆಯನ್ನು ಕಂಡರೆ 'ಕಾರಣವಿಲ್ಲದೆ ಹೆಂಡತಿಯ ಕೈಯಲ್ಲಿ ಮಾತುಕೇಳಿದವನ ಮುಖದ ಹಾಗೆ' ಎಂದು ವರ್ಣಿಸುತ್ತಾರೆ.[೨೨] 'ಯಾವ ವೃದ್ಧನನ್ನೇ ಆಗಲಿ, ಯಾವ ಜ್ಞಾನಿಯನ್ನೇ ಆಗಲಿ, ಯಾವ ಸನ್ಯಾಸಿಯನ್ನೆ ಆಗಲಿ ಸ್ತ್ರೀರೂಪವು ನಿಜವಾಗಿಯೂ ಸೆಳೆಯಬಲ್ಲದು' ಎಂಬುದನ್ನು ಸಂಸ್ಥಾಪಿಸುವುದಕ್ಕೇ ಒಂದು ಹಳೆಯಕತೆಯನ್ನು ಬರೆದಿದ್ದಾರೆ. ಹೆಣ್ಣಿಗೆ ರೂಪ ಅಥವಾ ವಿದ್ಯೆ ಎರಡರಲ್ಲಿ ಒಂದಿರಬೇಕು ಎಂಬುದು ಕೆಲವರ ಅಭಿಪ್ರಾಯ. ಮೇಷ್ಟ್ರು ಸರಸ್ವತಿಯನ್ನು ಕುರಿತು 'ಸರಸ್ವತಮ್ಮ ಚೆನ್ನಾಗಿ ಓದು ತಾಯಿ, ಗೌರಮ್ಮ ಓದಿದಹಾಗೆ ಓದಬೇಕು' ಅಂದರೆ 'ಅವಳೇ ಚೆನ್ನಾಗಿ ಓದಲಿ ಮೇಷ್ಟರೇ, ನನಗೇನು ಮೆಳ್ಳಗಣ್ಣೇ?' ಎಂದು ಉತ್ತರಕೊಡುತ್ತಾಳೆ.[೨೩]

ಕೆಲವೊಮ್ಮೆ ಮಾಸ್ತಿ ಚಾಟಿ ಏಟಿನಂತೆ ಮಾತಿನಲ್ಲಿ ಬಿರುಸಾದ ವ್ಯಂಗ್ಯ ಬಳಸುತ್ತಾರೆ. ಉದಾಹರಣೆಗೆ 'ಹೆಂಗಸು ಹೆದರಿದರೆ ಗಂಡಸು ಧೈರ್ಯ ಹೇಳಬಹುದು. ಹೆಂಗಸು ಧೈರ್ಯಮಾಡಿದರೆ ಗಂಡಸಿನ ಪಾಡು ನಾಯಿ ಪಾಡು' ಎಂದು.[೪] ಹೆಣ್ಣನ್ನು ಅವಳೂ ಒಬ್ಬ ವ್ಯಕ್ತಿ ಎಂಬ ದೃಷ್ಟಿಕೋನದಿಂದ ನೋಡಿದಾಗ, 'ಗಂಡು ಬರಿಯ ಗಂಡಾಗಿ ಯೋಗ್ಯತೆಯನ್ನಳೆಯದೇ ಮಾನವನಾಗಿ ನೋಡುವದಾದರೆ ಒಂದು ಹೆಣ್ಣಿನ ತಪ್ಪು ಒಂದು ಗಂಡಿನ ತಪ್ಪಿಗಿಂತ ಹೆಚ್ಚಿನ ತಪ್ಪು ಆಗುವುದಿಲ್ಲ'[೫] ಎಂಬ ಮಾತಾಗಲೀ,ಗಂಡು ಮಾಡಿದ್ದು ಸರಿಯಾದರೆ, ಹೆಣ್ಣಿಗೂ ಅದು ಸರಿ ಅನ್ನಿಸಬೇಕು[೬] ಮುಂತಾದ ಹೇಳಿಕೆಗಳಲ್ಲಿ ವ್ಯಕ್ತವಾಗಿದೆ. 'ಮದುವೆ ಆದರೂ ಆಗಬಹುದು ಎನ್ನುವ ಹೆಣ್ಣು ಸರಿಯಾದ ಕಾಲದಲ್ಲಿ ಜೊತೆಯನ್ನು ಪಡೆಯಬೇಕು'[೭] ಇತ್ಯಾದಿ ಉಪದೇಶಾತ್ಮಕ ಮಾತುಗಳೂ ಅಲ್ಲಲ್ಲಿ ಕಂಡುಬರುತ್ತವೆ.

ಮಾಸ್ತಿ ಕಥೆಗಳನ್ನು ಬಿಡಿ ಬಿಡಿಯಾಗಿ ಓದುವುದರಲ್ಲಿ ಒಂದು ರೋಚಕತೆ ಇದೆ, ನಿಜ; ಆದರೆ ಒಟ್ಟಾರೆ ಕಥೆಗಳಲ್ಲಿ ಚಿತ್ರಿತವಾಗಿರುವ ಹೆಣ್ಣನ್ನು ನೋಡಿದಾಗ, ಮಾಸ್ತಿಯವರ ಕಲ್ಪನೆಯಲ್ಲಿ ಮಹಿಳೆ ಹೀಗೆ ಎಂಬ ಒಂದು ಸಿದ್ಧರೂಪ ಕಲ್ಪನೆ ಇಲ್ಲದಿರುವುದು ಸ್ಪಷ್ಟವಾಗುತ್ತದೆ. ಅಂದರೆ ಹೆಣ್ಣನ್ನು ಕುರಿತು ಮಾಸ್ತಿ, ಸಾಮಾನ್ಯ ಸಂಪ್ರದಾಯದ ಬರಹಗಾರರಂತೆ,ಅಥವಾ ನವೋದಯದ ಇತರ ಬರಹಗಾರರು ಕಂಡುಕೊಂಡಂತೆ ತಾಯಿ, ಹೆಂಡತಿ, ಮಗಳು, ತಂಗಿ, ಗೆಳತಿ ಇತ್ಯಾದಿ ಸಿದ್ಧ ಪಾತ್ರಗಳನ್ನಾಗಿ ನೋಡದೆ, ಮಾನವಸ್ವಭಾವದ ಚಿತ್ರಶಾಲೆಯಂತೆ ವೈವಿಧ್ಯಮಯವಾಗಿ ಚಿತ್ರಿಸಲು, ವಾಸ್ತವದ ಚಿತ್ರಣ ನೀಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಮಾಸ್ತಿಯವರೇ ತಮ್ಮ ಕಥೆಯ ಪಾತ್ರವೊಂದರಿಂದ ಹೇಳಿಸಿರುವಂತೆ, ಹೆಣ್ಣೇ ಹೀಗೆ, ಗಂಡು ಏನನ್ನೂ ಅರಿಯದ ಹುಡುಗನಾಗಿರುವಂದಿನಿಂದ ಎಲ್ಲವನ್ನು ಅರಿತೆನೆಂಬ ವೃದ್ಧನಾಗುವವರೆಗೆ ಯಾವ ಹೊತ್ತಿನಲ್ಲಿಯೂ ಹೆಣ್ಣಿನ ಸ್ವಭಾವವನ್ನು ಅರಿತೆನೆನ್ನುವಂತಿಲ್ಲ. ಇಷ್ಟೆಲ್ಲ ವೈವಿಧ್ಯಮಯವಾಗಿ ತಮ್ಮ ನೂರಾರು ಪಾತ್ರಗಳಲ್ಲಿ ಹೆಣ್ಣನ್ನು ಚಿತ್ರಿಸಿರುವ ಮಾಸ್ತಿಯವರದ್ದೇ ಇಂತಹ ಅಭಿಪ್ರಾಯವೆಂದ ಮೇಲೆ ನಿಜವಾಗಿ ಯಾರೂ ಯಾರನ್ನೂ ಸಂಪೂರ್ಣವಾಗಿ ಅರಿಯಲು ಸಾಧ್ಯವಿಲ್ಲವೆಂದೇ ಭಾವಿಸಬೇಕಾಗುತ್ತದೆ. ಮಾಸ್ತಿ ಹೆಣ್ಣನ್ನು ಕುರಿತು ತೋರಿಸಿರುವ ಗೌರವಕ್ಕೆ ಕೃತಜ್ಞತೆಗಳು ಸಲ್ಲಲೇಬೇಕು.

ಅಡಿಟಿಪ್ಪಣಿಗಳು

೧. ಚೆನ್ನಿ ರಾಜೇಂದ್ರ, ಮಾಸ್ತಿಯವರ ಸಣ್ಣಕಥೆಗಳು ಪುಟ ೫
೨. ಅದೇ ಪುಟ ೪೭
೩. ಅಶೋಕ ಟಿ.ಪಿ. ಸಾಹಿತ್ಯ ವಿಮರ್ಶೆ ೧೯೮೭ ಪುಟ ೧೦೭
೪. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರ ಕಥೆಗಳು ಸಂ. ೧, ಪು. ೭೩
೫. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರ ಕಥೆಗಳು ಸಂ. ೨, ಪು. ೩೫೯

೬. ಚೆನ್ನಿ ರಾಜೇಂದ್ರ, ಮಾಸ್ತಿಯವರ ಸಣ್ಣಕಥೆಗಳು ಪುಟ ೨೭
೭. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರ ಕಥೆಗಳು ಸಂ. ೧, ಪು ೪೩೭
೮. ಅದೇ ಪು. ೪೨೩
೯. ಚೆನ್ನಿ ರಾಜೇಂದ್ರ, ಮಾಸ್ತಿಯವರ ಸಣ್ಣಕಥೆಗಳು, ಪು. ೨೫
೧೦. ಅಶೋಕ ಟಿ.ಪಿ., ಸಾಹಿತ್ಯವಿಮರ್ಶೆ ೧೯೮೭, ಪು. ೧೦೪
೧೧. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರಕಥೆಗಳು, ಸಂ. ೨, ಪು. ೩೪೩
೧೨. ಶ್ರೀನಿವಾಸ, ಸಣ್ಣಕಥೆಗಳು, ೯,೧೦, ಪು. ೫೩
೧೩. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರಕಥೆಗಳು, ಸಂ. ೨. ಪು. ೪೦೬
೧೪. ಶ್ರೀನಿವಾಸ, ಸಣ್ಣಕಥೆಗಳು ೯, ೧೦, ಪು. ೧೨೧
೧೫. ಶ್ರೀನಿವಾಸ, ಸಣ್ಣಕಥೆಗಳು ೧೨, ೧೩, ಪು. ೪೮
೧೬. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರಕಥೆಗಳು, ಸಂ. ೨, ಪು. ೪೩೦
೧೭. ಮಾವಿನಕೆರೆ ರಂಗನಾಥನ್,(ಸಂ) ಮಾಸ್ತಿ ಅವರ ಸಮಗ್ರ ಕಥೆಗಳು, ಸಂ. ೧, ಪು. ೩೦೭
೧೮. ಅದೇ., ಪು. ೧೮
೧೯. ಅದೇ., ಪು. ೨೮
೨೦. ಅದೇ., ಪು. ೩೦
೨೧. ಅದೇ., ಪು. ೩೦
೨೨. ಅದೇ., ಪು. ೩೯
೨೩. ಅದೇ., ಪು. ೮೬
೨೪. ಅದೇ., ಪು. ೧೦೪–೧೦೫
೨೫. ಶ್ರೀನಿವಾಸ, ಸಣ್ಣಕಥೆಗಳು ೧೨, ೧೩, ಪು. ೩೪
೨೬. ಅದೇ., ಪು. ೪೭
೨೭. ಮಾವಿನಕೆರೆ ರಂಗನಾಥನ್, (ಸಂ) ಮಾಸ್ತಿ ಅವರ ಸಣ್ಣಕಥೆಗಳು, ಪು. ೪೨೪
೨೮. ಅದೇ., ಪು. ೩೭೨

ಗ್ರಂಥಋಣ

೧. ಅಶೋಕ ಟಿ.ಪಿ., ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೧

೨. ಕೃಷ್ಣಮೂರ್ತಿ ಎಂ.ಜಿ., ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೦

೩. ಚೆನ್ನಿ ರಾಜೇಂದ್ರ, ಮಾಸ್ತಿಯವರ ಸಣ್ಣಕೆಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು, ೧೯೯೧

೪. ನಾಗಭೂಷಣ ಡಿ.ಎಸ್., ಗಮನ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ೧೯೯೦

೫. ನಾಗರಾಜ್ ಡಿ.ಆರ್. ಅಮೃತ ಮತ್ತು ಗರುಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ೧೯೯೦

೭. ನಾಯಕ ಜಿ.ಎಚ್. ಅನಿವಾರ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೦

೭. ನಾಯಕ ಜಿ.ಎಚ್. ನಿಜದನಿ, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೮೮

೮. ನಾಯಕ ಹಾ.ಮಾ. (ಸಂ). ಶ್ರೀನಿವಾಸ ಸಾಹಿತ್ಯ, ಮೈಸೂರು, ೧೯೭೪

೯. ಮಾವಿನಕೆರೆ ರಂಗನಾಥನ್ (ಸಂ), ಮಾಸ್ತಿ ಅವರ ಸಮಗ್ರ ಕಥೆಗಳು, ಸಂ. ೧ ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೮೭

೧೦. ಮಾವಿನಕೆರೆ ರಂಗನಾಥನ್,(ಸಂ), ಮಾಸ್ತಿಅವರ ಸಮಗ್ರ ಕಥೆಗಳು ಸಂ. ೨ ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೮೮

೧೧. ರಾಘವೇಂದ್ರರಾವ್ ಎಚ್. ಎಸ್. ನಿಲುವು, ಕನ್ನಡ ಸಂಘ, ಕ್ರೈಸ್ತ್ ಕಾಲೇಜು, ಬೆಂಗಳೂರು ೧೯೮೯

೧೨. ಶಿವರುದ್ರಪ್ಪ ಜಿ. ಎಸ್.,(ಸಂ), ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ, ಬೆಂ. ವಿ. ಬೆಂಗಳೂರು ೧೯೮೩

೧೩. ಶ್ರೀನಿವಾಸ., ಸಣ್ಣ ಕಥೆಗಳು, ೯,೧೦, ಬೆಂಗಳೂರು, ೧೯೫೦

೧೪. ಶ್ರೀನಿವಾಸ., ಸಣ್ಣಕಥೆಗಳು, ೧೨, ೧೩. ಬೆಂಗಳೂರು, ೧೯೫೨

❑ ❑

ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು

—ಅಶೋಕ ಶೆಟ್ಟರ

ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ ನಮ್ಮ ಲೇಖಕರಲ್ಲಿ ಇತಿಹಾಸದ ಕುರಿತಾಗಿದ್ದ ಗ್ರಹಿಕೆಯ ಏಕತಾನತೆಯನ್ನು ನಾವು ಆಕ್ಷೇಪಿಸಲಾರೆವು; ಚರಿತ್ರೆಯ ಅಧ್ಯಯನಕ್ಷೇತ್ರದಲ್ಲಿ ಉಂಟಾದ ಬದಲಾವಣೆಗಳು ಅಂಥ ಲೇಖಕರ ಬರವಣಿಗೆಯನ್ನು ಪ್ರಭಾವಿಸಿ ತನ್ಮೂಲಕ ಚರಿತ್ರೆಯ ಕುರಿತಾದ ಅವರ ಕಲ್ಪನೆಯಲ್ಲಿ ಏನಾದರೂ ಪರಿವರ್ತನೆಗೆ ಕಾರಣವಾಗಿವೆಯೇ, ಆಗದಿದ್ದರೆ ಏಕಾಗಲಿಲ್ಲ ಎಂದೆಲ್ಲ ಕೇಳಲಾರೆವು. ಚರಿತ್ರೆಯ ಅಧ್ಯಯನ ಕ್ಷೇತ್ರದಲ್ಲಾದರೂ ಅಂಥ ಮಹತ್ವದ ಪರಿವರ್ತನೆಗಳು ವ್ಯಾಪಕವಾಗಿ ಆಗಿವೆ ಎಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ವಿಚಿತ್ರವೆನಿಸಬಹುದು, ತೀರ ಇತ್ತೀಚಿನ ಹತ್ತಾರು ವರ್ಷಗಳಲ್ಲಿ ನಡುಗಡ್ಡೆಗಳಂತಿರುವ ಕೆಲ ಅಕೆಡೆಮಿಕ್ ವರ್ತುಲಗಳಲ್ಲಿ ನೆಲೆನಿಂತ ವೈಚಾರಿಕತೆಯನ್ನು ಹೊರತುಪಡಿಸಿದರೆ ನಮ್ಮ ಇತಿಹಾಸ ಅಧ್ಯಯನ ವಿಧಾನ ಈ ಶತಮಾನದ ಪ್ರಾರಂಭಿಕ ದಶಕಗಳಲ್ಲಿ ಪ್ರಭಾವಿಯಾಗಿದ್ದ ಇತಿಹಾಸದ ರಾಷ್ಟ್ರೀಯವಾದಿ ಚಿಂತನಧಾರೆಗಿಂತ ಸ್ವರೂಪದಲ್ಲಿ ಬಹಳ ಭಿನ್ನವೇನೂ ಆಗಿಲ್ಲ.

ಗತಕಾಲದ ವೈಭವೀಕರಣ ಈ ರಾಷ್ಟ್ರೀಯವಾದಿ ಚಿಂತನಧಾರೆಯ ಪ್ರಮುಖ ಲಕ್ಷಣಗಳಲ್ಲೊಂದಾಗಿತ್ತು. ಐತಿಹಾಸಿಕ ಕಾದಂಬರಿ ಎಂಬೊಂದು ಸೃಜನಪ್ರಕಾರದಲ್ಲಿ ನಾವು ಕಾಣುವ ವಾಗಾಡಂಬರ, ವೈಭವೀಕರಣ ಇದೆಲ್ಲ ಇತಿಹಾಸದ ರಾಷ್ಟ್ರೀಯವಾದಿ ಚಿಂತನಾಕ್ರಮದ ಆ ಲಕ್ಷಣದ– ಅಂದರೆ ವೈಭವೀಕರಿಸುವ ಪ್ರವೃತ್ತಿಯ–ಸಾಹಿತ್ಯಿಕ ವಿಸ್ತರಣೆಯಾಗಿತ್ತಷ್ಟೆ,

ಮೊದಲಾಗಿ ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು ಕುತೂಹಲಕರವಾಗುವುದು ಈ ಕಾರಣಕ್ಕೆ. ಇವುಗಳಲ್ಲಿ ವಿಶೇಷವಾದ ವೈಭವೀಕರಣವಿಲ್ಲ. ವ್ಯತಿರಿಕ್ತವಾಗಿ ಎರಡು ರಾಜ್ಯ ವ್ಯವಸ್ಥೆಗಳು ಅವನತಿಯತ್ತ ಸಾಗಿದ ಕಾಲಘಟ್ಟಗಳ ವಿದ್ಯಮಾನಗಳನ್ನು ಅವು ವಸ್ತುವಾಗಿ ಹೊಂದಿವೆ. ಐತಿಹಾಸಿಕ ಕಾದಂಬರಿಯೆಂದರೆ ಇತಿಹಾಸದ ಪಾತ್ರಗಳ ಆದರ್ಶೀಕರಣ ಅಥವಾ ವೈಭವೀಕರಣ ಎಂಬಂಥ ಕಲ್ಪನೆ ವ್ಯಾಪಕವಾಗಿದ್ದ ಸಂದರ್ಭದಲ್ಲಿ ಈ ಕಲ್ಪನೆಗೆ ವ್ಯತಿರಿಕ್ತವಾಗಿದ್ದ ಈ ಕೃತಿಗಳು ವಿವಾದಾಸ್ಪದವಾದವು. 'ಸುಬ್ಬಣ್ಣ' ಎಂಬ ನೀಳ್ಗತೆಯನ್ನು ಹೊರತುಪಡಿಸಿದರೆ ಮಾಸ್ತಿ ಬರೆದ ಎರಡೂ ಕಾದಂಬರಿಗಳು ಐತಿಹಾಸಿಕ ವಸ್ತುವನ್ನು ಹೊಂದಿದಂಥವುಗಳು. ಮೊದಲನೆಯದು 'ಚೆನ್ನಬಸವನಾಯಕ' (೧೯೪೯); ಎರಡನೆಯದು 'ಚಿಕವೀರ ರಾಜೇಂದ್ರ' (೧೯೫೬).

ವಿಜಯನಗರದ ದೊರೆಗಳಿಗೆ ಅಧೀನವಾಗಿದ್ದುಕೊಂಡು ತಂತಮ್ಮ ಪ್ರಾಂತ್ಯಗಳಲ್ಲಿ ಪ್ರಭುತ್ವ ನಡೆಸಲು ಮಾನ್ಯತೆ ಪಡೆದಿದ್ದ ಹಲವು ಸಂಸ್ಥಾನಿಕ ಅಥವಾ ನಾಯಕ ಮನೆತನಗಳಲ್ಲಿ ಕೆಳದಿ ನಾಯಕರದೂ ಒಂದು. ಇದೇ ಬಿದನೂರು ನಾಯಕರ ಮೂಲ. ಕೆಳದಿಯಿಂದ ಇಕ್ಕೇರಿಗೆ,

ಅನಂತರ ಅಲ್ಲಿಂದ ಬಿದನೂರಿಗೆ ತಮ್ಮ ರಾಜಧಾನಿಯನ್ನು ಬದಲಿಸಿದ ಇವರನ್ನು ಇಕ್ಕೇರಿ ನಾಯಕರೆಂದೂ ಕರೆಯಲಾಗಿದೆ. ಮೇಲ್ಕಾಣಿಸಿದ ಕಾದಂಬರಿಗಳಲ್ಲಿ ಮೊದಲಿನದಕ್ಕೆ ಹೆಸರು ಕೊಟ್ಟ ಚೆನ್ನಬಸವನಾಯಕ ಈ ಮನೆತನದ ಅರಸುಕುಮಾರ. ಎರಡನೆಯ ಕಾದಂಬರಿಗೆ ಹೆಸರು ಕೊಟ್ಟ ಚಿಕವೀರರಾಜ ಕೊಡಗನ್ನಾಳುತ್ತಿದ್ದ ಹಾಲೇರಿ ರಾಜಮನೆತನದ ಕೊನೆಯ ದೊರೆ.

ಇಕ್ಕೇರಿಸಂಸ್ಥಾನ ಪ್ರವರ್ಧಮಾನವಾಗಿದ್ದಾಗಲೇ ಈ ಮನೆತನದವನೊಬ್ಬ ಜಂಗಮವೇಷ ಧರಿಸಿ ಕೊಡಗಿಗೆ ಹೋಗಿ ಅಲ್ಲಿ ರಾಜಕೀಯ ಪ್ರಭಾವ ಬೆಳೆಸಿಕೊಂಡು ನೆಲೆನಿಂತ ಪರಿಣಾಮವಾಗಿ ಈ ಹಾಲೇರಿ ಅರಸೊತ್ತಿಗೆ ಅಸ್ತಿತ್ವಕ್ಕೆ ಬಂತು ಎನ್ನಲಾಗಿದೆ.

ಸುದೀರ್ಘಕಾಲ ದಕ್ಷಿಣ ಭಾರತದ ವ್ಯಾಪಕ ಪ್ರದೇಶದಲ್ಲಿ ರಾಜಕೀಯ ಐಕ್ಯವೊಂದನ್ನು ಸಾಧ್ಯವಾಗಿಸಿದ್ದ ವಿಜಯನಗರ ಸಾಮ್ರಾಜ್ಯ ೧೬ನೇ ಶತಕದ ಮಧ್ಯದಲ್ಲಿ ಪತನವಾದಾಗಿನಿಂದ ೧೯ನೇ ಶತಕದ ಮಧ್ಯದ ವೇಳೆಗೆ ಆಂಗ್ಲರು ಒಂದು ರಾಜಕೀಯ ಶಕ್ತಿಯಾಗಿ ಭದ್ರವಾಗಿ ಬೇರೂರಿದ ವರೆಗಿನ ಕಾಲಾವಧಿ ಇವೆರಡೂ ಕಾದಂಬರಿಗಳಿಗೆ ಹಿನ್ನೆಲೆಯಾಗಿದೆ. ಕನ್ನಡನಾಡಿನ ಚರಿತ್ರೆಯಲ್ಲಿ ಈ 300 ವರ್ಷಗಳ ಕಾಲಾವಧಿ ಹಲವಾರು ಏಳುಬೀಳುಗಳನ್ನು ಕಂಡದ್ದು. ಸಂಸ್ಥಾನಿಕರು ಅಥವಾ ಪಾಳೆಯಪಟ್ಟುಗಳಲ್ಲಿದ್ದ ಪರಸ್ಪರ ಕಿತ್ತಾಟಗಳಲ್ಲದೆ ಆಯಾ ಸಂಸ್ಥಾನಗಳ ರಾಜಮನೆತನಗಳಲ್ಲೇ ಅಧಿಕಾರಲಾಲಸೆ ಮೂಲವಾದ ದ್ವೇಷಾಸೂಯೆ, ಕುಟಿಲ–ಕುತಂತ್ರಗಳು ವಿಶೇಷವಾಗಿದ್ದ ಈ ಘಟ್ಟ ಹಲವು ಕ್ಷೋಭೆಗಳನ್ನು ಕಂಡಿತು. ೧೫ನೇ ಶತಮಾನಾಂತ್ಯದಲ್ಲಿ ಪೋರ್ಚುಗೀಜರ ಆಗಮನ ಮೊದಲ್ಗೊಂಡು ೧೬ನೇ ಶತಕದ ಅಂತ್ಯದಲ್ಲಿ ಡಚ್ಚರು, ೧೭ನೇ ಶತಕದ ಆದಿಯಲ್ಲಿ ಆಂಗ್ಲರು ಹಾಗೂ ಫ್ರೆಂಚರು ಹೀಗೆ ಸಾಲುಸಾಲಾಗಿ ಭಾರತಕ್ಕೆ ಬಂದ ಐರೋಪ್ಯ ಶಕ್ತಿಗಳ ಆರ್ಥಿಕ ಹಿತಾಸಕ್ತಿಪ್ರೇರಿತ ಘರ್ಷಣೆಗಳಿಗೂ ಈ ಭೂಭಾಗ ನೆಲೆಯಾಗತೊಡಗಿ ರಾಜಕೀಯ ಸ್ಥಿತಿಗತಿ ಇನ್ನೂ ಸಂಕೀರ್ಣವಾಗಿತ್ತು.

ಇಂಥ ಸಂಕೀರ್ಣ ಸನ್ನಿವೇಶದಲ್ಲಿ ಆಳರಸರು ವೈಯಕ್ತಿಕ ಮಹತ್ವಾಕಾಂಕ್ಷೆ, ಲಾಲಸೆಗಳನ್ನು ಮೀರಿದ ರಾಜಧರ್ಮದ ಆದರ್ಶಗಳನ್ನು ಗೌರವಿಸಿ ರಾಜತಾಂತ್ರಿಕ ಪರಿಣತಿಯಿಂದ ಪ್ರಭುತ್ವವನ್ನು ನಿಭಾಯಿಸಿಕೊಂಡು ಹೋದರೆ ಅವರ ರಾಜ್ಯ ವ್ಯವಸ್ಥೆಯಡಿ ಇದ್ದ ಜನವರ್ಗಗಳು ನೆಮ್ಮದಿಯ ಬಾಳು ಕಾಣುವುದು ಸಾಧ್ಯವಿತ್ತು. ವ್ಯತಿರಿಕ್ತವಾಗಿ ವೈಯಕ್ತಿಕ ವಲುತೆ ತಮ್ಮ ಸಾಮರ್ಥ್ಯ–ಶಕ್ತಿಗಳ ಕುರಿತ ಅವಾಸ್ತವಿಕ ಭ್ರಮೆಗಳು ರಾಜನೀತಿಯನ್ನು ನಿರ್ಧರಿಸುವಂತಾದರೆ ಅಂಥ ಅರಸೊತ್ತಿಗೆ, ರಾಜ್ಯವ್ಯವಸ್ಥೆಗಳ ವಿಘಟಣೆ ನಿಶ್ಚಿತವಿತ್ತು. ಆಳುವಾತನ ಅಸಾಮರ್ಥ್ಯ, ಅದು ಓರ್ವವ್ಯಕ್ತಿಯಾಗಿ ಆತನ ಅಸಾಮರ್ಥ್ಯವಾಗಿರಬಹುದು ಅಥವಾ ಓರ್ವ ರಾಜನಾಗಿ ಇರಬಹುದು., ಹೇಗಿದ್ದರೂ ಅಷ್ಟೇ ಪರಿಣಾಮಕಾರಿಯಾಗಿ ಜನರ ನೆಮ್ಮದಿಯನ್ನು, ಭದ್ರತೆಯನ್ನು ಹಾಳು ಮಾಡಬಲ್ಲದಾಗಿತ್ತು. ಏಕೆಂದರೆ ವ್ಯಕ್ತಿಗತ (Personal) ಮತ್ತು ಅಧಿಕಾರಸಂಬಂಧಿ (Functional) ಇವೆರಡೂ ಏಕೀಭವಿಸಿದಂಥ ಒಂದು ಘಟಕ ಅರಸ.

ತಮ್ಮ ಮಿತಿಯಲ್ಲಿ ಸಾಕಷ್ಟು ವೈಭವದಿಂದ ಆಳಿದ ಬಿದನೂರು ಹಾಗೂ ಕೊಡಗಿನ ಅರಸೊತ್ತಿಗೆಗಳ ಕಾಲಾವಧಿಯಲ್ಲಿ ಜನ ನೆಮ್ಮದಿ–ತೃಪ್ತಿಯಿಂದ ಬಾಳಿದ ಉಜ್ವಲ ಘಟ್ಟಗಳಿವೆ.

'ಚನ್ನಬಸವನಾಯಕ' ಕಾದಂಬರಿಯ ಪ್ರಾರಂಭದಲ್ಲೇ ಬಿದನೂರು ಪ್ರಾಂತದ ವಿಜನತೆಯ ಚಿತ್ರ ಕೊಡುತ್ತ ಕಾದಂಬರಿಕಾರರು ಅದೇ ಪ್ರಾಂತ ಇನ್ನೂರು ವರ್ಷಗಳ ಮೊದಲು ನಾಯಕರ ಆಳ್ವಿಕೆಯಲ್ಲಿ ಇದ್ದಾಗ ಹೊಂದಿದ್ದ ವೈಭವವನ್ನು ನೆನೆಯುತ್ತ ಹೇಳುವಂತೆ"ಆಗ್ಗ ಈ ಗ್ರಾಮಗಳು ತುಂಬಿ ಬಾಳುತ್ತಿದ್ದವು. ಈ ಗದ್ದೆಗಳ ಹಂತ ಪಯಿರಿಂದ ಮೆರೆದವು. ಇದೇ ವನಗಳು ಒಂದು ಜನತೆಯ ತುಂಬುಜೀವನದ ಕಳೆಯಿಂದ ಸುಂದರ ಆವಾಸಗಳಾಗಿದ್ದವು......'' ಇಂಥದೇ ಮೆಚ್ಚುಗೆಯ ಒಂದು ಭಾವವನ್ನು'ಚಿಕವೀರ ರಾಜೇಂದ್ರ'ದ ಕಥಾರಂಭಕ್ಕೆ ಮೊದಲು ಕೊಡಗಿನ ಹಾಲೇರಿ ವಂಶದ ಅರಸರಿಗಿದ್ದ ಸವಾಲುಗಳ ಕಲ್ಪನೆ ಕೊಡುವಲ್ಲಿ, ಮಹಾನವಮಿಯ ಕೈಲುಹಬ್ಬಕ್ಕೆ ಚಿಕವೀರರಾಜನ ಅತಿಥಿಗಳಾಗಿ ಮಡಕೇರಿಗೆ ಬಂದ ಆಂಗ್ಲ ಅಧಿಕಾರಿಗಳ ಸಮ್ಮುಖದಲ್ಲಿ ಕೊಡಗಿನ ಜನ ಇತಿಹಾಸದ ಸಂಗತಿಗಳನ್ನು ಕುರಿತ ದೃಶ್ಯ ರೂಪಕಗಳನ್ನು ಅಭಿನಯಿಸುವ ಪ್ರಸಂಗದಲ್ಲಿ ಕಾಣಬಹುದು. ಹಾಲೇರಿ ಅರಸರ ಮೂಲ ಪುರುಷನ ಪ್ರಜಾಪ್ರೇಮ, ದೊಡ್ಡವೀರರಾಜನ ಮುತ್ಸದ್ದಿತನ, ಸ್ನೇಹನಿಷ್ಠೆ. ಲಿಂಗರಾಜ ರೂಪಿಸಿದ ಜನಪರವಾದ ಭೂಕಂದಾಯವ್ಯವಸ್ಥೆಯ ಪ್ರಸ್ತಾಪಗಳಲ್ಲೂ ಇಂಥ ಸುಭಿಕ್ಷಸ್ಥಿತಿಯ ಹೊಳಹುಗಳನ್ನು ಕಾಣುತ್ತೇವೆ.

ಈ ಚಿತ್ರಗಳು ಪ್ರಾಸಂಗಿಕ ಅಷ್ಟೇ. ಮಾಸ್ತಿಯವರ ಈ ಕಾದಂಬರಿಗಳ ಕೇಂದ್ರ ಕಾಳಜಿ ಇಂಥ ಉಚ್ಛ್ರಾಯವನ್ನು ಚಿತ್ರಿಸುವುದಲ್ಲ. ಆಯಾ ರಾಜ್ಯವ್ಯವಸ್ಥೆಗಳ ಅವನತಿಗೆ ಹಿನ್ನೆಲೆಯಾಗಿದ್ದ ಸ್ಥಿತಿಯನ್ನು ಗುರುತಿಸುವುದು. ಬಿದನೂರು ಸಂಸ್ಥಾನದಂಥ ಸುಭಿಕ್ಷವಾದ ನಾಡು ನೆರೆಯ ಮೈಸೂರು ದೊರೆಗಳತಿ ಸರ್ವಾಧಿಕಾರಿಯಾಗಿದ್ದ ಹೈದರಾಲಿಯ ಆಕ್ರಮಣಕ್ಕೆ ತುತ್ತಾಗಿ ಅವನ ಕೈವಶವಾದ ಸನ್ನಿವೇಶದ ಬೋಧ 'ಚನ್ನಬಸವನಾಯಕ' ಕಾದಂಬರಿಯದು ಎನ್ನುವುದು ಆ ಕಾದಂಬರಿಯಲ್ಲಿ ಸೂಚ್ಯವಾಗಿದೆ. 'ಚಿಕವೀರರಾಜೇಂದ್ರ'ದಲ್ಲಿ ಕೊಡಗು ಆಂಗ್ಲರ ಕೈವಶವಾಗಲು ಕಾರಣವಾದ ಅವಸಾನವೇ ಆ ಕೃತಿಯ ವಸ್ತುವೆಂಬುದು ಸ್ಪಷ್ಟವಾಗೇ ಇದೆ. ("ಕೊಡಗಿನ ಈ ರಾಜವಂಶದಲ್ಲಿ ಇವನು ಕೊನೆಯ ಅರಸು. ಇವನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ಕೊಡಗು ಆಂಗ್ಲರ ಕೈವಶವಾಯಿತು. ಚಿಕವೀರರಾಜ ವಂಶಕ್ಕೆ ಕೀರ್ತಿ ತರಲಿಲ್ಲ; ಅವನ ಕೊನೆಯ ವರ್ಷದ ಆಳ್ವಿಕೆ ನಮ್ಮ ಕಥೆಯ ವಸ್ತು'') ಒಂದು ಸಾಮಾಜಿಕ–ರಾಜಕೀಯ ಸನ್ನಿವೇಶದ ಅಂತಃಸ್ಸತ್ವ ಪರೀಕ್ಷೆಗೊಳಪಡುವದು, ಮಾನವ ಸ್ವಭಾವ ತನ್ನ ಗುಣ– ದೋಷ ವಿಶೇಷಗಳಲ್ಲಿ ಪ್ರಕಟಗೊಳ್ಳುವದು ಬಿಕ್ಕಟ್ಟಿನ ಸನ್ನಿವೇಶಗಳಲ್ಲೇ. ಹೈದರನ ಕೈವಶವಾದ ಬಿದನೂರು, ಆಂಗ್ಲರ ಕೈವಶವಾದ ಕೊಡಗು ಇವೆರಡರ ಶೈಥಿಲ್ಯ ೧೯೩೦ರ ದಶಕದಿಂದಲೇ ಮಾಸ್ತಿಯವರ ಕಲ್ಪನೆ–ಚಿಂತನೆಗಳಲ್ಲಿ ಪ್ರವೇಶಿಸಿ, ಆ ಭೂಭಾಗ, ಅಲ್ಲಿಯ ಜನ, ಅವರ ಬದುಕು, ಅದಕ್ಕೆ ಹಿನ್ನೆಲೆಯಾದ ಇತಿಹಾಸದ ವಿವರಗಳು ಮಾಸ್ತಿಯವರಲ್ಲಿದ್ದ ಕಥೆಗಾರನನ್ನು ಆವರಿಸಿಕೊಳ್ಳತೊಡಗಿದ್ದವೆಂದು ತೋರುತ್ತದೆ.

ಹಾಗೆ ನೋಡಿದರೆ ಮಾಸ್ತಿಯವರ ಈ ಎರಡು ಕಾದಂಬರಿಗಳಲ್ಲಿ ನಾವು ಕಾಣುವುದು ಆಯಾ ಸಮಾಜಗಳ ಸರ್ವಾಂಗೀಣ ಅವನತಿಯನ್ನೇನೂ ಅಲ್ಲ. ಆ ಅವನತಿ– ಅದನ್ನು ಹಾಗೆಂದು ಕರೆಯಬಹುದಾದರೆ –ಪ್ರಭುತ್ವದ ಹಸ್ತಾಂತರ ಅಥವಾ ಕಬಳಿಕೆಗೆ ಸೀಮಿತವಾಗಿ

ನಿರ್ವಚಿಸಲ್ಪಟ್ಟಂಥದು. ಈ ರಾಜ್ಯಗಳು ಪರಾಧೀನವಾಗುವ ಮುಂಚಿನ ಸನ್ನಿವೇಶದ ವಿಘಟನೆಯ ಸೂಚನೆ–ಸಂಕೇತಗಳನ್ನು ವ್ಯಕ್ತಿತ್ವಗಳಲ್ಲಿ, ಅವುಗಳ ಯೋಚನೆ–ವರ್ತನೆ, ಗುಣ–ದೋಷಗಳಲ್ಲಿ ಕಾಣುವ ಮಾಸ್ತಿಯವರ ಮಟ್ಟಿಗೆ ವ್ಯಕ್ತಿತ್ವಗಳ ಶೋಧನೆ ಅವುಗಳನ್ನೊಳಗೊಂಡ ಇತಿಹಾಸದ ಹೊರ ಆವರಣದ ಶೋಧನೆಯದೇ ಒಂದು ಭಾಗವಾಗಿತ್ತು. ಈ ಗ್ರಹಿಕೆಗೆ ಅದರದ್ದೇ ಆದ ಮಿತಿಗಳಿವೆ. ಹೀಗೆ ಈ ರಾಜ್ಯಗಳು ಪತನ ಹೊಂದಲು ಕಾರಣವಾದ ವಿಘಟಣೆಯ ಶೋಧ ಎಲ್ಲ ಚಾರಿತ್ರಿಕ ಪಾತ್ರಗಳನ್ನಾವರಿಸಿಕೊಳ್ಳದೇ ಆಯಾ ರಾಜ್ಯವ್ಯವಸ್ಥೆಗಳ ಕರ್ಣಧಾರತ್ವ ವಹಿಸಿದ್ದ ಚಾರಿತ್ರಿಕ ಪಾತ್ರಗಳ, ರಾಜ–ರಾಣಿಯರ, ದೋಷ ವಿಶೇಷಗಳ ಚಿತ್ರಣದ ಮೇಲೆ ವಿಶೇಷವಾಗಿ ಕೇಂದ್ರೀಕೃತವಾಗುವಲ್ಲಿ ನಾವು ಕಾಣುವುದು ಈ ಮಿತಿಯನ್ನೇ. ಐತಿಹಾಸಿಕ ಕಾದಂಬರಿಯೆಂಬುದು ಸಾಮಾಜಿಕ ಕಾದಂಬರಿಗಳೆಂದು ನಾವು ಗುರುತಿಸುವ ಪ್ರಕಾರದಿಂದ ಭಿನ್ನವಾದೊಂದು genre ಎಂದು ಭಾವಿಸುವುದಾದರೆ 'ಚನ್ನಬಸವನಾಯಕ' ಕಾದಂಬರಿ ಐತಿಹಾಸಿಕ ವಸ್ತುವನ್ನು ಹೊಂದಿದ ಆದರೆ ಸಾಮಾಜಿಕ ಕಾದಂಬರಿಗಳಿಂದ ಸ್ವರೂಪದಲ್ಲಿ ಬಹಳ ಭಿನ್ನವೇನೂ ಅಲ್ಲದ ಒಂದು ಕೃತಿಯಾಗಿ ಕಾಣುತ್ತದೆ. ಅದಕ್ಕೂ ಕಾರಣ ಈ ಮಿತಿಯೇ. ಪ್ರಸ್ತುತ ಪ್ರಬಂಧದ ಮಿತಿಯಲ್ಲಿ ಐತಿಹಾಸಿಕ ಪಾತ್ರಗಳ ಈ ವರ್ತನೆಗಳಿಗೆ ಮಧ್ಯಕಾಲೀನ ರಾಜಕೀಯ ವ್ಯವಸ್ಥೆಯ ಸ್ವರೂಪದ ಜೊತೆಗೆ ಇದ್ದ ಸಂಬಂಧವನ್ನು ಈ ಕಾದಂಬರಿಗಳು ಹೇಗೆ ಶೋಧಿಸುತ್ತವೆ ಮತ್ತು ಈ ಕಾದಂಬರಿಗಳಲ್ಲಿ ಚಿತ್ರಣಗೊಂಡ ಐತಿಹಾಸಿಕ ಪಾತ್ರಗಳ ಸೃಜನೆಯಲ್ಲಿ ಆ ಶೋಧನೆ ಹೇಗೆ ವ್ಯಕ್ತಗೊಂಡಿದೆಯೆಂಬುದನ್ನು ಕೆಲವೇ ಪಾತ್ರಗಳಿಗೆ ಸಂಬಂಧಿಸಿದಂತೆ ಚರ್ಚಿಸುಬಹುದು. ಏಕೆಂದರೆ ಇವೆರಡೂ ಕಾದಂಬರಿಗಳ ಪಾತ್ರ ಪ್ರಪಂಚದ ಹರಹು ದೊಡ್ಡದು. ಐತಿಹಾಸಿಕ ಪಾತ್ರಗಳಲ್ಲದೆ ಅವುಗಳ ಚಿತ್ರಣವನ್ನು ಸ್ಫುಟಗೊಳಿಸಲು, ಗತಕಾಲದ ಸನ್ನಿವೇಶಗಳನ್ನು ಅವುಗಳೆಲ್ಲ ವಿವರಗಳಲ್ಲಿ ಪುನಃ ಸೃಷ್ಟಿಸಲು ಹಲವಾರು ಕಾಲ್ಪನಿಕ ಪಾತ್ರಗಳನ್ನೂ ಈ ಕಾದಂಬರಿಗಳಲ್ಲಿ ಸೃಷ್ಟಿಸಲಾಗಿದೆ.

'ಚನ್ನಬಸವನಾಯಕ' ಕಾದಂಬರಿಯಲ್ಲಿ ಚಿತ್ರಿತವಾದ ಎರಡು ಪ್ರಮುಖ ಐತಿಹಾಸಿಕ ಪಾತ್ರಗಳು ಬಿದನೂರು ನಾಯಕ ಮನೆತನದ ರಾಣಿ ವೀರಮ್ಮ ಹಾಗೂ ಅವಳ ಪುತ್ರ ಚನ್ನಬಸವನಾಯಕ. ಇನ್ನುಳಿದಂತೆ ವೀರಮ್ಮನ ಪತಿ ದೊರೆ ಬಸವಪ್ಪನಾಯಕ. ಆತ ಜೀವಿಸಿರುವಂತೆಯೇ ರಾಣಿ ವಿವಾಹಬಾಹಿರ ಸಂಬಂಧವಿರಿಸಿಕೊಂಡಿದ್ದಾಳೆಂದು ಜನರೆಲ್ಲ ಗುಮಾನಿಪಡುತ್ತಿರುವ ಅರಮನೆ ಅಧಿಕಾರಿ ನಂಬಯ್ಯ ಹಾಗೂ ಇವರಿಬ್ಬರನ್ನು ಪ್ರತಿಭಟಿಸಿದ್ದೇ ಕಾರಣವಾಗಿ ಸುಳ್ಳು ಆಪಾದನೆಗೊಳಪಟ್ಟು ಸೆರೆಮನೆಯಲ್ಲಿ ಬಂದಿಯಾದ ಮಂತ್ರಿ ಲಿಂಗಣ್ಣಯ್ಯ. ಬಿದನೂರಸಂಸ್ಥಾನದ ಈ ಘಟ್ಟದ ವಿಘಟನಾವಳಿಗಳು ಮೈಸೂರು ಪ್ರಾಂತ್ಯದೊಂದಿಗೆ ತಳಕುಗೊಂಡಿದ್ದವಾಗಿ ಆ ಚರಿತ್ರೆಯ ಪಾತ್ರಗಳೂ ಈ ಕೃತಿಯಲ್ಲಿ ಪಾಲು ಪಡೆದಿವೆ. ಸರ್ವಾಧಿಕಾರಿ ಹೈದರಾಲಿ, ಆತನ ಪುತ್ರ ಬಾಲಕ ಟಿಪ್ಪು, ಹೈದರಾಲಿಯ ಆಪ್ತ ಉಜನಿ, ಹೆಸರಿಗೆ ಮಾತ್ರ ರಾಜನಾಗಿರುವ, ತನ್ನ ಅಧಿಕಾರಿ ಹೈದರಾಲಿ ಬೆಳೆಸಿಕೊಳ್ಳುತ್ತಿರುವ ರಾಜಕೀಯ ಪ್ರಭಾವವನ್ನು ಅಸಹಾಯಕನಾಗಿ ನೋಡುತ್ತಿರುವ ದೊರೆ ಕೃಷ್ಣರಾಜ (ಇಮ್ಮಡಿ ಕೃಷ್ಣರಾಜ ಒಡೆಯರ್), ಹೈದರಾಲಿಯನ್ನು ನಿಯಂತ್ರಿಸಿ ಮಗ ಕೃಷ್ಣರಾಜನ ಅಧಿಕಾರವನ್ನು ದೃಢಗೊಳಿಸಲು

ರಾಜಕೀಯ ಸಾಧ್ಯತೆಗಳನ್ನು ಲೆಕ್ಕಹಾಕುತ್ತಿರುವ ರಾಜಮಾತೆ ದೇವಾಜಮ್ಮಣ್ಣಿ, ಮೈಸೂರುಅರಸು ಮನೆತನದ ಆಪ್ತ ಶ್ರೀನಿವಾಸರಾಯ ಇವೆಲ್ಲ ಚಾರಿತ್ರಿಕ ಪಾತ್ರಗಳು. ಈ ಕಾದಂಬರಿಯಲ್ಲಿ ಕಾಲ್ಪನಿಕ ಪಾತ್ರಗಳೂ ಸಮಸಂಖ್ಯೆಯಲ್ಲಿವೆ. ಬಿದನೂರಿನ ಒಂದು ಪ್ರಾಂತ್ಯವಾದ ವಸ್ತಾರೆಯ ಹೆಗ್ಗಡತಿ, ಆಕೆಯ ಕರಣಿಕ ಶಿವಪ್ಪ, ಚನ್ನಬಸವನಾಯಕನ ಹೆಂಡತಿ ಶಾಂತವ್ವ, ಆಕೆಯ ಸಖಿ ಕೆಂಚವ್ವ, ಶಾಂತವ್ವನ ಹೆತ್ತ ತಂದೆ, ಆಕೆಯನ್ನು ಬೆಳೆಸಿ ಚನ್ನಬಸವನಾಯಕನಿಗೆ ಧಾರೆಯೆರೆದ, ಆಕೆಯಲ್ಲಿ ತಂದೆಗಿಂತ ಮಿಗಿಲಾದ ವಾತ್ಸಲ್ಯವನ್ನಿಟ್ಟುಕೊಂಡಿರುವ ಆಕೆಯ ದೊಡ್ಡತಂದೆ ನೇಮಯ್ಯ, ಶಾಸ್ತ್ರಿಗಳು, ಹಿರಿಯಮಠದ ಅಯ್ಯನವರು, ಅವರ ಶಿಶುಮಗ ಬಸವಯ್ಯ, ವಸ್ತಾರೆಯ ಜೀತಗಳಾದ ಮಲ್ಲಿಗೆ ಹಾಗೂ ಸಗುನ ಇವೆಲ್ಲ ಪಾತ್ರಗಳು ಮಾಸ್ತಿಯವರ ಕಲ್ಪನೆಯ ಸೃಷ್ಟಿಗಳೇ.

ಇವೆಲ್ಲ ಪಾತ್ರಗಳು ಒಟ್ಟಾಗಿ ಕಟ್ಟಿಕೊಡುವ ಚಿತ್ರಗಳಲ್ಲಿ ಪ್ರಧಾನವಾದುದೆಂದರೆ ರಾಣಿ ವೀರಮ್ಮನ ನಡತೆಯೇ ಕಾರಣವಾಗಿ ರಾಜ್ಯದಲ್ಲಿ ನೆಲೆಗೊಳ್ಳುತ್ತಿರುವ ಅಸ್ಥಿರತೆ, ಅಸಂತೃಪ್ತಿ. ಅವಳ ಅಂಥ ನಡತೆಯಲ್ಲೊಂದು ಆಕೆ ತನ್ನ ಮನೆವಾರ್ತೆ ಅಧಿಕಾರಿ ನಂಬಯ್ಯನೊಂದಿಗೆ ಹೊಂದಿರುವ ವಿವಾಹಬಾಹಿರ ಸಂಬಂಧ; ಇನ್ನೊಂದು,ತನ್ನ ಪತಿ ಗತಿಸಿ ವರುಷಗಳು ಉರುಳುತ್ತಿದ್ದರೂ ಮಗ ಚೆನ್ನಬಸವನಿಗೆ ಪಟ್ಟಗಟ್ಟುವದಕ್ಕೆ ಮೀನಮೇಷ ಎಣಿಸುತ್ತಿರುವ ಅವಳ ರಾಜಕೀಯ ಹೊಣೆಗೇಡಿತನ.

ಇಲ್ಲಿಂದ ಪ್ರಾರಂಭವಾಗುವ ಕಥಾನಕದ ವಿವರಗಳು ಅದರ ಓಘಕ್ಕೆ ನಾಟಕೀಯ ತಿರುವು ಕೊಡುತ್ತ ದುರಂತದತ್ತ ಸಾಗಿಸುತ್ತವೆ. ಈ ಎಲ್ಲ ವಿವರಗಳಲ್ಲಿ ಅತ್ಯಂತ ಸ್ಫುಟವಾಗಿ, ಪರಿಣಾಮಕಾರಿಯಾಗಿ ಮೈದಳೆದ ಐತಿಹಾಸಿಕ ಪಾತ್ರ ಚನ್ನಬಸವನಾಯಕನದೂ ಅಲ್ಲ ಅವನ ತಾಯಿ ವೀರಮ್ಮನದೂ ಅಲ್ಲ, ಅದು ಹೈದರಾಲಿಯದು. ಮೈಸೂರಿನ ರಾಜಮಾತೆ ದೇವಾಜಮ್ಮಣ್ಣಿ ಮತ್ತು ರಾಜ ಕೃಷ್ಣರಾಜ ಒಡೆಯರ್ ಬಿದನೂರಿನ ನಾಯಕನನ್ನು ನವರಾತ್ರಿ ಉತ್ಸವಕ್ಕೆ ತಮ್ಮ ಅತಿಥಿಯಾಗಿ ಆಮಂತ್ರಿಸಿದ್ದನ್ನು ತಿಳಿದ ಹೈದರ ತನ್ನ ಮಹತ್ವಾಕಾಂಕ್ಷೆಯ ಪರಿಚಯವಿರುವ ಅರಸ ಹಾಗೂ ರಾಜಮಾತೆ ಅದಕ್ಕೆ ತಡೆ ಹಾಕಬೇಕಾದ ಪ್ರಸಂಗ ಬಂದರೆ ಬೆಂಬಲಕ್ಕಿರಲಿ ಎಂದು ಸಂಸ್ಥಾನಗಳತ್ತ ನೋಡತೊಡಗಿದ್ದಾರೆಂದು ಗ್ರಹಿಸಬಲ್ಲ ಚಾಣಾಕ್ಷ. ಗಡಿಗಳಲ್ಲಿ ಸೂಕ್ಷ್ಮಪರಿಸ್ಥಿತಿಯಿರುವ ಹಿನ್ನೆಲೆಯಲ್ಲಿ ಅಲ್ಲಿ ತನ್ನ ಉಪಸ್ಥಿತಿ ಅಗತ್ಯವೆಂದು ನವರಾತ್ರಿ ಸಂದರ್ಭದಲ್ಲಿ ನೇರವಾಗಿ ಪಾಲ್ಗೊಳ್ಳುವದರಿಂದ ಆತ ತಪ್ಪಿಸಿಕೊಳ್ಳುತ್ತಾನೆ. ಅದು ನೆಪ, ವಾಸ್ತವವಾಗಿ ಅವನ ಕಣ್ಣು ಈಗ ಬಿದುನೂರು ಸಂಸ್ಥಾನದ ಮೇಲೆ ಬಿದ್ದಿದೆ.

ವೀರಮ್ಮನ ದುರ್ನಡತೆ ಕಾರಣವಾಗಿ ಆವರಿಸಿಕೊಂಡಿರುವ ಅಸ್ಥಿರತೆ, ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕ್ರಿಯಾಶೀಲನಾಗುವಲ್ಲಿ ಚನ್ನಬಸವನಾಯಕ ತೋರುವ ನಿರಾಸಕ್ತಿ ಮತ್ತು ಈ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿ ಅದನ್ನು ಬದಲಿಸುವಲ್ಲಿ ನೇಮಯ್ಯ, ಶಾಸ್ತ್ರಿ, ಹಿರೇಮಠದ ಅಯ್ಯ ಮೊದಲಾದವರು ಅನುಭವಿಸುವ ಅಸಹಾಯಕತೆ ಒಂದು ಒತ್ತಾದರೆ ಇದೆಲ್ಲದರ ರಾಜಕೀಯ ಲಾಭ ಪಡೆಯಲೆಳಸುತ್ತಿರುವ ಹೈದರ ಹಾಗೂ

ಆತನ ಕಾರ್ಯಯೋಜನೆಯ ಚಿತ್ರಣದ್ದೇ ಇನ್ನೊಂದು ಒತ್ತು, ಹೀಗಾಗಿ ಬಿದನೂರು ಸಂಸ್ಥಾನದ ವಿದ್ಯಮಾನಗಳೆಲ್ಲ ಆತನ ಕಾರ್ಯಯೋಜನೆಗೆ ಪೂರಕವಾಗೇ ನಡೆಯುವ ನಾಟಕೀಯತೆಯ ಮೇಲೆ ಗಮನ ಕೇಂದ್ರೀಕರಿಸಲ್ಪಟ್ಟು ಹೈದರನ ಪಾತ್ರ ಜೀವಂತ ಪಾತ್ರವಾಗಿದೆ. ಬಿದನೂರು ಸಂಸ್ಥಾನ ಪ್ರದೇಶದಲ್ಲಿ ನೆಲೆಯೂರುತ್ತಿರುವ ಅತೃಪ್ತಿಯ ರಾಜಕೀಯ ಲಾಭ ಪಡೆದುಕೊಳ್ಳುವ ಹೈದರನ ಕಾರ್ಯಯೋಜನೆಯ ಮೊದಲ ಘಟ್ಟವೆಂದರೆ ತನ್ನ ಆಪ್ತ ಉನಿಯನ್ನು ಅಲ್ಲಿಗೆ ಕಳಿಸಿ, ಇಲ್ಲಿ ಅವ್ಯವಸ್ಥೆ ಉಂಟಾಗಿದೆ. ಇದರಿಂದಾಗಿ ತೊಂದರೆಯಾಗಿದೆ. ಎಂದು ಕೆಲ ಜನರಿಂದ ಸಹಾಯ ಯಾಚನೆಯ ಸಂದೇಶ ಪಡೆದು ಬರುವಂತೆ ಹೇಳಿ ಕಳಿಸುವದು, ತನ್ಮೂಲಕ ನೆರೆರಾಜ್ಯವಾದ ಬಿದನೂರನ್ನು ಪ್ರವೇಶಸಲು ಒಂದು ಕಾರಣವನ್ನು ಸೃಷ್ಟಿಸಿಕೊಳ್ಳುವದು.

ಹೈದರನ ಸೈನ್ಯ ಬಿದನೂರಿನತ್ತ ಮುಖಮಾಡುತ್ತದೆ. ಆಗಷ್ಟೇ ಮೈಸೂರರಸರ ಆತಿಥ್ಯ ಪಡೆದು ಮೈತ್ರಿಯನ್ನು ಪುನಃ ಸ್ಥಾಪಿಸಿಕೊಂಡು ಮರಳಿದ ಚೆನ್ನಬಸವನಾಯಕನಿಗೆ ಅದೇ ಅರಸರ ಸರ್ವಾಧಿಕಾರಿ ಹೈದರ್ ಬಿದನೂರಿನತ್ತ ನುಗ್ಗುತ್ತಿರುವದು ಗೊಂದಲವಾಗಿದೆ, ನಮಗೆ ನಿಮ್ಮ ಮೇಲೆ ನಂಬಿಕೆಯಿದೆ, ನೀವದನ್ನು ದೃಢಪಡಿಸಬೇಕು. ನಿಮ್ಮ ಸರ್ವಾಧಿಕಾರಿಗಳಿಗೆ ಮುಂದುವರಿಯದಂತೆ ತಿಳಿಸಿ ಪತ್ರ ಬರೆಯಬೇಕು. ನನಗೂ ಒಂದು ಬರೆದು ಹಾಗೆಂದು ಸೂಚಿಸಿದ ಕುರಿತು ತಿಳಿಸಬೇಕು ಎಂಬಾಶಯದ ನಿರೂಪ ಕೊಟ್ಟು ನಾಯಕನು ಭಾಸ್ಕರಯ್ಯನನ್ನು ಕಳಿಸುತ್ತಾನೆ.

ಬಿದನೂರಿನ ಕುರಿತ ತನ್ನ ಯೋಜನೆಗಳನ್ನು ಸ್ಥಗಿತಗೊಳಿಸಬೇಕೆಂದು ಹೈದರನಿಗೆ ಸೂಚಿಸಿ ಕೃಷ್ಣರಾಜ ಬರೆದ ಪತ್ರವನ್ನು ಭಾಸ್ಕರಯ್ಯ ಹೈದರನ ಸೈನ್ಯ ಬೀಡು ಬಿಟ್ಟಲ್ಲಿಗೆ ಬಂದು ಆತನಿಗೆ ಕೊಡುತ್ತಾನೇನೋ ಸರಿ. ಆ ಪತ್ರಗಳು ವಾಸ್ತವವಾಗಿಯೂ ದೊರೆ ಕೊಟ್ಟವುಗಳೆಂದು ಹೈದರ್ ಬಲ್ಲ. ಅದು ನಿರೀಕ್ಷಿತವೇ ಆದ್ದರಿಂದ ಅದರಲ್ಲೇನಿದೆಯೆಂದೂ ಆತ ಊಹಿಸಬಲ್ಲ. ಆದರೆ ಬಿದನೂರನ್ನು ಆಕ್ರಮಿಸುವ ತನ್ನ ಯೋಜನೆಯ ಹಾದಿಯಲ್ಲಿ ಹೈದರ್ ಬಹುದೂರ ಹೋಗಿದ್ದಾನೆ. ಒಂದೆಡೆ ಮಿತ್ರತ್ವ ಸ್ಥಾಪಿಸಿಕೊಂಡ ಮೈಸೂರರಸ, ಇನ್ನೊಂದೆಡೆ ತನ್ನ ರಾಜ್ಯದತ್ತ ನುಗ್ಗುತ್ತಿರುವ ಅದೇ ಅರಸರ ಸರ್ವಾಧಿಕಾರಿ, ಚೆನ್ನಬಸವನಾಯಕನಲ್ಲಿ ಈ ಕುರಿತ ಗೊಂದಲ ಮುಂದುವರಿಯಬೇಕು. ಇದು ಹೈದರನ ಯೋಜನೆ. ಇದು ಸಾಧ್ಯವಾಗಬೇಕಾದರೆ ನಾಯಕನನ್ನುದ್ದೇಶಿಸಿ ಮೈಸೂರರಸ ಬರೆದ ಪತ್ರ ಹೊತ್ತು ಭಾಸ್ಕರಯ್ಯ ಬಿದನೂರಿಗೆ ಹೋಗುವದನ್ನೇ ತಪ್ಪಿಸಬೇಕು. 'ಈ ಎರಡು ಪತ್ರಗಳಲ್ಲಿ ಏನಿದೆ ಎಂದು ನಿಮಗೆ ತಿಳಿದಿದೆಯೇ?' ಎಂದು ಹೈದರ ಕೇಳಿದ್ದಕ್ಕೆ ಪ್ರತಿಯಾಗಿ 'ಸುಮಾರಾಗಿ ತಿಳಿದಿದೆ ಸ್ವಾಮಿ' ಎಂದು ಭಾಸ್ಕರಯ್ಯ ಹೇಳಿದ್ದೇ ತಪ! ಹೈದರ್ 'ಈ ಮನುಷ್ಯ ಅಯೋಗ್ಯನಾಗಿ ಕಾಣುತ್ತಾನೆ. ಈ ಕಾಗದಾನ ಮೋಸದಿಂದ ಬರೆಸಿ ತಂದಿದ್ದಾನೆ. ಇಲ್ಲವೆ ಕದ್ದು ಓದಿ ತಂದಿದ್ದಾನೆ. ವಿಚಾರಿಸೋಣ' ಎಂದು ತನ್ನ ಆಪ್ತನಿಗೆ ಹೇಳಿ ಭಾಸ್ಕರಯ್ಯನನ್ನು ಸೆರೆಯಲ್ಲಿರಿಸುತ್ತಾನೆ.

ಇಲ್ಲಿಂದ ಮುಂದೆ ಕಥೆ ಬಹಳ ಕ್ಷಿಪ್ರವಾಗಿ ನಾಟಕೀಯಗೊಳ್ಳುತ್ತ ಹೋಗುತ್ತದೆ. ಈ ಮಧ್ಯೆ ಬಿದನೂರು ಸಂಸ್ಥಾನದ ಆಡಳಿತದಲ್ಲಿ ಕೆಲ ಮಾರ್ಪಾಡುಗಳಾಗಿವೆ. ಚೆನ್ನಬಸವನಾಯಕನಿಗೆ

ಪಟ್ಟವಾಗುವಂತೆ ಮಾಡುವ ಹಿರಿಯಾಶೆಯುಳ್ಳ ನೇಮಯ್ಯ, ರಾಮಾಶಾಸ್ತ್ರಿಗಳಂಥ ಹಿತೈಷಿಗಳಿಗೆ ಹೈದರನ ಸೈನ್ಯ ಬಿದನೂರಿನತ್ತ ಬರುತ್ತಿರುವ ಸನ್ನಿವೇಶ ಅವಕಾಶ ಕಲ್ಪಿಸಿದೆ. ಆಡಳಿತ ಇದುವರೆಗೆ ನಡೆದಂತೆ ನಡೆಯಲಾಗದು. ನಾಡು–ನಗರಗಳನ್ನು ಕಾಯಬೇಕು, ಅದನ್ನೆಲ್ಲ ನಿರ್ದೇಶಿಸುವವರು, ಆಜ್ಞೆ–ಅಪ್ಪಣೆ ನೀಡುವವರು ಬೇಕು ಎಂಬ ಅವರ ಮಾತಿಗೆ ಕಿವಿಗೊಟ್ಟು ರಾಣಿ ತನ್ನಲ್ಲಿಟ್ಟು ಕೊಂಡ ಅಧಿಕಾರಗಳಲ್ಲಿ ಕೆಲವನ್ನು ಚೆನ್ನಬಸವನಿಗೆ ವಹಿಸಿಕೊಡುವ ನಿರ್ಧಾರ ಪ್ರಕಟಿಸಿದ್ದರಿಂದಾಗಿ ಬೊಕ್ಕಸದ ಅಧಿಕಾರ ಕಳೆದುಕೊಂಡ ಅವಳ ಪ್ರಿಯಕರ ನಂಬಯ್ಯ ಚೆನ್ನಬಸವನಾಯಕನ ಕೊಲೆಗೈಯ್ಯುವ ಪ್ರಯತ್ನ ಮಾಡಿದ್ದಾನೆ. ಆದರೆ ಹಿರಿಯಮಠದ ಅಯ್ಯನವರ ಸಕಾಲಿಕ ಆಗಮನದಿಂದ ನಾಯಕ ಬದುಕುಳಿದಿದ್ದಾನೆ ಹಾಗೂ ಚೇತರಿಸಿಕೊಳ್ಳಲೆಂದು ಕೆಲಕಾಲ ಅಜ್ಞಾತದಲ್ಲಿಡಲ್ಪಟ್ಟಿದ್ದಾನೆ. ಯಾರಿಗೂ ಆತ ಎಲ್ಲಿ ಎಂದು ಗೊತ್ತಿಲ್ಲ. ರಾಣಿ ಚೆನ್ನಬಸವನಾಯಕನನ್ನು ಕೊಲ್ಲಿಸಿದಳೆಂಬ ಮಾತು ಹಬ್ಬುತ್ತದೆ. ಅದನ್ನು ಹೈದರ್ ಚಾಣಾಕ್ಷತನದಿಂದ ತನ್ನ ಯೋಜನೆಗಳಿಗನುಕೂಲವಾಗುವಂತೆ ಬಳಸಿಕೊಳ್ಳುತ್ತಾನೆ. ಉದಾಹರಣೆಗೆ ಹೈದರನ ಮುಂದಿನ ಯೋಜನೆಗಳಿಗೆ ತಡೆಯೊಡ್ಡಲು ಚೆನ್ನಬಸವನಾಯಕ ಖುದ್ದಾಗಿ ಅವನನ್ನು ಕಾಣಬಂದಾಗ ಹೈದರನಿಗೆ ಆತ ನಾಯಕನೇ ಎಂಬುದರಲ್ಲಿ ಅನುಮಾನ ಉಳಿದಿಲ್ಲ. ಆದರೆ ಅದನ್ನೊಪ್ಪಿದರೆ ತನ್ನ ಯೊಜನೆಗಳಿಗದು ಪ್ರತಿಕೂಲ. ನಾಯಕರು ಕೊಲೆಯಾಗಿದ್ದಾರೆಂದೇ ಆತ ಸಾಧಿಸುತ್ತಾನೆ. 'ನೀವು ನಾಯಕರಲ್ಲ, ಬೇರಾರೋ' ಎಂದೇ ವಾದಿಸುತ್ತಾನೆ. ಆತನನ್ನು ಸೆರೆಯಲ್ಲಿಡುತ್ತಾನೆ. ಈ ಇತೀ ಘಟನಾವಳಿಗಳು ಉಂಟುಮಾಡುವ ಗೊಂದಲಗಳನ್ನು ತನ್ನ ರಾಜಕೀಯ ಮಹತ್ವಾಕಾಂಕ್ಷೆಯ ಅಗತ್ಯಗಳಿಗನುಗುಣವಾಗಿ ಜೋಡಿಸಿಕೊಳ್ಳುವ ಬುದ್ಧಿಯ ಹರಿತದಲ್ಲಿ ಹೈದರನ ಪಾತ್ರ ಸ್ಫುಟಗೊಳ್ಳುತ್ತ ಹೋಗುತ್ತದೆ.

ಇದು ಚೆನ್ನಬಸವನಾಯಕನ ಪಾತ್ರಸೃಷ್ಟಿಯಲ್ಲಿ ಸಾಧ್ಯವಾಗಿಲ್ಲ. ಆ ಪಾತ್ರದ ಕುರಿತು ಕಾದಂಬರಿಕಾರರು ಒಂದೆಡೆ ಹೇಳುತ್ತಾರೆಃ "ಅವನು ಬಹುದಿಟ್ಟದ ತರುಣ, ಅರಮನೆಯ ಗರಡಿಯಲ್ಲಿ ಮೈಮುರಿದು ವ್ಯಾಯಾಮ ಮಾಡಿ ಹದಿನೆಂಟು ವರ್ಷದ ಯುವಕ ಹೊನ್ನ ಅಲಗಿನಂತೆ ಕಾಣುತ್ತಿದ್ದನು. ಸ್ವಭಾವದಿಂದ ಅವನು ಸದಾ ಏನನ್ನಾದರೂ ಮಾಡುತ್ತಿರಬೇಕು. ಸಣ್ಣ ಹುಡುಗನಾಗಿದ್ದಾಗ ಮರವನ್ನೋ ಗೋಡೆಯನ್ನೋ ಏರಿ ಬೀಳಬೇಕು. ಹಳ್ಳಕ್ಕೆ ಬಾವಿಯ ನೀರೊಳಕ್ಕೆ ಧುಮುಕಬೇಕು. ಕಲ್ಲು–ಚೆಂಡು ಎಸೆಯಬೇಕು. ಕೋಲಿಂದ ಕತ್ತಿಯ ವರಸೆ ಆಡಬೇಕು ಇತ್ಯಾದಿ.

ಅಂದರೆ ಚೆನ್ನಬಸವ ಸ್ವಭಾವತಃ ಧೀರ, ಉತ್ಸಾಹಿ, ಕ್ರಿಯಾಶೀಲ. ಇಂಥವ ತಂದೆಯ ಮರಣಾನಂತರ ಒಂದು ಬಗೆಯಾಗಿಬಿಡುತ್ತಾನೆ. ಕಾದಂಬರಿಕಾರರ ಮಾತಿನಲ್ಲಿ "ಅವನು ತನ್ನ ಮನಸ್ಸೇನೆಂದು ಯಾರಿಗೂ ಸುಳಿವುಕೊಡದೆ ತನ್ನಂತೆ ತಾನು ಇದ್ದುಬಿಟ್ಟನು. ಚೆನ್ನಬಸವನಾಯಕನ ನಡೆ–ನುಡಿ ಅವನ ಹತ್ತಿರದ ಜನಕ್ಕೇ ಅರ್ಥವಾಗದಂತೆ ಇದ್ದಿತು." ಹೀಗೆ ಮಾಸ್ತಿಯವರು ಚೆನ್ನಬಸವನ ವ್ಯಕ್ತಿತ್ವವನ್ನು ನಿಗೂಢಗೊಳಿಸುತ್ತ ಹೋಗುತ್ತಾರೆ. ತಂದೆ ಹಾಸಿಗೆ ಹಿಡಿದಿದ್ದ ದಿನಗಳಲ್ಲಿ ಅವನು ಮೇಲೆ ಒಂದು ಬಟ್ಟೆಯನ್ನು ಹಾಕಿಕೊಂಡು, ಕೈಯಲ್ಲಿ ಒಂದು ಕೋವಿ

ಹಿಡಿದು ಜೊತೆಗೆ ಒಬ್ಬ ಆಳನ್ನು ಕರೆದುಕೊಂಡೊ ಯಾರನ್ನೂ ಕರೆದುಕೊಳ್ಳದೆಯೊ ಕಾಡಿಗೆ ಹೊರಟುಹೋಗುವನು. ಎಂದು ಬಂದರೂ ಬಂದ ತಂದೆ ತೀರಿಕೊಂಡು, ಪಟ್ಟವಾಗುವುದು ತಡವಾದಾಗ ಇವನ ಈ ಪ್ರವೃತ್ತಿ ಪ್ರಬಲವಾಯಿತು. ತಿಂಗಳಲ್ಲಿ ಹದಿನೈದು ಇಪ್ಪತ್ತು ದಿನ ತರುಣ ಅರಮನೆಯಲ್ಲಿ ಇರುತ್ತಿರಲಿಲ್ಲ. ಅವನು ಅಲ್ಲಿ ಇಲ್ಲವೆಂದೇ ಬಹುಜನಕ್ಕೆ ತಿಳಿಯದು. ಎಲ್ಲಿದ್ದಾನೆ ಎಂದು ಯಾರೂ ಕಾಣರು''.

ಇಂಥ ಮನಸ್ಥಿತಿಗೆ ಕಾರಣಗಳು, ಕಾದಂಬರಿಯಲ್ಲಿ ಚಿತ್ರಿತವಾದಂತೆ, ತಂದೆಯ ಮರಣ–ತಂದೆಗೆ ಚೆನ್ನಬಸವ ಅಕ್ಕರೆಯ ಮಗ–;ತಾಯಿಗೆ ನಂಬಯ್ಯನ ಜೊತೆಇರುವ ಸಂಬಂಧದ ಕುರಿತು ಜನರಾಡಿಕೊಳ್ಳುವ ಮಾತು,–ನೋಡುವ ದೃಷ್ಟಿ ; ತನ್ನ ಪರವಹಿಸಿ ಸಿಂತ ಲಿಂಗಣ್ಣಯ್ಯ ರಾಣಿ ಹಾಗೂ ನಂಬಯ್ಯ ಹೊರಿಸಿದ ಮಿಥ್ಯಾಪವಾದಗಳಿಂದಾಗಿ ಸೆರೆಯಲ್ಲಿಡಲ್ಪಟ್ಟದ್ದು ತಾನೇ ಅನುಭವಿಸಿದ ಹೀನಾಯ ಎಂಬಂಥ ಭಾವ. ಇದಲ್ಲದೇ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ಮಗನಿಗೆ ಪಟ್ಟಕಟ್ಟುವಲ್ಲಿ ವಿಳಂಬಗೈಯುತ್ತಿರುವ ತಾಯಿ ವೀರಮ್ಮನ ಮನೋಭಾವವೂ ಒಂದು ಕಾರಣ.

ಆದರೆ ಸ್ವಭಾವತಃ ಸಾಹಸಿಯಾಗಿದ್ದು, ತನ್ನ ಪಕ್ಷಕ್ಕೆ ಹಲವರಿದ್ದು, ಜನಾನುರಾಗಕ್ಕೆ ಪಾತ್ರನಾಗಿದ್ದೂ ಚೆನ್ನಬಸವ ತೋರುವ ನಿಷ್ಕ್ರಿಯೆ ಅವನ ಪಾತ್ರಚಿತ್ರಣದಲ್ಲಿ ಕೊರತೆಗೆ ಕಾರಣವಾಗಿದೆ. ಅವನು ಸಂಪೂರ್ಣ ನಿಷ್ಕ್ರಿಯನೂ ಅಲ್ಲ. ಆದರೆ ಅವನ ಕ್ರಿಯಾಶೀಲತೆ ಏನಿದ್ದರೂ ಆಸ್ಥಾನ–ಅರಮನೆಗಳ ಹೊರಗೇ ಉದಾಹರಣೆಗೆ ಬೂದಿಬಸವ ಎಂದು ವೇಷಧರಿಸಿಕೊಂಡು ಆತ ಎಲ್ಲೆಲ್ಲಾ ಸಂಚರಿಸುತ್ತಾನೆ. ಇಲ್ಲಿ ಆತನ ರಾಜಕೀಯ ಗೊತ್ತು–ಗುರಿಗಳೇನೆಂಬುದು ಸ್ಫುಟವಾಗುವದಿಲ್ಲ. ಅವನ ಕ್ರಿಯೆಗಳಿಗೆ ಏಕರೂಪತೆಯಿಲ್ಲ. ಕೆಲವರಿಗೆ ಥೇಟ್ ಸ್ವಾಮಿಗಳಂತೆ ಆಶೀರ್ವಚನ–ಪರಿಹಾರ ನೀಡುತ್ತಾನೆ. ಇನ್ನು ಕೆಲವೆಡೆ ಕಳ್ಳಕಾಕರ ಪಡೆಗೆ ಬೆಂಬಲವಾಗಿ ನಿಂತು ಶ್ರೀಮಂತರನ್ನು ದೋಚಿ ಬಡವರಿಗೆ ಹಂಚುತ್ತಾನೆ. ಮತ್ತೆ ಕೆಲವೊಮ್ಮೆ ಸುಂಕ ಆದಾಯದ ಮಿತಿಗೆ ಮೀರಿದ ಸರಕು ಹೊತ್ತೊಯ್ಯುವ ವಿದೇಶಿ ವ್ಯಾಪಾರಿಗಳನ್ನು ತಡೆದು ನಿಲ್ಲಿಸುತ್ತಾನೆ.

ಆತನ ಬೂದಿಬಸನ ಪಾತ್ರವನ್ನು ಮಾಸ್ತಿಯವರು ನಂತರದ ಘಟ್ಟದಲ್ಲಿ ಇಡೀ ಸನ್ನಿವೇಶ ಹೈದರನ ತಂತ್ರಗಾರಿಕೆಗೆ ಪೂರಕವಾಗುವಂತೆ, ಕಥೆಯ ನಾಟಕೀಯ ಚಿತ್ರಣಕ್ಕೆ ಅನುಗುಣವಾಗುವ ಭೂಮಿಕೆಯಾಗಿ ನಿರ್ಮಿಸಿದ್ದಾರೆಂಬುದು ಸ್ಪಷ್ಟ. ಈ ನಾಟಕೀಯ ತಿರುವುಗಳಲ್ಲೆಲ್ಲ ಚೆನ್ನಬಸವನಾಯಕ ದುರಂತ ನಾಯಕನಾಗಬೇಕೆಂಬುದು ಪೂರ್ವನಿರ್ಧಾರಿತವಾದಂತಿದೆ. ಇದಕ್ಕೆ ಪೂರಕವಾಗೇ ನಾಯಕನ ಯೋಜನೆ ಹಾಗೂ ಕ್ರಿಯೆಗಳ ನಡುವೆ ಕಂದಕಗಳನ್ನು ನಾವು ಕಾಣುತ್ತಾಹೋಗುತ್ತೇವೆ. ಉದಾಹರಣೆಗೆ ಹೈದರನ ಸೆರೆಯಿಂದ ತಪ್ಪಿಸಿಕೊಂಡು ಬಿದನೂರಿಗೆ ಮರಳಿದ ನಾಯಕ ಆತನ ದುರಾಕ್ರಮಣ ತಡೆಯುವ ಎಲ್ಲ ಯೋಜನೆಗಳನ್ನು ನಿರ್ಧರಿಸಿಕೊಳ್ಳುತ್ತಾನೆ.ನೇಮಯ್ಯನವರನ್ನು ರಾಯಭಾರಕ್ಕೆ ಕಳಿಸಿ ಮೈಸೂರು–ಬಿದನೂರುಗಳ ಮಿತ್ರತ್ವದ ಹಿನ್ನೆಲೆಯಲ್ಲಿ ಸೈನ್ಯಕಾರ್ಯಚರಣೆ ನಿಲ್ಲಿಸಿ ಹಿಂದಿರುಗುವಂತೆ

ಹೈದರನಿಗೆ ಹೇಳುವದು, ಬಿದನೂರಿಗೆ ಬರುವದಾಗೇ ಆತ ಹಟ ಹಿಡಿದರೆ 'ಮಿತ್ರರಾಗಿ ಬರುತ್ತೀರಿ' ಎಂದು ಆತನಿಗೆ ಮನದಟ್ಟುಮಾಡಿ ಬರಮಾಡಿಕೊಂಡು ಕಾದದೆಯೇ ಆತ ಊರಾಚೆ ತಡೆಯುವಂತೆ ನೋಡಿಕೊಳ್ಳುವುದು, ತನ್ಮಧ್ಯೆ ಮೈಸೂರಿಗೆ ನಿಯೋಗ ಕಳಿಸುವದು, ಯಾವುದೇ ಪ್ರಸಂಗಕ್ಕಾದರೂ ಹಣಕಾಸು ಒಡವೆ ವಸ್ತುಗಳನ್ನು ಬಿದನೂರಿನಿಂದ ಸಾಗಿಸುವದು ಇತ್ಯಾದಿ. ಆದರೆ ಯಾವದೋ ಕಾಣದ ಕೈ, ಮಾಸ್ತಿಯವರ ಶ್ರದ್ಧೆಯ ಒಂದು ಭಾಗವೇ ಆಗಿದ್ದ ದೈವದಾಟ, ಅವನ ಕ್ರಿಯೆಗಳನ್ನೆಲ್ಲ ನಿಯಂತ್ರಿಸುತ್ತದೆ. ಚೆನ್ನಬಸವನಾಯಕ ಒಂದು ತಿಂಗಳಲ್ಲಿ ನಾಡಿಗರ ದಳಗಳನ್ನು ಸೇರಿಸಿ ಸವಣೂರು, ಮಾರಟ್ಟವಾಡಿಗಳಿಗೆ ಸಹಾಯಕ್ಕಾಗಿ ಹೇಳಿಕಳಿಸುವದೇ ಮೊದಲಾದ ಹೊಣೆಗಳನ್ನೇನೋ ಹೊತ್ತುಕೊಳ್ಳುತ್ತಾನೆ. ಆದರೆ ಗರ್ಭಿಣಿ ಪತ್ನಿ ಶಾಂತವ್ವನನ್ನು ಕಾಣಲೆಂದು ಹಂಬಲಿಸಿ ಬಲ್ಲಾಳರಾಯನ ದುರ್ಗಕ್ಕೆ ಹೋಗುತ್ತಾನೆ. (ಅದಾಗಲೇ ರಾಣಿ–ನಂಬಯ್ಯ, ರಾಣಿವಾಸದ ಕೆಲವರು ಹಾಗೂ ನಾಯಕನ ಪತ್ನಿ ಶಾಂತವ್ವ ಬಿದನೂರು ತೊರೆದು ದುರ್ಗಕ್ಕೆ ಹೋಗಿದ್ದಾರೆ.) ನಾಯಕ ಅಲ್ಲಿಗೆ ಬರುವ ದಿನ ರಾಣಿ–ನಂಬಯ್ಯ ಆತ ಬರಲಿರುವದನ್ನು ಬಲ್ಲರು. ಆದರೆ ಹಾಗೆಂದು ಆತ ಕಳಿಸಿದ ವರ್ತಮಾನವನ್ನು ಆತನ ಪತ್ನಿ ಶಾಂತವ್ವನಿಂದ ಬಚ್ಚಿಟ್ಟು ಅರಮನೆ ತೊರೆದು ಬೆಟ್ಟವಿಳಿದು ಫರಾರಿಯಾಗಿದ್ದಾರೆ. ಶಾಂತವ್ವ ತನ್ನ ಗಂಡ ಮಡಿದಿದ್ದಾನೆಂಬ ಭಾವನೆಯಲ್ಲೇ ಇದ್ದು, ಜೀವತ್ಯಾಗ ಮಾಡುವ ತನ್ನೊಂದು ಪ್ರಯತ್ನದಲ್ಲಿ ವಿಫಲಳಾಗಿ ಮರಳಿ ಅರಮನೆಯಲ್ಲಿ ಮಲಗಿದ್ದಾಳೆ. ಆಕೆಗೆ ನಿದ್ರೆ, ಮಂಪರು, ಕನಸು ಇಂಥ ಸ್ಥಿತಿ. ಹಗೆ ಹೈದರನ ಪಡೆ ಇನ್ನೇನು ಮುತ್ತಿಬಿಡುತ್ತದೆಂಬ ನಿರೀಕ್ಷೆ. ಹಾಗೆ ಮುತ್ತಿದರೆ ಹೇಗೆಂಬ ಭಯ ಹೊತ್ತಿರುವವರೇ ದುರ್ಗದಲ್ಲಿ ಎಲ್ಲರೂ. 'ಯಾರೋ ಬಂದರು' ಎಂದು ಹುಯ್ಯಲೇಳುತ್ತಾರೆ. ಭ್ರಾಂತಿ, ಭಯ, ಕನಸು ಜಾಗೃತಿಗಳ ವಿಲಕ್ಷಣ ಸ್ಥಿತಿಯಲ್ಲಿರುವ ಶಾಂತವ್ವ ಈ ಗದ್ದಲದಿಂದ ಭಯಭೀತಳಾಗಿ ಚೀರಿ ಎದ್ದು ಕೂಡ್ರುತ್ತಾಳೆ. ಅಗಲವಾಗಿ ತೆರೆದಿದ್ದ ಕಮರಿಯ ಬಾಗಿಲತ್ತ ಧಾವಿಸುತ್ತಾಳೆ. ಕಮರಿಯಲ್ಲಿ ಬೀಳಬೇಕು. ಆ ಹೊತ್ತಿಗೆ ಕನಪಾಕೆ ತಿಳಿಯಾಗಿದೆ, ಸಾವರಿಸಿಕೊಳ್ಳುತ್ತಾಳೆ. ಆದರೆ ಕಾಲು ಜಾರುತ್ತದೆ. ಮೈ ದಂಡಾಕಾರವಾಗಿ ಹಿಂದೆ ಬಿದ್ದು ಹೆಣವಾಗುತ್ತಾಳೆ.

ಹಾಗೆ ಬಂದ 'ಯಾರೋ' ಇನ್ನಾರೂ ಅಲ್ಲ ಸ್ವತಃ ಚೆನ್ನಬಸವನಾಯಕ. ಬಸುರಿ ಪತ್ನಿಯನ್ನು ಕಾಣಲೆಂದು ಬಂದಾತ ಕಾಣುವದು ಆಕೆಯ ಹೆಣವನ್ನು. ಇಲ್ಲಿಗೆ ನಾಯಕ ತನ್ನೊಳಗೆ ತನ್ನ ಪತ್ನಿಯೊಂದಿಗಿನ ವೈವಾಹಿಕ ಬದುಕಿನ ನೆನಪುಗಳೊಳಗೆ ಮುಳುಗಿ ಹೋಗುತ್ತಾನೆ.

ಈ ನಡುವೆ ಹೈದರನಲ್ಲಿಗೆ ಹೋದ ನೇಮಯ್ಯನ ನಿಯೋಗ ವಿಫಲವಾಗಿದೆ. ಬಿದನೂರು ಮೈಸೂರಿಗೆ ಅಧೀನವಾಗುಳಿಯಬೇಕೆಂಬುದು ಹೈದರನ ಕರಾರು. ನೇಮಯ್ಯನಿಗೆ ಇದು ಒಪ್ಪಿಗೆಯಿಲ್ಲ.ಆದರೆ ಓಡನೇ ವಿರೋಧಕಟ್ಟಿಕೊಳ್ಳುವ ಇಷ್ಟವೂ ಇಲ್ಲ. ನಾಯಕನೊಂದಿಗೆ ಚರ್ಚಿಸಿ ತಿಳಿಸುವದಾಗಿ ಹೇಳಿ ನೇಮಯ್ಯ ಮರಳಿದ್ದಾನೆ.

ಮಂತ್ರಿ ಲಿಂಗಣ್ಣಯ್ಯ ಹೈದರನೊಂದಿಗೆ ಆಡುವ ಮಾತಿನಲ್ಲಿ ವ್ಯಕ್ತಗೊಳ್ಳುವ ನಾಯಕ, ಹೈದರನ ಮನಸ್ಸಿನಲ್ಲಿ ಮೂಡಿನಿಂತ ನಾಯಕ–ಈ ನಾಯಕನಿಗಿಂತ ಭಿನ್ನವೇ ಆದ ಒಂದು ವ್ಯಕ್ತಿಯಾಗಿ ಚೆನ್ನಬಸವನಾಯಕ ಇಲ್ಲೆಲ್ಲ ಕಂಡುಬರುತ್ತಾನೆ. ಬಿದನೂರಿನ ಮೇಲೆ ಹೈದರನ

ಆಕ್ರಮಣದ ಮೋಡ ಮುಸುಕುತ್ತಿರುವ ಗಂಭೀರ ಸನ್ನಿವೇಶದಲ್ಲೂ ನಾಯಕ ಪತ್ನಿಯ ಸಾವಿನ ಆಘಾತದಿಂದ ಹೊರಬರುವದಿಲ್ಲ. ನಾಯಕನಿಗೆ ಹಿಂದೆ ಪತ್ನಿ ದತ್ತಾತ್ರೇಯನ ಪೀಠಕ್ಕೆ ಹೋಗೋಣ ಎಂದಾಗ ತಾನು ಹೋಗದಿದ್ದುದು ನೆನಪಾಗಿ ಈಗ ಹೊರಟುನಿಲ್ಲುತ್ತಾನೆ! ಹಿರಿಯಮಠದ ಅಯ್ಯನವರು ಇದ್ದಿದ್ದರೆ ತನ್ನನ್ನೀಗ ಕಾಪಾಡಿಕೊಳ್ಳುತ್ತಿದ್ದರು. ಪೀಠದಲ್ಲಿ ಗವಿಯ ಸಿದ್ಧರು ದೊರೆತು ಅವರಿಂದ ಮನಸ್ಸಿಗೆ ಸಮಾಧಾನ ಬರುವ ಎರಡು ಮಾತು ಸಿಗಬಹುದು—ಇವು ಆತನ ಯೋಚನೆಗಳು. ಹತ್ತು ದಿನಗಳ ಕಾಲ ಸ್ಥಳದಿಂದ ಸ್ಥಳಕ್ಕೆ ಹೋಗಿ ಗೌಡರನ್ನು ಕರೆಸಿ ಪಡೆಗೂಡಬೇಕೆಂಬುದಾಗಿ ಆದೇಶಿಸಿ ನಾಡಿಗೆ ನಾಡೇ ಉತ್ಸಾಹದಿಂದ ಸಿದ್ಧವಾಗುತ್ತಿರುವಾಗ ನಾಯಕ ದತ್ತಾತ್ರೇಯ ಪೀಠಕ್ಕೆ ಹೋಗುತ್ತಾನೆ. ಮಾರನೇ ದಿನ ಜ್ವರ ಬರುತ್ತದೆ. ಜ್ವರದ ಮಧ್ಯೆಯೇ ನೇಮಯ್ಯ ನವಾಬನಾಡಿದ ಮಾತೆಲ್ಲ ತಿಳಿಸಿ ಬರೆದ ಓಲೆ ಬರುತ್ತದೆ. ನಾಯಕ ನವಾಬನ ಕರಾರಿಗೆ ಅಸಮ್ಮತಿ ಸೂಚಿಸಿ ಸಧ್ಯ ಇವರನ್ನು ನಾವು ಹಗೆ ಎಂದು ಕಂಡು ಯುದ್ಧ ಮಾಡಲು ಸಿದ್ದರಾಗಿಲ್ಲ, ನಗರವನ್ನು ಕಾಪಾಡಿಕೊಳ್ಳಿ, ನಾವೀಗ ಅನಾರೋಗ್ಯ ಸ್ಥಿತಿಯಲ್ಲಿದ್ದೇವೆಂದು ಮಾರೋಲೆ ಬರೆದು ಒಂದರ್ಥದಲ್ಲಿ ತನ್ನ ಸೋಲನ್ನೊಪ್ಪಿಕೊಳ್ಳುತ್ತಾನೆ. ತನ್ನ ದುರ್ದೈವವನ್ನು ಹಳಿದುಕೊಳ್ಳುತ್ತಾನೆ. ಜ್ವರ ಉಲ್ಬಣಿಸುತ್ತದೆ. ನಾಯಕ ಕಣ್ಮುಚ್ಚುತ್ತಾನೆ. ಮುಂದಿನದು ನಿರೀಕ್ಷಿತ ಕತೆ. ಬಿದನೂರು ನಿಷ್ಕಂಟಕವಾಗಿ ಹೈದರನ ಕೈಯೊಳಗೆ ಬೀಳುತ್ತದೆ. ರಾಣಿ—ನಂಬಯ್ಯ ಬಂದಿಗಳಾಗುತ್ತಾರೆ.

ಕೊನೆಯಲ್ಲಿ ಮಾಸ್ತಿಯವರುಹೇಳುತ್ತಾರೆ "ಚೆನ್ನಬಸವನಾಯಕ ದುರ್ದೈವದ ಝುಂಝೂವಾತದಲ್ಲಿ ಸಿಲುಕಿದ ಒಂದು ಹಕ್ಕಿಯಾದನು. ಅವನ ರೆಕ್ಕೆ ಅವನ ಅದೃಷ್ಟದ ಹೊಡೆತವನ್ನು ತಡೆಯಲಾರದೆ ಮುರಿಯಿತು. ಆದರೂ ಅವನ ಜೀವ ಸೋತೆನೆನ್ನಲಿಲ್ಲ. ದುರ್ದೈವವನ್ನು ಎದುರಿಸಿ ನಿಂತನು. ತಲೆ ಮಣಿಯದೆ ನಿಂತಿತು." ಒಂದು ಪಾತ್ರಚಿತ್ರಣವಾಗಿ ಚೆನ್ನಬಸವನಾಯಕನ ಬದುಕಿನ ವಿವರಗಳು ಹೃದಯವಿದ್ರಾವಕವಾಗಿ ನಮ್ಮನ್ನು ಕಲಕುತ್ತವೇನೋ ನಿಜ. ಆತನನ್ನು ದುರಂತದತ್ತ ಒಯ್ಯುವ ತಿರುವುಗಳ ನಾಟಕೀಯತೆಯೂ ಚಿತ್ತಾಕರ್ಷಕವಾಗಿದೆ. ಆದರೆ ಮಾಸ್ತಿಯವರ ಮನೋಭಾವದ ಒಂದು ಪ್ರಮುಖ ಲಕ್ಷಣವೆಂದು ತಿ.ತಾ. ಶರ್ಮರು ಗುರುತಿಸುವ ಆಸ್ತಿಕ್ಯದ ಭಾರ ಈ ಪಾತ್ರದ ಮೇಲೆ ಕೊಂಚ ಹೆಚ್ಚಾಗಿಯೇ ಬಿದ್ದು ಚೆನ್ನಬಸವ ದೈವದಾಟದ ಒಂದು ದಾಳವಾಗಿ ಚಿತ್ರಿತನಾಗಿ ಒಂದು ಯಥಾರ್ಥ ಚಾರಿತ್ರಿಕ ದುರಂತವನ್ನು ಸಂಕೇತಿಸುವ ಪಾತ್ರವಾಗದೇ ಹೋಗುತ್ತಾನೆ.

ಇದಕ್ಕೆಲ್ಲ 'ಆ ತಾಯ ನಡತೆ ಕಾರಣ' ಎಂದು ಚೆನ್ನಬಸವನಾಯಕ ಹಳಿದದ್ದನ್ನು ಆಗಲೇ ನೋಡಿದ್ದೇವೆ. ವಾಸ್ತವವಾಗಿ ಕಾದಂಬರಿಯ ಒತ್ತು ಆ ತಾಯ ನಡತೆಯ ಮೇಲೇ ಬಿದ್ದಿದೆ. ಮಗನಿಗೆ ಪಟ್ಟವಾಗುವುದನ್ನು ವಿಳಂಬಗೆಯ್ಯುವಲ್ಲಿ ವೀರಮ್ಮನಿಗಿರುವದು ರಾಜಕೀಯ ಮಹತ್ವಾಕಾಂಕ್ಷೆಯೆ? ನಂಬಯ್ಯನೊಂದಿಗೆ ತನ್ನ ಸಂಬಂಧ ನಿರಾತಂಕವಾಗಿ ನಡೆಯಬೇಕೆಂಬ ಬಯಕೆಯೆ? ಕಥಾನಕದ ಒತ್ತು ಎರಡನೆಯದರ ಮೇಲೇ ಇದೆ. ಹಾಗಿದ್ದರೆ ಇದು ಆಕೆಯ ವ್ಯಕ್ತಿತ್ವದ ಒಂದು ದೌರ್ಬಲ್ಯ. ನಂಬಯ್ಯನ ಮಹತ್ವಾಕಾಂಕ್ಷೆಗಳೂ ಎಲ್ಲೂ ಗಮನಾರ್ಹವಾಗಿ ಕಾಣುವದಿಲ್ಲ. ತನ್ನ ತವರಿನ ಕಡೆಯಿಂದ ಕರೆಸಿಕೊಂಡ ಸಣ್ಣಪ್ಪನನ್ನು ನಾಯಕನಿಗೆ ಕಟ್ಟಿದರೆ

ಅದರಿಂದ ನಂಬಯ್ಯನೊಂದಿಗಿನ ತನ್ನ ವ್ಯವಹಾರ ಸುರುಳೀತ ನಡೆದೀತೆಂಬಂತೆ ರಾಣಿ ಯೋಚಿಸುವದಕ್ಕೂ ಚೆನ್ನಬಸವನ ಚಿತ್ರಣದಲ್ಲಿ ಸಮರ್ಥನೆಯಿಲ್ಲ.

ಚೆನ್ನಬಸವನಾಯಕನನ್ನು ವೀರಮ್ಮನ ಹೆತ್ತ ಮಗನಾಗಿ ಚಿತ್ರಿಸದೆ ಚರಿತ್ರೆಯ ವಾಸ್ತವ ವಿವರಗಳಿಗನುಗುಣವಾಗಿ ದತ್ತುಪುತ್ರನಾಗೇ ಚಿತ್ರಿಸಿದ್ದರೆ ಎರಡೂ ವ್ಯಕ್ತಿತ್ವಗಳ ನಡುವಿನ ಕರ್ಷಣಕ್ಕೊಂದು ತರ್ಕ ಒದಗಬಹುದಿತ್ತು. ಈ ವ್ಯತ್ಯಾಸ ಗಣನೀಯವಲ್ಲ –ಹಿಂದೂ ಪರಂಪರೆ ಸ್ವಂತ ಸಂತಾನ ದತ್ತಕ ಸಂತಾನಗಳ ಮಧ್ಯೆ ವ್ಯತ್ಯಾಸ ಗಣಿಸುವದಿಲ್ಲ–ನಿಜ; ತಾಯ ಹೃದಯದ ಹೆಂಗಸಿಗೆ ದತ್ತಕ ಮಗ ಕಡಿಮೆಯಾಗಬೇಕಿಲ್ಲ–ವಿಶೇಷವಾಗಿ ಗಂಡ ತನ್ನ ಉತ್ತರಾಧಿಕಾರಿಯಾಗಿ ಅವನನ್ನು ಆಯ್ಕೆಮಾಡಿದಾಗ, ಸಂಸ್ಥಾನ ತನ್ನ ಸ್ವಾತಂತ್ರ್ಯವನ್ನು ಮೈಯೆಲ್ಲ ಕಣ್ಣಾಗಿ ರಕ್ಷಿಸಿಕೊಳ್ಳುವ ಸ್ಥಿತಿ ಇರುವಾಗ. ಆದರೆ ದತ್ತುಪುತ್ರನಾಗಿ ಚಿತ್ರಿತವಾಗಿದ್ದರೆ ತಾಯಿಯ ಮನೋಭಾವನೆಗೆ ಪ್ರತಿಯಾಗಿ ಏನೂ ಮಾಡಲಾಗದ ತನ್ನ ಸಂಕೋಚಕ್ಕೆ ಕಾರಣ ತಾನು ದತ್ತು ಪುತ್ರನೆಂಬ ಪ್ರಜ್ಞೆ ಎಂದಾಗಿದ್ದರೆ ಅದು ಅಂದಿನ ರಾಜಕೀಯದ ಸ್ವರೂಪದ ಹಿನ್ನಲೆಯಲ್ಲಿ ಸ್ವಾಭಾವಿಕವಾಗುತ್ತಿತ್ತು. (ಚೆನ್ನಬಸವನಾಯಕನ ತಂದೆ ಗುರುವಯ್ಯನ ತಂದೆಯಾದ ನಿರ್ವಾಣಯ್ಯ ಬಸವಪ್ಪನಾಯಕರ ಆಳ್ವಿಕೆಯಲ್ಲಿ ಪ್ರಭಾವಿಯಾದ ಮಂತ್ರಿಯಾಗಿದ್ದ ಹಿನ್ನಲೆಯಲ್ಲಿ) ಚೆನ್ನಬಸವನ ಕುರಿತಾಗಿ ವೀರಮ್ಮನ ಮನೋಭಾವಕ್ಕೆ ರಾಜಕೀಯ ಹಿತಾಸಕ್ತಿಗಳು ಪ್ರೇರಣೆಯಾಗಿ ಚಿತ್ರಿತವಾಗಿದ್ದರೆ ಆ ಪಾತ್ರದ ಶೋಧನೆ ಒಂದು ಗತಕಾಲೀನ ರಾಜಕೀಯ ವ್ಯವಸ್ಥೆಯ ಸ್ವರೂಪದ ಶೋಧನೆಯೂ ಆಗಬಹುದಿತ್ತೇನೋ .

ಇತಿಹಾಸದ ವಸ್ತುವೊಂದನ್ನೆತ್ತಿಕೊಂಡು ಕಲೆಯ ಮಾಧ್ಯಮದಲ್ಲಿ ಅದನ್ನು ಚಿತ್ರಿಸುವಾಗ ಇತಿಹಾಸದ ವಿವರಗಳನ್ನೆಲ್ಲ ಕಠಿಣವಾಗಿ ಅನುಸರಿಸಬೇಕೆಂದಿಲ್ಲ. ಹಾಗೆ ವಿವರಗಳೆಲ್ಲವೂ ಲಭ್ಯವಾಗಿರುತ್ತವೆಂದಾಗಲಿ, ಲಭ್ಯವಿದ್ದ ವಿವರಗಳ ಐತಿಹಾಸಿಕ ತಥ್ಯವೆಲ್ಲ ವಿವಾದಾತೀತಂಬುದಾಗಲಿ ಎಲ್ಲ ಸಂದರ್ಭಗಳಲ್ಲಿ ಖಚಿತವಾಗಿರುವದೂ ಇಲ್ಲ. ಉದಾಹರಣೆಗೆ ಚೆನ್ನಬಸವನಾಯಕನ ಕೊಲೆಯಲ್ಲಿ ವೀರಮ್ಮನ ಪಾತ್ರ. ಲಿಂಗಣ್ಣ ಕವಿಯ 'ಕೆಳದಿನೃಪವಿಜಯ'ದಲ್ಲಿ ಈ ಕುರಿತ ಪ್ರಸ್ತಾಪವಿಲ್ಲ. ಆದರೆ ಸಮಕಾಲೀನ ಪೋರ್ಚುಗೀಜ್ ಪತ್ರಗಳಲ್ಲಿ ಚೆನ್ನಬಸವ ಅವಳಿಂದ ಕೊಲೆಯಾಗಿದ್ದ ಸೂಚನೆಗಳಿವೆ. ೧೮೦೭ ರ ಸುಮಾರಿಗೆ ಕೊಡಗಿನ ದೊರೆ ದೊಡ್ಡವೀರರಾಜ ತನ್ನರಮನೆಯಲ್ಲಿ ಲಭ್ಯವಿದ್ದ ದಾಖಲೆಗಳನ್ನೆಲ್ಲ ಆಧಾರವಾಗಿರಿಸಿಕೊಂಡು ಬರೆಸಿದ 'ಕೊಡಗು ಸಂಸ್ಥಾನದ ರಾಜೇಂದ್ರನಾಮೆ'ಯಲ್ಲೂ, ತನ್ನ ಪೂರ್ವಜರಿಗೆ ಸಮಕಾಲೀನರಾಗಿ ವಿವಿಧೆಡೆ ಆಳುತ್ತಿದ್ದವರ ಕುರಿತು ಹೇಳುವಲ್ಲಿ ವೀರಮ್ಮ ಅರಮನೆ ಸರ್ವಾಧಿಕಾರಿ ನಂಬ್ಯಣ್ಣನೊಂದಿಗೆ ವ್ಯಭಿಚಾರ ಮಾಡಿ ಪಟ್ಟದ ವಯಸ್ಸಿಗೆ ಬಂದ ಅರಸುಪುತ್ರನನ್ನು ಕೊಂದ ಮಾತಿದೆ. ಈ ಕುರಿತು ಇರುವ ಅಲ್ಪಸ್ವಲ್ಪ ಸಂದಿಗ್ಧವನ್ನೂ ಮಾಸ್ತಿ ಗೌರವಿಸಿದ್ದಾರೆ. ಹತ್ತಾರು ದಿನ ಎಲ್ಲೆಡೆ ಸಂಚರಿಸಿ ಪಡೆಗೂಡಲು ಗೌಡುಗಳಿಗೆ ಆದೇಶಿಸಿ ನಾಯಕ ದತ್ತಾತ್ರೇಯ ಪೀಠಕ್ಕೆ ಹೋದ ಮರುದಿನ ಜ್ವರ ಬಂದು, ನಂತರ ಉಲ್ಬಣಿಸಿ ಮರಣಿಸಿದ ಎಂದು ಆಗಲೇ ನೋಡಿದ್ದೇವೆ. ಅಂದರೆ ಕಾದಂಬರಿಯಲ್ಲಿ ಮೇಲ್ನೋಟಕ್ಕೆ ನಾಯಕನದು ಸ್ವಾಭಾವಿಕ ಸಾವಾಗಿ ತೋರುತ್ತದೆ. ಆದರೆ ಸೂಕ್ಷ್ಮವಾಗಿ ನೋಡಿದರೆ ಅದು ಕೊಲೆಯೇ. ನಂಬಯ್ಯನಿಂದ ಪ್ರೇರಿತರಾದ ಇಬ್ಬರು ಚಂಡಾಲರು

ಚನ್ನಬಸವನಾಯಕನ ಕೊಲೆಯ ಪ್ರಯತ್ನ ಮಾಡಿದಾಗ ಆಗಲೇ ಸತ್ತು ಹೋಗಬಹುದಾಗಿದ್ದ ನಾಯಕನನ್ನು ಹಿರೇಮಠದ ಅಯ್ಯನವರು ನಾಯಕನ ಕುತ್ತಿಗೆಗೆ ಚಂಡಾಲರು ಬಿಗಿದಿದ್ದ ಚೀಲದ ಕುಣಿಕೆ ಬಿಚ್ಚಿಸುವ ಮೂಲಕ ಬದುಕಿಸುತ್ತಾರೆ. ಆದರೆ ಕೊಲೆಗಡುಕರು ಅವನ ಮುಖಕ್ಕೆ ಹಾಕಿದ ಗೌಸಿಗೆ ಸವರಿದ ಜೋಗಿಹುಡಿಯ ಕಂಪಿನ ಪರಿಣಾಮವಾಗಿ ನಾಯಕನ ದನಿ ಕುಗ್ಗಿ ಕಾಲು ಜೊಂಪು ಬಂದದ್ದು ಗಮನಿಸಿದ ಅಯ್ಯನವರು ಎರಡು ತಿಂಗಳು ಮೈದಣಿಸಬಾರದೆಂದು ಸೂಚಿಸುತ್ತಾರೆ. ಈ ಅಸ್ವಾಸ್ಥ್ಯದ ಅಂಶ ನಾಯಕನಲ್ಲಿ ಉಳಿದೇ ಉಳಿಯುತ್ತದೆ. ದುರ್ಗವನ್ನು ಬಿಟ್ಟ ಮೇಲೆ ಆತನಿಗೆ ಎರಡು ದಿನ ಜ್ವರ ಬಂದಿರುತ್ತದೆ. ಪೀಠದಲ್ಲಿರುವಾಗ ಒಂದು ದಿನ ಚಳಿಚಳಿಯಾಗಿರುತ್ತದೆ. ವಸ್ತಾರೆಗೆ ಬಂದ ಮೂರನೆಯ ದಿನ ಕಾಣಿಸಿಕೊಂಡ ಜ್ವರ ಅಂತಿಮವಾಗಿ ಅವನ ಸಾವಿಗೇ ಕಾರಣವಾಗುತ್ತದೆ.

ನಂಬಯ್ಯನೊಂದಿಗಿನ ತನ್ನ ಸಂಬಂಧದ ಕುರಿತು ನಾಯಕ ಹೊಂದಿದ್ದ ತಿರಸ್ಕಾರದ ಬಗ್ಗೆ ಬೇಸರಪಟ್ಟುಕೊಳ್ಳುತ್ತಾಳೆಂಬುದನ್ನು ಹೊರತುಪಡಿಸಿ ಯಾವುದೋ ನೆಲೆಯಲ್ಲಿ ನಾಯಕನ ಕುರಿತು ವಾತ್ಸಲ್ಯವಿದ್ದಂತೆ ಪ್ರಾರಂಭದಲ್ಲಿ ಚಿತ್ರಿತಳಾದ ರಾಣಿಯ ಪಾತ್ರ ಹಾಗೇ ಮುಂದುವರಿಯುತ್ತದೆ. ಆತನ ಕೊಲೆಯಲ್ಲಿ ರಾಣಿಯ ಪಾತ್ರದ ಬಗ್ಗೆ ಕಾದಂಬರಿಯಲ್ಲಿರುವದು ನಿರಾಕರಣೆಯೇ ಎನ್ನಬಹುದು.

ತಾವು ಬಿದನೂರು ಬಿಡಬಹುದಾದ ಪ್ರಸಂಗದ ಕುರಿತು ರಾಣಿ ವ್ಯಕ್ತಪಡಿಸುವ ಬೇಸರಕ್ಕೆ ಪ್ರತಿಯಾಗಿ ನಂಬಯ್ಯ 'ನೀವು ಇಲ್ಲೇ ಇರುವ ಹಾಗೆ ನಾ ಮಾಡಬಲ್ಲೆ' ಎನ್ನುತ್ತಾನೆ. 'ಏನ್ಮಾಡತಿ?' ಎಂದು ರಾಣಿ ಕೇಳಿದಾಗ 'ಅದೆಲ್ಲ ನಿಮಗೆ ಬೇಡಿ, ಏನೋ ಮಾಡುತ್ತೇನೆ' ಎನ್ನುತ್ತಾನೆ.

ಸಂಭಾಷಣೆ ಹೀಗೆ ಸಾಗುತ್ತದೆ:

ರಾಣಿ – "ಏನೋ ಮಾಡ್ತಿ ?"

ನಂಬಯ್ಯ – "ಹೌದು, ಏನೋ"

ರಾಣಿ-"ವಯ್ಯಾ, ನಂಬಯ್ಯ, ಅಂತಾ ಮಾತನಾಡಬೇಡ, ಜೋಕೆ. ಸಾವಿರ ಮಾಡಿದರೂ ನಾಯಕ ನನ್ನ ಮಗ, ಕಂಡ್ಯಾ?" 'ರಾಣಿ ತನ್ನ ಅರ್ಥಗ್ರಹಿಸಿದಳೆಂದು ನಂಬಯ್ಯ ತಿಳಿದನು.ಅವಳು ಆ ಯೋಚನೆ ಬೇಡವೆಂದು ಬಾಯಲ್ಲಿ ಹೇಳಿದ್ದನ್ನು ಕೇಳಿದನು. ಆದರೆ ಅವಳ ಮನಸ್ಸು ತನ್ನ ಸಲಹೆಗೆ ಒಪ್ಪಿಗೆ ಕೊಟ್ಟಿದೆಯೆಂಬುದು ಅವನ ನಿಶ್ಚಯವಾದ ತಿಳಿವಳಿಕೆ' ಎಂದು ಕಾದಂಬರಿಕಾರರು ಹೇಳಿದರೂ ಮುಂದೆ ನಾಯಕ ಬಹುದಿನ ಅರಮನೆಗೆ ಬರದೇ ಕಳವಳ ಹುಟ್ಟಿದಾಗ ರಾಣಿಯ ಯೋಚನೆಯ ಚಿತ್ರ ಕೊಡುವಲ್ಲಿ ಹೇಳುತ್ತಾರೆ: "ನಂಬಯ್ಯ ಅವನನ್ನು ಏನಾದರೂ ಮಾಡಿಸಿರಬಹುದು. ಹೀಗೆಂದುಕೊಂಡಾಗ ರಾಣಿಗೆ ಜೀವ ಹಿಂಡಿದಂತಾಯಿತು. ತಾನು ಮಗನ ಮೇಲೆ ಕೋಪ ಮಾಡಿದ್ದುಂಟು. ಇಂಥ ಮಗ ಹುಟ್ಟದಿದ್ದರೆ ಚೆನ್ನಾಗಿತ್ತು ಎಂದದ್ದುಂಟು. ಆದರೆ ಅವನ ಜೀವಕ್ಕೆ ಅಪಾಯ ಮಾಡುವ ಮಾತಿಗೆ ಈ ತಾಯಿ ಉಸಿರು ಒಪ್ಪುವದಾಗಿರಲಿಲ್ಲ." ಮುಂದೆ ನಂಬಯ್ಯ ತಾನು ನಾಯಕನ ಕೊಲೆಗೆಳಸಿದ್ದನ್ನು ರಾಣಿಯ ಕಾಲುಹಿಡಿದು ಒಪ್ಪಿಕೊಂಡು ಕ್ಷಮಿಸೆಂದಾಗ ರಾಣಿಯ ಶೋಕಾಭಿವ್ಯಕ್ತಿ ಅಷ್ಟು ಹೃದಯದಾಳದ್ದಲ್ಲ

ಎನ್ನುವುದು ಸುಲಭವಾಗೇ ಗೊತ್ತಾಗುತ್ತದೆ. ಅಂತೂ ಕೊನೆಯಲ್ಲಿ ಹೈದರ್ ಸೆರೆಹಿಡಿದು ರಾಣಿಯ ಮೇಲೆ ಹೊರಿಸಿದ ಮೂರು ಆಪಾದನೆಗಳಲ್ಲಿ ನಾಯಕನ ಕೊಲೆಗೆ ಸಂಬಂಧಿಸಿದ ಆಪಾದನೆಯನ್ನು ಸಾರಾಸಗಟಾಗಿ ನಿರಾಕರಿಸುತ್ತ ರಾಣಿ ಹೇಳುತ್ತಾಳೆ: "ನಾವು ನಮ್ಮ ಮಕ್ಕಳನ್ನು ಕೊಲ್ಲಿಸಲು ಯತ್ನಿಸಿದೆವೆನ್ನುವದು ಅನ್ಯಾಯದ ಸುಳ್ಳು."

ಮಾಸ್ತಿಯವರು ಮನುಷ್ಯರ ವರ್ತನೆ/ಚಿಂತನೆ, ಗುಣದೋಷಗಳ ಮುಖಾಂತರ ಚಾರಿತ್ರಿಕ ಸನ್ನಿವೇಶವೊಂದರ ಸ್ವರೂಪವನ್ನು ಗ್ರಹಿಸುತ್ತಾರೆಂದಾದರೆ 'ಚೆನ್ನಬಸವನಾಯಕ' ಕಾದಂಬರಿಗಿಂತ 'ಚಿಕವೀರರಾಜೇಂದ್ರ'ದಲ್ಲಿ ಅದು ಹೆಚ್ಚು ಯಶಸ್ವಿಯಾಗಿದೆ ಎಂದು ಹೇಳಬೇಕು.

ಚಿಕವೀರರಾಜನ ತಂಗಿಯ ಗಂಡ ಚೆನ್ನಬಸವಯ್ಯ ತನ್ನ ಪತ್ನಿಯೊಂದಿಗೆ ಅಪ್ಪಂಗೊಳದ ಅರಮನೆಯಿಂದ ಫರಾರಿಯಾಗಲು ಮಾಡಿದ ಸಂಚಿನ ಸಂದರ್ಭದಲ್ಲಿ ಈ ಕಾದಂಬರಿಯಲ್ಲಿ ಒಂದು ಮಾತು ಬರುತ್ತದೆ. ತನ್ನನ್ನು ಕಾವಲು ಕಾಯಲು ಮಡಕೇರಿಯಿಂದ ಬಂದ ಕಾವಲ ಜನರಿಗೆ ಹಬ್ಬದೂಟ ಏರ್ಪಡಿಸಿ ಅವರಿಗೆ ಬಡಿಸಿದ ಪಾಯಸದಲ್ಲಿ ಅಫೀಮು ಸೇರಿಸುವ ಸಂಚಿನ ಸನ್ನಿವೇಶದಲ್ಲಿ ಬರುವ ಈ ಮಾತು ಹೀಗಿದೆ: "ಅಫೀಮು ಮತ್ತು ಇದರಂಥ ಇತರ ಸಾಮಗ್ರಿ ಆಗಿನ ಕಾಲದಲ್ಲಂತೂ ಇಂಥ ಮನೆಗಳಲ್ಲಿ ಯಾವ ಹೊತ್ತಿನಲ್ಲೂ ತಕ್ಕಷ್ಟು ಇರುತ್ತಿತ್ತು. ಅರಮನೆಗಳ ಜೀವನದಲ್ಲಿ ಅನ್ನ ಎಷ್ಟೋ ಅಷ್ಟೇ ವಿಷವೂ ಒಂದು ಮುಖ್ಯ ವಸ್ತು." ಈ ಕಾದಂಬರಿಯ ವಿವರಗಳನ್ನು ಗ್ರಹಿಸಲು ಈ ಮಾತು ಒಂದು ಚೌಕಟ್ಟನ್ನು ಒದಗಿಸುತ್ತದೆ ಅಥವಾ ಒದಗಿಸಬೇಕೆಂದು ತೋರುತ್ತದೆ. ಹಾಗಾದರೆ ಇಲ್ಲಿಯ ಪಾತ್ರಗಳನ್ನು ಮತಧರ್ಮಗಳ ಚೌಕಟ್ಟಿನಲ್ಲಿ ಪರಿಭಾವಿಸುವ, ಅನೌಚಿತ್ಯವಾದರೂ ತಪ್ಪುತ್ತದೆ. ಚಿಕ್ಕವೀರರಾಜೇಂದ್ರ ದುಷ್ಟನಾಗಬೇಕೆಂದು ದುಷ್ಟನಾದ ಕ್ರೂರಿಯಾಗಬೇಕೆಂದು ಕ್ರೂರಿಯಾದ ದೊರೆಯಲ್ಲವೆಂಬುದು ಕಾದಂಬರಿಯ ನಿಲುವು. ಅವನ ವಿಲಕ್ಷಣ ಪ್ರವೃತ್ತಿಗಳಿಗೆ ಅವನ ಮಂತ್ರಿಗಳಲ್ಲಿ ಒಬ್ಬನಾದ ಕುಂಟ ಬಸವಯ್ಯನಿಂದ ಪ್ರತ್ಯೇಕ ಅಸ್ತಿತ್ವವಿಲ್ಲ. ಎಳೆತನದಿಂದಲೂ ಕುಂಟಬಸವನ ಗೆಳೆತನ ರಾಜನ ಸ್ವಭಾವವನ್ನು ಪ್ರಭಾವಿಸಿದೆ. ಬಸವ ಲಾಯದ ಮನೆಯ ಹುಡುಗ. ಎಳೆತನದಿಂದ ದನಗಳ ಜೊತೆ ನಾಯಿಗಳ ಜೊತೆ ಬೆಳೆದು ಆ ಪ್ರಾಣಿಗಳ ಕೊಟ್ಟಿಗೆಯ ಬಾಳನ್ನು ನೋಡುತ್ತ ನೋಡುತ್ತ ನಾಚಿಕೆಯನ್ನು ಕಳೆದುಕೊಂಡ ಈತ ಚಿಕವೀರರಾಜ ಆರು ವರ್ಷದ ಬಾಲಕನಾಗಿದ್ದಾಗಿನಿಂದ ಅವನ ಜೊತೆಗಾರ. ಇವನ ಗೆಳೆತನದಲ್ಲಿ ದನಗಳ ನಾಯಿಗಳ ಸಂಸಾರ ಸುಖದ ಅವಲೋಕನವನ್ನು ಒಂದು ವಿನೋದವಾಗಿಸಿಕೊಂಡು ಸಾರಾಸಾರ ವಿಚಾರವಿಲ್ಲದೆ ಬಸವನ ಸಲಹೆಗಳಿಗೆ ಕಿವಿಗೊಡುತ್ತ ಬೆಳೆಯುತ್ತಾನೆ ಚಿಕವೀರ. ಆ ಮೂಲಕ ಬೆಳೆದ ರಾಜನ ಅವಿವೇಕ ಅವನ ಆಳ್ವಿಕೆಯ ಕೊನೆಯ ವರ್ಷದಲ್ಲಿ ತನ್ನ ಪರಾಕಾಷ್ಠೆಯನ್ನು ತಲುಪುತ್ತದೆ. ತನ್ನ ವ್ಯಕ್ತಿತ್ವ, ಪ್ರಭುತ್ವ, ರಾಜಕೀಯ ಸಾಮರ್ಥ್ಯದ ಕುರಿತು ರಾಜ ಬೆಳೆಸಿಕೊಂಡ ಭ್ರಮೆ ಅವನ ಮಿತಿಯ ಅರಿವಿನ ಮೇಲೆ ಮುಸುಕೆಳೆದಿದೆ. ಕುಂಪಣಿ ಸರಕಾರದ ಶಕ್ತಿಯ ಕುರಿತ ಅವನ ಅರಿವನ್ನು ಅಂಧಗೊಳಿಸಿದೆ.

ಚಿಕವೀರರಾಜನ ಪ್ರವೃತ್ತಿ ವೈಲಕ್ಷಣಗಳಲ್ಲಿ ಪ್ರಮುಖವಾಗಿ ಹೇಳಲ್ಪಟ್ಟ ಎರಡು– ಅವನ ಕಾಮುಕತನ ಹಾಗೂ ಕಠೋರ. ಮೊದಲಿನದು ಬಾಲ್ಯದಿಂದಲೂ ಈತ ಹಾಗೂ ಬಸವ ರಾತ್ರಿಯಲ್ಲಿ ಹೆಂಗಸರು ಮಲಗಿರುವಲ್ಲಿಗೆ ಹೋಗಿ ಜೊತೆಯಾಗಿ ತುಂಟತನ ಮಾಡುವ

ಅಥವಾ ಹೆಣ್ಮಕ್ಕಳನ್ನು ಹಿಡಿಸಿ ತಾವಿರುವಲ್ಲಿ ಕರೆತಂದು ತುಂಟಾಟ ಆಡುವ ಅಭ್ಯಾಸದಿಂದ ಬೆಳೆದದ್ದು. ಆದರೆ ಕಾದಂಬರಿಯಲ್ಲಿ ಅರಸನಾಗಿ ಚಿಕವೀರರಾಜನ ಪಾತ್ರಚಿತ್ರಣದಲ್ಲಿ ಒತ್ತು ಹೆಚ್ಚಾಗಿ ಇರುವದು ಕಾಮುಕತನದ ಮೇಲಲ್ಲ. ಕೊಡಗ ಉತ್ತಯ್ಯ ತಕ್ಕನ ಸೊಸೆ ಮಗಳನ್ನು ರಾಣಿಯ ಕೈವಾರಕ್ಕೆಂದು ನೆಪ ಹೇಳಿ ಅರಮನೆಗೆ ಕರೆಸಿಕೊಳ್ಳುವ ಹುನ್ನಾರಕ್ಕೆ ತಕ್ಕನು ಸ್ಪಂದಿಸದೇ ಹೋದದ್ದರಿಂದ ಆತನ ಸಾಹಸವೊಂದನ್ನು ಮೆಚ್ಚಿ ಲಿಂಗರಾಜನ ಕಾಲದಿಂದ ಕೊಡಮಾಡಿದ್ದ ಪಡಿಯನ್ನು ನಿಲ್ಲಿಸಿದ ಪ್ರಸಂಗ ಹಾಗೂ ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಬಸವ ಕದ್ದು ತರಿಸಿ ಮಡಿಕೇರಿಯಲ್ಲಿರಿಸಿದ ಪ್ರಸಂಗಗಳಲ್ಲಿದನ್ನು ನೋಡಬಹುದು.

ನಿಲ್ಲಿಸಿದ ಪಡಿಯನ್ನು ಮುಂದುವರಿಸುವಂತೆ ಅರಸನಲ್ಲಿ ಅರಿಕೆ ಮಾಡಿಕೊಳ್ಳಲು ಬಂದ ಉತ್ತಯ್ಯ ತಕ್ಕ ಅರಸನ ಮನಸ್ಸಾಕ್ಷಿಗೇ ಸವಾಲು ಹಾಕುತ್ತಾನೆ. ತನ್ನ ತಂದೆಗೆ ಆಪ್ತನಾದ ತಕ್ಕ 'ಮಾತಾಡತಿದ್ದರೆ ಅಪ್ಪಾಜಿಯವರೇ ಇದಿರಿಗಿರೋ ಹಂಗಾಯಿತು ನನಗೆ' ಎಂದು ಅರಸ ಬಸವನಿಗೆ ಹೇಳುವಲ್ಲಿ, 'ಅಪ್ಪಾಜಿಯವರಿಗೆ ಬೇಕಾಗಿದ್ದವನು, ಇವನ ಕೂಡೆ ಜಗಳಬೇಡ ಕಣೋ' ಎಂದು ಅವನಿಗೆ ಸೂಚಿಸುವಲ್ಲಿ 'ಇವನ ನುಂಟನಲ್ಲಿ ಹುಡಿಗೀ ಒಂದ ಹಿಡಿಯಬಾರದಾಗಿತ್ತೋ' ಎಂದು ತಪ್ಪೆಸಗಿದ ಭಾವ ಅನುಭವಿಸುವಲ್ಲಿ ಮತ್ತು 'ಪಡಿ ನಿಲಿಸಿದ್ದು ಅಷ್ಟು ಚಂದ ಆಗಲಿಲ್ಲ. ಪಡೀನ ತಿರುಗಿಕೊಟ್ಟದೇವಿ ಅನ್ನು, ಹೋಗಲಿ ಕಾಡು ಚೆಕ್ಕು' ಎಂದು ಬಸವನಿಗೆ ಆಜ್ಞಾಪಿಸುವಲ್ಲಿ ನಾವು ಚಿಕವೀರನ ವ್ಯಕ್ತಿತ್ವದ ಬೇರೊಂದು ಆಯಾಮವನ್ನೇ ಕಾಣುತ್ತೇವೆ. ಯಾವದೋ ಭರದಲ್ಲಿ ಏನೋ ಮಾತಾಡಿ– ಏನೋ ಮಾಡಿ– ನಂತರ ಆತ್ಮಸಾಕ್ಷಿಯ ತಿವಿತಕ್ಕೊಳಗಾಗಿ ಪರಿತಪಿಸುವ ಭಾವಾವಿಷ್ಟ ಮನುಷ್ಯನೊಬ್ಬನ ಚಿತ್ರವನ್ನು ಚಿಕವೀರನ ಪಾತ್ರ–ಹಲವು ಸಲ ಮೂಡಿಸುತ್ತದೆ. ಎರಡನೆಯ ಪ್ರಸಂಗ ಬಸವ ಅಪಹರಿಸಿ ತಂದ ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಬಿಟ್ಟುಕೊಡುವಂತೆ ಕೇಳಿ ಮಂತ್ರಿ ಲಕ್ಷ್ಮೀನಾರಾಯಣಯ್ಯನ ತಾಯಿ ಸಾತಮ್ಮಾ ರಾಜನ ಬಳಿ ಬಂದದ್ದು, ಈ ಅರಸ ಕೂಸಾಗಿದ್ದಾಗ ಎತ್ತಿ ಆಡಿಸಿದ ಮುದುಕಿ ಆಕೆ. ಅದೇ ಸಲುಗೆಯಿಂದಲೇ ಅರಸನೊಂದಿಗೆ ಮಾತಾಡುತ್ತಾಳೆ. 'ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಉಳಿಸಿಕೊಟ್ಟರೆ ದೇವರು ನಾಳೆ ದೊರೆಮಗಳನ್ನು ಕಾಯುತ್ತಾನೆ. ಹೆಣ್ಣಾಗು ಎಲ್ಲಾ ಒಂದೇ ನಮ್ಮದೇನು ಪರರದೇನು. ನಾಳೆ ಪುಟ್ಟಮ್ಮಾಜೀನ ಯಾವ ಕಷ್ಟವೂ ಕಾಡಬಾರದಲ್ಲ' ಎಂದಾಗ ಅರಸನ ಮನಸ್ಸು ಅಳುಕುತ್ತದೆ. 'ಲೋ ಬಸವ ಸಾತಮ್ಮಜ್ಜಿ ಕೇಳೋ ಹುಡುಗೀನ ಅವರ ಜೊತೆ ಕಳಿಸಿಬಿಡು' ಎಂದು ಬಸವನಿಗೆ ಆಜ್ಞಾಪಿಸುತ್ತಾನೆ.

ಸರಿ ತಪ್ಪುಗಳ ವಿವೇಚನೆಯನ್ನು ಸಮಗ್ರವಾಗಿ ಕಳೆದುಕೊಂಡು ತನ್ನನ್ನು ವಿರೋಧಿಸಿದವರನ್ನೆಲ್ಲ ತರಿದುಹಾಕುವ ಕ್ರೂರಿಯಲ್ಲ ಚಿಕವೀರರಾಜ. ಹಾಗಾಗಿದ್ದರೆ ಅರಸ ಅರಮನೆಯ ಸೇವೆಗೆ ಬೇಕೆಂದು ವರ್ತಕಪೇಟೆಯ ಚಿಕ್ಕಣ್ಣಶೆಟ್ಟಿಯ ಸೊಸೆ ಮಗಳನ್ನು ಹೇಳಿ ಕಳಿಸಿದ್ದಕ್ಕೆ ಪ್ರತಿಯಾಗಿ ಚಿಕ್ಕಣ್ಣಶೆಟ್ಟಿ ತೋರಿದ ಪ್ರತಿರೋಧ ಶೆಟ್ಟಿಯ ಅಂತ್ಯದಲ್ಲಿ ಕೊನೆಗೊಳ್ಳಬೇಕಿತ್ತು. ಆಳದಲ್ಲಿ ಇಂಥ ಕೃತ್ಯಗಳಲ್ಲಿರುವ ಅನೌಚಿತ್ಯದ ಕುರಿತ ಅಳುಕು ಅರಸನಿಗೂ ಇದೆ; ಬಸವನಿಗೂ ಇದೆ. ವಾಸ್ತವವಾಗಿ ಹೆಂಗಸರನ್ನು ಕುರಿತ ಈ ಪ್ರಕರಣಗಳು ಅರಸನ ಹೆಸರು ಮುಂದೆ ಮಾಡಿಕೊಂಡು ಬಸವ ನಡೆಸುತ್ತಿದ್ದ ಕೃತ್ಯಗಳೆಂಬುದೂ ಅಲ್ಲಲ್ಲಿ ಸೂಚಿತವಾಗಿದೆ. ಇಲ್ಲೆಲ್ಲ ಧ್ವನಿತವಾಗುವಂತೆ

ಚಿಕವೀರನ ಕಾಮುಕತನವೆನ್ನುವದು ಸಂಪೂರ್ಣ ಸ್ವಚ್ಛಂದವಾದ ಪಾಶವೀ ಪ್ರವೃತ್ತಿಯಾಗಿರಲಿಲ್ಲ.

ಚಿಕವೀರರಾಜನ ಕಠೋರ ಪ್ರವೃತ್ತಿ ಅಥವಾ ಹಿಂಸೆಯ ಮನೋಭಾವಕ್ಕೆ ಅಂದಿನ ರಾಜಕೀಯ ವ್ಯವಸ್ಥೆಯ ಸ್ವರೂಪದಿಂದ ಭಿನ್ನವಾದ ಅಸ್ತಿತ್ವವಿತ್ತೆನ್ನಲಾಗದು. ಹಿಂಸೆ ಮುಖ್ಯವಾಗಿ ಗಾದಿಯ ಮೇಲಿನ ಒಡೆತನ ಹಾಗೂ ಅದರ ಉತ್ತರಾಧಿಕಾರ ಕೈತಪ್ಪೀತೆನ್ನುವ ಆತಂಕದಿಂದ ಪ್ರೇರಿತವಾದದ್ದು. ಪ್ರಸ್ತುತ ಕಾದಂಬರಿಯಲ್ಲಿ ತನ್ನ ತಂಗಿ ದೇವಮ್ಮಾಜಿಯ ಮಗುವನ್ನು ಆತ ಕೊಂದ ಘಟನೆಗೆ ಪೂರ್ವಭಾವಿಯಾಗಿ ಆತನ ಯೋಚನೆಯಲ್ಲಿ ವ್ಯಕ್ತವಾಗುವುದು ಇದೇ.

"ಜ್ಞಾತಿಗಳನ್ನು ಕೊಂದು ದೊಡ್ಡಪ್ಪ ದೊರೆಯಾಗಿ ಉಳಿದನು. ಜ್ಞಾತಿಗಳನ್ನು ಕೊಂದು ಅಡಗಿಸದೆ ಅಪ್ಪನಿಗೆ ದೊರೆಯಾಗುವುದು ಸಾಧ್ಯವಾಗಲಿಲ್ಲ, ಬಾಳುವುದು ಆಗಲಿಲ್ಲ. ದೊರೆಯಾಗಿ ತಾನು ಧೈರ್ಯವಾಗಿ ಬಾಳಲಾಗಲಿಲ್ಲ; ದೊಡ್ಡಪ್ಪನ ಮಗಳನ್ನು ಕೊಲ್ಲಿಸಬೇಕಾಯಿತು; ಆಗವ ಜ್ಞಾತಿಗಳನ್ನು ನಿರ್ಮೂಲ ಮಾಡಬೇಕಾಯಿತು.'' ಇಲ್ಲಿ ಅರಸನ ಮನದಲ್ಲಿ ಸುಳಿಯುತ್ತಿರುವ ಘಟನೆಗಳು ತನ್ನ ದೊಡ್ಡಪ್ಪ ದೊಡ್ಡವೀರರಾಜ ಹಾಗೂ ನಂತರ ಅಪ್ಪ ಲಿಂಗರಾಜರು ನಡೆಸಿದ ಕೊಲೆಗಳು. ಇನ್ನುಳಿದಂತೆ ಕೊಡಗನ್ನಾಳಿದ ಅರಸರಲ್ಲೆಲ್ಲ ಖ್ಯಾತನಾಗಿದ್ದ, ಸಂಯಮಿಯಾಗಿದ್ದ, ಕೊಡಗಿನ ಸ್ವಾತಂತ್ರ್ಯವನ್ನು ಮೈಯೆಲ್ಲ ಕಣ್ಣಾಗಿ ರಕ್ಷಿಸಿದ್ದ ದೊಡ್ಡವೀರರಾಜ ಕೂಡ ಉತ್ತರಾಧಿಕಾರದ ವಿಷಯದಲ್ಲಿ ಇನ್ನಿಲ್ಲದ ಕಠೋರತೆ ತಾಳಿ ತನ್ನ ದಾಯಾದಿಗಳ ಸಂತತಿಯನ್ನು ನಿರ್ದಯವಾಗಿ ಕೊಲ್ಲಿಸಿದ್ದನೆಂಬುದು, ಅವನ ತಮ್ಮ ಲಿಂಗರಾಜ ಅಣ್ಣನ ಮಗಳನ್ನು ಕೊಲ್ಲಿಸಿ ಗಾದಿ ಏರಿದ್ದನೆಂಬುದು ಚಿಕವೀರರಾಜನಲ್ಲಿರುವದು ಇದೇ ಅಧಿಕಾರಲಾಲಸೆಪ್ರೇರಿತ ದ್ವೇಷಾಸೂಯೆಗಳ ಪರಂಪರೆಯ ಮುಂದುವರಿಕೆ ಎನ್ನುವದನ್ನೇ ಹೇಳುತ್ತದೆ. " ಈಗ ನೂರು ಜನದ ಕಣ್ಣು ತನ್ನ ಮೇಲೆ ಬಿದ್ದಿದೆ. ತಾನು ಹೋದರೆ ತನ್ನ ಮಗಳು ಗಾದಿ ಏರಬೇಕು. ಅವಳಲ್ಲ, ನಾನು ಏರಬೇಕು, ಎಂದು ಈ ಓಡಿದ ತಂಗಿ ಹೇಳುತ್ತಿದ್ದಾಳೆ. ತಂಗಿಯ ಗಂಡ ಅಳಿಯ ಮೂಳ ನಮ್ಮ ಮಗು ಈ ಕೂಸು ಗಾದಿ ಏರಬೇಕು ಎಂದು ಹೇಳುತ್ತಿದ್ದಾನೆ.

ತಂಗಿಯ ಮಗ! ತನ್ನ ಮಗಳಿರುತ್ತ ಈ ತಂಗಿಯ ಮಗನಿಗೆ ಗಾದಿಯೆ? ಈ ಮಗು ಇದ್ದರಲ್ಲವೇ ಗಾದಿಯನ್ನೇರುವ ಮಾತು? ಈ ಹುಳುವನ್ನು ತಿಕ್ಕಿ ಹಾಕಬೇಕು.'' ಅಂದೇ ರಾತ್ರಿ ಅರಸ ಆ ಮಗುವನ್ನು ಸುರಗಿಯಿಂದ ಇರಿಯುತ್ತಾನೆ. ಅವನ ಪಾಲಿಗೆ ಅದೊಂದು ಮಗುವಲ್ಲ, ಎಳೆ ಜೀವವಲ್ಲ. ದೀಕ್ಷಿತ ಹೇಳಿದ ಕಂಸಯೋಗ ನಿಜವಾಗುವುದಾದರೆ ಆ ಮಗು ತನ್ನ ಸಾವು! ಇಲ್ಲದಿದ್ದರೂ ತಾನು ಪದಚ್ಯುತನಾದ ಗಳಿಗೆಯಲ್ಲಿ ಗಾದಿ ಏರುವ ಸಕಲ ಪ್ರಯತ್ನ ಮಾಡುತ್ತಿರುವ ಅಳಿಯ— ತಂಗಿಯ ಗಂಡ ಚೆನ್ನಬಸವಯ್ಯ—ನ ಸಂತತಿ; ತನ್ನ ಪ್ರೀತಿಯ ಮಗಳ ಹಕ್ಕಿನ ಪ್ರತಿಸ್ಪರ್ಧಿ!!

ತಂದೆ ಲಿಂಗರಾಜನಿಗೆ ಮೆಚ್ಚಿನವನಾಗಿದ್ದನೆಂಬ ಕಾರಣದಿಂದ ಯಾವ ಉತ್ತಯ್ಯ ತಕ್ಕನ ವಿನಂತಿಗೆ ಒಪ್ಪಿ ಪಡಿ ಪುನರಾರಂಭಿಸಿದ್ದನೋ, ಪಾಣೇ ಹೆಂಗಸನ್ನು ಯಾವ ಸಾತಮ್ಮಾಜ್ಜಿಯ ಕೋರಿಕೆಗೆ ಮಣಿದು ಬಿಡುಗಡೆಗೊಳಿಸಿದ್ದನೋ ಅದೇ ಉತ್ತಯ್ಯ ತಕ್ಕ, ಅದೇ ಸಾತಮ್ಮಾಜ್ಜಿ ಬಂದು ತಂಗಿಯಿಂದ ಅಗಲಿಸಿ ತನ್ನ ಬಳಿ ಇಟ್ಟುಕೊಂಡ ಆ ಕೂಸನ್ನು ಆಕೆಗೆ ಮರಳಿಸಬೇಕೆಂದು

ತನಗೆ ಅರಿಕೆ ಮಾಡಿದಾಗ ಚಿಕವೀರರಾಜ ತೋರುವ ಉಗ್ರ ಪ್ರತಿಕ್ರಿಯೆಯ ಹಿಂದಿರುವದು ಇದೇ. ಭೀತಿ ವಾಸ್ತವವಾಗಿ ಹೀಗೆ ಒಬ್ಬರಾದ ಮೇಲೊಬ್ಬರಂತೆ ಆ ಕುರಿತ ಪ್ರಸ್ತಾಪವೆತ್ತಿಕೊಂಡು ಬಂದದ್ದರ ಪರಿಣಾಮ ವ್ಯತಿರಿಕ್ತವಾಗಿ ಅರಸನಲ್ಲಿ ಅಸಹನೆ ಬೆಳೆಯತೊಡಗುತ್ತದೆ. ಆ ಮಗುವನ್ನು ಮುಗಿಸಿ ಬಿಡುವ ತೀವ್ರತೆ ಹೆಚ್ಚಾಗುತ್ತದೆ. ಒಂದು ಬಗೆಯ delirious ಅವಸ್ಥೆಯಲ್ಲಿ ಆತ ಅದನ್ನು ಮುಗಿಸಿಯೂ ಬಿಡುತ್ತಾನೆ. ಆದರೆ ಮೂಲತಃ ಅದನ್ನು ಕೊಲ್ಲುವ ಯೋಚನೆ ಅರಸನದಾಗಿರುವದಿಲ್ಲವೆನ್ನುವದನ್ನು ತಂದೆ–ತಾಯಿ ಪಲಾಯನಗೈಯುವಾಗ ಅಚಾತುರ್ಯದಿಂದ ಬೇರ್ಪಟ್ಟ ಆ ಮಗುವನ್ನು ಅರಮನೆಗೆ ತಂದಾಗ ಅರಸ ಹೇಳುವುದರಲ್ಲಿ ಕಾಣಬಹುದು. ಆತ ಬಸವನಿಗೆ ಹೇಳುತ್ತಾನೆ: "ಮಗೂನ ಯಾರಾದರೂ ಕದ್ದಾರು ಜೋಕೆ. ಕದ್ದೋಡಿದ ಮುಂಡೇಮಕ್ಕಳು ತಿರುಗಿ ಬಂದು ಕಾಲಿಗೆ ಬೀಳಬೇಕು. ಆಮೇಲೆ ಅದನ್ನ ಅವರಿಗೆ ಕೊಡಬೇಕು. ಅಲ್ಲೀತನಕ ಯಾರನ್ನೂ ಅದರ ಹತ್ತಿರ ಸುಳಿಯಕೊಡಬಾರದು. ತಲೆ ತೆಗೆದೇವು ತಲೆ, ಜೋಕೆ."

ತಮ್ಮ ಅಧಿಕಾರಕ್ಕೆ ವಿರುದ್ಧವಾಗಿ ಸಂಚು ನಡೆಯುತ್ತಿರುವದೋ ಎಂಬ ಸಂದೇಹ ಪ್ರವೃತ್ತಿ ಕೊಡಗನ್ನಾಳಿದ ಕೊನೆಯ ಮೂರು ದೊರೆಗಳಿಗೆ ಸಮಾನವಾದ ಅಂಶವಾಗಿತ್ತು. ಈ ಪ್ರವೃತ್ತಿ ದೀರ್ಘಾವಧಿಯವರೆಗೆ ಮನೆಮಾಡಿಕೊಂಡಿದ್ದರೆ ಹುಚ್ಚಿನ ಒಂದು ಪ್ರಭೇದವೇ ಆಗುತ್ತದೆ. ಆ ರಾಜಕೀಯ ಸನ್ನಿವೇಶದಲ್ಲಿ ಅರಸ ಯಾವುದನ್ನೂ ನಂಬದಂಥ ಮನಸ್ಥಿತಿಯನ್ನು ತಲುಪುತ್ತಾನೆ. ಇಂಥ ಅಪನಂಬಿಕೆಯೇ ಕಾರಣವಾಗಿ ಒಂದು ಜೀವ ಎರಡು ದೇಹವೆಂಬಷ್ಟು ನಿಕಟನಾದ, ಅರಸನ ಪಾಪಗಳ ಸಮಭಾಗಿಯೂ ಪ್ರಸಂಗ ಬಂದರೆ ಅವನ ತಪ್ಪುಗಳನ್ನು ತಾನೇ ಹೊರಲು ಸಿದ್ಧನಾದ ವಿಧೇಯನೂ ಆದ ಕುಂಟ ಬಸವ ಚಿಕವೀರರಾಜನ ಗುಂಡಿಗೇ ಬಲಿಯಾಗುವ ವಿಪರ್ಯಾಸ ಆ ರಾಜಕೀಯ ಸನ್ನಿವೇಶದ ದುರಂತವೂ ಆಗಿದೆ.

ಕೊಡಗಿನ ಕಥೆ ರೋಚಕವಾದುದು. ದೊಡ್ಡವೀರರಾಜ, ಅವನ ತಮ್ಮ ಲಿಂಗರಾಜ ಮತ್ತು ಲಿಂಗರಾಜನ ಮಗ ಚಿಕ್ಕವೀರರಾಜ ಇವರ ಆಳ್ವಿಕೆಯ ಕೊಡಗಿನ ಘಟನಾವಳಿಗಳನ್ನು ಇದ್ದುದಿದ್ದಂತೆ ಹೇಳಿದರೂ ಕಲ್ಪನಾರಮ್ಯ ಕಥಾನಕದ ರೂಪತಾಳುವ ನಾಟಕೀಯತೆ ಆ ಚರಿತ್ರೆಗಿದೆ. ಅದಕ್ಕೆ ಮಾಸ್ತಿಯವರ ಕಥೆಹೇಳುವ ವಿಶಿಷ್ಟ ಶೈಲಿ–ಭಾಷೆ, ಜೀವನದೃಷ್ಟಿ ಎಚ್ಚರದಿಂದ ನಿರ್ಮಿಸಿದ ಕಥಾಬಂಧ, ಪಾತ್ರಗಳ ಪುನರ್ ನಿರ್ಮಿತಿಯಲ್ಲಿ ವ್ಯಕ್ತವಾಗುವ ಪ್ರತಿಭೆ, ನವಿರಾದ ಹಾಸ್ಯಗಳೆಲ್ಲ ಸೇರಿ 'ಚಿಕವೀರರಾಜೇಂದ್ರ' ಕೃತಿ ಪರಿಣಾಮಕಾರಿಯಾದ, ಎದೆ ಕಲಕುವ ಕಥೆಯಾಗಿ ರೂಪಗೊಂಡಿದೆ. 'ಚೆನ್ನಬಸವನಾಯಕ' ಕೃತಿಗೆ ಹೋಲಿಸಿದರೆಈ ಕಾದಂಬರಿಯಲ್ಲಿ ಕಲ್ಪನೆಯ ಅಂಶ ಕಡಿಮೆ. ಚಿಕವೀರರಾಜ, ಅವನ ದಿವಾನರುಗಳಾಗಿದ್ದ ಬಸವಯ್ಯ, ಬೋಪಣ್ಣ, ಪೊನ್ನಪ್ಪ, ಲಕ್ಷ್ಮೀನಾರಾಯಣ, ಅರಸನ ಪತ್ನಿ ಗೌರಮ್ಮ, ರಾಜಕುಮಾರಿ, ಸೋದರಿ ದೇವಮ್ಮಾಜಿ ಆಕೆಯ ಗಂಡ ಚೆನ್ನಬಸವಪ್ಪ, ದೊಡ್ಡಪ್ಪ ಅಪ್ಪಾಜಿ, ಕೊಡಗ ಉತ್ತಯ್ಯ ತಕ್ಕ, ಬ್ರಿಟಿಷ್ ರೆಸಿಡೆಂಟ್ ಕಾಸ್‌ಮೈಜೋರ್, ಕರ್ನಲ್ ಫ್ರೇಜರ್, ಗ್ರ್ಯಾಹಂ, ಮೆನನ್, ದಾದಾಸೇಟ್ ಇವೆಲ್ಲ ಚಾರಿತ್ರಿಕವಾಗಿ ಬಾಳಿ ಬದುಕಿದ್ದ ಪಾತ್ರಗಳೇ. ಕಲ್ಪನೆಯ ಪಾತ್ರಗಳು ಮುಖ್ಯವಾಗಿ ಓಂಕಾರೇಶ್ವರ ಗುಡಿಯ ಅರ್ಚಕ ದೀಕ್ಷಿತ, ಬಸವಯ್ಯನ ತಾಯಿ ಭಗವತಿ,

ದೊಡ್ಡವ್ವ ಇತ್ಯಾದಿ.

ವಸಾಹತುಶಾಹಿ ಕ್ರಮ ಕ್ರಮೇಣ ಸ್ಥಾನಿಕ ಅಧಿಕಾರಕೇಂದ್ರಗಳ ಮೇಲೆ ಸ್ಥಾಪಿಸತೊಡಗಿದ್ದ ಆಧಿಪತ್ಯದ ಗ್ರಹಿಕೆ ಇಲ್ಲಿ ಯಥಾವತ್ತಾಗಿದೆ. ಮಂಗಳೂರಿನ ಕಲೆಕ್ಟರ್, ಮದರಾಸಿನ ಗವರ್ನರ್ ಫ್ರೇಜರ್, ಬೆಂಗಳೂರಿನಲ್ಲಿರುವ ಮೈಸೂರು ರೆಸಿಡೆಂಟ್ ಕಾಸ್‌ಮೈಜೊರ್, ಕಲ್ಕತ್ತೆಯಲ್ಲಿರುವ ಗವರ್ನರ ಜನರಲ್ ವಿಲಿಯಂ ಬೆಂಟಿಂಕ್ ಇವು ಬೇರೆ ಬೇರೆ ಪಾತ್ರಗಳೆನ್ನಿಸುವದಿಲ್ಲ; ಒಂದು ಆರ್ಥಿಕ–ರಾಜಕೀಯ ಹಿತಾಸಕ್ತಿಗೆ ಶ್ರೇಣೀಕೃತ ಅಧಿಕಾರ ಕೇಂದ್ರಗಳಲ್ಲಿ ಕುಳಿತು ಧ್ವನಿಕೊಡುವ ಮಾಧ್ಯಮಗಳಷ್ಟೇ. ಇದಕ್ಕೆ ವ್ಯತಿರಿಕ್ತ ಸನ್ನಿವೇಶ ಸ್ಥಾನಿಕರದು. ಇಲ್ಲಿ ಒಬ್ಬೊಬ್ಬನೂ ತನ್ನಲ್ಲಿ ತಾನೇ ಒಂದು ಹಿತಾಸಕ್ತಿ. ಈ ದೃಷ್ಟಿಯಿಂದ ಮಾಸ್ತಿಯವರ ಈ ಕಾದಂಬರಿ ನಾಡಿನ ಚರಿತ್ರೆಯ ವಿಷಮ ಸನ್ನಿವೇಶಂದರ ಕುರಿತು ಬರೆದ ಭಾಷ್ಯ

ಕೊನೆಗೂ ಈ ಕಾದಂಬರಿ ಪ್ರಧಾನವಾಗಿ ಹೇಳಬಯಸುವದು, ಹೇಗೆ ಕೆಲ ವ್ಯಕ್ತಿಗತ ದೋಷಗಳಿಂದಾಗಿ ವೀರರಾಜನಲ್ಲಿ ಬೆಳೆದ ದುರಹಂಕಾರ ಹಾಗೂ ದುರಾಗ್ರಹಗಳೇ ಕಾರಣವಾಗಿ ಆತ ರಾಜತಾಂತ್ರಿಕ ಹೊಣೆಗೇಡಿತನವನ್ನೆಸಗಿದ ಮತ್ತು ಹೇಗೆ ಅದರ ಪರಿಣಾಮ ಒಂದು ಜನತೆಯ ಬದುಕಿನ ವ್ಯಾಪಕ ನೆಲೆಯಲ್ಲಿ ಆಯಿತು ಎಂಬುದನ್ನು. ತನ್ನ ವೈಯಕ್ತಿಕ ತೆವಲುಗಳಿಗೆ ಸಹಕಾರಿ ಎಂಬುದಕ್ಕೆ ಆಪ್ತನಾದ ಕುಂಟಬಸವ ರಾಜಕೀಯವಾಗಿಯೂ ಆಪ್ತನಾಗಿ ಉನ್ನತ ಅಧಿಕಾರ ಸ್ಥಾನಕ್ಕೇರಿ ಅರಸನ ನೀತಿಯನ್ನು ಪ್ರಭಾವಿಸಿದ, ಅರಸ ವಾಸ್ತವದ ಗ್ರಹಿಕೆಗಳಿಂದ ವಿಮುಖನಾಗುವಂತೆ ಮಾಡಿದ, ಕೊನೆಗೆ ಅರಸನ ವಾಸ್ತವಶಕ್ತಿಯ ಕುರಿತ ಕಲ್ಪನೆಯನ್ನು ಕೊಡುವ ಮಾತುಗಳು ಅರಸನಿಗೆ ರುಚಿಸದೇ ತನ್ನ ಸಾಮರ್ಥ್ಯದ ಕುರಿತಾದ ಹುಚ್ಚು ಭ್ರಮೆಗಳಲ್ಲೇ ಆತ ಸುತ್ತುವಂತಾಯಿತು. ನೆರೆಯ ಮೈಸೂರಿನಲ್ಲಿ ಹೈದರನಂಥ ಪ್ರಬಲರು, ಟಿಪ್ಪುವಿನಂಥ ಬಲವಂತರು ಕೂಡ ಬ್ರಿಟಿಷರೆದುರು ನಿಲ್ಲಲಾಗದೆ ಹೋದ ಸರಳ ವಾಸ್ತವ ಕೂಡ ಅವನ ಗಮನಕ್ಕೆ ಬರಲಿಲ್ಲ. ಪರಿಣಾಮವಾಗಿ ಆ ಸಂದರ್ಭಕ್ಕೆ, ಕೊಡಗಿನ ಒಳಿತಿಗೆ ಅಗತ್ಯವಾದ ಸೂಕ್ತ ರಾಜತಾಂತ್ರಿಕ ಆಯ್ಕೆಗಳನ್ನು ಅತ್ತ ದೂಡಿ ಅರಸ ಬಲವದ್ವಿರೋಧ ಕಟ್ಟಿಕೊಂಡ, ಹಾಳಾದ. ಆತನ ದುರಹಂಕಾರ, ದುರಾಗ್ರಹಗಳಿಂದ ಆತನೊಬ್ಬನೆ ಹಾಳಾಗಿದ್ದರೆ ಸಮಸ್ಯೆಯಿರುತ್ತಿರಲಿಲ್ಲ. ಆಗಲೇ ನೋಡಿದ ಹಾಗೆ ದೊರೆಯೊಬ್ಬನ ಅಸಾಮರ್ಥ್ಯ ಅಥವಾ ದೌರ್ಬಲ್ಯ ವ್ಯಕ್ತಿಗತವಾದದ್ದೇ ಆಗಿರಲಿ, ದೊರೆಯಾಗಿ ಆತನ ಅಸಾಮರ್ಥ್ಯ ದೌರ್ಬಲ್ಯವೇ ಆಗಿರಲಿ ಹೇಗಿದ್ದರೂ ಅಷ್ಟೇ ಪರಿಣಾಮಕಾರಿಯಾಗಿ ಪ್ರಜೆಗಳ ಬದುಕಿನ ನೆಮ್ಮದಿಯನ್ನು ಅದು ಕದಡುತ್ತಿತ್ತು. ಅಂತೆಯೇ, ಮಾಸ್ತಿಯವರ ಈ ಕಾದಂಬರಿಯ ಕುರಿತು ಬರೆಯುತ್ತ ಒಂದೆಡೆ ಪ್ರೊ. ವಿ.ಎಂ. ಇನಾಂದಾರ್ ಅವರು ಹೇಳಿರುವಂತೆ , ನಡೆದದ್ದಕ್ಕೆ ಆತ ಪೂರ್ತಿಯಾಗಿ ಹೊಣೆಗಾರನಾಗಿರುವದರಿಂದ ವೀರರಾಜೇಂದ್ರ ತನ್ನ ಅರಸೊತ್ತಿಗೆಯನ್ನು ಕಳೆದುಕೊಂಡ ಎನ್ನುವದಕ್ಕಿಂತ ಕೊಡಗಿಗೆ ಅರಸೊತ್ತಿಗೆಯೇ ಇಲ್ಲದಾಯಿತು ಎನ್ನುವದು ನಿಜವಾದ ದುರಂತ.

□□

ಚಂದ್ರವದನಾ *

• ಎಚ್.ಎಸ್. ಸುಜಾತಾ

ಪಂಜೆ ಮಂಗೇಶರಾಯರು (೧೮೭೪–೧೯೩೭) ತಮ್ಮ ಸತ್ವಪೂರ್ಣ ಸಣ್ಣಕಥೆಗಳ ಮೂಲಕ ಐತಿಹಾಸಿಕವಾಗಿ ಮೊದಲಿಗರಾಗಿದ್ದ ಕ್ಷೇತ್ರದಲ್ಲಿ ಕಾಲಿಟ್ಟ 'ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ವೆಂಕಟೇಶ ಅಯ್ಯಂಗಾರರು (೧೮೯೧–೧೯೮೬) ಸಾಹಿತ್ಯಕವಾಗಿ ಹಿರಿಯ ವ್ಯಾಪ್ತಿಯನ್ನು ಪಡೆದವರು. ೧೯೨೦ ರಲ್ಲಿ ಪ್ರಕಟವಾದ 'ಕೆಲವು ಸಣ್ಣಕಥೆಗಳು' ಎಂಬ ತಮ್ಮ ಮೊದಲ ಸಂಕಲನದಿಂದಲೇ ಮಾಸ್ತಿಯವರು ತಮ್ಮ ಸ್ಥಾನವನ್ನು ಭದ್ರ ಮಾಡಿಕೊಂಡರು. ತಮ್ಮ ಸಮೃದ್ಧ ಜೀವನಾನುಭವವನ್ನು ಅಭಿವ್ಯಕ್ತಿಸಲು ಸಣ್ಣಕಥೆಯನ್ನು ಮಾಧ್ಯಮವನ್ನಾಗಿಸಿಕೊಂಡರು. ಆ ಮೂಲಕ ಕನ್ನಡ ಸಣ್ಣಕಥೆಗಳಿಗೆ ಒಂದು ಗಟ್ಟಿ ಸಂಪ್ರದಾಯವನ್ನು ನಿರ್ಮಿಸಿದರು. ಮಾಸ್ತಿಯವರು ಸಣ್ಣಕಥೆಗಳ ರಚನೆಗೆ ಮೊದಲಿಟ್ಟದ್ದು, ಬ್ರಿಟಿಷರ ಆಳ್ವಿಕೆಯಿಂದ ಭಾರತ ಅನೇಕ ಸ್ಥಿತ್ಯಂತರಗಳಿಗೆ ಒಳಗಾಗುತ್ತಿದ್ದ ಕಾಲದಲ್ಲಿ. ಹೊಸಗನ್ನಡದ ಇತರ ಪ್ರಕಾರಗಳು ಆ ದಿನಗಳಲ್ಲಿ ಕಣ್ತೆರೆಯುತ್ತಿದ್ದವು. ಹೊಸ ದಿಕ್ಕು ದಾರಿಗಳಿಗಾಗಿ ತವಕ ಕಾಣಿಸಿಕೊಂಡಿತ್ತು. ಈ ಸಂದರ್ಭದಲ್ಲಿ ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆಗಳು' (೧೯೨೧) ಬರುವ ಮೊದಲೇ ಮಾಸ್ತಿಯವರ ಮೊದಲ ಸಣ್ಣಕಥೆಗಳ ಸಂಕಲನ ಬಂದಿತು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಮಾಸ್ತಿಯವರು ಸಣ್ಣತೆಗಳಲ್ಲದೇ ಕಾದಂಬರಿ, ನಾಟಕ, ಕಾವ್ಯ, ವಿಚಾರವಿಮರ್ಶೆ, ಆತ್ಮಕಥೆ, ಜೀವನಚರಿತ್ರೆ, ಅನುವಾದ, ಸಂಪಾದಿತ ಮೊದಲಾದ ಇತರ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರೂ ಅವರ ಮುದ್ರೆ ಗಾಢವಾಗಿ ಬಿದ್ದಿರುವುದು ಸಣ್ಣಕಥೆಯ ಕ್ಷೇತ್ರದಲ್ಲಿ ಎಂಬ ಮಾತಿನಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಪ್ರಾರಂಭದ ಕಥೆಗಳಲ್ಲಿಯೇ ಪರಿಣತಿಯನ್ನು ಪಡೆದಿರುವ ಅವರ ಸಾಧನೆಯಿಂದ ಸಂತೋಷ ವಿಸ್ಮಯಗಳು ಒಟ್ಟಿಗೇ ಉಂಟಾಗುತ್ತವೆ. ಜೊತೆಗೆ ನಮ್ಮ ಶ್ರೇಷ್ಠ ಗದ್ಯಲೇಖಕರಲ್ಲಿಯೂ ಅವರು ಒಬ್ಬರಾಗಿದ್ದಾರೆ. ಅತ್ಯಂತ ಪಾರದರ್ಶಕವಾದ ಅವರ ಶೈಲಿ ಅವರಿಗೇ ವಿಶಿಷ್ಟ ಎನ್ನುವಷ್ಟು ಸರಳ ಗಾಂಭೀರ್ಯದಿಂದ ಕೂಡಿದೆ. ಗಾಢವಾದ ದೈವನಿಷ್ಠೆ, ಬದುಕಿನಲ್ಲಿ ಶ್ರದ್ಧೆ, ಸಾಹಿತ್ಯದಲ್ಲಿ ಆಸಕ್ತಿ ಹಾಗೂ ಸರಕಾರದಲ್ಲಿ ಉನ್ನತಪದವಿ– ಇವುಗಳು ಮಾಸ್ತಿಯವರ ಜೀವನವನ್ನು ರೂಪಿಸಿದವು. ಫಲವಾಗಿ ಮಾಸ್ತಿಯವರ ಬದುಕು ಬರಹಗಳೆರಡರಲ್ಲಿಯೂ ಆತ್ಮಸ್ಥೈರ್ಯ ಮತ್ತು ತಣ್ಣನೆಯ ಮನಸ್ಸುಗಳು ಕಾಣಿಸಿಕೊಂಡಿವೆ.

---

* ಚಂದ್ರವದನಾ ಪುಸ್ತಕರೂಪದಲ್ಲಿ ಮೊದಲು ಹೊರಬಂದದ್ದು 'ಸಣ್ಣಕಥೆಗಳು–7' ಸಂಕಲನದಲ್ಲಿ, ೧೯೪೭ರಲ್ಲಿ, ಪ್ರಸ್ತುತ ಲೇಖನಕ್ಕಾಗಿ ಉಪಯೋಗಿಸಿಕೊಂಡಿರುವ ಕಥಾಸಂಕಲದ ವಿವರಗಳು ಇಂತಿವೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ; ಸಣ್ಣಕಥೆಗಳು (ಸಂಪುಟ–೩) ಚಂದ್ರವದನಾ (ಪು.೧–೧೫); ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ.), ಬೆಂಗಳೂರು – ೧೯: ೧೯೯೦.

ವಿಮರ್ಶಕರ ಗಮನವನ್ನು, ಅಷ್ಟಾಗಿ ಸೆಳೆಯದಿರುವ 'ಚಂದ್ರವದನಾ' ನಿಜದಲ್ಲಿ ಅನಗತ್ಯ ಅಲಕ್ಷ್ಯಕ್ಕೆ ಗುರಿಯಾಗಿದೆ ಎಂದೇ ನನ್ನ ಭಾವನೆ. ಅರವತ್ತರ, ಎಪ್ಪತ್ತರ ಹಾಗೂ ಎಂಬತ್ತರ ದಶಕಗಳಲ್ಲಿ ಪ್ರಕಟವಾದ, ಮಾಸ್ತಿಯವರ ಬದುಕು ಸಾಹಿತ್ಯಗಳನ್ನು ಕುರಿತ ಎಂಟು** ಮುಖ್ಯ ಗ್ರಂಥಗಳನ್ನು ನಾನು ವೀಕ್ಷಿಸಿದ್ದೇನೆ. ಇವುಗಳಲ್ಲಿ ಎರಡು (ಹಾ.ಮಾ. ನಾಯಕರಿಂದ ಸಂಪಾದಿತವಾದ 'ಶ್ರೀನಿವಾಸ ಸಾಹಿತ್ಯ' ಕೃತಿಯಲ್ಲಿನ ಎಚ್.ಜೆ. ಲಕ್ಕಪ್ಪಗೌಡರು ಬರೆದಿರುವ 'ಕಥೆಗಳು' ಎಂಬ ಲೇಖನ ಹಾಗೂ ಜಿ.ಎಸ್. ಶಿವರುದ್ರಪ್ಪನವರ ಸಂಪಾದನೆಯಲ್ಲಿ ಹೊರಬಂದಿರುವ 'ಮಾಸ್ತಿಯವರ ಸಾಹಿತ್ಯ: ಒಂದು ಅಧ್ಯಯನ' ಕೃತಿಯಲ್ಲಿನ ಗಿರಡ್ಡಿ ಗೋವಿಂದರಾಜರ 'ಕನ್ನಡ ಕಥಾಪರಂಪರೆ ಮತ್ತು ಮಾಸ್ತಿ' ಎಂಬ ಲೇಖನ) ಕೃತಿಗಳಲ್ಲಿ 'ಚಂದ್ರವದನಾ' ಕತೆಯ ಪ್ರಸ್ತಾಪವಿದೆ. ಮೊದಲನೆಯದರಲ್ಲಿ ಚಂದ್ರವದನೆಯ ಕಥೆಯನ್ನು ಸಂಗ್ರಹಿಸಿದೆ, ಅಲ್ಲಿ ಎತ್ತಿ ಹಿಡಿದಿರುವ ತಾಯ್ತನದ ಹಿರಿಮೆಯನ್ನು ಗುರುತಿಸಿದೆ, ಎರಡನೆಯದರಲ್ಲಿ ಸಹ ಚಂದ್ರವದನೆಯ ತಾಯ್ತನದ ಆಸೆಯನ್ನು ತಿಳಿಸಿದೆ. ಕತೆಯಲ್ಲಿ ಸಾಮಾಜಿಕ ಸಮಸ್ಯೆಯ ಮೂಲವನ್ನು ಮುಟ್ಟದ ಮಾಸ್ತಿಯವರ ಮಿತಿಯನ್ನು ಹೇಳಿದೆ. ವಿವರವಾದ ವಿವೇಚನೆಗೆ ಈ ಲೇಖನಗಳಲ್ಲಿ–'ಚಂದ್ರವದನಾ' ಕಥೆಗೆ ಸಂಬಂಧಿಸಿದಂತೆ–ಅವಕಾಶವಾಗಿಲ್ಲ.

ಕಥೆ ಮತ್ತು ಕಥೆಯ ಬಂಧ

ಚಂದ್ರವದನಾ ನಟಿವ ವೃತ್ತಿಯವಳು, ನಾಟಕ ಕಂಪನಿಯೊಂದರ ಕಲಾವಿದೆ. ತನ್ನ ಪ್ರಾಯ ಸೌಂದರ್ಯ, ನಟನೆಗಳಿಂದ ಹದಿಹರೆಯದವರಿಗೂ ಪ್ರಾಯ ಸಂದವರಿಗೂ ಏಕರೀತಿಯಾಗಿ ಹುಚ್ಚು ಹಿಡಿಸಿದ್ದ ಈ ಲಾವಣ್ಯವತಿ ಬಸಿರಾಗುತ್ತಾಳೆ. ಚಂದ್ರವದನೆ ತಾಯಿ

** ಕೆ.ಡಿ. ಕುರ್ತಕೋಟಿ: ಯುಗಧರ್ಮ ಹಾಗೂ ಸಾಹಿತ್ಯದರ್ಶನ ; ಮನೋಹರ ಗ್ರಂಥಮಾಲಾ, ಧಾರವಾಡ ; ೧೯೬೨.

M.G. Krishna Murthy, (Ed) Modern Kannda Fiction : A critical Anthology; The Department of Indian Studies. The University of Wisconsin, Madison; 1967.

ತಿ.ತಾ.ಶರ್ಮ: ಮಾಸ್ತಿಯವರ ಮನೋಧರ್ಮ; ಕವಿಜನಾಶ್ರಯ, ೫೪ ಶಂಕರವನ, ಬೆಂಗಳೂರು ೪೬೦೦೦೪; ೧೯೭೦.

ಎ.ಎನ್. ಮೂರ್ತಿರಾವ್: ಶ್ರೀ ಮಾಸ್ತಿಯವರ ಕಥೆಗಳು; ಕಾವ್ಯಾಲಯ, ಮೈಸೂರು ೫೭೦೦೦೯; ೧೯೭೧.

ಮಾವಿನಕೆರೆ ರಂಗನಾಥನ್ (ಸಂ): ಶ್ರೀನಿವಾಸ; ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ. ೧೧ನೆಯ ಕ್ರಾಸ್, ಬೆಂಗಳೂರು ೫೬೦೦೦೩; ೧೯೭೩.

ಹಾ.ಮಾ. ನಾಯಕ (ಸಂ): ಶ್ರೀನಿವಾಸ ಸಾಹಿತ್ಯ ; ಮಾಸ್ತಿ ಸನ್ಮಾನ ಸಮಿತಿ ಪರವಾಗಿ ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು ೫೭೦೦೦೪; ೧೯೭೪.

L.S. Seshagiri Rao; Masti Venkatesha Ayyanagar; Institute of Kannada Studies, University of Mysore, Manasagangaotri, Mysore 570006 ; 1976

ಜಿ.ಎಸ್. ಶಿವರುದ್ರಪ್ಪ (ಸಂ): ಮಾಸ್ತಿಯವರ ಸಾಹಿತ್ಯ: ಒಂದು ಅಧ್ಯಯನ; ಪ್ರಸಾರಾಂಗ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೫೬೦೦೫೬; ೧೯೮೬

ಆದರೆ ಅವಳ ದೇಹಸೌಷ್ಠವ ಹೋದಿತೆಂಬ ಭಯದಿಂದ ಅವಳ ತಾಯ್ತನಕ್ಕೆ ತಡೆಹಾಕಲು ಅವಳ ಪೋಷಕನಾದ ಸೂರಪ್ಪ ಯತ್ನಿಸುತ್ತಾನೆ. ಚಂದ್ರವದನೆ ಅದಕ್ಕೆ ಸಿದ್ಧಳಿಲ್ಲ. ಪಟ್ಟುಹಿಡಿದು ಸಾಹಸಮಾಡಿ, ತನ್ನಲ್ಲಿ ಸಹಾನುಭೂತಿಯುಳ್ಳ ಗೌರವಸ್ಥ ಕುಟುಂಬವೊಂದರ ದಂಪತಿಗಳ ಸಹಾಯಪಡೆದು, ಕಂಪನಿಯಿಂದ ದೂರ ಓಡಿ ತಾಯಾಗುತ್ತಾಳೆ. ಮಗುವಿನೊಂದಿಗೆ ಕಂಪನಿಗೆ ಹಿಂದಿರುಗಿ ತನ್ನ ವೃತ್ತಿಯನ್ನು ಮುಂದುವರಿಸುತ್ತಾಳೆ. ಇದಿಷ್ಟು ಕಥೆಯ ಸ್ಥೂಲ ಹಂದರ. ವಸ್ತುಸ್ಥಿತಿಯನ್ನು ಗ್ರಹಿಸಿ ಕಥೆಯ ಮುಖ್ಯಪಾತ್ರ ಪ್ರತಿಕ್ರಿಯಿಸಿದ ರೀತಿ 'ಚಂದ್ರವದನಾ'ದಲ್ಲಿದೆ. ಇಲ್ಲಿನ ಯಾವುದೇ ಪಾತ್ರ ಅಥವಾ ಘಟನೆ ಅಸಾಮಾನ್ಯ ಅಲ್ಲ.ಆದರೆ ಈ ಸಾಮಾನ್ಯ ಪಾತ್ರ, ಘಟನೆಗಳ ಮೂಲಕ ಮಾಸ್ತಿಯವರು ಶ್ರೇಷ್ಠ ಎಂದು ತಾವು ನಂಬಿರುವ ಸಂಸ್ಕಾರದ ಹೆಜ್ಜೆಗುರುತುಗಳನ್ನು ಚಿತ್ರಿಸುತ್ತಾರೆ.

ಇಡೀ ಕತೆ ನಿರೂಪಕನಿಂದ ಹೊರಡುವಂಥದು. ಏಕವ್ಯಕ್ತಿಯ ಮಾತುಗಾರಿಕೆ ರೂಪದಲ್ಲಿರುವ ಈ ವೃತ್ತಿಯನ್ನು ಸ್ವಗತ ಎನ್ನುವಂತಿಲ್ಲ. ಇದು ಸ್ಪಷ್ಟವಾಗಿ ಓದುಗರನ್ನು ಉದ್ದೇಶಿಸಿದೆ. ಆದರೆ ಸಂಭಾಷಣೆಯ ಯಾವ ಸಾಧ್ಯತೆಯೂ ಇಲ್ಲ. ಕತೆ ಕೇಳುವ ಅಥವಾ ಓದುವ ವ್ಯಕ್ತಿಯ ಪ್ರತಿನಿಧಿಯಾಗಿ ಯಾವ ಪಾತ್ರವೂ ನಿರೂಪಕನೊಂದಿಗೆ ಪ್ರತಿಕ್ರಿಯಿಸುವುದಿಲ್ಲ. ಕಾಲದ ಅಂತರ ಸ್ಥಾಪನೆಯಾಗಿರುವುದರಿಂದ ಹಿನ್ನೋಟತಂತ್ರ ಸಹಜವಾಗಿ ಬಳಕೆಯಾಗಿದೆ. ಇದರಿಂದ ನಡೆದ ಘಟನೆಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡಲು ಕತೆಗಾರನಿಗೆ ಸುಲಭವೂ ಆಗಿದೆ.

ನಿರೂಪಕ ಹೇಳುವ "ನನಗೆ ಆಗ ಆ ನಟರು ಜೀವನದ ಸೂತ್ರಗಳಲ್ಲಿ ಒಂದನ್ನು ಹಿಡಿದುಕೊಟ್ಟರು'' (ಪು.೧) ಎಂಬುದು ಗಂಡು ಹೆಣ್ಣಿನ ಸಂಬಂಧವನ್ನು ಕಾಮ ಪ್ರೇಮಗಳ ವ್ಯಾಪ್ತಿಯನ್ನು ಕುರಿತದ್ದೇ ಆಗಿದೆ. ಮುಂದಿನ ಮಾತಾದ "ನನಗೆ ಈಗ ಇನ್ನು ಮುಂದಣ ಸೂತ್ರವನ್ನು ತಂದುಕೊಡುವದರಲ್ಲಿ ವಿಶ್ವಾಸ'' (ಪು.೧) ಎಂಬುದು ಗಂಡು ಹೆಣ್ಣಿನ ಸಂಬಂಧದ ಮುಂದಿನ ಸೋಪಾನವಾದ ತಾಯ್ತನದೆಡೆಗೆ ತನ್ನ ಲಕ್ಷ್ಯವನ್ನು ಸ್ಪಷ್ಟವಾಗಿ ಬಿಂಬಿಸುವಂಥದು. ಈ ಎರಡು ಮಾತುಗಳು ಕಥೆಯ ಭಿತ್ತಿಗೆ ಒಂದು ಚೌಕಟ್ಟನ್ನು ಒದಗಿಸುತ್ತವೆ. ಕಥೆಯ ಪ್ರಾರಂಭದಲ್ಲಿನ ಷೋಡಶ ಪ್ರಾಯದ ಚೆಲುವೆ ಚಂದ್ರವದನೆ ಕಥೆಯ ಅಂತ್ಯದಲ್ಲಿ ತಾಯಾಗಿ ಮರುಪ್ರವೇಶ ಮಾಡುತ್ತಾಳೆ. ಇವುಗಳ ಜೊತೆಗೆ ಕಥೆಯ ಮೊದಲಿಗೆ ಬರುವ ದುಷ್ಯಂತ, ಶಕುಂತಲೆಯರ ಉಲ್ಲೇಖಗಳೂ ಕಥಾಮುಕ್ತಾಯದಲ್ಲಿ ಶಕುಂತಲೆಯ ವೇಷ ಹಾಕುವ ಚಂದ್ರವದನೆ ತನ್ನ ಮಗನನ್ನೇ ಎಳೆಯ ಭರತನನ್ನಾಗಿಸಿಕೊಂಡು ಮಾತೃತ್ವದ ಪ್ರತೀಕವಾಗಿ ರಂಗದ ಮೇಲೆ ಕಾಣಿಸಿಕೊಳ್ಳುವದೂ ಆಕಸ್ಮಿಕಗಳಲ್ಲ. ಗಂಡು ಹೆಣ್ಣಿನ ಸಂಬಂಧ ಅನಂತರದ ತಾಯ್ತನ ಈ ಎರಡು ಹಂತಗಳು ನಾಟಕದಲ್ಲಿ ಹೇಗೋ ಹಾಗೆ ನಾಟಕದ ಹೊರಗೂ ಅಭಿವ್ಯಕ್ತವಾಗುತ್ತವೆ. ಕಥೆಯೊಳಗಿನ ಆಶಯವಾದ ತಾಯ್ತನವನ್ನು ಪಡೆಯುವದು ಅಲ್ಲಿನ ನಾಟಕದ ನಟಿಯರಲ್ಲೇ ಒಬ್ಬಳಾದ ಚಂದ್ರವದನೆಯೇ ಎಂಬುದು ಗಮನಾರ್ಹ ಸಂಗತಿಗಳಾಗಿವೆ. ಕಥೆಯ ವಿವರಗಳ ಹೆಣಿಗೆಯಲ್ಲಿನ ಒಳಸಂಬಂಧಗಳಲ್ಲಿ ಇರುವ ಈ ಮುಂದುವರಿಕೆಯ ಅಂಶದ ಸಮಾನಗುಣ ಮಹತ್ವದ್ದಾಗಿದೆ. ಅವಳು ತಾಯಿಯಾಗಿ ನಾಟಕಕ್ಕೆ ಹಿಂದಿರುಗುವವರೆಗೂ ಅವಳ ನಾಟಕಾಭಿನಯ,

ಚೆಲುವುಗಳ ವರ್ಣನೆಗಳು ಹಿಂದಾಗುತ್ತವೆ ಎಂಬುದನ್ನೂ ಇಲ್ಲಿ ನೆನೆಯಬಹುದು.

ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಅಂಶಗಳು

ಚಂದ್ರವದನೆಯ ಗೆಲುವು ಅವಳ ದೃಷ್ಟಿಯಿಂದ ಒಂದು ವೈಯಕ್ತಿಕ ಸಾಧನೆ. ನಟುವ ವೃತ್ತಿಯ ಸುಂದರಿಯಾದ ಯುವತಿಯೊಬ್ಬಳು ಹಟದಿಂದ ತಾಯ್ತನದ ಪಟ್ಟವನ್ನು ದಕ್ಕಿಸಿಕೊಂಡ ಗೆಲುವಿನ ಕಥೆ. ಮೇಲ್ನೋಟಕ್ಕೆ ಇಷ್ಟೇ ಎಂದು ಕಾಣುವ ಈ ಸರಳ ಕಥನ ವಾಸ್ತವದಲ್ಲಿ ಇತರ ಪದರುಗಳನ್ನು ತನ್ನ ಮಡಿಲಲ್ಲಿ ಅಡಗಿಸಿಕೊಂಡಿದೆ.

ಕೌಟುಂಬಿಕ ಪ್ರಕ್ರಿಯೆಗಳು ಹಲವು ಕುತೂಹಲಕರ ಅಂಶಗಳನ್ನು ಒಳಗೊಂಡಿವೆ. ಚಂದ್ರವದನೆಯ ಚಿಕ್ಕಪ್ಪನೋ ಸೋದರಮಾವನೋ* ಆದ ಸಿರಿವರದ ಸೂರಪ್ಪ ಒಬ್ಬ ಪಕ್ಕಾ ಅವಕಾಶವಾದಿ. ತನಗಿದ್ದ ಸಂಗೀತದ ಬಂಡವಾಳ ಮತ್ತು ತಾನು ಸಾಕಿದ ಇಬ್ಬರು ಹುಡುಗಿಯರ–ಚಂದ್ರವದನೆಯ ಮತ್ತು ಅವಳ ಅಕ್ಕನ–ತರಪೇತಿಗಳಿಂದ ಬರಬಹುದಾದ ಲಾಭದ ಕಡೆಗೆ ಇವನ ಗಮನ. ನಾಟಕವೆಂದರೆ ಸೂರಪ್ಪನಿಗೆ ಕೇವಲ ಹಣದ ಮಾಧ್ಯಮ. ನಾಟಕ ಕಂಪನಿಯ ಆರ್ಥಿಕ ಆಯಾಮವನ್ನು ಅವನು ಪ್ರತಿನಿಧಿಸುವಂತಹವನು. ಚಂದ್ರವದನೆಗೆ ಹಣ ಬೇಡವೆಂದಿಲ್ಲ. ಜೊತೆಗೆ ವಯೋ ಸಹಜವಾದ ಕೀರ್ತಿಯ ಕಾಮನೆ. ಅಂತಹುದರಲ್ಲಿ ಅವಳು ಸೂರಪ್ಪನ ಮಾತಿಗೆ ಹೂಗುಟ್ಟುವದಿಲ್ಲ. ಚಂದ್ರವದನೆಗೆ ಮಗುವಾದ ಮೇಲೆ ಅವಳ ಸೌಂದರ್ಯ ಕಳೆಗುಂದಿ ಸಂಪಾದನೆಗೆ ಕಲ್ಲು ಬಿದ್ದೀತೆಂಬ ಭಯದಿಂದ ಅವಳ ತಾಯ್ತನಕ್ಕೆ ಸೂರಪ್ಪ ಸ್ಪಷ್ಟವಿರೋಧವನ್ನು ಸೂಚಿಸುತ್ತಾನೆ. ಚಂದ್ರವದನೆಯ ಅಕ್ಕನಿಗೆ ಚಂದ್ರವದನೆಯನ್ನು ಕಂಡು ಅಸೂಯೆ. ಜೊತೆಗೆ ಒಂದು ಕಾಲದಲ್ಲಿ ಅಕ್ಕನದಾಗಿದ್ದ ಚೆಲವು ಈಗ ಅವಳ ಕೈಜಾರಿದೆ. ಕಾರಣ ಅಕ್ಕ ಎರಡು ಮಕ್ಕಳ ತಾಯಾಗಿ ಮೊದಲಿನ ಅಂಗಸೌಷ್ಠವದಿಂದ ವಂಚಿತಳಾಗಿರುವುದು, ಅಕ್ಕನ ಅಸಹನೆಗೆ ಇದು ಕಾರಣವಾಗಿರುವುದು ಅಕ್ಕತಂಗಿಯರ ಮಾತಿನಲ್ಲಿ ಇಣುಕಿದೆ. ತಂಗಿಯ ತಾಯ್ತನದಿಂದ ತನಗೊದಗಿದ ಗತಿಯೇ ತಂಗಿಗೂ ಕಾದಿದೆ, ಅನುಭವಿಸಲಿ ಎಂಬ ಕುಹಕವೂ ಇದೆ. ಸಹಕಾರ ಕೊಡುವಷ್ಟು ಅವಳ ಬುಡ ಭದ್ರವಿಲ್ಲ ಎಂಬ ಮಾತೂ ನಿಜ. ಚಂದ್ರವದನೆಯ ತಾಯ್ತನದ ಹಂಬಲ ಇದಾವುದನ್ನೂ ಪರಿಗಣಿಸದು. ನಟುವರ ಕುಟುಂಬ, ನಾಟಕ ಕಂಪನಿಯ ಕಲಾವಿದೆಯ ಪಾಲಿಗಿರುವ ಅಭದ್ರ ಬಾಳು–ಇವುಗಳ ಹಿನ್ನಲೆಯಲ್ಲಿ ಈ ತುಯ್ತ ಇನ್ನಷ್ಟು ತೀವ್ರವೂ ಅದಮ್ಯವೂ ಆಗುತ್ತದೆ. ಗೃಹಿಣಿಯಾಗುವ ಅವಕಾಶ, ಆ ಮೂಲಕ ತಾಯ್ತನಕ್ಕೆ ಇರುವ ಅಧಿಕೃತ ಮುದ್ರೆಯ ಮನ್ನಣೆ ಇವಳ ಪಾಲಿಗೆ ಬರುವ ಯಾವ ಸಾಧ್ಯತೆಯೂ ಇಲ್ಲ. ಈ ಪರಿಸ್ಥಿತಿಯಲ್ಲಿ ಕೈಗೆ ಬಂದ ತುತ್ತು ಬಾಯಿಗೆ ಬರದೇ ಹೋದೀತೆಂಬ ಭಯ ಅವಳನ್ನು ಕಾಡಿಸಿದ್ದರೆ ಅಚ್ಚರಿಯಿಲ್ಲ. ಮಾನಸಿಕವಾಗಿ ಅವಳು ತನ್ನ ಸುತ್ತ ಇದ್ದ ಜನರಿಂದ ಭಿನ್ನ. ದೈಹಿಕವಾಗಿ ಕೂಡ ಅವಳ ಪ್ರಕೃತಿ ಬೇರೆಯೇ ಎಂಬುದು ಹೆತ್ತನಂತರ ತನ್ನ ತಾಯಿ, ಅಕ್ಕಂದಿರಂತೆ ದಪ್ಪವಾಗದೆ ಮೊದಲಿನ ತೆಳುವು, ಚೆಲುವುಗಳನ್ನು ಉಳಿಸಿಕೊಂಡಿದ್ದರಲ್ಲಿ

*ಕಥೆಯಲ್ಲಿ ಮೊದಲಬಾರಿ ಸೂರಪ್ಪನ ವಿಷಯವನ್ನು ಹೇಳುವಾಗ 'ಚಿಕ್ಕಪ್ಪನೋ ಸೋದರಮಾವನೋ' ಎಂದಿದ್ದರೂ ಆನಂತರ ಮಾವ ಎಂದು ಮಾತ್ರ ಹೇಳಿದೆ.

ಕಾಣುತ್ತದೆ.

ನಿರೂಪಕನ ಕುಟುಂಬದಲ್ಲಿ ಆದರೋ ಈ ವಿರೋಧದ ಪ್ರತಿಕ್ರಿಯೆಗೆ ತದ್ವಿರುದ್ಧವಾದ ಸ್ಥಿತಿಯಿದೆ. ನಿರೂಪಕನ ಅತ್ತೆ ಮಾವ ಇಬ್ಬರೂ ಚಂದ್ರವದನೆಯ ಸಹಾಯಕ್ಕೆ ಮುಂದಾಗುತ್ತಾರೆ. ಕಥಾನಾಯಕಿಗೆ ಸಹಾಯ ಒದಗುವುದು ಹೊರಗಿನಿಂದ ಎಂಬುದು ಮಾತ್ರವಲ್ಲ, ಅದು ನಿರೂಪಕನ ವಲಯದಿಂದ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ನಟುವ ವೃತ್ತಿಯ ಹೆಣ್ಣಿನ ತಾಯ್ತನದ ಆಸೆಗೆ ಒತ್ತಾಸೆ ಸಿಗುವುದು ಗೌರವಸ್ಥ ಕುಟುಂಬದ ವ್ಯಕ್ತಿಗಳಿಂದ ಎಂಬುದು ಸಹ ಪರಿಗಣಿಸಬೇಕಾದ ಅಂಶವಾಗಿದೆ.

ಈ ಹೊತ್ತಿನಲ್ಲಿ ಕೌಟುಂಬಿಕ ಮರ್ಯಾದೆಯನ್ನು ಕಾಪಾಡುವ ಒಂದು ಆಶಯವನ್ನು ನಿರೂಪಕನ ಪಾತ್ರ ತಾನಾಗಿ ವಹಿಸಿಕೊಳ್ಳುತ್ತದೆ. ಒಂದು ಕಾಲದಲ್ಲಿ ತನಗೆ ಆಶ್ರಯ ನೀಡಿದ ತನ್ನ ಮಾವನವರ ಹೆಸರು ಕೆಡಬಹುದೆಂಬ ಭಯ ನಿರೂಪಕನನ್ನು ಬಾಧಿಸುತ್ತಿರುವುದು ಸ್ಪಷ್ಟ ನಿರೂಪಕ ಆ ಸಂಗತಿಯನ್ನು ಬಾಯಿಬಿಟ್ಟೇ ಹೇಳುತ್ತಾನೆ. ಆದ್ದರಿಂದ ಚಂದ್ರವದನೆಗೆ ಸಹಾಯಹಸ್ತ ನೀಡುವಾಗ ಮಾವನೊಂದಿಗೆ ಅತ್ತೆಯೂ ಇರುವಂತೆ ಯೋಚಿಸಲಾಗಿದೆ. ಮತ್ತು ಈ ಸಂಗತಿಯನ್ನು ನಿರೂಪಕ ಅವಧಾರಣೆಯೊಂದಿಗೆ ತಿಳಿಸುತ್ತಾನೆ. ಅಷ್ಟೇ ಅಲ್ಲ, ರಸಿಕನಾದ ತನ್ನ ಮಾವನವರು ಕಂಪನಿಗೆ ಭೆಟ್ಟಿ ಕೊಡುವಷ್ಟರಲ್ಲಿ ಚಂದ್ರವದನೆಗೆ ಐದು ತಿಂಗಳಾಗಿತ್ತೆಂಬ ಅಂಶವನ್ನು ತನ್ನ ಪತಿಯ ವಿಷಯವಾಗಿ ಸಂಶಯವಾಗಲೀ ಚಂದ್ರವದನೆಯ ವಿಷಯವಾಗಿ ಅಸೂಯೆಯಾಗಲೀ ತನ್ನ ಅತ್ತೆಯವರಿಗೆ ಇರಲಿಲ್ಲ ಎಂಬುದನ್ನೂ ನಿರೂಪಕ ಸ್ಪಷ್ಟಪಡಿಸುತ್ತಾನೆ. ಸಾಮಾಜಿಕ ಮರ್ಯಾದೆಯ ಈ ಉಪಾಧಿಯಿಂದ ಬಾಲ್ಯದಿಂದಲೂ ಚಂದ್ರವದನೆಯನ್ನು ಬಲ್ಲವನಾಗಿದ್ದ ನಿರೂಪಕ ಹಿಂದೊಮ್ಮೆ "ನಾನು ಸರ್ಪಿಣಿಸ್ತ್ರೀಯಾದರೇನು, ನನಗೆ ಮೋಕ್ಷವಿಲ್ಲವೇ" ಎಂದು ಚಂದ್ರವದನೆ ಖಾಸಗಿಸಭೆಯೊಂದರಲ್ಲಿ ಹಾಡಿದಾಗ ಅವಳಿಗಾಗಿ ಖೇದಗೊಂಡಿದ್ದವನು, ಅವಳ ಪ್ರತಿ ನಾಟಕಕ್ಕೂ ಹೋಗುವ ಕಲಾಭಿಮಾನಿಯಾಗಿದ್ದವನು, ಕಂಪನಿ ಮನೆಗೆ ಮಾವನವರ ಜೊತೆಯಲ್ಲಿ ಮಾತ್ರವಲ್ಲ, ಆಗಾಗ ಒಬ್ಬನೇ ಕೂಡ ಭೇಟಿ ಕೊಡುವವನು ಚಂದ್ರವದನೆ ನಿರೂಪಕನ ಅತ್ತೆಯನ್ನು ಹುಡುಕಿಕೊಂಡು ನಿರೂಪಕನಿದ್ದ ಮನೆಯ ಬಳಿ ಬಂದಾಗ ಮಾತ್ರ ಕಸಿವಿಸಿಗೊಳ್ಳುತ್ತಾನೆ. ತನಗೆ ಉಂಟಾದ ಕಿರಿಕಿರಿಯನ್ನು ಒಪ್ಪಿಕೊಳ್ಳುತ್ತಾನೆ.

ತನ್ನ ಕಷ್ಟ ಏನೆಂಬುದನ್ನು ಚಂದ್ರವದನಾ ನಿರೂಪಕನ ಅತ್ತೆಯ ಬಳಿ ಹೇಳಿಕೊಂಡಿದ್ದು (ಪು.೯.) ಹಾಗೂ ನಿರೂಪಕನ ಅತ್ತೆ, ಮಾವನ ನೆರವಿನಿಂದ ಅವಳು ಕಂಪನಿಯ ಪರಿಸರದಿಂದ ದೂರ ಹೋಗಿದ್ದು (ಪು. ೧೧-೧೨) ಈ ಎರಡು ಬಾರಿಯ ವಿವರಗಳನ್ನು ನಿರೂಪಕ ಕೊಡುವುದಿಲ್ಲ. ತನ್ನ ಗೈರುಹಾಜರಿ ಹಾಗೂ ಅನಾರೋಗ್ಯದ ಕಾರಣಗಳನ್ನು ಆತ ಇವಕ್ಕಾಗಿ ನೀಡಿದ್ದಾನೆ. ಚಂದ್ರವದನೆ ಹಾಗೂ ತನ್ನ ಅತ್ತೆ ಮಾವ ಇವರುಗಳ ಸಂಪರ್ಕದ ಸಂದರ್ಭದಲ್ಲಿ ನಿರೂಪಕ ಒಂದು ವಿಲಕ್ಷಣ ಸಂಕೋಚಕ್ಕೆ ಸಿಲುಕಿದ್ದಾನೆ. ನಿಜದಲ್ಲಿ ನಿರೂಪಕನ ಈ ಸಂಕೋಚ ಮಾಸ್ತಿಯವರ ಸಂಕೋಚ. ಆದರೆ ನಿರೂಪಕ ಗೆಳೆಯರ ಬಳಗದಲ್ಲಿದ್ದಾಗ ನಿಸ್ಸಂಕೋಚದ ಸಾಕಾರರೂಪವಾಗುತ್ತಾನೆ. ಚಂದ್ರವದನೆಯ ಬಗೆಗಿದ್ದ ತಮ್ಮ ಆಕರ್ಷಣೆಯನ್ನು ಸಮರ್ಥಿಸಿ

ಕೊಳ್ಳುವಾಗ ಆಗಲಿ, ಅಂಥ ಆಕರ್ಷಣೆಗೆ ತಾನು ಸಿಲುಕಿಲ್ಲ ಎಂದು ನಟಿಸುವ ಮಾಧವರಾಯನನ್ನು ಗೇಲಿ ಮಾಡುವಾಗ ಆಗಲಿ ನಿರೂಪಕ ನಿರ್ಭಿಡೆಯ ಪ್ರತಿನಿಧಿಯೇ ಆಗಿದ್ದಾನೆ. ಆದರೆ ನಾಟಕ ನೋಡುವಾಗ ಪೂರ್ವಪರಿಚಯದಿಂದ ಚಂದ್ರವದನೆ ನಿರೂಪಕನನ್ನು ನೋಡಿದರೂ ತನಗೆ ಅವಳಲ್ಲಿ ಯಾವ ಕೆಟ್ಟ ಭಾವನೆಯೂ ಮನಸ್ಸಿನಲ್ಲಿ ಹುಟ್ಟಿದ್ದು ನೆನಪಿಲ್ಲ ಎಂದು ಹೇಳಲು ಮರೆಯುವುದಿಲ್ಲ.

ಕಥೆಯ ಅವಿಭಾಜ್ಯ ಅಂಗವಾಗಿರುವ ಸಾಮಾಜಿಕ ಪ್ರಕ್ರಿಯೆಗಳಾದರೂ ಇಷ್ಟೇ ಜೀವಂತವಾಗಿವೆ. ಕಾಲೇಜಿನ ವಾತಾವರಣದಲ್ಲಿ ಹದಿಹರೆಯದ ಕನಸಿಗರ ಜೀವನ ಹರಡಿಕೊಳ್ಳುತ್ತದೆ. ಪ್ರಣಯಪ್ರಪಂಚದ ಅನುಭವಿಗಳು, ಮದುವೆ ಆಗಲಿರುವವರು– ಇವರುಗಳೊಡನೆ ಈ ಜನರ ಮಾತು, ಚೇಷ್ಟೆಗಳನ್ನು ಗಮನಿಸುವ ವಯೋಮಾನದಲ್ಲಿ ಸ್ವಲ್ಪ ಕಿರಿಯರಾದವರೂ ಇದ್ದಾರೆ. ಇವರುಗಳ ಅನುಭವಗಳು ಪ್ರತಿಕ್ರಿಯೆಗಳು ವಿಭಿನ್ನ ಸ್ವರೂಪದವು. ನಾಟಕ ನೋಡುವಂಥದು ತನ್ನಂತಹ ಯೋಗ್ಯನಿಗೆ ಸಲ್ಲ ಎಂಬ ಮನೋಭಾವದ ಮಾಧವರಾಯನಂಥವರೂ ನಾಟಕಗಳಿಗೆ ತಪ್ಪದೆ ಬರುತ್ತಿರುವದನ್ನು ಹೇಳುವುದರ ಮೂಲಕ ನಾಟಕಗಳ ಸೆಳೆತವನ್ನು ಸೂಚಿಸಲಾಗಿದೆ. ವರದಾಚಾರ್ಯರ ಪ್ರಸ್ತಾಪವೂ ಈ ಮಾತಿಗೆ ಪುಷ್ಟಿಯನ್ನು ಒದಗಿಸುತ್ತದೆ. ಕತೆ ನಡೆಯುವ ಕಾಲ ನಾಟಕ ಕಂಪನಿಗಳು ಉಚ್ಛ್ರಾಯಸ್ಥಿತಿಯಲ್ಲಿ ಇದ್ದಾಗಿನದು. ಚಲನಚಿತ್ರಗಳ ದಾಳಿ ಪ್ರಾರಂಭವಾಗುವ ಮೊದಲಿನದು. ಕಥೆ ಹೇಳುವ ಕಾಲ ಚಲನಚಿತ್ರಗಳು ಮೆರೆಯುತ್ತಿದ್ದಾಗಿನದು.

ಚಂದ್ರನದನೆಯ ತಾಯ್ತನಕ್ಕೆ ಕಾರಣ ಯಾರು ಎಂಬ ಪ್ರಶ್ನೆಯನ್ನು ಮಾಸ್ತಿಯವರು ಎತ್ತುವದಿಲ್ಲ. ನಾಟಕ ಕಂಪನಿ ಪ್ರಾರಂಭವಾದಾಗ ಈ ಕಲಾವಿದೆಯ ಕುಟುಂಬಕ್ಕೆ ಆಧಾರವಾಗಿ ನಿಂತ ಮಯಿಲೂರು ಸಾಹುಕಾರನೊಬ್ಬನ ಪ್ರಸ್ತಾಪವಿದೆ. ಆದರೆ ಎಲ್ಲೂ ಚಂದ್ರವದನೆಯೊಡನೆ ಆ ಸಾಹುಕಾರನ ಅಥವಾ ಬೇರೆ ಯಾರೇ ಗಂಡಸಿನ ಸಂಬಂಧ ಸೂಚಿತವಾಗಿಲ್ಲ. ಅವಳು ತನ್ನ ಮಗುವನ್ನು ಉಳಿಸಿಕೊಳ್ಳಲು ಹೋರಾಡುವಾಗಲೂ ತಾಯ್ತನಕ್ಕೆ ಕಾರಣನಾದವನ ಪ್ರಸ್ತಾಪ ಬರುವುದಿಲ್ಲ. ಅವಳ ನಟುವ ಕುಲ ಹಾಗೂ ಹಲವರ ಸಂಪರ್ಕ ಬರಬಹುದಾದ ಕಂಪನಿಯ ವಾತಾವರಣದಿಂದ ಈ ಪ್ರಶ್ನೆ ಅನಗತ್ಯವಾಗಿರಬಹುದು. ಆ ವೇಳೆಗೆ ವೇಶ್ಯಾವೃತ್ತಿ ಬೇಸರವನ್ನುಂಟು ಮಾಡಿರಬಹುದು ಎಂದು ಕಥಾ ಪ್ರಾರಂಭದಲ್ಲಿ ಒಂದು ಕಡೆ ಹೇಳಿದೆ. ಚಂದ್ರವದನೆಯ ದಿಟ್ಟತನ, ಜಾಣತನಗಳನ್ನು ಮಾಸ್ತಿಯವರು ಗುರುತಿಸಿದ್ದಾರೆ ಎಂಬುದು ಈ ಸಂದರ್ಭದಲ್ಲಿ ಬದುಕು ಮುಖ್ಯ ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಕಾನೂನು ನ್ಯಾಯಪರರಿಗೆ ಸಹಾಯ ಮಾಡಿದಾಗ ಬದುಕಿನ ಹಾದಿ ಸುಗಮ ಎಂಬುದನ್ನು ನಿರೂಪಕನ ಮಾವ ಲಾಯರಾಗಿದ್ದವರು ಕಾನೂನಿನ ಮೂಲಕವೇ ಚಂದ್ರವದನೆಗೆ ಧೈರ್ಯ ತುಂಬುವ ಮೂಲಕ ಕಾಣಿಸಿದೆ.

ನಿರೂಪಕನ ಮಹತ್ವ

ನಿರೂಪಕನ ಮಹತ್ವವನ್ನು ಕುರಿತು ಹಲವು ಸಂಗತಿಗಳನ್ನು ಗಮನಿಸಬಹುದಾಗಿದೆ. ಭಾರತೀಯ ಕಥನ ಸಾಹಿತ್ಯದಲ್ಲಿ ನಿರೂಪಕನ ಸ್ಥಾನ ಎದ್ದು ಕಾಣುವಷ್ಟು ಸ್ಫುಟವಾಗಿದೆ. ಮಹಾಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆಗಳಲ್ಲಿ ನಿರೂಪಕನ ಅಸ್ತಿತ್ವವನ್ನು ಕಾಣಬಹುದು.

ಜಾನಪದದಲ್ಲಿಯೂ ಈತ ಕಾಣಿಸಿಕೊಳ್ಳುತ್ತಾನೆ ಕಥೆ, ಓದುಗ / ಕೇಳುಗ, ನಿರೂಪಕ ಈ ತ್ರಿಕೋನ ರಚನೆಯಲ್ಲಿ ಕೊಂಡಿಯ ಕೆಲಸವನ್ನು ನಿರೂಪಕ ನಿರ್ವಹಿಸುತ್ತಾನೆ.

'ಚಂದ್ರವದನಾ'ದ ನಿರೂಪಕ ಸ್ವಲ್ಪ ವಯಸ್ಸಾದ ಮನುಷ್ಯ. ಲೋಕಾನುಭವದ ಬಲವನ್ನು ಪಡೆದಿರುವವನು. ಚಿಕ್ಕವರೊಂದಿಗೆ ಬೆರೆಯಬಲ್ಲವನು, ಹಾಸ್ಯಪ್ರವೃತ್ತಿ ಇರುವವನು. ಭೂತಕಾಲದ ನೆನಪುಗಳಲ್ಲಿ ಸಂತೋಷ, ಆದರಗಳನ್ನು ಇಟ್ಟುಕೊಂಡವನು. ಆದರೆ ವರ್ತಮಾನದಲ್ಲಿ ಔದಾಸೀನ್ಯವಿಲ್ಲ ಎಂಬುದು ಆತನ ಬಗೆಗೆ ಗೌರವವನ್ನು ಉಕ್ಕಿಸುತ್ತದೆ. ಜೊತೆಗೆ ನಿರೂಪಕ ಇಲ್ಲಿ ಒಂದು ಪಾತ್ರವೂ ಆಗಿದ್ದಾನೆ. ಈತ ವ್ಯಕ್ತಿ ಮಾಸ್ತಿಯವರು ಮೆಚ್ಚುವ ವಿವೇಕ, ಪ್ರತ್ಯೇಕಗಳ ಪ್ರತಿನಿಧಿ. ಈತನ ಪಾತ್ರ ಆಕಸ್ಮಿಕವಾದುದಲ್ಲ ಚಂದ್ರವದನೆಯ ಬಾಳಿನಲ್ಲಿ ನಡೆಯುವ ಘಟನೆಗಳು ದಾಖಲಾಗುವುದು ನಿರೂಪಕನ ಮೂಲಕ. ಆ ಘಟನೆಗಳಲ್ಲಿ ಕೆಲವಕ್ಕೆ ಈತ ಸಾಕ್ಷಿ, ಕೆಲವೆಡೆಗಳಲ್ಲಿ ಗೈರುಹಾಜರಿಯಾಗಿದ್ದಾನೆ. ಅಂಥ ಕಡೆಗಳಲ್ಲಿ ಬೇರೆ ಯಾರಾದರೂ ಪ್ರತ್ಯಕ್ಷ ದರ್ಶಿಗಳಿಂದ ತಿಳಿದು ಬಂದ ವಿದ್ಯಮಾನಗಳನ್ನು ಹೇಳುತ್ತಾನೆ. ಅಲ್ಲಲ್ಲ ನಿರೂಪಕ ಒಬ್ಬ ವರದಿಗಾರನಾಗುತ್ತಾನೆ. ಕಥೆ ಬೆಳೆಯುತ್ತಾ ತಾಳುವ ಆಕಾರಕ್ಕೂ ಅದರ ಒಳಗಿನ ಸಂದೇಶಕ್ಕೂ ಕಥೆಯ ಮುಕ್ತಾಯಕ್ಕೂ ನಿರೂಪಕನ ವಿವಿಧ ಪಾತ್ರತ್ವ ತೋರುಬೆರಳಂತೆ ಕೆಲಸಮಾಡುತ್ತದೆ. ಕೆಲವು ಘಟನೆಗಳನ್ನು ನಿರೂಪಕ ವಿವರವಾಗಿ ತಿಳಿಸಿಕೊಡುತ್ತಾನೆ. ಕೆಲವನ್ನು ಸೂಚಿಸಿ ಕೈಬಿಡುತ್ತಾನೆ. ನಿರೂಪಕ ಹೇಳುವ ಅನೇಕ ಸಂಗತಿಗಳು ನಿರೀಕ್ಷಿತ ಪ್ರಶ್ನೆಗಳಿಗೆ ಸಂಭವನೀಯ ಉತ್ತರಗಳಾಗಿರುತ್ತವೆ ಎಂಬುದು ಒಂದು ಗಮನಾರ್ಹ ಅಂಶ. ನಿರೂಪಕ ಕಥೆಯೊಳಗಿನ ಪಾತ್ರವಾಗಿದ್ದಾಗ ಆ ಪರಿಸರದಲ್ಲಿ ಪೂರ್ಣ ತೊಡಗಿಕೊಳ್ಳುತ್ತಾನೆ ಮತ್ತು ಕಥೆಯ ಇತರ ಪಾತ್ರಗಳನ್ನು ಗಮನಿಸುತ್ತಾನೆ. ಕೇವಲ ನಿರೂಪಕನಾಗಿದ್ದಾಗ ಹೆಚ್ಚು ಮುಕ್ತನಾಗಿರುತ್ತಾನೆ, ಜೊತೆಗೆ ಕತೆ ಕೇಳುತ್ತಿರುವವರನ್ನು ಅಥವಾ ಓದುತ್ತಿರುವವರನ್ನು ಗಮನಿಸುತ್ತಾನೆ.

ಇನ್ನೊಂದು ಕುತೂಹಲಕರ ಅಂಶವೆಂದರೆ ಕಥೆ ನಡೆಯುವ ಕಾಲಕ್ಕೆ ನಿರೂಪಕ ವಿದ್ಯಾರ್ಥಿ ಅವಿವಾಹಿತ ಜೀವನದ ಸೂತ್ರಗಳಲ್ಲಿ ಒಂದಾರ ಕಾಮ ಅವನ ಕೈವಶವಾಗಿಲ್ಲ. ಆದರೆ ಆತ ಕುತೂಹಲವುಳ್ಳವನಾಗಿದ್ದಾನೆ, ಅದರಿಂದ ಆಕರ್ಷಿತನಾಗಿದ್ದಾನೆ. ಕಥೆ ಹೇಳುವ ಕಾಲಕ್ಕೆ ಆತ ಹಿರಿಯ, ಸಂಸಾರದಲ್ಲಿ ಪಳಗಿದವನು. ಕಾಮದ ಮುಂದಿನ ಮೆಟ್ಟಲಲ್ಲಿ ಆಸಕ್ತನಾದವನು. ನಿರೂಪಕನ ಈ ಎರಡು ನೆಲೆಗಳೂ–ಭೂತ ಮತ್ತು ವರ್ತಮಾನದವು–ಎಲ್ಲೂ ಸಿಕ್ಕಾಗದೆ, ಗೊಂದಲಗೊಳ್ಳದೆ ಇರುವದು ಮಾಸ್ತಿಯವರ ನಿರೂಪಣೆಯ ಖಚಿತತೆಗೆ ಸಾಕ್ಷಿಯಾಗಿದೆ.

ನಿರೂಪಕನಿಗೆ ಚಂದ್ರವದನೆಯಲ್ಲಿ ಈಗ ಇರುವ ಕನಿಕರ, ಕಥೆ ನಡೆಯುವ ಕಾಲಕ್ಕೆ ಚಂದ್ರವದನೆಗೆ ಸಹಾಯ ನೀಡಿದ ನಿರೂಪಕನ ಮಾವನಿಗೆ ಇದೆ. ನಿರೂಪಕನ ಈಗಿನ ಪಕ್ವತೆ ಕಥೆಯ ಕಾಲದಲ್ಲಿ ಆತನ ಮಾವನಿಗಿದೆ. ಕಥೆ ಹೇಳುವ ಕಾಲದ ನಿರೂಪಕ ಮತ್ತು ಕಥೆ ನಡೆಯುವ ಕಾಲದ ಆತನ ಮಾವ ಸಮಾನ ಮನೋಭಾವಗಳನ್ನು ಹೊಂದಿರುವವರು. ಇವರುಗಳ ಈ ನಿರ್ದಿಷ್ಟ ಪ್ರತಿಕ್ರಿಯೆಯ ರೀತಿ ಒಂದೇ. ಆದರೆ ಕಾಲಮಾನ ಬೇರೆ.

ನಿರೂಪಕನ ಪಾತ್ರವನ್ನು ತೆಗೆದು ಕಥೆಯನ್ನು ತನ್ನಷ್ಟಕ್ಕೆ ಇರಿಸಿದ ಪಕ್ಷದಲ್ಲಿ ಕಥೆಯ

ಪ್ರಮುಖ ನೆಲೆಗಳೇ ಕಳಚಿಕೊಳ್ಳುತ್ತವೆ ಎಂಬುದು ಈತನ ಮಹತ್ವಕ್ಕೆ ನಿದರ್ಶನವಾಗಿದೆ. ಆಧುನಿಕ ಕನ್ನಡದ ಸಣ್ಣಕತೆಗಳಲ್ಲಿ ನಿರೂಪಕನಿಗೆ ಇಂಥ ಪರಿಗಣನೆಗೆ ಅರ್ಹವಾದ ಸ್ಥಾನ ನೀಡಿದವರು ಮಾಸ್ತಿಯವರಲ್ಲದೆ ಬೇರೆ ಯಾರಾದರೂ ಇದ್ದರೆ ನನಗೆ ತಿಳಿಯದು.

ಮಾಸ್ತಿಯವರ ಮನೋಧರ್ಮ

ಮದುವೆಯ ಕಟ್ಟುಪಾಡಿನ ಹೊರಗೆ ಜನಿಸುವ ಮಗು ಸಾಮಾಜಿಕ ಮನ್ನಣೆಯಿಂದ ವಂಚಿತವಾಗಬಹುದಾದರೂ ಈ ಮಗುವಿನಿಂದ ತಾಯಿಯ ಸಮಸ್ಯೆಗಳು ಬೆಳೆಯುವ ಸಾಧ್ಯತೆ ಇರುವುದಾದರೂ ಮಾಸ್ತಿಯವರು ಈ ಮಗುವನ್ನು ಬದುಕುವ ಅವಕಾಶದಿಂದ ವಂಚಿಸುವುದಿಲ್ಲ. ಇದಕ್ಕೆ ಕಾರಣ ಮಾಸ್ತಿಯವರಿಗೆ ಇರುವ ತಾಯ್ತನವನ್ನು ಕುರಿತ ಅಸೀಮ ಗೌರವ ಎಂದೇ ಬೋಧೆಯಾಗುತ್ತದೆ. ಅಂದರೆ ಮದುವೆಯಂತಹ ಮನ್ನಣೆ ಪಡೆದ ಪದ್ಧತಿಯ ಬಗ್ಗೆ ಅತೀವ ಗೌರವವಿದ್ದ ಮಾಸ್ತಿಯವರು ಅದರಿಂದ ಹೊರಗುಳಿದ ಹೆಣ್ಣಿಗೂ ತಾಯ್ತನದ ಪದವಿಯನ್ನು ನಿರಾಕರಿಸುವುದಿಲ್ಲ. ಒಂದು ಸಂಪ್ರದಾಯದ ಬಗ್ಗೆ ಗೌರವ ಇದ್ದೂ ಆ ಸಂಪ್ರದಾಯದ ಒಳಗಿನ ಟೊಳ್ಳು ಗೊಂದಲಗಳನ್ನು ಗಮನಿಸಿ ಮಾಸ್ತಿಯವರು ಜೀವಪರವಾಗಿ ಸ್ಪಂದಿಸುತ್ತಾರೆ. ಎಂಬದು ಮಹತ್ವದ ಸಂಗತಿಯಾಗಿದೆ. ಈ ಮನೋಭಾವಕ್ಕೆ ಪೂರಕವಾಗಿ ಭ್ರೂಣಹತ್ಯೆಗೆ ಹೇಸದವರ ನಡುವೆ ಅವಳ ತಾಯ್ತನದ ಬಗ್ಗೆ ಪ್ರಶಂಸೆಯ ಮಾತು ಕತೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಚಂದ್ರವದನೆಯ ಹಕ್ಕು, ಆಸೆಗಳನ್ನು ಕುರಿತು ಮಾಸ್ತಿಯವರಿಗೆ ಅರಿವಿದೆ, ಗೌರವವಿದೆ. ಅಷ್ಟನ್ನು ಮಾತ್ರ ಅವರು ಗಮನಿಸುತ್ತಾರೆ. ಸಮಸ್ಯೆಯ ಮಿಕ್ಕ ಮುಖಗಳ ಕಡೆಗೆ ಅವರ ಗಮನವಿಲ್ಲ. ಸೂರಪ್ಪನಂಥವರು ಬದುಕಿನಲ್ಲಿಯೂ ಇರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ, ಅಂಥವರ ಅಸ್ತಿತ್ವವನ್ನು ಗುರುತಿಸಿಯೂ ಮಾಸ್ತಿಯವರು ಆಕ್ರೋಶಗೊಳ್ಳುವುದಿಲ್ಲ. ಹೂಗಳ ಜೊತೆ ಎಲೆ, ಮುಳ್ಳುಗಳು ಇರುವಂತೆ ಚಂದ್ರವದನೆಯ ಜೊತೆ ಅವಳ ಅಕ್ಕ, ಮಾವ ಇದ್ದಾರೆ. ಸೂರಪ್ಪನ ವಿಚಾರವಾಗಿ ಮಾಸ್ತಿಯವರು ತಿರಸ್ಕಾರವನ್ನು ಸೂಚಿಸುವುದಿಲ್ಲ. ಸೂರಪ್ಪ ಪ್ರತಿನಿಧಿಸುವ ಆರ್ಥಿಕ ಆಯಾಮ ಕಡೆಗಣಿಸುವಂಥದ್ದಲ್ಲ ಎಂಬ ಅರಿವೂ ಅಲ್ಲಿ ಕೆಲಸ ಮಾಡಿರುವದು ಸಾಧ್ಯ. ಚಂದ್ರವದನೆಯ ಮನಸ್ಸಿನ ಭಾವನೆಗ ಬೆಲೆ ಕೊಡದೆ ಇದ್ದುದು ಮಾತ್ರ ಸೂರಪ್ಪನ ತಪ್ಪು.

ಚಂದ್ರವದನೆಯ ಸಂದರ್ಭದಲ್ಲಿ ಅವಳಿಗೆ ಒಬ್ಬ ಆದರ್ಶಯುವಕನೊಂದಿಗೆ ಮದುವೆ ಮಾಡಿಸಬಹುದಿತ್ತು. ಅವಳ ಆತ್ಮಹತ್ಯೆಯನ್ನು ಯೋಜಿಸಿ ಸೂರಪ್ಪನನ್ನು ಖಳನಾಯಕನನ್ನಾಗಿಸ ಬಹುದಿತ್ತು. ಮಾಸ್ತಿಯವರು ಈ ಯಾವ ರೀತಿಯ ಬಾಲಿಶತನಕ್ಕೂ ಎಡೆಗೊಡುವದಿಲ್ಲ. ಆದರ್ಶದ ಹುಮ್ಮಸ್ಸಿನಲ್ಲಿ ಅವರು ಭೋಳೆಯಾಗುವುದಿಲ್ಲ, ಸಾಂಪ್ರದಾಯಿಕ ನಿಲುವಿನಿಂದ ಅನಗತ್ಯ ಕಾಠಿಣ್ಯವನ್ನು ತೋರುವುದಿಲ್ಲ. ಅವರು ತಮ್ಮ ಗುರಿಯನ್ನು ಸದ್ದಿಲ್ಲದೆ ಸಾಧಿಸಿದ್ದಾರೆ. ಅಚ್ಚರಿಯ ಪ್ರಸಂಗಗಳು, ಕಾಕತಾಳೀಯ ಘಟನೆಗಳು, ಆಕಸ್ಮಿಕ ತಿರುವುಗಳು ಮೊದಲಾದ ಯಾವುದೇ ಚಮತ್ಕಾರಗಳು ಮಾಸ್ತಿಯವರನ್ನು ಆಕರ್ಷಿಸುವುದಿಲ್ಲ. ಕಥೆಯ ಮುಕ್ತಾಯಕ್ಕೆ ಸಂಬಂಧಿಸಿದಂತೆ ಅವರು ತಕ್ಕ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ.

ಉದ್ವೇಗವಿಲ್ಲದ ಆತಂಕವಿಲ್ಲದ ಸ್ವಸ್ಥಚಿತ್ತ ಈ ಕಥೆಯ ಹಿಂದೆ ಕೆಲಸ ಮಾಡಿದೆ. ಮಾಸ್ತಿಯವರು ಬದುಕನ್ನು ಪರಿಭಾವಿಸುವ ರೀತಿ ಇಡಿಯಾದದ್ದು. ಧೈರ್ಯ, ನಿರ್ಲಿಪ್ತತೆಗಳೊಂದಿಗೆ ಒಂದು ನಿಶ್ಚಿತದೂರವನ್ನು ಸಾಧಿಸಿಕೊಳ್ಳುವಂತದ್ದು. 'ಚಂದ್ರವದನಾ' ಕಥೆಯ ನಿರೂಪಣೆಯಲ್ಲಿ ಅವರು ತೋರಿರುವ ಸಂಯಮವಾದರೂ ಬದುಕನ್ನು ಅವರು ಅರ್ಥೈಸಿದ ರೀತಿಯಿಂದ ಮೂಡಿಬಂದದ್ದು. ಇಲ್ಲಿ ಸಮಾಜದ ಓರೆಕೋರೆಗಳನ್ನೂ ದುಷ್ಟತನವನ್ನೂ ಮಾಸ್ತಿ ಗುರುತಿಸುತ್ತಾರೆ. ಆ ಶಾಖದಿಂದ ತಪ್ಪಿಸಿಕೊಳ್ಳಬಹುದಾದ ಸಾತ್ವಿಕ ಉಪಾಯಗಳನ್ನು ಯೋಚಿಸುತ್ತಾರೆ. ಸಂಘರ್ಷಕ್ಕೆ ಶಕ್ತಿಯಿಲ್ಲದ ಇಲ್ಲಿನ ಪಾತ್ರ ಚಂದ್ರವದನೆಗೆ ಹುಸಿ ಹೊರೆಯನ್ನು ಅವರು ಹೇರಿಲ್ಲ ಅಥವಾ ಅವಳನ್ನು ನಿರ್ವಿಣ್ಣಳನ್ನಾಗಿಸಿಲ್ಲ. ಬದುಕು ಮುಖ್ಯ ಎಂಬ ಜೀವಪರ ನೆಲೆಯಲ್ಲಿ ಈ ಅಂಶವನ್ನು ಪರಿಭಾವಿಸಿದಾಗ ಮಾಸ್ತಿಯವರ ಶ್ರದ್ಧೆಯ ಆಳದಲ್ಲಿ ಇಹದ ಚಿಂತೆ ಗೌಣವಾಗಿಲ್ಲ ಎಂಬ ಸತ್ಯ ಗೋಚರಿಸುತ್ತದೆ. ಈ ಅಂಶವೇ ಮುಖ್ಯವಾಗಿ ಮಾಸ್ತಿಯವರನ್ನು ಕುರಿತಂತೆ ನಮ್ಮಲ್ಲಿನ ಗೌರವ, ಪ್ರೀತಿಗಳಿಗೆ ಕಾರಣವಾಗುತ್ತದೆ.

❑ ❑

ಗೌತಮಿ ಹೇಳಿದ ಕತೆ

(ಒಂದು ವಿಶ್ಲೇಷಣೆ)

• ಶ್ಯಾಮಸುಂದರ ಬಿದರಕುಂದಿ

ಸಣ್ಣಕತೆಯಂತಹ ಸಾಹಿತ್ಯಕ ಕೃತಿಯನ್ನು ಸಾರಾಂಶರೂಪದಲ್ಲಿ ಮರುನಿರೂಪಿಸುವದು ಕಠಿಣ ಮತ್ತು ಕಲೆಯ ದೃಷ್ಟಿಯಿಂದ ತಪ್ಪು. ಸಣ್ಣಕತೆಯ ಸತ್ತ್ವ–ಸೊಗಸು ಇರುವುದೇ ಅದರ ಸಾಂದ್ರತೆಯಲ್ಲಿ: ತನ್ನ ಏನೆಲ್ಲವನ್ನು ಸ್ವಲ್ಪದರಲ್ಲೆ ಅಡಕಗೊಳಿಸುವ ಸಾಮರ್ಥ್ಯದಲ್ಲಿ. ಕತೆಯ ವಿವರಗಳು, ಅಲ್ಲಿ ನಮೂದಾದ ವಾತಾವರಣದ ವರ್ಣನೆ, ಪಾತ್ರದ ಮಾತು–ಕತೆ–ಇವೆಲ್ಲವೂ ವಸ್ತುವಿನ ಅವಿಭಾಜ್ಯ ಅಂಗವಾಗಿ, ಹೆಚ್ಚುಸಲ ಕತೆಯ ಆಶಯವನ್ನು ಸೂಚ್ಯವಾಗಿ, ಸಾಂಕೇತಿಕವಾಗಿ ಹೇಳುವ ರೀತಿಯಲ್ಲಿ ಬರಹವನ್ನಾವರಿಸಿರುತ್ತವೆ. ಕತೆಯ ಈ ಇಂಗಿತವನ್ನು ಬದಿಗಿರಿಸಿ, ಕತೆಯ ವಸ್ತುವಿನ ಕುರಿತು, ಆ ನಂತರದ ವಿಶ್ಲೇಷಣೆಯ ಅನುಕೂಲಕ್ಕಾಗಿ ಅಂದರೆ–ಕತೆಯನ್ನು ಓದದೆ ಇದ್ದವರಿಗೆ ಕತೆ ಪರಿಚಿತವಾಗುವಂತೆ (ಹಾಗೂ ಅವರು ಇನ್ನಾದರೂ ಓದಬೇಕೆಂದು ಹಂಬಲಿಸಲು) ಅಥವಾ ಕತೆಯನ್ನು ಎಂದೋ ಓದಿದ್ದವರಿಗೆ ಅದರ ರೂಪರೇಷೆ ನೆನಪಾಗಲೆಂಬಂತೆ (ಕತೆಯನ್ನವರು ಮತ್ತೊಮ್ಮೆ ತೆಗೆದು ಓದುವಂತೆ ಮಾಡಲು)–ಮಾಸ್ತಿಯವರ 'ಗೌತಮಿ ಹೇಳಿದ ಕತೆ'ಯ ಸಾರಾಂಶ (ರಚನೆಯ ಕಾಲ: ೧೯೪೭)ವನ್ನು ಮೊದಲಿಗೆ ಹೇಳಿ, ವಿಶ್ಲೇಷಣೆಯ ಕೆಲಸಕ್ಕೆ ಆಮೇಲೆ ಅನುವಾಗುತ್ತೇನೆ.

ಅದು ವೈದಿಕ ಸಂಸ್ಕೃತಿಯ ಕಾಲ. ಋಷ್ಯಾಶ್ರಮದಲ್ಲಿ ಗುರು–ಶಿಷ್ಯರು ಕೂಡಿ ಅಧ್ಯಯನ, ಉಪಾಸನೆ, ತಪಶ್ಚರ್ಯೆಗಳನ್ನು ನಡೆಸುತ್ತಿದ್ದ ವಾತಾವರಣ. ವಿಶೇಷ ಪ್ರಯತ್ನವಿಲ್ಲದೆ, ಹೊರಗಿನ ಒತ್ತಡವಿಲ್ಲದೆ ತಾನೆ ತಾನಾಗಿ ಒಡಮೂಡಿದಂತಹ ವಾತಾವರಣ ಅದು. ಕಣ್ವ ಮಹರ್ಷಿಯ ಆಶ್ರಮ ಅಂತಹದು. ಇವರು ಕುಲಪತಿಯಾಗಿರುವ ಆಶ್ರಮದಲ್ಲಿ 'ಹಗರಣ'ವೆನ್ನುವಂತಹ ಒಂದೇ ಒಂದು ಪ್ರಕರಣ ಆಗಿ ಹೋಗಿತ್ತು. ಅದು, ಶಕುಂತಲೆ–ದುಷ್ಯಂತರ ಗಾಂಧರ್ವ ವಿವಾಹದ ಘಟನೆ. (ಆ ಕುರಿತು ಮಾಸ್ತಿಯವರ ದೃಷ್ಟಿ 'ಹೇಮಕೂಟದಿಂದ ಬಂದ ಮೇಲ' ಕತೆಯಲ್ಲಿ ಈ ಮೊದಲೆ ಮೂಡಿ ಬಂದಿದೆ). ಗಂಡನೊಂದಿಗೆ ಪುನರ್‌ಮಿಲನ ಹೊಂದಿ ಕುಲಪತಿಗಳಾದ ಸಾಕುತಂದೆ(ಕಣ್ವ) ಹಾಗೂ ಸಾಕುತಾಯಿ ಗೌತಮಿಯನ್ನು ಮಗನೊಟ್ಟಿಗೆ ನೋಡಲು ಶಕುಂತಲೆ ಋಷ್ಯಾಶ್ರಮಕ್ಕೆ ಬಂದಾಗ ಒಂದು ರಾತ್ರಿ, ತನಗೆ ಮಕ್ಕಳಂತಿರುವ ಶಕುಂತಲೆ, ಪ್ರಿಯವಂದೆ ಮತ್ತು ಅನುಸೂಯೆ– ಈ ಮೂವರು ಸಹಪಾಠಿಗಳನ್ನು ಕೂಡಿಸಿಕೊಂಡು ಅಜ್ಜಿ ಗೌತಮಿ ಹೇಳಿದ್ದೇ ಪ್ರಸ್ತುತ ಕತೆ.

ಮಾಲಿನಿ, ಹತ್ತವರಿಂದ ದೂರ ಉಳಿದ ಬಾಲಕಿ. ಚಿಕ್ಕಂದಿನಲ್ಲೇ ಈ ಋಷ್ಯಾಶ್ರಮದ ಆಶ್ರಯಪಡೆದ ಆಕೆ ಉಳಿದೆಲ್ಲ ಮಕ್ಕಳ ಜತೆ ಆಟಪಾಠದೊಂದಿಗೆ ಬೆಳೆದವಳು. ಇಬ್ಬರು

ಓರಗೆಯ ಬ್ರಹ್ಮಚಾರಿ(ವಟು)ಗಳಾದ ಭಾರದ್ವಾಜ ಮತ್ತು ದತ್ತಕಾಶ್ಯಪ ಆಕೆಗೆ ಸಹಪಾಠಿಗಳು, ಗೆಳೆಯರು. ಭಾರದ್ವಜ ಮಾಲಿನಿಗಿಂತ ತುಸು ಹಿರಿಯ; ದತ್ತ ಅವನಿಗಿಂತ ತುಸು ಕಿರಿಯನಾದರೂ ಮಾಲಿನಿಗೆ ಹಿರಿಯನೇ. ಈ ಮೂವರ ನಡುವೆ ಸ್ನಿಗ್ಧ ಮುಗ್ಧ ಸ್ನೇಹ. ಕಾಡಿನಲ್ಲಿ ಓಡಾಡುತ್ತ ನದಿಯಲ್ಲಿ ಈಜಾಡುತ್ತ ಇಬ್ಬರು ಗಂಡು ಹುಡುಗರೊಂದಿಗೆ ಗಂಡಿನಂತೆಯೆ ಒಡನಾಡಿದವಳು ಮಾಲಿನಿ.

ಮಾಲಿನಿಗೆ ಹರೆಯ ಪ್ರಾಪ್ತವಾದಾಗ ವಯೋಧರ್ಮಕ್ಕೆ ತಕ್ಕಂತೆ ಅವಳ ಮದುವೆಯ ಯೋಚನೆ ಆಶ್ರಮದ ಹಿರಿಯರಿಗೆ ಬಂದಿತು. ಮದುವೆಯ ಪ್ರಸ್ತಾಪ ಬಂದಾಗ 'ಭಾರದ್ವಾಜನೆ ತನಗೆ ಗಂಡನಾಗಬೇಕು' ಎಂದು ಮಾಲಿನಿ ಆಸೆ ವ್ಯಕ್ತಪಡಿಸಿದಳು. ಈ ಆಸೆಯನ್ನಾಕೆ ದತ್ತನಿಗೆ ಸೂಚಿಸಿದಳು. ಆ ಕ್ಷಣದಲ್ಲಿ ಅವನ 'ಮುಖದ ಮೇಲೆ ಎಲ್ಲಿಯೋ ಸ್ವಲ್ಪ ಅಸಮಾಧಾನದ ಒಂದು ಮೋಡ ಹಾಯ್ದಂತೆ ಹಾಯ್ದು ಮರೆಯಾಯಿತು.' ಆದರೂ ಆತ ಆಗಿನಿಂದ ಮಾಲಿನಿಯನ್ನು 'ಅತ್ತಿಗೆ' ಅಥವಾ 'ಅಕ್ಕ' ಎಂಬ ಭಾನೆಯಿಂದ ಕಾಣತೊಡಗಿದನು.

ಭಾವೀ ಸತಿ–ಪತಿ ಮಾಲಿನಿ–ಭಾರದ್ವಾಜರು ಕಾಡಿನ ಆ ರಮ್ಯ ವಾತಾವರಣದಲ್ಲಿ ಸ್ವಚ್ಛಂದ ವಿಹರಿಸುವರು; ಮೈಮರೆತು ಈಜಾಡುವರು; ಒಬ್ಬರೊಬ್ಬರ ಭಾವನೆಗಳಲ್ಲಿ ಮುಳುಗುವರು. ಅವರ ಏಕಾಂತಕ್ಕೆ ಭಂಗ ಬರದಂತೆ ದತ್ತ ಆಗ ದೂರವೇ ಇರುತ್ತಿದ್ದ. ಮಾಲಿನಿ–ಭಾರದ್ವಾಜರು ಪ್ರೇಮದ ಕನಸಿನ ಲೋಕದಲ್ಲಿ ವಿಹರಿಸಿದರೂ ವಿವಾಹಪೂರ್ವ ದೈಹಿಕ ಸಂಬಂಧ ಸಾಧಿಸಲಿಲ್ಲ: 'ದೇಹದ ಮೇರೆಯನ್ನು ಮೀರಿದ ಒಂದು ಸುಖದಲ್ಲಿ ಮುಳುಗುವರು'.

ಇವರ ಪ್ರಣಯಸಂಬಂಧ ಹೀಗಿರುವಾಗ ಒಮ್ಮೆ ತುಂಬಿ ಹರಿಯುವ ಮಾಲಿನೀ ನದಿಗೆ ಈಜುಬಿದ್ದ ಭಾರದ್ವಾಜ, ನೀರಿನ ಸೆಳವಿಗೆ ಸಿಕ್ಕು ಈಜಲಾರದೇ ಹೋದ; ಮರದ ತುಂಡೊಂದು ಪ್ರವಾಹದಗುಂಟ ಬಂದು ಅವನನ್ನು ಕೊಚ್ಚಿಕೊಂಡೊಯ್ದು ಮುಳುಗಿಸಿತು. ಭಾರದ್ವಾಜನನ್ನು ಕಳೆದುಕೊಂಡ ಮಾಲಿನಿ ಏಕಾಕಿಯಾದಳು. ದತ್ತನಿಗೆ ಅವಳ ಬಗ್ಗೆ ಕರುಣೆ, ಅನುಕಂಪ ಬೆಳೆಯಿತು ಹೊರತು, ಆಸೆ ಅಂಕುರಿಸಲಿಲ್ಲ ಭಾರದ್ವಾಜನ ಅಗಲಿಕೆಯ ನೋವು ತಾಳಲಾರದೆ ಒಮ್ಮೆ ನದಿಗೆ ಬಿದ್ದು ಸಾಯಲಿದ್ದ ಅವಳನ್ನು ದತ್ತನೆ ರಕ್ಷಿಸಿ ಬದುಕಲು ಧೈರ್ಯನೀಡಿದ.

ಹಾಗೆ ಬದುಕಿದ್ದರಿಂದ ಮಾಲಿನಿಗೆ ಸಮಾಧಾನ ಸಿಗಲಿಲ್ಲ. ಭಾರದ್ವಾಜನ ಅಗಲಿಕೆಯ ದುಃಖ–ನೋವು ಹೆಚ್ಚಿದಂತೆ ಬುದ್ಧಿಪೂರ್ವಕ ಸಹಿಸಿಕೊಂಡಳು. ಕ್ರಮೇಣ ಆ ರಮ್ಯ ಪ್ರಕೃತಿ, ಏರುತ್ತಿದ್ದ ಅವಳ ಹರೆಯ– ಅವಳ ಮನಸ್ಸನ್ನು ತೀವ್ರ ಚಂಚಲಗೊಳಿಸಿತು. ಪ್ರೀತಿ–ಪ್ರಣಯದ ಭಾವ ಅವಳನ್ನು ದತ್ತನ ಕಡೆಗೆ ಎಳೆಯಿತು. 'ನನ್ನನ್ನು ಮದುವೆಯಾಗು' ಎಂದು ಅವನಿಗೊಮ್ಮೆ ಕೇಳಿದಳು. ಅವನು ತನ್ನ ತಟಸ್ಥ ಭಾವ ಬದಲಿಸಲಿಲ್ಲ. 'ಅಕ್ಕ, ಅತ್ತಿಗೆ' ಎಂದುಕೊಂಡಿದ್ದವಳ ಜತೆ ಮದುವೆಯ ಸಂಬಂಧ ಅವನಿಗೆ ಸಾಧ್ಯವಿರಲಿಲ್ಲ. ಅವಳನ್ನು ಸಾವಿನಿಂದ ತಪ್ಪಿಸಿದ್ದು ತನ್ನ ಪ್ರಯತ್ನವೇ ಆಗಿದ್ದರೂ ಅದೆಲ್ಲ 'ದೈವಕೃತ' ಎಂಬುದು ಅವನ ತಿಳುವಳಿಕೆ.

ಒಮ್ಮೆ–ಅದೇ ಕೊನೆಯ ಸಲ–ಮಾಲಿನಿ ಭಾವೋನ್ಮತ್ತಳಾಗಿ ದತ್ತನನ್ನು ಏಕಾಂತವಲ್ಲಿ ಆಲಿಂಗಿಸಿ, ಅವನು ತನಗೆ ಗಂಡನಾಗಲೇಬೇಕೆಂದು ಆಗ್ರಹಿಸಿದಳು. ಅದು ಸಾಧ್ಯವಿರದಿದ್ದರೆ

"ಒಮ್ಮೆಯಾದರೂ ನನ್ನನ್ನು ತೆಗೆದುಕೋ, ನಿನ್ನನ್ನು ನನಗೆ ಕೊಡು'' ಎಂದಳು. ಇಲ್ಲವಾದರೆ ಸಾಯುವೆನೆಂದಳು. ಅವನು, ಹಿಂದೊಮ್ಮೆ ತನ್ನನ್ನು ಬದುಕಿಸಿದ್ದು "ಕೊಂದುದ್ದಕ್ಕೆ ಸಮ'' ಎಂದಳು. ಮಾಲಿನಿಯ ಈ ಕಾಮೋದ್ವೇಗಕ್ಕೆ ದತ್ತನ ಪ್ರತಿಕ್ರಿಯೆ ತಟಸ್ಥತೆಯೆ ಆಗಿತ್ತು. ಅವನು ಹೇಳಿದ್ದು ಹೀಗೆ : "ಬಾಳನ್ನು ನಡೆಸುವ ಸತ್ವ ಬೇರೆ ಒಂದಿದೆ: ಅಳಿಯುವುದು–ಉಳಿಸುವುದು ನಿನ್ನ–ನನ್ನ ಕೈಯಲಿಲ್ಲ.'' "ಕಿರಿಯನಾದ ತನಗೆ ಹಿರಿಯಳಾದ (ಅತ್ತಿಗೆಯಂತಿರುವ) ಮಾಲಿನಿ ದಾರಿ ತೋರಬೇಕು......''. ಅವನ ಧ್ವನಿಯಲ್ಲಿ ಕಳಕಳಿ ಇದ್ದಿತು. ಇಬ್ಬರೂ ಹಾದಿತಪ್ಪಕೂಡದೆಂಬ ಎಚ್ಚರವಿದ್ದಿತು. 'ತಾಳುವುದು, ಗೆಲ್ಲುವುದು'–ಎಂಬ ತತ್ವ ಅವನದು. ಅಂತೆಯೆ ಮಾಲಿನಿಯಲ್ಲಿ ಮೊರೆಯಿಟ್ಟು ದತ್ತನು ಹೇಳಿದನು: "ನೀನು ಹೆಣ್ಣು, ಆದಿಶಕ್ತಿ, ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ; ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಠ ಮಾಡಿದೆಯೋ–ನಾನು ಬಟ್ಟೆಗೆಟ್ಟೆ ನನ್ನ ಮೇಲೆ ಅನುಗ್ರಹಮಾಡು. ನನ್ನನ್ನು ಕಾಪಾಡು....''

ದತ್ತ ಕಾಶ್ಯಪನ ಅಂಗಲಾಚುವಿಕೆ ಮಾಲಿನಿಯನ್ನೂ ಆಸೆಯಿಂದ ಪರಾನ್ಮುಖಗೊಳಿಸಿತು. ಅವಳ ಕಣ್ಣಿಗೆ ದತ್ತ ಒಬ್ಬ ಬಾಲಕನಾಗಿ ಕಂಡ. "ತಾಯಿಯು ಮಗುವನ್ನು ಸಂತೈಸಲು ಹತ್ತಿರಕ್ಕೆ ಎಳೆಯುವಂತೆ ಅವನನ್ನು ಎಳೆದು ಅವನ ಕುರುಳಲ್ಲಿ ಬೆರಳಾಡಿಸಿ ಚೆನ್ನಸವರಿ ಮುಖಕ್ಕೆ ಮುತ್ತು ಕೊಟ್ಟಳು'' ಮಾಲಿನಿಗೆ ದತ್ತನ ಆ ದೃಢವಾದ ಮಾತು ಬಾಳಿನಲ್ಲಿ ಹೊಸ ದಾರಿ ತೋರಿಸಿತು.

ಮುಂದಿನ ಬಾಳಿನುದ್ದಕ್ಕೂ ಮಾಲಿನಿ ದತ್ತ ಹಾಗೂ ಇನ್ನೆಲ್ಲರಿಗೆ ತಾಯಿ ಅಥವಾ ಅಕ್ಕನಂತೆಯೆ ಬಾಳಿದಳು. ದತ್ತ ತಪಸ್ಸಿನಲ್ಲಿ ಸಾಧನೆ ಮಾಡಿದನು. ಇವರಿಬ್ಬರ ತ್ಯಾಗ, ಸಂಯಮ, ಆರ್ದ್ರತೆಗಳಿಂದ ಆಶ್ರಮ ಬೆಳೆಯಿತು. "ದತ್ತನ ಧೃತಿಯಿಂದಲೆ ಇಬ್ಬರೂ ಧರ್ಮದಲ್ಲಿ ನಿಂತರು.'' ದತ್ತನ ಪುಣ್ಯವಂತಿಕೆ ಮಾಲಿನಿಯ ಪುಣ್ಯವನ್ನು ಉಳಿಸಿತು; ಹೆಚ್ಚಿಸಿತು. ಈ ಮುಂದಿನ ತಲೆಮಾರಿನವರು ವೈವಾಹಿಕ ಸುಖ ಅನುಭವಿಸಲೂ ಸಾಧ್ಯವಾಗಿದೆ.

೨

ಮಾಸ್ತಿಯವರು 'ಹೇಮಕೂಟದಿಂದ ಬಂದಮೇಲೆ' ಕತೆಯಲ್ಲಿ ಹೆಣ್ಣು–ಗಂಡಿನ ಸಂಬಂಧದ ಸಹಜತೆಯ ಬಗ್ಗೆ ಸೂಚ್ಯವಾಗಿ ಎತ್ತಿದ ಅಂಶವನ್ನು ಪ್ರಸ್ತುತ ಕತೆಯಲ್ಲಿ ಹೆಚ್ಚು ಮೂರ್ತವಾಗಿ, ಪ್ರಖರವಾಗಿ ಮಂಡಿಸಿದ್ದಾರೆ. ಗೌತಮಿ (ಮಾಲಿನಿ) ಸ್ವತಃ ತನ್ನ ಕತೆಯನ್ನು ದಾಂಪತ್ಯದ ವಿಷಯದಲ್ಲಿ ತನಗಿಂತ ಭಿನ್ನವಾದ ಅನುಭವ ಪಡೆದ ಶಕುಂತಲೆಯ ಎದುರಿಗೆ ನಿರೂಪಿಸುವುದರ ಔಚಿತ್ಯ ಗಮನಾರ್ಹವಾಗಿದೆ. ಇಲ್ಲಿ ಮಾಲಿನಿ ಮತ್ತು ಶಕುಂತಲೆ ಬೇರೆಬೇರೆ ಕಾಲದಲ್ಲಿ ಮತ್ತು ವಿಭಿನ್ನ ಸಂದರ್ಭ(ಸನ್ನಿವೇಶ ಅಲ್ಲ)ದಲ್ಲಿ ಋಷ್ಯಾಶ್ರಮದ ಸಂಯಮ, ತಾಳ್ಮೆ, ಆದರ್ಶವನ್ನು ಉಲ್ಲಂಘಿಸಿ ಕಾಮವಿಕೃತಿಗೆ ಒಳಗಾದವರು. ಮಾಲಿನಿಯನ್ನು ವಿಕೃತಿಯಿಂದ ಉಳಿಸಲು ದತ್ತಕಾಶ್ಯಪನ ಪುಣ್ಯ ಪ್ರಭಾವ ಬೀರಿತು. ಆದರೆ ಶಕುಂತಲೆಯನ್ನು ಕಾಮ ವಿಕೃತಿ ತತ್ಕಾಲಕ್ಕೆ ಬಲಿತೆಗೆದುಕೊಂಡಿತು. ದುಷ್ಯಂತನಲ್ಲಿ ಇಲ್ಲದ ಸಂಯಮಕ್ಕೆ ಪ್ರತಿಯಾಗಿ, ದತ್ತಕಾಶ್ಯಪನಲ್ಲಿರುವ ಸಂಯಮದ ಸಿದ್ಧಿ–ಅದೇ ಪುಣ್ಯ–ಮುಂದೆ ಶಕುಂತಲೆಯನ್ನು ಉಳಿಸಿದ

ಎಂಬುದೆ ಮಾಸ್ತಿಯವರ ಇಂಗಿತ. ಒಬ್ಬಿಬ್ಬರ ನಿಸ್ವಾರ್ಥತೆ, ತ್ಯಾಗಮಯ ನಡವಳಿಕೆ–ಮುಂದಿನ ಅನೇಕರನ್ನು ಪಾಪದಿಂದ, ದೋಷದಿಂದ ಉಳಿಸಬಲ್ಲದು. ಸುಖ–ಸಂತೋಷಗಳು ದೇಹಕ್ಕೆ ಸೀಮಿತ ಎಂದು ತಿಳಿದಿದ್ದ ಶಕುಂತಲೆ–ದುಷ್ಯಂತರ ಜೋಡಿಗೂ ಅದು ಬೌದ್ಧಿಕ ಎಂದು ತೋರಿಸಿದ ಮಾಲಿನಿ–ದತ್ತಕಾಶ್ಯಪರ ಅನುಭವಕ್ಕೂ ಇರುವ ಅಂತರವನ್ನು ಮಾಸ್ತಿಯವರು ಗುರುತಿಸಲೆತ್ನಿಸಿದ್ದಾರೆ. ಹೆಣ್ಣು–ಗಂಡಿನ ಪ್ರೇಮದಲ್ಲಿಯ ಭೌತಿಕ ಆನಂದಕ್ಕೆ ಒಂದು ಸಂಹಿತೆ ನೈಸರ್ಗಿಕವಾಗಿಯೆ ಇದೆ. ಅದನ್ನು ಉಲ್ಲಂಘಿಸುವುದು ತಪ್ಪು. ಮುಂದಿನ ಎಲ್ಲ ಅನ್ಯಾಯಕ್ಕೂ ಅದು ಮೂಲ ಎಂಬ ತಿಳುವಳಿಕೆ ಮಾಸ್ತಿಯವರದು. 'ಒಂದು ಹೆಣ್ಣಿಗೆ ಒಂದು ಗಂಡು' ಇದು ನಿಶ್ಚಯವಾಗಿ ಪರಿಪಾಲಿಸಬೇಕಾದ ಮಾನಸಿಕ, ಅಂತೆಯೆ ದೈಹಿಕ ನೀತಿಸಂಹಿತೆ. ಇದನ್ನು ಹೆಣ್ಣೆ ಎಚ್ಚರದಿಂದ ಪಾಲಿಸಬೇಕು; ಶಕುಂತಲೆ–ದುಷ್ಯಂತರ ವಿಷಯದಲ್ಲಿ ಹೆಣ್ಣು–ಗಂಡು ಇಬ್ಬರೂ ಮೈಮರೆತದ್ದರಿಂದ ಇಬ್ಬರೂ ಮುಂದೆ ವಿಷಮತೆ ಎದುರಿಸಬೇಕಾಯಿತು.

ಹೀಗೆ 'ಹೇಮಕೂಟದಿಂದ ಬಂದಮೇಲೆ' ಕತೆಯಲ್ಲಿ ಸಂಪೂರ್ಣ ವ್ಯಕ್ತವಾಗದ ಹೆಣ್ಣು–ಗಂಡಿನ ವಿವಾಹ ಮತ್ತು ವಿವಾಹಬಾಹಿರ ಸಂಬಂಧದ ತೊಡಕು ಮತ್ತು ಪರಿಹಾರದ ಕೊನೆಯನ್ನು ಮಾಸ್ತಿಯವರು ಪ್ರಸ್ತುತ ಕತೆಯಲ್ಲಿ ಮಂಡಿಸಿದ್ದಾರೆ. ಆದರ್ಶ ಬರಿ ಹೇಳುವುದಕ್ಕಿಲ್ಲ; ಅನುಸರಿಸಿ ತೋರಿಸುವುದಕ್ಕಿದೆ. ಹಾಗೆ ತೋರಿಸಿದಾಗಲೆ ನೀತಿಸಂಹಿತೆಗೆ ನಿಜವಾದ ಬೆಲೆ. ದತ್ತ ಕಾಶ್ಯಪ ಮತ್ತು ಗೌತಮಿ (ಮಾಲಿನಿ) ತಮಗೆದುರಾದ ಕಾಮವಿಕೃತಿಯ ಸಮಸ್ಯೆಯಿಂದ ಪಲಾಯನ ಮಾಡದೆ, ಬೌದ್ಧಿಕವಾಗಿ ಪರಿಹರಿಸಿಕೊಳ್ಳುವುದು ಅವರು ಬದುಕಿದ್ದ ವಾತಾವರಣಕ್ಕೆ ಮಾದರಿ ಪಾಠವಾಗಿದೆ: ತಾನೂ ಬದುಕಬೇಕು, ಇನ್ನೊಬ್ಬರನ್ನೂ ಬದುಕಿಸಬೇಕೆಂಬ ವ್ಯಾವಹಾರಿಕ ಒಪ್ಪಂದವಿದು. ಈ ದೃಷ್ಟಿಯಿಂದ ಮಾಸ್ತಿಯವರ ನೀತಿದೃಷ್ಟಿಯ ಸಫಲ ಕಲಾಕೃತಿ 'ಗೌತಮಿ ಹೇಳಿದ ಕತೆ.'

೩

ಮಾಸ್ತಿಯವರ ಉಳಿದೆಲ್ಲ ನೈತಿಕ ಸಮಸ್ಯೆಗಳ ಕತೆಯ ತಂತ್ರದ ಹಾಗೆಯೆ ಇಲ್ಲಿಯ ನಿರೂಪಣಾ ತಂತ್ರವೂ ಇದೆ. ಕತೆಯ ನಿರೂಪಕಿ ಗೌತಮಿ, ಕತೆಯೊಳಗಿನ ನಾಯಿಕಿ ಮಾಲಿನಿ ಬೇರೆ ಬೇರೆ ಅಲ್ಲ. ಮಾಲಿನಿಯ ಪುಣ್ಯದ ಕತೆಯನ್ನು ವಸ್ತುನಿಷ್ಠವಾಗಿ ಹೇಳಿಸಬೇಕೆಂಬುದಕ್ಕಾಗಿ ಮಾಸ್ತಿಯವರು ಗೌತಮಿಗೂ–ಮಾಲಿನಿಗೂ ಒಂದು ಬಗೆಯ ಮಾನಸಿಕ ದೂರ (Psychical distance)ವನ್ನೂ ಏರ್ಪಡಿಸಿದ್ದಾರೆ.

ತನ್ನ ಯೌವನಕಾಲದ ಪ್ರೀತಿ, ಪ್ರಣಯದ ವಿರಹವ್ಯಥೆಯ, ಉನ್ಮತ್ತತೆಯ ಕತೆಯನ್ನು ಎಷ್ಟೋ ದಶಕಗಳ ಅನಂತರ– ಈಗ–ಗೌತಮಿ ಹೇಳಿಕೊಳ್ಳುತ್ತಿರುವುದು, ಅವಳಲ್ಲಿ ಸಹಜವಾಗಿಯೆ ಒಂದು ಮಾನಸಿಕ ದೂರವನ್ನು ಸಾಧಿಸಿಬಿಟ್ಟಿದೆ. ಆದರೂ ತನ್ನ ಕತೆಯನ್ನು ತಾನೇ ಹೇಳಿಕೊಳ್ಳುವಾಗ 'ಅಹಂ' ನ ದೆಸೆಯಿಂದ ಭಾವೋದ್ವಿಗ್ನತೆಯಾಗಲಿ, ಪಕ್ಷಪಾತವಾಗಲಿ,ಆತ್ಮ ಆದೈನ್ಯವಾಗಲಿ ಉಕ್ಕೀತೆಂಬ ಅಳುಕು ಗೌತಮಿಗಿರಲೆಂದು ಮಾಸ್ತಿ ಹೀಗೆ ಕಲ್ಪಿಸಿದ್ದಾರೆ. ಇದೊಂದು ಆತ್ಮರಕ್ಷಣೆಯ ಸುರಕ್ಷಿತ (ಸುಲಭದ್ದೂ) ತಂತ್ರ. ಆದರೂ ಅಜ್ಜಿ ಗೌತಮಿ ಒಂದು

ಸಂದರ್ಭದಲ್ಲಿ ತನಗುಂಟಾದ ದುಃಖದಾವೇಶವನ್ನೂ ತಡೆಯಲಿಕ್ಕಾಗದೆ ಕ್ಷಣಕಾಲ ಕತೆಕೇಳುವ ಮೂವರು ಹೆಣ್ಣುಮಕ್ಕಳಿಂದ ಸರಿದು ದೂರ ಹೋಗುತ್ತಾಳೆ. ತಮಗೆ ಕೇಳದ ಆ ಕರೆ, ಅಜ್ಜಿಗೆ ಹೇಗೆ ಕೇಳಿಸಿತೆಂದು ಉಳಿದಿಬ್ಬರು ಬೆಪ್ಪರಾಗಿ ಕುಳಿತರೆ ಶಕುಂತಲೆ ಮಾತ್ರ ಅಜ್ಜಿಯ ಮನದ ಅಳಲನ್ನು ಸೂಕ್ಷ್ಮಗ್ರಹಿಸಿ ಸುಮ್ಮನಾಗುತ್ತಾಳೆ. ಆ ಸಂದರ್ಭದಲ್ಲಿ ಶಕುಂತಲೆ–ಗೌತಮಿಯರ ಮನಸ್ಸು ನಿಜವಾಗಿಯೂ ಒಂದಾಗಿರುತ್ತವೆ. ಏಕೆಂದರೆ ವಿರಹದ ಉರಿಯಲ್ಲಿ ಇಬ್ಬರೂ ಬೆಂದವರು ಎಂಬುದಕ್ಕಾಗಿ.

ಗೌತಮಿಯ ಮೂಲಕ ಕತೆ ಹೇಳಿಸುವಲ್ಲಿ ಮಾಸ್ತಿಯವರು ತಮ್ಮ ಆದರ್ಶಪರ ನಿಲುವನ್ನು ಬಲು ಜಾಣತನದಿಂದ ಪ್ರಕಟಪಡಿಸಿದ್ದಾರೆ. ಮಾಲಿನಿ–ದತ್ತಕಾಶ್ಯಪರನ್ನು ಕಾಮದ ಬಲೆಯಿಂದ ತಪ್ಪಿಸಬೇಕೆಂಬ ನೈತಿಕತೆಯ ಅವರಿಗೆ ಬಹುಮುಖ್ಯವಾಗಿದೆ. ಆ ಮೂಲಕ ವಿವಾಹದ ಪಾವಿತ್ರ್ಯವನ್ನು ಸಮರ್ಥಿಸಬೇಕಾಗಿದೆ. ಆದರೂ ಓದುಗನಲ್ಲಿ, ದತ್ತನ ನಿಲುವಿನ ಬಗ್ಗೆ ಗುಮಾನಿ ಉಳಿದೇಬಿಡುತ್ತದೆ. ದತ್ತ ತೋರುವ ಸಂಯಮ ಋಷ್ಯಾಶ್ರಮದ ವಾತಾವರಣಕ್ಕೆ ಅನುಗುಣವಾಗಿಯೇ ಇರಬಹುದು; ಆದರೆ ಯೌವನದಲ್ಲಿರಬೇಕಾದ ತಳಮಳವಾಗಲಿ, ಮಾಲಿನಿ ಆಹ್ವಾನಿಸಿದಾಗ ಉಂಟಾಗಬೇಕಿದ್ದ ಮಾನಸಿಕ ಆಂದೋಲನವಾಗಲಿ ಅವನಲ್ಲಿ ಕಾಣಿಸದೆಹೋದುದು, ಅವನ ಪಾತ್ರದ ಬಗ್ಗೆ ಮಾಸ್ತಿಯವರು ತಳೆದ ಕೃತಕ ನಿಲುಮೆಯ ಪರಿಣಾಮ ಎಂದೇ ಅನಿಸುತ್ತದೆ. ದತ್ತಕಾಶ್ಯಪ ಒಂದು 'ಸ್ವತಃಸಿದ್ಧ' ಪಾತ್ರವಾಗಿ ಮೆರೆಯುತ್ತಾನೆ. ಅವನ ಅಪ್ರಶ್ನಿತ ವ್ಯಕ್ತಿತ್ವದ ಎದುರು ಮಾಲಿನಿಯ ಪಾತ್ರ ಕೇವಲ ವಿಧಿಯ ಕೈಗೊಂಬೆಯಾಗಿ ಬಿಡುತ್ತದೆ. ತಾನು ಭಾರದ್ವಾಜನನ್ನು ವರಿಸುವುದಾಗಿ ಮಾಲಿನಿ ಅನಿರೀಕ್ಷಿತವಾಗಿ ಹೇಳಿದಾಗ, ದತ್ತಕಾಶ್ಯಪನ ಮುಖದ ಮೇಲೆ 'ಎಲ್ಲಿಯೋ ಸ್ವಲ್ಪ ಅಸಮಾಧಾನ, ಒಂದು ಮೋಡ ಹಾಯ್ದಂತೆ ಹಾಯ್ದು ಮರೆಯಾಯಿತು' ಎಂಬ ಪ್ರತಿಕ್ರಿಯೆಗೆ ಕತೆಯಲ್ಲಿ ಬೇರೆಲ್ಲಿಯೂ ದತ್ತನಿಂದ ಉತ್ತರವಿಲ್ಲ. ಆತನ ನಿರ್ಲಿಪ್ತತೆಯ ಹಿಂದೆ ತ್ಯಾಗದ, ಪರಹಿತದ ಉದಾತ್ತ ಕಲ್ಪನೆ ಉಂಟೆಂದು ಮಾತ್ರ ಭಾವಿಸಿಕೊಳ್ಳಬೇಕಾಗಿದೆ. ಈ ಉದಾತ್ತತೆ ಪರೀಕ್ಷೆಯಿಲ್ಲದೆ ಸಾಧ್ಯವಾದುದು.

ದತ್ತಕಾಶ್ಯಪನು ಮಾಲಿನಿಯನ್ನು ವರಿಸದಿರುವುದರ ಹಿಂದೆ, ಆಕೆಯು ಈಗಾಗಲೆ ಭಾರದ್ವಾಜನಿಂದ ಮೋಹಿಸಲ್ಪಟ್ಟ ಹೆಣ್ಣು; ಅವಳಿಂದ ತನಗಿನ್ನು ಸಹಜವಾದ ಪ್ರೀತಿ ದೊರಕದೆ ಕೇವಲ ಕಾಮಸಂಬಂಧ ಮಾತ್ರ ಕುದುರೀತು ಎಂಬ ಅಳುಕು ಅವನಿಗೆ ಕಾಡಿರಬೇಕು. ಮೇಲಾಗಿ, ಮಾಲಿನಿಯು ಭಾರದ್ವಾಜನೊಂದಿಗೆ ಪ್ರೀತಿಯ ಮುಂದಿನ ಹೆಜ್ಜೆಯಾದ ದೈಹಿಕಸುಖವನ್ನು ಪಡೆದಿದ್ದಳೆಂಬುದಕ್ಕೆ ಕತೆಯಲ್ಲಿ, ಅಸ್ಪಷ್ಟವಾಗಿಯಾದರೂ ಪುರಾವೆ ಇದೆ. ಮದುವೆಯಾಗಲಿರುವ ಆ ತರುಣ–ತರುಣಿ ಪ್ರಣಯಿಗಳಾಗಿ ಏಕಾಂತದಲ್ಲಿ ವಿಹರಿಸುತ್ತಿದ್ದರು; "ಎಷ್ಟೋ ತಿಂಗಳ ರಾತ್ರಿ ಹೊಳೆ ಇಳಿದ ದಿನದಲ್ಲಿ ಇವರು ನದಿಯ ಮಧ್ಯದ ಹಂಸಗಳ ದಿಬ್ಬಕ್ಕೆ ಹೋಗುವರು. ಜತೆಯಲ್ಲಿರುತ್ತ ದಾಂಪತ್ಯದ ಪರಮಾವಧಿಯನ್ನು ಮುಟ್ಟುವಂತೆ ತಿಂಗಳ ಬೆಳಕಿನಲ್ಲಿ ಜತೆಯಾಗಿ ಕುಳಿತು ದೇಹದ ಮೇರೆಯನ್ನು ಮೀರಿದ ಒಂದು ಸುಖದಲ್ಲಿ ಮುಳುಗುವರು (ಪು.೨೧). ಇವರ ಬೆಳದಿಂಗಳಿನ ವಿಹಾರದ ಬಗ್ಗೆ ವರ್ಣಿಸುತ್ತ ಮಾಸ್ತಿಯವರು "ಪ್ರಣಯದ ಪ್ರಚೋದಕಶಕ್ತಿಯೆ ತಿಂಗಳನ್ನು ಮೇಲೆ ಹೊದೆದು ತನ್ನೆದುರಿಗೆ ನಿಂತಿದೆಯೆಂದು ಅವನಿಗೆ

ಅನುಭವವಾಗುವುದು'' ಎಂದೂ ನುಡಿಯುತ್ತಾರೆ. ಇದರ ಮೇಲಿಂದ ದತ್ತಕಾಶ್ಯಪನಿಗಾಗಲಿ, ಓದುಗರಾದ ನಮಗಾಗಲಿ ಕತೆಗಾರ ನೀಡುವ ತಿಳುವಳಿಕೆಯೇನೆಂದರೆ–ಭಾರದ್ವಾಜ–ಮಾಲಿನಿ ವಿವಾಹಪೂರ್ವ ದೈಹಿಕಸಂಬಂಧವನ್ನು ಹೊಂದಿದ್ದರೆಂಬುದನ್ನು. ಆದರೆ ತೀರ ಗಮನವಿಟ್ಟು ಓದಿದಾಗ 'ದೇಹದ ಮೇರೆಯನ್ನು ಮೀರಿದ' ಎಂಬ ಪದಪುಂಜವನ್ನು ಮಾಸ್ತಿಯವರು ಬಲು ಎಚ್ಚರಿಕೆಯಿಂದ ಬಳಸಿದ್ದಾರೆಂಬುದೂ ಅರಿವಿಗೆಬರುತ್ತದೆ. ಇದು ಹೇಳಿಕೆಯಾಗಿ ಉಳಿಯುವ ಅಂಶ ಮಾತ್ರ, ಕತೆಯೊಳಗೆ ದತ್ತಕಾಶ್ಯಪ ಗೃಹೀತವಾಗಿಟ್ಟುಕೊಂಡ ಅಂಶ ಇದು: ಒಂದು ಗಂಡಿಗೆ ಒಂದು ಹೆಣ್ಣು; ಒಂದು ಹೆಣ್ಣಿಗೆ ಒಂದು ಗಂಡು' ಎಂಬ ತತ್ವ. ಈ ಅರಿವು ದತ್ತನಲ್ಲಿ ಒಂದು ಹಟವಾಗಿ ನೆಲೆಸಿತ್ತೆಂಬುದು ಅಭಿಮಾನಪಡುವ ಸಂಗತಿಯಾಗಿದೆ ಮಾಸ್ತಿಯವರಿಗೆ.

ಗೌತಮಿ, ಒಂದು ಪರಿಪಕ್ವ ಮನಸ್ಥಿತಿಯಲ್ಲಿ ಮಾಲಿನಿಯ ಕತೆಯನ್ನು ನಿರೂಪಿಸುತ್ತಿದ್ದಾಳೆ. ಭಾರದ್ವಾಜನ ಅಗಲಿಕೆಯಿಂದಾಗಿ ತಾನು ಪಟ್ಟ ಮನೋ–ದೈಹಿಕ ತಾಪಗಳನ್ನು ಮುಚ್ಚು ಮರೆಯಿಲ್ಲದೆ ಹೇಳಿಕೊಂಡ, ಒಪ್ಪಿಕೊಂಡ ಅವಳಿಗೆ ದತ್ತನಿಂದ ದೊರೆತದ್ದು ವಿವೇಕದ ಉಪದೇಶ. ದತ್ತ ತನ್ನ ನೈಜ ಗ್ರಹಿಕೆಯನ್ನು ಅವಳ ಮಟ್ಟಕ್ಕಿಳಿದು ವ್ಯಕ್ತಪಡಿಸುವುದಿಲ್ಲ; ಅದಕ್ಕೆ ಉದಾತ್ತತೆಯ ಲೇಪನ ನೀಡುವುದೆ ಅವನಿಗೆ ಸುಲಭವಾಗಿದೆ. ಮಾಲಿನಿ, ದತ್ತಕಾಶ್ಯಪನ ದೈನ್ಯವನ್ನು ಮನ್ನಿಸಿ ಕಾಮವಿಮುಖಳಾಗುವುದು ಭಾವುಕ ಸ್ಥಿತಿಯಲ್ಲಿ ಮಾತ್ರ. ಮಾಸ್ತಿಯವರು ವಿಧಿಯ ಆಟ ಇದೆಲ್ಲ ಎಂಬ ದೊಡ್ಡ ಸಮಾಧಾನವನ್ನು ನಮ್ಮ ಮುಂದೆ ಇಟ್ಟಿದ್ದಾರೆ.

೪

ಕಲೆಯ ದೃಷ್ಟಿಯಿಂದ 'ಗೌತಮಿ ಹೇಳಿದ ಕತೆ' ಯಶಸ್ವಿಯಾದ ಬರವಣಿಗೆ. ಮಾಲಿನಿ ನದಿ ಕತೆಯಲ್ಲಿ ಒಂದು ವಾಸ್ತವಿಕ ವಿವರವಾಗಿ ಪ್ರಸ್ತುತವಾಗುವಂತೆ, ಸಾಂಕೇತಿಕ ಅರ್ಥವನ್ನು ಒದಗಿಸುತ್ತದೆ. ಕತೆಯ ನಾಯಕಿ ಮಾಲಿನಿಯ ಬದುಕೇ ನದಿಯ ಹಾಗಿದೆ. ಕಪಟ, ಮುಚ್ಚು–ಮರೆಯಿಲ್ಲದ ತರುಣಿ ಮಾಲಿನಿ, ವಯೋಮಾನಕ್ಕೆ ತಕ್ಕಂತೆ ತಾಪಸ ತರುಣರಿಬ್ಬರೊಂದಿಗೆ ಸ್ನೇಹ ಕುದುರಿಸಿದ್ದಾಳೆ. ಗಂಡು ಬೇರೆ, ಹೆಣ್ಣು ಬೇರೆ ಎಂಬ ಭೇದವೆಣಿಸದ ಸ್ನೇಹ ಆ ಮೂವರ ನಡುವೆ ಕುದುರಿದ್ದುದಕ್ಕೆ ಅವರವರ ಮನೋನೆಲೆಯಲ್ಲಿದ್ದ ನಿಷ್ಕಲ್ಮಷತೆಯೆ ಆಧಾರ. ಮದುವೆಯ ಪ್ರಸ್ತಾಪ ಮಾತ್ರ ಅವರ ನಡುವಿನ ಸಂಬಂಧಕ್ಕೆ ಸೀಮಿತತೆತರುತ್ತದೆ. ದತ್ತಕಾಶ್ಯಪ, ದೂರದ ಹಿತಚಿಂತಕನಾಗಿ ಉಳಿಯುತ್ತಾನೆ ಮಾಲಿನಿಯ ಪಾಲಿಗೆ. ಅದನ್ನು ಅಷ್ಟಾಗಿ ಗಮನಿಸದ ಮಾಲಿನಿ, ಭಾರದ್ವಾಜನೊಂದಿಗೆ ನದಿಯಲ್ಲಿಈಜಾಡುತ್ತಾಳೆ. ಬೆಳದಿಂಗಳಲ್ಲಿ ವಿಹರಿಸುತ್ತಾಳೆ. ಅವರ ಪ್ರೇಮದ ಗಳಿಗೆಗಳು ಆ ನದಿಯ ಹಾಗೆಯೆ ಸಹಜ–ಸ್ವಚ್ಛಂದವಾಗಿದೆ. ಹರಿಯುವ ನದಿಗೆ ಅಡ–ತಡೆಯಿಲ್ಲದ ಹಾಗೆ, ಆ ತಾಪಸ ತರುಣ–ತರುಣಿಯ ಪ್ರೇಮ ಜೀವನ ನಿರಾಳವೂ ಆಗಿದೆ, ನಿಷ್ಕಳಂಕ ಕೂಡ.

ನದಿಯನ್ನು ಮಾಸ್ತಿಯವರು ಆಸೆಗೆ ಹೋಲಿಸಿದ್ದು ಅರ್ಥಪೂರ್ಣವಾಗಿದೆ. "ಜೀವನ ಪ್ರವಾಹದಲ್ಲಿ ಮನುಷ್ಯರು ಬಹುಭಾಗ ಹೊಳಗೆ ಸಿಕ್ಕಿದ ಕಾಯಿ, ಕಡ್ಡಿಯಂತೆ ನಿಸ್ಸತ್ವ ವಸ್ತುಗಳು.'' ಭಾರದ್ವಾಜನು "ಆಸೆಹೊಳೆ''ಯನ್ನು ಏರಿದನು. ಅದು ಅವನನ್ನು

ಕೊಚ್ಚಿಕೊಂಡೊಯ್ದಿತು. ಅವನ ವಿರಹದ ಉರಿಯಲ್ಲಿ ಬೇಯುತ್ತಿದ್ದ ಮಾಲಿನಿಯನ್ನು ಕೂಡ ವಸಂತದ ಆ ರಮ್ಯ ಕಾಲದಲ್ಲಿ ಅದೇ 'ಆಸೆಹೊಳೆ' ಕೊಚ್ಚಿಕೆಡಹಿತು. ಪರಿಣಾಮವಾಗಿ, ತಾನು ಹೇಗಾದರೂ ದತ್ತನನ್ನು ಪಡೆಯಲೇಬೇಕೆಂದು ನಿರ್ಧರಿಸಿಕೊಂಡಳು. ದತ್ತಕಾಶ್ಯಪ ಅವಳನ್ನು ನೈತಿಕಬಲದಿಂದ ಉಳಿಸಿ ದಂಡೆಗೆ ತಂದನೆಂಬುದು ಕತೆಯಲ್ಲಿ ಸಾಂಕೇತಿಕವಾಗಿ ಮೂಡಿದೆ.

"ನದಿ ಮಾಲಿನಿ, ಹುಡುಗಿ ಮಾಲಿನಿಯ ವಿಷಯದಲ್ಲಿ ಸವತಿಯ ಅಸೂಯೆಯಿಂದ ನಡೆದುಕೊಂಡಿದ್ದಿತು.'' ಅಂತೆಯೆ ಭಾರದ್ವಾಜ ಕೊಚ್ಚಿಕೊಂಡು ಹೋದನು. ಆದರೆ ಅದೇ "ಹೊತ್ತುಕೊಂಡು ಹೋಗುವ ಹೊಳೆಯಂಥ ಆಸೆಯನ್ನು ದಿಟ್ಟವಾಗಿ ಈಗ ಬಲ್ಲವರು ಕುಲಪತಿಗಳು''. (ದತ್ತಕಾಶ್ಯಪ / ಕಣ್ವಮಹರ್ಷಿ) ಅಂತೆಯೆ ಮಾಲಿನಿಯ ವಿಷಯದಲ್ಲಿ ಅದು ಹುಚ್ಚುಹೊಳೆಯಾಗಿ ಬರದಂತೆ ಅವರು ನೋಡಿಕೊಂಡರು. ಈಜುವ ಕ್ರಿಯೆ ಈ ಕತೆಯಲ್ಲಿ ಪಡೆಯುವ ಧ್ವನ್ಯರ್ಥ ಗಮನಾರ್ಹವಾಗಿದೆ. ಮಾಲಿನಿಯನ್ನು ನದಿಯ ಸೆಳವಿನಿಂದ ವಿಧಿಯ ಅಪ್ಪಣೆಯಿಂದ ಉಳಿಸಿದ ದತ್ತಕಾಶ್ಯಪ ಅವಳ ಮುಂದಿನ ಜೀವನಪ್ರವಾಹ ಹುಚ್ಚುಹೊಳೆಯಾಗದಂತೆ ವಹಿಸುವ ಎಚ್ಚರದಲ್ಲಿ ವಿಧಿಬದ್ಧ ಕ್ರಿಯೆಗಿಂತ, ಪ್ರಯತ್ನಪೂರ್ವಕ ವಿವೇಕವೇ ಎದ್ದು ಕಾಣುತ್ತದೆ. ಕತೆಯಲ್ಲಿ, ಸೋಲಿನ ಪ್ರಸಂಗದಲ್ಲಿ ವಿಧಿಯನ್ನು ಪ್ರಸ್ತಾಪ ಮಾಡುವ ಮಾಸ್ತಿಯವರು, ಸತ್ತ್ವವನ್ನು ಎತ್ತಿಹಿಡಿಯುವ ಸಂದರ್ಭದಲ್ಲಿ ಮಾನವನ ವಿವೇಕವನ್ನು, ದಿಟ್ಟತನವನ್ನು ಸಮರ್ಥಿಸುತ್ತಾರೆ. ಈ ಸಮರ್ಥನೆಗೆ ನದಿ ಮತ್ತು ಈಜುಗಾರಿಕೆಯ ಪ್ರಸಂಗಗಳು ಅವರಿಗೆ ನೆರವಾಗಿವೆ.

ಆದೇರೀತಿ ಬೆಳದಿಂಗಳಿನ ವರ್ಣನೆ. ಮಾಲಿನಿ–ಭಾರದ್ವಾಜರ ನಡುವೆ ಪ್ರಣಯಭಾಗ ಬಲಪತ್ತರವಾದಾಗ, ಅವರ ಏಕಾಂತದ ಕ್ಷಣಗಳು ಬೆಳದಿಂಗಳ ರಾತ್ರಿಯ ವನದಲ್ಲಿ ಕಳೆಯುತ್ತವೆ. "ತಿಂಗಳ ಬೆಳಕಿನ'ಲ್ಲಿ ಏನೋ ಮಾಯೆಯಿದೆ... ಅದಕ್ಕೆ ಸಿಕ್ಕಿದವರು ಅದನ್ನು ಬಲ್ಲರು. ಹುಡುಗಿ ಅದಕ್ಕೆ ಸಿಕ್ಕಿದಳು; ಅದರಿಂದ ಮರುಳಾಗಿದ್ದಳು.... ಭಾರದ್ವಾಜನೂ ತಿಂಗಳ ಮಾಯೆಗೆ ಸಿಕ್ಕಿದನು; ಮರುಳಾದನು''. "ಎಷ್ಟೋ ತಿಂಗಳ ರಾತ್ರಿ, ಹೊಳೆ ಇಳಿದ ದಿನದಲ್ಲಿ ಇವರು ನದಿಯ ಮಧ್ಯದ ಹಂಸಗಳ ದಿಬ್ಬಕ್ಕೆ ಹೋಗುವರು......'' ಈ ವಿವರಗಳು ಕತೆಯಲ್ಲಿ ಪಡೆದ ಅರ್ಥವೂ ವಿಲಕ್ಷಣವಾಗಿದೆ. ಮಾಲಿನಿ–ಭಾರದ್ವಾಜರು ದಂಪತಿಗಳಾಗಿ ಮಾರ್ಪಟ್ಟು, ಧಾರ್ಮಿಕ ವಿಧಿ–ವಿಧಾನದಂತೆ ದೇಹಸುಖ ಅನುಭವಿಸುವ ಮೊದಲೇ ನದಿಯ ನಿರ್ದಯೀ ವರ್ತನೆಯಿಂದ ಅಗಲುತ್ತಾರೆ. ಆವರೆಗೂ ಅವರು ಪಡೆದ ಪ್ರಣಯದ ಅನುಭವ, ಬೆಳದಿಂಗಳಿನಷ್ಟೆ ತತ್ಕಾಲೀನವಾಗಿ ಉಳಿಯುತ್ತದೆ. ಬೆಳದಿಂಗಳು 'ಮಾಯೆ' ಎಂಬ ಮಾತಿನಂತೆ, ಆ ತರುಣ ಜೀವಿಗಳ ಬೆಸುಗೆ ಮಾಯೆಯಾಗಿ ಉಳಿಯುತ್ತದೆ. ಬೆಳದಿಂಗಳ ರಾತ್ರಿಯಲ್ಲಿ ಅವರು ಪಟ್ಟ ಸುಖ, ಅಮಾಯಕರಾದ ಅವರನ್ನು ಅಗಲಿಸುವ ಅನಿಷ್ಟದ ಸೂಚಕವೂ ಆಗಿದೆ.

೫

ಗೌತಮಿ ತನ್ನ ಸಾಕು ಮಕ್ಕಳನ್ನುದ್ದೇಶಿಸಿ ಹೇಳಿರುವ ಈ ಕತೆ, ಆಗಿಹೋದ ಬಾಳಿನ ಕಡೆಗೆ ಹರಿಸಲಾದ ಒಂದು ಪರಿಪಕ್ವ ನೋಟವಾಗಿದೆ. ವಿಧಿಯ ನಿಯಂತ್ರಣಕ್ಕೆ ಸಿಕ್ಕರೂ,

ಮನುಷ್ಯ ಕಡಬಾಳುವ ಮೌಲ್ಯಕ್ಕೆ ಎರವಾಗಬಾರದೆನ್ನುವ ಎಚ್ಚರವನ್ನಿದು ಓದುಗನಿಗೆ ನೀಡುತ್ತಿದೆ. ಇಂದು ಕುಲಪತಿಯಾಗಿರುವ ಕಣ್ವಮಹರ್ಷಿ ಹಾಗೂ ಆಶ್ರಮಕ್ಕೆ ತಾಯಿಯ ಸ್ಥಾನದಲ್ಲಿರುವ ಗೌತಮಿ, ತಮ್ಮಿಬ್ಬರ ಮೇಲೆ ದುರ್ವಿಧಿಯಂತೆ ಎರಗಿದ ಆಸೆ–ಆಮಿಷಗಳ ಅಪಾಯವನ್ನು ಸಾರ್ವಕಾಲಿಕ ಮೌಲ್ಯದ ನೆಲೆಯ ಮೇಲೆ ನಿಂತು ದೂರಮಾಡುತ್ತಾರೆ. ವ್ಯಕ್ತಿಗತವಾದ ಪ್ರೇಮ–ಕಾಮದಿಂದ ಸ್ವಾರ್ಥಸುಖಗಳಿಕೆ ಮಾತ್ರ ಅವರಿಗಾಗುತ್ತಿತ್ತು. ಆ ತಾತ್ಕಾಲಿಕ ಸುಖಕ್ಕೆ ಅವರಿಬ್ಬರೂ ಎರವಾಗಿದ್ದರಿಂದ ಆ ನಂತರದಲ್ಲಿ ಅವರು ಆಶ್ರಮದ ನೆರಳಲ್ಲಿ ಗಳಿಸಿದ್ದು ಅನೇಕ ಜೀವಿಗಳ ನಿರ್ಮಲ ಪ್ರೀತಿ, ಮಮತೆ, ಶ್ರದ್ಧೆಗಳನ್ನು.

"ಗೌತಮಿ ತುಂಬು ಹೊಳೆಯನ್ನು ದಾಟಿ ಸುರಕ್ಷಿತವಾಗಿ ದಡ ಮುಟ್ಟಿದವರು'' ಎಂಬ ಕುಲಪತಿ ಕಣ್ವರ ಮಾತನ್ನು ಮಾಸ್ತಿಯವರು ಕತೆಯ ಕೊನೆಯಲ್ಲಿ ಉಲ್ಲೇಖಿಸಿದ್ದಾರೆ. ಒಂದು ಆಶ್ರಮವನ್ನು ಪ್ರೀತಿ–ಯೋಗಕ್ಷೇಮಗಳ ಭರವಸೆಯ ತಾಣವನ್ನಾಗಿ ಕಟ್ಟಬೇಕೆಂಬ ಅಂದಿನ ಆ ದತ್ತಕಾಶ್ಯಪನ ಮಹತ್ತ್ವಾಕಾಂಕ್ಷೆ ಇಂದು ಸಾರ್ಥಕವಾಗಿದೆ. ಆ ನೆರವೇರಿಕೆಯ ಸಾಧ್ಯತೆಯ ಚರಿತೆಯೆ ಈ ಕತೆ. ಮಾಸ್ತಿಯವರು ಗೌತಮಿಯಿಂದ ಹೇಳಿಸಿದ್ದು ಬರಿ ಕತೆಯನ್ನಲ್ಲ, ಧ್ವನ್ಯಾರ್ಥವನ್ನು ಒಳಗೊಂಡ ಈ ಚರಿತೆ, ಮಾಸ್ತಿಯವರು ದೃಢವಾಗಿ ನಂಬುವ ಜೀವನ ಶ್ರದ್ಧೆಯ ಸಕಾರಣ ವಿಶ್ಲೇಷಣೆ ಕೂಡ ಆಗಿಬಿಟ್ಟಿದೆ. ಹೀಗಾಗಿ ಮಾಸ್ತಿಯವರ ಗ್ರಹಿಕೆ ಓದುಗನಿಗೂ ಒಟ್ಟಾರೆಯಾಗಿ ಮನದಟ್ಟಾಗುವಂತಿದೆ.

❑ ❑

ಮಹಾಭಾರತದಲ್ಲಿ ಮಕ್ಕಳ ಜನನ

• ಮರಾಠಿ ಮೂಲ : ಶ್ರೀ ರ. ಭಿಡೆ

• ಕನ್ನಡ ಅನುವಾದ : ವೈಷ್ಣವಚರಣ

ಪತಿ–ಪತ್ನಿಯರ ಶೃಂಗಾರವು ವಾತ್ಸಲ್ಯವಾಗಿ ವಿರಾಜಿಸುವುದು ಅವರ್ಣನೀಯವಾಗಿರುವಂತೆ ಶೃಂಗಾರದಲ್ಲಿ ಅಂಕುರಿಸುವ ಸಂತಾನವೈಭವವು ವೈವಾಹಿಕ ಜೀವನದ ಅವಿಭಾಜ್ಯ ಅಂಗವಾಗಿದೆ. 'ಗತಿರ್ನಾಸ್ತಿ–ಅಪುತ್ರಸ್ಯ ಸ್ವರ್ಗಂ ನೈವಚ ನೈವಚ' ಎಂಬ ನುಡಿ ಪಾರಮಾರ್ಥಿಕ ದೃಷ್ಟಿಯಿಂದ ನಿಜವಿರಲಿ ಅಥವಾ ಇಲ್ಲದಿರಲಿ, ಆದರೆ ಐಹಿಕ ಜೀವನದಲ್ಲಿ ಅದೊಂದು ತ್ರಿಕಾಲಾಬಾಧಿತ ಸತ್ಯವಾಗಿದೆ. ಸ್ತ್ರೀಪುರುಷರ ಮಿಲನದಿಂದ ನಿರ್ಮಾಣವಾಗುವ ವಂಶವೃದ್ಧಿಯು ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಾಗಿರದೆ ದೇವ–ದಾನವ, ಯಕ್ಷ–ರಾಕ್ಷಸ, ಗಂಧರ್ವ–ಕಿನ್ನರ, ಪಶು–ಪಕ್ಷಿ, ಕೀಟಕ–ಜಲಚರ ಮುಂತಾದ ಎಲ್ಲ ಚೇತನ ಸೃಷ್ಟಿಯ ಸಮಾನ ಸ್ವಭಾವಧರ್ಮವಾಗಿದೆ. ಪ್ರೇಮ ಮತ್ತು ಮಕ್ಕಳಾಗುವ ರೀತಿ, ಗರ್ಭಧಾರಣೆಯ ಕಾಲಖಂಡ, ಸಂತತಿಯ 'ಸಂಖ್ಯೆ– ಇವು ಆಯಾ ಯೋನಿಗೆ ಅನುಗುಣವಾಗಿ ಭಿನ್ನವಾಗಿ ಕಂಡುಬರುತ್ತವೆ.

ಸಂತಿ ದೇವನಿಕಾಯಾಶ್ಚ ಸಂಕಲ್ಪಾಜ್ಜನಯಂತಿ ತೇ ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಘರ್ಷೇಣೇತಿ ಪಂಚಧಾ //

ಆಶ್ರಮ.ಪ. 30/22

ಮೈಥುನದಂತೆ ಸಂಕಲ್ಪ, ಮಾತು, ನೋಟ ಮತ್ತು ಸ್ಪರ್ಶ, ಹೀಗೆ ಐದು ಪ್ರಕಾರವಾಗಿ ದೇವಯೋನಿಯಲ್ಲಿ ಮಕ್ಕಳಾಗುತ್ತವೆಯೆಂದು ವ್ಯಾಸರೇ ಹೇಳಿದ್ದಾರೆ. ಬರೀ ನೋಟ ಹೀರುವಿಕೆಯಿಂದ ಮಾನವ ಸ್ತ್ರೀಗೂ ಗರ್ಭಧಾರಣೆ ಉಂಟಾದ ಒಂದು ಕಥೆ ವಾಲ್ಮೀಕಿ ರಾಮಾಯಣದಲ್ಲಿದೆ: ಪುಲಸ್ತ್ಯ ಋಷಿಯ ತಪೋವನದಲ್ಲಿ ತೃಣಬಿಂದು ರಾಜನ ಮಗಳು ತನ್ನ ಸಖಿಯರೊಡನೆ ಕ್ರೀಡೆಗಾಗಿ ಬರುತ್ತಾಳೆ. ಅವರ ಬರುವಿಕೆಯಿಂದ ತಪಸ್ಸಿಗೆ ತೊಂದರೆಯಾಗುತ್ತದೆ. ಆಗ ಅವನು '*ಯಾ ಮೇದರ್ಶನಮಾಗಚ್ಛೇತ್ ಸಾಗರ್ಭಂ ಧಾರಯಿಷ್ಯತಿ*'– ಉ. ಕಾ. 2/13. 'ಯಾವಳು ನನ್ನ ಆಶ್ರಮವನ್ನು ಪ್ರವೇಶಿಸಿ ನನ್ನ ನೋಟಕ್ಕೆ ಬೀಳುವಳೋ ಅವಳು ಗರ್ಭವನ್ನು ಧರಿಸುವಳು' ಎಂದು ಶಾಪವನ್ನು ಕೊಡುತ್ತಾನೆ. ಇದು ರಾಜಕುಮಾರಿಯ ಸಖಿಯ ಕಿವಿಗೆ ಬಿದ್ದಿತ್ತು. ಆಕೆ ತಪೋವನದ ಕಡೆಗೆ ಸುಳಿಯಲಿಲ್ಲ. ಆದರೆ ಈ ಮಾತು ರಾಜಕುಮಾರಿ ಕಿವಿಗೆ ಬೀಳಲಿಲ್ಲವಾಗಿ, ಆಕೆಯು ತಪೋವನಕ್ಕೆ ಹೋದಾಗ ಋಷಿಯ ನೋಟಕ್ಕೆ ಒಳಗಾಗಿ ಗರ್ಭವತಿಯಾದಳು. ವಾಲ್ಮೀಕಿಯು ರಾಕ್ಷಸ ಸ್ತ್ರೀಯರ ವೈಶಿಷ್ಟ್ಯವನ್ನು ಹೀಗೆ ವರ್ಣಿಸಿದ್ದಾನೆ:

ಸದ್ಯೋಽಪಲಬ್ಧಿರ್ಗರ್ಭಸ್ಯ ಪ್ರಸೂತಿಃ ಸದ್ಯ ಏವ ಚ ।
ಸದ್ಯ ಏವ ವಯಃಪ್ರಾಪ್ತಿರ್ಮಾತುಕರೇವ ವಯಃ ಸ ಮರ್ಮ ॥

ಉ. ಕಾ. 4/31

'ಸಮಾಗಮವಾದ ಕೂಡಲೇ ಗರ್ಭಧಾರಣೆ, ಕೂಡಲೆ ಹೆರಿಗೆ, ಹೆತ್ತ ಮಗುವಿಗೆ ತಾಯಿಯಷ್ಟೇ ವಯಸ್ಸು ಉಂಟಾಗುವುದು' ಎಂಬೀ ವರವನ್ನು ಉಮೆ ರಾಕ್ಷಸಿಯರಿಗೆ ಕೊಟ್ಟಿದ್ದಳು. ಇದೇ ರೀತಿ ಬೇರೆ ಬೇರೆ ಯುಗಗಳ ವೈಶಿಷ್ಟ್ಯಗಳು ಬೇರೆ ಬೇರೆಯಾಗಿ ಕಾಣಬರುತ್ತವೆ. ಕೃತ ಮತ್ತು ತ್ರೇತಾಯುಗಗಳಲ್ಲಿ ಮೈಥುನವಿಲ್ಲದೆ ಸಂತತಿಯಾಗುವ ಉಲ್ಲೇಖವಿದೆ. ದ್ವಾಪರಯುಗದಲ್ಲಿ ಮೈಥುನಪದ್ಧತಿ ಪ್ರಾರಂಭವಾಯಿತು.

ದ್ವಾಪರೇ ಮೈಥುನೋ ಧರ್ಮಃ ಪ್ರಜಾನಾಮಭವನ್ನೃಪ ।
ತಥಾ ಕಲಿಯುಗೇ ರಾಜನ್ ದ್ವಂದ್ವಮಾಪೇದಿರೇ ಜನಾಃ ॥

ಮ. ಭಾ. ಶಾಂತಿ. 207/40

"ದ್ವಾಪರಯುಗದಲ್ಲಿ ಮೈಥುನಧರ್ಮವು ಪ್ರಜೆಗಳಲ್ಲಿ ಉಂಟಾಯಿತು. ಕಲಿಯುಗದಲ್ಲಿ, ಎಲೈ ರಾಜನೆ, ಜನರು ಗಂಡು ಹೆಣ್ಣು ಎಂಬೀ ಜೋಡಿಯನ್ನು ಪಡೆದರು.'' ಈ ಪ್ರವೃತ್ತಿಯು ಕಲಿಯುಗದಲ್ಲಿ ಇಂದಿಗೂ ಬೆಳೆದುಕೊಂಡು ಬಂದಿದೆ. ಮಹಾಭಾರತ ಕೃತಿಯು ದ್ವಾಪರ ಮತ್ತು ಕಲಿಯುಗಗಳ ಸಂಧಿಕಾಲದಲ್ಲಿ ಹುಟ್ಟಿರುವುದರಿಂದ, ಅದರಲ್ಲಿ ವರ್ಣಿಸಿರುವ ಮಾನವೀಕುಮಾರ ಸಂಭವದ (ಕುಮಾರ=ಮಗು, ಸಂಭವ=ಹುಟ್ಟು) ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ತಿಳಿಯುವುದು ಅವಶ್ಯಕವಾಗಿದೆ.

ಕಲಿಯುಗದಲ್ಲಿ ಮಾನವೀಸಂತತಿಯು ಬರೀ ಸ್ತ್ರೀಪುರುಷರ ಸಂಬಂಧದಿಂದಲೇ ನಿರ್ಮಾಣವಾಗುತ್ತಿರುವುದು ಕಂಡುಬರುತ್ತದೆ. ಈವರೆಗೆ ಬೇರೆ ಇನ್ನಾವ ಮಾರ್ಗವೂ ಪತ್ತೆಯಾಗಿಲ್ಲ. ವಿಜ್ಞಾನಿಗಳು ಯೋನಿ ಸಂಬಂಧವಿಲ್ಲದೆ ಗಾಜಿನ ಕೊಳವೆಯಲ್ಲಿ ಗರ್ಭವನ್ನು ಬೆಳೆಸುವ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಈ ಅಪವಾದವನ್ನು ಬಿಟ್ಟರೆ– ಈ ವಿಧಾನವು ಇನ್ನೂ ಪ್ರಯೋಗಾವಸ್ಥೆಯಲ್ಲಿದೆ– ಅಂಡಾಣು ಮತ್ತು ಬೀಜಾಣು ಇವುಗಳ ಸಂಯೋಗದ ಆವಶ್ಯಕತೆ ಅವರಿಗೂ ಹೊಳೆದಿದೆ. ವಿಜ್ಞಾನಿಗಳ ಪ್ರಯತ್ನಗಳಿಗೆ ನಿರಪವಾದ ಯಶಸ್ಸು ಉಂಟಾದದ್ದೇ ಆದರೆ ಮಹಾಭಾರತಾದಿ ಪುರಾಣಗ್ರಂಥಗಳಲ್ಲಿ ಯಾವ ಅದ್ಭುತ ಮತ್ತು ವಿಸ್ಮಯಕಾರಿ ಜನ್ಮಕಥೆಗಳು ವರ್ಣಿಸಲ್ಪಟ್ಟಿವೆಯೋ,ಅವುಗಳಿಗೆ ಪ್ರಾಮಾಣ್ಯವು ದೊರಕೀತು. ಇಲ್ಲದಿದ್ದರೆ ಅವು ಬರೀ ಪೊಳ್ಳು ಮಾತುಗಳೆಂದು ಆದಾವು. ಸ್ತ್ರೀ ಪುರುಷ ಸಂಬಂಧಕ್ಕೆ ವಿವಾಹ ಬಂಧನದಿಂದ ಧಾರ್ಮಿಕ ಅಧಿಷ್ಠಾನ ಮತ್ತು ಸಾಮಾಜಿಕ ಪ್ರತಿಷ್ಠೆ ಲಾಭವಾಗುವದರಿಂದ, ಪತಿ ಪತ್ನಿಯರ ಮಿಲನದಿಂದ ಉಂಟಾಗುವ ಕುಮಾರಸಂಭವವು (ಮಕ್ಕಳು ಹುಟ್ಟುವುದು) ಔರಸವೂ (ಶರೀರದಿಂದ ಉಂಟಾದುದು) ಮತ್ತು ವಿಧಿಯುಕ್ತವೂ ಎಂದು ಪರಿಗಣಿಸಲಾಗುತ್ತದೆ. ಆದರೆ ಮದುವೆ ಇಲ್ಲದೆ ಸ್ತ್ರೀ ಪುರುಷರ ಸಂಬಂಧದಿಂದ ಉಂಟಾಗುವ ಸಂತತಿಯು ಅನೌರಸ(ಜಾರದಿಂದ ಹುಟ್ಟಿದ) ಮತ್ತು ಸಮಾಜವೂ ವಿಧಿಬಾಹಿರವೆಂದು ನಿಶ್ಚಯಿಸಲ್ಪಡುತ್ತದೆ. ಅಲ್ಲದೆ ಧರ್ಮ

ಮತ್ತು ಸಮಾಜವೂ ಅಂಥ ಸ್ತ್ರೀ–ಪುರುಷರನ್ನು ಗೌಣವಾಗಿಯೂ, ಹೀನವಾಗಿಯೂ ಗುರುತಿಸುತ್ತದೆ. ಸ್ತ್ರೀ ಪುರುಷ ಸಂಬಂಧದಿಂದ ಮಕ್ಕಳಾಗುವುದು ಪ್ರಕೃತಿ ನಿಯಮವಾಗಿದೆ. ಆದರೆ ಈ ಸಂಬಂಧವು ವಿವಾಹದಿಂದ ಇರಬಹುದು, ಇಲ್ಲದಿರಲೂ ಬಹುದು. ಕೆಲವು ಸಲ ಸ್ತ್ರೀ ಪುರುಷ ಸಂಬಂಧವಿದ್ದರೂ ಗರ್ಭಧಾರಣೆಯಾಗುವುದಿಲ್ಲ, ಮತ್ತು ಅದರಿಂದ ಪುರುಷನ ಮೇಲೆ ಷಂಡತ್ವ (ನಪುಂಸಕ) ಸ್ತ್ರೀ ಮೇಲೆ ವಂಧ್ಯತ್ವ (ಬಂಜೆತನ) ಆರೋಪಣೆ ಮಾಡಲಾಗುತ್ತದೆ. ಮಕ್ಕಳಾಗದಿರುವುದಕ್ಕೆ ಕಾರಣವು ವ್ಯಕ್ತಿಪರವಾಗಿ ಭಿನ್ನವಾಗಿರುತ್ತದೆ. ಮತ್ತು ಬಹುಮಟ್ಟಿಗೆ ಮಕ್ಕಳಾಗದಿರುವುದಕ್ಕೆ ಸರಿಯದ ಕಾರಣವು ಗೊತ್ತಾಗುವುದಿಲ್ಲ. ಅದು ಗೊತ್ತಾದರೆ ವೈಜ್ಞಾನಿಕ ವೈದ್ಯಕೀಯ ಜ್ಞಾನಗಳಿಂದ ಕುಮಾರಸಂಭವದಲ್ಲಿ ಯಶಸ್ಸು ಉಂಟಾಗಲು ಸಾಧ್ಯವಾಗುತ್ತದೆ. ಆದರೆ ಈ ಶಾಸ್ತ್ರೀಯ ಉಪಾಯಗಳ ಜೊತೆಗೆ ಮತ್ತು ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಜ್ಞಾನ ಮತ್ತು ಅಂಧಶ್ರದ್ಧೆಗಳ ದೈವೀ ಉಪಾಯಗಳಿಗೆ ಮಾನವ ಅಂಟಿಕೊಳ್ಳುತ್ತಿದ್ದು, ಅವುಗಳಿಂದ ಯಶಸ್ಸು ಸಿಗುವುದೆಂದು ಹೇಳುವಂತಿಲ್ಲ. ಹೆಚ್ಚೇನು? ಯಶಸ್ಸಿನ ಖಾತರಿಯೇ ಇರುವುದಿಲ್ಲ. ಈ ಉಪಾಯವು ವ್ಯಕ್ತಿಗತವಾಗಿ ಹಾನಿಕಾರಕವಂತೂ ಆಗಿರುತ್ತದೆ. ಅಲ್ಲದೆ ಸಮಾಜವಿಘಾತವೂ ಆಗಿರುತ್ತದೆ. ಈ ಉಪಾಯಗಳಿಗೆ ಶಾಸ್ತ್ರೀಯ ಆಧಾರಗಳು ಇರುವುದಿಲ್ಲ. ಆದರೂ ಸುಶಿಕ್ಷಿತ ಮತ್ತು ಸುಸಂಸ್ಕೃತ ಸಮಾಜದಲ್ಲಿ ಮಕ್ಕಳನ್ನು ಪಡೆಯಲು ಇಂದಿಗೂ ಆಲ–ಅರಳಿಮರಗಳ ಕಟ್ಟೆಗಳನ್ನು ನಿರ್ಮಿಸುವುದು, ವಿವಿಧ ದೇವತೆಗಳನ್ನು ಪೂಜಿಸುವುದು, ವ್ರತ–ವೈಕಲ್ಯ–ಉಪವಾಸ, ತಪಸ್ಸುಗಳನ್ನು ಆಚರಿಸುವುದು, ಹರಕೆಯನ್ನು ಹೊರುವುದು, ಇವೇ ಮುಂತಾದವುಗಳ ಪ್ರಾಬಲ್ಯವು ಕಾಣಬರುತ್ತದೆ. ಹೀಗಿರುವಾಗ ಅಶಿಕ್ಷಿತ ಮತ್ತು ಹಿಂದುಳಿದ ಸಮಾಜದ ಇಡೀ ನಂಬಿಕೆ ಇವುಗಳ ಮೇಲಿರುವುದು ಆಶ್ಚರ್ಯವೇನಿದೆ? ಈ ಅಜ್ಞಾನಮೂಲ ತಿಳಿವಳಿಕೆಯು ಕಾರಣದಿಂದಲೇ ದಿಕ್ಕುಕಾಣದೆ ದಾರಿಯನ್ನು ಹುಡುಕಲು ಯಜ್ಞ, ತಪಸ್ಸು, ಶಾಪ, ವರ, ಆಶೀರ್ವಾದ, ಆಕಾಶವಾಣಿ ಮುಂತಾದವುಗಳ ಆಧಾರವನ್ನು ಪಡೆದಿದ್ದಾಗಿರಬೇಕು. ಇದರಿಂದಾಗಿ ಮಕ್ಕಳಿಲ್ಲದವರಿಗೆ ಯಜ್ಞ ತಪಸ್ಸುಗಳಿಂದ ಮಕ್ಕಳಾಗುವುದಲ್ಲದೆ, ಸ್ತ್ರೀ ಪುರುಷಸಂಬಂಧವಿಲ್ಲದಿದ್ದರೂ ಮಕ್ಕಳಾಗುತ್ತವೆಯೆಂಬ ಶ್ರದ್ಧೆಯು ಬೆಳೆಯುತ್ತಾ ಹೋಯಿತು. ಈ ಶ್ರದ್ಧೆಯಲ್ಲಿರುವ ಸತ್ಯಾಸತ್ಯತೆಯನ್ನು ಶೋಧಿಸಬೇಕಾಗಿದೆ. ಈ ತಿಳಿವಳಿಕೆಗೆ ಏನಾದರೂ ಶಾಸ್ತ್ರೀಯ ಬೆನ್ನೆಲುಬು ಇದೆಯೇ? ಸತ್ಯಾಂಶವೆಷ್ಟು? ಇವನ್ನು ಹುಡುಕಿ ನೋಡಬೇಕಾಗಿದೆ. ಮಹಾಭಾರತ ಮುಂತಾದ ಪುರಾಣ ಗ್ರಂಥಗಳಲ್ಲಿ ಮಾನವ ಯೋನಿ ಸಂ ಸಂಬಂಧವಿಲ್ಲದ ಜನನಗಳ ಉದಾಹರಣೆಗಳು ಕಂಡುಬರುತ್ತವೆ. ಅವುಗಳ ಸೂಕ್ಷ್ಮರೀತಿಯ ಅಭ್ಯಾಸ ಅಗತ್ಯವಾಗಿದೆ. ಇಲ್ಲಿ ಮಹಾಭಾರತದಲ್ಲಿ ಉಲ್ಲೇಖಿಸಿರುವ ಕೆಲವು ಜನ್ಮಕಥೆಗಳ ರಹಸ್ಯವನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ದ್ರೋಣನಿಂದ ಸೋತ ದ್ರುಪದನಿಗೆ ಸೇಡುತೀರಿಸಿಕೊಳ್ಳಬೇಕೆಂಬ ಕರುಬು ಇತ್ತು. ಅದಕ್ಕಾಗಿ ದ್ರೋಣನನ್ನು ಸೋಲಿಸುವಂಥ ಪರಾಕ್ರಮಿ ಮಗನನ್ನು ಪಡೆಯಲು ಅವನು ಯಜ್ಞಕುಂಡದಿಂದ ದೃಷ್ಟದ್ಯುಮ್ನ ಮತ್ತು ದ್ರೌಪದಿ ಇವರ ಜನ್ಮ ಉಂಟಾಯಿತು (ಆದಿ.ಪ. 166/39.41). ಇಷ್ಟೇ ಅಲ್ಲದೆ ಅವರು ಹುಟ್ಟಿದ ಸಮಯದಲ್ಲಿ ಆಕಾಶವಾಣಿಯಾಗಿ ಅವರ

ಭವಿಷ್ಯವೂ ಸಾರಲ್ಪಟ್ಟಿತು. ಆದ್ದರಿಂದ ಅವರ ಹುಟ್ಟು ಅಯೋನಿಸಂಭವವೆಂದು (ಯೋನಿ ಸಂಬಂಧವಿಲ್ಲದ ಹುಟ್ಟು) ಪರಿಗಣಿಸಲಾಗಿದೆ. ಆದರೆ ಅದು ನಿಜವಾಗಿ ಹಾಗೆ ಆಗಿದೆಯೆಂಬುದನ್ನು ಶೋಧಿಸಲು ಬೇರೆ ಉಲ್ಲೇಖಗಳ ವಿಚಾರವನ್ನು ಮಾಡಬೇಕಾಗಿದೆ. ದ್ರುಪದನ ಪರವಾಗಿ ನಡೆದ ಯಜ್ಞದ ಜವಾಬ್ದಾರಿಯನ್ನು ಯಾವ ಯಾಜ ಋಷಿಯು ಹೊತ್ತಿದ್ದನೋ ಅವನು ಅಗ್ನಿಯಲ್ಲಿ ಹವನಮಾಡಿದ ನಂತರ ಹವಿಸ್ಸನ್ನು ಸ್ವೀಕರಿಸಲು ದ್ರುಪದ ಪತ್ನಿಯನ್ನು ಕರೆದಾಗ ಆಕೆಯು ಆಗ ಸ್ವೀಕರಿಸಲು ತಿರಸ್ಕರಿಸಿದಳು. ಕಾರಣ–

ಅವಲಿಪ್ತಂ ಮುಖಂ ಬ್ರಹ್ಮನ್ ದಿವ್ಯಾನ್ ಗಂಧಾನ್ ಬಿಭರ್ಮಿ ಚ ।
ಸುತಾರ್ಥೇ ನೋಪಲಬ್ಧಾಸ್ಮಿ ತಿಷ್ಠ ಯಾಜ ಮಮ ಪ್ರಿಯೇ ॥

ಆ.ದಿ.ಪ. 166/37

'ನನ್ನ ಬಾಯಲ್ಲಿ ಎಲೆ ಅಡಕೆ ಬಣ್ಣವಿದೆ. ಮೈ ಮೇಲೆ ದಿವ್ಯವಾದ ಗಂಧ ಲೇಪವಿದೆ. ಪ್ರಿಯವಾದ ಮಗುವಿನ ಸಲುವಾಗಿ ಹವಿಸ್ಸನ್ನು ಸ್ವೀಕರಿಸಲು ಈಗ ಯೋಗ್ಯಳಲ್ಲ.' ಇದರಿಂದ ಯಜ್ಞಕ್ಕೆ ಮೊದಲು ದ್ರುಪದನು ತನ್ನ ಹೆಂಡತಿಯೊಡನೆ ಸಮಾಗಮವನ್ನು ಪಡೆದಿದ್ದನೆಂಬುದಕ್ಕೆ ಪುಷ್ಟಿದೊರೆತಂತಾಗುತ್ತದೆ. ದ್ರುಪದನ ಪತ್ನಿಯು ಗರ್ಭಧಾರಣಗೆ ಯೋಗ್ಯವಾದ ಸ್ಥಿತಿಯಲ್ಲಿರುವ ಸಮಯಕ್ಕೆ ಯಜ್ಞವು ಕೂಡಿಬಂದು ಯಜ್ಞಕ್ಕೆ ಶ್ರೇಯಸ್ಸನ್ನೂ ಕೊಟ್ಟಿರುವುದಾಗಿ ತಿಳಿದುಬರುತ್ತದೆ.

ದಿವೋದಾಸನ ಮಗ ಪ್ರತರ್ದನ. ಈತನ ಜನ್ಮದ ಬಗ್ಗೆ ಅನುಶಾಸನಪರ್ವದಲ್ಲಿ ಈ ರೀತಿ ಉಲ್ಲೇಖವಿದೆಃ

ತತ ಇಷ್ಟಿಂ ಚಕಾರರ್ಷಿಸ್ತಸ್ಯ ವೈ ಪುತ್ರಕಾಮಿಕೀಂ ।
ಅಥಾಸ್ಯ ತನಯೋ ಜಜ್ಞೇ ಪ್ರತರ್ದನ ಇತಿ ಶ್ರುತಃ ॥ 30/30

ಭಾರದ್ವಾಜ ಋಷಿಯು ದಿವೋದಾಸನಿಗಾಗಿ ಪುತ್ರಕಾಮೇಷ್ಟಿಯನ್ನು ಆಚರಿಸಿದನು. ಮುಂದೆ ದಿವೋದಾಸನಿಗೆ ಪ್ರತರ್ದನ ಎಂಬ ಹೆಸರಿನ ಪ್ರಖ್ಯಾತ ಮಗನು ಹುಟ್ಟಿದನು. ಉದ್ಯೋಗ ಪರ್ವದಲ್ಲಿ ಯಯಾತಿಯ ಮಗಳಾದ ಮಾಧವಿಯ ಕತೆಯು ವಿಸ್ತಾರವಾಗಿ ವರ್ಣಿತವಾಗಿದೆ (115/120). ಪ್ರತರ್ದನನು ಈ ಮಾಧವಿಯಿಂದ ದಿವೋದಾಸನಿಗೆ ಹುಟ್ಟಿದ ಮಗನು ಎಂಬುದರಲ್ಲಿ ಯಾವ ಸಂಶವೂ ಇರದಷ್ಟು ಸ್ಪಷ್ಟವಾದ ಉಲ್ಲೇಖವಿದೆ. ಮಾಧವಿಗೆ ಓರ್ವ ಬ್ರಹ್ಮನಿಷ್ಠನು 'ಪ್ರಸೂತ್ಯಂತೇ ಪ್ರಸೂತ್ಯಂತೇ ಕನ್ಯೈವ ತ್ವಂ ಭವಿಷ್ಯಸಿ' (ಉದ್ಯೋಗ 116/11)– 'ಪ್ರತಿ ಹೆರಿಗೆಯಾದ ಮೇಲೆ ನೀನು ಕನ್ಯೆಯಾಗಿಯೇ ಆಗುವಿ' ಎಂಬ ವರವನ್ನು ಕೊಟ್ಟಿದ್ದನು. ಇದರಿಂದ ಹೆರಿಗೆಯಾದ ಮೇಲೂ ಆಕೆಯ ಕೌಮಾರ್ಯವು ಬಾಧವಿಲ್ಲದೆ ಉಳಿಯುತ್ತದೆಯೆಂಬ ಖಾತ್ರಿ ಇದ್ದುದರಿಂದ, ಗಾಲವನು ಕೊಡಬೇಕಾಗಿದ್ದ ಗುರುದಕ್ಷಿಣೆಯನ್ನು ತುಂಬಿಸುವ ಸಲುವಾಗಿ ತಾನು ಯಾವುದೇ ಪುರುಷನ ಬಳಿ ಇರಲು ಮತ್ತು ಅವನಿಂದ ಮಗನನ್ನು ಪಡೆಯಲು ತಯಾರಾಗಿರುವುದಾಗಿ ಸ್ವತಃ ಗಾಲವನಿಗೆ ಹೇಳುತ್ತಾಳೆ. ದಿವೋದಾಸನ ಬಳಿಗೆ ಬರುವ ಮೊದಲು ಆಕೆಯು ಓರ್ವ ಮಗನು ಹುಟ್ಟುವ ತನಕ ಹರ್ಯಶ್ವನ ಬಳಿ ಇದ್ದಳು. ಗಾಲವನಿಗೆ ಗುರುದಕ್ಷಿಣೆಗಾಗಿ ಹರ್ಯಶ್ವನಿಂದ ಪಡೆದ ಇನ್ನೂರು ಕುದುರೆಗಳಂತೆ

ದಿವೋದಾಸನಿಂದಲೂ ಇನ್ನೂರು ಕುದರೆಗಳು ಬೇಕಾಗಿದ್ದುದರಿಂದ, ದಿವೋದಾಸನೂ ಆಕೆಯಿಂದ ಒಂದೇ ಮಗನನ್ನು ಪಡೆಯಬೇಕೆಂದು ಇಚ್ಛಿಸುತ್ತಿದ್ದನು.

'ಅಹಮಪ್ಯೇಕಮೇವಾಸ್ಯಾಂ ಜನಯಿಷ್ಯಾಮಿ ಪಾರ್ಥಿವಮ್' (117/6)

ಆಕೆಯಿಂದ ಅವನಿಗೆ ಹುಟ್ಟಿದ ಮಗನ ಹೆಸರು ಪ್ರತರ್ದನ ಎಂದು ಹೇಳಲಾಗಿದೆ. ಮಕ್ಕಳಿಲ್ಲದ ಭಂಗಾಸ್ವನ ರಾಜನು ಮಕ್ಕಳನ್ನು ಪಡೆಯಲು 'ಅಗ್ನಷ್ಟುತ್' ಎಂಬೀ ಹೆಸರಿನ ಯಜ್ಞವನ್ನು ಆಚರಿಸಿದ್ದರಿಂದ ಅವನಿಗೆ ಯಜ್ಞದ ಫಲವೆಂದು ನೂರು ಗಂಡುಮಕ್ಕಳಾದವು.

'ಇಷ್ಟೇನಾಗ್ನಿಷ್ಟುತಾ ಚಾಪಿ ಪುತ್ರಾಣಾಂ ಶತಮೌರಸಮ್' (ಅನು. 12/12)

ಈ ಶ್ಲೋಕದಲ್ಲಿನ 'ಔರಸ್' ಎಂಬೀ ಪದವನ್ನು ಗಮನಿಸಿದರೆ ಪುತ್ರಪ್ರಾಪ್ತಿಯು ಸ್ತ್ರೀ ಪುರುಷ ಮಿಲನದಿಂದ ಆಗಿದೆಯೆಂಬುದರಲ್ಲಿ ಸಂಶಯವು ಉಳಿಯುವುದಿಲ್ಲ. ಯಜ್ಞವು ಕೇವಲ ನಿಮಿತ್ತ ಮಾತ್ರ, (ಔರಸ್ = born of oneself ಆಪ್ಟೆ ಸಂಸ್ಕೃತ ಕೋಶ).

ಸೋಮಕನಿಗೆ ನೂರು ಹೆಂಡತಿಯರಿದ್ದರೂ ಒಬ್ಬನೇ ಮಗನಿದ್ದನು. ಒಬ್ಬ ಮಗನನ್ನು ಹೊಂದಿರುವುದಕ್ಕಿಂತ ಮಗನಿಲ್ಲದಿರುವುದೇ ಲೇಸೆಂದು ಭಾವಿಸಿದ್ದನು. ಮತ್ತೊಬ್ಬ ಮಗನನ್ನು ಪಡೆಯುವ ಇಚ್ಛೆ ಇತ್ತು. ತನ್ನ ಹಾಗೂ ಹೆಂಡತಿಯರ ಹೆಚ್ಚುತ್ತಿರುವ ವಯಸ್ಸು ಗಮನಿಸಿ ಆತನು ತುಂಬ ನಿರಾಶನಾಗಿದ್ದನು. ಹೆಚ್ಚು ಮಕ್ಕಳನ್ನು ಪಡೆಯಲು ಉಪಾಯವನ್ನು ಸೂಚಿಸಲು ಓರ್ವ ಋತ್ವಿಕ್ ಬ್ರಾಹ್ಮಣನಿಗೆ ಉಪಾಯವು ಗೊತ್ತಿತ್ತು. ಆದರೆ ಅದು ಅತ್ಯಂತ ಘೋರವೂ ಮತ್ತು ಅಮಾನುಷವೂ ಆಗಿತ್ತು. ಅಂತೆಯೇ ಅವನು ರಾಜನಿಗೆ ಅದನ್ನು ಸ್ಪಷ್ಟವಾಗಿ ಹೇಳಿದನು. ರಾಜನಾದರೋ ಮಕ್ಕಳನ್ನು ಪಡೆಯಲು ಯಾವುದೇ ಅಸಹ್ಯವಾದ ಕೆಲಸವನ್ನು ಮಾಡಲು ಸಿದ್ಧನಿದ್ದನು. ರಾಜನಿಗೆ ಯಜ್ಞಮಾಡುವಂತೆ ಹೇಳಿ, ಯಜ್ಞದ ಅಗ್ನಿಯಲ್ಲಿ ಆತನ ಒಬ್ಬನೇ ಆದ ಮಗನನ್ನು ಹವನಮಾಡಿದ್ದೇ ಆದರೆ ಅನೇಕ ಮಕ್ಕಳಾಗುತ್ತವೆಯೆಂಬ ಆಶ್ವಾಸನೆಯನ್ನು ಕೊಟ್ಟನು. ರಾಜನು ಒಪ್ಪಿಗೆ ಇತ್ತನು. ಆದರೆ ಹೆಂಡತಿಯರು ತುಂಬ ಶೋಕಾಕುಲರಾದರು. ಅವರನ್ನು ಲೆಕ್ಕಿಸದೆ ಮತ್ತು ಒಬ್ಬನೇ ಆದ ಮಗನ ದುಃಖದ ಚೀರಾಟವನ್ನು ಗಮನಿಸದೆ ಅವನನ್ನು ಅಗ್ನಿಯಲ್ಲಿ ಆಹುತಿಯಾಗಿ ಹಾಕಿದನು.

ಆರ್ತಾನಿಪೇತುಃ ಸಹಸಾ ಪೃಥಿವ್ಯಾಂ ಕುರುನಂದನ ।
ಸರ್ವಾಶ್ಚ ಗರ್ಭಾನಲಭಂಸ್ತತಸ್ತಾಃ ಪರಮಾಂಗನಾಃ ॥(ವನ 128/6)

ಅಗ್ನಿಯಲ್ಲಿ ಬಿದ್ದ ಮಾಂಸಖಂಡಗಳ ಹೊಗೆಯು ಮೂಗಿನೊಳಗೆ ಹೊಕ್ಕಿದ್ದರಿಂದ ಶೋಕಾರ್ತರಾದ ರಾಣಿಯರು ಭೂಮಿಯ ಮೇಲೆ ಬಿದ್ದರು ಮತ್ತು ಗರ್ಭಿಣಿಯರಾದರು. ಪತಿಯ ಸಂಗವಿಲ್ಲದೆ ಅವರು ಗರ್ಭಿಣಿಯರಾದರು ಎಂಬುದನ್ನು ಭಾವಿಸಲು ಯಾವುದೇ ಬಲವಾದ ಉಲ್ಲೇಖವಿಲ್ಲ. ಮೂಗಿನೊಳಗೆ ಹೊಕ್ಕಿದ್ದ ಹೊಗೆ ಸ್ತ್ರೀ ದೇಹದಲ್ಲಿ ಗರ್ಭಧಾರಣೆಗೆ ಅನುಕೂಲವಾದ ಬದಲಾವಣೆಯನ್ನು ಉಂಟುಮಾಡಲು ಉಪಯುಕ್ತವಾಯಿತೆಂಬುದನ್ನು ತಿರಸ್ಕರಿಸಲು ಬರುವುದಿಲ್ಲ. ಸ್ವಾಯಂಭುವಮನು (ಅನು. 14) ಮತ್ತು ಗರ್ಗ (ಅನು. 18) ಇವರು ಯಜ್ಞವನ್ನು ಮಾಡಿ

ಶಂಕರನನ್ನು ಒಲಿಸಿಕೊಂಡಾಗ ಪ್ರತಿಯೊಬ್ಬನಿಗೂ ಒಂದು ಸಾವಿರ ಮಕ್ಕಳಾದವೆಂಬ ಉಲ್ಲೇಖವಿದೆ. ಆದರೆ ಬೇರೆ ಯಾವುದೇ ಪ್ರಮಾಣವಿಲ್ಲದಿರುವುದರಿಂದ ಅದು ಬರೀ ಯಜ್ಞದ ಫಲವೇ ಆಗಿದೆಯೆಂದು ನಿಶ್ಚಯವಾಗಿ ಹೇಳುವುದು ಸರಿ ಕಾಣದು. ಮಹಾಭಾರತದಲ್ಲಿ ನೂರರಿಂದ ಸಾವಿರ ಅರವತ್ತು ಸಾವಿರದ ವರೆಗೆ ಮಕ್ಕಳಾದ ವಿಚಾರವಂತು ನಿಜವಾಗಿ ವಿಸ್ಮಯಕಾರಿಯಾಗಿದೆ. ಅದರಲ್ಲಿ ಅಡಗಿರುವ ಅತಿಶಯೋಕ್ತಿ ಶಕ್ಯಾಶಕ್ಯತೆ ಇವು ಸ್ವತಂತ್ರ ವಿಚಾರದ ವಿಷಯಗಳಾಗಿವೆ.

ಯಜ್ಞದಂತೆ ತಪಶ್ಚರ್ಯೆಯಿಂದ ಸ್ತ್ರೀ ಪುರುಷ ಮಿಲನವಿಲ್ಲದೆ ಮಕ್ಕಳಾಗುತ್ತವೆಯೆಂಬ ತಿಳಿವಳಿಕೆ ಇದೆ. ಮಹಾಭಾರತದಲ್ಲಿ ಸಿಗುವ ಇಂಥ ಪ್ರಕಾರದ ನಾಲ್ಕಾರು ಉದಾಹರಣೆಗಳು ಬಹುಮಟ್ಟಿಗೆ ಶಂಕೆಗೆ ಒಳಗಾಗುತ್ತವೆ. ಏಕೆಂದರೆ ಬರೀ ತಪಶ್ಚರ್ಯೆಯಿಂದಲೇ ಮಕ್ಕಳಾದ ವೆಂಬುದನ್ನು ಸ್ಥಾಪಿಸಲು ಯಾವುದೇ ಬಲವಾದ ಪ್ರಮಾಣವು ಕಂಡುಬರುವುದಿಲ್ಲ. ಸಗರನು ಮಕ್ಕಳನ್ನು ಪಡೆದ ಕಥೆಯು ಮಹಾಭಾರತದಲ್ಲಿ ವಿಸ್ತಾರವಾಗಿ ಬಂದಿದೆ. ಸಗರನು ತನ್ನ ವೈದರ್ಭೀ ಮತ್ತು ಶೈಬ್ಯಾ ಎಂಬೀ ಹೆಂಡತಿಯರೊಡನೆ ಕೈಲಾಸ ಪರ್ವತಕ್ಕೆ ಹೋಗಿ ಅಲ್ಲಿ ಘೋರತಪಸ್ಸನ್ನು ಆಚರಿಸಿದಾಗ ಶಂಕರನನ್ನು ಒಲಿಸಿಕೊಂಡನು. ಶಂಕರನು ವರವನ್ನು ಕೊಡುವಾಗ ಶೈಬ್ಯಳು ಒಂದು ಮಗನನ್ನು, ವೈದರ್ಭಿಯು ಅರವತ್ತು ಸಾವಿರಗಂಡು ಮಕ್ಕಳನ್ನು ಇಚ್ಛಿಸಿದಳು. ಶಂಕರನು ನಿಮ್ಮ ಇಚ್ಛೆಯಂತೆ ಮಕ್ಕಳಾಗುವುದಾಗಿ ವರವನ್ನಿತ್ತನು. ವರವನ್ನು ಪಡೆದ ಮೇಲೆ

....ಸಗರೋ ರಾಜಾ ಜಗಾಮ ಸ್ವಂ ನಿವೇಶನಮ್ ।
ಪತ್ನೀಭ್ಯಾಂ ಸಹಿತ ಸ್ತತ್ರ ಸೊ ऽತಿ ಹೃಷ್ಟಮನಾಸ್ತದಾ ॥

(ವನ 106/17)

ತಸ್ಯತೇ ಮನುಜಶ್ರೇಷ್ಠ ಭಾರ್ಯೇ ಕಮಲಲೋಚನೇ ।
ವೈದರ್ಭೀ ಚೈವ ಶೈಬ್ಯಾ ಚ ಗರ್ಭಿಣ್ಯೌ ಸಂಬಭೂವತುಃ ।

(ವನ 106/18–19)

ರಾಜನು ತನ್ನ ಹೆಂಡತಿಯರೊಡನೆ ತನ್ನ ಮನೆಗೆ ಹಿಂತಿರುಗಿದನು. ರಾಣಿಯರಿಗೆ ಅನಂತರ ಗರ್ಭಧಾರಣೆಯಾಗಿದೆ. ಆದ್ದರಿಂದ ಇದಕ್ಕಿಂತ ಹೆಚ್ಚು ಸ್ಪಷ್ಟೀಕರಣದ ಅವಶ್ಯಕತೆ ಇಲ್ಲ. ವೈದರ್ಭೀ ಅರವತ್ತು ಸಾವಿರ ಮಕ್ಕಳಿಗೆ ಜನ್ಮವನ್ನು ಕೊಡದೆ ಆಕೆಯ ಹೊಟ್ಟೆಯಿಂದ ಬರೀ ಒಂದು ಕುಂಬಳಕಾಯಿ ಹೊರಬಂದಿತು. ಹೆಣ್ಣಿನ ಹೊಟ್ಟೆಯಿಂದ ಕುಂಬಳಕಾಯಿ ಹೊರಬರುವುದು, ಅವುಗಳ ಬೀಜಗಳನ್ನು ತುಪ್ಪದಲ್ಲಿ ಹಾಕಿದ ಮೇಲೆ ಅವುಗಳಿಗೆ ಮನುಷ್ಯ ದೇಹವುಂಟಾಗುವುದು, ಅವುಗಳ ಚರ್ಚೆಯನ್ನು ಇಲ್ಲಿ ಮಾಡಬೇಕಾದ ಕಾರಣವಿಲ್ಲ. ವರವನ್ನು ಪಡೆದ ಮೇಲೆ ರಾಜನು ಮತ್ತು ಆತನ ಹೆಂಡತಿಯರು ಒಂದೇ ಸ್ಥಳದಲ್ಲಿ ವಾಸ ಮಾಡಿದರೆಂಬುದನ್ನು ಕಡೆಗಣಿಸುವಂತಿಲ್ಲ. ಆದ್ದರಿಂದಲೇ ಸಗರನಿಗೆ ಆದ ಮಕ್ಕಳು ಬರೀ ತಪಶ್ಚರ್ಯೆಯ ಫಲವೆಂದು ಹೇಳಲಾಗುವುದಿಲ್ಲ. ಅದಿತಿಯು ಮುನ್ನೂರು ವರ್ಷಗಳ ಕಾಲ ಒಂದೇ ಕಾಲಿನ ಮೇಲೆ ನಿಂತುಕೊಂಡು ಕಠಿಣವಾದ ತಪಸ್ಸನ್ನು ಮಾಡಿದಳು. ಕಾರಣ ಆಕೆಯ ಹೊಟ್ಟೆಯಲ್ಲಿ ವಿಷ್ಣುವು ಜನ್ಮ ತಾಳಿದನು (ಅನು 83/26–27). ಬಾಲಧಿ (ವನ 135/46), ತಂಡಿ (ಅನು 16/70), ಚಾರುಶೀರ್ಷ (ಅನು 187)

ಇವರು ತಪಶ್ಚರ್ಯೆಯಿಂದ ಮಕ್ಕಳನ್ನು ಪಡೆದ ಬಗ್ಗೆ ಕೇವಲ ಉಲ್ಲೇಖವಿದೆ. ಸ್ತ್ರೀ ಪುರುಷ ಮಿಲನವು ಆಯಿತೋ ಇಲ್ಲವೋ ಎಂಬುದಕ್ಕೆ ಯಾವುದೇ ವಿವರ ಸಿಗುವುದಿಲ್ಲ.

ವರದಾನದಿಂದ ಸಂತತಿಯು ಉಂಟಾದ ಕತೆಗಳು ಮಹಾಭಾರತದಲ್ಲಿ ವಿಪುಲವಾಗಿವೆ. ಆದರೆ ಅವುಗಳಲ್ಲೂ ಸ್ತ್ರೀ ಪುರುಷರ ಮಿಲನವಿಲ್ಲದೆ ಕೇವಲ ವರದ ಪರಿಣಾಮವಾಗಿ ಉಂಟಾದ ಮಕ್ಕಳು ಎಷ್ಟಿವೆಯೆಂಬುದನ್ನು ಹುಡುಕಿ ನೋಡಬೇಕಾಗಿದೆ. ಗಾಂಧಾರಿಗೆ ನೂರು ಮಕ್ಕಳಾಗುತ್ತವೆಯೆಂದು ವ್ಯಾಸರು ಯಾವ ವರವನ್ನು ಕೊಟ್ಟರೋ ಅದು ಬರೀ ಆಶೀರ್ವಾದವೇ ಆಗಿತ್ತು. ಏಕೆಂದರೆ 'ಕಾಲೇನ ಸಾಗರ್ಭಂ ಧೃತರಾಷ್ಟ್ರಾದಥಾಗೃಹೀತ್' (ಆದಿ 114/9) ಎಂಬೀ ಸ್ಪಷ್ಟವಾದ ಉಲ್ಲೇಖವಿದೆ. ಧೃತರಾಷ್ಟ್ರ–ಗಾಂಧಾರಿಯವರಿಗೆ ಪಾಂಡುವಿಗೆ ಒದಗಿದ ಅಡಚಣೆಯು ಬಂದಂತೆ ಕಂಡುಬರುವುದಿಲ್ಲ. ಗಾಂಧಾರಿ ಹೊಟ್ಟೆಯಲ್ಲಿ ನೂರು ಮಕ್ಕಳು ಹುಟ್ಟಲಿಲ್ಲ. ಆಕೆ ಬರೀ ಮಾಂಸದ ಒಂದು ಮುದ್ದೆಯನ್ನು ಹೆತ್ತಳು. ಮುಂದೆ ನೂರು ಹೋಳುಗಳಾಗಿ, ಅವು ತುಪ್ಪದ ಕೊಪ್ಪರಿಗೆಯಲ್ಲಿ ಇಡಲ್ಪಟ್ಟವು– ಇವೇ ಮುಂತಾದ ವಿಷಯಗಳು ಸಗರನ ಕಥೆಯಂತೆ ಕಂಡುಬರುತ್ತವೆ. ಇವನ್ನು ಒಂದು ಕ್ಷಣ ದೂರ ಸರಿಸಿ ಇಟ್ಟರೂ ನೂರುಮಕ್ಕಳನ್ನು ಪಡೆದ ವಿಚಾರವು ವ್ಯಾಸರ ವರದಾನದಷ್ಟೇ ಈ ತುಪ್ಪದ ಪ್ರಯೋಗದ ಪರಿಣಾಮವೆಂದು ಪರಿಗಣಿಸಬೇಕಾಗಿದೆ.

ಸಾವಿತ್ರಿಗೆ ಯಮನು ಪ್ರಸನ್ನನಾಗಿ ಯಾವ ವರಗಳನ್ನು ಇತ್ತನೋ ಆ ಪೈಕಿ ಮೂರು ಮತ್ತು ನಾಲ್ಕನೆಯ ವರಗಳ ಶಬ್ದಯೋಜನೆಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಮೂರನೆಯ ವರದಂತೆಗಂಡು ಮಕ್ಕಳಿಲ್ಲದ ತಂದೆಗೆ ನೂರುಮಕ್ಕಳಾಗಬೇಕೆಂದು ಕೇಳಿಕೊಂಡು ಹೇಳುತ್ತಾಳೆ–

ಮಮಾನ ಪತ್ಯಃ ಪೃಥಿವೀಪತೀಃ ಪಿತಾ |
ಭವೇತ ಪಿತುಃ ಪುತ್ರಶತಂ ತಥೌರಸಮ್ || (ವನ. 297/38)

ಮತ್ತು ತನಗಾಗಿ–

ಮಮಾತ್ಮಜಂ ಮತ್ಯವತಸ್ತಥೌರಸಂ |
ಭವೇದುಭಾಭ್ಯಾಮಿಹ ಯತ್ ಕುಲೋದ್ವಹಮ್ ||
(ವನ. 297/45)

ತಾನು ಮತ್ತು ಸತ್ಯವಾನ್ ಈ ಇಬ್ಬರ ಮಿಲನದಿಂದ ಕುಲವೃದ್ಧಿಯನ್ನು ಉಂಟುಮಾಡುವ ಮಗನನ್ನು ಕೇಳಿಕೊಂಡಳು. ಈ ಎರಡೂ ವರಗಳಲ್ಲಿ 'ಔರಸ್'(ಶರೀರದಿಂದ ಹುಟ್ಟಿದ್ದು) ಶಬ್ದವನ್ನು ಗಮನಿಸಿದರೆ ಮಕ್ಕಳಾದರೂ ಬರೀ ವರದಾನದಿಂದಲ್ಲ, ಪತಿ ಪತ್ನಿಯರ ಸಂಬಂಧದಿಂದ ಎಂಬುದು ಸ್ಪಷ್ಟವಾಗಿದೆ. ಇಂಥ ಸಂಬಂಧದಿಂದಲೇ ಆಗಬೇಕೆಂದು ಆಕೆಯ ಅಪೇಕ್ಷೆಯಾಗಿತ್ತು. ತನಗಾಗಿ ವರವನ್ನು ಕೇಳಿಕೊಳ್ಳುವಾಗ ಆಕೆಗೆ ಔರಸ್ ಶಬ್ದವು ಸಾಲದಾಗಿ ಕಂಡುಬಂದು, ಸತ್ಯವಾನನ ಹೆಸರನ್ನು ಹೇಳಿ ಮತ್ತೆ 'ಭವೇದುಭಾಭ್ಯಾಂ' (ನಮ್ಮಿಬ್ಬರಿಂದ) ಎಂದೂ ಸ್ಪಷ್ಟ ಪಡಿಸುತ್ತಾಳೆ. ಸಾವಿತ್ರೀದೇವಿಯು ಪ್ರಸನ್ನಳಾಗಬೇಕು, ಈ ಉದ್ದೇಶದಿಂದ ಕೂಡಿದ ಅನುಷ್ಠಾನದ

ಫಲವೆಂದೇ ಸಾವಿತ್ರಿ ಹುಟ್ಟಿದಳು ಎಂದು ಹೇಳಲಾಗುವುದಿಲ್ಲ. ಏಕೆಂದರೆ

ಕಸ್ಮಿಂಶ್ಚಿತ್ ತು ಗತೇ ಕಾಲೇ ಸ ರಾಜಾ ನಿಯತ ವ್ರತಃ ।
ಜ್ಯೇಷ್ಠಾಯಾಂ ಧರ್ಮಚಾರಿಣ್ಯಾಂ ಮಹಿಷ್ಯಾಂ ಗರ್ಭಮಾದಧೇ ॥
(ವನ. 293/21)

ಉತ್ತಮ ವ್ರತವನ್ನು ಆಚರಿಸುವ ಅಶ್ವಪತಿಯು ತನ್ನ ಹಿರಿಯ ಹೆಂಡತಿಯಲ್ಲಿ ಗರ್ಭವನ್ನು ಸ್ಥಾಪಿಸಿದನೆಂದು ಸ್ಪಷ್ಟವಾದ ಉಲ್ಲೇಖನವಿದೆ.

ಭೀಷ್ಮನನ್ನು ಕೊಲ್ಲುವ ಸಾಮರ್ಥ್ಯವುಳ್ಳ ಮಗನು ಬೇಕೆಂಬ ಉದ್ದೇಶದಿಂದ ದ್ರುಪದನು ಶಂಕರನನ್ನು ಸಂತೋಷಗೊಳಿಸಿದನು. ಅವನು ಪ್ರಸನ್ನನಾಗಿ ಅಂಥ ಮಗನನ್ನು ಪಡೆಯುವಂಥ ವರವನ್ನು ಕೊಟ್ಟನು. ಇದಾದನಂತರ ದ್ರುಪದನಿಗೆ ಮಕ್ಕಳಾದವು. ಮೊಲನೆಯದು ಕನ್ಯೆ ಅನಂತರ ಗಂಡು—ಶಿಖಂಡಿ. ಈ ಮಕ್ಕಳಾದುದು ವರದಾನದಿಂದ ಅಲ್ಲ. ಪತಿ ಪತ್ನಿ ಸಂಬಂಧ ದಿಂದಲೇ. ಈ ಬಗ್ಗೆ ಯಾವ ಸಂದೇಹವೂ ಬಾರದಷ್ಟು ಸ್ಪಷ್ಟವಾದ ಉಲ್ಲೇಖವಿದೆ :

ತತಃ ಸಾ ನಿಯತಾ ಭೂತ್ವಾ ಋತುಕಾಲೇ ಮನಸ್ವಿನೀ ।
ಪತ್ನೀ ದ್ರುಪದರಾಜಸ್ಯ ದ್ರುಪದಂ ಪ್ರವಿವೇಶ ಹ ॥
ಲೇಭೇ ಗರ್ಭಂ ಯಥಾಕಾಲಂ .... (ಉದ್ಯೋಗ–188/9–10)

'ದ್ರುಪದ ಪತ್ನಿಯು ನಿಯಮದಿಂದ ನಡೆದುಕೊಂಡು ಋತುಕಾಲದಲ್ಲಿ ದ್ರುಪದನೊಡನೆ ಕೂಡಿಕೊಂಡು, ಗರ್ಭವನ್ನು ಧರಿಸಿದಳು'. ಶ್ರೀಕೃಷ್ಣನ ಹೆಂಡತಿಯಾದ ಜಾಂಬವತಿಗೆ ಮಗನು ಹುಟ್ಟಿದ್ದು ವರಪ್ರಸಾದದಿಂದಲ್ಲ, ಪತಿ ಪತ್ನಿಯರ ಮಿಲನದಿಂದ. ಪತಿಯ ರೂಪ ಗುಣಗಳಿಗೆ ಸಾಟಿಯಾದ ಮಗನು ತನ್ನ ಹೊಟ್ಟೆಯಲ್ಲಿ ಹುಟ್ಟಬೇಕೆಂಬ ಕಾರಣದಿಂದ ಶ್ರೀಕೃಷ್ಣನಿಗೆ ಹೇಳುತ್ತಾಳೆ—

ಯಥಾತೇ ಜನಿತಾಃ ಪುತ್ರಾ ರುಕ್ಮಿಣ್ಯಾಂ ಚಾರುವಿಕ್ರಮಾಃ ।
ತಥಾ ಮಮಾಪಿ ತನಯಂ ಪ್ರಯಚ್ಛಮಧುಸೂದನ ॥ (ಅನು 14/34)

ರುಕ್ಮಿಣಿಯಲ್ಲಿ ನಿನ್ನಿಂದ ಹೇಗೆ (ಪ್ರದ್ಯುಮ್ನ–ಚಾರುದೇಷ್ಣ ಮುಂತಾದವರು) ಮಕ್ಕಳು ಹುಟ್ಟಿದವೋ ಹಾಗೆ ನನಗೂ ' ತನಯಂ ಪ್ರಯಚ್ಛಸ್ವ' ಮಗನನ್ನೂ ಕೊಡು. ಜಾಂಬವತಿಯು ವರವನ್ನು ಕೇಳಿಕೊಳ್ಳಲಿಲ್ಲ. ಆಕೆಯ ಬೇಡಿಕೆಯೆಂದರೆ ಪತಿ ಬಳಿ ಪತ್ನಿಯ ಪ್ರಚೋದಿಸುವ ಹಟವೆಂದು ತಿಳಿಯಬೇಕು.

ಪರಾಶರನು ತನಗೆ ಮಹಾಯೋಗಿಯೂ ವೇದಗಳನ್ನು ವಿಂಗಡಿಸುವವನೂ ಆದ (ವೇದವ್ಯಾಸ) ಮಗನನ್ನು ಪಡೆಯಬೇಕೆಂಬ ಉದ್ದೇಶದಿಂದ ಶಂಕರನನ್ನು ಒಲಿಸಿಕೊಂಡನು. ಅಂತೆಯೇ ಶಂಕರನು 'ಮಯಿ ಸಂಭಾವನಾ ಯಸ್ಯಾಃ ಫಲಾತ್ ಕೃಷ್ಣೋ ಭವಿಷ್ಯತಿ' (ಅನು 18/42) ಎಂದು ಹೇಳಿದನು. ಹೀಗಿದ್ದರೂ ವ್ಯಾಸರ ಜನ್ಮವು ಪರಾಶರನು ಹಾಡುಹಗಲಿನಲ್ಲೇ ದೋಣಿಯಲ್ಲಿ ಮತ್ಸ್ಯಗಂಧಿಯೊಡನೆ (ಸತ್ಯವತಿ) ಮಾಡಿದ ಸಮಾಗಮದ ಪರಿಣಾಮವೇ

ಆಗಿದೆ. ಇದನ್ನು ಸಿದ್ಧಪಡಿಸಲು ಹೆಚ್ಚಿನ ಪ್ರಮಾಣಗಳ ಆವಶ್ಯಕತೆ ಇಲ್ಲ.

ತತೋ ಲಬ್ಧವರಾ ಪ್ರೀತಾ ಸ್ತ್ರೀಭಾವಗುಣಭೂಷಿತಾ ।
ಜಗಾಮ ಸಹ ಸಂಸರ್ಗಮೃಷಿಣಾದ್ಭುತ ಕರ್ಮಣಾ ॥

(ಆದಿ 63/81)

'ಸ್ತ್ರೀಭಾವಗುಣಭೂಷಿತಾ' ಅಂದರೆ ಋತು ಸ್ನಾನಮಾಡಿದ್ದ ಸತ್ಯವತಿಯು ಅದ್ಭುತ ಕರ್ಮವನ್ನು ಮಾಡುವ ಋಷಿಯ ಸಂಸರ್ಗವನ್ನು ಪಡೆದಳು. 'ಲಬ್ಧವರಾ' ಎಂಬೀ ಉಲ್ಲೇಖವು ಸಮಾಗಮ ನಂತರವೂ ಆಕೆಯ ಕೌಮಾರ್ಯವು ಅಬಾಧಿತವಾಗಿ ಉಳಿಯುತ್ತದೆಯೆಂಬ ಪರಾಶರರು ಕೊಟ್ಟ ಆಶ್ವಾಸನೆಯನ್ನು ಸೂಚಿಸುತ್ತದೆ. ಮೇಲೆ ಹೇಳಿದ ಎಲ್ಲ ಉದಾಹರಣೆಗಳಿಂದ ಕುಮಾರ ಸಂಭವವು ಸ್ತ್ರೀ ಪುರುಷರ ಮಿಲನದಿಂದ ಆಗಿದೆಯೇ ಹೊರತು ಕೇವಲ ವರ ಪ್ರಾಪ್ತಿಯಿಂದಲ್ಲವೆಂದು ಸ್ಪಷ್ಟವಾಗುತ್ತದೆ.

ಸ್ತ್ರೀ ಪುರುಷ ಸಂಯೋಗವು ಆದ ಅಥವಾ ಆಗದ ಬಗ್ಗೆ ಸ್ಪಷ್ಟವಾದ ಸೂಚನೆಯಾಗಲಿ ಅಥವಾ ಉಲ್ಲೇಖವಾಗಲಿ ಇಲ್ಲದಿರುವಾಗ ಉಂಟಾದ ಸಂತತಿಯು ಬರೀ ವರದಾನದಿಂದ ಆದದ್ದೆಂದು ಸ್ಪಷ್ಟವಾಗಿ ಹೇಳುವುದು ಅಥವಾ ಸಿದ್ಧಿಸುವುದು ದುಷ್ಕರವಾದುದು. ಹೇಳಲಿಲ್ಲವೆಂಬ ಲಾಭವನ್ನು ತೆಗೆದುಕೊಂಡು ಅನುಕೂಲವಾದ ಅರ್ಥವನ್ನು ಮಾಡುವುದು ಉಭಯ ಪಕ್ಷಗಳಿಗೂ ಅಶಕ್ಯವಲ್ಲ. ಆದರೆ ಈ ವಿಚಾರದಲ್ಲಿ ಮೌನವನ್ನು ತಾಳಿರುವ ಯಾವ ಉದಾಹರಣೆಯು ದೊರಕುತ್ತದೆಯೋ ಅದು ಸ್ತ್ರೀ ಪುರುಷರ ಮಿಲನವಿಲ್ಲದೆ ವರದಾನದಿಂದ ಉಂಟಾದ ಸಂತತಿಯ ಉದಾಹರಣೆಯೆಂದು ಭಾವಿಸುವ ಸರ್ವಸಾಧಾರಣವಾದ ಪ್ರವೃತ್ತಿಯು ಕಂಡುಬರುತ್ತದೆ.

ವಿದರ್ಭರಾಜನಾದ ಭೀಮಕನು ತನ್ನ ಹೆಂಡತಿಯೊಡನೆ ದಮನ ಋಷಿಯ ಸೇವೆಯನ್ನು ಮಾಡಿದಾಗ ಸಂತೋಷಗೊಂಡ ದಮನಋಷಿಯು ಕೊಟ್ಟ ವರದಿಂದ ಮೂರು ಗಂಡು ಮಕ್ಕಳನ್ನು ಮತ್ತು ಓರ್ವ ಕನ್ಯೆ ದಮಯಂತಿಯನ್ನು ಅವನು ಪಡೆದನು (ವನ 53/8). ಕಶ್ಯಪನು ತನ್ನ ಹೆಂಡತಿಯರಾದ ಕದ್ರೂ ಮತ್ತು ವಿನತಾ ಇವರಿಗೆ ವರವನ್ನು ಕೊಟ್ಟಾಗ ಅವರ ಇಚ್ಛೆಗೆ ಅನುರೂಪವಾಗಿ ಮಕ್ಕಳಾದವು (ಆದಿ. 16/6). ಬ್ರಹ್ಮದೇವನು ಪ್ರಸನ್ನನಾಗಿ ವೈಶ್ರವಣನಿಗೆ ಯಾವ ವರವನ್ನು ಕೊಟ್ಟನೋ ಅದರಲ್ಲಿ ಇತರ ಉಲ್ಲೇಖಗಳೊಡನೆ 'ಪುತ್ರಂಚ ನಲಕೂಬರಮ್' (ವನ. 274/16) ಎಂಬ ಉಲ್ಲೇಖವಿದೆ. ಪುಷ್ಪೋತ್ಕಟಾ, ರಾಕಾ, ಮತ್ತು ಮಾಲಿನೀ ಇವರು ತಮ್ಮ ಪತಿಯಾದ ವಿಶ್ರವನನ್ನು ಸಂತೋಷಗೊಳಿಸಿದ್ದರಿಂದ

..............................ಮಹಾತ್ಮಾ ಪ್ರದದೌ ವರಾನ್ ।
ಲೋಕಪಾಲೋಪಮಾನ್ ಪುತ್ರಾನೇಕೈಕಸ್ಯಾ ಯಥೇಪ್ಸಿತಾನ್ ॥

(ವನ 275/6)

ಅವರ ಇಚ್ಛೆಗೆ ಅನುಸಾರವಾಗಿ ಲೋಕಪಾಲಸಮರಾದ ಪುತ್ರರು ಆಗುವರು ಎಂಬ ವರವನ್ನು ಕೊಟ್ಟನು. ಸೃಂಜಯನಿಗೆ ಮಗನು ಹುಟ್ಟಬೇಕೆಂಬ ಆಸೆಯನ್ನು ಬ್ರಾಹ್ಮಣರು ನಾರದನ ಬಳಿ

ತೋಡಿಕೊಂಡಾಗ, ಆತನು ಸಂತುಷ್ಟನಾಗಿ ಸೃಂಜಯನ ಇಚ್ಛೆಗೆ ಅನುಸಾರವಾಗಿ, ಮೂತ್ರ, ಮಲ, ಶ್ಲೇಷ್ಮ ಮತ್ತು ಬೆವರು ಇವು ಚಿನ್ನವಾಗುವಂಥ 'ಸುವರ್ಣಷ್ಠೀವೀ' ಎಂಬ ಮಗನನ್ನು ಕೊಟ್ಟನು (ದ್ರೋಣ 55/23). ಭೂರಿಶ್ರವನ ಜನ್ಮ ಕಥೆಯೂ ಹೀಗೆ ಇದೆ. ಶಂಕರನು ಪ್ರಸನ್ನನಾಗಿ ಸೋಮದತ್ತನಿಗೆ ವರವನ್ನು ಬೇಡುವಂತೆ ತಿಳಿಸಿದಾಗ 'ಪುತ್ರಮಿಚ್ಛಾಮಿ ಭಗವನ್ ಯೋನಿಪಾತ್ಯ ಶಿನೇಃ ಸುತಮ್' '(ದ್ರೋಣ, 144/17), (ಶಿನಿ ಪುತ್ರನನ್ನು ಯುದ್ಧದಲ್ಲಿ ಉರುಳಿಸುವಂಥ ಮಗನು ಬೇಕು) ಎಂಬ ತನ್ನ ಇಚ್ಛೆಯನ್ನು ಹೇಳಿ ತಿಳಿಸಿದನು. ಶ್ರೀಕೃಷ್ಣನು ಶಂಕರ ಮತ್ತು ಪಾರ್ವತಿ(ಉಮಾ)ಯರಿಂದ ಪ್ರತ್ಯೇಕವಾಗಿ ಎಂಟೆಂಟು ವರಗಳನ್ನು ಪಡೆದನು. ಅದರಲ್ಲಿ ಮಕ್ಕಳನ್ನು ಪಡೆಯುವ ವಿಚಾರವು ಇದೆ. ಶ್ರೀಕೃಷ್ಣನು ಉಮೆಯಿಂದ ಕೇವಲ ಗಂಡು ಮಕ್ಕಳನ್ನು ಬೇಡಿದಾಗ, ಅವಳು ಗಂಡು ಮಕ್ಕಳನ್ನು ಮಾತ್ರ ಕೊಡದೆ ಹದಿನಾರು ಸಾವಿರ ಹೆಂಡತಿಯರನ್ನು ಅಯಾಚಿತವಾಗಿ (ಬೇಡದೆ) ಕೊಟ್ಟಳು.

> *ಭಾರ್ಯಾ ಸಹಸ್ರಾಣಿ ಚ ಷೋಡಶೈವ ।*
> *ತಾಸು ಪ್ರಿಯತ್ವಂ ಚ ತಥಾಕ್ಷಯಂ ಚ ॥* (ಅನು 15/7)

ಉಮೆಯ ಉದ್ದೇಶ ಸ್ಪಷ್ಟವಾಗಿದೆ. ಈ ಎಲ್ಲ ಕಥೆಗಳಲ್ಲಿರುವ ಕುಮಾರ ಸಂಭವವು ನಿಸರ್ಗ ಕ್ರಮಕ್ಕೆ ಅನುಗುಣವಾಗಿಯೇ ಉಂಟಾಗಿದೆ. ಆದರೆ ಆ ಬಗ್ಗೆ ಉಲ್ಲೇಖವಿಲ್ಲದಿರುವುದರಿಂದ ವರ ಪ್ರಾಪ್ತಿಗೆ ಮಹತ್ವವು ದೊರೆತಿರಬೇಕೆಂದು ಕಾಣಬರುತ್ತದೆ.

ಶಾಪದಂತೆ ವರವೂ ಒಂದು ವಾಕ್‌ಶಕ್ತಿಯಾಗಿದೆ. ಅದರ ಆವಿಷ್ಕಾರವು ಶಬ್ದೋಚ್ಚಾರದಿಂದಲೇ ಆಗುತ್ತಿರುವುದರಿಂದ ವರದ ರೂಪವು ಪ್ರಾಯಶಃ ಶಬ್ದರೂಪವಾಗಿಯೇ ಇರುತ್ತದೆ. ಆದರೆ ಕೆಲವು ವರಗಳಲ್ಲಿ ಶಬ್ದೋಚ್ಚಾರದ ಜೊತೆಗೆ ಯಾವುದಾದರೂ ಮೂರ್ತ ಸ್ವರೂಪದ ವಿಷಯವೂ ಪ್ರತ್ಯಕ್ಷವಾಗಿ ಬರುವುದುಂಟು. ಅದು ಶಬ್ದದಷ್ಟೇ ಪರಿಣಾಮಕಾರಿಯೆಂದು ಭಾವಿಸಲಾಗುತ್ತದೆ. ಮಗನನ್ನು ಪಡೆಯುವ ಉದ್ದೇಶದಿಂದ ದಶರಥನು ಪುತ್ರಕಾಮೇಷ್ಟಿಯೆಂಬ ಯಜ್ಞವನ್ನು ಮಾಡಿದಾಗ ಅವನಿಗೆ ಪಾಯಸವೂ ದೊರಕಿತು. ಈ ಪಾಯಸವು ಯಜ್ಞಪ್ರಸಾದ. ಇದು ಅನುಗ್ರಹವೇ ಹೊರತು ವರವಲ್ಲ. ವರ ಮತ್ತು ಅನುಗ್ರಹ ಇವೆರಡು ಲಭಿಸಿದಾಗ ಆ ಸಂದರ್ಭಕ್ಕೆ ಸಾನುಗ್ರಹ ವರವೆಂದು ಹೇಳುವುದು ಸರಿಯಾದೀತು. ಮಹಾಭಾರತದಲ್ಲಿನ ಜರಾಸಂಧ, ಮಾಂಧಾತೃ, ಜಮದಗ್ನಿ ಮತ್ತು ವಿಶ್ವಾಮಿತ್ರ ಇವರ ಜನ್ಮ ಕಥೆಗಳು ಈ ಸಾನುಗ್ರಹ ವರದ ಉದಾಹರಣೆಗಳೆಂದು ಹೇಳಬಹುದು. ಕಾಶೀರಾಜನ ಅವಳಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳುವಾಗ ಇಬ್ಬರನ್ನು ಸಮಾನವಾಗಿ ನಡೆಸಿಕೊಳ್ಳುವುದಾಗಿ ಬೃಹದಶ್ವ ರಾಜನು ಏನು ವಚನವನ್ನು ಕೊಟ್ಟನೋ ಅದನ್ನು ಅವನು ಯಥೋಚಿತವಾಗಿ ನಡೆಸಿಕೊಂಡು ಬಂದನು. ಹೆಂಡತಿಯರೊಡನೆ ಆತನು ಸುಖಿಯೂ ಸಮಾಧಾನ ಮನಸ್ಸುಳ್ಳವನೂ ಆಗಿದ್ದರೂ, ಆಕೆಯಿಂದ ಅವನಿಗೆ ಸಂತತಿವುಂಟಾಗಲಿಲ್ಲ.

> *ವಿಷಯೇಷು ನಿಮಗ್ನಸ್ಯ ತಸ್ಯ ಯೌವನಮಭ್ಯಗಾತ್ ।*
> *ನ ಚ ವಂಶಕರಃ ಪುತ್ರಸ್ತ ಸ್ಯಾಜಾಯತ ಕಶ್ಚನ ॥* (ಸಭಾ 17/20–21)

'ವಿಷಯಭೋಗದಲ್ಲಿ ಸಂಪೂರ್ಣ ಯೌವನವು ಕಳೆದುಹೋದರೂ ಅವನಿಗೆ ವಂಶವನ್ನು ಬೆಳಸುವ ಓರ್ವ ಮಗನೂ ಹುಟ್ಟಲಿಲ್ಲ' ಇದೇ ಆತನಿಗೆ ಒಂದು ವ್ಯಥೆಯಾಗಿತ್ತು. ಮಗನನ್ನು ಪಡೆಯುವ ಸಲುವಾಗಿ ಅವನು ಪುತ್ರೇಷ್ಟಿಹೋಮವನ್ನು ಮಾಡಿದನು. ಆದರೆ ಅದು ಫಲಿಸಲಿಲ್ಲ.

ಮಂಗಲ್ಯೈರ್ಬಹುಭಿರ್ಹೋಮೈಃ ಪುತ್ರಕಾಮಭಿರಿಷ್ಟಿಭಿಃ ।
ನಾಸಸಾದ ನೃಪಶ್ರೇಷ್ಠಃ ಪುತ್ರಂ ಕುಲವಿವರ್ಧನಮ್ ॥

(ಸಭಾ 17/21)

ಆಗ ಅವನು ಚಂಡಕೌಶಿಕ ಋಷಿಗೆ ಶರಣಸಾಗಿ ತನ್ನ ದುಃಖವನ್ನು ತೋಡಿಕೊಂಡನು. ಹೆಂಡತಿಯೊಡನೆ ರಾಜನು ಮಾಡಿದ ಸೇವೆಯಿಂದ ಸಂತೋಷಗೊಂಡ ಋಷಿಯು ಅವನಿಗೆ ವರವನ್ನು ಕೊಟ್ಟನು. ಋಷಿಯು ಧ್ಯಾನದಲ್ಲಿದ್ದಾಗ ಆತನ ತೊಡೆಯ ಮೇಲೆ ಗಿಳಿ ಕಚ್ಚಿದ್ದ ಮಾವಿನ ಹಣ್ಣೊಂದು ಬಿದ್ದಿತು. ಆ ಹಣ್ಣನ್ನು ಅಭಿಮಂತ್ರಿಸಿ ರಾಜನಿಗೆ ಕೊಟ್ಟು ನಿನ್ನ ಇಚ್ಛೆಯು ಫಲವನ್ನು ತಾಳುವುದು ಎಂದು ಹೇಳಿದನು.

ತತ್ ಪ್ರಗೃಹ್ಯ ಮುನಿಶ್ರೇಷ್ಠೋ ಹೃದಯೇ ನಾಭಿಮಂತ್ರ್ಯ ಚ ।
ರಾಜ್ಞೇ ದದಾವ ಪ್ರತಿಮಂ ಪುತ್ರ ಸಂಪ್ರಾಪ್ತಿ ಕಾರಣಮ್ ॥

(ಸಭಾ 17/29)

ರಾಜನು ಸಂತೋಷಗೊಂಡನು. ಋಷಿಯನ್ನು ನಮಸ್ಕರಿಸಿ ಹೆಂಡತಿಯೊಡನೆ ಮನೆಗೆ ಹಿಂತಿರುಗಿದನು.

ಯಥಾ ಸಮಯಮಾಜ್ಞಾಯ ತದಾಸ ನೃಪಸತ್ತಮಃ।
ದ್ವಾಭ್ಯಾಮೇಕಂ ಫಲಂ ಪ್ರಾದಾತ್ ಪತ್ನೀಭ್ಯಾಂ ಭರತರ್ಷಭ ॥
ತೇ ತದಾಮ್ರಂ ದ್ವಿಧಾಕೃತ್ವಾ ಭಕ್ಷಯಾಮಾ ಸತುಃ ಶುಭೇ ।
ಭಾವಿ ತ್ವಾದಪಿ ಚಾರ್ಥಸ್ಯ ಪತ್ಯ ವಾಕ್ಯಕಯಾ ಮುನೇಃ ।
ತಯೋಃ ಸಮಭವತ್ ಗರ್ಭಃ ಫಲಪ್ರಾಶನ ಸಂಭವಃ ॥

(ಸಭಾ 17/32–34)

ಋಷಿಯು ತಿಳಿಸಿದ ಸೂಚನೆಯಂತೆ ಆ ಹಣ್ಣನ್ನು ಎರಡು ಭಾಗಮಾಡಿ ಇಬ್ಬರು ರಾಣಿಯರಿಗೂ ಕೊಟ್ಟುದಾಯಿತು. ನಂತರ ಇಬ್ಬರೂ ಗರ್ಭವತಿಯರಾದರು . ಅವರಲ್ಲಿ ಉಂಟಾದ ಗರ್ಭಧಾರಣೆಯ ಕಾರಣವು 'ಫಲ ಪ್ರಾಶನ ಸಂಭವಃ' ಎಂದು ಹೇಳಿದೆ. ರಾಜನು ವಿಷಯ ಭೋಗಿಯಾಗಿದ್ದನು. ಋಷಿಯು ಅವನಿಗೆ ಮಾವಿನ ಹಣ್ಣನ್ನು ಕೊಡುವಾಗ 'ಸಮಯಮಾಜ್ಞಾಯ' ಎಂಬೀ ಸೂಚನೆಯನ್ನು ಕೊಟ್ಟಿದ್ದನು. ಇದರ ಅರ್ಥವೇನೆಂದರೆ–ಗರ್ಭಧಾರಣೆಗೆ ಅನುಕೂಲವಾದ ಕಾಲ ಅರ್ಥಾತ್ ಋತು ಸ್ನಾನವಾದ ಮೇಲೆ ಎಂದು. ಈ ಅಭಿಪ್ರಾಯವನ್ನು ತಳ್ಳಿಹಾಕುವಂತಿಲ್ಲ. ಹಣ್ಣಿನಲ್ಲಿ ಗರ್ಭಧಾರಣೆಯನ್ನು ಪೋಷಿಸುವ ಗುಣಧರ್ಮವು ಇರಬಹುದು. ಇದರಿಂದ

ಅನಗ್ರಹವು ಇಚ್ಛಾಪೂರ್ತಿಗೆ ಪೂರಕವಾಗಿದ್ದಿರಬೇಕು.ಇಷ್ಟೇ ತೀರ್ಮಾನಿಸಬಹುದು. ಋಚೀಕನು ಗಾಧಿಕನ್ಯೆಯಾದ ಸತ್ಯವತಿಯೊಡನೆ ಮದುವೆಯಾದ ಮೇಲೆ ಆತನು ಆಕೆಯಲ್ಲಿ ಮುಕ್ತರೀತಿಯಿಂದ ರಮಿಸುತ್ತಿದ್ದನು.

ಯಥಾಕಾಮಂ ಯಥಾಜೋಷಂ ತಯಾ ರೇಮೇ ಸುಮಧ್ಯಯಾ ।

(ವನ 115/30)

ಮಗ ಮತ್ತು ಸೊಸೆ ಇದನ್ನು ಕಾಣಲು ಭೃಗುವು ಆಶ್ರಮಕ್ಕೆ ಬಂದಾಗ ಅವರ ಸೇವೆಯಿಂದ ಸಂತೋಷಗೊಂಡು ವರವನ್ನು ಕೇಳಿಕೊಳ್ಳುವಂತೆ ತಿಳಿಸಿದಾಗ, ಸೊಸೆಯಾದವಳು ತನ್ನ ತಾಯಿಗೂ ಹಾಗೂ ತನಗೂ ಪುತ್ರ ಪ್ರಾಪ್ತಿಯಾಗಬೇಕೆಂಬ ಆಸೆಯನ್ನು ತಿಳಿಸಿದಳು. ಆಗ ಭೃಗುವು ಅವಳಿಗೆ ಹೇಳಿದನು–

ಋತೌ ತ್ವಂ ಚೈವ ಮಾತಾ ಚ ಸ್ನಾತೇ ಪುಂಸವನಾಯ ವೈ ।
ಆಲಿಂಗೇ ತಾಂ ಪೃಥಗ್ವೃಕ್ಷೌ ಸಾಶ್ವತ್ಥಂ ತ್ವಮುದುಂಬರಮ್ ॥

(ವನ 115/35)

ಋತುಕಾಲದಲ್ಲಿ ಸ್ನಾನ ಮಾಡಿದ ಮೇಲೆ ಪುತ್ರ ಪ್ರಾಪ್ತಿಗಾಗಿ ನೀನು ಮತ್ತು ನಿನ್ನ ತಾಯಿ ಬೇರೆ ಬೇರೆ ವೃಕ್ಷಗಳನ್ನು ತಬ್ಬಿಕೊಳ್ಳಬೇಕು. ತಾಯಿಯು ಅಶ್ವತ್ಥವನ್ನು ನೀನು ಉದುಂಬರವನ್ನು ಅಲ್ಲದೆ –

ಚರುದ್ವಯಮಿದಂ ಭದ್ರೇ ಜನನ್ಯಾಶ್ಚ ತವೈವ ಚ ।
ವಿಶ್ವಮಾವರ್ತಯಿತ್ವಾತು ಮಯಾ ಯತ್ನೇನ ಸಾಧಿತಮ್ ॥
ಪ್ರಾಶಿತವ್ಯಂ ಪ್ರಯತ್ನೇನ .... (ವನ 115/36–37)

ವಿರಾಟ್ ಪುರುಷನಾದ ಪರಮಾತ್ಮನನ್ನು ಧ್ಯಾನಿಸಿ ನಿಮಗಾಗಿ (ನಿನಗೆ ಮತ್ತು ನಿನ್ನ ತಾಯಿಗೆ) ಎರಡು ಚರುಗಳನ್ನು (ಅನ್ನಗಳನ್ನು) ತಯಾರಿಸಿದ್ದೇನೆ. (ಅವುಗಳ ಗುಣಧರ್ಮಗಳು ಬೇರೆ ಬೇರೆಯಾದುದರಿಂದ) ಹೇಳಿದ ರೀತಿಯಲ್ಲಿ ಪ್ರಾಶನ ಮಾಡಬೇಕು. ಋತು ಸ್ನಾನವಾದ ಮೇಲೆ ವೃಕ್ಷಗಳನ್ನು ತಬ್ಬಿಕೊಳ್ಳಬೇಕೆಂದು ಭೃಗುವು ಇಬ್ಬರಿಗೂ ಹೇಳಿದ್ದನಷ್ಟೆ ತಬ್ಬಿಕೊಳ್ಳಬೇಕಾದ ಮರದಲ್ಲಿ ಇರಬಹುದಾದ ಔಷಧಿಯ ಗುಣಧರ್ಮದಂತ ಗರ್ಭಧಾರಣೆಗೆ ಉಪಯೋಗ ವಾಗುತ್ತಿದ್ದಿರಬೇಕು ಮತ್ತು ಅದರ ಬಗ್ಗೆ ಭೃಗುವಿಗೆ ತಿಳಿವಳಿಕೆ ಇದ್ದಿರಬೇಕು. ಆದ್ದರಿಂದಲೇ ಯಾವ ಚರುವನ್ನು ಯಾರು ಸ್ವೀಕರಿಸಬೇಕೆಂಬುದರ ಬಗ್ಗೆ ಅವನು ಕಟ್ಟುನಿಟ್ಟಾಗಿ ಸೂಚನೆಯನ್ನು ಕೊಟ್ಟಿದ್ದನು. ಭೃಗುವಿಗೆ ಆಯುರ್ವೇದದ ಬಗ್ಗೆ ಉತ್ತಮ ಜ್ಞಾನವಿದ್ದುದರಿಂದ ವೃಕ್ಷಾಲಿಂಗನ (ಮರವನ್ನು ತಬ್ಬಿಕೊಳ್ಳುವುದು) ಮತ್ತು ಚರು ಪ್ರಾಶನ (ಅನ್ನವನ್ನು ತಿನ್ನುವುದು) ಇವುಗಳಲ್ಲಿ ದೈವೀಗುಣಕ್ಕಿಂತ ಔಷಧಿಯಗುಣವು ಹೆಚ್ಚಾಗಿರಲು ಸಾಧ್ಯವಿದೆ. ಯೋಗ್ಯವಲ್ಲದ ಔಷಧಿಯ ಸೇವೆಯಿಂದ ವಿಪರೀತವಾದ ಪರಿಣಾಮವು ಉಂಟಾಗುತ್ತದೆ. ಅದರಂತೆ ಚರು ಮತ್ತು ವೃಕ್ಷ ಇವುಗಳ ಅದಲು ಬದಲುಗಳಾದರೆ ಇಚ್ಛಿಸಿದ ಪರಿಣಾಮವು ಆಗಲಿರದು.

ಮಾಂಧಾತನ ಜನ್ಮಕಥೆಯಲ್ಲಿ ಅದ್ಭುತದ ಅಂಶ ಅಧಿಕವಾಗಿದೆ. ಯುವನಾಶ್ವನಿಗೆ ಮಗ ಹುಟ್ಟಬೇಕೆಂಬ ಕಾರಣದಿಂದ ಚ್ಯವನ ಋಷಿಯು ಯಾಗವನ್ನು ಮಾಡಿ ಅಭಿಮಂತ್ರಿಸಿದ ನೀರನ್ನು ಒಂದು ಕಲಶದಲ್ಲಿ ಇಟ್ಟಿದ್ದನು. ಆ ನೀರನ್ನು ಯುವನಾಶ್ವನ ಹೆಂಡತಿಯು ಕುಡಿಯಬೇಕಿತ್ತು. ಆ ನೀರಿನ ಗುಣಧರ್ಮವು ಹೀಗಿತ್ತು–

ಯತ್ ಪ್ರಾಶ್ಯ ಪ್ರಸವೇತ ತಸ್ಯ ಪತ್ನೀ ಶಕ್ರಸಮಂ ಸುತಮ್ । (ವನ 126/11).

'ಇದನ್ನು ಕುಡಿಯುವುದರಿಂದ ಇಂದ್ರನಿಗೆ ಸಮನಾದ ಮಗನು ಹುಟ್ಟುತ್ತಾನೆ.' ಬಾಯಾರಿಕೆಯಿಂದ ಬಳಲಿದ್ದ ಯುವನಾಶ್ವನು ಸ್ವತಃ ಕಲಶದಲ್ಲಿದ್ದ ಆ ನೀರನ್ನು ಕುಡಿದನು. ಅದರಿಂದ ಅವನು ಗಂಡಸಾಗಿದ್ದರೂ ಅವನ ಹೊಟ್ಟೆಯಲ್ಲಿ ಗರ್ಭವುಂಟಾಯಿತು. ಇದರಲ್ಲಿನ ಅತಿಶಯೋಕ್ತಿಯನ್ನು ಮತ್ತು ಅಸಂಭಾವ್ಯತೆಯನ್ನು ಕಡೆಗಣಿಸುವಂಥಾದ್ದಾಗಿದೆ. ಆದರೆ ನೀರಿನಲ್ಲಿ ಗರ್ಭಧಾರಣೆಗೆ ಅನುಕೂಲವಾದ ಔಷಧಿಯು ಇದ್ದಿರಬೇಕೆಂಬುದು ನಿಶ್ಚಯವಾದುದು. ಈ ಎಲ್ಲ ಉದಾಹರಣೆಗಳಿಂದ ಒಂದು ವಿಚಾರವು ಸ್ಪಷ್ಟವಾಗಿ ತಿಳಿದುಬರುತ್ತದೆ. ಅದೇನೆಂದರೆ, ಚರು, ಫಲ, ಜಲ ಮುಂತಾದವುಗಳ ಸೇವನೆಯು ಬರೀ ಸ್ತ್ರೀಯರಿಗೆ ಹೇಳಿದೆ. ಪುರುಷರಿಗೆ ಅಲ್ಲ. ಯುವನಾಶ್ವನು ಆ ನೀರನ್ನು ಕುಡಿದ. ಪುರುಷನಾದರೂ ಅವನ ಹೊಟ್ಟೆಯಲ್ಲಿ ಗರ್ಭವುಂಟಾಯಿತು ಎಂಬುದರ ಅರ್ಥವೇನೆಂದರೆ ಈ ಪದಾರ್ಥದಲ್ಲಿ ಗರ್ಭಧಾರಣೆಗೆ ಅನುಕೂಲವಾದ ಬದಲಾವಣೆಯನ್ನು ಸ್ತ್ರೀ ದೇಹದಲ್ಲಿ ಉಂಟುಮಾಡುವ ಸಾಮರ್ಥ್ಯವಿರಬೇಕು, ಇಷ್ಟೆ. ದಶರಥನು ಪಾಯಸದ ಒಂದು ತೊಟ್ಟನ್ನೂ ಸ್ವತಃ ತೆಗೆದುಕೊಳ್ಳಲಿಲ್ಲ. ಎಲ್ಲವನ್ನು ತನ್ನ ಮೂವರು ರಾಣಿಯರಿಗೆ ವಿಶಿಷ್ಟ ಪ್ರಮಾಣದಲ್ಲಿ ಹಂಚಿಕೊಟ್ಟನು. ಆದರಂತೆ ಪುತ್ರ ಪ್ರಾಪ್ತಿಯಾಯಿತು. ಆದರೆ ಪುತ್ರಪ್ರಾಪ್ತಿಗೆ ಸ್ತ್ರೀ ಪುರುಷ ಸಂಯೋಗವು ಆವಶ್ಯಕವಾಗಿತ್ತು. ಇಂಥ ಸಂಯೋಗವಿಲ್ಲದೆ ಗರ್ಭಧಾರಣೆಯು ಆಗುವುದು ಸಾಧ್ಯ, ಇಂಥ ಗುಣಧರ್ಮವು ಈ ದ್ರವ್ಯಗಳಲ್ಲಿ ಇತ್ತು ಎಂದು ಭಾವಿಸಲು ಯಾವ ಆಧಾರವೂ ಇಲ್ಲ.

ಕುಮಾರ ಸಂಭವಕ್ಕೆ ಅಂಡಾಣು ಬೀಜಾಣುಗಳ ಸಂಯೋಗದ ಆವಶ್ಯಕತೆಯು ಅನಿವಾರ್ಯವಾಗಿರುತ್ತದೆ. ಆದರೆ ಬರೀ ಪುರುಷನ ತೇಜಸ್ಸಿನಿಂದ(ವೀರ್ಯ) ಮತ್ತು ಸಂಯೋಗವಿಲ್ಲದೆ ಸ್ತ್ರೀಗೆ ಗರ್ಭಧಾರಣೆ ಅಥವಾ ಪುತ್ರ ಪ್ರಾಪ್ತಿಯು ಉಂಟಾದ ಉದಾಹರಣೆಯೂ ಮಹಾಭಾರತದಲ್ಲಿ ಕಂಡುಬರುತ್ತದೆ. ಸ್ತ್ರೀ ಬೀಜ ಮತ್ತು ಪುರುಷ ಬೀಜ ಇವುಗಳ ಪರಸ್ಪರ ಸಂಯೋಗವಿಲ್ಲದಿರುವಾಗಲೂ ಸುಫಲಿತವಾಗುವುದು ಶಕ್ಯವಾಗುವುದಾದರೆ, ಇಂಥದ್ದನ್ನು ಸಿದ್ಧಪಡಿಸವುದಕ್ಕೆ ಆಧುನಿಕ ವೈದ್ಯಶಾಸ್ತ್ರಜ್ಞರಿಗೆ ಮಹಾಭಾರತವು ಎಸಗಿದ ಆಹ್ವಾನವೆಂದೇ (Challenge) ಭಾವಿಸಬೇಕಾದೀತು. ಗಾಜಿನ ಕೊಳವೆಯಂತೆ, ದೊನ್ನೆ, ಗಡಿಗೆ ಮುಂತಾದ ಅಚೇತನ ವಸ್ತುಗಳು ಸ್ತ್ರೀಯೋನಿಯು ಮಾಡುವ ಕೆಲಸವನ್ನು ಮಾಡಬಲ್ಲವೆ? ಇದು ಒಂದು ಪ್ರಶ್ನೆಯಾಗಿದೆ. ಅಯೋನಿ ಸಂಭವದ ಈ ಅಂಗ ವಿಚಾರವೂ ಮಹತ್ವಪೂರ್ಣದ್ದಾಗಿದೆ. ಸ್ನಾನಕ್ಕಾಗಿ ಸರೋವರಕ್ಕೆ ಹೋದ ಭಾರದ್ವಾಜ ಋಷಿಗೆ ಅಲ್ಲೇ ಸ್ನಾನ ಮಾಡುತ್ತಿದ್ದ ಘೃತಾಚೀ ಎಂಬ ಅಪ್ಸರೆಯ ಮೈಮೇಲಿನ ಬಟ್ಟೆ ಗಾಳಿಯಿಂದ ಹಾರಿಹೋಗಲಾಗಿ ಆಕೆಯ ಶರೀರವು ಬೆತ್ತಲೆಯಾಯಿತು. ಆಗ ಆ ಋಷಿಯ

ಕಾಮವಾಸನೆಯು ಉದ್ದೀಪಿತಗೊಂಡು ವೀರ್ಯ ಸ್ಖಲನವಾಯಿತು. 'ಚಿರಸ್ಯ ರೇತಶ್ಚ ಸ್ಕಂದ ತದೃಷಿ ದ್ರೋಣ ಆದಧೇ'– ಆ ಋಷಿಯು ತನ್ನ ರೇತಸ್ಸನ್ನು ಒಂದು ದೊನ್ನೆಯಲ್ಲಿ (ಆದಿ 165/4)ಕೂಡಿಟ್ಟನು. ಅದರಿಂದ ದ್ರೋಣನು ಹುಟ್ಟಿದನು. ವರುಣನು ಊರ್ವಶಿಯೊಡನೆ ಸಮಾಗಮವನ್ನು ಬಯಸಿದಾಗ ಆಕೆ ಇದಕ್ಕೆ ಮೊದಲೇ ಮಿತ್ರನೊಡನೆ ಒಪ್ಪಂದ ಮಾಡಿಕೊಂಡಿದ್ದಳಾದ್ದರಿಂದ ವರುಣನ ಬಯಕೆಯನ್ನು ನಿರಾಕರಿಸಿದಳು. ಆ ಸಮಯದಲ್ಲಿ ಹೊರಬಂದ ತನ್ನ ತೇಜಸ್ಸನ್ನು ಒಂದು ಗಡಿಗೆಯಲ್ಲಿ ವಿಸರ್ಜಿಸಿದನು. ಮಿತ್ರನಿಗೆ ಇದು ತಿಳಿದಾಗ ಊರ್ವಶಿ ಬಗ್ಗೆ ಸಂತಾಪವುಂಟಾಯಯಿತು. ಆಗ ಅವನು ಅವಳಿಗೆ ಶಾಪವನ್ನು ಕೊಟ್ಟು ತನ್ನ ತೇಜಸ್ಸನ್ನು ಅದೇ ಗಡಿಗೆಯಲ್ಲಿ ವಿಸರ್ಜಿಸಿದನು. ಆ ಗಡಿಗೆಯಿಂದ ಅಗಸ್ತ್ಯ ಮತ್ತು ವಸಿಷ್ಠರು ಹುಟ್ಟಿಬಂದರು. ಈ ಎರಡು ಉದಾಹರಣೆಗಳಲ್ಲಿ ಬರೀ ಪುರುಷನ ವೀರ್ಯವು ಅಚೇತನವಾದ ಗಡಿಗೆಯಲ್ಲಿ ಬಿದ್ದು ಅದರಿಂದ ಮಾನವನು ಜನ್ಮಕ್ಕೆ ಬಂದದ್ದು ಕಂಡುಬರುತ್ತದೆ.

ಮೇಲೆ ಹೇಳಿದ ಅಯೋನಿಸಂಭವಕ್ಕಿಂತಲೂ ಸ್ವಲ್ಪ ಬೇರೆ ರೀತಿಯಲ್ಲಿ ಚೇದಿರಾಜನ ಕಥೆ ಇದೆ. ಪುಂಸವನದ ದಿವಸವೇ ಚೇದಿರಾಜನಾದ ವಸುವು ಬೇಟೆಗೆಂದು ಕಾಡಿಗೆ ಹೋಗಿದ್ದಾಗ ಅಲ್ಲಿನ ಮೈಮರೆಸುವ ಮತ್ತು ಪ್ರಸನ್ನ ವಾತಾವರಣದಿಂದ ಅವನ ಕಾಮವಾಸನೆಯು ಕೆರಳಿತು. ಅವನಿಗೆ ಹೊಸದಾಗಿ ಮದುವೆಯಾದ ಹೆಂಡತಿ ಗಿರಿಕೆಯ ನೆನಪಾಯಿತು. ಸಂಯಮವನ್ನು ಕಳೆದುಕೊಂಡದ್ದರಿಂದ ವೀರ್ಯಸ್ಖಲನವಾಯಿತು. ಹೆಂಡತಿಯ ಋತುಕಾಲವು ವ್ಯರ್ಥವಾಗಬಾರದೆಂದು ಅವನು ತನ್ನ ವೀರ್ಯವನ್ನು ಒಂದು ದೊನ್ನೆಯಲ್ಲಿ ತುಂಬಿ ಗಿಡಗ ಪಕ್ಷಿಯ ಮೂಲಕ ತನ್ನ ಹೆಂಡತಿಗೆ ಕಳುಹಿಸಿಕೊಟ್ಟನು. ಆದರೆ ದಾರಿಯಲ್ಲಿ ಮತ್ತೊಂದು ಗಿಡಗ ಪಕ್ಷಿಯು ಆ ದೊನ್ನೆಯ ಮೇಲೆ ದಾಳಿಮಾಡಿದ್ದರಿಂದ ವೀರ್ಯವು ಯಮುನಾ ನದಿಯಲ್ಲಿ ಬಿದ್ದಿತು. ಶಾಪಕ್ಕೆ ಒಳಗಾಗಿದ್ದ ಅದ್ರಿಕಾ ಎಂಬ ಓರ್ವ ಅಪ್ಸರೆಯು ಮೀನಾಗಿ ಯಮುನಾ ನದಿಯಲ್ಲಿದ್ದಳು. ಆ ವೀರ್ಯವನ್ನು ಮೀನು ನುಂಗಿತು. ಅದರಲ್ಲಿ ಗರ್ಭವುಂಟಾಯಿತು. ಸರಿಯಾದ ಕಾಲದಲ್ಲಿ ಅದರ ಹೊಟ್ಟೆಯಿಂದ ಗಂಡು ಹೆಣ್ಣಿನ ಒಂದು ಮನುಷ್ಯ ಜೋಡಿಯು ಜನ್ಮ ತಾಳಿತು. ಆ ಹೆಣ್ಣೇ ಮತ್ಸ್ಯಗಂಧಾ (ಸತ್ಯವತಿ) (ಆದಿ 63). ಮತ್ಸ್ಯಗಂಧೆಯ ಜನ್ಮವು ಅಯೋನಿಸಂಭವವಾಗಿರದೆ ಭಿನ್ನಯೋನಿಸಂಭವವಾಗಿದೆ. ಪ್ರತ್ಯಕ್ಷ ಸಮಾಗಮವಾಗದೆ ಪುರುಷ ಬೀಜವು ಮೀನಿನ ಗರ್ಭದಲ್ಲಿ ಬೆಳೆದು ಬಂದದ್ದು.

ಅನಸೂಯೆ ಮಗನನ್ನು ಪಡೆದ ರೀತಿ ಇದಕ್ಕಿಂತ ಬೇರೆಯೂ ಮತ್ತು ಆಶ್ಚರ್ಯಕಾರಕವೂ ಆಗಿದೆ. ಅನಸೂಯೆಯ ಪಾತಿವ್ರತ್ಯದ ಬಗ್ಗೆ ಸಂದೇಹಕ್ಕೆ ಎಡೆಕೊಡುವ ಯಾವುದೇ ಅನುಚಿತವಾದ ನಡತೆಯು ಆಕೆಯಿಂದ ಆಗಿಲ್ಲ. ಬದಲಾಗಿ ಐವರು ಪತಿವ್ರತೆಯರುತೆ ಆಕೆಯ ಚಾರಿತ್ರ್ಯವೂ ಉಜ್ವಲವಾಗಿದೆ. ಆದರೆ,

ನಾಹಂ ತಸ್ಯ ಮುನೇರ್ಭೂಯೋ ವಶಗಾಸ್ಯಾಂ ಕಥಂ ಚ ನ ।

(ಅನು 14/95)

'ನಾನು ಯಾವುದೇ ರೀತಿಯಲ್ಲಿ ಗಂಡನ ಕೈಕೆಳಗೆ ಇರುವುದಿಲ್ಲ' ಎಂಬೀ ಸಂಕಲ್ಪವನ್ನು ಮಾಡಿ

ಆ ಬ್ರಹ್ಮವಾದಿನೀ ಅನಸೂಯೆ ತನ್ನ ಗಂಡನನ್ನು ತೊರೆದು ಘೋರವಾದ ತಪಸನ್ನು ಆಚರಿಸಿ ಶಂಕರನನ್ನು ಸಂತೋಷಗೊಳಿಸಿದಳು. ಗಂಡನನ್ನು ತೊರೆದಿದ್ದರೂ ಆಕೆಗೆ ಮಗನು ಬೇಕೆಂಬ ಬಯಕೆ ಇತ್ತು. ಶಂಕರನು ಆಕೆಯ ತಪಸ್ಸಿನಿಂದ ಸಂತೋಷಗೊಂಡನು. ಆಕೆಯ ಮನಸ್ಸಿನ ಭಾವವನ್ನು ಅರಿತು ಹೇಳಿದನು–

ತಾಮಬ್ರವೀದ್ದಸನ್ ದೇವೋ ಭವಿತಾ ವೈ ಸುತಸ್ತವ ।
ವಿನಾ ಭರ್ತ್ರಾ ಚ ರುದ್ರೇಣ ಭವಿಷ್ಯತಿ ನ ಸಂಶಯಃ ॥

(ಅನು 14/97–98)

'ಗಂಡನಿಲ್ಲದೆ ನಿನಗೆ ರುದ್ರನ ಕೃಪೆಯಿಂದ ಮಗನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ'. ಮಹಾಭಾರತದ ಟೀಕಾಕಾರನಾದ ನೀಲಕಂಠನು ತನ್ನ ಟೀಕೆಯಲ್ಲಿ ಚರುಸೇವನೆಯಿಂದ ಸಂತಾನವಾದುದೆಂದು ಹೇಳಿದ್ದಾನೆ. ಅನಸೂಯೆಯ ಪಾತಿವ್ರತ್ಯ ಮತ್ತು ಚಾರಿತ್ರ್ಯಗಳನ್ನು ಗಮನಿಸಿದರೆ ಬರೀ ಸ್ತ್ರೀ ಬೀಜವು ಪುರುಷ ಬೀಜದೊಡನೆ ಸೇರದೆ ಫಲಿತವಾಗಿದೆಯೆಂದು ಹೇಳಬೇಕಾಗಿದೆ. ವಾಲ್ಮೀಕಿಯೂ ಇದೇ ವಿಧವಾದ ಒಂದು ಕಥೆಯನ್ನು ಕೊಟ್ಟಿದ್ದಾನೆ. ಸೋಮದೆಯು ಚೂಲೀ ಎಂಬ ಋಷಿಯನ್ನು ತನ್ನ ಸೇವೆಯಿಂದ ಪ್ರಸನ್ನಗೊಳಿಸಿದಾಗ ಆಕೆಗೆ ಇಷ್ಟವಾದ ವರವನ್ನು ಕೇಳಿಕೊಳ್ಳುವಂತೆ ತಿಳಿಸಿದನು. ಆಗ ಅವಳು ಹೇಳಿದಳು–

ಅಪತಿಶ್ಚಾಸ್ಮಿ ಭದ್ರಂ ತೇ ಭಾರ್ಯಾ ಚಾಸ್ಮಿ ನ ಕಸ್ಯಚಿತ್ ।
ಬ್ರಾಹ್ಮೇಣೋಪಗತಾಯಾಶ್ಚ ದಾತುಮರ್ಹಸಿ ಮೇ ಸುತಮ್ ॥

(ರಾ. ಬಾಲ, 33/17)

'ನನಗೆ ಗಂಡನಿಲ್ಲ, ನಾನು ಯಾರ ಹೆಂಡತಿಯೂಗಿಲ್ಲ, ಶರಣಾಗತಳಾಗಿರುವ ನನಗೆ ನಿನ್ನ ಬ್ರಹ್ಮ ತೇಜಸ್ಸಿನಿಂದ ಓರ್ವ ಮಗನನ್ನು ಕೊಡು.' ಋಷಿಯಯು ಆಕೆಯ ಇಚ್ಛೆಗೆ ಅನುಸಾರವಾಗಿ ಬ್ರಹ್ಮದತ್ತನೆಂಬ ಹೆಸರಿನ ಮಗನನ್ನು ಕೊಟ್ಟನು.

ಇಲ್ಲಿ ಶಂಕಿಸಲು ಸಾಕಷ್ಟು ಅನುಕೂಲತೆಯಿದೆಯಾದರೂ, ಸೋಮದೆಯು ಗಂಧರ್ವ ಸ್ತ್ರೀಯಾದುದರಿಂದ ಈ ಸಂದರ್ಭದಲ್ಲಿ ಆಕೆಯ ನಡತೆಯನ್ನು ಮಾನವೀ ನಿಯಮಕ್ಕೆ ಒಳಪಡಿಸುವುದಾಗಲಿ ಅಥವಾ ಒರೆಗಲ್ಲಿಗೆ ಹಚ್ಚುವುದಾಗಲಿ ಯೋಗ್ಯವಾಗಲಾರದು. ಸರಸ್ವತಿಯ ಮಗನ ಕಥೆಯು ಹೆಚ್ಚು ವಿಸ್ಮಯಕಾರಿಯಾಗಿದೆ. ಸರಸ್ವತಿ ಒಂದು ನದಿ. ಈ ನದಿಯು ಓರ್ವ ಮಾನವ ಶಿಶುವಿಗೆ ಜನ್ಮವಿತ್ತಿದೆ. ಆಕೆಯು ದಧೀಚಿ ಋಷಿಗೆ ಆತನ ಮಗನನ್ನು ಒಪ್ಪಿಸಿ ಹೇಳುತ್ತಾಳೆ–

ಬ್ರಹ್ಮರ್ಷೇ ತವ ಪುತ್ರೋಽಯಂ ತ್ವದ್ಭಕ್ತ್ಯಾ ಧಾರಿತೋ ಮಯಾ ।
ದೃಷ್ಟ್ವಾನತೇಽಪ್ಸರಸಂ ರೇತೋಯತ್ ಸ್ಕನ್ನಂ ಪ್ರಾಗಲಂಬುಷಾಮ್ ॥

(ಶಲ್ಯ. 51/13–14)

ಬ್ರಹ್ಮರ್ಷಿಯೆ, ಇವನು ನಿನ್ನ ಮಗನು. ನಿನ್ನ ಮೇಲಿನ ಭಕ್ತಿಯಿಂದ ಅವನನ್ನು ನಾನು ನನ್ನ

ಗರ್ಭದಲ್ಲಿ ೭ ಸಿದ್ದೇನೆ. ಅಲಂಬುಷಾ ಎಂಬೀ ಅಪ್ಸರೆಯನ್ನು ನೀನು ನೋಡಿದಾಗ ನಿನ್ನ ವೀರ್ಯಸ್ಖಲನವಾಯಿತು. ನಿನ್ನ ಮೇಲಿನ ಭಕ್ತಿಯಿಂದ ನಾನು ಅದನ್ನು ಧರಿಸಿದೆನು (ಮತ್ತು ಬೆಳೆಸಿದನು.) ನದಿಯಲ್ಲಿರುವ ನೀರಿನಲ್ಲಿ ತುಪ್ಪದಂತೆ ಗರ್ಭವನ್ನು ಬೆಳೆಸುವ ಗುಣಧರ್ಮವು ಇರುವುದು ಗೊತ್ತಿಲ್ಲ. ಶುಕನು ಹುಟ್ಟಿದ ಕಥೆಯೂ ಭಾರಿ ವಿಚಿತ್ರವಾಗಿದೆ. ಮಗನನ್ನು ಪಡೆಯುವ ಇಚ್ಛೆಯಿಂದ ವ್ಯಾಸರು ಉಗ್ರವಾದ ತಪಸ್ಸನ್ನು ಮಾಡಿ ಶಂಕರನು ಪ್ರಸನ್ನವಾಗುವಂತೆ ಮಾಡಿದರು. ಅವರಿಗೆ ಇಷ್ಟವಾದ ಮಗನಾಗುವನೆಂದು ವರವನ್ನು ಕೊಟ್ಟನು. ಅಗ್ನಿಯನ್ನು ಹುಟ್ಟಿಸಲು ಅರಣಿಗಳನ್ನು (ಶಮೀವೃಕ್ಷದ ಕಡ್ಡಿಗಳು) ತಿಕ್ಕುತ್ತಿರುವಾಗ ವ್ಯಾಸರಿಗೆ ಲಾವಣ್ಯ ಸಂಪನ್ನಳಾದ ಘೃತಾಚೀ ಎಂಬ ಅಪ್ಸರೆಯ ದರ್ಶನವಾಯಿತು. ವ್ಯಾಸರು ಆಕೆಯನ್ನು ನೋಡಿ ಕಾಮವಿಹ್ವಲರಾದರು. ಇದು ಆಕೆಯ ಗಮನಕ್ಕೆ ಬಂದಿತು. ಹೆಣ್ಣು ಗಿಳಿಯ ರೂಪವನ್ನು ತಾಳಿ ಆಕೆ ಅವರ ಬಳಿಗೆ ಬಂದಳು. ಆದರೆ ಆಕೆ ರೂಪವನ್ನು ಬದಲಿಸಿದುದನ್ನು ಕಂಡಾಗ ವ್ಯಾಸರ ವೀರ್ಯವು ಸ್ಖಲನಗೊಂಡು ಅದು ಅರಣಿಯ ಮೇಲೆ ಬಿದ್ದಿತು. ಅದರಿಂದ ಶುಕನ ಜನನವಾಯಿತು.

> ಅರಣ್ಯಾಮೇವ ಸಹಸಾ ತಸ್ಯ ಶುಕ್ರಮವಾಪತತ್ ।
> ಅರಣೀ ಮಮಂಥ ಬ್ರಹ್ಮರ್ಷಿಸ್ತಸ್ಯಾಂ ಜಜ್ಞೇ ಶುಕೋನೃಪ ॥
>
> (ಶಾಂತಿ. 324/8–9)

ವ್ಯಾಸರ ಕಾಮವಾಸನೆಯು ಘೃತಾಚೀಯ ದರ್ಶನದಿಂದ ಉದ್ದೀಪಿತವಾಗುವುದು, ಮತ್ತು ಆಕೆಯು ಅವರ ಬಳಿಗೆ ಹೋಗುವುದು, ಇದರಿಂದ ಶುಕನ ಜನ್ಮವು ಅವರಿಬ್ಬರ ಸಂಯೋಗದಿಂದ ಉಂಟಾಗಿದೆಯೆಂದು ಕಾಣಬರುತ್ತದೆ.

ಹೆಣದೊಡನೆಯೂ ಸಮಾಗಮವನ್ನು ಮಾಡಿ ಪುತ್ರಪ್ರಾಪ್ತಿಯಾಗುತ್ತದೆಯೆಂಬ ಅತ್ಯಂತ ಅದ್ಭುತ ಮತ್ತು ಆಶ್ಚರ್ಯಕಾರಕ ಉದಾಹರಣೆಯು ಮಹಾಭಾರತಲ್ಲಿ ಕಂಡುಬರುತ್ತದೆ. ಮೇಲೆ ಉಲ್ಲೇಖಿಸಿದ ಎಲ್ಲ ಜನ್ಮಕಥೆಗಳನ್ನು ಮೀರಿಸುವಂಥ ಈ ಕಥೆಯು, ಪಾಂಡುರಾಜನು ಕುಂತಿಗೆ ನಿಯೋಗ ಪದ್ಧತಿಯಿಂದ ಮಕ್ಕಳನ್ನು ಪಡೆಯುವಂತೆ ಸೂಚಿಸಿದಾಗ ಆಕೆ ಹೀಗೆ ಹೇಳಿದಳು, ವ್ಯುಷಿತಾಶ್ವನೆಂಬ ರಾಜನಿದ್ದನು. ಆತನ ಕೀರ್ತಿಯು ದಿಗಂತದವರೆಗೆ ಹಬ್ಬಿತ್ತು. ಅಲ್ಲದೆ ಆತನು ಪರಾಕ್ರಮಿಯೂ ಪ್ರಜೆಗಳನ್ನು ಪೋಷಿಸುವಲ್ಲಿ ದಕ್ಷನೂ ಅವರಿಗೆ ಪ್ರಿಯನೂ ಮತ್ತು ಧರ್ಮಿಷ್ಠನೂ ಆಗಿದ್ದನು. ಅವನು ಅನೇಕ ಯಜ್ಞಗಳನ್ನು ಆಚರಿಸಿದ್ದನು. ಅವನ ಹೆಂಡತಿ ಭದ್ರೆಯು ರೂಪಸಂಪನ್ನೆಯಾಗಿದ್ದಳು. ಇಬ್ಬರಲ್ಲೂ ಪರಸ್ಪರ ನಿರತಿಶಯ ಪ್ರೇಮವಿತ್ತು. ರಾಜನ ಅತಿರೇಕದ ಕಾಮಾಸಕ್ತಿಯಿಂದ ಪುತ್ರಪ್ರಾಪ್ತಿಯ ಮೊದಲೇ ತೀರ ತಾರುಣ್ಯದಲ್ಲಿ ಸಾವು ಅವನನ್ನು ಅಪ್ಪಿತು. ಗಂಡನ ಸಾವಿನಿಂದ ಶೋಕವಿಹ್ವಲೆಯಾದ ಅವನ ಹೆಂಡತಿಯು ಪತಿವಿಯೋಗವನ್ನು ಸಹಿಸಲು ಅಸಮರ್ಥಳಾಗಿದ್ದಳು. ಅವಳು ತನ್ನ ಗಂಡನ ಹೆಣವನ್ನು ಅಪ್ಪಿಕೊಂಡು ಕುಳಿತಳು. ಅವನ ಬೆನ್ನಟ್ಟಿ ಹೋಗಲು ಅವಳ ನಿರ್ಧಾರವಾಗಿತ್ತು. ಇಂಥ ದಯನೀಯ ಮತ್ತು ಶೋಕಾಕುಲ ಅವಸ್ಥೆಯಲ್ಲಿ ಆಕೆಯು ಹೆಣದ ಬಳಿ ಇರುವಾಗ ಈ ರೀತಿ

ಆಕಾಶವಾಣಿ ಆಯಿತು–

ಉತ್ತಿಷ್ಠ ಭದ್ರೇ ಗಚ್ಛತ್ವಂ ದದಾನೀಹ ವರಂ ತವ ।
ಜನಯಿಷ್ಯಾಮ್ಯ ಪತ್ಯಾನಿ ತ್ವಯ್ಯಹಂ ಚಾರುಹಾಸಿನಿ ॥
ಆತ್ಮಕೇಯೇ ವರಾರೋಹೇ ಶಯನೀಯೇ ಚತರ್ದಶೀಮ್ ।
ಅಷ್ಟಮೀಂ ವಾ ಋತುಸ್ನಾತಾ ಸಂವಿಶೇಥಾ ಮಯಾ ಸಹ ॥

(ಆದಿ 120/33–34)

'ಎಲೈ ಭದ್ರೆಯೇ, ಎದ್ದೇಳು ವರವನ್ನು ಕೊಡುತ್ತಿದ್ದೇನೆ. ನಿನಗಾಗಿ ನಿನ್ನಲ್ಲಿ ಸಂತತಿಯನ್ನು ಹುಟ್ಟಿಸುತ್ತೇನೆ. ಋತುಸ್ನಾನವಾದ ಮೇಲೆ ಹದಿನಾಲ್ಕನೆಯ ಅಥವಾ ಎಂಟನೆಯ ದಿವಸದ ರಾತ್ರಿ ನೀನು ನನ್ನೊಡನೆ ಮಲಗು. ನಿನಗೆ ಪುತ್ರಪ್ರಾಪ್ತಿಯಾಗುವುದು.'

ಸಾತೇನ ಸುಷುವೇದೇವೀ ಶವೇನ ಭರತರ್ಷಭ ।
ತ್ರೀನ್ ಶಾಲ್ವಾನ್ ಚತುರೋಮದ್ರಾನ್ ಸುತಾನ್ ಭರತಸತ್ತಮ ॥

(ಆದಿ 120/36)

ಆಕಾಶವಾಣಿ ಕೊಟ್ಟ ಸಂದೇಶದ ಪ್ರಕಾರ ಆಕೆಯು ತನ್ನ ಗಂಡನ ಹೆಣದೊಡನೆ ಸಮಾಗಮವನ್ನು ಮಾಡಿದಾಗ ಭದ್ರೆಗೆ ಏಳು ಗಂಡುಮಕ್ಕಳಾದವು. ಆ ಪೈಕಿ ಮೂವರು ಶಾಲ್ವ ದೇಶಕ್ಕೂ ನಾಲ್ವರು ಮದ್ರ ದೇಶಕ್ಕೂ ರಾಜರಾದರು.

ವಂಶವೃದ್ಧಿಯ ವಿವಿಧ ವಿಧಾನಗಳಲ್ಲಿ ನಿಯೋಗ ವಿಧಾನವನ್ನು ವಿಚಾರ ಮಾಡಬೇಕಾದುದು ಆವಶ್ಯಕವಾಗಿದೆ. ವಂಶವು ತಡೆಯಿಲ್ಲದೆ ಸಾಗುವ ವಿಚಾರದಲ್ಲಿ ಯಾವ ಎಲ್ಲ ಮಾರ್ಗಗಳೂ ನಿಂತು ಹೋಗುತ್ತವೆಯೋ ಬೇರೆ ಪರಿಹಾರವಿಲ್ಲದ ಕಾರಣ ಆಪದ್ಧರ್ಮವೆಂದು ನಿಯೋಗವನ್ನು ಅವಲಂಬಿಸಿದ್ದು ಕಂಡುಬರುತ್ತದೆ. ನಿಯೋಗದಲ್ಲಿ ಸ್ತ್ರೀ ಪುರುಷರ ಸಮಾಗಮವು ಇದ್ದೇ ಇರುತ್ತದೆ. ಆದರೆ ಅದು ಪತಿ, ಪತ್ನಿಯರದ್ದಲ್ಲ, ಪರಪುರುಷನೊಡನೆ ಸಂಬಂಧವನ್ನು ಪಡೆಯುವ ಪ್ರಕಾರವಾಗಿದೆ. ಆದರೂ ಅದಕ್ಕೆ ಮಹಾಭಾರತದಲ್ಲಿ ಧರ್ಮದ ಮತ್ತು ಸಮಾಜದ ಮಾನ್ಯತೆಯಿತ್ತೆಂದು ಕಾಣುತ್ತದೆ. ಪರಪುರುಷನ ಸಂಬಂಧವಿದ್ದರೂ ಅದು ವ್ಯಭಿಚಾರವೆಂದು ಭಾವಿಸಲಾಗುತ್ತಿರಲಿಲ್ಲ. ಇದಕ್ಕೆ ಕಾರಣ ವಂಶವನ್ನು ಉಳಿಸುವುದಕ್ಕಾಗಿಯೇ ನೀಯೋಗವನ್ನು ಬಳಸಲಾಗುತ್ತಿತ್ತು. ನಿಯೋಗವೆಂದರೆ ಸ್ವೈರಾಚಾರವಲ್ಲ. ಏಕೆಂದರೆ ಗಂಡನ ಅನುಮತಿ ಮತ್ತು ಇಚ್ಛೆ ಇವು ನಿಯೋಗಕ್ಕೆ ಆವಶ್ಯಕವೆಂದು ಭಾವಿಸಲಾಗಿತ್ತು. ಮಹಾಭಾರತದಲ್ಲಿನ ಕುಂತಿ, ಮಾದ್ರಿ, ಮತ್ತು ಸೌದಾಸನ ಹೆಂಡತಿ ಮದಯಂತೀ ಇವರು ಬರೀ ಗಂಡನ ಇಚ್ಛೆಗಾಗಿ ನಿಯೋಗಕ್ಕೆ ಒಪ್ಪಿಗೆಯನ್ನಿತ್ತರು. ಅಂಬಿಕಾ ಮತ್ತು ಅಂಬಾಲಿಕಾ ಇವರು ವಿಧವೆಯರಾಗಿದ್ದರು. ಅತ್ತೆಯ ಇಚ್ಛೆಯನ್ನು ಗಮನಿಸಿ ತುಂಬ ಕಷ್ಟದಿಂದ ನಿಯೋಗವನ್ನು ಸ್ವೀಕರಿಸಿದಂತೆ ಕಾಣುತ್ತದೆ. ನಿಯೋಗದ ಬಗ್ಗೆ ಅನೇಕ ಬಂಧನಗಳಿದ್ದವು. ಕುಂತಿಗೆ ಮೂರು ಮತ್ತು ಮಾದ್ರಿಗೆ ಎರಡು ಗಂಡು ಮಕ್ಕಳಾದ ಮೇಲೂ ಪಾಂಡುವಿಗೆ ಇನ್ನೂ ಓರ್ವ ಮಗನು ಬೇಕಿತ್ತು. ಅದಕ್ಕಾಗಿ ಕುಂತಿಯು ಮತ್ತೊಂದು ದೇವತೆಯನ್ನು ಆಹ್ವಾನಿಸಬೇಕೆಂದು ಪಾಂಡುವು ಸೂಚಿಸಿದಾಗ, ಆಕೆ

ಸ್ಪಷ್ಟವಾಗಿ ನಿರಾಕರಿಸಿ ಪಾಂಡುವಿಗೆ ಹೇಳಿದಳು–

> ನಾತಶ್ಚತುರ್ಥಂ ಪ್ರಸವ ಮಾಪತ್ಸ್ವಪಿ ವದಂತ್ಯುತ ।
> ಅತಃ ಪರಂ ಸ್ವೈರಿಣೀ ಸ್ಯಾದ್ ಬಂಧಕೀ ಪಂಚಮೇ ಭವೇತ್ ॥
>
> (ಆದಿ 122/77)

ಆಪತ್ಕಾಲದಲ್ಲಿ (ನಿಯೋಗ ಪದ್ಧತಿಯಿಂದ) ಮೂರಕ್ಕಿಂತಲೂ ಹೆಚ್ಚು ಮಕ್ಕಳನ್ನು ಆಶಿಸಬಾರದು. ಈ ರೀತಿಯಿಂದ ನಾಲ್ಕನೆಯ ಮಗುವನ್ನು ಪಡೆದವಳು ವ್ಯಭಿಚಾರಿಣಿಯಾಗುತ್ತಾಳೆ. ಐದನೆಯ ಮಗುವನ್ನು ಪಡೆದವಳು ಸೂಳೆಯಾಗುತ್ತಾಳೆ.

ಪಾಂಡು ಮತ್ತು ಸೌದಾಸ ರಾಜರು ಷಂಡರಾಗಿರಲಿಲ. ಆದರೆ ಶಾಪದ ಹೆದರಿಕೆಯಿಂದ ಮರಣದ ಹೆದರಿಕೆಯಿಂದ ಅವರು ಸ್ತ್ರೀಸಂಗ ಮಾಡುವಂತಿರಲಿಲ್ಲ. ಆದ್ದರಿಂದ ಅವರ ವಂಶವು ಬೆಳೆಯದ ನಿಂತಿತ್ತು. ಬ್ರಾಹ್ಮಣಸ್ತ್ರೀಯು ತನ್ನ ಶಾಪೋದ್ಧಾರದಲ್ಲಿ ಕಲ್ಮಾಷಪಾದನಿಗೆ (ಸೌದಾಸ) ವಂಶವನ್ನು ಬೆಳೆಸುವ ಮಗನನ್ನು ಪಡೆಯುವ ಸಲುವಾಗಿ ಅವನ ಹೆಂಡತಿಯನ್ನು ವಸಿಷ್ಠನ ಬಳಿಗೆ ಕಳುಹಿಸಬೇಕಾದೀತು ಎಂಬೀ ಸೂಚನೆಯನ್ನು ಮಾಡಿದ್ದಳು. ಮಹಾಭಾರತದಲ್ಲಿನ ಯಾವುದೇ ಸ್ತ್ರೀಯು ತನ್ನ ಇಚ್ಛೆಯಂತೆ ಮತ್ತು ಯಾವ ನಿರ್ಬಂಧವೂ ಇಲ್ಲದೆ ನಿಯೋಗದ ಆಧಾರವನ್ನು ಬಳಸಿಲ್ಲ.

ಮಹಾಭಾರತದಲ್ಲಿನ ಅನೈಸರ್ಗಿಕ ಕುಮಾರ ಸಂಭವದ ವಿವರಗಳು ಈ ರೀತಿಯಾಗಿದ್ದು, ಇವುಗಳ ಹೆಚ್ಚಿನ ಅಭ್ಯಾಸ ಅವಶ್ಯವಿದೆ.*

❑❑

*ಈ ಲೇಖನದಲ್ಲಿ ಬಳಸಿಕೊಂಡ ಸಂಸ್ಕೃತ ಶ್ಲೋಕಗಳನ್ನು ಗೋರಖಪುರ ಗೀತಾಪ್ರೆಸ್ಸಿನವರು ಪ್ರಕಟಿಸಿದ ಹಿಂದಿ ಅನುವಾದ ಸಹಿತವಾಗಿರುವ ಮಹಾಭಾರತ ಗ್ರಂಥದಿಂದ ಎತ್ತಿಕೊಳ್ಳಲಾಗಿದೆ. –ಮೂಲ ಮರಾಠಿ ಲೇಖನವು ನಾಗಪುರದ 'ಶ್ರೀವತ್ಸ' ಎಂಬ ದೀಪಾವಳಿ ಸಂಚಿಕೆಯಲ್ಲಿ ೧೯೯೧ ರಲ್ಲಿ ಪ್ರಕಟವಾಗಿದೆ.

ಅಲ್ಲಮಪ್ರಭುದೇವರ 'ಪರಮಯೋಗ'

• ನಿಜಲಿಂಗಮ್ಮ ಕೊಪ್ಪಳ

ಪರಮಪುರುಷಾರ್ಥವೆನ್ನಿಸಿದ ಮುಕ್ತಿಗಾಗಿ ಮಾನವನು ಶ್ರಮಿಸುವ ಮಾರ್ಗಗಳಲ್ಲಿ ಯೋಗಮಾರ್ಗದ ಘನತೆ ವಿಶೇಷವಾಗಿದೆ. ಅದ್ವೈತ ಸಿದ್ಧಾಂತದ ಪರಮ ಪ್ರಮಾಣಗಳಾದ ಬ್ರಹ್ಮಸೂತ್ರ–ಉಪನಿಷತ್ತು–ಭಗವದ್ಗೀತೆಗಳೆಂಬ ಪ್ರಸ್ಥಾನತ್ರಯದಲ್ಲಿ ಭಗವದ್ಗೀತೆಯು ಯೋಗವನ್ನು ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸುತ್ತದೆ. ಶಿವಾಗಮಗಳ ಅಧ್ಯಾಯಗಳಲ್ಲಿ 'ಯೋಗಪಾದ'ವು ಗಮನಾರ್ಹವಾದುದು. ಷಡ್‌ದರ್ಶನಗಳಲ್ಲಿ ಪತಂಜಲಿ ಕೃತ 'ಯೋಗಸೂತ್ರ' ಸುಪ್ರಸಿದ್ಧಗ್ರಂಥ. ಕಾಲಕ್ರಮದಲ್ಲಿ ಮಂತ್ರಯೋಗ–ಹಠಯೋಗ–ಲಯಯೋಗ–ರಾಜಯೋಗ–ಕರ್ಮಯೋಗ–ಜ್ಞಾನಯಯೋಗ–ಭಕ್ತಿಯೋಗ ಮೊದಲಾದ ಯೋಗಮಾರ್ಗದ ಪ್ರಭೇದಗಳು ತೋರಿದಂತೆ ಯೋಗಸಾಧನೆಯು ಕಷ್ಟಸಾಧ್ಯವೆನ್ನಿಸಿತು. ಮೇಲಿನ ಕ್ರಮದಲ್ಲಿಯ ಮೊದಲಿನ ನಾಲ್ಕು ಮಾರ್ಗಗಳು ಕೇವಲ ಸನ್ಯಾಸಮಾರ್ಗಿಗಳಿಗೆ ಸಾಧ್ಯ, ೧೨ ನೆಯ ಶತಮಾನದ ವೀರಶೈವ ಶರಣರು ಬೋಧಿಸಿದ ಶಿವಯೋಗವು ಎಲ್ಲ ಯೋಗಮಾರ್ಗಗಳನ್ನೊಳಗೊಂಡು ಸುಲಭತರ ಅನುಸಂಧಾನ ಹಾಗೂ ಹೊಸದರ್ಶನವನ್ನಿತ್ತಿದೆ.

ವೀರಶೈವಸಿದ್ಧಾಂತದಲ್ಲಿ ಲಿಂಗಾಂಗಸಾಮರಸ್ಯವೆ ಮುಕ್ತಿ. ಆದನ್ನು ಪಡೆಯಲು ಉಪದೇಶಿಸಿದ ಮಾರ್ಗವೆ ಶಿವಯೋಗ. ಅದಕ್ಕೆ 'ಷಟ್‌ಸ್ಥಲಮಾರ್ಗ'ವೆಂದೂ ಹೆಸರುಂಟು. ಸ್ತ್ರೀ–ಪುರುಷರೆಂಬ ಭೇದವಿಲ್ಲದೆ ಆಬಾಲವೃದ್ಧರೂ ಅದನ್ನು ಸಾಧಿಸಬಹುದಾಗಿದೆ. ಅಂತೆಯೆ ವೀರಶೈವರಲ್ಲಿ ಶಿಶುವಿಗೂ ಲಿಂಗಧಾರಣೆಯ ಪ್ರಾಶಸ್ತ್ಯವಿದ್ದು, ಲಿಂಗಾನುಸಂಧಾನದ ಘನತೆ–ಗೌರವಗಳನ್ನು ಸೂಚಿಸಲಾಗುತ್ತದೆ.

ವೀರಶೈವನು ಪ್ರತಿನಿತ್ಯ ಆಚರಿಸಬೇಕಾದ ಭಕ್ತಿಯುತವಾದ ಶಿವಲಿಂಗಪೂಜೆ ಮಂತ್ರಯೋಗ–ಲಯಯೋಗ–ಹಠಯೋಗ–ರಾಜಯೋಗಗಳನ್ನೊಳಗೊಂಡು ಕರ್ಮ–ಜ್ಞಾನ–ಭಕ್ತಿಗಳ ಸಂಗಮವಾಗಿ ಶಿವಯೋಗವೆ ಆಗಿ ಮಾರ್ಪಡುತ್ತದೆ. ಇದು ಲೌಕಿಕ–ಪಾರಮಾರ್ಥಿಕ ಜೀವನಗಳ ನಡುವಿನ ಸೇತುವೆಯಂತಿದೆ.[1] ವೀರಶೈವ ಶರಣರು ಹಾಗೂ ಮುಂದಿನ ಶಿವಯೋಗಿಗಳು ಅಷ್ಟಾಂಗಯೋಗ ಮಾರ್ಗದಲ್ಲಿಯ ಪೂರ್ವದ ಐದಂಗಗಳನ್ನು ಬಿಟ್ಟು ಉತ್ತರಯೋಗವೆನ್ನಿಸಿದ ಧ್ಯಾನ–ಧಾರಣ–ಸಮಾಧಿಗಳನ್ನು ಶಿವಯೋಗದ ಅಭ್ಯಾಸಕ್ರಮದಲ್ಲಿ ಬಳಸಿಕೊಂಡಿದ್ದಾರೆ. ಶಿವಯೋಗಿಯು ಭಕ್ತಿಯೋಗವನ್ನಾಶ್ರಯಿಸಿ ತನ್ನಲ್ಲಿ ಸುಪ್ತವಾಗಿರುವ ಅಂದರೆ, ಭಕ್ತಿಗೆ ಮೂಲವಾದ ಭಾವನಾಶಕ್ತಿ, ಕ್ರಿಯೆಗೆ ಮೂಲವಾದ ಕ್ರಿಯಾಶಕ್ತಿ, ಅವಿರಳ ಆತ್ಮಜ್ಞಾನಕ್ಕೆ ಮೂಲವಾಗಿರುವ ಜ್ಞಾನಶಕ್ತಿ ಮುಂತಾದವುಗಳನ್ನು ಜಾಗ್ರತಗೊಳಿಸಿಕೊಳ್ಳುತ್ತಾನೆ. ಈ ಎಲ್ಲ

ಶಕ್ತಿಗಳ ಸಮತೂಕದ ವಿಕಾಸಕ್ಕೆ ಎಲ್ಲ ಯೋಗಗಳ ಸಮನ್ವಯದ ವಿಲಾಸಕ್ಕೆ ವೀರಶೈವ ಶಿವಯೋಗದಲ್ಲಿ ಅವಕಾಶವಿದೆ. ಈ ಪಥವನ್ನೆ ಅನುಸರಿಸಿ ಷಟ್‌ಸ್ಥಲಾನುಸಂಧಾನದಿಂದ ಕ್ರಿಯಾಸಿದ್ಧಿ, ಅಖಂಡ ಆತ್ಮಜ್ಞಾನಸಿದ್ಧಿ, ಅವಿರಳ ಅದ್ವೈತ ಪ್ರಸಿದ್ಧಿಯನ್ನು ಪಡೆದು 'ನಿರ್ಮಲ ನಿಜಸಮಾಧಿಯಲ್ಲಿ' ನಿಂದು, ಅನುಪಮ ದಿವ್ಯತೇಜೋಮೂರ್ತಿಯಾದವನು ೧೨ ನೆಯ ಶತಮಾನದ ಅಲ್ಲಮಪ್ರಭುದೇವನು. ಅವನ ಪರಮಯೋಗದ ರಹಸ್ಯ ಹಾಗೂ ಅನುಭಾವವನ್ನು ನಿರೂಪಿಸುವದೇ ಈ ಲೇಖನದ ಆಶಯ.

ಚೆನ್ನಬಸವಣ್ಣನು ತನ್ನ ಒಂದು ವಚನದಲ್ಲಿ 'ಪಂಚಾಚಾರವೇ ಪರಮಯೋಗ'[೨] ಎಂದಿದ್ದಾನೆ. ಶಿವಯೋಗದಲ್ಲಿ ಹುದುಗಿರುವ ಗೌಪ್ಯ ಅನುಸಂಧಾನವು ರಹಸ್ಯಕ್ಕೆ ರಹಸ್ಯವಾದುದು. ಈ ಯೋಗದ ಅತ್ಯುನ್ನತ ಅನುಭವಸಿದ್ಧಿಯ ಪರಾಕಾಷ್ಠೆಯು–'ವೈರಾಗ್ಯಮೂರ್ತಿ', 'ಗುರುಗುಹೇಶ್ವರಲಿಂಗ', 'ವ್ಯೋಮಮೂರ್ತಿ' ಎನ್ನಿಸಿದ ಅಲ್ಲಮಪ್ರಭುದೇವನ 'ಪರಮಯೋಗ ಮಂತ್ರಗೋಪ್ಯ' ಎಂಬ ಗ್ರಂಥದಲ್ಲಿ ಅಡಗಿದೆ. ಶಿವಯೋಗಸಿದ್ಧಿಯ ಪರಮರಹಸ್ಯವನ್ನು ಸೊನ್ನಲಿಗೆಯ ಸಿದ್ಧರಾಮೇಶ್ವರನಿಗೆ ನೀಡಿದ ಉಪದೇಶವೆ ಈ ಗ್ರಂಥ. ಸಾಧಕನು ಸಾಧನೆಯ ಪ್ರತಿಹಂತದಲ್ಲಿಯೂ ಯೋಗಶಾಸ್ತ್ರದ ಗೌಪ್ಯ ನಿರೀಕ್ಷಣೆಯ ಜೊತೆಗೆ ಅಂತರಂಗದಾಳದಲ್ಲಿ ಕಾಣಬಹುದಾದ ಅನುಭವ ನಿರೂಪಣೆ ಈ ಕೃತಿಯಲ್ಲಿದೆ. ಇಲ್ಲಿಯ ವಿಷಯವು ಅನುಭಾವ ಪೂರ್ಣವಾಗಿದ್ದು ಸಾಧನಾಮಾರ್ಗದಲ್ಲಿದ್ದವರಿಗೆ ಮಾತ್ರ ವೇದ್ಯವಾಗಬಲ್ಲ ಪರತತ್ತ್ವ ಪ್ರಕಾಶ ಹಾಗೂ ನಿಜೈಕ್ಯಗಳ ಸಂಗಮವಾಗಿದೆ.

ಪ್ರಭುದೇವನು ತನ್ನ ಪೂರ್ವಾಶ್ರಮದಲ್ಲಿ ಹಠಯೋಗಸಿದ್ಧಿ ಹಾಗೂ ರಾಜಯೋಗ ಸಿದ್ಧನಾಗಿದ್ದನೆಂಬುದಕ್ಕೆ ಆಧಾರವುಂಟು. ಸ್ವಾತ್ಮಾರಾಮ ಕವಿ ವಿರಚಿತ ಸಂಸ್ಕೃತಗ್ರಂಥ– 'ಹಠಯೋಗ ಪ್ರದೀಪಿಕಾ' ಎಂಬುದು ಹಠಯೋಗ ಸಿದ್ಧರ ಮಾಲಿಕೆಯಲ್ಲಿ 'ಅಲ್ಲಮ ಪ್ರಭುದೇವಶ್ಚ'[೩] ಎಂಬ ಪದವನ್ನು ಸೇರಿಸುತ್ತದೆ. ಹಠಯೋಗಿಯಾಗಿದ್ದ ಗೋರಕ್ಷನಿಗೆ, ರಾಜಯೋಗಿಯಾಗಿದ್ದ ಸೊಲ್ಲಾಪುರದ ಸಿದ್ಧರಾಮೇಶ್ವರನಿಗೆ ಲಿಂಗಾಂಗಸಾಮರಸ್ಯದ ಕಲೆಯನ್ನರುಹಿ ಅವರನ್ನು ಅಲ್ಲಮ ಪ್ರಭುದೇವನು ಶಿವಯೋಗಿಗಳನ್ನಾಗಿ ಪರಿವರ್ತಿಸಿದನೆಂಬ ಅಂಶವನ್ನು ಆತನ ವಚನಗಳು, 'ಪರಮಯೋಗಮಂತ್ರಗೌಪ್ಯ' ಎಂಬ ಕೃತಿ ಹಾಗೂ ಆತನ ಅನುಭಾವದ ಪದಗಳು ಖಚಿತಪಡಿಸುತ್ತವೆ. ಹಠಯೋಗ–ರಾಜಯೋಗಗಳಲ್ಲಿ ಮೊದಲು ಬಲ್ಲಿದನಾಗಿದ್ದು, ನಂತರ ಶಿವಯೋಗಸಿದ್ಧಿಯ ಪರಮ ಅವಸ್ಥೆಯನ್ನು ಪ್ರಭುದೇವನು ಪಡೆದಿದ್ದನೆಂಬುದಕ್ಕೆ ಸಾಕ್ಷಿ ವಚನ ಹೀಗಿದೆ–

ಸ್ವಸ್ಥಪದ್ಮಾಸನದಲ್ಲಿ ಕುಳ್ಳಿರ್ದು ನೆಟ್ಟೆಲುವ ಮುರಿದು
ನಿಷ್ಠೆಯಿಂದ ಹಿಂದಣ ಬಟ್ಟೆಯ ತೆಗೆದು
ಅಮೃತವನುಂಡಿಹೆನೆಂಬವರು ಕೆಟ್ಟ ಕೇಡಿಂಗೆ ಕಡೆಯಿಲ್ಲ.
....

ಸ್ಥಾನಮಾನವೆಂಬ ಮಾತಿಂಗೆ ದೂರವಾದ ಘನವ

ಬ್ರಹ್ಮರಂಧ್ರದಲ್ಲಿ ಕಂಡೆಹೆನೆಂದಡೆ ಕಾಣಬಹುದೇ ?[೪]

ಪ್ರಭುವು ತನ್ನ ಪರಮಯೋಗದ ಸಮಾಧಿಯ ಅರಿವನ್ನು ಗೋರಕ್ಷನಿಗೆ ಹೀಗೆ ಹೇಳಿದ್ದಾನೆ–

....

ನಾರು ಬೇರಿನ ಕುಟಿಲ ಕುಹಕದ ಕಪಟಯೋಗವಲ್ಲಿದು ನಿಲ್ಲಿರೋ!
ಕಾಯಸಮಾಧಿ ಕರಣಸಮಾಧಿ ಜೀವಸಮಾಧಿ ಯೋಗವಲ್ಲಿದು ನಿಲ್ಲಿರೋ!
ನಿಜಸಹಜಸಮಾಧಿ ಗುಹೇಶ್ವರಾ! [೫]

ತನ್ನ ಸಾಧನೆಯಿಂದ ಪ್ರಭುವು 'ಕಾಯವೆಂಬ ಕದಳಿಯ ಗೆದ್ದೆ'ನೆಂದಿದ್ದಾನೆ. ಸಂಸಾರವೆಂಬ ಸಪ್ತಸಮುದ್ರ, ಭವವೆಂಬ ಮಹಾರಣ್ಯ, ಪಂಚೇಂದ್ರಿಯವೆಂಬ ವಿಷಯದ ಮಳೆ, ಕೋಪವೆಂಬ ಹಿರಿಹುಲಿ, ಅಷ್ಟಮದ–ಕಾಮವೆಂಬ ಮೂರಂಬಿನ ಸೋನೆ, ಮತ್ಸರವೆಂಬ ಕೆಂಡದ ಮಳೆ, ಅಹಂಕಾರವೆಂಬ ಗಿರಿಗಳು, ಪಂಚಭೂತವೆಂಬ ಭೂತಭಯ, ಮಾಯೆ ಎಂಬ ರಕ್ಕಸಿಯ ಪೀಡೆ, ವಿಷಯವೆಂಬ ಕೂಪದ ಸ್ಥಿತಿ, ಮೋಹದ ಬಳ್ಳಿಯ ತೊಡಕು, ಲೋಭವೆಂಬ ಆಯುಧ–ಮುಂತಾವುಗಳ ಉಪಟಳಕ್ಕೊಳಗಾಗಿ ದೇವ–ದಾನವ–ಮಾನವರೆಲ್ಲರೂ ಮತಿಗೆಟ್ಟುಹೋಗುತ್ತಾರೆ. ಪ್ರಭುವು ಇಂಥ ಕಾಯವೆಂಬ ಕದಳಿಯ ಹೊಕ್ಕರೂ, ಅದನ್ನು ಗೆದ್ದು ತನ್ನ ದೈವವಾದ ಗುಹೇಶ್ವರಲಿಂಗದ ನಿಜಸಮಾಧಿಯಲ್ಲಿ ನಿಂದು, ಪರವಶನಾಗಿ ಬಯಲಿಗೆ ಬಯಲಾಗಿದ್ದಾನೆ.[೬]

ಕಲ್ಲುಮಠದ ಪ್ರಭುದೇವನು 'ಶಿವಜ್ಞಾನ ಶಾಸನ' ಎಂದು ಹೆಸರಾದ ತನ್ನ ಪೀಠಿಕಾ ಸೂತ್ರದಲ್ಲಿ ಅಲ್ಲಮಪ್ರಭುದೇವ ಹಾಗೂ ಆತನ 'ಮಂತ್ರಗೋಪ್ಯ'ದ ಬಗೆಗೆ ಹೀಗೆ ಹೇಳುತ್ತಾನೆ :

"ಯಮ–ನಿಯಮ–ಆಸನ–ಪ್ರಾಣಾಯಾಮ–ಪ್ರತ್ಯಾಹಾರ–ಈ ಐದು ಕರ್ಮಯೋಗಂಗಳು, ಧ್ಯಾನ–ಧಾರಣ–ಸಮಾಧಿ ಈ ಮೂರು ಯೋಗಗಳು ತಮ್ಮ ಲಕ್ಷದಲ್ಲಿ ಕೂಡುವ ಯೋಗಗಳು. ಇವುಗಳಲ್ಲಿ ಐದು ಪೂರ್ವ ಯೋಗಂಗಳ ಬಿಟ್ಟು ಉತ್ತರವಾದ ಧ್ಯಾನ–ಧಾರಣ–ಸಮಾಧಿ ಯೋಗಂಗಳು ಷಟ್‌ಸ್ಥಲ ಲಿಂಗಾಂಗಯೋಗಿಗಳಿಗೂ ಉಂಟು. ಅದೆಂತೆಂದೊಡೆ ಅಷ್ಟಾಂಗಯೋಗಿಗಳ ಪರಿಯಂತಲ್ಲ. ಷಟ್‌ಸ್ಥಲ ಜ್ಞಾನಿಗಳ ಧ್ಯಾನ–ಧಾರಣ–ಸಮಾಧಿಗಳ ಪರಿಯೇ ಬೇರೆ''.[೭]

ಶಿವಯೋಗ ಸಾಧನೆಯಲ್ಲಿ ತೋರಿಬರುವ ಧ್ಯಾನ–ಧಾರಣ–ಸಮಾಧಿಗಳು ಬಹುಸೂಕ್ಷ್ಮವಾಗಿದ್ದು ಸಾಧಕನ ನಿರೀಕ್ಷಣೆಗೆ ಮಾತ್ರ ಗೋಚರಿಸುತ್ತವೆ. ಈ ಅನುಭವವನ್ನು ಕಲ್ಲುಮಠದ ಪ್ರಭುದೇವನು ಸ್ಥೂಲವಾಗಿ ನಿರೂಪಿಸಿದ್ದಾನೆ.– "ಗುರುಕರುಣದಿಂದ ಸಮ್ಯಜ್ಞಾನಮಂ ಪಡೆದು ಧ್ಯಾನಿಸುವುದೇ, **ಧ್ಯಾನಯೋಗ**. ಆ ಸಮ್ಯಜ್ಞಾನದಿಂದ ಷಟ್‌ಸ್ಥಲ ಲಿಂಗಾಂಗ ಸಂಯೋಗಾನುಭವಿಯಾಗಿ ಆ ಲಿಂಗಸುಖವನನುಭವಿಸುವದೇ **ಧಾರಣಯೋಗ**. ಇಂತು ಲಿಂಗಾಂಗಸಂಗದಿಂದ ಲಿಂಗಸ್ವರೂಪವಾಗಿ ಲಿಂಗಸುಖವನನುಭವಿಸುತಿರ್ಪ ಅರಿವಡಗಿನಿಂದುದೇ ಸಮಾಧಿಯೋಗ''.[೮]

ಶಿವಯೋಗ ಸಾಧನೆಯ ರಹಸ್ಯವು ಪ್ರಾಣಲಿಂಗಿಸ್ಥಲದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಆದರೆ ಷಟ್‌ಸ್ಥಲಸಾಧನೆಯ ಆರಂಭದಲ್ಲಿ ಶ್ರೀಗುರುವು ತನ್ನ ಹಸ್ತವನ್ನು ಶಿಷ್ಯನ ಮಸ್ತಕದಲ್ಲಿರಿಸಿ, ಶಕ್ತಿಪಾತಪ್ರಯೋಗದಿಂದ ಅನುಗ್ರಹಿಸಿ, ಸರ್ವವ್ಯಾಪಿಯಾದ ನಿರ್ಗುಣ ಬ್ರಹ್ಮವಸ್ತುವಿನ ಚೇತನವನ್ನು ಶಿಷ್ಯನಲ್ಲಿ ಜಾಗ್ರತಗೊಳಿಸುತ್ತಾನೆ. ಉಪಾಸನೆಗೆಂದು 'ಆದಿ ಅಕ್ಷರದ್ವಯುವ ಭೇದಿಸಿ ತಂದು ಶಿವಲಿಂಗವ ಮಾಡಿ, ಶಿಷ್ಯನ ಕರಸ್ಥಲದಲ್ಲಿರಿಸುತ್ತಾನೆ. ಕಾರುಣ್ಯದಿಂದ ಶಿಷ್ಯನ ಪ್ರಾಣವಾಯುವನ್ನು ಕಳೆದು, ಲಿಂಗಪ್ರಾಣಿಯನ್ನಾಗಿ ಪರಿವರ್ತಿಸುತ್ತಾನೆ. ದೀಕ್ಷಾತ್ರಯವನ್ನು ಅಳವಡಿಸಿ ಶಿವಲಿಂಗಾರ್ಚನೆ, ಅಷ್ಟಾವರಣ-ಪಂಚಾಚಾರ, ಷಟ್‌ಸ್ಥಲಾನುಸಂಧಾನದ ಮರ್ಮವನ್ನು ಅರುಹುತ್ತಾನೆ. ಪ್ರಭುದೇವನ ಜೀವನದಲ್ಲಿ ಶಿವಯೋಗಸಿದ್ಧನೆನ್ನಿಸಿದ ಅನಿಮಿಷದೇವನೆಂಬ ಮಹಿಮನ ಕಾರುಣ್ಯವುಂಟಾಯಿತು. ಅದರಿಂದ ಆ ಯೋಗಿಯ ಇಷ್ಟಲಿಂಗವೆ ಅಲ್ಲಮ ಪ್ರಭುವಿಗೆ ಲಿಂಗವಾಗುವ ಸಂದರ್ಭವುಂಟಾಗಿ,[೯] ಆ ಲಿಂಗವು ಪ್ರಭುವಿನ ಅಂತರಂಗದ ಮಹಾಜ್ಞಾನದ್ಯೋತಕವಾಯಿತು. ಆಗ ಅಲ್ಲಮನ ಮಾತು ಜ್ಯೋತಿರ್ಲಿಂಗವಾಗಿ ಪರಿಣಮಿಸಿತು, ಆತನ ಸ್ವರವೆ ಪರತತ್ತ್ವವಾಯಿತು. ಕಾರಣ ಪ್ರಭುದೇವನು ಪರಮಯೋಗಿಯಾಗಿ, ವ್ಯೋಮಕಾಯ ಸಿದ್ಧನಾಗಿ ಮೆರೆದನು. ಇಂಥ ಪರಮ ಅವಸ್ಥೆಯ ಬಗೆಗಿನ ಅನುಭವ ಹೀಗಿದೆ–

ಬಟ್ಟಬಯಲ ಮಹಾಮನೆಯೊಳಗೊಂದು
    ಹುಟ್ಟಿ ಹೊಂದದ ಶಿಶುವ ಕಂಡೆ,
ಮುಟ್ಟಿ ಪೂಜಿಸ ಹೋದಡೆ
    ನೆಟ್ಟನೆ ಆ ಶಿಶು ತನ್ನುವ ನುಂಗಿತ್ತು.
ಮುಟ್ಟಲಿಲ್ಲ ನೋಡಲಿಲ್ಲ, ಪೂಜೆ ಕಟ್ಟಳೆ ಮುನ್ನಿಲ್ಲ![೧೦]

ಪ್ರಭುದೇವನು ಶಿವಯೋಗಸಿದ್ಧನಾಗಿ ಹೊರಬಂದರೂ ತನ್ನ ಸಮಕಾಲೀನ ಶರಣರಿಗೆ ತನ್ನ ಪರಮಯೋಗದ ಮಾರ್ಗವನ್ನು ತೋರಲು ಶ್ರಮಪಟ್ಟದ್ದನೆಂದು 'ಪ್ರಭುಲಿಂಗಲೀಲೆ' 'ಶೂನ್ಯಸಂಪಾದನೆ' ಮುಂತಾದ ಗ್ರಂಥಗಳು ತಿಳಿಸುತ್ತವೆ. ಅಲ್ಲದೆ ಪ್ರಭುದೇವರ ಸ್ವಂತ ಸಾಹಿತ್ಯವು ನಿರ್ದೇಶಿಸುವಂತೆ ಕರಸ್ಥಲದ ಇಷ್ಟಲಿಂಗವು,ಕಂಗಳ ನೋಟಕ್ಕಿಂಬಾದ ಬಳಿಕ ಸಾಧಕನನ್ನು ಆಂಶಿಕವಾಗಿ ಪ್ರಾಣಲಿಂಗ, ಭಾವಲಿಂಗ ಸಂಪನ್ನನಾಗುವಂತೆ ಮುನ್ನಡೆಸುತ್ತದೆ. ಕಾರಣ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವಮಂತ್ರಗಳೆಂಬ ನಾಲ್ಕುಬಗೆಯ ಅನುಸಂಧಾನವನ್ನು ಗರ್ಭೀಕರಿಸಿಕೊಂಡಿರುವ ಇಷ್ಟಲಿಂಗ ಪೂಜೆಯು[೧೧] ಶಿವಯೋಗದ ಮುಖ್ಯಗುರಿ ಎನ್ನಬಹುದಾಗಿದೆ. ಇಂಥ ಶಿವಯೊಗದ ಪರಮೋಚ್ಚಸ್ಥಿತಿಯು ಅರ್ಥಾತ್ 'ಬಯಲು ಶರೀರ'ದ ಘನತೆಯು ಅಲ್ಲಮನದಾಗಿತ್ತು ಎಂಬುದು ಸ್ಪಷ್ಟ.

ಇಷ್ಟಲಿಂಗದ ಪೂಜೆ ಅನುಸಂಧಾನಗಳಿಗೆ ನಿರ್ನಿಮೇಷದೃಷ್ಟಿಯೇ ಮೂಲಸೂತ್ರ. ಸಾಧಕನು ಪದ್ಮಾಸನಾರೂಢನಾಗಿ ಎದೆ-ಕುತ್ತಿಗೆ-ತಲೆ-ಇವುಗಳನ್ನು ನೇರವಾಗಿರಿಸಿ ಲಿಂಗದ ಮೇಲಿರಿಸಿದ ಸ್ಥಿರದೃಷ್ಟಿಯಿಂದ ಶ್ವಾಸಗತಿಯು ಕ್ರಮೇಣ ಸುಸ್ಥಿರಗೊಳ್ಳುತ್ತದೆ. ಇಂದ್ರಿಯಗಳ ಚಾಂಚಲ್ಯವೂ, ಮನಸ್ಸಿನ ಸಂಕಲ್ಪ-ವಿಕಲ್ಪವೂ, ಭಾವದ ಬಯಕೆಯೂ ಏಕಕಾಲಕ್ಕೆ ನಿಶ್ಚಲಗೊಂಡು ಶುದ್ಧಸಂಸ್ಕಾರ ಪಡೆಯುತ್ತದೆ. ತಾಳಬದ್ಧವಾದ ಶ್ವಾಸಗತಿಯೊಡನೆ ಮಂತ್ರೋಚ್ಚಾರವೂ

ಎಚ್ಚರಗುಂದದೆ ನಡೆಯುವದರಿಂದ ನಿಸ್ತರಂಗ ಸಮುದ್ರದ ಆಳದಂತೆ ಮನಸ್ಸು ಸ್ತಬ್ಧಗೊಳ್ಳುತ್ತದೆ.. ಆಗ ಮನದ ಸಹಜವಾದ ಅಧೋಗತಿಯು ಊರ್ದ್ವಗತಿಯಾಗಿ, ಚಾಂಚಲ್ಯವಳಿದು ಮನವು ಸುಸ್ಥಿರವಾಗಿ ಸುಜ್ಞಾನಯುತವಾಗಿ ಪರಿಣಮಿಸುತ್ತವೆ. ಕರಸ್ಥಲದ ಲಿಂಗವು ಮನೋವೇದ್ಯವಾಗಿ, ಪ್ರಾಣಲಿಂಗ–ಭಾವಲಿಂಗಗಳಾಗಿ ಲಿಂಗೋಪಾಸಕನಲ್ಲಿ ಅಖಂಡ ಅರಿವು ಹಾಗೂ ಅದ್ಭುತ ಆತ್ಮಶಕ್ತಿಗಳು ಜಾಗ್ರತವಾಗುತ್ತವೆ. ಇದರಿಂದ ಸಂಚಿತ ಆಗಾಮಿ ಕರ್ಮಗಳು ನಾಶವಾಗಿ, ಪ್ರಾರಬ್ಧಕರ್ಮವು ಸವೆದು ಜನನ–ಮರಣಗಳ ಸಂಕೋಲೆ ಕಳಚುತ್ತದೆ. ಮಾಯೆ–ಮೋಹಗಳು ಹೇಳಹೆಸರಿಲ್ಲದಂತಾಗುತ್ತವೆ. ಇದು ಅಲ್ಲಮಪ್ರಭುವು ಪ್ರಮಥರಿಗೆ ಹೇಳಿದ ಮರ್ಮ. ಇದನ್ನು ಕವಿ ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಹೀಗೆ ವರ್ಣಿಸಿದ್ದಾನೆ:

ಆಲಿ ನಿಂದಡೆ ಸುಳಿದು ಸೂಸುವ
ಗಾಳಿ ನಿಲುವದು ಗಾಳಿ ನಿಲೆ ಮನ
ಮೇಲೆ ನಿಲುವದು ಮನವು ನಿಂದಡೆ ಬಿಂದು ನಿಂದಿಹುದು ।
ಲೀಲೆಯಿಂದಾ ಬಿಂದು ನಿಂದೊಡೆ
ಕಾಲಕರ್ಮವ ಗೆದ್ದು ಮಾಯೆಯ
ಹೇಳ ಹೆಸರಿಲ್ಲೆನಿಸಬಹುದ್ಧೈ ಬಸವ ಕೇಳೆಂದ । [೧೧]

ಅತ್ಯುನ್ನತ ನಿಲವಿನ ಸಾಧಕನು ಏಕಾದಶ ಇಂದ್ರಿಯಗಳಲ್ಲಿ ಲಿಂಗಭಾವವನ್ನು ತುಂಬಿಕೊಂಡು ಷಟ್‌ಸ್ಥಲಸಾಧನೆಯ ಪಥದತ್ತ ಮುನ್ನಡೆಯುತ್ತಾನೆ. ಭಕ್ತಸ್ಥಲದಲ್ಲಿ ಶ್ರದ್ಧಾಭಕ್ತಿಯಾಗಿ, ಮಹೇಶ್ವರ ಸ್ಥಲದಲ್ಲಿ ನೈಷ್ಠಿಕಭಕ್ತಿಯಾಗಿ, ಪ್ರಸಾದಿಸ್ಥಲದಲ್ಲಿ ಅವಧಾನಭಕ್ತಿಯಾಗಿ, ಪ್ರಾಣಲಿಂಗಸ್ಥಲದಲ್ಲಿ ಅನುಭವಭಕ್ತಿಯಾಗಿ, ಶರಣಸ್ಥಲದಲ್ಲಿ ಆನಂದಭಕ್ತಿಯಾಗಿ, ಐಕ್ಯಸ್ಥಲದಲ್ಲಿ ಸಮರಸಭಕ್ತಿಯಾಗಿ–ಷಡ್‌ಲಿಂಗಗಳ ಪೂಜಾಫಲ ಲಭ್ಯವಾಗುತ್ತದೆ.[೧೨]

ಷಟ್‌ಸ್ಥಲ ಅಭ್ಯಾಸದ ಅನುಸಂಧಾನದ ಆಧಾರದಿಂದ ಆಜ್ಞಾಚಕ್ರದವರೆಗಿನ ಶಕ್ತಿಯ ಕೇಂದ್ರಗಳಲ್ಲಿ ಅಡಗಿದ ಅತೀಂದ್ರಿಯ ಶಕ್ತಿಯು ಜಾಗ್ರತವಾಗುತ್ತದೆ. ನಂತರ ಸಹಸ್ರಾರ, ಶಿಖಾ ಮತ್ತು ಪಶ್ಚಿಮವೆಂಬ ಕೇಂದ್ರಗಳಲ್ಲಿ ಗಾಢವಾದ ಸಾಮರ್ಥ್ಯವೂ ಆತನಿಗೆ ಕರತಲವಾಗುತ್ತದೆ. ನಂತರ ಕೇವಲಜ್ಞಾನಾವಸ್ಥೆಯು ಪ್ರಾಪ್ತವಾಗುತ್ತದೆ. ಈ ಎಲ್ಲ ಸ್ಥಳಗಳಲ್ಲಿ ಇಷ್ಟಲಿಂಗೋಪಾಸನೆಯು ನಡೆಯಲೇಬೇಕು. ಕಾರಣ ವೀರಶೈವ ಸಿದ್ಧಾಂತ ಇಷ್ಟಲಿಂಗಧಾರಣೆಯ ಅವಶ್ಯಕತೆಯನ್ನು ದೃಢಪಡಿಸುತ್ತದೆ.

"It is insisted that in all stages there must be the worship of the Istha-linga and that it should always serve as the bases of contemplation."[೧೩]

ಶಿವಯೋಗದ ಅಂತಿಮ ಅವಸ್ಥೆಯಾದ 'ಪರಮಯೋಗ'ದಲ್ಲಿ ನೆಲೆನಿಂತ ಅಲ್ಲಮಪ್ರಭುದೇವನು ತನ್ನ ಬಹಿರಂಗದ ಕ್ರಿಯೆಗಳನ್ನೆಲ್ಲ ಮರೆತು ಲಿಂಗದ ಅನುಸಂಧಾನಗೈದ ಅಪರೂಪವಾಗಿದೆ. ನೇತ್ರಪ್ರಕಾಶದ ಸೂತ್ರವಿಡಿದು ಅಂಗೈಯ ನೋಟದೊಳು ದೃಷ್ಟಿಯನ್ನಿರಿಸಿದ್ದಾನೆ. ತನು–ಮನ–ಭಾವಗಳೆಲ್ಲ ಲಿಂಗದ (ಅಂದರೆ ಮಹಾ ಅರಿವಿನ)

ದಿವ್ಯಪ್ರಭೆಯಿಂದ ಬೆಳಗಿ ಪರಬ್ರಹ್ಮವೇ ತಾನಾಗಿದ್ದಾನೆ. ಗುಹ್ಯಕ್ಕೆ ಗುಹ್ಯವಾದ ಲಿಂಗಾನುಭವ ಹೀಗಿದೆ–

ಕಣ್ಣಿಗೆ ಕಣ್ಣು, ಕಣ್ಣೊಳು ಕಣ್ಣು, ಕಣ್ಣೇ ನೇತ್ರ,
ನೇತ್ರವೆ ಸೂತ್ರ, ಸೂತ್ರವೆ ಲಿಂಗ, ಲಿಂಗವೆ ಗುಹ್ಯ
ಗುಹ್ಯಕ್ಕೆ ಗುಹ್ಯ, ಗೋಪ್ಯಕ್ಕೆ ಗೋಪ್ಯ, ರಹಸ್ಯಕ್ಕೆ ರಹಸ್ಯ!
ಈ ನೇತ್ರ ಮಹಿಮೆಯುಂ ಗುಹೇಶ್ವರ ಬಲ್ಲನಲ್ಲದೆ
ಕಣ್ಣಗೆಟ್ಟಣ್ಣಗಳೆತ್ತ ಬಲ್ಲರು ನೋಡಯ್ಯ! [೧೪]

ಪ್ರಾಣವೆ ಏಕ, ಏಕವೆ ಸಮರಸ
ಸಮರಸವೆ ಲಿಂಗ, ಲಿಂಗವೆ ಪರಿಪೂರ್ಣ
ಪರಿಪೂರ್ಣವೆ ಪರಬ್ರಹ್ಮ, ಪರಬ್ರಹ್ಮವೇ ತಾನು!
ಇಂತೀ ನಿಜವ ಗುಹೇಶ್ವರ ಬಲ್ಲನಲ್ಲದೆ
ಕಣ್ಣಗೆಟ್ಟಣ್ಣಗಳೆತ್ತ ಬಲ್ಲರು.............! [೧೫]

ಪ್ರಭುದೇವನ 'ಪರಮಯೋಗ ಮಂತ್ರಗೋಪ್ಯ'ದಲ್ಲಿ ಆತನು ಪಡೆದುಕೊಂಡಿದ್ದ ದಿವ್ಯಾನುಭವವು ರಹಸ್ಯಪೂರ್ಣವಾಗಿ ನಿರ್ದೇಶನಗೊಂಡಿದೆ. ಅಲ್ಲಮನು ಕೊಡುವ ಸಾಧನೆಯ ವಿವರಗಳು ಬಹಳ ಮಾರ್ಮಿಕವಾಗಿವೆ:–ಶರಣನು ಮೊದಲು ಶುಚಿರ್ಭೂತನಾಗಬೇಕು. ನಂತರ ಆಸನಾಸೀನನಾಗಿ ಲಿಂಗಾರ್ಚನೆಗೈಯಬೇಕು. ಬಳಿಕ, ಆಧಾರಚಕ್ರವನ್ನು ದೃಢಗೊಳಿಸಿ ಸುಸ್ಥಿರನಾಗಬೇಕು. ಶಿವ–ಜೀವರನ್ನು (ಲಿಂಗ–ಅಂಗಗಳನ್ನು) ಒಂದುಗೂಡಿಸಿ ಆದಿಯಾದ ಓಂಕಾರವನ್ನು ತಿಳಿದು ಪ್ರಾಣದಲ್ಲಿ ಪ್ರಕಾಶಿಸುವ ಪ್ರಾಣಲಿಂಗವನ್ನು ಜ್ಞಾನದೃಷ್ಟಿಯಿಂದ ನಿರೀಕ್ಷಿಸಿದರೆ ಅದೇ ಜ್ಞಾನಯೋಗ[೧೬] ಸಕಲ ಇಂದ್ರಿಯ ಸುಖಗಳನ್ನು ಲಿಂಗಾರ್ಪಿತಗೊಳಿಸಿ, ಲಿಂಗವೆ ಅಂಗ, ಅಂಗವೇ ಲಿಂಗವಾಗಿ ಚಿದಾನಂದದಲ್ಲಿ ಓಲಾಡಿದವನೇ ಶಿವಯೋಗಿ ಎನ್ನಿಸುತ್ತಾನೆ. ಅಧೋಮುಖವಾಗಿ ವರ್ತಿಸುವ ಜೀವನ ವರ್ತನೆಯನ್ನು ಸತ್ಕ್ರಿಯೆಯಿಂದ ಮೆಟ್ಟಿ ಜ್ಞಾನಾಗ್ನಿಯಿಂದ ಸುಟ್ಟು ಮಂತ್ರೋಚ್ಚಾರದಿಂದ ಶುದ್ಧಗೊಳಿಸಲು ಅಖಂಡ–ಪರಿಪೂರ್ಣ ನಿರವಯ ಲಿಂಗವು ಪ್ರತ್ಯಕ್ಷವಾಗಿ ತೋರುತ್ತದೆ.[೧೭] ಇಂಥ ಶಿವತತ್ವಾನುಭಾವಿಗೆ ತೋರಿದುದೆಲ್ಲ ಅಪೂರ್ಣವೆನಿಸುತ್ತದೆ. ಪರಬ್ರಹ್ಮವು ಆಜ್ಞಾಚಕ್ರದಲ್ಲಿ ಸ್ಫಟಿಕವರ್ಣದ ಜ್ಯೋತಿಯಂತೆ ತೊಳಗಿಬೆಳಗುತ್ತದೆ. ನಾದಬಹ್ಮದಿಂದ ಸ್ಥೂಲ–ಸೂಕ್ಷ್ಮ–ಕಾರಣ–ಮಹಾಕಾರಣ ತನುಗಳಲ್ಲಿ ತಾನೊಬ್ಬನೇ ಪರಿಪೂರ್ಣನಾಗಿ ಪರಮಯೋಗಿಯಾಗುತ್ತಾನೆ.[೧೮] ಎಂಬುದು ಪ್ರಭುದೇವನ ಸ್ಪಷ್ಟ ಸಂದೇಶ.

ಅಷ್ಟಕುಳಗಳ ಮೆಟ್ಟಿ ಸುಟ್ಟು ಶುದ್ಧೈಸಲಾ
ಬಟ್ಟಬಯಲಿನ ಘಟ್ಟ ದೃಷ್ಟವಾಗಿ।
ನೆಟ್ಟನೆಯ ದೃಷ್ಟಿ ತನ್ನಷ್ಟವೆಂದಗ್ರಜವು
ಷಷ್ಟದಳ ಪೀಠಗಳ ಮೆಟ್ಟಿ ನಿಂದೆ ||

ನಿಟಿಲ ಭ್ರೂಮಧ್ಯದ ಸ್ಫಟಿಕವರ್ಣದ ಜ್ಯೋತಿ
ಘಟದೊಳಗೆ ತಾನಾಗಿ ತೊಳಗಿ ಬೆಳಗಿ।
ವಟವೃಕ್ಷದ ಕೆಳಗೆ ಲೋಕಾದಿಲೋಕಗಳು
ಘುಟಿಕೆಯೊಂತಡಗಿದ ಪರಾತ್ಪರವಿದು ||

ಆಕಾಶದ ಮೇಲೆ ಅರಿದ ತಲೆಯನು ಕಂಡೆ
ಬೇಕು ಬೇಡೆನ್ನದದು ಸಾಕೆನ್ನದು।
ಲೋಕಾದಿಲೋಕದೊಳಗೇಕೋಭರಿತನಾಗಿ
ಸಾಕಾರವಡಗಿದ ಪರಮಯೋಗಿ ||

ಶತಪತ್ರ ಶತಲಿಪಿಯು ಶತಸಹಸ್ರದಳವು
ಶತಕೋಟಿ ಸೋಮಸೂರ್ಯಪ್ರಕಾಶ।
ಶತಪತ್ರವನು ಮೆಟ್ಟಿ ಹತಮಾಡಿ ಗತಿಗೆಡಿಸಿ
ಅತಿಶಯದ ಮಣಿಮಂಟಪದೊಳು ನಿಂದೆನು ||

ಪ್ರಭುದೇವನ ಅನುಭವದಂತೆ ಮಾನವನ ಶಿರಸ್ಸಿನಲ್ಲಿ ಶತಪತ್ರಕಮಲವಿದೆ. ಅಲ್ಲಿ ಕೋಟಿಸೂರ್ಯ ಕೋಟಿಚಂದ್ರ ಪ್ರಕಾಶವುಳ್ಳ ನಿಷ್ಕಲಲಿಂಗವೆಂದು ಕರೆಯಲಾದ ಚಿತ್ಪ್ರಭೆಯ ಕಳೆಯಿದೆ. ಆ ಚಿತ್ಪ್ರಭೆಯು ಶರಣನ ಸರ್ವಾಂಗದಲ್ಲಿ ತುಂಬಿ, ದೇಹಭಾವವನ್ನು ಮೆಟ್ಟಿ ಜೀವವರ್ತನೆಯನ್ನು ನಷ್ಟಮಾಡಿ, ಕರಣವೃತ್ತಿಗಳನ್ನು ನಿಲ್ಲಿಸುತ್ತದೆ. ಬ್ರಹ್ಮರಂಧ್ರದಲ್ಲಿರುವ ಈ ನಿಷ್ಕಲಲಿಂಗದಲ್ಲಿ ಪ್ರಭುದೇವನು ಸಮರಸಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಆತನೆ ಹೇಳುವಂತೆ, ಸಮ್ಯಕ್ ಜ್ಞಾನದಿಂದ ಜೀವಪರಮರ ನೆಲೆಯರಿತು ಪರಮಾತ್ಮನೆ ಆದ ಶರಣನು 'ಪರಮಯೋಗಿ' ಯಾಗುತ್ತಾನೆ. ಇಂಥ ಯೋಗಿಯು ಅವಸ್ಥಾತ್ರಯಗಳಲ್ಲಿ ಅಕಾರ–ಉಕಾರ–ಮಕಾರವಾಗಿ, ತನುತ್ರಯದಲ್ಲಿ ಇಷ್ಟ–ಪ್ರಾಣ–ಭಾವಲಿಂಗ ಸ್ವರೂಪವಾಗಿ ಸಹಸ್ರಾರಚಕ್ರದಲ್ಲಿ ನಿಷ್ಕಲ ಲಿಂಗಸ್ವರೂಪವಾಗಿ, ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ, ಪಶ್ಚಿಮಚಕ್ರದ್ವಾರದಲ್ಲಿ ನಿರಂಜನ ಲಿಂಗರೂಪಾಗಿ ಬೆಳಗುತ್ತಾನೆ. ನಿರಂತರ ತೂರ್ಯಾಸ್ಥಿತಿಯಲ್ಲಿ ಉಳಿಯುತ್ತಾನೆ. ಈ ಸ್ಥಿತಿಯನ್ನು ಕರತಲಾಮಲಕಗೊಳಿಸಿಕೊಂಡಿದ್ದ ಅಲ್ಲಮಪ್ರಭುವು ತನ್ನ ನಿರ್ಮಲ ನಿರ್ದೇಹ ಸ್ಥಿತಿಯಲ್ಲಿ ಹಾಡಿದ ಬೆಡಗಿನ ಸ್ವಾನುಭಾವ ಇಂತಿದೆ–

ಹಾಳಮೇಲಣ ಮಣಿಯ ಕಾಣಲಾರಳವಲ್ಲ
ಹೌಳಿ ಹೌಳಿಯ ಕೋಣೆ ಕೋಣೆಯೊಳಗೆ
ಮೇಲುಗಿರಿ ಶಿಖರ ಪಶ್ಚಿಮದ್ವಾರವನು ಪೊಗಲು
ಕಾಣಬಾರದ ಕದಳಿಯುಂಟು ನೋಡಾ ||

ಖೇಚರತ್ವದ ನೆಲೆಯ ಭೂಚರರು ಬಲ್ಲರೆ
ವಾಚಾಳಕರ ಮಾತಿಗಿದು ಸಲ್ಲದು
ಆಚಾರದನುಭಾವ ಭಕ್ತಿ ನೆಲೆಗೊಂಡಂಗೆ

ಸೂಚಿಸುವುದಾ ಮಹಾಪರಮಪದವು ||

ಬ್ರಹ್ಮರಂಧ್ರದ ಕೊನೆಯ ಮರ್ಮಾದಿ ಮರ್ಮವನು
ನಿರ್ಮಲನು ನಿರ್ದೇಹಿ ತಾ ಬಲ್ಲನು
ಮರ್ಮವರಿದಾ ನಿತ್ಯ ನಿರ್ಮಳಂಗಲ್ಲದೆ
ಕರ್ಮಿ ಭೂಭಾರಿಗಳಿಗಿದು ಸಲ್ಲದು ||[೧೯]

ಶಿವಯೋಗಿ ಹಾಗೂ ಪರಮಯೋಗಿ–ಇವರ ಆಂತರಿಕ ಅವಸ್ಥೆ–ಅನುಭಾವಗಳ ಅಂತರವನ್ನು ಪ್ರಭುದೇವನು ಬಹುಸೂಕ್ಷ್ಮವಾಗಿ ನಿವೇದಿಸಿದ್ದಾನೆ. ಜ್ಞಾನ–ಅಜ್ಞಾನವೆಂಬ ಜನನ–ಮರಣಗಳನ್ನು ನಷ್ಟಮಾಡಿದವನೇ ಶಿವಯೋಗಿ! ಸದಮಲ ಬ್ರಹ್ಮದ ಬೆಳಗಿನೊಳಗೆ ಧರ್ಮಾರ್ಥಕಾಮಮೋಕ್ಷವೆಂಬ ಪುರಾಷಾರ್ಥಗಳನ್ನು, ಸಾಲೋಕ್ಯಾದಿ ಪದಗಳನ್ನು ತಿರಸ್ಕರಿಸಿ ಲಿಂಗಾಂಗ ಸಮರಸದಲ್ಲಿ ನಿರ್ಭಯಲಾದ ಚಿಲ್ಲಿಂಗಸ್ವರೂಪನೂ ಚಿತಪ್ರಕಾಶನೂ **ಪರಮಯೋಗಿ**–ಎಂಬುದು ಪ್ರಭುದೇವನ ಅನುಭಾವ. ಲಿಂಗಾನುಸಂಧಾನದಿಂದ ಧ್ಯಾನದ ತುಟ್ಟತುದಿಯನ್ನೇರಿ ತೂರ್ಯಾತೀತ ಅವಸ್ಥೆಯಲ್ಲಿ ಸೋಂಕಲಾಗದಂಥ ಪರಬ್ರಹ್ಮಸ್ಥಿತಿಯಲ್ಲಿ ಮೆರೆದವನು ಪ್ರಭುದೇವ!

ಶಿವಯೋಗ ಸಾಮ್ರಾಜ್ಯದಲ್ಲಿ ಪರಮಯೋಗಿ ಎನ್ನಿಸಿದ ಅಲ್ಲಮಪ್ರಭುವು ಬಯಲೊಡಲಿಗನು. ಅವನು ಕಂಡದ್ದೆಲ್ಲ ಪಾವನ, ಕೇಳಿದುದೆಲ್ಲ ಪರಮಬೋಧೆ, ಮುಟ್ಟಿದುದೆಲ್ಲ ಪರುಷದ ಸೋಂಕು, ನುಡಿಸಿದವರೆಲ್ಲ ಸದ್ಯೋನ್ಮುಕ್ತರು, ಮುಟ್ಟಿದ ಧರೆಯೆಲ್ಲ ಅವಿಮುಕ್ತಿಕ್ಷೇತ್ರ, ಸೋಂಕಿದ ಜಲವೆಲ್ಲ ಪುಣ್ಯತೀರ್ಥಂಗಳು.[೨೦] ಅಂತೆಯೆ ಅವನು ತನ್ನ ಅಗಾಧ ಸಾಧನೆಯ ಫಲವಾಗಿ ಆಕಾರ ನಿರಾಕಾರವೆರಡನ್ನು ಧರಿಸಬಲ್ಲ ಶಿವಯೋಗಸಿದ್ಧನಾದನು, ವ್ಯೋಮ ಮೂರ್ತಿಯಾದನು, ಪರಬ್ರಹ್ಮವಸ್ತುವೇ ತಾನಾದನು. ಪರತತ್ತ್ವದಲ್ಲಿ ಅಭೇದಸ್ವರೂಪವಾಗಿದ್ದ ಈ ಸ್ಥಿತಿಯನ್ನು ಅವನ ವಾಣಿಯಿಂದಲೆ ಅರಿಯಬಹುದಾಗಿದೆ :

'ಕಣ್ಗೆ ಕಾಬಡೆ ರೂಪಲ್ಲ, ಕೈಗೆ ಸಿಲುಕುವಡೆ ದೇಹಿಯಲ್ಲ
ನಡೆವಡೆ ಗಮನಿಯಲ್ಲ, ನುಡಿವಡೆ ವಾಚಾಳನಲ್ಲ,
ನಿಂದಿಸಿದವರಿಗೆ ಹಗೆಯಲ್ಲ, ಹೊಗಳಿದವರಿಗೆ ಕೆಳೆಯಲ್ಲ!
....
ಕಾಯಗೊಂಡ ಮಾನವರಂತೆ ಕೈಗೆ ಸಿಲುಕ!
ಪ್ರಾಣವಿಡಿದ ಜೀವಗಳಂತೆ ಎಡೆಯಾಡದಿಪ್ಪ
....
ಗುಹೇಶ್ವರನ ನಿಲವು ಬರಿಯ ಸ್ತೋತ್ರಕ್ಕೆ ನಿಲುಕದು! ....'[೨೧]

ಅಡಿಟಿಪ್ಪಣಿಗಳು

೧ ಚನ್ನಬಸವಣ್ಣನವರ ವಚನ (ಕ.ವಿ.ವಿ. ಪ್ರಕಟಣೆ ವ.ಸಂ. ೧೪೫೬)
'ಮಂತ್ರಯೋಗ ಹಠಯೋಗ ಲಯಯೋಗ ಜ್ಞಾನಯೋಗ

ಇಂತೀ ಎಲ್ಲ ಯೋಗವನರಿದು ಮರೆದು
ಭಕ್ತಿಯೋಗದ ಮೇಲೆ ನಿಂದು
ರಾಜಯೋಗದ ಮೇಲೆ ನಡೆವ ನುಡಿವ ಕಾಣಿರೋ' ।

೨ ಚನ್ನಬಸವಣ್ಣನವರ ವಚನಗಳು ೨೭

೩. ಸ್ವಾತ್ಮಾರಾಮಕೃತ–'ಹಠಯೋಗಪ್ರದೀಪಿಕಾ' I. ೮

೪ ಪ್ರಭುದೇವರ ವಚನಗಳು ವ. ೧೧೮೦

೫ ಶೂನ್ಯಸಂಪಾದನೆ (ಗೋರಕ್ಷ ಸಂಪಾದನೆ ವ. ೫)

೬ ಪ್ರಭುದೇವರ ವಚನಗಳು ೧೨೦೧

೭ ಅಲ್ಲಮ ಪ್ರಭುದೇವ ಕೃತ ಪರಮಮಂತ್ರಗೋಪ್ಯ –ಪೀಠಿಕೆ ;
ಸಿದ್ಧರಾಮ ಸಾಹಿತ್ಯ ಸಂಗ್ರಹ ಪುಟ ೧೧೫

೮ ಅದೇ ಮತ್ತು ಸಟೀಕ ಸಂಸ್ಕೃತ 'ಶಿವಯೋಗಪ್ರದೀಪಿಕಾ' ೪–೧೧

೯ ಪ್ರಭುದೇವರ ವಚನಗಳು.
'ಕೊಂದೆ ನಿಮ್ಮಯ್ಯನ, ಕೊಂಡೆ ಲಿಂಗವ!' (ಚನ್ನಬಸವ) ಎಂಬುದು ಪ್ರಭುದೇವರಿಗೆ ಹೇಳಿದ ಮಾರ್ಮಿಕ ನುಡಿ. ಗುಹೆಯಲ್ಲಿದ್ದ ಮಹಾಶಿವಯೋಗಿ ಅನಿಮಿಷದೇವನು ಕಾರುಣ್ಯದಿಂದ ಪ್ರಭುದೇವರನ್ನು ಈಕ್ಷಿಸಲು, ಅದನ್ನು ಗುರುಸಂಕೇತ ಎಂದು ತಿಳಿದ ಪ್ರಭುದೇವನು ಆತನ ಲಿಂಗವನ್ನು ಕೈಗೆತ್ತಿಕೊಂಡನು. ಆ ಲಿಂಗದೊಡನೆಯೆ ಅನಿಮಿಷಯ್ಯಗಳ ಪ್ರಾಣ ಪ್ರಭುವಿನಲ್ಲಿ ಲೀನವಾಯಿತು; ಜೊತೆಗೆ ಆತನನ್ನು ಶಿವಯೋಗಿಸಿದ್ಧನನ್ನಾಗಿ ಪರಿವರ್ತಿಸಲಾಯಿತು. (Cf 'ಪ್ರಭುದೇವರ ರಗಳೆ'–ಹರಿಹರದೇವ ಕೃತ) ಪ್ರಭುದೇವನ ಜೀವನದಲ್ಲಿ ಘಟಿಸಿಹೋಯಿತೆನ್ನಲಾದ ಈ ಸನ್ನಿವೇಶವು ಆತನ ಪರಮಯೋಗದ ಸಿದ್ಧಾವಸ್ಥೆಗೆ ಕಾರಣವಾಗಿರಬೇಕು.

೯ಅ. ಪ್ರಭುದೇವರ ವಚನಗಳು ವ. ೧೧೩೪, ೧೧೫೭

೧೦ ಚೆನ್ನಸದಾಶಿವಯೋಗೀಂದ್ರ ವಿರಚಿತ–'ಶಿವಯೋಗಪ್ರದೀಪಿಕಾ' (ಸಂಸ್ಕೃತಕೃತಿ)
Cf ಜ್ಞಾನಂ ಶಿವಮಯಂ ಭಕ್ತಿಶ್ಶೈವೀಧ್ಯಾನಂ ಶಿವಾತ್ಮಕಂ।
ಶೈವಮಂತ್ರಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ ||

೧೧ ಪ್ರಭುಲಿಂಗಲೀಲೆ (ಚಾಮರಸಕೃತ) ಸಂಧಿ ೧೮ ಪದ್ಯ ೨೨,
ಸ್ವತಂತ್ರ ಸಿದ್ಧಲಿಂಗೇಶ್ವರ ವಚನ ೨೯೨
ಚನ್ನಬಸವಣ್ಣನವರ ವಚನಗಳು ವ. ೧೦೮೨

೧೨ ವೀರಶೈವ ಪರಿಭಾಷೆಯು ತಿಳಿಸುವಂತೆ ಷಟ್‌ಸ್ಥಲಸಾಧನೆ ನಡೆದಾಗ ಇಷ್ಟಲಿಂಗವು ಆಚಾರಲಿಂಗ–ಗುರುಲಿಂಗಗಳನ್ನು ಆವಿರ್ಭವಿಸಿಕೊಂಡು, ಪ್ರಾಣಲಿಂಗವು ಶಿವಲಿಂಗ–ಜಂಗಮಲಿಂಗಗಳನ್ನು ಆವಿರ್ಭವಿಸಿಕೊಂಡು, ಭಾವಲಿಂಗವು ಜಂಗಮಲಿಂಗ–ಮಹಾಲಿಂಗಗಳನ್ನು ಆವಿರ್ಭಸಿಕೊಂಡಿರುತ್ತದೆ. ವೀರಶೈವ ದರ್ಶನದ ಪ್ರಕಾರ ಐಕ್ಯಸ್ಥಲದ ನಂತರವೂ ನಿಷ್ಕಲ, ನಿರಂಜನ, ನಿಶ್ಶೂನ್ಯ–ಎಂಬ ಸ್ಥಲಗಳ ಕಲ್ಪನೆ ಇದ್ದು, ಈ ಸ್ಥಲಗಳ ಅನುಸಂಧಾನದಲ್ಲಿ ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಪೂಜೆ ನಡೆಯುತ್ತದೆ. ಈ ಲಿಂಗಗಳ ಅರುವಿನ ಸ್ಥಾನಗಳಿಗೆ ಕ್ರಮವಾಗಿ ಬ್ರಹ್ಮಚಕ್ರ, ಪಶ್ಚಿಮಚಕ್ರ–ಎನ್ನಲಾಗುತ್ತದೆ.-Cf 'ವೀರಶೈವ ತತ್ತ್ವಪ್ರಕಾಶ' ಪರಿಶಿಷ್ಟ ಪು.೨೦

೧೩ ಡಾ. ಎಸ್. ಸಿ. ನಂದೀಮಠ–"A handbook of veerashaivism" p 176

೧೪ ಪ್ರಭುದೇವನ ವಚನಗಳು ವ. ೧೨೩೮

೧೫ ಪ್ರಭುದೇವನ ವಚನಗಳು ವ. ೧೨೩೭

೧೬ ಅಲ್ಲಮಪ್ರಭುದೇವ ಕೃತ–'ಪರಮಯೋಗ ಮಂತ್ರಗೋಪ್ಯ' ಪದ್ಯ ೪,೫

೧೭ ಅಲ್ಲಮಪ್ರಭುದೇವ ಕೃತ–'ಪರಮಯೋಗ ಮಂತ್ರಗೋಪ್ಯ' ಪದ್ಯ ೬

೧೮ ಅಲ್ಲಮಪ್ರಭುದೇವ ಕೃತ–'ಪರಮಯೋಗ ಮಂತ್ರಗೋಪ್ಯ' ಪದ್ಯ ೭–೧೧

೧೯ ಅಲ್ಲಮಪ್ರಭುದೇವ ಕೃತ–'ಪರಮಯೋಗ ಮಂತ್ರಗೋಪ್ಯ' ಪದ್ಯ ೨೪–೨೬

೨೦ ಪ್ರಭುದೇವರ ವಚನಗಳು ವ. ೧೩೩೭

೨೧ ಪ್ರಭುದೇವರ ವಚನಗಳು ವ. ೧೩೩೯

□ □

ಕುಂದಕುಂದರ ಬೋಧಪಾಹುಡ

• ಎಸ್. ಪಿ. ಪಾಟೀಲ

ಜೈನ ದಿಗಂಬರಸಂಪ್ರದಾಯದಲ್ಲಿ ಆಚಾರ್ಯ ಕುಂದಕುಂದರಿಗೆ ವಿಶೇಷ ಸ್ಥಾನವಿದೆ. ಮಂಗಲಕಾರ್ಯದ ಆರಂಭದಲ್ಲಿ 'ಮಂಗಲಂ ಭಗವಾನ್ ವೀರೋ, ಮಂಗಲಂ ಗೌತಮೋಗಣಿ, ಮಂಗಲಂ ಕುಂದಕುಂದಾರ್ಯೋ, ಜೈನಧರ್ಮೋಸ್ತು ಮಂಗಲಂ' ಎಂದು ಭಗವಾನ್ ಮಹಾವೀರ ಮತ್ತು ಗೌತಮಗಣಧರರ ತರುವಾಯ ಇವರನ್ನು ನೆನೆಯಲಾಗಿದೆ. ದ್ರಾವಿಡಗಣ ಮತ್ತು ಸೇನಗಣದ ಆಚಾರ್ಯರು ತಮ್ಮನ್ನು ಕುಂದಕುಂದಾನ್ವಯರೆಂದು ಕರೆದುಕೊಳ್ಳುತ್ತಾರೆ. ಅಂಗಜ್ಞಾನವುಳ್ಳ ಆಚಾರ್ಯರು ಜೈನಸಂಘದ ಪರಂಪರೆಯ ಮೊದಲನೆಯ ಯುಗಕ್ಕೆ ಸೇರಿದವರಾದರೆ ಎರಡನೆಯ ಯುಗ ಆರಂಭವಾಗುವುದೇ ಕುಂದಕುಂದರಿಂದ. ಮಹಾವೀರರಿಂದ ನಡೆದು ಬಂದ ಪೂರ್ವಸಂಘದ ರಕ್ಷಣೆಯನ್ನು ಇವರು ಮಾಡಿದರು.

ಆಚಾರ್ಯ ಕುಂದಕುಂದರು ಆಧ್ಯಾತ್ಮರಸಿಕ ಆತ್ಮಾನುಭಾವ ಹೊಂದಿದ ಮಹರ್ಷಿಗಳಾಗಿದ್ದರು. ಯುಗಪ್ರವರ್ತಕ ಆಚಾರ್ಯರಾಗಿದ್ದರೂ ಅವರ ಜೀವನವೃತ್ತಾಂತ ವಿವರವಾಗಿ ಲಭ್ಯವಾಗಿಲ್ಲ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುತ್ತಿ ತಾಲೂಕಿನ ಕೊನೆಕೊಂಡ್ಲ ಇವರ ಮೂಲಸ್ಥಳವೆಂದು ಡಾ. ಪಿ. ಬಿ. ದೇಸಾಯಿ ನಿರ್ಧರಿಸಿದ್ದಾರೆ. ಪದ್ಮನಂದಿ ಅವರ ಮೊದಲ ಹೆಸರು. ಅವರ ಜನನ ಕ್ರಿ. ಪೂ. 108 ಎಂಬುದಾಗಿ ಶ್ರೀ ಬಲಭದ್ರಜೈನ ನಿರೂಪಿಸಿದ್ದಾರೆ. ಅವರಿಗೆ ವಕ್ರಗ್ರೀವಾಚಾರ್ಯ, ಏಲಾಚಾರ್ಯ, ಗೃದ್ಧ್ರಪಿಂಛಾಚಾರ್ಯ ಎಂಬ ಹೆಸರುಗಳಿದ್ದಂತೆಯೂ ತಿಳಿಯುತ್ತದೆ.ಕರ್ನಾಟಕವು ಕುಂದಕುಂದರ ತಪೋಭೂಮಿಯಾಗಿದೆ. ಅವರು ಚಾರಣಋದ್ಧಿಯುಳ್ಳ ಮುನಿಗಳಾಗಿದ್ದರೆಂಬುದನ್ನು ಕನ್ನಡನಾಡಿನ ಅನೇಕ ಶಾಸನಗಳು ಉಲ್ಲೇಖಿಸಿವೆ. ಕನ್ನಡದ ಅನೇಕ ಪ್ರಸಿದ್ಧ ಜೈನಕವಿಗಳು ಅವರನ್ನು ಗೌರವದಿಂದ ಸ್ಮರಿಸಿಕೊಂಡಿದ್ದಾರೆ.

ಕುಂದಕುಂದ ಆಚಾರ್ಯರ ವಿಚಾರಗಳು ಜೈನಸಿದ್ಧಾಂತ ಮತ್ತು ಜೈವದರ್ಶನದ ತಳಹದಿಯಾಗಿವೆ. ದಿಗಂಬರ ಜೈನ ಸಾಹಿತ್ಯದಲ್ಲಿ 'ಷಟ್‌ಖಂಡಾಮಗ, 'ಧವಲ', 'ಮಹಾಧವಲ,' 'ಜಯಧವಲ'ಗಳ ತರುವಾಯ ಕುಂದಕುಂದರ ಕೃತಿಗಳಿಗೆ ಪರಂಪರೆಯ ಪ್ರಾಚೀನತೆ ಮತ್ತು ಪ್ರಾಮಾಣಿಕತೆಯ ದೃಷ್ಟಿಯಿಂದ ಮಹತ್ವದ ಸ್ಥಾನವಿದೆ. ಅವರ ಕೃತಿಗಳು ಸಂಖ್ಯೆಯದೃಷ್ಟಿಯಿಂದ ವಿಪುಲವಾಗಿರುವಂತೆಯೇ ವಿಚಾರ ಸಂಪತ್ತಿನಿಂದಲೂ ಕೂಡಿದವುಗಳಾಗಿವೆ.

ಕುಂದಕುಂದರ ಉಪಲಬ್ಧ ಕೃತಿಗಳು

1 **ಷಟ್‌ಪ್ರಾಭೃತ** (ಛಪ್ಪಾಹುಡ): 84 ಪ್ರಕರಣಗಳ ಉಲ್ಲೇಖವಿದ್ದರೂ ಪ್ರಸ್ತುತ ಎಂಟು ಪಾಹುಡಗಳ ಹೆಸರುಗಳು ಮಾತ್ರ ಉಪಲಬ್ಧವಿವೆ: (i) ದಂಸಣ, (ii) ಚಾರಿತ್ತ,

(iii)ಸುತ್ತ, (iv) **ಬೋಧ,** (v) ಭಾವ, (vi) ಮೋಕ್ಷ, (vii) ಲಿಂಗ, (viii) ಶೀಲ.

2 **ದಶಭಕ್ತಿ:** ತೀರ್ಥಂಕರಭಕ್ತಿ, ಸಿದ್ಧಭಕ್ತಿ, ಶ್ರುತಭಕ್ತಿ, ಚಾರಿತ್ರಭಕ್ತಿ, ಅನಗಾರಭಕ್ತಿ, ಆಚಾರ್ಯಭಕ್ತಿ, ನಿರ್ವಾಣಭಕ್ತಿ, ಪಂಚಪರಮೇಷ್ಠಿಭಕ್ತಿ, ನಂದೀಶ್ವರಭಕ್ತಿ ಮತ್ತು ಶಾಂತಿಭಕ್ತಿ.

3 **ಬಾರಸ ಅಣುವೆಕ್ಖಾ:** ಹನ್ನೆರಡು ಅನುಪ್ರೇಕ್ಷೆಗಳ ವಿವರ.

4 **ಪಂಚಾಸ್ತಿಕಾಯ:** ಜೀವ, ಅಜೀವ, ಧರ್ಮ, ಅಧರ್ಮ, ಮತ್ತು ಆಕಾಶ–ಈ ಪಂಚಾಸ್ತಿಕಾಯಗಳ ವರ್ಣನೆ ಇಲ್ಲಿದೆ. ಇಲ್ಲಿನ ಕೆಲವು ಗಾಹೆಗಳನ್ನು 'ಸಿದ್ಧಾಂತಸೂತ್ರ'ಗಳೆಂದು ಅಮೃತಚಂದ್ರ ಸೂರಿ ಅವರು ಕರೆದಿದ್ದಾರೆ.

5 **ಪ್ರವಚನಸಾರ:** ಆತ್ಮನ ಮೂಲಗುಣವಾದ ಜ್ಞಾನದ ಸ್ವರೂಪವನ್ನು ಸೂಕ್ಷ್ಮವಾಗಿ ವಿವೇಚಿಸಲಾಗಿದೆ. 'ಚಾರಿತ್ತಂ ಖಲು ಧಮ್ಮೊ' ಎಂದು ಹೇಳಲಾಗಿದೆ. ಜೈನ ಪ್ರವಚನದ ಸಾರ ಇದಾಗಿದೆ.

6 **ಸಮಯಸಾರ:** ಕುಂದಕುಂದರ ಶ್ರೇಷ್ಠ ಗ್ರಂಥ, 'ಗ್ರಂಥಾಧಿರಾಜ'ವೆಂಬ ಮನ್ನಣೆ ಪಡೆದಿದೆ. ಶುದ್ಧ ಆತ್ಮನ ಗುಣಧರ್ಮಗಳನ್ನು ವ್ಯವಹಾರ ನಿಶ್ಚಯ ದೃಷ್ಟಿಗಳಿಂದ ವಿವೇಚಿಸಿದ್ದಾರೆ.

7 **ನಿಯಮಸಾರ:** ನಿಯಮವು ದರ್ಶನ, ಜ್ಞಾನ, ಚಾರಿತ್ರ ರೂಪವಾಗಿದೆ. ಆತ್ಮನ ಶುದ್ಧ ರೂಪವನ್ನು ತಿಳಿಯುವುದರಿಂದಲೇ ಮೋಕ್ಷಪ್ರಾಪ್ತಿ ಸಾಧ್ಯವೆಂದು ತಿಳಿಸಲಾಗಿದೆ.

8 **ರಯಣಸಾರ:** ಶ್ರಾವಕ ಮತ್ತು ಮುನಿಗಳ ಆಚಾರದ ವರ್ಣನೆ, ದಾನ, ಪೂಜೆಗಳು ಶ್ರಾವಕರಿಗೂ, ಧ್ಯಾನ–ಸ್ವಾಧ್ಯಾಯಗಳು ಮುನಿಗಳಿಗೂ ಆವಶ್ಯವೆಂದು ತಿಳಿಸಲಾಗಿದೆ.

ಅಷ್ಟಪಾಹುಡ ಗ್ರಂಥದಲ್ಲಿ ದರ್ಶನ, ಸೂತ್ರ, ಚರಿತ್ರ, ಬೋಧ, ಭಾವ, ಮೋಕ್ಷ, ಲಿಂಗ ಮತ್ತು ಶೀಲವೆಂಬ ಎಂಟು ಪಾಹುಡಗಳು ಅಂತರ್ಗತವಾಗಿವೆ. ಈ ಎಂಟೂ ಪಾಹುಡಗಳು ಸ್ವತಂತ್ರರಚನೆಗಳಾಗಿದ್ದು, ಪ್ರತಿಯೊಂದು ಪಾಹುಡದ ಆರಂಭದಲ್ಲಿ ಪ್ರತ್ಯೇಕ ಮಂಗಲಾಚರಣೆಯನ್ನು ರಚಿಸಿದ್ದಾರೆ. '**ಬೋಧಪಾಹುಡ**' ವು ನಾಲ್ಕನೆಯದಾಗಿದ್ದು, ಮೂಲ ಪರಂಪರೆಯ ರಕ್ಷಣೆಯನ್ನು ಮಾಡಬೇಕೆಂಬ ಅವರ ತೀವ್ರಭಾವ ಇಲ್ಲಿ ವ್ಯಕ್ತವಾಗಿದೆ. ಬೋಧಪಾಹುಡದ ವಿಷಯವು ಕಾಲ್ಪನಿಕವಲ್ಲ, ಪೂರ್ವಾಚಾರ್ಯರ ಪರಂಪರೆಯನ್ನವಲಂಬಿಸಿದುದಾಗಿದೆ. ಆಚಾರ್ಯ ಭದ್ರಬಾಹು ಪಂಚಮ ಶ್ರುತಕೇವಲಿ, ದ್ವಾದಶಾಂಗ ಜ್ಞಾನಿ. ಅವರ ಶಿಷ್ಯ ವಿಶಾಚಾರ್ಯ. ಇವರ ಮೂಲಕ ಪರಂಪರೆಯಿಂದ ಶ್ರುತಜ್ಞಾನ ಕುಂದಕುಂದರಿಗೆ ಲಭಿಸಿತು. ಆದುದರಿಂದ ಕುಂದಕುಂದರು ಆಚಾರ್ಯಭದ್ರಬಾಹು ಅವರನ್ನು 'ಗಮಕಗುರು'ಗಳೆಂದು ಹೆಸರಿಸುವ ಮೂಲಕ ಗೌರವಸೂಚಿಸಿದ್ದಾರೆ.[೧]

೧ ಬಾರಸ ಅಂಗವಿಯಾಣಂ ಚವುದಸಪುವ್ವಂಗ ವಿಉಲ ವಿತ್ಥರಣಂ
ಸುಯಣಾಣಿ ಭದ್ದಬಾಹು ಗಮಯಗುರು ಭಯವಓ ಜಯಉ। ಬೋಧಪಾಹುಡ, 61.

'ಬೋಧಪಾಹುಡದಲ್ಲಿ 62 ಗಾಹೆಗಳಿದ್ದು, 1. ಆಯತನ, 2. ಚೈತ್ಯಗೃಹ, 3. ಜಿನಪ್ರತಿಮೆ, 4. ದರ್ಶನ, 5. ಜಿನಬಿಂಬ, 6. ಜಿನಮುದ್ರೆ, 7. ಜ್ಞಾನ, 8. ದೇವ, 9. ತೀರ್ಥ, 10. ಅರಿಹಂತ ಮತ್ತು 11. ಪ್ರವ್ರಜ್ಯ ವಿಷಯಗಳ ಪ್ರಸ್ತಾಪವಿದೆ. ಧರ್ಮದ ವಿಷಯದಲ್ಲಿ ಮತಭೇದಗಳು ಉಂಟಾದ ಸಂದರ್ಭದಲ್ಲಿ ಅದರ ನಿಜ ಸ್ವರೂಪವನ್ನು ನೀಡಲೆಂದು ಬೋಧಪಾಹುಡವನ್ನು ರಚಿಸಿದ್ದಾರೆ. ಸರ್ವಜೀವರ ಉದ್ಬೋಧನೆಗಾಗಿ ಷಟ್‌ಕಾಯ ಜೀವಿಗಳಿಗೆ ಸುಖಕರವಾದ ಈ ನಿರ್ದೇಶವು ಜಿನೇಂದ್ರ ಭಗವಾನರಿಂದ ನೀಡಿದುದಾಗಿದೆ. ಅದನ್ನು ಸಂಕ್ಷೇಪವಾಗಿ ಹೇಳಲಾಗಿದೆ. ಇದರಿಂದ ಕುಮಾರ್ಗದ ಆಶ್ರಯವಿಲ್ಲದಂತಾಗಿ ಅಹಿಂಸಾಧರ್ಮದ ಯಥಾರ್ಥಪಾಲನೆಯ ಮೂಲಕ ಜೀವನ ಚಾರಿತ್ರ್ಯ ರೂಪತಾಳಲು ಸಾಧ್ಯವಿದೆ.[೨]

1. **ಆಯತನ :** ಆಯತನವೆಂದರೆ ಸ್ಥಾನ. ಪ್ರತಿಯೊಬ್ಬ ವ್ಯಕ್ತಿ ಸುಖಪ್ರಾಪ್ತಿಗಾಗಿ ಸರಿಯಾದ ಸ್ಥಳನ್ನು ಆಯ್ಕೆಮಾಡಿಕೊಳ್ಳುವನು. ಈ ಆಯ್ಕೆ ತಪ್ಪಿದಲ್ಲಿ ದುಃಖವೇ ಅವನ ಪಾಲಿಗೆ ಉಳಿಯುತ್ತದೆ. ಆದುದರಿಂದ ಸರಿಯಾದುದರ ಆಯ್ಕೆ ಅಗತ್ಯ. ಸಂಯಮಿ ಮುನಿಗಳನ್ನು 'ಧರ್ಮಾಯತನ' ಎಂದು ಆಚಾರ್ಯಶ್ರೀಯವರು ಕರೆದಿದ್ದಾರೆ. ಮನ–ವಚನ–ಕಾಯಗಳಿಂದ ಪಂಚೇಂದ್ರಿಯಗಳನ್ನು ಆಧೀನದಲ್ಲಿರಿಸಿಕೊಂಡು, ರಾಗ– ದ್ವೇಷ–ಕ್ರೋಧ–ಮದ–ಮೋಹ–ಮಾನ ಲೋಭಗಳ ಮೇಲೆ ವಿಜಯ ಸಂಪಾದಿಸಿ, ಅಹಿಂಸೆ, ಸತ್ಯ, ಅಚಾರ್ಯ, ಬ್ರಹ್ಮಚರ್ಯ, ಅಪರಿಗ್ರಹ–ಮಹಾವ್ರತಗಳನ್ನು ಸ್ವೀಕರಿಸಿದ ದಿಗಂಬರ ಮುನಿಗಳೇ ನಿಜವಾದ ಆಯತನ ಅಥವಾ ಆಶ್ರಯಸ್ಥಾನರಾಗಿದ್ದಾರೆ. ಇವರಲ್ಲಿ ತಮ್ಮ ಶುದ್ಧ ಆತ್ಮದ ಪ್ರಗತಿಯನ್ನು ಮಾಡಿಕೊಂಡ ಮುನಿಗಳು 'ಸಿದ್ಧಾಯತನ'ರಾಗಿದ್ದಾರೆ. ಈ ಮುನಿಶ್ರೇಷ್ಠರು ಧರ್ಮಧ್ಯಾನದೊಂದಿಗೆ ಶುಕ್ಲಧ್ಯಾನದಲ್ಲಿ ಪ್ರಗತಿಯನ್ನು ಸಾಧಿಸುವರು. ಅವರು ಜ್ಞಾನಸಹಿತರಾಗಿರುತ್ತಾರೆ. ಈ ಮುನಿವೃಷಭರೇ 'ಸಿದ್ಧಾಯತನ'ರಾಗಿರುತ್ತಾರೆ. ಜಿನಶಾಸನವು ಇವರನ್ನೇ 'ಆಯತನ'ವೆಂದು ಕರೆಯುತ್ತದೆ. ಆದುದರಿಂದ ನಿಜವಾದ ಸುಖವನ್ನು ಬಯಸುವ ವ್ಯಕ್ತಿಗಳು 'ಧರ್ಮಾಯತನ' ಮತ್ತು 'ಸಿದ್ಧಾಯತನ' ಸ್ವರೂಪರಾದ ದೇವ, ಗುರು, ಶಾಸ್ತ್ರಗಳನ್ನು ಆಶ್ರಯಿಸಬೇಕು. ಕುದೇವ, ಕುಗುರು, ಕುಧರ್ಮ ಹಾಗೂ ಅವುಗಳ ಅನುಯಾಯಿಗಳ್ನು 'ಅನಾಯತನ' ಎಂದಿದ್ದಾರೆ. ನಿಜವಾದ ದೇವಗುರು ಶಾಸ್ತ್ರಗಳನ್ನು ಆಶ್ರಯಿಸದೆ ಅನ್ಯಮಾರ್ಗವಿಲ್ಲ. ನಿಜವಾದ ಆಯತನರ ಆಯ್ಕೆಮಾಡಿ ಅವರನ್ನು ಆಶ್ರಯಿಸಿ, ಅವರ ಸ್ತುತಿ, ಪ್ರಶಂಸೆಮಾಡಿ ವಿನಯ ತೋರುವುದು ನಿಜವಾದ ಸುಖಕ್ಕಾಗಿ ಅವಶ್ಯಕವೆಂಬುದನ್ನು 'ಬೋಧಪಾಹುಡ'ದಲ್ಲಿ ವಿವರಿಸಲಾಗಿದೆ.

2. **ಚೈತ್ಯ ಗೃಹ :** ಬಂಧ–ಮೋಕ್ಷ, ಸುಖ–ದುಃಖಗಳು ಉಂಟಾಗುವ ಆತ್ಮನಿಗೆ 'ಚೈತ್ಯ'ವೆನ್ನುತ್ತಾರೆ. ಆತ್ಮನೇ ಚೈತ್ಯವಾಗಿದ್ದು, ಅದರ ಗೃಹ ಚೈತ್ಯಗೃಹವಾಗಿದೆ. ಷಟ್‌ಕಾಯ ಜೀವಿಗಳ ಹಿತವನ್ನುಂಟುಮಾಡುವ, ಅಹಿಂಸಾಧರ್ಮವನ್ನು ಪರಿಪಾಲಿಸುವ, ಆತ್ಮನ ನಿಜವಾದ ಅರಿವುಳ್ಳ ಮುನಿಶ್ರಮಣರೇ ನಿಜವಾದ ಚೈತ್ಯಗೃಹವಾಗಿದ್ದಾರೆ. ಮಂದಿರಗಳಿಗೂ ಚೈತ್ಯಗೃಹವೆನ್ನುತ್ತಾರೆ. ಆದರೆ ಹಾಗೆನ್ನುವದು ಪರಮಾರ್ಥದಿಂದಾಗಿರದೆ ವ್ಯವಹಾರದಿಂದಾಗಿದೆ.

---

೨ ಸಯಲಜಣಬೋಹಣತ್ಥಂ ಜಿಣಮಗ್ಗೆ ಜಿಣವರೆಹಿಂ ಜಯು ಭಣಿಯಂ। ಉಚ್ಛಾಮಿ ಸಮಾಸೇಣಯ ಚಕ್ಕಾಯ ಹಿಯಂಕರಂ ಸುಣಸು। ಬೋಧಪಾಹುಡ–2

3. **ಜಿನ ಪ್ರತಿಮೆ :** ಜಂಗಮ ಮತ್ತು ವ್ಯುತ್ಸರ್ಗ ಎಂಬುದಾಗಿ ಪ್ರತಿಮೆಗಳು ಎರಡುಪ್ರಕಾರ. ಚರಿತ್ರ, ದರ್ಶನ ಮತ್ತು ಜ್ಞಾನಗಳು ನಿರ್ಮಲವಾಗಿದ್ದವರು ನಿರ್ಗ್ರಂಥ ವೀತರಾಗಿಗಳಾಗಿ ಶುದ್ಧಾಚಾರಿಗಳಾಗಿರುವವರು, ಸಮ್ಯಕ್‌ಜ್ಞಾನದಿಂದ ವಸ್ತುವಿನ ಯಥಾರ್ಥ ಸ್ವರೂಪವನ್ನು ತಿಳಿಯುವ, ಕಾಣುವ ಆತ್ಮ ಮತ್ತು ದೇಹಗಳಿಂದ ಯುಕ್ತವಾದ, ದಿಗಂಬರ ಮುದ್ರೆಯನ್ನು ಧರಿಸುವ ಸಾಧುಗಳು ಜಂಗಮ ಪ್ರತಿಮೆಗಳಾಗಿರುತ್ತಾರೆ. ಲೌಕಿಕ ವ್ಯವಹಾರದಲ್ಲಿಯ ಧಾತು, ಶಿಲೆಗಳ ದಿಗಂಬರ ಮೂರ್ತಿಗಳಿಗೆ ಪ್ರತಿಮೆಗಳೆನ್ನುತ್ತಾರೆ. ಆದರೆ ದಿಗಂಬರ ಮುನಿಗಳೇ ನಿಜವಾದ ಅರ್ಥದಲ್ಲಿ ಪ್ರತಿಮೆಗಳು.

ಅನಂತ ದರ್ಶನ, ಅನಂತ ಜ್ಞಾನ, ಅನಂತ ವೀರ್ಯ ಮತ್ತು ಅನಂತ ಸುಖಗಳಿಂದ ಸಂಪನ್ನವಾದ, ಕರ್ಮಬಂಧದಿಂದ ವಿರಹಿತ, ದೇಹವಿಲ್ಲದ, ಮುಕ್ತ, ನಿರುಪಮ, ಅಚಲ, ವೀತರಾಗ, ಶುದ್ಧ ಮತ್ತು ಸಿದ್ಧಶಿಲೆಯ ಮೇಲೆ ಸ್ಥಿರಗೊಂಡ ಪರಮಾತ್ಮಗಳು ವ್ಯುತ್ಸರ್ಗ ಪ್ರತಿಮೆಗಳಾಗಿವೆ.

ಪರಮಾರ್ಥ ದೃಷ್ಟಿಯಿಂದ ಮಹಾವ್ರತಿ ಜ್ಞಾನಿ ಮುನಿಗಳು ಜಂಗಮ ಪ್ರತಿಮೆಗಳಾಗಿದ್ದು, ಸಿದ್ಧಭಗವಾನರು ವ್ಯುತ್ಸರ್ಗ ಪ್ರತಿಮೆಗಳಾಗಿದ್ದರೂ, ವ್ಯವಹಾರದಲ್ಲಿ ಶಿಲೆ ಮೊದಲಾದವುಗಳ ಪ್ರತಿಮೆಗಳನ್ನು ಮಾಡಿ ವ್ಯವಹಾರ ದೃಷ್ಟಿಯಿಂದ ಅವುಗಳ ಸ್ತುತಿ, ವಂದನೆ, ಪೂಜೆ ಮಾಡುವುದು ಇಷ್ಟವಾಗಿದೆ. ಅದು ಉಚಿತವ್ಯವಹಾರವಾಗಿದೆ.

4. **ದರ್ಶನ :** ಮೋಕ್ಷ ಮಾರ್ಗವನ್ನು ತೋರುವುದು ದರ್ಶನವಾಗಿದೆ. ಅದು ಸಮ್ಯಕ್ತ್ವ ಸ್ವರೂಪವಾಗಿದೆ. ಪಂಚಮಹಾವ್ರತ, ಪಂಚಸಮಿತಿ, ತ್ರಿಗುಪ್ತಿ ಸ್ವರೂಪದ್ದಾಗಿದೆ. ಮೋಕ್ಷಮಾರ್ಗವು ಉತ್ತಮ ಕ್ಷಮಾದಿ ದಶರೂಪವಾಗಿದ್ದು, ಬಾಹ್ಯ–ಅಭ್ಯಂತರ ಪರಿಗ್ರಹರಹಿತವಾಗಿದೆ. ಜ್ಞಾನಮಯವಾಗಿದೆ. ಸಮ್ಯಕ್ತ್ವ, ಸಂಯಮ, ದಶಧರ್ಮ, ನಿರ್ಗ್ರಂಥ, ಜ್ಞಾನಮಯವುಳ್ಳ ಮೋಕ್ಷಮಾರ್ಗವನ್ನು ತೋರುವುದು ದರ್ಶನ(ಗಾಹೆ 14). ಹೂವಿನಲ್ಲಿ ಸುಗಂಧ, ಹಾಲಿನಲ್ಲಿ ತುಪ್ಪ ಇರುವಂತೆ ದರ್ಶನವು ಅಂತರಂಗದಲ್ಲಿ ರೂಪಸ್ಥವಾಗಿರುತ್ತದೆ. ಅದು ಮುನಿ, ಶ್ರೇಷ್ಠ ಶ್ರಾವಕ ಹಾಗೂ ಆರ್ಯಿಕೆಯರ ರೂಪದಲ್ಲಿರುತ್ತದೆ. ದರ್ಶನದ ವಾಸ್ತವ ಸ್ವರೂಪವನ್ನು ಗಮನಿಸುವುದರಿಂದ ಯಥಾರ್ಥ ಶ್ರದ್ಧೆಯ ವಿಕಾಸವಾಗಿ, ಈ ಸಂಸಾರಕ್ಕೆ ಕಾರಣವಾದ ಮತ–ಮತಾಂತರ ಮತ್ತು ಜೈನಾಭಾವದಿಂದ ಸ್ವಂತನ್ನು ರಕ್ಷಿಸಿಕೊಳ್ಳಬಹುದು.

5. **ಜಿನಬಿಂಬ :** ಜಿನಬಿಂಬವು ಜ್ಞಾನಮಯ, ಸಂಯಮದಿಂದ ಶುದ್ಧವೂ, ವೀತರಾಗವೂ ಕರ್ಮಕ್ಷಯಕ್ಕೆ ಕಾರಣವೂ ಆಗಿರುತ್ತದೆ. ಆದು ಭವ್ಯ ಜನರಿಗೆ ಶಿಕ್ಷೆ–ದೀಕ್ಷೆಯನ್ನು ನೀಡುತ್ತದೆ. ಆಚಾರ್ಯಪರಮೇಷ್ಠಿಗಳು ಜಿನವರರ ಪ್ರತಿಬಿಂಬ, ವ್ರತ ತಪಸ್ಸು ಮೊದಲಾದ ಗುಣಗಳಿಂದ ಸಮೃದ್ಧವಾದ, ವಿಶುದ್ಧ, ಸರ್ವಪದಾರ್ಥಗಳನ್ನು ತಿಳಿಯುವ ಶುದ್ಧ ಸಮ್ಯಕ್ತ್ವವುಳ್ಳ ಆಚಾರ್ಯರೇ ನಿಜವಾದ ಜಿನಬಿಂಬವಾಗಿದ್ದಾರೆ. ಇಂಥ ಆಚಾರ್ಯರ ಬಗ್ಗೆ ಪೂಜೆ, ವಿನಯ, ವಾತ್ಸಲ್ಯವನ್ನು ತೋರುವುದು ಇಷ್ಟ ಅವರು ಸದ್ದೃಷ್ಟಿ ಜ್ಞಾನ ಚರಿತೆವುಳ್ಳ ಚೈತನ್ಯರಾದುದು ಇದಕ್ಕೆ ಕಾರಣ. ಆಚಾರ್ಯಶ್ರೀಯವರೇ ಶಿಕ್ಷೆ–ದೀಕ್ಷೆ ನೀಡುವ ಅರಹಂತ ಭಗವಂತನ ನಿಜವಾದ ಬಿಂಬವಾಗಿದ್ದಾರೆ.

6 **ಜಿನಮುದ್ರೆ :** ಸಂಯಮದಿಂದ ಯುಕ್ತವಾದ, ಇಂದ್ರಿಯಗಳನ್ನೆಲ್ಲ ಕೈವಶಮಾಡಿಕೊಂಡ, ಕಷಾಯ ಪ್ರವೃತ್ತಿಗಳಿಂದ ವಿರಹಿತ ಹಾಗೂ ಆತ್ಮಸ್ವರೂಪದೆಡೆ ಜ್ಞಾನವನ್ನು ಒಲಿಸಿಕೊಂಡುದು ಜಿನಮುದ್ರೆಯಾಗಿದೆ. ಸಂಯಮಿ, ಕಷಾಯರಹಿತ ಜ್ಞಾನಿ ಶ್ರಮಣರು ಜಿನಮುದ್ರೆಯಾಗಿರುತ್ತಾರೆ.

7 **ಜ್ಞಾನ :** ಜ್ಞಾನದ ಮೂಲಕ ಸಂಯಮಪೂರ್ಣ ಹಾಗೂ ಧ್ಯಾನಯೋಗ್ಯ ಮೋಕ್ಷಮಾರ್ಗ ಸ್ಥಾಪ್ಯವಾಗುವುದರಿಂದ ಜ್ಞಾನದ ಬಗ್ಗೆ ತಿಳಿಯುವುದು ಅಗತ್ಯವಾಗುತ್ತದೆ. ಆಚಾರ್ಯ ಕುಂದಕುಂದರು ಜ್ಞಾನವನ್ನು ಕುರಿತು ಹೀಗೆ ಹೇಳಿದ್ದಾರೆ:

ಸಂಜಮ ಸಂಜುತ್ತಸ್ಸಯ ಸುಝಾಣ ಜೋಯಸ್ಸ ಮೋಕ್ಖಮಗ್ಗಸ್ಸ
ಣಾಣೇಣ ಲಹದಿ ಲಕ್ಖಂ ತಮ್ಹಾ ಣಾಣಂ ಚ ಣಾಯವ್ವಂ || ಬೋ. ಪಾ–20

ಸಂಯಮವನ್ನು ಸ್ವೀಕರಿಸಿ ಧ್ಯಾನಮಾಡುವುದು ಹಾಗೂ ಆತ್ಮಸ್ವರೂಪವನ್ನು ತಿಳಿಯುವುದೇ ಮೋಕ್ಷ ಮಾರ್ಗವಾಗಿದ್ದು, ಅದು ಜ್ಞಾನದ ಮೂಲಕ ಪ್ರಾಪ್ತವಾಗುತ್ತದೆ. ಬಿಲ್ಲುವಿದ್ಯೆಯ ಪರಿಚಯವಿಲ್ಲದವ ಬಿಲ್ಲು–ಬಾಣಗಳಿಂದ ಗುರಿ ಇಡಲು ಸಮರ್ಥನಾಗಲಾರ. ಅದರಂತೆ– ಜ್ಞಾನಶೂನ್ಯ ಅಜ್ಞಾನಿಯು ಮೋಕ್ಷಮಾರ್ಗದ ನೇರ ಗುರಿಯನ್ನು ಹಿಡಿಯಲು ಹಾಗೂ ಪರಮಾತ್ಮ ಸ್ವರೂಪವನ್ನು ಪಡೆಯಲು ಸಮರ್ಥನಾಗಲಾರ. ಪರಮಾತ್ಮಸ್ವರೂಪದ ಗುರಿಯನ್ನಿರಿಸಿಕೊಳ್ಳಲು ಜ್ಞಾನರೂಪಿ ಬಾಣದ ಅವಶ್ಯಕತೆಯಿರುತ್ತದೆ. ವಿನಯಸಂಪನ್ನ ಪುರುಷನು ಮಾತ್ರ ಜ್ಞಾನಸಂಪಾದಿಸಬಲ್ಲನು, ಹಾಗೂ ಜ್ಞಾನದ ಮೂಲಕವೇ ಶುದ್ಧಾತ್ಮನ ಸ್ವರೂಪವನ್ನು ತಿಳಿಯಲು ಸಮರ್ಥನಾಗುತ್ತಾನೆ. ಆದುದರಿಂದ ಜೀವನದಲ್ಲಿ ವಿನಯಪೂರ್ಣ ಜ್ಞಾನಾರಾಧನೆ ಅತ್ಯವಶ್ಯಕವಾಗಿದೆ.

ಮತಿಜ್ಞಾನರೂಪಿ ಬಾಣವು ಸ್ಥಿರವುಳ್ಳ, ಶ್ರುತಜ್ಞಾನಸ್ವರೂಪ ಗುಣಗಳಿಂದ ಕೂಡಿದ ಬಾಣವುಳ್ಳ, ರತ್ನತ್ರಯಸ್ವರೂಪಿ ಬಾಣವನ್ನು ಹೂಡುವ ಹಾಗೂ ನಿಜಲಕ್ಷವು ಶುದ್ಧಾತ್ಮಸ್ವರೂಪದೆಡೆಗೆ ಇದ್ದ ಶ್ರಮಣನು ಮಾತ್ರ ಮೋಕ್ಷಮಾರ್ಗವನ್ನು ಪಡೆಯುವದು.

8 **ದೇವ :** ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ದಯಪಾಲಿಸುವವನಿಗೆ ದೇವನೆನ್ನುವರು. 'ಸೋ ದೇವೋ ಜೋ ಅತ್ಥಂ, ಧಮ್ಮಂ, ಕಾಮಂ ಸುದೇಇ ಣಾಣಂ ಚ' (ಬೋ.ಪಾ. 24). ಕೊಡುವವನಲ್ಲಿ ಪಾತ್ರತೆ, ಸಂಗ್ರಹ ಇದ್ದರೆ ಮಾತ್ರ ಕೊಡಬಲ್ಲ. ಅವನಲ್ಲಿಯೇ ಇರದಿದ್ದರೆ ಎಲ್ಲಿಂದ ಕೊಡುವುದು ಸಾಧ್ಯ? ದಯೆಯಿಂದ ವಿಶುದ್ಧವಾದುದು ಧರ್ಮ. ಸರ್ವ ಪರಿಗ್ರಹಗಳಿಂದ ರಹಿತವಾದ ಪ್ರವ್ರಜ್ಯವು ದೀಕ್ಷೆಯಾಗಿದೆ. ನಿಜವಾದ ದೇವ ವೀತರಾಗಿ (ವವಗಯ ಮೋಹೋ) ಮತ್ತು ಭವ್ಯಜನರ ಉತ್ಥಾನವನ್ನು ಮಾಡು (ಉದಯಕರೀ ಭವ್ಯಜೀವಾಣಾಂ) ವವನಾಗಿರುತ್ತಾನೆ. ಹಿಂಸಕ, ವಿಷಯ ವಾಸನೆ ಮೋಹಕಾಯವುಳ್ಳವನು ಎಂಥ ದೇವನು? ನಿಜವಾದ ದೇವನು ವೀತರಾಗ ಸರ್ವಜ್ಞ ಮತ್ತು ಭವ್ಯ ಜೀವಿಗಳ ಹಿತಸಾಧಿಸುವವನಾಗಿರುತ್ತಾನೆ. ಅವನಲ್ಲಿ ನಾಲ್ಕು ಪುರುಷಾರ್ಥಗಳಿರುತ್ತವೆ. ಆದುದರಿಂದ ಆ ದೇವನೇ ನಿಜವಾದ ದೇವನಾಗಿದ್ದಾನೆ.

9 **ತೀರ್ಥ:** ತೀರ್ಥವನ್ನು ಕುಂದಕುಂದಾಚಾರ್ಯರು ಈ ರೀತಿ ವಿವರಿಸಿದ್ದಾರೆ:

ಜಂ ಣಿಮ್ಮಂ ಸುಧಮ್ಮಂ ಸಮ್ಮತ್ತಂ ಸಂ,ಜಮಂ ತವಂ ಣಾಣಂ
ತಂ ತಿತ್ಥ್ಯಂ ಜಿಣಮಗ್ಗೆ ಹವೇಇ ಜದಿ ಸಂತಿ ಭಾವೇಣ। ಬೋ. ಪಾ. 27

ಜಿನಶಾಸನದಲ್ಲಿ ನಿರ್ಮಲ ಧರ್ಮ, ಸಮ್ಯಕ್ತ್ವ, ಸಂಯಮ, ತಪ ಮತ್ತು ಜ್ಞಾನಗಳಿದ್ದು ಇದಕ್ಕೆ ತೀರ್ಥವೆನ್ನಲಾಗಿದೆ. ಶಾಂತ ಭಾವನೆಯಿಂದ ಅದು ನಿರ್ಮಲ ತೀರ್ಥವಾಗಿರುತ್ತದೆ. ಈ ಪ್ರಕಾರದ ವ್ರತ, ಸಮ್ಯಕ್ತ್ವಾದಿಗಳಿಂದ ವಿಶುದ್ಧ, ಪಂಚೇಂದ್ರಿಯ ಸಂಯುತ ಹಾಗೂ ನಿರಪೇಕ್ಷ ತೀರ್ಥದಲ್ಲಿ ಜ್ಞಾನಾರಾಧನೆ ಮತ್ತು ತಪಾರಾಧನೆಗಳ ಸುಸ್ನಾನವನ್ನು ದಿಗಂಬರ ಶ್ರಮಣರು ನಿತ್ಯ ಮಾಡುತ್ತಿರುತ್ತಾರೆ. ಇದರಿಂದಾಗಿ ಅವರು ಭವಸಾಗರವನ್ನು ದಾಟುವರು. ಆತ್ಮನ ಸ್ವಭಾವವು ಉತ್ಕೃಷ್ಟತೀರ್ಥವಾಗಿದೆ. ಅದರಲ್ಲಿ ನಿರಂತರ ಮುಳುಗಿ ಏಳುವ ಶ್ರಮಣರು ಪವಿತ್ರರಾಗುತ್ತಾರೆ. ಸಾಗರ, ನದಿ, ಪರ್ವತಗಳನ್ನು ತೀರ್ಥವೆಂದು ತಿಳಿಯುವುದು ಧರ್ಮ. ಆದರೆ ಜೀವನವನ್ನು ತೇಲಿಸುವುದೇ ನಿಜವಾದ ತೀರ್ಥ.

10 **ಅರಹಂತ :** ಕುಂದಕುಂದ ಆಚಾರ್ಯರು ಅರಹಂತನ ವರ್ಣನೆಯನ್ನು ನಾಮ, ಸ್ಥಾಪನೆ, ದ್ರವ್ಯ ಮತ್ತು ಭಾವ– ಈ ನಾಲ್ಕು ನಿಕ್ಷೇಪಗಳ ಪ್ರಾಧಾನ್ಯತೆಯಿಂದ ಮಾಡಿರುತ್ತಾರೆ.

(೧) ನಾಮ :– ಅರಹಂತನ ಹೆಸರು ಕೇವಲ ನಾಮಮಾತ್ರವಾಗಿರದೆ ಅವನಲ್ಲಿ ಮುಂದೆ ಹೇಳಿದ ಗುಣಗಳಿರುವುದರಿಂದ ಅರಹಂತನೆನ್ನುವುದು. ಅವನಲ್ಲಿ ಅನಂತ ದರ್ಶನ, ಅನಂತ ಜ್ಞಾನವಿರುತ್ತದೆ. ಎಂಟುಪ್ರಕಾರದ ಕರ್ಮಬಂಧವಾಗದಿರುವುದರಿಂದ ಅವನು ಮೋಕ್ಷ ಸ್ವರೂಪಿ, ಅನುಪಮ ಗುಣಗಳಿಂದ ಕೂಡಿದವನು. ಮುಪ್ಪು, ವ್ಯಾಧಿ, ಜನನ–ಮರಣ, ನಾಲ್ಕು ಗತಿಗಳಲ್ಲಿ ಭ್ರಮಣ, ಪುಣ್ಯ–ಪಾಪ ಹಾಗೂ ದೋಷಗಳನ್ನು ನಿರ್ಮಿಸುವ ಕರ್ಮದ ನಾಶಮಾಡಿ ಕೇವಲ ಜ್ಞಾನಮಯ 'ಅರಹಂತ'ರಾಗಿರುತ್ತಾರೆ.

(೨) ಸ್ಥಾಪನೆ: ಗುಣಸ್ಥಾನ, ಮಾರ್ಗಣಾಸ್ಥಾನ, ಪರ್ಯಾಪ್ತಿ. ಪ್ರಾಣ ಮತ್ತು ಜೀವಸ್ಥಾನ– ಈ ಐದು ಪ್ರಕಾರ ಅರಹಂತರ ಸ್ಥಾಪನೆ ಮಾಡುವುದು ಅಥವಾ ಪ್ರಣಾಮ ಮಾಡುವುದು ಉಚಿತವಾಗಿದೆ. 14 ಗುಣಸ್ಥಾನಗಳಲ್ಲಿ ಸಯೋಗ, ಅಯೋಗ ಕೇವಲ ಹೆಸರಿನ 13ನೆಯ ಗುಣಸ್ಥಾನದಲ್ಲಿ ಅರಹಂತರಿರುತ್ತಾರೆ. ಅವರಿಗೆ34 ಅತಿಶಯಗಳು, ಎಂಟು ಪ್ರಾತಿಹಾರ್ಯಗಳಿರುತ್ತವೆ ಅವರಿಗೆ ಆಹಾರ, ಶರೀರ, ಇಂದ್ರಿಯ, ಮನ, ಸ್ವಾಶಚ್ಛೋಶ ಮತ್ತು ಭಾಷಾ – ಈ ಆರು ಪರ್ಯಾಪ್ತಿಗಳಿರುತ್ತವೆ. ಅರಹಂತರ ಔದಾರಿಕ ಶರೀರಕ್ಕೆ ಜವರ, ವ್ಯಾಧಿ, ರೋಗ, ಹಾಗೂ ದುಃಖ ಆಗುವುದಿಲ್ಲ. ಆಹಾರ–ನಿಹಾರರಹಿತವಾಗಿರುತ್ತದೆ. ಮಲ–ಮೂತ್ರ, ಉಗುಳು, ಬೆವರು ರಹಿತವಾಗಿರುತ್ತದೆ. ಜಿಗುಪ್ಸೆ, ಗ್ಲಾನಿ, ದುರ್ಗಂಧ ಮೊದಲಾದ ದೋಷಗಳಿರುವುದಿಲ್ಲ.

ಅರಹಂತ ಭಗವಂತರಲ್ಲಿಕೇವಲಜ್ಞಾನರೂಪ ಒಂದೇ ಭಾವವಿರುತ್ತದೆ. ಅದು ಗರ್ವ–ರಾಗದ್ವೇಷ, ಕಷಾಯ ಮಲರಹಿತವಾಗಿರುತ್ತದೆ. ಅರಹಂತ ಭಗವಂತರು ಸಮ್ಯಕ್ ದರ್ಶನದಿಂದ ತಮ್ಮನ್ನು ಇತರರನ್ನು ನೋಡುವರು. ಕೇವಲಜ್ಞಾನದಿಂದ ಎಲ್ಲ ದ್ರವ್ಯ ಪರ್ಯಾಯಗಳನ್ನು

ತಿಳಿಯುತ್ತಾರೆ. ಈ ಪ್ರಕಾರದ ಅರಹಂತ ಭಗವಂತರೇ ಸರ್ವಜ್ಞ, ವೀತರಾಗಿ ಹಾಗೂ ಹಿತೋಪದೇಶಿ. ಈ ನಿಜವಾದ ದೇವರನ್ನು ಗುರುತಿಸಲು ಆಚಾರ್ಯರು ನಾಮ, ಸ್ಥಾಪನಾ ದ್ರವ್ಯಗಳ ಅಪೇಕ್ಷೆಯಿಂದ ಮಾಡಿದ ವರ್ಣನೆ ಮಾರ್ಗದರ್ಶಕವಾಗಿದೆ.

11 **ಪ್ರವ್ರಜ್ಯಾ:** ಆಚಾರ್ಯ ಕುಂದಕುಂದರು ಪ್ರವ್ರಜ್ಯದ ವರ್ಣನೆಯನ್ನು 18 ಗಾಹೆಗಳಲ್ಲಿ (42 ರಿಂದ 59) ಮಾಡಿದ್ದಾರೆ. ಪ್ರವ್ರಜ್ಯವೆಂದರೆ ದೀಕ್ಷೆ. ಜಿನದೀಕ್ಷೆಯೇ ನಿಜವಾದ ದೀಕ್ಷೆ. ನಿರ್ಜನ ಮನೆ, ಗಿಡದಕೆಳಗೆ, ಉದ್ಯಾನ, ಸ್ಮಶಾನ ಭೂಮಿ, ಪರ್ವತ–ಗುಹೆ, ಶಿಖರ, ಮುನಿವಾಸಗಳಲ್ಲಿ ಶ್ರಮಣರು ವಾಸಿಸಬೇಕು. ಅದರಂತೆ–ತೀರ್ಥಸ್ಥಾನ, ಚೈತ್ಯಾಲಯಗಳಲ್ಲಿ ಉಳಿದು ಧರ್ಮಲಾಭ ನೀಡಬೇಕು. ಅಕ್ಷರರೂಪು ಮಂತ್ರ ಮತ್ತು ಆಜ್ಞಾರೂಪಿ ವಾಣಿಗೆ 'ವಚ' ವೆನ್ನುತ್ತಾರೆ ಸಂಯಮಿ ಮುನಿ, ಅರಹಂತ ಸಿದ್ಧರ ಧಾತು ಅಥವಾ ಶಿಲೆಯ ಪ್ರತಿಮೆಗಳಿಗೆ ಚೈತ್ಯವೆನ್ನುತ್ತಾರೆ. ಈ ಪ್ರತಿಮೆಗಳು ಮತ್ತು ಜಿನವಾಣಿಯ ಸಂಗ್ರಹವುಳ್ಳ ಸ್ಥಾನವನ್ನು ಆಲಯ, ಮಂದಿರವೆನ್ನುತ್ತಾರೆ. ಪಂಚಮಹಾವ್ರತಧಾರಿ, ಇಂದ್ರಿಯ ಸಂಯಮಿ, ನಿರಪೇಕ್ಷ ಹಾಗೂ ಸ್ವಾಧ್ಯಾಯ–ಧ್ಯಾನ ತತ್ಪರರಾದ ಮುನಿಗಳು ಇಂಥ ಸ್ಥಾನವನ್ನು ಆಯ್ದುಕೊಂಡು ಆತ್ಮಸಾಧನೆಯನ್ನು ಮಾಡುತ್ತ ಇರುವರು.

'ಪವ್ವಜ್ಜಾ ಏರಿಸಾ ಭಣಿಯಾ' ಎಂದು ದೀಕ್ಷೆ ಹೇಗಿರುತ್ತದೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಗೃಹ ಮತ್ತು ಗ್ರಂಥ(ಪರಿಗ್ರಹ)ಗಳಲ್ಲಿ ಮೋಹವಿಲ್ಲದ, ಇಪ್ಪತ್ತೆರಡು ಪರೀಷಹಗಳನ್ನು ಜಯಿಸುವ, ಕಷಾಯಗಳನ್ನು ಗೆಲ್ಲುವ, ಪಾಪಾರಂಭದಿಂದ ದೂರವಿರುವ ದೀಕ್ಷೆಯೇ ನಿಜವಾದ ಪ್ರವ್ರಜ್ಯವಾಗಿದೆ. ಧನ, ಧಾನ್ಯ, ಆಕಳು, ವಸ್ತ್ರ ಮೊದಲಾದವುಗಳನ್ನು ದಾನ ಮಾಡುವುದು ದೀಕ್ಷೆ ಅಲ್ಲ. ವಾಸ್ತವ ದೀಕೆ ನಿರ್ಗ್ರಂಥ, ನಿಸ್ಸಂಗ, ಮಾನ–ಆಶೆ–ರಾಗ–ದ್ವೇಷ ರಹಿತ, ನಿರ್ಮಮ ನಿರಹಂಕಾರವಾಗಿರುತ್ತದೆ. ದೀಕ್ಷೆಯ ಬಾಹ್ಯ ಸ್ವರೂಪವು ಜನ್ಮಜಾತ (ನಗ್ನ) ರೂಪವಾಗಿರುತ್ತದೆ. ಉಪಶಮೆ–ಕ್ಷಮೆ–ದಮೆಯುಳ್ಳದಾಗಿರುತ್ತದೆ. ಮೂಢ ಭಾವಗಳ ಅಜ್ಞಾನಗಳ ಅಭಾವವಿರುತ್ತದೆ. ಮಿಥ್ಯಾತ್ವ ಕಳಚಿ ಹೋಗಿರುತ್ತದೆ. ಸಮ್ಯಕ್ತ್ವದ ಗುಣವೈಭವದಿಂದ ವಿಶುದ್ಧವಾಗಿರುತ್ತದೆ. ನಿರ್ಜನ ಪ್ರದೇಶದಲ್ಲಿ ಶಿಲೆ (ಕಟ್ಟೆಗೆ) ಅಥವಾ ನೆಲದಮೇಲೆ ಕುಳಿತು ಧ್ಯಾನ ಮಾಡುತ್ತ ಪರಿಗ್ರಹಗಳನ್ನು ಸಹಕರಿಸಲು ತಿಳಿಸುತ್ತದೆ. ನಿಜವಾದ ದೀಕ್ಷೆಯಲ್ಲಿ ಜಿನವಾಣಿಯ ಪಠನ, ಪಾಠನ, ಚಿಂತನೆ, ಉಪದೇಶ ಮೊದಲಾದ ಪ್ರಕಾರದ ಸ್ವಾಧ್ಯಾಯದ ಹಾಗೂ ಧರ್ಮ–ಶುಕ್ಲ ಧ್ಯಾನದ ಅಂತರ್ಭಾವ ಇದರಲ್ಲಿರುತ್ತದೆ.

ತವ ವಯಗುಣೆಹಿಂ ಸುದ್ಧಾ ಸಂಜಯ–ಸಮ್ಮತ್ತ–ಗುಣವಿಸುದ್ಧಾಯ
ಸುದ್ಧಾ ಗುಣಹಿಂ ಸುದ್ಧಾ ಪಚ್ಚಜ್ಜಾ ಏರಿಸಾ ಭಣಿಯಾ। ಬೋ. ಪಾ. 58

ಎಂದು ದೀಕ್ಷೆಯ ಸಾರಸರ್ವವನ್ನು ಕುರಿತು ಆಚಾರ್ಯಶ್ರೀಯವರು ವಿವರಿಸಿದ್ದಾರೆ. ತಪ, ಸಮ್ಯಕ್ತ್ವ, ಮೂಲಗುಣ, ಉತ್ತರಗುಣಗಳ ನಿರತಿಚಾರದಿಂದ ಪಾಲಿಸಲ್ಪಡುವುದೇ ವಿಶುದ್ಧ ಪ್ರವ್ರಜ್ಯವಾಗಿದೆ. ಬಾಹ್ಯ–ಅಭ್ಯಂತರ ತಪಸ್ಸು, ಅಹಿಂಸೆ ಮೊದಲಾದ ಪಂಚಮಹಾವ್ರತಗಳ ನಿರತಿಚಾರ ಪಾಲನೆ, ಪಂಚೇಂದ್ರಿಯ ಮತ್ತು ಮನಸ್ಸುಗಳ ನಿರೋಧ, ತತ್ವಶ್ರದ್ಧಾರೂಪ

ನಿಶ್ಚಯ–ವ್ಯವಹಾರ ರೂಪ ಸಮ್ಯಗ್ದರ್ಶನ ಇವೇ ದೀಕ್ಷೆಯ ಸಾರಸರ್ವಸ್ವವಾಗಿವೆ. ವೇಷ ಬದಲಿಸುವುದು ಮಾತ್ರ ದೀಕ್ಷೆಯಲ್ಲ, ಅದು ಗುಣಗಳಿಂದ ಶ್ರೇಷ್ಠವಾಗಿರುತ್ತದೆ.

ಅಮೌಲ್ಯ ಬೋಧೆ

ಆಚಾರ್ಯ ಶ್ರೀ ಕುಂದಕುಂದರು 'ಬೋಧಪಾಹುಡ'ದ ಮೂಲಕ ಭವ್ಯಜೀವಿಗಳಿಗೆ ಯಥಾರ್ಥಬೋಧೆ ನೀಡಿದ್ದಾರೆ. ಆಯತನದಿಂದ ಪ್ರವ್ರಜ್ಯದವರೆಗೆ ಹನ್ನೊಂದು ವಿಷಯಗಳ ಅಂತರಂಗ ಮತ್ತು ಬಹಿರಂಗವನ್ನು ಅವರು ವಿಶದಪಡಿಸಿದ್ದಾರೆ. ಷಟ್–ಕಾಯಗಳ ಹಿತಕ್ಕಾಗಿ (ಛಕಾಯ ಹಿಯಂಕರ), ಉತ್ಥಾನ–ಕಲ್ಯಾಣಕ್ಕಾಗಿ ಜಿನೇಂದ್ರ ಭಗವಾನರ ಉಪದೇಶವಿದ್ದು, ಇದರ ವಿಶ್ಲೇಷಣೆ, ಸ್ಪಷ್ಟೀಕರಣವನ್ನು ಗಣಧರ ಮೊದಲಾದ ಆಚಾರ್ಯರು ಇದೇ ಉದ್ದೇಶಕ್ಕಾಗಿ ಮಾಡಿದ್ದಾರೆ. ಗ್ರಂಥ ನಿರ್ಮಿತಿಯ ಉದ್ದೇಶವೂ ಇದೇ ಆಗಿದೆ. ಆಯತನಾದಿ ಹನ್ನೊಂದು ವಿಷಯಗಳ ಯಥಾರ್ಥ ಬೋಧೆಯಿಂದ ಸಮೀಚೀನ ಮಾರ್ಗವನ್ನನುಸರಿಸುವುದು ಸಾಧ್ಯವಿದೆ. ಪ್ರತಿಯೊಂದು ಜೀವಿಯ ಹಿತ–ಅಹಿತ ಅವರವರ ಆಧೀನವಾಗಿದೆ. ಭಾವನೆಯ ಮೇರೆಗೆ ಅದೆಲ್ಲ ಸಂಭವಿಸುತ್ತದೆ. ಬಾಹ್ಯ ಪರದ್ರವ್ಯ ನಿಮಿತ್ತ ಮಾತ್ರ; ಉಪಾದಾನವಿದ್ದರೆ ಮಾತ್ರ ನಿಮಿತ್ತದ ಸಹಕಾರ್ಯ ಉಪಯುಕ್ತವೆಂಬುದನ್ನು ಗಮನಿಸುವುದಗತ್ಯ. ಆಯತನ, ಚೈತ್ಯಗೃಹ, ಜಿನಪ್ರತಿಮೆ ಮೊದಲಾದ ಅನೇಕ ವಿಷಯಗಳ ಉಚಿತವಾದ ಪರಿಚಯ ಇಲ್ಲಿದೆ. ಸತ್ಯದ ಸ್ಪಷ್ಟ ಸ್ವರೂಪ ದರ್ಶನವನ್ನು ಆಚಾರ್ಯಶ್ರೀಯವರು ನೀಡಿದ್ದಾರೆ. ಇದರಿಂದ ಭವ್ಯಜೀವಿಗಳು ಮೋಸಹೋಗಲಾರರು, ನಿಜವಾದ ದೇವ–ಗುರು–ಶಾಸ್ತ್ರಗಳಿಗೆ ಶರಣಾಗುತ್ತಾರೆ. ವ್ಯವಹಾರ ನಿಶ್ಚಯಗಳ ಸಾಪೇಕ್ಷ ಮರ್ಯಾದೆಯನ್ನು ಗಮನದಲ್ಲಿರಿಸಿಕೊಂಡು ಯೋಗ್ಯ ಮಾರ್ಗವನ್ನು ಯಥಾಶಕ್ತಿ ಅನುಸರಿಸುತ್ತಾರೆ. ಬೋಧಪಾಹುಡದ ಮೂಲಕ ಆಚಾರ್ಯ ಕುಂದಕುಂದರು ನೀಡಿದ ಉಪದೇಶ ವರ್ತಮಾನಕಾಲದಲ್ಲಿಯೂ ವಿಶೇಷ ಬೆಲೆಯುಳ್ಳದಾಗಿದೆ.

❑❑

ವಿಜಯನಗರ ಕಾಲದ ಜೈನಸೈನ್ಯಾಧಿಕಾರಿಗಳ ಪ್ರಭಾವ : ಇರುಗುಪ್ಪ ದಂಡನಾಯಕರು

• ವಸಂತಕುಮಾರಿ

ಕರ್ನಾಟಕ ಜೈನಧರ್ಮ ಪ್ರವೇಶಿಸಿದ ಕಾಲದಿಂದ ಹನ್ನೆರಡನೆಯ ಶತಮಾನದವರೆಗೂ ನಿರಂತರವಾಗಿ ಪ್ರಗತಿಯ ಪಥದಲ್ಲಿಯೇ ಮುಂದುವರೆಯಿತು. ರಾಜಮಹಾರಾಜರು ಈ ಧರ್ಮವನ್ನು ತಮ್ಮ ವೈಯಕ್ತಿಕ ಧರ್ಮವಾಗಿ ಅನುಸರಿಸಿ, ಪಾಲಿಸಿ, ಪೋಷಿಸಿದರು. ಅಲ್ಲದೆ, ಜೈನ ಆಚಾರ್ಯರ ಸಾತ್ವಿಕ ಜೀವನಕ್ರಮ ಅಂದಿನ ಸಮಾಜದ ಎಲ್ಲಾ ವರ್ಗದವರ ಮೇಲೂ ಪ್ರಭಾವ ಬೀರಿದ ಕಾರಣ ಈ ಧರ್ಮದ ವ್ಯಾಪ್ತಿಯೂ ವಿಸ್ತರಿಸಿತು.

ರಾಜಪ್ರಭುತ್ವದ ರಾಜಕೀಯ ಚೌಕಟ್ಟಿನಲ್ಲಿ ಯಾವುದೇ ಒಂದು ಧರ್ಮ ಸುಭದ್ರ ಸ್ಥಾನ ಪಡೆಯಬೇಕಾದರೆ, ರಾಜ ಹಾಗೂ ರಾಜನ ಅಧಿಕಾರಿಗಳ ಪೋಷಣೆ ಅವಶ್ಯಕವಿದ್ದಿತು. ಕರ್ನಾಟಕದ ಇತಿಹಾಸ ಪರಂಪರೆಯಲ್ಲಿ ಜೈನಧರ್ಮ ಮತ್ತು ಸಂಸ್ಕೃತಿಯ ಪ್ರಗತಿಗೆ ಅಮಾತ್ಯರೂ ದಂಡನಾಯಕರೂ, ಅಧಿಕಾರಿಗಳೂ, ವರ್ತಕರೂ ಬಹುಮಟ್ಟಿಗೆ ಕಾರಣರಾಗಿದ್ದರು ಎಂಬುದನ್ನು ನಿರ್ಲಕ್ಷಿಸುವಂತಿಲ್ಲ.

ಕರ್ನಾಟಕದಲ್ಲಿ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಚಾಮುಂಡರಾಯ, ಗಂಗರಾಜ, ಬೊಪ್ಪಣ್ಣ, ಹುಲ್ಲಮಯ್ಯ, ಪುನಿಸಮಯ್ಯ, ಭರತ, ಮರಿಯಾನೆ ಐಚ, ರಾಚಿಮಯ್ಯ, ನಾಗದೇವ, ಬೂಚಿರಾಜ ಮುಂತಾದ ಅಮಾತ್ಯರೂ, ದಂಡನಾಯಕರೂ ಯುದ್ಧಗಳಲ್ಲಿ ಪಾಲ್ಗೊಂಡು ಸಾಮ್ರಾಜ್ಯ ಸಂರಕ್ಷಣೆ, ವಿಸ್ತರಣೆ ಮತ್ತಿತರ ರಾಜಕಾರ್ಯವನ್ನು ನಿರ್ವಹಿಸುವುದರ ಜೊತೆಗೆ ಜೈನಧರ್ಮದ ಶ್ರೇಷ್ಠ ಶ್ರಾವಕರೆಂದು ಕೀರ್ತಿ ಪಡೆದಿದ್ದರು. ಅವರು ಅಣುವ್ರತಧರ್ಮಪಾಲಕರಾಗಿದ್ದು, ಜಿನಮಂದಿರಗಳ ನಿರ್ಮಾಣ, ಜೀರ್ಣೋದ್ಧಾರ, ಆಚಾರ್ಯರ ಸೇವೆ, ವಿದ್ವಾಂಸರ ಪೋಷಣೆ, ದಾನ, ದತ್ತಿ ಮುಂತಾದ ಧರ್ಮಕಾರ್ಯದಲ್ಲಿ ನಿರತರಾಗಿದ್ದರು[1]

ವಿಜಯನಗರ ಸ್ಥಾಪನೆಯೊಂದಿಗೆ ಜೈನಯುಗ ಕೊನೆಗೊಂಡು ಹಿಂದೂ ಧರ್ಮದ ಯುಗ ಆರಂಭವಾಗಿ ವಿಶೇಷವಾಗಿ ವೈಷ್ಣವ ಮತ್ತು ವೀರಶೈವ ಧರ್ಮಗಳು ಪ್ರಬಲವಾದವು.[2] ಈ ಕಾಲದಲ್ಲಿ ಜೈನಧರ್ಮ ಜೈನೇತರರ ಬಹಿರಂಗ ಘರ್ಷಣೆಯನ್ನು ಎದುರಿಸಬೇಕಾಯಿತು. ರಾಜರ ವಿಶೇಷ ಪೋಷಣೆಯನ್ನು ಪಡೆಯದಿದ್ದರೂ ರಾಜ ರಕ್ಷಣೆಯನ್ನು ಪಡೆಯಿತು.

ವಿಜಯನಗರ ಕಾಲದಲ್ಲಿ ಜೈನರ ಸಂಖ್ಯೆ ರಾಜಧಾನಿ ಹಂಪೆಯಲ್ಲಿಯೇ ಸಾಕಷ್ಟು ಇದ್ದಿತು ಎಂಬ ಮಾಹಿತಿಯು ಇಲ್ಲಿಯ ಪಾಳುಬಿದ್ದ ಜಿನಾಲಯಗಳು, ಮತ್ತು ಜಿನಬಿಂಬಗಳಿಂದ

ಸ್ಪಷ್ಟವಾಗುತ್ತದೆ.[3] ಈ ಬಗ್ಗೆ ಸಾಕಷ್ಟು ವಿವರಣೆ ಪುರಾತತ್ವ ಇಲಾಖೆಯವರ ಪ್ರಕಟಿತ ವರದಿಯಿಂದ ತಿಳಿಯಬಹುದು.

ಜೈನ ದಂಡನಾಯಕರು, ನಿಷ್ಠೆಯಿಂದ ರಾಜಕಾರ್ಯ ನಿರ್ವಹಿಸಿದುದರ ಜೊತೆಗೆ ಜೈನಧರ್ಮಾಭಿಮಾನಿಗಳಾಗಿದ್ದು ಅವರು ಅನೇಕ ದಾನ ದತ್ತಿಗಳನ್ನೂ ನೀಡುತ್ತಿದ್ದುದು ಅಲ್ಲದೇ, ತಮಗಿದ್ದ ರಾಜಕೀಯ ಪ್ರಭಾವ, ಐಶ್ವರ್ಯವನ್ನು ಸದುಪಯೋಗಕ್ಕಾಗಿ ವಿನಿಯೋಗಿಸಿ ಜಿನಮಂದಿರಗಳ ನಿರ್ಮಾಣ, ಕೆರೆ ಮತ್ತಿತರ ನಿರ್ಮಾಣ ಕಾರ್ಯದಲ್ಲಿ ತೊಡಗಿದರು.ಇಂತಹ ದಂಡನಾಯಕರಲ್ಲಿ ಇರುಗುಪ್ಪನ ವಂಶವು ಅತ್ಯಂತ ಪ್ರಭಾವಶಾಲಿಯಾದಲ್ಲಿ ವಂಶವಾಗಿದ್ದಿತು. ಶ್ರವಣಬೆಳಗೊಳ ದೊಡ್ಡಬೆಟ್ಟದ ಬ್ರಹ್ಮದೇವರ ಮಂಟಪದಲ್ಲಿರುವ ಕಂಬಶಾಸನದಲ್ಲಿ ಇರುಗುಪ್ಪನ ವಂಶಾವಳಿಯ ಬಗ್ಗೆ ಮಾಹಿತಿ ಇದೆ. ಈ ವಂಶಾವಳಿಯ ವಿವರ ಈರೀತಿ ಇದೆ:

ಬೈಚ

ಮಂಗಪ್ಪ ಇರುಗುಪ್ಪ I ಬುಕ್ಕಣ್ಣ

ಬೈಚ II ಇರುಗುಪ್ಪ II [4]

ಇರುಗುಪ್ಪನ ವಂಶದವರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕಾಲದಿಂದಲೂ, ಅಥವಾ ಅದಕ್ಕಿಂತ ಪೂರ್ವದಿಂದಲೂ ಸ್ವಾಮಿನಿಷ್ಠೆ, ಸಾಹಸಕ್ಕೆ ಹೆಸರಾಗಿದ್ದರು. ಹರಿಹರನು ಬೈಚ ದಂಡೇಶನಿಗೆ ಮಹಾಪ್ರಧಾನ ಪದವಿ ಮತ್ತು ರಾಜಮುದ್ರಿಕೆಯನ್ನು ದಯಪಾಲಿಸಿದ.[5] ಇವನು ಹರಿಹರ (1336–1356), ಒಂದನೇ ಬುಕ್ಕ (1356–1373) ಇವರಿಗೆ ಸೇವೆಸಲ್ಲಿಸಿದ. ಗೋವೆಯ ಅಕ್ರಮಣ ಕಾಲದಲ್ಲಿ ಒಂದನೇ ಬುಕ್ಕರಾಯನ ಸೋದರನಾದ ಮಾರಪ್ಪನ ಮಂತ್ರಿ ಮಾಧವನೊಂದಿಗೆ ಕೊಂಕಣ ಪ್ರದೇಶದ ಮೇಲೆ 1366 ರಲ್ಲಿ ಯುದ್ಧ ಕೈಗೊಂಡ ಸಂದರ್ಭದಲ್ಲಿ ಬೈಚನೂ ಯುದ್ಧದಲ್ಲಿ ಮಡಿದ. ಈತನ ಸ್ಮರಣಾರ್ಥವಾಗಿ ಗೋವಾ ಸೀಮೆಯಲ್ಲಿ ವೀರಗಲ್ಲೊಂದು ಸ್ಥಾಪಿತವಾಗಿದೆ.[6]

ಬೈಚನ ಮಕ್ಕಳಲ್ಲಿ ಮಂಗಪ್ಪ ದಂಡನಾಯಕ ಹಾಗೂ ಆತನ ಜಾನಕಿ ಜೈನಧರ್ಮದ ನಿಷ್ಠಾವಂತ ಉಪಾಸಕರಾಗಿದ್ದರು. ಮಂಗಪ್ಪನು ತನ್ನ ಪೋಷಣೆಯಲ್ಲಿ ಬೆಳೆದ ಸೋದರನಾದ ಒಂದನೇ ಇರುಗುಪ್ಪ ಮತ್ತು ಬುಕ್ಕಣ್ಣನನ್ನು ಲೋಕ ವಿಖ್ಯಾತರಾಗುವಂತೆ ಮಾಡಿದ. ಈ ಮಂಗಪ್ಪನ ಇಬ್ಬರು ಪುತ್ರರು ಎರಡನೇ ಬೈಚ ಮತ್ತು ಎರಡನೇ ಇರುಗುಪ್ಪ.[7] ಹಿಂದೂಪುರ ತಾಲ್ಲೋಕಿನ ಬೆಲ್ಲುಮತ್ತೂರು ಕೆರೆಯ ಕೆಸರಿನಲ್ಲಿ ದೊರೆತಿರುವ ಶಾಸನದಲ್ಲಿದ್ದ ವಿವರಣೆಯಿಂದ ಮಹಾಮಂಡಲೇಶ್ವರ ಬುಕ್ಕರಾಯನ ಕಾಲದಲ್ಲಿ ಮಹಾಪ್ರಧಾನ ಬೈಚರಾಜ ದಂಡನಾಯಕನ ಪುತ್ರನಾದ ಇರುಗುಪ್ಪನು ಬೆಲ್ಲುಮುತ್ತೂರು ಪ್ರಾಂತ್ಯವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಶಾಸನ 1367ಕ್ಕೆ ಸೇರಿದ ಶಾಸನವಾಗಿದ್ದು, ಈ ಶಾಸನದಲ್ಲಿ ಹೇಳಿರುವ ದಂಡನಾಯಕನು 1ನೇ ಇರುಗುಪ್ಪನೆಂದು ತಿಳಿಯಬಹುದು.[8] ಒಂದನೇ ಇರುಗುಪ್ಪ ಬಾರಾಕೂರು ರಾಜ್ಯದ ಪ್ರಾಂತ್ಯಾಧಿಕಾರಿಯೂ ಆಗಿದ್ದ. ಆ ಸಂದರ್ಭದಲ್ಲಿ ಉಭಯಾಚಾರ್ಯರ ಸಮ್ಮುಖದಲ್ಲಿ



ಇರುಂಗುಪ್ಪ ದಂಡನಾಯಕ

ಪುರಾತನ ಕಾಲದಿಂದಲೂ ಇದ್ದಂತಹ ಶಾಸನವು ಆಕಸ್ಮಿಕವಾಗಿ ಸಂಭವಿಸಿದ ಅಗ್ನಿಯಲ್ಲಿ ನಾಶವಾಗಿದ್ದು ಆ ಶಾಸನವನ್ನು ಪುನ: ಸಂಕ್ಷಿಪ್ತವಾಗಿ ರಚಿಸಿದುದಾಗಿ ಶಾಸನದಲ್ಲಿ ವಿವರಿಸಲಾಗಿದೆ. ಹಟ್ಟಿ ಅಂಗಡಿಯ ಚಂದ್ರನಾಥ ಸ್ವಾಮಿಯ ಪೂಜೆಗಾಗಿ ಅನೇಕ ದತ್ತಿಯನ್ನು ನೀಡಿದ ವಿವರಣೆಯನ್ನು ಅದು ಒಳಗೊಂಡಿದೆ. ಇದು ಕ್ರಿ. ಶ. 1389 ಕ್ಕೆ ಸೇರಿದ ಶಾಸನವಾಗಿದೆ [೮].

ಹಂಪೆಯ ಪುರಾತತ್ವ ಇಲಾಖೆಯ ಮ್ಯೂಸಿಯಂನಲ್ಲಿ ಕಾಣೆಯಾಗಿರುವ ಜಿನಮೂರ್ತಿಯ ಪೀಠದ ಭಾಗದಲ್ಲಿ ಇಮ್ಮಡಿ ಬೈಚ ದಂಡನಾಯಕನ ಪುತ್ರನಾದ ಇಮ್ಮಡಿ ಬುಕ್ಕ ಮಂತ್ರಿಯು ಮೂಲಸಂಘ, ಬಲಾತ್ಕಾರ ಗಣ, ಸರಸ್ವತೀ ಗಚ್ಛದ ಧರ್ಮಭೂಷಣ ಭಟ್ಟಾರಕಾಚಾರ್ಯರ ಶಿಷ್ಯ ಎಂಬ ಉಲ್ಲೇಖವಿದೆ. ಕರ್ನೂಲಿನಲ್ಲಿ ಬಸ್ತಿ ನಿರ್ಮಿಸಿ, ಕುಂತು ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ವಿವರಣೆ ಇದ್ದು, ಇದು ಕ್ರಿ.ಶ. 1395ರ ಶಾಸನವಾಗಿದೆ.[9] ಬೈಚನ ವಂಶಾವಳಿಯಲ್ಲಿ ಎರಡನೇ ಬೈಚನ ಮಗ ಎರಡನೇ ಬುಕ್ಕನೂ ವಿಜಯನಗರ ಅರಸರ ಸೇವೆಯಲ್ಲಿದ್ದ ಎಂಬುದು ಸ್ಪಷ್ಟವಾಗುತ್ತದೆ.* ಇದು ಎರಡನೇ ಹರಿಹರನ ಕಾಲಕ್ಕೆ (1377–1404) ಸೇರಿದ ಶಾಸನ.

ತಿರುಪ್ಪಾರುತ್ತಿಕುನ್ರುಂ ವಿನ ತ್ರೈಲೋಕ್ಯನಾಥ ಬಸ್ತಿಯ ಶಾಸನದಲ್ಲಿ ಇರುಗುಪ್ಪನು ಮಾವಂದೂರು ಜಿಲ್ಲೆಯ ಮಹೇಂದ್ರ ಮಂಗಳಂ ಗ್ರಾಮವನ್ನು ದತ್ತಿನೀಡಿದ ಉಲ್ಲೇಖವಿದೆ.[10] ಪುಷ್ಪಸೇನ ಆಚಾರ್ಯರ ಆಜ್ಞೆಯ ಮೇರೆಗೆ ವರ್ಧಮಾನ ಬಸ್ತಿಯ ಮುಂಭಾಗದಲ್ಲಿ ಸಂಗೀತ ಮಂಟಪವನ್ನೂ ನಿರ್ಮಿಸಿ ಬಸ್ತಿಯ ಸುತ್ತಲೂ ಹಾಸುಗಲ್ಲನ್ನು ಹಾಕಿಸಿದುದಾಗಿ ವಿವರಣೆಯಿದೆ. ಈ ದಾನವನ್ನು ಹರಿಹರನ ಪುತ್ರ ಎರಡನೇ ಬುಕ್ಕನ ಶ್ರೇಯೋಭಿವೃದ್ಧಿಗಾಗಿ ನೀಡಿದುದಾಗಿ ಹೇಳಲಾಗಿದೆ.[11] ಈ ಬಸ್ತಿಗೆ ಕೃಷ್ಣದೇವರಾಯನು ದತ್ತಿನೀಡಿದ.[12] ಇರುಗುಪ್ಪನು ನಿರ್ಮಿಸಿದ ಸಂಗೀತಮಂಟಪ, ತಮಿಳುನಾಡಿನ ಜೈನ ಬಸ್ತಿಗಳಲ್ಲಿಯೂ ಈ ಕಾಲದಲ್ಲಿ ಸಂಗೀತ ಸಮ್ಮೇಳನ ನಡೆಯುತ್ತಿದ್ದಿತು ಎಂಬುದನ್ನು ದೃಢೀಕರಿಸುತ್ತದೆ. ರಾಜಧಾನಿಯಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಯುತ್ತಿದ್ದು, ಅದರ ಅನುಕರಣೆಯನ್ನು ಪ್ರಾಂತ್ಯಾಧಿಕಾರಿಗಳು ಮಾಡುತ್ತಿದ್ದರು. ಬಹುಶಃ ಎರಡನೇ ಹರಿಹರನ ಆಡಳಿತದ ಕಾಲದಲ್ಲಿ ಇರುಗುಪ್ಪನು ತಮಿಳುನಾಡಿನ ಸೀಮೆಯ ಪ್ರಾಂತ್ಯಾಧಿಕಾರಿ ಆಗಿರಬೇಕು. ಸಂಗೀತ ಮಂಟಪದಲ್ಲಿ ಇರುಗುಪ್ಪನ ಚಿತ್ರವನ್ನು ಸ್ತಂಭದಲ್ಲಿ ಕೆತ್ತಲಾಗಿದೆ.

'ತಿರುಪ್ಪಾರುತ್ತೀಕುನ್ರುಂ'ಅಥವಾ 'ಜಿನಕಾಂಚಿ' ಕಂಚಿಯ ಸಮೀಪ ಇರುವ ಜೈನಕ್ಷೇತ್ರ.ಇದು ಒಮ್ಮೆ ಸುಪ್ರಸಿದ್ಧ ಜೈನ ಕ್ಷೇತ್ರವಾಗಿದ್ದಿತು ಎಂಬ ಅರಿವು ಬಹಳ ಜನರಿಗೆ ತಿಳಿದಂತೆ ಕಾಣುವುದಿಲ್ಲ. ಇದು ಪ್ರಸಿದ್ಧ ವಿದ್ಯಾಸ್ಥಾನವೂ ಆಗಿದ್ದಿತು. ಮುನಿತಾಣಗಳು ವಿದ್ಯಾಸ್ಥಾನಗಳೂ ಆಗಿರುತ್ತಿದ್ದವು. ವಿದ್ಯಾದಾನ ಜೈನ ಸಾಮಾಜಿಕ–ಧಾರ್ಮಿಕ ಜೀವನಕ್ರಮದ ಅವಿಭಾಜ್ಯ ಅಂಗವಾಗಿದ್ದು, ಅಗ್ರಹಾರಗಳಂತೆ ಪ್ರತ್ಯೇಕ ಸಂಸ್ಥೆಗಳಾಗಿ ಬೆಳೆಯಲಿಲ್ಲ. ಜಿನ ಬಸ್ತಿಗಳು ಜ್ಞಾನಪ್ರಸಾರ ಕೇಂದ್ರಗಳಾಗಿದ್ದು ಆಚಾರ್ಯರು, ಪಂಡಿತರು ಈ ಕ್ಷೇತ್ರದಲ್ಲಿ ಕಾರ್ಯೋತ್ಸುಕರಾಗಿರುತ್ತಿದ್ದರು. 'ತಿರುಪ್ಪಾರುತ್ತೀಕುನ್ರುಂ' ಎಂಬ ಹೆಸರು 'ಪರುತ್ತಿ' (parutti) ಎಂಬ

* ಅಂದರೆ, ಎಪಿಗ್ರಾಫಿಯಾ ಕರ್ನಾಟಕದ ಎರಡನೇ ಸಂಪುಟದ ಪೀಠಿಕೆಯಲ್ಲಿ ಪ್ರಕಟಿತವಾಗಿರುವ ಬೈಚನ ವಂಶಾವಳಿಯ ಪಟ್ಟಿಗೆ ಎರಡನೇ ಬುಕ್ಕ ದಂಡನಾಯಕನ ಹೆಸರನ್ನು ಸೇರಿಸಬಹುದು.

ತಮಿಳು ಪದದ ಮೂಲದಿಂದ ಬಂದುದಾಗಿದೆ. 'ಪರುತ್ತಿ' ಎಂದರೆ 'ಹತ್ತಿ' ಎಂದರ್ಥ. ಇದು 'ಸೆಂಪೊರಕುನ್ರುಂ,' ಅಥವಾ 'ಕುನ್ರುಂ' ಎಂಬ ಪದದ ಅಪಭ್ರಂಶವೂ ಆಗಿದೆ. ಅಂದರೆ 'ಸುಂದರವಾದ ಸುವರ್ಣ ಬೆಟ್ಟ ' ಎಂದರ್ಥ. 'ತಿರ್' ಎಂಬ ಪದವು 'ಸೆಂಮ್' ಪದದ ಸಮಾನಾರ್ಥಕ ಪದವಾಗಿದ್ದು 'ತಿರುಪ್ಪಾರುತ್ತೀಕುನ್ರುಂ', 'ಕುನ್ರುಂ' 'ಸೆಮ್‌ಪೋರ್‌ಕುನ್ರುಂ' ಎರಡೂ ಒಂದೇ ಪ್ರದೇಶಕ್ಕೆ ಇದ್ದ ಹೆಸರಾಗಿದ್ದು, ಇಂದು ಅರುಣಗಿರಿಮೇಡು ಎಂಬ ಹೆಸರಿದೆ. 'ಅರುಣಗಿರಿ' ಸೆಮ್‌ಪೋರಕುನ್ರುಂ ಪದದ ಸಂಸ್ಕೃತ ರೂಪ. ಇಲ್ಲಿಯ ಚಂದ್ರಪ್ರಭ ಬಸ್ತಿ ಮತ್ತು ಅತ್ಯಂತ ವಿಸ್ತಾರವಾದ ವಿವಿಧ ರಾಜಮನೆತನಗಳಿಂದ ಕಾಲಾನುಕ್ರಮದಲ್ಲಿ ವಿಸ್ತರಿಸಲ್ಪಟ್ಟ ಅನೇಕ ಕೂಟಗಳನ್ನೊಳಗೊಂಡ ತ್ರೈಲೋಕನಾಥ ಅಥವಾ ವರ್ಧಮಾನ ಬಸ್ತಿ ಪ್ರಮುಖವಾದುವುಗಳು.[13] ಇವುಗಳು, ಹಾಗೂ ಸುಂದರವಾದ ಭಿತ್ತಿ ಚಿತ್ರ ಇಂದು ಸಂರಕ್ಷಣೆ ಇಲ್ಲದೆ ನಶಿಸಿಹೋಗುತ್ತಿದ್ದು, ಮುಂದಿನ ಶತಮಾನದ ಸಮಯಕ್ಕೆ ಕೆಲವು ಅವಶೇಷಗಳು ಮಾತ್ರ ಉಳಿಯಬಹುದು.

ಕರ್ನಾಟಕ ಜೈನ ಕೇಂದ್ರಗಳಿಗೂ, ತಿರುಪ್ಪಾರುತ್ತೀಕುನ್ರುಂಗೂ ನಿಕಟ ಸಂಬಂಧವಿದ್ದಿತು. ಇಲ್ಲಿಯ ಬಸ್ತಿಗೆ ದತ್ತಿ ನೀಡಿದ ವಿಜಯನಗರ ಸಾಮ್ರಾಜ್ಯದ ಶ್ರೇಷ್ಠದೊರೆ ಕೃಷ್ಣದೇವರಾಯನ ಶಾಸನಗಳು ಕನ್ನಡ ಭಾಷೆಯಲ್ಲಿಯೇ ಇವೆ.[13ಎ] ಕರ್ನಾಟಕದ ಲಕ್ಷ್ಮಿಸೇನ ಭಟ್ಟಾರಕರು ಮತ್ತು ವೀರಸೇನ ಭಟ್ಟಾರಕರು ದಿಲ್ಲಿ, ಕೊಲ್ಲಾಪುರ, ಜಿನಕಾಂಚಿ ಮತ್ತು ಪೆನುಗೊಂಡೆಯ ಜೈನಧರ್ಮ ಸಂರಕ್ಷಕರಾಗಿದ್ದರು.[13ಬಿ] ಹದಿನೇಳನೆಯ ಶತಮಾನದ ಕೊನೆಯ ವರ್ಷದವರೆಗೂ ತಿರುಪ್ಪಾರುತ್ತೀಕುನ್ರುಂ ಹಾಗೂ ಇಲ್ಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಜೈನರ ಪ್ರಭಾವ ಇದ್ದಿತು ಎಂಬುದು ಸ್ಪಷ್ಟವಾಗುತ್ತದೆ.

ಇರುಗುಪ್ಪ ದಂಡನಾಯಕನಿಂದ ನಿರ್ಮಿತವಾದ ಸಂಗೀತಮಂಟಪ ಚಿತ್ರಕಲೆಗೆ ಹೆಸರುವಾಸಿಯಾಗಿದೆ. ಜೈನ ಆಗಮ ವಿವರಣೆಗನುಸಾರವಾಗಿ ಅನೇಕ ಘಟನೆಗಳು– ತೀರ್ಥಂಕರರ ಹುಟ್ಟು, ವೈಭವ, ಪರಿತ್ಯಾಗ, ಆಹಾರ ದಾನ, ತಪಸ್ಸು, ಬೋಧನೆ ಇವುಗಳೆಲ್ಲವೂ ಚಿತ್ರಿತವಾಗಿವೆ. ಇವುಗಳಲ್ಲಿ ಮುಖ್ಯವಾದ ಕೆಲವುಗಳು ಈರೀತಿ ಇವೆ.

ವೃಷಭದೇವನ ವಿವಾಹದ ದೃಶ್ಯ.

ನಾಗರಿಕತೆಯ ಹುಟ್ಟು ಬೆಳವಣಿಗೆಗೆ ಮುಖ್ಯ ಅಂಶಗಳಾದ ಕೃಷಿ, ವ್ಯಾಪಾರ, ಲಿಪಿ ಇವುಗಳನ್ನು ಮಾನವ ಜನಾಂಗಕ್ಕೆ ಬಿತ್ತರಿಸುತ್ತಿರುವ ಚಿತ್ರ.

ಲೌಕಾಂತಿಕ ದೇವತೆಗಳು ವೃಷ್ಣವ ತೀರ್ಥಂಕರರಿಗೆ ಸಂಸಾರ ಸುಖ ಪರಿತ್ಯಾಗ ಮಾಡಿ ದೀಕ್ಷೆ ಪಡೆಯುತ್ತಿರುವ ಕಾಲ ಸನ್ನಿಹಿತವಾಗಿದೆ ಎಂದು ಸೂಚಿಸುವ ದೃಶ್ಯ.

ಕಚ್ಛ–ಮಹಾಕಚ್ಛ ಇವರ ಚಿತ್ರಣ,
ಶ್ರೇಯಂಸ ಕುಮಾರನ ಕನಸು,
ಅರಮನೆಯ ಶ್ರೀಮಂತಿಕೆಯ ಜೀವನ,
ಸಮವಸರಣದ ಚಿತ್ರಣ.

ನೇಮಿನಾಥ ಮತ್ತು ಸಮಕಾಲೀನ ನೆಂಟನಾದ ಕೃಷ್ಣನ ಬಾಲ್ಯದ ಆಟಪಾಟ, ಕಂಸನ ವಧೆ ಗೋವರ್ಧನಗಿರಿಯನ್ನು ಮೇಲೆತ್ತಿದ ಸನ್ನಿವೇಶ, ತ್ರಿವಿಕ್ರಮ– ಚಿತ್ರ. (ಅಂದರೆ, ನಾಗಶಯನನ ಮೇಲೇರಿ ಶಂಖನಾದವನ್ನು ಘೋಷಿಸಿದ್ದು). ಅಪರಾಜಿತನ (ಜರಾಸಂಧನ ಮಗ) ಜೊತೆ ಕೃಷ್ಣನ ಕಾಳಗ.

ವರ್ಧಮಾನನ ಜೀವನದ ಚಿತ್ರ.

ನೃತ್ಯ–ಕರ್ನಾಟಕದ ನೃತ್ಯಕಲೆಯಾದ ಕೋಲಾಟ,

ಪ್ರಿಯದರ್ಶಿ ವರ್ಧಮಾನನಿಗೆ ಜನ್ಮ ನೀಡಿದ ಸನ್ನಿವೇಶ.

ಸೌಧರ್ಮೇಂದ್ರನ ನೃತ್ಯ–ಪಾದಸ್ವಸ್ತಿಕಾ ಭಂಗಿಯ ಚಿತ್ರಣ.

ಅಂಬಿಕೆ–ಅಥವಾ ಧರ್ಮದೇವಿಯ ಚಿತ್ರಣ.

ಹೀಗೆ ಮಹಾಪುರಾಣದಲ್ಲಿ ವಿವರಿಸಲಾಗಿರುವ ಅನೇಕ ಘಟನಾವಳಿಗಳ ಚಿತ್ರಣ ಮನೋಹರವಾಗಿದೆ. [14] ವಿಶೇಷತವಾಗಿ ಎರಡನೇ ಹರಿಹರನ ಕಾಲದಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರಕಿತು. 1378 ರ ಒಂದು ಶಾಸನದಲ್ಲಿ ಹರಿಹರನು ಬ್ರಾಹ್ಮಣರಿಗೆ ನೀಡಿದ ಅಗ್ರಹಾರಕ್ಕೆ ಸೇರಿದ ಸತ್ರಗಳ ಗೋಡೆಗಳು ಭಿತ್ತಿಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದವು ಎಂಬ ವಿವರಣೆ ಇದೆ. [15]

ಇಂದಿನ ಹಂಪೆಯ ಬಳಿ ಕಮಲಾಪುರದಲ್ಲಿರುವ ಗಾಣಗಿತ್ತಿ ಶಿವಾಲಯದ ದೀಪದ ಕಂಬದ ಮೇಲೆ ಕೆತ್ತಿರುವ ಶಾಸನದಲ್ಲಿ ಇರುಗುಪ್ಪನ ಸಾಧನೆಯನ್ನು ಶ್ಲಾಘಿಸಲಾಗಿದೆ. [16] ಇದು ಕ್ರಿ.ಶ.1386ಕ್ಕೆ ಸೇರಿದ ಶಾಸನವಾಗಿದ್ದು, ಹರಿಹರನ ಮಂತ್ರಿಯಾದ ದಂಡನಾಯಕ ಇರುಗುಪ್ಪ ಕುಂತು ಜಿನಾಲಯವನ್ನು ನಿರ್ಮಿಸಿದ ವಿವರಣೆ ಇದೆ. ಕಾಲಕ್ರಮದಲ್ಲಿ ಕುಂತು ಜಿನಾಲಯಕ್ಕೆ ಗಾಣಗಿತ್ತಿ ಶಿವಾಲಯ ಎಂಬ ಹೆಸರು ಪ್ರಚಾರಕ್ಕೆ ಬಂದಿತು. ಹಂಪೆಯಲ್ಲಿ ಜೈನರ ಪ್ರಭಾವ ಕುಗ್ಗಿದ ಕಾರಣ ಈ ಬಸ್ತಿಯಲ್ಲಿ ಶೈವರ ಆಧಿಪತ್ಯ ಸ್ಥಾಪಿತವಾಗಿರಬೇಕು. ಕುಂತು ತೀರ್ಥಂಕರಮೂರ್ತಿ ಸ್ಥಾಪಿತವಾದುದರಿಂದ ಈ ಬಸ್ತಿಗೆ ಕುಂತು ಜಿನಾಲಯ ಎಂಬ ಹೆಸರು ಬಂದಿರಬೇಕು. ಸ್ತಬ್ಧ, ಸಭಾಮಂಟಪ , ಮುಖಮಂಟಪ, ಪಿರಮಿಡ್ ಆಕಾರದ ಗೋಪುರ, ಎತ್ತರದ ಮಾನಸ್ತಂಭ– ಇವುಗಳನ್ನೊಳಗೊಂಡಿರುವ ಕುಂತು ಜಿನಾಲಯವನ್ನು ವಿಜಯನಗರ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಿದ್ದು, ಈ ಕಾಲದ ಉತ್ಕೃಷ್ಟ ದೇವಾಲಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. [17]

ಈ ಶಾಸನ ಜಿನಸ್ತುತಿಯೊಂದಿಗೆ ಆರಂಭವಾಗುತ್ತದೆ. ಆಚಾರ ಪರಂಪರೆಯ ವಿವರಣೆ ಈ ರೀತಿ ಇದೆ:

(ಮೂಲಸಂಘ–ನಂದಿಸಂಘ–ಬಲತ್ಕಾರಗಣ– ಸರಸ್ವತಗಚ್ಛ)

ಪದ್ಮನಂದಿ

|

ಒಂದನೇಧರ್ಮಭೂಷಣ ಭಟ್ಟಾರಕ

|

ಅಮರಕೀರ್ತಿ

|

ಸಿಂಹನಂದಿ ಗಣಾಬ್ರಿಕ
|
ಧರ್ಮಭೂಷಣ ಭಟ್ಟಾರಕ
|
ವರ್ಧಮಾನ
|
ಎರಡನೇ ಧರ್ಮಭೂಷಣ—ಭಟ್ಟಾರಕ ಮುನಿ

ಇರುಗುಪ್ಪನ ಬಗ್ಗೆ ಶಾಸನದಲ್ಲಿ ಈ ರೀತಿಯ ವಿವರಣೆ ಇದೆ:

ಹರಿಹರನ ಪಾರಂಪರಾಗತವಾಗಿ ಸೇವೆ ಸಲ್ಲಿಸಿದ ಜೈನ ಮನೆತನದ ಮಂತ್ರಿ ದಂಡನಾಯಕ ಬೈಚ ಅಥವಾ ಬೈಚನ ಮಗ ದಂಡನಾಯಕ ಇರುಗುಪ್ಪ ಸಿಂಹನಂದಿ ಆಚಾರ್ಯರ ಅನುಯಾಯಿ. ಅಂದರೆ ಕುಂತು ಜಿನಾಲಯವು ಒಂದನೇ ಇರುಗುಪ್ಪನಿಂದ ನಿರ್ಮಿತವಾಯಿತು. ಸಿಂಹನಂದಿ ಆಚಾರ್ಯರ ಹೆಸರು ಶ್ರಣಬೆಳಗೊಳದ ದೊಡ್ಡಬೆಟ್ಟದ ಅಖಂಡ ಬಾಗಿಲ ಬಳಿ ಕೆತ್ತಲ್ಪಟ್ಟದ್ದು, ಆಚಾರ್ಯರ ಹೆಸರು ಶ್ರವಣಬೆಳಗೊಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೆತ್ತಿರುವ ಶಾಸನವಾಗಿರಬೇಕು.[19] ಕ್ರಿ. ಶ. 1394 ರಲ್ಲಿ ಕುಣಿಗಲ್ ಪ್ರದೇಶದಲ್ಲಿ ಕೆರೆಯನ್ನು ನಿರ್ಮಿಸಿದ.[20] ಹರಿಹರನ ಆಸ್ಥಾನದಲ್ಲಿ ಇರುಗುಪ್ಪನು ನಾನಾರ್ಥ ರತ್ನಮಾಲಾ ಎಂಬ ಕೃತಿಯನ್ನು ರಚಿಸಿದ.[21] ಶ್ರವಣಬೆಳಗೊಳದ ದೊಡ್ಡಬೆಟ್ಟದ ಬ್ರಹ್ಮದೇವರ ಮಂಟಪದ ಮೇಲೆ ಕೆತ್ತಿರುವ ಶಾಸನದಲ್ಲಿ ಎರಡನೇ ಇರುಗುಪ್ಪನ ಸಾಹಸ, ಸಾದನೆಯ ನಿರೂಪಣೆ ಇದೆ. ಈ ಶಾಸನದ ಕಾಲ ಕ್ರಿ. ಶ. 1422 ಆಗಿದ್ದು, ಈ ಶಾಸನವು ಒಂದನೇ ದೇವರಾಯನ ಕೊನೆಯ ಕಾಲಕ್ಕೆ (1406–1422) ಸೇರಿದ ಶಾಸನವಾಗಿದೆ.[22] ಎರಡನೇ ಇರುಗುಪ್ಪನ ಧರ್ಮ ನಿಷ್ಠೆಯ ಬಗ್ಗೆ ಈ ರೀತಿಯ ವಿವರಣೆ ಇದೆ: 'ಅಮಿತವಾದ ಅನ್ನದಾನ, ಅಭಯದಾನ, ಔಷಧ ದಾನ ಮತ್ತು ವಿದ್ಯಾದಾನ – ಇವು ಈತನ ದಿನಚರಿ ಆಗಿಹೋದವು. ಅಸತ್ಯ ವಚನ, ಪರಸ್ತ್ರೀವ್ಯಾಮೋಹ, ಚೌರ್ಯ, ಮತ್ತು ಪರಿಗ್ರಹ ಇವೆಲ್ಲಾ ಈತನಿಂದ ದೂರವಾಗಿದ್ದವು. ಇವನ ಔದಾರ್ಯವೆಲ್ಲವೂ ಸತ್ಪಾತ್ರಕ್ಕೆ ಮೀಸಲು. ಇವನ ನೋಟ ಕೇವಲ ಜಿನಬಿಂಬಗಳ ಕಡೆ ಕೇಂದ್ರೀಕೃತವಾಗಿರುವುದು. ಕಿವಿ ಸದಾ ಜಿನನ ಮಹಿಮೆಯನ್ನಾಲಿಸುವುದು, ಇವನ ನಾಲಿಗೆ ಸದಾ ಜಿನನ ಗುಣಗಾನ ಮಾಡುವುದು, ಈತನ ಸಕಲ ಸಂಪತ್ತು ಜಿನಸೇವೆಗಾಗಿ ಮೀಸಲು. ಇವನ ಕೀರ್ತಿಯು ಆ ಕಾಲದ ಜೈನ ಸಮಾಜದಲ್ಲಿಯೇ ಮನೆಮಾತಾಗಿದ್ದಿತು. ಇಂತಹ ಎರಡನೇ ಇರುಗುಪ್ಪನು ಗೊಮ್ಮಟೇಶ್ವರನ ಸನಾತನ ಭೋಗಕ್ಕೆಂದು, ಅಂದರೆ ಪೂಜೆಗಾಗಿ ಬೆಳಗೊಳದ ಗ್ರಾಮವನ್ನು ದತ್ತಿಯಾಗಿ ನೀಡಿದನು.[23*] ಗೋಪಾದ ಬಂದೇಪಾಡದ ನೇಮಿನಾಥ ದೇವಾಲಯದಲ್ಲಿ ದೊರೆತಿರುವ ಕ್ರಿ. ಶ. 1425 ರ ಎರಡನೇ ದೇವರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ ಮಂಗಪದಂಡನಾಯಕನ ಮಗ ಇರುಗುಪ್ಪನು ನಿರ್ಮಿಸಿದ ನೇಮಿನಾಥ ದೇವಾಲಯವನ್ನು ಸಿಂಹನಂದಿ ಆಚಾರ್ಯರು ಜೀರ್ಣೋದ್ಧಾರ ಮಾಡಿಸಿದರೆಂದು ಹೇಳಿದೆ. ಸಿಂಹನಂದಿ ಆಚಾರ್ಯರ ಬಗ್ಗೆ ಈ ಶಾಸನ ಹೆಚ್ಚು ವಿವರಣೆಗಳನ್ನೊಳಗೊಂಡಿದೆ.[23ಅ]

---

* "ಬೆಳ್ಗುಳ ಜಗದಗ್ರಕೀರ್ತಿ ಶ್ರೀಮಾನಸಾನಿ ದುಗಪಾಪ್ಪಯ ದಂಡನಾಥ! ಶ್ರೀ ಗುಂಮ್ಮಟೇಶ್ವರ ಸನಾತನ ಭೋಗ ಹೊತ್ತೋಣ್ಣಾ, ಪೋತ್ತಮುಂಡಳಗು ಳಾ ಬ್ಯ ಮುದತ್ತ ಧೀರ:"

ಕ್ರಿ. ಶ. 1442 ರ ಶಾಸನದಲ್ಲಿ ದಂಡನಾಯಕ ಇರುಗುಪ್ಪನು ಚಂದ್ರಗುತ್ತಿ ಮತ್ತು ಗೋವೆಯ ಪ್ರಾಂತ್ಯಾಧಿಕಾರಿಯಾಗಿದ್ದ ಎಂದು ತಿಳಿದುಬರುತ್ತದೆ. ಅಂದರೆ, ಎರಡನೆಯ ದೇವರಾಯನ ಕಾಲದಲ್ಲಿ (1424–1442) ಗೋವೆಯ ಪ್ರಾಂತ್ಯಾಧಿಕಾರಿಯಾಗಿರಬೇಕು. [24]

ಒಂದನೇ ಮತ್ತು ಎರಡನೇ ಇರುಗುಪ್ಪ ದಂಡನಾಯಕರು ವಿಜಯನಗರ ಅರಸರಾದ ಹರಿಹರ, ಎರಡನೇ ಬುಕ್ಕ, ಒಂದನೇ ದೇವರಾಯ, ಎರಡನೇ ದೇವರಾಯ, ಅಂದರೆ, ಕ್ರಿ. ಶ. 1369–1442 ರ ವರೆಗೆ 73 ವರ್ಷಗಳ ಕಾಲ ದಂಡನಾಯಕರಾಗಿ, ಮಂತ್ರಿಗಳಾಗಿ ಪ್ರಾಂತ್ಯಾಧಿಕಾರಿಗಳಾಗಿ, ಆಡಳಿತ ಅಧಿಕಾರಿಗಳಾಗಿ ಸೇವೆಸಲ್ಲಿಸಿ, ಜೈನಧರ್ಮದ ಶ್ರೇಷ್ಠ ಶ್ರಾವಕರೂ, ಅಣುವ್ರತ ಧರ್ಮಪಾಲಕರೂ ಆಗಿದ್ದು ಜೈನ ಧರ್ಮದ ರಕ್ಷಕ ಮತ್ತು ಪೋಷಕರೂ ಆಗಿದ್ದರು. ಹೀಗೆ ಬೈಚ ದಂಡೇಶನ ವಂಶಜರು ಪಾರಂಪರಗತವಾಗಿ ವಿಜಯನಗರ ಸಾಮ್ರಾಜ್ಯದ ನಿಷ್ಠಸೇವೆಯನ್ನು ಸಲ್ಲಿಸಿ ಕೀರ್ತಿಗಳಿಸಿದರು.

ಬಸ್ತಿಗಳ ನಿರ್ಮಾಣ, ಸಮಾಜ ಸೇವೆಯ ಒಂದು ಅವಿಭಾಜ್ಯ ಅಂಗವಾಗಿದ್ದು, ಈ ಪರಂಪರೆಯನ್ನು ಜೈನ ಶ್ರಾವಕರು, ಶ್ರೇಷ್ಠ ಅಧಿಕಾರಿಗಳು, ವರ್ತಕರು, ಶ್ರೀಮಂತರು ನಿರಂತರವಾಗಿ ಪಾಲಿಸಿಕೊಂಡೇ ಬಂದರು. ಈ ಕಾರಣದಿಂದ ವಿಜಯನಗರ ಕಾಲದಲ್ಲಿಯೂ ಬಹುಸಂಖ್ಯೆಯಲ್ಲಿ ಅಲ್ಲದಿದ್ದರೂ, ಕೆಲವು ಬಸ್ತಿಗಳು ಪ್ರತಿಷ್ಠೆಯ ಅಧಿಕಾರಿಗಳಿಂದ ನಿರ್ಮಿತವಾದವು. ಇಂತಹ ಸತ್ಕಾರ್ಯದಲ್ಲಿ ನಿರತರಾದಂತಹ ವ್ಯಕ್ತಿಗಳ ಶ್ರೀಮಂತಿಕೆ ಹಾಗೂ ಸಮಾಜದಲ್ಲಿ ಅವರಿಗಿದ್ದ ಗಣ್ಯಸ್ಥಾನ, ಅಧಿಕಾರ ಇವುಗಳು ಅವರ ಸಂಘಟನಾ ಶಕ್ತಿಗೆ ಸಹಕಾರವಾದವು. ಅಲ್ಲದೆ, ಸುಲಭವಾಗಿ ಅವರಿಗೆ ಸಮುದಾಯದ ಬೆಂಬಲ ದೊರಕುತ್ತಿತ್ತು. ಹೀಗೆ ಬೈಚ ದಂಡೇಶನ ವಂಶವು ವಿಜಯನಗಗ ಆರಂಭ ಕಾಲದಿಂದ ಒಂದು ಶತಮಾನಕ್ಕಿಂತಲೂ ಹೆಚ್ಚಾಗಿ ಸಮಾಜದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಪ್ರಭಾವಶಾಲಿಯಾದ ಮನೆತನವಾಗಿದ್ದಿತು.

ಧರ್ಮಸಹಿಷ್ಣುತೆಯ ಪರಂಪರೆಯನ್ನು ಎಲ್ಲಾ ಕಾಲದಲ್ಲಿಯೂ ಕರ್ನಾಟಕದ ಅರಸರುಗಳು ನಿಯಮಬದ್ಧವಾಗಿ ಪಾಲಿಸಿಕೊಂಡೇ ಬಂದರು. ಅಸಹಿಷ್ಣುತೆ ಕೇವಲ ಆಕಸ್ಮಿಕವೇ ಹೊರತು ರಾಜನೀತಿ ಆಗಿರಲಿಲ್ಲ. ಹಾಗೆಯೇ ವಿಜಯನಗರ ಕಾಲದಲ್ಲಿ ಜೈನಧರ್ಮ ರಾಜಧರ್ಮವಾಗಿರದಿದ್ದರೂ ಆರಂಭ ಕಾಲದಲ್ಲಿ ಈ ಧರ್ಮದ ಪ್ರಭಾವ ಸಾಕಷ್ಟು ಇದ್ದಿತೆಂಬುದನ್ನು ತೆಗೆದುಹಾಕುವಂತಿಲ್ಲ.

ಒಂದನೇ ದೇವರಾಯನ ಪತ್ನಿ ಭೀಮಾದೇವಿ ಜೈನಧರ್ಮ ಅನುಯಾಯಿ ಆಗಿದ್ದು, ಅವಳು ಶ್ರವಣಬೆಳಗೊಳದ ಪಂಡಿತಾಚಾರ್ಯರ ಶಿಷ್ಯೆಯಾಗಿದ್ದಳು. [25] ಮಂಗಾಯಿ ಬಸ್ತಿಯಲ್ಲಿ ಶಾಂತಿ ತೀರ್ಥಂಕರ ಬಿಂಬದ ಮೇಲೆ

> "ಶ್ರೀಮತ್ಪಂಡಿತಾಚಾರ್ಯ್ಯ ಗುಡ್ಡಿ ದೇವರಾಯ ಮಹಾರಾಯರ
> ರಾಣಿ ಭೀಮಾದೇವಿ ಮಾಡ್ಸಿದ ಶಾನ್ತಿನಾಥ ಸ್ವಾಮಿ ಶ್ರೀ.........[26]

ಎಂಬ ಶಾಸನವಿದೆ. ಅಂದರೆ ಭೀಮಾದೇವಿ ಶ್ರವಣಬೆಳಗೊಳಕ್ಕೆ ತೀರ್ಥದರ್ಶನಕ್ಕಾಗಿ ಬಂದದ್ದು ಸ್ಪಷ್ಟವಾಗುತ್ತದೆ. ಮಂಗಾಯಿ ಬಸ್ತಿ ಶ್ರವಣಬೆಳಗೊಳದ ಪ್ರಮುಖ ಬಸ್ತಿಗಳಲ್ಲಿ ಒಂದು. ಈ

ಬಸ್ತಿಗೆ ತ್ರಿಭುವನ ಚೂಡಾಮಣಿ ಬಸ್ತಿಯೆಂಬ ಹೆಸರುಂಟು. ಕ್ರಿ. ಶ. 1325 ರಲ್ಲಿ, ಅಂದರೆ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕೆಲವು ವರ್ಷಗಳ ಮುಂಚೆ ಬಸ್ತಿಯನ್ನು ಮಂಗಾಯಿಯು ನಿರ್ಮಿಸಿದಳು ಎಂಬ ಉಲ್ಲೇಖವಿದೆ. ಮಂಗಾಯಿ ರಾಜನ ಆಸ್ಥಾನದ ಶ್ರೇಷ್ಠ ನರ್ತಕಿಯೂ ಆಗಿದ್ದು, ಪಂಡಿತಾಚಾರ್ಯರ ಶಿಷ್ಯೆಯೂ ಆಗಿದ್ದಳು.

1. ಸ್ವಸ್ತಿಶ್ರೀ ಮೂಲಸಂಘ ದೇಶಿಯಗಣ
2. ಪುಸ್ತಕಗಚ್ಛ ಕೊಂಡಕುಂದಾನ್ವಯ
3. ದ ಶ್ರೀಮದಭಿನವ ಚಾರುಕೀರ್ತ್ತಿಪಂ
4. ಡಿತಾಚಾರ್ಯ್ಯರ ಶಿಷ್ಯಳು ಸಮ್ಯಕ್ತ್ವಾದ್ಯ
5. ನೇಕ ಗುಣಗಣಾಭರಣ ಭೂಷಿತೆ
6. ರಾಯ ಪಾತ್ರ ಚೂಡಾಮಣಿ ಬೆಳುಗು
7. ಳದ ಮಂಗಾಯಿ ಮಾಡಿಸಿದ ತ್ರಿಭು
8. ವನ ಚೂಡಾಮಣಿಯೆಂಬ ಚೈತ್ಯಾಲ
9. ಯಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ' '[27]

ಮತ್ತೊಂದು ಶಾಸನದಲ್ಲಿಯೂ ಇದೇ ರೀತಿಯ ವಿವರಣೆ ಇದೆ.

ಅನೇಕ ಭವ್ಯರು ಈ ಬಸ್ತಿಗೆ ಪ್ರತ್ಯೇಕವಾಗಿ ದತ್ತಿ ನೀಡಿದ ಉಲ್ಲೇಖವಿದೆ. 15 ನೇ ಶತಮಾನಕ್ಕೆ ಸೇರಿದ ಒಂದು ಶಾಸನದಲ್ಲಿ ಈ ಬಸ್ತಿಯನ್ನು ಗೇರುಸೊಪ್ಪೆಯ ಹಿರಿಯ ಅಯ್ಯನ ಶಿಷ್ಯನಾದ ಗೊಮ್ಮಟಣ್ಣನು ರಿಪೇರಿ ಮಾಡಿಸಿದ ಎಂದು ಹೇಳಿದೆ. [28] ಗೇರುಸೊಪ್ಪೆಯ ಅಪ್ಪೆಯರ ಸಮೂಹವು ನೀಡಿದ ದಾನದ ವಿರಣೆ ಇದೆ. ಪಂಡಿತ ದೇವರ ಶಿಷ್ಯರಾದ ಬೆಳಗುಳದ ಚೆನ್ನಗೌಡ, ಮುತ್ತಗದ ಹೊನ್ನಹಳ್ಳಿಯ ಕಾಳೇಗೌಡರು ದೊಡ್ಡನ ಕಟ್ಟೆಯ ತರಿ ಮತ್ತು ಬಂಜರು ಭೂಮಿಯನ್ನು ದತ್ತಿ ನೀಡಿದ ಬಗ್ಗೆ 16ನೇ ಶತಮಾನದ ಒಂದು ಶಾಸನದಿಂದ ತಿಳಿಯುತ್ತದೆ. [29]

ಮಂಗಾಯಿಗೆ ಸಮ್ಯಕ್ತ್ವ ಚೂಡಾಮಣಿ ಎಂಬ ಬಿರುದನ್ನು ಪಂಡಿಚಾರ್ಯರು ನೀಡಿದ್ದರೆಂದು ಕಾಣುತ್ತದೆ. ವಿಶೇಷವಾಗಿ ಜೈನ ಅಗ್ರಗಣ್ಯ ಅಮಾತ್ಯರಿಗೆ, ದಂಡನಾಯಕರಿಗೆ ಇಂತಹ ಧಾರ್ಮಿಕ ಬಿರುದಾವಳಿಗಳಿದ್ದವು. ಚಾಮುಂಡರಾಯ, ಹುಲ್ಲಿಮಯ್ಯ ಅವರ ಕಾಲದ ಸಮ್ಯಕ್ತ್ವ ಚೂಡಾಮಣಿಗಳಾಗಿದ್ದರು. ಸಮ್ಯಕ್‌ಜ್ಞಾನ, ದರ್ಶನ, ಚಾರಿತ್ರ್ಯ ದೃಢಪಾಲಕರಾಗಿದ್ದರು ಎಂಬುದನ್ನು ಈ ಧಾರ್ಮಿಕ ಬಿರುದು ದೃಢೀಕರಿಸುತ್ತದೆ. ಮಂಗಾಯಿಯೂ ಆ ಕಾಲದ ಸಮಕ್ತ್ವ ಚೂಡಾಮಣಿ ಆಗಿದ್ದಳು. ರಾಜನರ್ತಕಿಯೂ ಆಗಿದ್ದಳು. ಈಕೆಯು ತನ್ನ ಸಕಲ ಐಶ್ವರ್ಯವನ್ನೂ ಮಂದಿರ ನಿರ್ಮಾಣ ಮತ್ತಿತರ ಶ್ರೇಷ್ಠ ಕಾರ್ಯಗಳಿಗೆ ಸದುಪಯೋಗ ಮಾಡಿದ್ದು ಪಂಡಿತಾಚಾರ್ಯರ ವಿಶ್ವಾಸಕ್ಕೂ, ಜೈನಸಮಾಜದ ಮೆಚ್ಚುಗೆಗೂ ಪಾತ್ರಳಾಗಿರಬೇಕು.

ಭೀಮಾದೇವಿ ಹಾಗೂ ಇರುಗುಪ್ಪನಂತಹ ಜೈನ ಚೂಡಾಮಣಿಗಳ ಪ್ರಭಾವಕ್ಕೆ ದೇವರಾಯನೂ ಒಳಗಾಗಿದ್ದ. ಹುಂಚದ ಧರ್ಮಭೂಷಣ ಗುರುಗಳಿಗೆ ಭಕ್ತಿಪೂರಕ ಸೇವೆಯನ್ನು

ಸಲ್ಲಿಸಿದನು. ವರ್ಧಮಾನ ಮುನಿಯ ಶಿಷ್ಯರಾದ ಧರ್ಮಭೂಷಣ ಗುರುಗಳು ವಾಗ್ಮಿಗಳೂ, ಪಂಡಿತರೂ ಆಗಿದ್ದು, ಅನೇಕ ಮುನಿಗಳೂ, ರಾಜರುಗಳೂ ಇವರಿಗೆ ಭಕ್ತಿಪೂರಕವಾಗಿ ಗೌರವ ಸಲ್ಲಿಸುತ್ತಿದ್ದರು ಎಂದು ತಿಳಿದುಬರುತ್ತದೆ. [30]

ದೇವರಾಯನು ಶ್ರವಣಬೆಳಗೊಳದ ಗೊಮ್ಮಟಸ್ವಾಮಿಯ ಸೇವೆಗೆ ಬೇನಾಮಿ ಗ್ರಾಮವನ್ನು ದತ್ತಿನೀಡಿ ಮಂತ್ರಿ ಬೈಚ ದಂಡನಾಯಕನು ಈ ರಾಜಾಜ್ಞೆಯನ್ನು ಕಾರ್ಯರೂಪಕ್ಕೆ ತರುವಂತೆ ವ್ಯವಸ್ಥೆ ಮಾಡಲು ಆಜ್ಞೆ ಮಾಡಿದ. [31] ಅಂದರೆ, ಎರಡನೇ ಇರುಗುಪ್ಪನ ಸೋದರ ಬೈಚ ದೇವರಾಯನ ಮಂತ್ರಿಯೂ ದಂಡನಾಯಕನೂ ಆಗಿದ್ದಿರಬೇಕು. 'ಭವ್ಯಗಣಿ' ಎಂದು ಶಾಸನದಲ್ಲಿ ಪ್ರಶಂಸಿಸಲಾಗಿದೆ.

ಮಲೆಯೂರು ಪ್ರಾಚೀನ ಜೈನಕ್ಷೇತ್ರವಾಗಿದ್ದು, ಮಲೆಯೂರು ಬೆಟ್ಟಕ್ಕೆ 'ಕನಕಗಿರಿ' ಎಂದೇ ಹೆಸರಿತ್ತು. 1422 ರಲ್ಲಿ ರಾಜಕುಮಾರ ಹರಿಹರರಾಯನು ಮಲೆಯೂರು ಗ್ರಾಮವನ್ನು ಕನಕಗಿರಿ ವಿಜಯನಾಥ ದೇವಾಲಯದಲ್ಲಿ ಪೂಜೆ, ಅಲಂಕಾರ ಮತ್ತು ಉತ್ಸವಗಳನ್ನು ನಡೆಸಲು ಮಲೆಯೂರು ಗ್ರಾಮವನ್ನೇ ದತ್ತಿ ನೀಡಿದನು.[32] ಈ ಪರಂಪರೆಯನ್ನು ಎರಡನೇ ದೇವರಾಯ ಮುಂದುವರಿಸಿದ. ಎರಡನೇ ದೇವರಾಯನು ವಾರಾಂಗದ ನೇಮಿನಾಥ ಜಿನಾಲಯಕ್ಕೆ ವಾರಾಂಗ ಗ್ರಾಮವನ್ನು ದತ್ತಿ ನೀಡಿದ.[33] ಹಾಗೂ 1426 ರಲ್ಲಿ ರಾಜಧಾನಿಯಲ್ಲಿ ಪಾರ್ಶ್ವನಾಥ ದೇವಾಲಯದ ನಿರ್ಮಾಣಕ್ಕೆ ಆಜ್ಞೆ ಮಾಡಿದ.[34] ಎರಡನೇ ದೇವರಾಯನು ನಿರ್ಮಿಸಿದ ಪಾರ್ಶ್ವನಾಥ ಜಿನಾಲಯದ ದ್ವಾರಮಂಟಪದಲ್ಲಿ ದೊಡ್ಡ ಅಕ್ಷರಗಳಲ್ಲಿ ಶಾಸನವಿದ್ದು ಈ ಶಾಸನವೂ ಕೂಡ ಏಶಿಯಾಟಿಕ್ ಸಂಶೋಧನಾ ಪತ್ರಿಕೆಯಲ್ಲಿ 1836 ರಲ್ಲಿಯೇ ಪ್ರಕಟವಾಗಿದೆ. ಇದು ಜೈನ ಶಾಸನವಲ್ಲದಿದ್ದರೂ, ಎರಡನೇ ದೇವರಾಯನವರೆಗೆ ವಿಜಯನಗರದ ಅರಸರ ವಂಶಾವಳಿಯ ಪಟ್ಟಿ ಇದೆ. ಹಾಗೂ, ಎರಡನೇ ತೈಮೂರನ ಮಗನಾದ ಸಮತಖಂಡದ ದೊರೆ ಸುಲ್ತಾನ್ ಷಾ ಬುಕನ ರಾಯಭಾರಿ ಅಬ್ದುಲ್ ರಜಾಕನು ಎರಡನೇ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಸಂದರ್ಶನ ನೀಡಿದ ಕಾಲದಲ್ಲಿ ಚಲಾವಣೆಯಲ್ಲಿದ್ದ ಕೆಲವು ನಾಣ್ಯಗಳ ವಿವರಣೆಗಳಿವೆ. ಶಾಸನದ ಕೊನೆಯ ಭಾಗದಲ್ಲಿ ದೇವರಾಯನು ನಗರದ ಪಾನ್ ಸುಪಾರಿ ಬೀದಿಯಲ್ಲಿ ಪಾರ್ಶ್ವಜಿನಾಲಯವನ್ನು ನಿರ್ಮಿಸಿದ ಉಲ್ಲೇಖವಿದೆ. ಈ ದೇವಾಲಯ ಪೂರ್ತಿಯಾಗಿ ಹಾಳಾಗಿದ್ದು, ಆ ಕಾಲದಲ್ಲಿ ನಿರ್ಮಿತವಾದ ಒಂದು ದೊಡ್ಡ ಬಸ್ತಿ. ಸರಳವಾಗಿ ನಿರ್ಮಿತವಾಗಿರುವ ಬಸ್ತಿಯಲ್ಲಿ ಹೆಚ್ಚಿನ ಶಿಲ್ಪ ಕೆತ್ತನೆಗಳೇನೂ ಇಲ್ಲದಿದ್ದರೂ, ಮಹಾದ್ವಾರದಲ್ಲಿ ಜಿನಬಿಂಬಗಳ ಕೆತ್ತನೆ ಇದೆ. ಇದು ವಿಜಯನಗರ ಕಾಲದಲ್ಲಿ ನಿರ್ಮಿತವಾಗಿ ಅತ್ಯುತ್ತಮ ವಾಸ್ತು ಶಿಲ್ಪಿಗಳಲ್ಲಿ ಒಂದು ಎಂದು ಕಲಾವಿಮರ್ಶಕರಾದ ಡಾ. ಎಸ್. ರಾಜಶೇಖರ್ ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ.

ಕೃಷ್ಣದೇವರಾಯನೂ ಇರುಗುಪ್ಪನು ನಿರ್ಮಿಸಿದ ತ್ರೈಲೋಕ್ಯನಾಥ ದೇವಾಲಯಕ್ಕೆ ಎರಡು ಗ್ರಾಮಗಳನ್ನು ದತ್ತಿ ನೀಡಿದನು. [35] ಈ ಕಾಲದಲ್ಲಿ ಶೈವ, ವೈಷ್ಣವ ಧರ್ಮಗಳು ವಿಶೇಷ ಪುರಸ್ಕಾರವನ್ನು ಪಡೆದಿದ್ದರೂ, ಜೈನಧರ್ಮ ಇದರಿಂದ ನಿರ್ಲಕ್ಷಿಸಲ್ಪಡಲಿಲ್ಲ ಎಂಬುದು ಸ್ಪಷ್ಟ

ವಿಜಯನಗರ ಅರಸರು ಇತರ ಸಾಮ್ರಾಜ್ಯದ ಚಕ್ರವರ್ತಿಗಳಂತೆ **'ಸಕಲ ವರ್ಣಾಶ್ರಮ ಧರ್ಮದ ಸಂರಕ್ಷಕರು ಎಂಬ ಬಿರುದನ್ನು ಹೊಂದಿದ್ದರು.'** ಈ ಕಾಲದಲ್ಲಿ ಜೈನ ಬಸ್ತಿಗಳಿಗೆ ನೀಡಿದ ಗ್ರಾಮ ದತ್ತಿಗಳನ್ನು ಪರಿಶೀಲಿಸಿದಾಗ, ವಿಶೇಷವಾಗಿ ಯಾವ ಯಾವ ಪ್ರದೇಶಗಳಲ್ಲಿ ಜೈನರ ಪ್ರಭಾವ ಹೆಚ್ಚಾಗಿದ್ದಿತೋ ಅಂಥಹ ಕ್ಷೇತ್ರಗಳಿಗೆ ಸೇರಿದ ಗ್ರಾಮಗಳನ್ನು ದತ್ತಿ ನೀಡುವ ಕ್ರಮವನ್ನು ರಾಜರು ಅನುಸರಿಸಿದರು.

ಗೊಮ್ಮಟೇಶ್ವರನ ಸೇವೆಗೆ ಬೆಳಗೊಳ ಗ್ರಾಮದ ದತ್ತಿ [36]
ವರಾಂಗದ ನೇಮಿನಾಥ ಜಿನಾಲಯಕ್ಕೆ ವರಾಂಗ ಗ್ರಾಮದ ದತ್ತಿ [37]
ಕನಕಗಿರಿ ಕ್ಷೇತ್ರಕ್ಕೆ ಮಲೆಯೂರು ಗ್ರಾಮದ ದತ್ತಿ [38]

ಈ ಕ್ರಮದಿಂದ ಜೈನ ಕ್ಷೇತ್ರಗಳ ಸಂರಕ್ಷಣೆಯೂ ಮತ್ತು ಅನುಚಿತವಾಗಿ ನಡೆಯುವಂತಹ ಧಾರ್ಮಿಕ ಘರ್ಷಣೆಯನ್ನು ತಪ್ಪಿಸುವ ಕ್ರಮವೂ ಆಗಿದ್ದಿತು.

'ಧರ್ಮ' ಎನ್ನುವುದು ಕೇವಲ ಅಧ್ಯಾತ್ಮಿಕ ಸಿದ್ಧಾಂತ ಮಾತ್ರವಲ್ಲ. ನಂಬಿಕೆ, ಪೂಜೆ ಮತ್ತಿತರ ಈ ಲೌಕಿಕ ಆಚರಣೆ ಧರ್ಮದ ಚೌಕಟ್ಟಿಗೆ ಒಳಪಡುತ್ತವೆ. ಕ್ರಮೇಣವಾಗಿ ಸಿದ್ಧಾಂತಕ್ಕಿಂತ ಆಚರಣೆಗೆ ಹೆಚ್ಚಿನ ಮಹತ್ವ ನೀಡಿದ ಕಾರಣ ಅನೇಕ ಸಂದರ್ಭಗಳಲ್ಲಿ ಒಂದು ಪಂಥದವರು ತಮ್ಮ ಧರ್ಮದ ಶ್ರೇಷ್ಠತೆಯನ್ನು ದೃಢೀಕರಿಸಲು ಹೊರಟಾಗ ಘರ್ಷಣೆಗಳು ಸಂಭವಿಸಿದವು. ಆದರೆ ಧರ್ಮಯುದ್ಧಗಳು ನಡೆಯಲಿಲ್ಲ.

BIBLIOGRAPHY

1. E. C.,Vol. II, Introduction.
2. T. V. Mahalingam, Administration and Social Life Under Vijayanagar, Part-II.
3. A. H. Langhurst, Hampe Ruins, Asian Educational Services, New Delhi, 1981.
4. E. C. Vol. 11, No. 357.
5. E. C. Vol. IX, No. 20, Belur.
6. Mirji Anna Rao, Jaina Dharma.
7. E. C., Vol. 11, No. 357.
8. S. I. I., Vol, IX, part II, No 412-
   On a Slab built into the waste weir of the Tank at Chillmatturu, Hindupur Taluk, Anandapur District. Dated: 1367.

8a Archaeological Survey of India; Annual Report on Epigraphy of 1970-71, 210, Hattiyangadi.

9. P. B. Desai, Jainism in Andradesa, P. 23.
10. S. 1. 1., Vol. I, Pp. 155-160. and Epigraphia India, Vol. IV, No. 15.

11. Ibid., E. 1, Vol. IV, No. 15.
12. B. A. Saletore, Medieval Jainism, Karnataka Publishing House.
13. T. N.Ramachandran, Tiruparatti Kunram and its Temples, Bulletin Madras government Museum, May 1934.
13 a) Ibid., P. 48.
13 b) E. C. Vol. VII, Nagamangala, No. 94 and 96.
14. T. N. Ramachandran Tiruparatti Kunram its Temples Baulletin, Madras government Museum, May1934.
15. B. A. Saletore, Vijayanagara Art, Ch. 9.
16. S. S. I, Vol. I, No. 152.
17. S. Rajashekhara, Master Pieces of Vijayanagara Art.
18. S. S. I., Vol. I. No. 152
19. E. C. Vol. 11, P. 276.
20. B. A. Saletore, Medieval Jainism.
21. E. I, Vol. II, P. 156.
22. E. C. Vol. II, No. 357.
23. Ibid., No. 357.
23.a) Archaeological Survey of India Annual Report on Indian Epigraphy, 1962-63. This is an unpublished inscription.
24. B. A. Saletore, Madieval Jainism.
25. E. C., Vol. 11, No. 470.
26. E. C., Vol. 11, No. 467.
27. E. C., Vol. 11, No. 470.
28. E. C., Vol. 11. No. 473.
29. E. C. Vol. 11, No. 471.
30. B. A. Saletore, Madieval Jainism, P. 299 and E. C., Vol. VIII, No. 46.
31. E. C., VI. V, MJ, 58, P. 273.
32. E. C., Vol. IV, Ch. 144.
33. B. A. Saletore, Medieval Jainism, P. 301.
34. S. S. I., Vol. I, No. 153.
35. T. N. Ramachandran, Tiruparutti-Kunram and its Temples, Bulletin, Madras government Museum, May, 1934.
36. E. C. Vol. 357.
37. B. A. Saletore, Medieval Jainism, P. 301.
38. E. C., Vol. IV, Ch. 144.

ಶಾಸನ ಪಾಠ

(ವಿಜಯನಗರದ ದೀಪಸ್ತಂಭದ ಮೇಲಿರುವ ಶಾಸನ)

1. ಯತ್ಪಾದ ಪಂಕಜರಜೋ ರಜೋ ಹರತಿ ಮಾನಸಂ। ಸಜಿನಃ ಶ್ರೀಯಸೇ
2. ಭೂಯಾದ್ಭೂಯಸೇ ಕರುಣಾಲಯಃ (1) ಶ್ರೀಮತ್ಪರಮಗಂಭೀರ–
3. ಸ್ಯಾದ್ವಾದಾಮೋಘಲಾಂಛನಂ। ಜೀಯಾತ್ತ್ರೈಲೋಕ್ಯನಾಥ
4. ಸ್ಯ ಶಾಸನಂ ಜಿನಶಾಸನಂ (2) ಶ್ರೀಮೂಲ ಸಂಘೋಽಜನಿ ನಂದಿಸಂಘ
5. (ಸ್ತ)ಸ್ಮಿನ್ ಬಲಾತ್ಕಾರಗಣೋಽತಿರಮ್ಯಃ। ತತ್ರಾಪಿ ಸಾರಸ್ವತನಾಮ್ನಿ ಗಚ್ಛೇ ಸ್ವಚ್ಛಾಶ ಯೋಽಭೂದಿ
6. ಹ ಪದ್ಮನಂದೀ (3) ಆಚಾರ್ಯಃ ಕುಂಡ (ಕುಂದಾ) ಖ್ಯೋ ವಕ್ರಗ್ರೀವೋ ಮಹಾಯತಿಃ। ಯೇಲಾಚಾ
7. ಯೋ೯ ಗೃದ್ಧಪಿಂಛ್ಛಇತಿ ತನ್ನಾಮ ಪಂಚಧಾ (4) ಕೇಚಿತ್ತದನ್ವಯೆ ಚಾರುಮುನಯಃ ಖನ–
8. ಯೋ ಗಿರಾಂ। ಜಲಧಾವಿನ ರತ್ನಾನಿ ಬಭೂವುರ್ದಿವ್ಯತೇಜಸಃ (5) ತತ್ರಾಸೀಚ್ಚಾರು ಚರಿತ್ರರ–
9. ತ್ನ ರತ್ನಾಕರೋ ಗುರುಃ। ಧರ್ಮಭೂಷಣಯೋಗೀಂದ್ರ ಭಟ್ಟಾರಕಿ ಪದಾಂಚಿತಃ (6)
10. ಭಾತಿ ಭಟ್ಟಾರಕೋ ಧರ್ಮಭೂಷಣೋ ಗುಣಭೂಷಣಃ। ಯದ್ಯಶಃ ಕುಸುಮಾಮೋ
11. ದೇ ಗಗನಂ ಭ್ರಮರಾಯತೇ (7) ಶಿಷ್ಯಸ್ತಸ್ಯ ಮುನೇರಾ ಸಿದನರ್ಗ್ಗಲ ತಪೋನಿಧಿಃ। ಶ್ರೀಮಾನ್
12. ಮರ ಕೀತ್ಯಾ೯ರ್ಯ್ಯೋ ದೇಶಿಕಾಗ್ರೇಸರಃ ಶಮೀ (8) ನಿಜಪಕ್ಷ್ಮಪುಟಕವಾಟಂ ಘಟಯಿತ್ವಾನಿಲನಿರೋಧ–
13. (ತೋ) ಹೃದಯೇ। ಅವಿಚಲನಿತಬೋಧದೀಪಂ ತಮಮರಕೀತ್ತಿ೯ಂ
ಭಜೆ ತಮೋಹರಂ || (9) ಕೇಽಪಿ
14. ಸ್ವೋದರಪೂರಣೇ ಪರಿಣತಾ ವಿದ್ಯಾವಿಹೀನಾಂತರಾ ಯೋಗೀಶಾಭುವಿ ಸಂಭವಂತು ಬಹ
15. ವಃ ಕಿಂ ತೈರನಂತೈರಿಹ। ಧೀರಃ ಸ್ಫೂರ್ಜ್ಜತಿ ದುರ್ಜ್ಜಯಾ ತನುಮದಧ್ವಂಸೀ ಗುಣೈರೂರ್ಜ್ಜಿ–
16. ತೈರಾಚಾರ್ಯ್ಯೋಽಮರ ಕೀರ್ತಿ ಶಿಷ್ಯಗಣಭೃಚ್ಛ್ರೀ ಸಿಂಹನಂದೀವ್ರತೀ (10) ಶ್ರೀಧರ್ಮ್ಮ ಭೂಷೋಽಜನಿ ತ
17. ಸ್ಯ ಪಟ್ಟೇ ಶ್ರೀಸಿಂಹನಂದ್ಯಾರ್ಯ್ಯಗುರೋಸ್ಸಧರ್ಮ್ಮಾ। ಭಟ್ಟಾರಕಃ ಶ್ರೀ ಜಿನಧರ್ಮ್ಮ ಹರ್ಮ್ಯಸ್ತಂಭಾ
18. ಯಮಾನಃ ಕುಮುದೇಂದು ಕೀತ್ತಿ೯ಃ (11) ಪಟ್ಟೇ ತಸ್ಯ ಮುನೇರಾಸೀದ್ವರ್ಧಮಾನ ಮುನೀಶ್ವರಃ। ಶ್ರೀ ಸಿಂ
19. ಹ ನಂದಿ ಯೋಗೀಂದ್ರ ಚರಣಾಂಭೋಜ ಷಟ್ಪದಃ (12) ಸಿಷ್ಯಸ್ತಸ್ಯ

ಗುರೋರಾಸೀದ್ಧರ್ಮಭೂಷಣ–

20. ದೇಶಿಕಃ ಭಟ್ಟಾರಕಮುನಿಃ ಶ್ರೀಮಾನ್ ಶಲ್ಯತ್ರಯ ವಿವರ್ಜ್ಜಿತಃ (13) ಭಟ್ಟಾರಕಮುನೇಃ ಪಾದಾವಪೂ–
21. ರ್ವ್ವಕಮಲೇ ಸ್ತುಮಃ। ಯದಗ್ರೇ ಮುಕುಲೀಭಾವಂ ಯಾಂತಿ ರಾಜಕರಾಃ ಪರಂ (14) ಏವಂ ಗುರುಪ
22. ರಂಪರಾಯಮವಿಚ್ಛೇದೇನ ವರ್ತ್ತಮಾನಾಯಾಂ। ಆಸೀದಸೀಮ ಮಹಿಮಾನಂಶೇ ಯಾದವ–
23. ಭೂಭೃತಾಂ। ಅಖಂಡಿತ ಗುಣೋದರಃ ಶ್ರೀಮಾನ್ ಬುಕ್ಕಮಹೀಪತಿಃ (15) ಉದಭೂದ್ಭೂಭೃತಸ್ತಸ್ಮಾ
24. ದ್ರಾಜಾ ಹರಿಹರೇಶ್ವರಃ। ಕಲಾ ಕಲಾಪನಿಲಯೋ ವಿಧುಃ ಕ್ಷೀರೋದಧೇರಿವ (16) ಯಸ್ಮಿನ್ ಭರ್ತ್ತರಿ ಭೂ–
25. ಪಾಲೇ ವಿಕ್ರಮಾಕ್ರಾಂತ ವಿಷ್ಟಪೇ। ಚಿರಾದ್ರಾಜನ್ವತೀ ಹಂತ ಭವ(ತ್ಯೇಷಾ) ವಸುಂಧರಾ (17) ತಸ್ಮಿನ್ ಶಾ–
26. ಸತಿ ರಾಜೇಂದ್ರೇ ಚತುರಂಬುಧಿ ಮೇಖಲಾಂ ಧರಾಮ ಧರಿತಾಶೇಷ ಪುರಾತನ ಮಹೀಪತ್ (18) ಆಸೀತ್ತ–
27. ಸ್ಯ ಮಹೀಜಾನೇ. ಶಕ್ತಿತ್ರಯ ಸಮನ್ವಿತಃ। ಕುಲಕ್ರಮಾಗತೋ ಮಂತ್ರೀ ಚೈಚದಂಡಾಧಿನಾಯಕಃ (19) ದ್ವಿ–
28. ತೀಯಮಂತಃಕರಣಂ ರಹಸ್ಯೇ ಬಾಹುಸ್ತ್ವತೀಯಸ್ಸಮರಾಂಗಣೇಷು ಶ್ರೀಮಾನ್ಮಹಾ ಚೈಚ (ಪ)–
29. ದಂಡನಾಥೋ ಜಾಗರ್ತ್ತಿ ಕಾರ್ಯ್ಯೇ ಹರಿಭೂಮುಭರ್ತುಃ (20) ತಸ್ಯ ಶ್ರೀ ಚೈಚದಂಡಾಧಿ ನಾಯಕಸ್ಯೋ–
30. (ರ್ಜ್ಜಿ)ತ ಶ್ರೀಯಃ। ಆಸೀದಿರುಗದಂಡೇಶೋ ನಂದನೋ ಲೋಕನಂದನಃ (21) ನ ಮೂರ್ತ್ತೋ ನಾಮೂರ್ತ್ತೋ ನಿಖಿಲಭು–
31. ವನಾಭೋಗಿಕತಯಾ ಶರದ್ರಾಜಕಾವಿಟನಿಟಲನೇತ್ರದ್ಯುತಿತಯಾ। ಪ್ರಭೂತಾ ಕೀರ್ತ್ತಿಸ್ಸಾ ಚಿರ–
32. ಮಿರುಗದಂಡೇಶ ಕಥಯತ್ಯನೇಕಾಂತಾಂತ್ಕಾಂ ತಾಂತ್ವರಮಿಹ ನ ಕಿತಿಂಚಿನ್ಮತಮಿತಿ (22) ಸದ್ವಂಶಜೋಽಪಿ ಗುಣ–
33. ವಾನಪಿ ಮಾರ್ಗ್ಗಣಾ ನಾಮಾಧಾರತಾ ಮುಪಗತೋಽಪಿ ಚ ಯಸ್ಯ ಚಾಪಃ। ನಮ್ರಃ ಪರಾನ್ವಿನಮಯನ್ನಿ–
34. ರುಗಕ್ಷಿತೀಶಸ್ಯೋಚ್ಚೈರ್ಜ್ಜನಾಯ ಖಲು ಸಕ್ಷಯತೀವ ನೀತಿಂ (23) ಹರಿಹರಧರಣೀಶ ಪ್ರಾಜ್ಯಸಾಮ್ರಾ–
35. ಜ್ಯಲಕ್ಷ್ಮೀ ಕುವಲಯ ಹಿಮದಾಮಾ ಶೌರ್ಯ್ಯಗಾಂಭೀರ್ಯ್ಯಸೀಮಾ।

ಇರುಗಪಧರಣೀಶಸ್ಸಿಂಹ–

36. ನಂದ್ಯಾಯ್ಯರ್ಯ್ಯವರ್ಯ್ಯ ಪ್ರಪದನ(ಲಿ) ನಭ್ಭೃಂಗಸ್ಸ ಪ್ರತಾಪೈಕಭೂಮಿಃ (24) ಸ್ವಸ್ತಿ ಶಕವರ್ಷೇ 1307
37. ಪ್ರವರ್ತಮಾನೇ ಕ್ರೋಧನವತ್ಸರೇ ಫಾಲ್ಗುನಮಾಸೇ ಕೃಷ್ಣಪಕ್ಷೇ ದ್ವಿತೀಯಾಯಾಂ ತಿಥೆ ಶುಕ್ರವಾಸರೇ। ಅಸ್ತಿವಿ–
38. ಸ್ತೀರ್ಣ್ಣಕರ್ಣಾಟ ಧರಾಮಂಡಲ ಮಧ್ಯಗಃ। ವಿಷಯಃ ಕುಂತಲೋ ಸಾಮ್ನಾ ಭೂ ಕಾಂತಾಕುಂತಲೋಪ–
39. ಮಃ (25) ವಿಚಿತ್ರ ರತ್ನರುಚಿರಂ ತತ್ರಾಸ್ತಿ ವಿಜಯಾಭಿಧಂ ಸೌಧಸಂದೋಹ ದರ್ಶಿತ ಕಾಂಡಚಂದ್ರಿಕಂ (26)
40. ಮಣಿಕುಟ್ಟಿಮವೀಧೀಷು ಮುಕ್ತಾಸ್ಸೈಕ ತಸೇತುಭಿಃ। ದಾ(ನಾಂ)ಬೂನಿ ನಿರುಂಧಾನಾಯತ್ರ ಕ್ರೀಡಂತಿ ಬಾಲಿಕಾಃ (27)
41. ತಸ್ಮಿನ್ನಿರುಗ ದಂಡೇಶಃ ಪುರೇ ಚಾರುಶಿಲಾಮಯಂ। ಶ್ರೀಕುಂಥು ಜಿನನಾಥಸ್ಯ ಚೈತ್ಯಾಲಯಮ ಚೀಕರಕ್ (28)
42. ಭದ್ರಮಸ್ತು ಜಿನಶಾಸನಾಯ।

ಕನ್ನಡ ಲಿಪಿಗೆ
ಕೆ. ಎಲ್. ಪ್ರಸನ್ನಕಾಶಿ

ತ್ರೈಲೋಕ್ಯನಾಥ ದೇವಾಲಯದಲ್ಲಿರುವ ಕೃಷ್ಣದೇವರಾಯನ ದತ್ತಿಶಾಸನ

ಧಾತು ವರುಷಂ ಪುಷ್ಯ ಶುದ್ಧ ಪಾಡ್ಯತಿಲು ಶ್ರೀಮನ್ಮಹಾರಾಜಾಧಿರಾಜ–ರಾಜಪರಮೇಶ್ವರ ಶ್ರೀ ವೀರಪ್ರತಾಪ–ಶ್ರೀ ವೀರಕೃಷ್ಣರಾಯ ಮಹಾರಾಯರು ಜಯಿನಸ್ಥಾನ–ಬುದ್ಧಸ್ಥಾನದಕ್ಕುರುಕ್ಕಳುಡ್ಡೆಯಾರ್ಗಳುಕೆ ನಿರೂಪ ನಿಮ್ಮ ದೇವಸ್ಥಾನಕ್ಕೆ ಚೆಲುವ ಕೊಡುಗ್ಗೈ ಎಣ್ಣಾ ಗಿರಾಮವನು ಮುಸಿಯಿಪಾಕ್ಕ ಪ್ರೇತಿನಾಮವಾಕ ತಿರುಮಲ್ಲೈದೇವಿಪುರತ ಅಗ್ರಹಾರಕ್ಕೆ ಗ್ರಾಮಗ್ರಾಸಮಾಗಿ ಪಾಲಿಸಿ ನಿಮ್ಮ ಗ್ರಾಮಕ್ಕೆ ಪ್ರದಿಯಾಗಿ ಚೆನ್ನಮ ನಾಯಕ್ಕ ತಮ್ಮೈಯಪ್–ಓಬಿಳ–ಉವಚ್ಚೇರಿ–ಎಣ್ಣಕ್‌ಗ್ರಾಮ.

ಎರಡನೆಯ ಸಾಲು:

ವಣು ನಿಮ್ಮ ದೇವಸ್ಥಾನಕ್ಕೆ ಪವಿತ್ತೆವು. ನೀವು ಆ ಗ್ರಾಮವನು ಕಟ್ಟಿಕ್ಕೊಂಡು ಆ ಗ್ರಾಮವನು ನಿಮ್ಮ ದೇವರ್ ಶಾಸನ ಆಕ್ಕಿ ಕೊಂಬದು ಆಕೆ–ಕೊಡುಗ್ಗೈ ಏಣ್ಣಾ ಗ್ರಾಮವನು ಆ ತಿರುಮಲ್ಲೈದೇವಿಪುರತ ಅಗ್ಗಿರಹಾರತ ಮಹಾಜೆನಂ(ಗ)ಳುಕ್ಕೆ ಶಿಲಾಶಾಸನ ಆಕ್ಕಿ ಕೊಡುವವಾಗಿ ನಿಮ್ಮ ಉವಚ್ಚೆಂ ಏಣ್ಣಾಕ್–ಗಿರಾಮವಣು ನಿಮ್ಮದೇವಮ್ ತಿರುನಾಮಕ್ಷೇತಿರಂ ಆಗ ಶಿಲಾಸಾದನಂ ಆಕ್ಕಿಕೊಂಬದು ಆಸ್ಥಾನಿಗಣು ನಿರುಪ (ಪ್ರ)ಸಿಧೆವು ಶ್ರೀ ವಿರೂಪಾಕ್ಷ।

ವಿಜಯನಗರದ ಜೈನದೇವಾಲಯದಲ್ಲಿರುವ ಶಾಸನ

1. ಶುಭಮಸ್ತು। ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ। ಜೀಯಾತ್ತ್ರೈಲೋಕ್ಯ ನಾಥಸ್ಯ ಶಾಸನಂ ಜಿನಶಾಸನಂ। ಶ್ರೀಮದ್ಯಾದವಾರ್ನ್ನವಪೂರ್ನ್ನಚಂದ್ರಸ್ಯ। ಶ್ರೀಬುಕ್ಕ ಪೃಥ್ವೀಭುಧಃ ಪುಣ್ಯಾಪರಿಪಾ–

2. ಕಪರಿಣತಮೂರ್ತ್ತೇಸ್ಸತೀಕಾರ್ತ್ತೀಹರಿಹರ ಮಹಾರಾಜಸ್ಯ ಪರ್ಯಾಯಾವತಾರಾದ್ಧಿರಾದ್ದೇವ ರಾಜನರೇಶ್ವರಾದ್ದೇವರಾಜಾದಿವ ವಿಜಯಶ್ರೀವೀರವಿಜಯ ನೃಪತಿಸ್ಸಂಜಾತಸ್ತ

3. ಸ್ಮಾದ್ರೋಹಣಾದ್ರೇರಿವ ಮಹಾಮಾಣಿಕ್ಯಕಾಂಡೋ ನೀತಿಪ್ರತಾಪಸ್ಥಿರೀಕೃತ ಸಾಮ್ರಾಜ್ಯ ಸಿಂಹಾಸನಃ। ರಾಜಾಧಿರಾಜ ಪರಮೇಶ್ವರಾದಿ ಬಿರುದಾದಿ ಯಾತೋ ಗುಣನಿಧಿರಭಿ–

4. ನವದೇವರಾಜ ಮಹಾರಾಜೋ ನಿಜಾಜ್ಞಾಪರಿಪಾಲಿತ ಕರ್ನ್ನಾಟ ದೇಶಮಧ್ಯವರ್ತಿನಃ ಸ್ವಾವಾಸ– ಭೂತವಿಜಯನಗರಸ್ಯ ಕ್ರಮುಕ ಪರ್ನ್ನಾಪಣ ವೀಥ್ಯಾಮಾಚಂದ್ರ ತಾರಮಾತ್ಮಕೀ–

5. ರ್ತ್ತಿಧರ್ಮ್ಮಪ್ರವೃ–ತ್ತಯೇ। ಸಕಲಜ್ಞಾನ ಸಾಮ್ರಾಜ್ಯ ವಿರಾಜಮಾನಸ್ಯ ಸ್ಯಾದ್ವಾದ ವಿದ್ಯಾಪ್ರಕಟನ ಘಟೀಯಸಃ ಸ ಪಾರ್ಶ್ವನಾಥಸ್ಯಾರ್ಹತಃ ಶಿಲಾಮಯಂ ಚೈತ್ಯಾಲಯಮ ಚೀಕರತ್।

6. ದೇಶ ಕರ್ನಾಟ ನಾಮಾಭೂದಾವಾಸಃ ಸರ್ವ್ವಸಂಪದಾಂ। ವಿಡಂಬಯತಿ ಯಃ ಸ್ವರ್ಗ್ಗಂ ಪುರೋಡಾಶಾಶನಾಶ್ರಯಂ (2) ವಿಜಯನಗರೀತಿ ತಸ್ಮಿನ್ನ(ಗ)ರೀ ನಗರೀತಿ–

7. ರಮ್ಯಹರ್ಮ್ಯಾಸ್ತೇ। ನಗರಿಷ ನಗರೀ ಯಸ್ಯಾ ನಗರೀಯಸ್ಯೇವ ಗುರುಭೀರೈಶ್ವರ್ಯ್ಯಃ (3) ಕನಕೋಜ್ವಲ ಸಾಲರಶ್ಮಿಜಾಲೈಃ ಪರಿಜಾಂಬುಪ್ರತಿಬಿಂಬಿತೈರಲಂ ಯಾ

8. ವಸುಧೇವ ವಿಭಾತಿ ವಾಡವಾರ್ಚ್ಚಿರ್ವೃತ ರತ್ನಾಕರ ಮೇಖಲಾ ಪರೀತಾ। ಶ್ರೀಮಾನುದ್ದಾಮ ಧಾಮಾ ಯಗುಕುಲತಿಲಕಸ್ಸಾರಸೌಂದರ್ಯ್ಯಸೀಮಾ ಧೀಮಾನ್ರಾಮಾ–

9. ಭಿರಾಮಾಕೃತಿರವನಿತಲೇ ಭಾತಿ ಭಾಗ್ಯಾತ್ತಭೂಮಾ। ವಿಕ್ರಾಂತ್ಯಾಕ್ರಾಂತದಿಕ್ಕೋ ವಿಮತಿಧರಣಿಭೃತ್ಪಂಕಜ ಶ್ರೇಣಿವಿಕ್ಯಃ। ಕ್ಷೋಣ್ಯಾಂ ಜಾಗರ್ತ್ತಿ ಬುಕ್ಕಕ್ಷಿತಿಪತಿ–

10. ರುಭೂಜ್ಜ್ವಚ್ಚಿರಶ್ಚಿತ್ರಪೃಷ್ಕಃ (4) ತಸ್ಯಾಪ್ರಾತ್ತುಮವಾರ ಸ್ಫುರತಿ ಹರಿಹರಕ್ಷ್ಮಾಪತಿರ್ಜ್ಞಾಕರ ದಾರಿದ್ರ್ಯಸ್ಥಿರವಾರುಕರತರಣವಿ(ಧ) ವಿಷ್ಪುರತ್ನರ್ನ್ನಧಾರಃ। ಭೂ–

11. ದಾನಸ್ವರ್ನ್ನದಾನಾನುಕೃತ ಪರಶುಭೃತ್ಪದ್ಮಿನೀಬಂಧು ಸೂನು ಸ್ವಾರಾಕೂವಾರ ತೀರಾವಳಿಸಿಹಿತ ಜಯಸ್ತಂಭ ವಿನ್ಯಸ್ತಕೀರ್ತ್ತಿಃ (5) ತೇನಾಜನ್ಯರಿರಾಜ ತಲ್ಲಜಶಿರ–

12. ಸ್ತೋಮಸ್ಫುರಚ್ಚೇಖರ ಪ್ರತ್ಯುಪ್ತೇಪಲ ದೀಪಿಕಾ ಪರಿಣಮತ್ಪಾದಾಬ್ಜನೀರಾಜನಃ। ವಿದ್ವತ್ಕೈರವಮಂಡಲೀಹಿಮಕರೋ (ವಿ)ಖ್ಯಾತ ವೀರ್ಯ್ಯಾಕರಃ ಶ್ರೀಯಾನ್ವೀರರ–

13. ಮಾ ಸ್ವಯಂವೃತವರಃ ಶ್ರೀದೇವರಾಜೇಶ್ವರಃ (6) ತಜ್ಜನ್ಮಾಸ್ಮಿನ್ನವದಾನ್ಯೋ ಜ(ಗ)ತಿ ವಿಜಯತೇ ಪುಣ್ಯಚಾರಿತ್ರಮಾಂನ್ಯೋ ದಾನದ್ವಸ್ತಾರ್ಥಿದೈನ್ಯೋ ವಿಜಯನರಪತಿಃ ಖಂ–

14. ಡತಾರಾ (ತಿ) ಸೈನ್ಯೈಃ ಪ್ರತ್ಯುದ್ಯಜ್ಜೈತ್ರಯಾತ್ರಾಸಮಸಮಯ ಸಮೂದ್ಭೂತ ಕೇತುಪ್ರಸೂತ(ಸ್ಥಾ)ಯದ್ವಾತ್ಯೋಪಹತ್ಯಾ ಪ್ರತಿಹತ ವಿಮತೌಘ ಪ್ರತಾಪಪ್ರದೀಪಃ(7)

ಮುಖ್ಯದ್ವಾರದ ಬಲಗಡೆ

15. ತಸ್ಮಾದಸ್ಮಾಜ್ಜಿತಾತ್ಮಾಜನಿ ಜಗತಿ ಯಥಾ ಜಂಭಜೇತುರ್ಜ್ಜಯಂತೋ ರಾಜಾ ಶ್ರೀದೇವರಾಜೋ ವಿಜಯನೃಪತಿವಾರಾಶಿ ರಾಕಾ ಶಶಾಂಕಃ। ಕೋಪಾಟೋಪ ಪ್ರವೃತ್ತ ಪ್ರಬಲ ರಣಮುಲ ದ್ವಿಪ್ರತೀಪಕ್ಷ–

16. ಮಾ ಪಪ್ರಾಣ ಶ್ರೇಣೀನಭಸ್ವನ್ನಿವಹ ಕಬಲನವ್ಯಗ್ರ ಖಡ್ಗೋರಗೇಂದ್ರಃ (8) ವೀರ ಶ್ರೀದೇವರಾಜೋ ವಿಜಯನೃಪ ತಪಪಸ್ಸಾರ ಸುಜಾತ ಮೂರ್ತಿರ್ಭರ್ತ್ತಾ ಭೂಮೇರ್ವಿಭಾತಿ ಪ್ರಣತರಿಪುತತೇರಾತ್ತಿರ್ಜಾತಸ್ಯ ಹರ್ತ್ತಾ।

17. ಕ್ರೂರಕ್ರೋಧೇದ್ಧಯುದ್ಧೋದ್ಧುರ ಕರಟಿಘಟಾಕರ್ಣ್ಣಶೂರ್ಪ್ಪಪ್ರಸರ್ಪ್ಪದ್ವಾತವ್ರಾತೋಪಘಾಪತ್ರತಿಹತ ವಿಮತಾವಭ್ರ ಧೃತ್ಯುಚ್ಛ್ರಸಂಘಃ (9) ಯದ್ವಾಟೀ ಘೋರಘೋಟೀಖುರ ದಲಿತ ಧರಾರೇಣುಭಿ ರ್ವ್ವಿಯ್ಯ್ಯವಹ್ನೇರ್ದ್ದೂ–

18. ಮಣೋಪತವಾಯು ಮಾನ್ಯೈಃ ಪ್ರತಿನೃಪತಿಗಣಸ್ತ್ರೀಗೃತಃ ಸುಪ್ರುಧಾರಾತಿ। ಪ್ರೋದ್ಯದ್ದರ್ಪ್ಪಪ್ರಭೂತ ಪ್ರತಿಭಟ ಸುಭಟಾಸ್ಫೋಟನಾಟೋಪಜಾಗ್ರದ್ರೋಷೋತ್ಕರ್ಷಾಧಕಾರದ್ಯುಮಣಿರುದಯತೇ ದೇವರಾಜೇಶ್ವರೋಽಯಂ (10)

19. ವಿಶ್ವಸ್ಮಿನ್ವಿಜಯಕ್ಷಿತೀಶಜನುಷಃ ಶ್ರೀದೇವರಾಜೇಶಿತುರ್ಲ್ಲಕ್ಷ್ಮೀಂ ಕೀರ್ತ್ತಿಸಿತಾಂಬುಜಂ ಕಲಯತೇ ಶೌರ್ಯ್ಯಾಖ್ಯಸೂರ್ಯ್ಯೋದಯಾತ್। ಆಶಾ ಯತ್ರ ಪಲಾಶತಾಮುಪಗತಾಃ

20. ಖರ್ಣ್ಣಾಚಲಃ ಕರ್ಣ್ಣಿಕಾ ಭೃಂಗಾದಿಕ್ಷು ಮತಂಗಜಾ ಜಲಧಯೋ ಮಾರಂದ ಬಿಂದೂತ್ಕರಾಃ (11) ವಿಖ್ಯಾತೇ ವಿಜಯಾತ್ಮಜೇ ವಿತರತಿ ಶ್ರೀದೇವರಾಜೇಶ್ವರೇ ಕರ್ಣ್ಣಸ್ಯಾಜನಿ

21. ರ್ಣ್ಣನಾ ವಿಗಲಿತಾ ವಾಚ್ಯಾ ದಧೀಚ್ಯಾದಯಃ। ಮೇಘಾನಾಮಪಿ ಮೋಘತಾ ಪರಿಣತಾ ಚಿಂತಾನಚಿಂತಾಮಣೀಃ ಸ್ವಲ್ಪಾಃ ಕಲ್ಪಮಹೀರುಹಾಃ ಪ್ರಥಯತೇ ಸ್ವರ್ಣ್ಣಚಿಕೀ ನೀಚತಾಂ (12)

22. ಸೋಽಯಂ ಕೀರ್ತ್ತಿಸರಸ್ವತೀ ವಸುಮತೀವಾಣೀವಧೂಭಿಸ್ಸಮಂ ಭವ್ಯೋ ದೀವ್ಯತಿ ದೇವರಾಜ ನೃಪತಿರ್ಭೂದೇವ ದಿವ್ಯದ್ರುಮಃ। ಯಶ್ಚಾರಿರ್ಬಲಿಯಾಂಚನಾ ವಿರಹಿತ್ವಂಸ್ತ್ರಃ ಕಳಂ–

23. ಕೋಚ್ಛಿತಃ ಶಕ್ರಸ್ತತ್ಕಮಗೋತ್ರಭಿದ್ವಿನಕರಶ್ಚಾ ಸತ್ಪಥೋಲ್ಲಂಘನಃ (13) ಮದನಮನೋಹರ ಮೂರ್ತಿಃ ಮಹಿಳಾಜನ ಮಾವಸಾರಸಂಹರಣಃ. ರಾಜಾಧಿರಾಜ ರಾಜಾದಿಮಹದ ಪರಮೇಶ್ವರಾದಿನಿ–

24. ಜಬಿರುದಃ (14) ಶಕ್ತ್ಯಾ ಬುಕ್ಕಮಹೀಪಾಲೋ ದಾನೇ ಹರಿಹರೇಶ್ವರಃ। ಶೌರ್ಯ್ಯೇ

ಶ್ರೀದೇವರಾಜೇಶೋ ಜ್ಞಾನೇ ವಿಜಯಭೂಪತಿಃ (15) ಸೋಽಯಂ ಶ್ರೀದೇವರಾಜೇಶೋ ವಿದ್ಯಾವಿನಯ ವಿಶ್ರುತಃ ಪ್ರಾ–

25. ಗುಕ್ತಪುರಪೀಢ್ಯಂತರ್ಃಪರ್ಣ್ಣಪೂಗೀಫಲಾಪಣೇ (16) ಶಾಕೇಬ್ದೇ ಪ್ರಮಿತೇ ಯಾತೇ ವಸು ಸಿಂಧುಗುಣೇಂದುಭಿಃ। ಪರಾಭವಾಬ್ದೇ ಕಾರ್ತ್ತಿಕ್ಯಾಂ ಧರ್ಮಕೀರ್ತಿ ಪ್ರವ–ತ್ತಯೇ (17)

26. ಸ್ಯಾದ್ವಾದ ಮತಸಮರ್ತ್ಥನಖರ್ವ್ವೀಕೃತದುರ್ವ್ವಾದಿಗರ್ವ್ವವಾಗ್ಮಿತತೇಃ ಅಷ್ಟಾದಶ ದೋಷಮಹಾಮದ–ಗಜನಿ ಕುರುಂಬಮಹಿತಮೃಗರಾಜಃ (18) ಭವ್ಯಾಂಭೋರುಹ ಭಾನೋರಿಂದ್ರಾಂದಿಸು

27. ರೇಂದ್ರ ವೃಂದವಂದ್ಯಸ್ಯ। ಮುಕ್ತಿವಧೂ ಪ್ರಿಯಭರ್ತ್ತುಃ ಶ್ರೀ ಪಾರ್ಶ್ವಜಿನೇಶ್ವರಸ್ಯ ಕರುಣಾಬ್ಧೇಃ (19) ಭವ್ಯಪರಿತೋಷಹೇತುಂ ಶಿಲಾಮಯಂ ಸೇತುಮಖಿಲಧರ್ಮಸ್ಯ। ಚೈತ್ಯಾಗಾರಮಚೀಕರ–

28. ದಾಧರಣಿದ್ಯುಮಣಿ ಹಿಮಕರ ಸ್ಥೈರ್ಯ್ಯಂ (20)

ಕನ್ನಡ ಲಿಪಿಗೆ

ಕೆ. ಎಲ್. ಪ್ರಸನ್ನಕಾಶಿ

□□

ಚಂದಪ್ಪನ ಹಬ್ಬ

• ಕೆ. ಜಿ. ಗುರುಮೂರ್ತಿ

ಕರ್ನಾಟಕದ ಜಿಲ್ಲೆಗಳಾದ ಚಿತ್ರದುರ್ಗ, ಶಿವಮೊಗ್ಗ, ಧಾರವಾಡ, ಚಿಕ್ಕಮಂಗಳೂರುಗಳ ತಾಲ್ಲೂಕುಗಳಾದ ದಾವಣಗೆರೆ, ಹರಿಹರ, ಜಗಲೂರು, ಹೊಳಲ್ಕೆರೆ, ಹೊಸದುರ್ಗ, ಚನ್ನಗಿರಿ, ಭದ್ರಾವತಿ, ಹೊನ್ನಾಳಿ, ಅರಸೀಕೆರೆ, ತರೀಕೆರೆ, ಶಿರಾಳಕೊಪ್ಪ, ಹಿರೇಕೆರೂರ ಹಾಗೂ ರಾಣೇಬೆನ್ನೂರುಗಳ ಕೆಲವು ಹಳ್ಳಿಗಳಲ್ಲಿ ಚಂದಪ್ಪನನ್ನು ಹೊಯ್ಯುವುದು ಎಂಬ ಒಂದು ಸಂಪ್ರದಾಯ ಪ್ರಚಾರದಲ್ಲಿದೆ. ಇದನ್ನು ಕೆಲವು ಕಡೆ 'ತಿಂಗಳಹಬ್ಬ' ಎಂದೂ ಕರೆಯುತ್ತಾರೆ. ಇದು ಜನಪದ ರೀತಿಯಲ್ಲಿ ಹಾಡುವುದು, ಚಿತ್ರ ಮೂಡಿಸುವುದು ಇದ್ದು, ಇವುಗಳಿಗೆ ಸಂಬಂಧಪಟ್ಟ ಆಚರಣೆಗಳು, ನಂಬಿಕೆಗಳು ಪ್ರಚಾರದಲ್ಲಿವೆ. ಇದನ್ನು ಆಚರಿಸುವುದರಿಂದ ಜನಪದ ಕಲೆಗಳಾದ ಹಾಡು ಮತ್ತು ಚಿತ್ರ ಬಿಡಿಸುವುದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿನವರು ಕಲಿಯುವುದಕ್ಕೂ, ಪ್ರಸರಣ ಮಾಡಿ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಡುವುದಕ್ಕೂ ಸಹಾಯವಾಗಿದೆ. ಈ ಚಟುವಟಿಕೆಗಳನ್ನು ಸಾರ್ವಜನಿಕವಾಗಿ ಗ್ರಾಮದಲ್ಲಿಯ ಅನೇಕ ಕುಶಲ ಕಲಾ ಹಾಗೂ ಸೇವಾ ಜಾತಿಗಳ ಸಹಾಯದಿಂದ ಹಮ್ಮಿಕೊಳ್ಳಲಾಗುವುದು. ಈ ಚಟುವಟಿಕೆ ನಡೆಯುವುದು ಮಾಘಮಾಸದ ಪೂರ್ಣಚಂದ್ರನು ಬೆಳಕಿನಿಂದ ಬೆಳಗುವ, ತಂಪಾದ ರಾತ್ರಿಯ ವೇಳೆಯಲ್ಲಿ. ಇದು ಗಂಡಸರು, ಹೆಂಗಸರು, ತರುಣ–ತರುಣಿಯರು ಮತ್ತು ವೃದ್ಧರು ಹಾಗೂ ಸಾಂಪ್ರದಾಯಕವಾಗಿ ಬಂದ ಗ್ರಾಮದ ಮುಂದಾಳುಗಳು ಸೇರಿ ಮಾಡುವ ಕಾರ್ಯ. ಈ ಚಟುವಟಿಕೆಯಿಂದ ಹೆಚ್ಚಿನ ಮನರಂಜನೆಗೆ ಅವಕಾಶವಿಲ್ಲದ ಗ್ರಾಮಸ್ಥರಿಗೆ ಮನರಂಜನೆ, ಕಾಲಕ್ಷೇಪಕ್ಕೆ, ಜನಪದ ಕಲೆಗಳ ಪ್ರಸರಣೆ ಹಾಗೂ ಸಂರಕ್ಷಣೆಗೆ ಅವಕಾಶವಾಗುತ್ತದೆ. ಅಲ್ಲದೆ, ಇದರಿಂದ ಗ್ರಾಮಸ್ಥರಲ್ಲಿ ಒಗ್ಗಟ್ಟು, ಸಹಕಾರ, ವಸ್ತುಗಳ ಹಾಗೂ ಜ್ಞಾನದ ವಿನಿಮಯ ಮುಂತಾದ ಅನೇಕ ಸಾಮಾಜಿಕ ಉದ್ದೇಶಗಳು ಈಡೇರುತ್ತಿದ್ದವು. ಈ ಕೆಲಸವನ್ನು ಸೂಕ್ಷ್ಮವಾಗಿ ಆಯಾ ವೃತ್ತಿಗೆ ಸೇರಿದ ಮುಂದಾಳುಗಳ, ಗ್ರಾಮಾಧಿಕಾರಿಗಳ ನೇತೃತ್ವದಲ್ಲಿ, ಮುಂದಾಳುತನದಲ್ಲಿ, ರೂಢಿ ಪ್ರಕಾರ ಆಚರಿಸುವುದಿದ್ದು ಇದರಿಂದ ಗ್ರಾಮ ಸಮುದಾಯದಲ್ಲಿ ಶಾಂತಿ, ಸಹಕಾರ ಕೂಡ ನೆಲೆಸುತ್ತಿದ್ದವು. ಮುಖ್ಯವಾಗಿ ಸಮಾಜ ಇಂತಹ ಒಂದು ಆಚರಣೆ ಮಾಡಿ ತನ್ನ ಸಂಸ್ಕೃತಿಯನ್ನು ಜೀವಂತವಿಡಲು, ಮುಂದಿನ ಪೀಳಿಗೆಗೆ ನೀಡಲು ಬಳಸುತ್ತಿತ್ತು. ಆದರೆ ಹಿಂದಿನ ಕಾಲದಲ್ಲಿ ಹೆಚ್ಚಿನ ಹುರುಪಿನಿಂದ ನಡೆಯುತ್ತಿದ್ದ ಚಂದಪ್ಪನ ಹಬ್ಬ ಇಂದು ಅನೇಕ ಕಾರಣಗಳಿಂದಾಗಿ ನಶಿಸಿಹೋಗುತ್ತಿದೆ.

ಒಂದು ಸಮಾಜ ತನ್ನ ಸಂಸ್ಕೃತಿಯನ್ನು ಲಿಖಿತ ಮತ್ತು ಮೌಖಿಕ ರೂಪದಲ್ಲಿ

ಸಂರಕ್ಷಿಸುತ್ತದೆ. ಲಿಪಿಯುಳ್ಳ ಸಂಸ್ಕೃತಿ ಇದನ್ನು ಬರೆದು, ಮುದ್ರಿಸಿ ಸಂಗ್ರಹಿಸಿಡುತ್ತದೆ. ಮತ್ತು ಪ್ರಚಾರ ಮಾಡಲು ಬಳಸುತ್ತದೆ. ಲಿಪಿಪೂರ್ವದ ಸಮಾಜ ತನ್ನ ಸಂಸ್ಕೃತಿಯನ್ನು, ಅಂದರೆ ಆಚಾರ, ವಿಚಾರ, ನಂಬಿಕೆ, ಕಾನೂನು, ಮೌಲ್ಯಗಳು, ಧಾರ್ಮಿಕ ವಿಚಾರಗಳು, ಜನಪದಕಲೆ ಮುಂತಾದವನ್ನು ಮೌಖಿಕವಾಗಿ ಬಾಯಿಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ–ಹೇಳುತ್ತಾ, ಕೇಳುತ್ತಾ ಅಥವಾ ಕಲಿಯುತ್ತಾ, ಕಲಿಸುತ್ತಾ, ಮುಂದಿನ ಪೀಳಿಗೆಗೆ ಪ್ರಸರಣ ಮಾಡುತ್ತದೆ. ಹೀಗೆ ಮಾಡುವುದರಿಂದ ಸಮಾಜವು ತನ್ನ ಕಲೆ, ಕುಶಲತೆ ಅಥವಾ ನಿತ್ಯ ಜೀವನದಲ್ಲಿ ನಡೆಸುವ ಆಚರಣೆಗಳನ್ನು ಮೌಖಿಕ ರೂಪದಲ್ಲಿ ಅಥವಾ ಸಾಂಕೇತಿಕವಾಗಿ ಉಳಿಸಿಕೊಂಡು ಬಂದಿರಬಹುದು. ಉದಾಹರಣೆಗೆ ಒಂದು ಸಮಾಜ ತನ್ನ ಆಚರಣೆಗಳಾದ ಜಾತ್ರೆ, ರಥೋತ್ಸವ, ಚಿತ್ರಕಲೆ, ಕೆತ್ತನೆ ಕಲೆ, ನೇಯ್ಗೆಯ ಕಲೆ ಮುಂತಾದವು ಮರೆತುಹೋಗದಂತೆ ಆಗಾಗ ಮತ್ತೊಬ್ಬರಿಗೆ ಹೇಳಿ ಅಥವಾ ಅಭಿನಯಮಾಡಿ ತೋರಿಸಿ, ಜೀವಂತ ಇಟ್ಟಿರುತ್ತದೆ. ಯಾವುದೋ ಕಾರಣಕ್ಕೆ ಈ ಚಟುವಟಿಕೆಯನ್ನು ಯಥಾವತ್ತಾಗಿ ಆಚರಿಸಲು ಅಥವಾ ಉತ್ಸವವನ್ನು ಅನೇಕ ವರ್ಷಗಳವರೆಗೆ ಮಾಡದೇ ಹೋದಾಗ ಮರೆತುಹೋಗಬಹುದು. ಉದಾಹರಣೆಗೆ ಒಂದು ಊರಲ್ಲಿ ಗ್ರಾಮದೇವರ ವಾರ್ಷಿಕ ಜಾತ್ರೆ ನಡೆಯುತ್ತಾ ಬಂದಿದ್ದು ಹಣದ ಅಡಚಣೆ, ವ್ಯಾಜ್ಯ ಅಥವಾ ರೋಗ ಬಂದು ಜನ ಹಬ್ಬವನ್ನು ಅನೇಕ ವರ್ಷಗಳ ವರೆಗೆ ಆಚರಿಸಲು ಆಗದೇ ಹೋದಾಗ ಈ ಆಚರಣೆಯ ಸಂಬಂಧ ಇರುವ ಪದ್ಧತಿಗಳು ಮರತೇ ಹೋಗಬಹುದು. ಅಥವಾ ಈ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದ ಹಿರಿಯರು ಮಡಿದು ಈ ಜ್ಞಾನ ಅವರೊಟ್ಟಿಗೆ ಇಲ್ಲವಾಗಬಹುದು. ಅಲ್ಲದೆ, ಅನೇಕ ದೇವತಾ ಜಾತ್ರೆಗಳನ್ನು ಪ್ರತಿವರ್ಷ ಮಾಡದೆ 3, 5, 7, 11, ವರ್ಷಕ್ಕೆ ಒಮ್ಮೆ ಆಚರಿಸುವುದು ಅಥವಾ ಆ ನಾಡಿನ ಅನೇಕ ಊರುಗಳಿಗೆ ಒಂದು ದೇವತೆ ಇದ್ದು ಈ ಪ್ರತಿಯೊಂದು ಊರಿನವರೂ ಪಾಳಿಯ ಮೇಲೆ ಆಚರಿಸುವ ಪದ್ದತಿ ಇದ್ದು ಇದು ಅನೇಕ ವರ್ಷಗಳ ನಂತರ ಒಂದು ಊರಿಗೆ, ಈ ಹಬ್ಬವನ್ನು ಆಚರಿಸುವ ಅವಕಾಶ ಸಿಗಬಹುದು. ಈ ವೇಳೆಗೆ ಜನರು ಈ ಹಬ್ಬಕ್ಕೆ ಸಂಬಂಧಪಟ್ಟ ಆಚರಣೆಗಳನ್ನು, ಪದ್ಧತಿಗಳನ್ನು, ಇವುಗಳ ಆಚರಣೆಯ ಕ್ರಮವನ್ನು ಮರೆಯಬಹುದು. ಈ ಕಾರಣದಿಂದ ಮತ್ತು ತನ್ನ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ನೀಡುವ ಉದ್ದೇಶದಿಂದ, ಎಲ್ಲಾ ಸಮಾಜಗಳೂ ಒಂದಲ್ಲೊಂದು ಮಾರ್ಗವನ್ನು ಅನುಸರಿಸುತ್ತವೆ. ಲಿಪಿಯನ್ನು ಪಡೆದ ಸಂಸ್ಕೃತಿ ಇದನ್ನು ಬರೆದು ನೀಡಿದರೆ, ಲಿಪಿಪೂರ್ವದ ಸಮಾಜಗಳು ಈ ಕಾರ್ಯವನ್ನು ನೃತ್ಯ, ಹಾಡು, ಚಿತ್ರಕಲೆ, ಕತೆ ಮುಂತಾದ ಮಾಧ್ಯಮಗಳನ್ನು ಬಳಸಿ ಸಾಂಕೇತಿಕವಾಗಿ ಸಂರಕ್ಷಿಸಿ, ಪ್ರಚಾರ ಮಾಡುವುದರ ಮೂಲಕ ತಮ್ಮ ಸಂಸ್ಕೃತಿಯನ್ನು ಜೀವಂತ ಇಡುತ್ತವೆ. ಇಂತಹ ಮಾಧ್ಯಮದಲ್ಲಿ ಚಿತ್ರಬಿಡಿಸುವುದೂ ಒಂದು.

ಚಂದಪ್ಪ ಎಂದರೆ ಚಂದ್ರ. ಚಂದಪ್ಪನನ್ನು ಹೊಯ್ಯುವುದು ಎಂದರೆ ಪೂರ್ಣ ಚಂದ್ರನಂತೆ ದುಂಡಾದ ಚಿಹ್ನೆಗಳ ಸಾಲನ್ನೇ ಸಾಂಕೇತಿಕವಾಗಿ ಬಿಡಿಸಿ, ಚಿತ್ರಗಳಿಂದ ಒಂದು ಆಕಾರ ಮಾಡುವುದು. ಈ ಚಂದಪ್ಪನನ್ನು ಹೊಯ್ಯುವುದು ಬೆಳದಿಂಗಳು ತುಂಬಿದ ರಾತ್ರಿಯಲ್ಲಿ, ಅದರಲ್ಲೂ ಆಕಾಶ ಶುಭ್ರವಾಗಿರುವ ಮಾಘಮಾಸದಲ್ಲಿ. ವರ್ಷದ ಆ ದಿನಗಳಲ್ಲಿ ಹಳ್ಳಿಗರಿಗೆ ಸುಗ್ಗಿ ಮುಗಿದು, ಹೊಲ ಗದ್ದೆಗಳಲ್ಲಿ ಯಾವ ಮುಖ್ಯ ಕೆಲಸವೂ ಇರುವುದಿಲ್ಲ.

ಆಗ ಸೆಕೆ ಅಥವಾ ಚಳಿಯೂ ಇರದ ಮತ್ತು ಮಳೆ ತೇವದ ವಾತಾವರಣವೂ ಇರದ ಒಂದು ಅಹ್ಲಾದಕರವಾದ, ಹಿತವಾದ ವಾತಾವರಣವಿರುತ್ತದೆ.

ಚಂದಪ್ಪನನ್ನು ಹೊಯ್ಯುವುದು ನೆಲದ ಮೇಲೆ. ಸಾಯಂಕಾಲ ದನಕರುಗಳು ಮನೆಗೆ ಬಂದನಂತರ, ಹೆಂಗಸರು ಓಣಿಯಲ್ಲಿಯ ಸಮತಟ್ಟಾದ ಅಂಗಣವನ್ನು ಗುಡಿಸಿ ಸ್ವಚ್ಛಮಾಡಿ, ಅದನ್ನು ಸಗಣಿಯಿಂದ ಸಾರಿಸುವರು. ಇದರ ಮೇಲೆ ದನ–ಜನ ಓಡಾಡಿ ಕೆಡಿಸದಂತೆ ನೋಡಿಕೊಳ್ಳುವರು. ತಾವು ಅಂದು ಚಂದಪ್ಪನನ್ನು ಹೊಯ್ಯುವುದಾಗಿಯೂ, ಬಂದು ಈ ಕಾರ್ಯವನ್ನು ನಡೆಸಿಕೊಡಬೇಕೆಂದೂ ಊರ ಗೌಡರಿಗೆ, ಪುರೋಹಿತರಿಗೆ ಮತ್ತು ಬಡಗಿಗೆ ಸಂಪ್ರದಾಯದಂತೆ ಹರಕೆ ಮಾಡಿಕೊಂಡು, ಅವರಿಗೆ ವೀಳ್ಯವನ್ನು ಕೊಟ್ಟಿರುತ್ತಾರೆ. ರಾತ್ರಿಯ ಊಟ ಮುಗಿದು, ಹುಣ್ಣಿಮೆ ಪೂರ್ವದ ಚಂದ್ರ ಆಕಾಶದಲ್ಲಿ ಮೇಲೇರಿ ಬರುತ್ತಿದ್ದಂತೆ ಈ ಕಾರ್ಯಕ್ರಮ ಪ್ರಾರಂಭವಾಗುವುದು. ಚಂದಪ್ಪನನ್ನು ಹೊಯ್ಯಲು ಸಗಣಿ ನೆಲಕ್ಕೆ ವಿರುದ್ಧ ಬಣ್ಣವಾದ, ಚಂದ್ರನ ಬಣ್ಣವಾದ ಬಿಳಿಯ ಬಣ್ಣವನ್ನು ಉಪಯೋಗಿಸುವರು. ಇದನ್ನು ಅಕ್ಕಿ ಅಥವಾ ಒಣ ರಾಗಿ ಹಿಟ್ಟನ್ನು ನೀರಿನಲ್ಲಿ ಕದಡಿ ಮಾಡಿಕೊಳ್ಳುವರು.

ಚಂದಪ್ಪನನ್ನು ಹೊಯ್ಯಲು ಆಯ್ದುಕೊಳ್ಳುವ ವಿಷಯ ಗ್ರಾಮದೇವರ ಅಥವಾ ಆ ನಾಡಿನ ಪ್ರಸಿದ್ಧ ದೇವರ ರಥೋತ್ಸವದ ಚಿತ್ರ. ತಮ್ಮ ಆರ್ಥಿಕ ಹಾಗೂ ಜನಸಹಾಯದ ಆಧಾರದ ಮೇಲೆ ಈ ಆಚರಣೆಯನ್ನು 3,5,7,9 ದಿನ ನಡೆಸುವದಾಗಿ ನಿರ್ಣಯಿಸುವರು. ಎಷ್ಟು ದಿನ ನಡೆಸುವುದುಎಂದು ನಿರ್ಣಯವಾದ ಮೇಲೆ ಮಾಘಮಾಸದ ಹುಣ್ಣಿಮೆಯಿಂದ ಅಷ್ಟು ದಿನಗಳನ್ನು ಕಳೆದು ಅಂದಿನಿಂದ ಚಂದಪ್ಪನನ್ನು ಹೊಯ್ಯಲು ಪ್ರಾರಂಭಿಸುವರು. ಈ ರಥೋತ್ಸವದ ನಿಜ ಆಚರಣೆಯಲ್ಲಿ ಪ್ರತಿದಿನ ನಡೆಸುವ ಕಾರ್ಯಕ್ರಮದಂತೆ ಈ ದಿನಗಳಲ್ಲಿ ಪ್ರತಿ ದಿನ ಆಯಾ ಉತ್ಸವಗಳ ದೃಶ್ಯಾವಳಿಗಳನ್ನು ಚಿತ್ರಿಸುವರು. ಕೊನೆಯ ಅಂದರೆ ಹುಣ್ಣಿಮೆಯ ದಿನದಂದು, ರಥೋತ್ಸವವನ್ನು ಸಾಂಕೇತಿಕವಾಗಿ ಆಚರಿಸುವರು.

ಹೀಗೆ ಚಂದಪ್ಪನನ್ನು ಹೊಯ್ಯುವುದು ಎಷ್ಟು ದಿನ ಎಂದು ತಮ್ಮಲ್ಲಿ ನಿರ್ಣಯವಾದ ಮೇಲೆ ಈ ವಿಷಯವನ್ನು ಊರ ಗೌಡರಿಗೆ ತಿಳಿಸಿ, ಹೀಗೆ ಉತ್ಸವವನ್ನು ಆಚರಿಸುವುದಕ್ಕೆ ಅವರ ಅನುಮೋದನೆ ಹಾಗೂ ಬೆಂಬಲ ಕೋರುತ್ತಾರೆ. ನಂತರ ಊರಲ್ಲಿಯ ಎಲ್ಲಾ ಕೈವಾಡದ ಅಂದರೆ ಪುರೋಹಿತ, ಬಡಿಗ, ಕುಂಬಾರ, ಓಲೆಕಾರ, ಅಗಸ, ಚಲವಾದಿ ಮತ್ತು ಮಾದರು ಈ ಜಾತಿಯ ಹಿರಿಯರನ್ನು ಕಂಡು ತಾವು ಚಂದಪ್ಪನನ್ನು ಹೊಯ್ಯುವ ಕಾರ್ಯ ಕೈಗೊಂಡಿರುವುದಾಗಿಯೂ, ಇದಕ್ಕೆ ಊರ ಗೌಡರ ಅಪ್ಪಣೆ ಸಿಕ್ಕಿರುವುದಾಗಿಯೂ ಹೇಳಿ, ತಮ್ಮ ಈ ಕಾರ್ಯದಲ್ಲಿ ತಾವೂ ನೆರವಾಗಬೇಕೆಂದು ಕೋರುತ್ತಾರೆ. ಗೌಡರು ಒಪ್ಪಿದ್ದಾರೆ ಎಂದರೆ ಇತರೆ ಮುಂದಾಳುಗಳೂ ಒಪ್ಪುತ್ತಾರೆ. ಆದರೆ ಸಾಂಪ್ರದಾಯಕವಾಗಿ ಅವರ ಅನುಮೋದನೆ ಪಡೆಯಬೇಕು.

ಚಂದಪ್ಪನನ್ನು ಹೊಯ್ಯಲು ಪ್ರತಿ ದಿನ ಅಂಗಳ ಗುಡಿಸಿ, ಸಗಣಿ ಹಚ್ಚಿ ಸಾರಿಸಬೇಕು. ಚಂದ್ರ ಮೇಲೆ ಬಂದು ಅವನ ಬೆಳಕು ಬೀಳುತ್ತಿದ್ದಂತೆ–ಈ ಕಾರ್ಯವನ್ನು ಹಮ್ಮಿಕೊಂಡ ಗುಂಪಿನ ಗಂಡಸರು, ಹೆಂಗಸರು–ಹೀಗೆ ಎಲ್ಲರೂ ಚಿತ್ರಬಿಡಿಸುವ ಸ್ಥಳಕ್ಕೆ, ತಮ್ಮ ಸಲಕರಣೆಗಳೊಂದಿಗೆ

ಬರುವರು. ಹೆಂಗಸರು ಹಾಡುವರು ಮತ್ತು ಚಿತ್ರಬಿಡಿಸುವರು ಎಂದು ಎರಡು ಗುಂಪಾಗುತ್ತಾರೆ. ಹಾಡುವವರು ಹಿಮ್ಮೇಳ, ಮುಮ್ಮೇಳಗಳಾಗಿ ಮತ್ತೆ ಎರಡು ಗುಂಪಾಗುತ್ತಾರೆ. ಗಂಡಸರು ಚಿತ್ರದ ರೂಪರೇಷೆಗಳನ್ನು, ಅಳತೆಯನ್ನು ನೀಡುವ ಕೆಲಸ, ಪೂಜೆ, ಸಹಾಯಕರನ್ನು ಕರೆತರುವ ಕೆಲಸ ಮುಂತಾದವನ್ನು ಮಾಡುವರು. ಹಾಡುವವರು, ಚಿತ್ರ ಮೂಡಿಸುವವರು ಮತ್ತು ಈ ಚಿತ್ರಗಳಿಗೆ ಸೂಕ್ತ ರೂಪರೇಷೆ, ಹಾಗೂ ಅಳತೆ ನೀಡುವವರು ಎಲ್ಲರಿಗೂ ತಾವು ಅಂದು ಬಿಡಿಸಬೇಕೆಂದಿರುವ ಚಿತ್ರದ ಬಗ್ಗೆ ಸೂಕ್ತ ಮಾಹಿತಿ ಇದ್ದು, ಎಲ್ಲರೂ ಕೂಡಿ ಒಂದು ವಿಶಿಷ್ಟವಾದ ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೆ. ಒಂದುಕಡೆ ಹಾಡುವವರು ಅಂದಿನ ಚಿತ್ರದ ಬಗ್ಗೆ ಹಾಡುತ್ತಾ ಅದರ ವರ್ಣನೆ ಪ್ರಾರಂಭಿಸುತ್ತಿದ್ದಂತೆ ಇದಕ್ಕೆ ರೂಪರೇಷೆ ನೀಡುವ ಪುರೋಹಿತ ಅಥವಾ ಬಡಗಿ, ತಾವು ತಂದ ದಾರದಿಂದ ಚಿತ್ರದ ಅಳತೆ ನೀಡುತ್ತಾರೆ. ಇದರಂತೆ ಚಿತ್ರ ಮೂಡಿಸುವ ಗುಂಪಿನ ಮಹಿಳೆಯರು ಪೂರ್ಣ ಚಂದ್ರನ ಗುಂಡಾದ ಆಕಾರದ ಚಿತ್ರಗಳ ಮಾಲೆಯನ್ನೇ ಬಿಡಿಸಿ ಈ ಚಿತ್ರ ಮೂಡಿಸುವರು.

ಚಿತ್ರ ಬಿಡಿಸುವ–ಹಾಡುವ ಮಹಿಳೆಯರು ತಮ್ಮ ಸಲಕರಣೆಗಳೊಂದಿಗೆ ಆ ಜಾಗಕ್ಕೆ ಬರುತ್ತಿದ್ದಂತೆ ಗಂಡಸರು ಪುರೋಹಿತ, ಬಡಿಗ ಮುಂತಾದ ಕೈವಾಡದ ಜಾತಿಗೆ ಸೇರಿದ ಮುಂದಾಳುಗಳನ್ನು ಮತ್ತು ಊರ ಗೌಡರನ್ನು ವಿಧಿವತ್ತಾಗಿ ಆಹ್ವಾನಿಸಲು ಹೋಗುವರು. ಸಂಪ್ರದಾಯದಂತೆ ಎಲ್ಲರೂ ಬಂದ ನಂತರವೇ ಊರ ಗೌಡರು ಬರಬೇಕು. ಅವರು ಬರುತ್ತಿದ್ದಂತೆ ಮತ್ತು ಅವರ ಸೂಚನೆಯಂತೆ, ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಹಾಡುವವರು ತಾವು ಅಂದು ಗೌರವಿಸುವ ದೈವವನ್ನು ನೆನೆದು, ಗೌಡರ ಅಪ್ಪಣೆಯಂತೆ, ಈ ಕಾರ್ಯವನ್ನು ಪ್ರಾರಂಭಿಸುವುದಾಗಿ ಹಾಡಲು ಪ್ರಾರಂಭಿಸುವರು. ಇದಕ್ಕೆ ಸೂಕ್ತ ಮುಹೂರ್ತವನ್ನು ಹುಡುಕಲು ಪುರೋಹಿತರಿಗೆ ಬೇಡುವರು. ನಂತರ ಬಡಗಿಗೆ ಅಂದಿನ ಚಿತ್ರ ಬಿಡಿಸಲು ಸೂಕ್ತ ಮಾರ್ಗದರ್ಶನ ನೀಡುವಂತೆ ಬೇಡುವರು. ಈ ಸಾಲುಗಳನ್ನು ಹಾಡುತ್ತಿದ್ದಂತೆ ಪುರೋಹಿತರು, ಬಡಗಿ ಮುಂತಾದವರು ಬಂದು ತಮ್ಮ ಕೆಲಸ ಪ್ರಾರಂಭಿಸುವರು. ಅಂದರೆ ಅದು ದೇವಸ್ಥಾನದ ಚಿತ್ರವಿದ್ದರೆ ಅದರ ಪಾಯದಿಂದ ಅಥವಾ ನೆಲಗಟ್ಟಿನಿಂದ, ರಥೋತ್ಸವಕ್ಕೆ ಬೇಕಾದ ರಥದ ಗಾಲಿಗಳಿಂದ ಪ್ರಾರಂಭಿಸುತ್ತಾರೆ. ರಥೋತ್ಸವಕ್ಕೆ ಬೇಕಾದ ರಥದ ಗಾಲಿಗಳಿಂದ ಚಿತ್ರ ಬಿಡಿಸುವುದು ಪ್ರಾರಂಭವಾಗಿ ಕ್ರಮೇಣ ಅದರ ವಿವಿಧ ಅಥವಾ ಅನೇಕ ತುಂಡುಗಳಿಂದ ಕಟ್ಟುತ್ತಾ ಹೋಗುವುದನ್ನು ವರ್ಣಿಸುವರು. ದೇವರ ರಥವನ್ನು ಕಟ್ಟುವಲ್ಲಿ ಕೆಲವೊಂದು ಮಹತ್ವದ ಘಟ್ಟಗಳಿದ್ದು ಅದರಲ್ಲಿ ಗಾಲಿಗಳನ್ನು ಕೂಡಿಸುವದು. ಕೊನೆಗೆ ರಥದಲ್ಲಿ ದೇವರನ್ನು ಪ್ರತಿಷ್ಠಾಪಿಸುವುದು. ಪ್ರತ್ಯೇಕವಾಗಿ ರಥವನ್ನು ಕಟ್ಟುವಾಗ ಕೆಲಸ ಈ ಹಂತಕ್ಕೆ ಬಂದಾಗ ಮಂಗಳಾರತಿ ಹಾಡಿ, ಪೂಜಿಸಿ, ಮುಂದೆ ಹೋಗುವರು. ಇದೇ ಪ್ರಕಾರ ಚಂದಪ್ಪನನ್ನು ಹೊಯ್ಯುವಾಗಲೂ ಆಯಾ ಹಂತವನ್ನು ಮುಟ್ಟಿದಾಗ ಪದ್ಧತಿಯಂತೆ ಚಂದಪ್ಪನ ಹಾಡು ಹಾಡುವದನ್ನು ನಿಲ್ಲಿಸಿ, ಪೂಜೆ ಮಾಡಿ, ಮಂಗಳಾರತಿ ಹಾಡಿ, ಮುಂದೆ ಹೋಗುವರು.

ಪದ್ಧತಿಯಂತೆ ಗ್ರಾಮದೇವತೆಯ ರಥದ ಕಳಸವು ಊರ ಗೌಡರ ಮನೆಯಲ್ಲಿರುತ್ತದೆ. ರಥದ ಚಿತ್ರ ಬಿಡಿಸುವದು ಕಳಸವನ್ನು ಕಟ್ಟುವ ಹಂತಕ್ಕೆ ಬಂದಾಗ ಅದನ್ನು ಅಲ್ಲಿಗೆ ನಿಲ್ಲಿಸಿ,

ಸಕಲ ಮಂಗಳವಾದ್ಯಗಳೊಡನೆ, ಗ್ರಾಮದ ಹಿರಿಯರು ರಥೋತ್ಸವಕ್ಕೆ, ರಥವನ್ನು ಕಟ್ಟುವಾಗ ಈ ಕಳಸವನ್ನು ತರಲು ಹೋಗುವಂತೆ, ಕಳಸ ತರಲು ಗೌಡರ ಮನೆಗೆ ಹೋಗುವರು. ಇಲ್ಲಿ ಕಳಸಕ್ಕೆ ಪೂಜೆ ಮಾಡಿ (ಸಾಂಕೇತಿಕವಾಗಿ) ತಂದನಂತರವೇ ಚಿತ್ರ ಬಿಡಿಸುವುದು ಮುಂದುವರೆಯುತ್ತದೆ. ಕಳಸ ಸ್ಥಾಪನೆಯಾದ ನಂತರ ರಥೋತ್ಸವಕ್ಕೆ ಗ್ರಾಮದೇವರ ಉತ್ಸವಮೂರ್ತಿಯನ್ನು ತರಲು ಮಂಗಳವಾದ್ಯಗಳ ಸಮೇತ ಗ್ರಾಮದ ಹಿರಿಯರು, ದೇವಸ್ಥಾನಕ್ಕೆ ಹೋಗುವರು. ಅಲ್ಲಿ ವಿಗ್ರಹಕ್ಕೆ ಪೂಜೆ ಮಾಡಿ ದೇವರ ವಿಗ್ರಹವನ್ನು (ಸಾಂಕೇತಿಕವಾಗಿ) ತಂದನಂತರವೇ ಚಿತ್ರ ಬಿಡಿಸುವದು ಮುಂದುವರೆಯುವದು. ರಥದ ಮೇಲೆ ದೇವರ ವಿಗ್ರಹದ ಪ್ರತಿಷ್ಠಾಪನೆ ಆದಮೇಲೆ ರಥೋತ್ಸವ ನಡೆಯುವದು. ಆಗ ಮನೆ ಮನೆಯಿಂದ ದೇವರಿಗೆ ಕಾಣಿಕೆ, ನೈವೇದ್ಯಗಳು ಬರುತ್ತವೆ. ಇವೆಲ್ಲವನ್ನೂ ಕೂಡಿಸಿ ಅಲ್ಲಿ ನೆರೆದ ಎಲ್ಲಾ ಜನರಿಗೆ ಫಲಾಹಾರವನ್ನು ಹಂಚುವರು.

ಈ ವೇಳೆಗೆ ರಾತ್ರಿ ಕಳೆಯುತ್ತದೆ. ಸರಿರಾತ್ರಿಯ ವರೆಗೆ ಚಂದಪ್ಪನನ್ನು ಹೊಯ್ದವರು ನಿದ್ರಿಸಲು ಹೋಗುವರು. ರಾತ್ರಿ ನಿದ್ದೆಗೆಟ್ಟು ಈ ಚಿತ್ರಣ ಕಾರ್ಯವನ್ನು ನೋಡಲಾಗದವರು, ಮಕ್ಕಳು, ಮುಂಜಾನೆ ಎದ್ದು ಬಂದು, ಚಂದಪ್ಪನ ಚಿತ್ರ ಅಳಿಸಿಹೋಗುವ ಮುನ್ನ, ನೋಡಿ ಆನಂದಪಡುವರು. ಬೆಳಗಾಗಿ ದಿನ ಬೆಳೆದಂತೆ ದನಕರುಗಳು, ಜನ ಓಡಾಡಿ, ಧೂಳು ಮುಚ್ಚಿ ಚಿತ್ರಗಳು ಮಾಸುತ್ತವೆ. ಸಗಣಿ ಸಾರಿಸಿದ ನೆಲ ಬಿರಿದು ಒಡೆಯುತ್ತದೆ. ಸಾಯಂಕಾಲದ ವೇಳೆಗೆ ಮತ್ತೆ ಆ ನೆಲವನ್ನು ಗುಡಿಸಿ, ಸಾರಿಸಿ ಅಂದಿನ ಚಿತ್ರ ಬಿಡಿಸಲು ಸಿದ್ಧತೆ ಪ್ರಾರಂಭವಾಗುವದು. ಹೀಗೆ ಪ್ರತಿ ದಿನ ಒಂದೊಂದು ಚಿತ್ರ ಬಿಡಿಸಿ, ಅದಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡಿ, ಆಚರಣೆಯನ್ನು ಮಾಡಿ, ಪದ್ಧತಿಯನ್ನು ಪಾಲಿಸಿ ತಮ್ಮ ಸಂಸ್ಕೃತಿಯನ್ನು ಜೀವಂತ ಇಡಲು ಮತ್ತು ಮುಂದಿನ ಪೀಳಿಗೆಗೆ ನೀಡಲು ಪ್ರಯತ್ನ ನಡೆಸುತ್ತಾರೆ.

ಹೀಗೆ ಚಿತ್ರ ಬಿಡಿಸುವುದನ್ನು ಚಂದಪ್ಪನನ್ನು ಹೊಯ್ಯುವುದು ಎಂದು ಕರೆದಿರುವದಕ್ಕೆ ಇವುಗಳನ್ನು ಬಿಡಿಸಲು ಚಂದ್ರನಂತೆ ಗುಂಡಾದ ಚಿತ್ರಗಳನ್ನು ಬಿಡಿಸುವುದೇ ಕಾರಣವಿದೆ. ಈ ರಥ ಅಥವಾ ರಥೋತ್ಸವದ ದೃಶ್ಯವನ್ನು ರಂಗೋಲಿ ಅಥವಾ ಮತ್ತಾವುದಾದರೂ ಬಣ್ಣದಿಂದ ಬರೆಯದೆ, ಅಕ್ಕಿ ಅಥವಾ ರಾಗಿ ಹಿಟ್ಟಿನ ರಸವಲ್ಲಿ ಮೂಡಿಸಲಾಗುವುದು. ಚಿತ್ರವನ್ನು ಕುಂಚ ಅಥವಾ ಕೈಯಿಂದ ಬರೆಯದೆ ಈ ಹಿಟ್ಟಿನ ರಸದಲ್ಲಿ ಬಲಗೈಯಿನ ತೋರುಬೆರಳು ಮತ್ತು ಮಧ್ಯ ಬೆರಳುಗಳನ್ನು ಅದ್ದಿ ರಥ ಅಥವಾ ದೇವಸ್ಥಾನದ ರೂಪರೇಷಗಳನ್ನು ನೀಡಲು ಬಡಗಿ, ಪುರೋಹಿತ ಮತ್ತು ಅಲ್ಲಿ ನೆರೆದ ಗಂಡಸರು, ನೆಲದ ಮೇಲೆ ಸೂಚನೆ ನೀಡಲು ಹಿಡಿದ ದಾರವನ್ನು ಎರಡು ಬೆರಳುಗಳ ಮಧ್ಯಕ್ಕೆ ಇಟ್ಟುಕೊಂಡು, ಈ ರಸ ಹತ್ತಿದ ಬೆರಳುಗಳಿಂದ ನೆಲಕ್ಕೆ ಊರುವ ರೀತಿಯಲ್ಲಿ ಬೆರಳಿಟ್ಟು ಚಿತ್ರ ಮೂಡಿಸುತ್ತಾ ಹೋಗುತ್ತಾರೆ. ಈ ಗುರುತುಗಳು ದುಂಡಗೆ ಪೂರ್ಣ ಚಂದ್ರನಂತೆ ಬೆಳ್ಳಗೆ ಕಾಣುವದರಿಂದ, ಈ ಆಚರಣೆ ಚಂದ್ರನಂತೆ ಬೆಳ್ಳಗೆ ಕಾಣುವದರಿಂದ, ಈ ಆಚರಣೆ ಚಂದ್ರನ ಬೆಳಕಿನಲ್ಲಿ ನಡೆಯುವದರಿಂದ, ಇವನ್ನು ಚಂದಪ್ಪನನ್ನು ಹೊಯ್ಯುವದು ಎಂದು ಕರೆಯಲಾಗಿದೆ.

ಇಲ್ಲಿ ಹಾಡುವವರು, ಚಿತ್ರ ಬಿಡಿಸುವವರು, ಅದರ ರೂಪರೇಷ ನೀಡುವವರು (ಮತ್ತು ಎಲ್ಲಾ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವವರೂ ಸೇರಿ) ಈ ಮೂರು ಗುಂಪುಗಳಲ್ಲಿಯ ನೆನಪಿನ ಬಲದಿಂದ ಒಬ್ಬರ ಮೇಲೊಬ್ಬರ ನಿಯಂತ್ರಣ ಇರುತ್ತದೆ. ರಥೋತ್ಸವದ ವಿವಿಧ ಹಂತಗಳನ್ನು ಆಚರಿಸುವ ವಿವಿಧ ಪದ್ಧತಿಗಳನ್ನು ಹಾಡುವ ಹಾಗೂ ಚಿತ್ರ ಮೂಡಿಸುವ ಹೆಂಗಸರು, ಚಿತ್ರ ಬಿಡಿಸಲು ರೂಪರೇಷೆ ನೀಡುವ ಬಡಗಿ, ಪುರೋಹಿತರು ಮತ್ತು ಊರ ಗೌಡ ಮುಂತಾದ ಹಿರಿಯರು ಹೀಗೆ ಎಲ್ಲರೂ ತಮ್ಮ ಅನುಭವದ ಮೇಲೆ ನೆನಪಿಟ್ಟಿರುತ್ತಾರೆ. ಇವರಲ್ಲಿ ಯಾವುದೇ ಒಂದು ಗುಂಪು ಈ ಪದ್ಧತಿಗಳನ್ನು, ಮಾಡುವ ಕ್ರಮವನ್ನು ಮರೆತಿದ್ದರೂ, ಇನ್ನೊಂದು ಗುಂಪಿಗೆ ನೆನಪಿರುತ್ತದೆ. ಹಾಡುವವರು ಚಿತ್ರದ ಅಥವಾ ಪದ್ಧತಿಯ ಒಂದು ಹಂತವನ್ನು ಮರೆತರೆ ಅಥವಾ ರೂಪರೇಷ ನೀಡುವವರು ಒಂದು ಹಂತ ಬಿಟ್ಟು ಇನ್ನೊಂದು ಹಂತದ ಅಳತೆ ನೀಡಿದರೆ, ಇದನ್ನು ಉಳಿದೆರಡು ಗುಂಪುಗಳು ಕೂಡಲೇ ಅವರ ಗಮನಕ್ಕೆ ತರುವರು. ಹೀಗೆ ಯಾವುದೋ ಕಾರಣಕ್ಕೆ ಅನೇಕ ವರ್ಷಗಳ ವರೆಗೆ ಆಚರಿಸದಾಗದೇ ಹೋದ ಹಬ್ಬದ ವಿವಿಧ ಆಚರಣೆಗಳನ್ನು, ಪದ್ಧತಿಗಳನ್ನು, ರೂಢಿಗಳನ್ನು, ನೆನಪಿನ ಶಕ್ತಿಯ ಆಧಾರದಿಂದ ಕಾಯ್ದಿಡುತ್ತಾರೆ. ಎರಡನೆಯದಾಗಿ, ಒಂದು ಗ್ರಾಮದಲ್ಲಿಯ ಗೌಡ, ಪುರೋಹಿತ, ಬಡಿಗ ಮುಂತಾದ ಕೈವಾಡದ ಮತ್ತು ಸೇವೆಯ ಜಾತಿ ಗುಂಪುಗಳು ರಥೋತ್ಸವದಲ್ಲಿ ನೆರವಾಗಲು ಬೇಕು. ಅವರು ಗ್ರಾಮದಲ್ಲಿ ವಾಸವಾಗಿದ್ದರೆ ದಿನನಿತ್ಯದ ಸೇವಾಕಾರ್ಯಕ್ಕೆ ಅನುಕೂಲವಾಗುತ್ತದೆ. ಆದರೆ ಇವರಿಗೆ ಸೂಕ್ತ ಲಾಭ, ಗೌರವ ಇಲ್ಲದಿದ್ದರೆ, ಸಿಗದಿದ್ದರೆ, ಅವರು ಬೇರೆ ಊರಿಗೆ ವಲಸೆ ಹೋಗಬಹುದು. ಆದ್ದರಿಂದ ಅವರನ್ನು ತಮ್ಮ ಊರುಗಳಲ್ಲಿ ಉಳಿಸಿಕೊಳ್ಳಲು ರಥೋತ್ಸವಕ್ಕೆ ಸಂಬಂಧಪಟ್ಟ ಪದ್ಧತಿಗಳಲ್ಲಿ ಭಾಗವಹಿಸಿ ಕುಶಲ ಕಲೆಗಳನ್ನು ನೆನಪಿಸಿಕೊಳ್ಳುವಂತೆ ಮಾಡಲು ಈ ಹಬ್ಬಗಳನ್ನು ಆಚರಿಸಬೇಕು. ಈ ಸಂದರ್ಭದಲ್ಲಿ ಅವರ ಈ ಸೇವೆಗೆ ಸೂಕ್ತ ಆದಾಯ ಹಾಗೂ ಗೌರವ ನೀಡಬೇಕು. ಹೀಗೆ ಚಂದಪ್ಪನನ್ನು ಹೊಯ್ಯುವಾಗಲೂ ಇವರ ಸೇವೆ ಹಾಗೂ ಸಹಾಯ ತೆಗೆದುಕೊಂಡು, ಸೂಕ್ತ ಗೌರವ ಹಾಗೂ ಕೊಡುಗೆಗಳನ್ನು ನೀಡಲಾಗುವುದು. ಇಲ್ಲಿ ಮಾಡುವ ಕೆಲಸ ಸಾಂಕೇತಿಕವಾಗಿದ್ದರೂ, ರೂಢಿ ಪದ್ಧತಿ ಬಿಟ್ಟು ಇರುವುದಿಲ್ಲ. ಇದರಿಂದ ಅವರಿಗೂ ತಮ್ಮ ಅನುಭವವನ್ನು ಇನ್ನೊಮ್ಮೆ ನೆನಪಿಸಿಕೊಳ್ಳಲು ಅವಕಾಶ ಸಿಗುತ್ತದೆ. ಜೊತೆಗೆ ಅಲ್ಪಸ್ವಲ್ಪ ಲಾಭ ಮತ್ತು ಗೌರವಗಳು ಸಿಗುತ್ತವೆ. ಮೂರನೆಯದಾಗಿ, ಚಂದಪ್ಪನ ಹೊಯ್ಯುವುದು ಗ್ರಾಮದಲ್ಲಿ ವಿವಿಧ ಜಾತಿಗಳು ಹಾಗೂ ವ್ಯಕ್ತಿಗಳಲ್ಲಿ ಒಗ್ಗಟ್ಟು, ಒಮ್ಮತ, ಸಹಕಾರ, ಸಹನೆ ಮುಂತಾದ್ದನ್ನು ತರಲು ನೆರವಾಗುತ್ತದೆ. ಹಿಂದೆಯೇ ಹೇಳಿರುವಂತೆ ಚಂದಪ್ಪನನ್ನು ಹೊಯ್ಯಲು ಹೆಚ್ಚಿನ ಹಣ, ಜನಸಹಾಯ ಬೇಕಾಗುತ್ತದೆ. ಈ ಜನರು ಅನೇಕ ಕುಶಲಕಲೆ ಹಾಗೂ ಸೇವಾ ಜಾತಿಗಳಿಂದ ಬಂದವರು. ಉದಾಹರಣೆಗೆ ಪುರೋಹಿತನಾದ ಜಂಗಮರು, ಪಂಚಾಳನಾದ ಬಡಗಿ, ಹೊಸ ಮಡಕೆ ನೀಡಲು ಕುಂಬಾರ, ನೆಲ ಗುಡಿಸಲು, ಸಾರಿಸಲು ಮಾದಿಗ, ಊರಲ್ಲಿ ಈ ವಿಚಾರ ತಿಳಿಸಲು ತಳವಾರ, ಇವರೆಲ್ಲರ ಮೇಲ್ವಿಚಾರಣೆ ಮಾಡಲು ಊರ ಗೌಡ, ಊರ ದೇವರ ಪೂಜಾರಿ–ಹೀಗೆ ಅನೇಕ ಜಾತಿಯ ಕಸುಬಿನ ಜನರ ಸಹಾಯ ಬೇಕಾಗುತ್ತದೆ. ಅವರು ಹೀಗೆ ಒಂದು ಉದ್ದೇಶದಿಂದ ಕೂಡಿ ಕೆಲಸ ಮಾಡುವುದು,ಅವರಲ್ಲಿ ಸಹಕಾರ ಮನೋಭಾವನೆಯನ್ನು

ತರಲು ಸಹಾಯವಾಗುತ್ತದೆ. ನಾಲ್ಕನೆಯದಾಗಿ, ಚಂದಪ್ಪನನ್ನು ಹೊಯ್ಯುವುದು ಜನರಲ್ಲಿ ಒಂದು ಬಗೆಯ ಸ್ಪರ್ಧಾ ಮನೋಭಾವನೆಯನ್ನೂ ತರುತ್ತದೆ. ಹೀಗೆ ಹಣ–ಜನ ಕೂಡಿಸಿ, ಎಲ್ಲಾ ಕಾರ್ಯಗಳನ್ನು 6–7 ದಿನಗಳ ವರೆಗೆ ಸೂಕ್ತವಾಗಿ ಮಾಡುವದು ಒಂದು ಹೆಮ್ಮೆಯ ವಿಷಯ. ಈ ಹೆಮ್ಮೆಯನ್ನು ಹೊಂದಲು ಕೆಲವೊಂದು ವ್ಯಕ್ತಿಗಳಲ್ಲಿ, ಜಾತಿ ಅಥವಾ ಓಣಿಯ ಜನರಲ್ಲಿ ಸ್ಪರ್ಧೆ ಏರ್ಪಡುತ್ತದೆ. ಇದನ್ನು ಎಲ್ಲಾ ಓಣಿಯ, ಜಾತಿಯವರು ತಮ್ಮ ತಮ್ಮಲ್ಲಿ ಮಾಡಿಕೊಳ್ಳಲಿ, ಅವರವರ ಇಷ್ಟ ಎನ್ನಲು ಬರುವುದಿಲ್ಲ. ಏಕೆಂದರೆ ಇದು ಸಾಂಕೇತಿಕವಾಗಿ ನೆರವೇರಿಸಿದ ಗ್ರಾಮದೇವರ ರಥೋತ್ಸವ. ಆದ್ದರಿಂದ, ಇದನ್ನು ಪದ್ಧತಿಯಂತೆ, ಚಾಚೂ ತಪ್ಪದೆ ನೆರವೇರಿಸಬೇಕು. ಹೀಗೆ ಮಾಡಲು ಹಿರಿಯರ, ಪರಿಣಿತರ ನೆರವು ಬೇಕು. ಇಂತಹ ಕಾರ್ಯಗಳಲ್ಲಿ ಪರಿಣತರಾದವರು ಊರಲ್ಲಿ ಹೆಚ್ಚೆಂದರೆ 3–4 ಜನ ಇರುತ್ತಾರೆ. ಅಲ್ಲದೆ ಊರಿಗೆ ಇರುವವನು ಒಬ್ಬನೇ ಪುರೋಹಿತ, ಗೌಡ. ಆದ್ದರಿಂದ ವಿವಿಧ ಜಾತಿ ಅಥವಾ ಓಣಿಯ ಜನರಲ್ಲಿ ತಾವೂ ಈ ವರ್ಷ ಆಚರಿಸಬೇಕು ಎಂದು ಸ್ಪರ್ಧೆ ಬರುತ್ತದೆ. ಆಗ ಮೊದಲು ಈ ಪ್ರಯತ್ನ ಮಾಡಿದವರು ಅಥವಾ ಈ ತಜ್ಞರಲ್ಲಿಗೆ ಹೋಗಿ ಅವರ ಒಪ್ಪಿಗೆ ಪಡೆದವರು, ಈ ಅವಕಾಶ ಪಡೆಯುತ್ತಾರೆ. ಹೀಗೆ ವಿವಿಧ ಜಾತಿಗಳಿಗೆ ಸೇರಿದ ಮುಂದಾಳುಗಳಲ್ಲಿ, ವ್ಯಕ್ತಿ ಗುಂಪುಗಳಲ್ಲಿ, ಸ್ಪರ್ಧಾ ಭಾವನೆ ಬರುತ್ತದೆ ಮತ್ತು ಇದನ್ನು ಬಳಸಿಕೊಳ್ಳಲು ಸಹಾಯವಾಗುತ್ತದೆ. ಎರಡನೆಯದಾಗಿ, ಈ ಆಚರಣೆ ಜನರಿಗೆ ಮನರಂಜನೆ ಹಾಗೂ ಕಾಲಕ್ಷೇಪಕ್ಕೆ ಸಹಾಯವಾಗುತ್ತದೆ. ಹೊಲ, ಕಣಗಳಲ್ಲಿ ಕೆಲಸ ಮುಗಿದು, ಮುಂಗಾರು ಮಳೆ ಬರುವವರೆಗೆ ಬೇಸಾಯ ಕೆಲಸದಿಂದ ವಿರಾಮ ಪಡೆದ ಗ್ರಾಮಸ್ಥರಿಗೆ ತಮ್ಮ ಈ ದೀರ್ಘ ವಿರಾಮವನ್ನು ಕಳೆಯಲು ಹಳ್ಳಿಯಲ್ಲಿ ಬೇರೆ ಯಾವ ಮಾರ್ಗಗಳೂ ಇರುವುದಿಲ್ಲ. ಅಲ್ಲದೆ ಅವರು ಸಮಾಜ ವಿರೋಧಿ ಅಥವಾ ಘಾತಕ ರೀತಿಯಲ್ಲಿ ಈ ಕಾಲವನ್ನು ಕಳೆಯದೆ ಸಮಾಜದ, ಸಮುದಾಯದ ಉಪಯೋಗಕ್ಕೆ, ಸಂಸ್ಕೃತಿಯ, ಪರಂಪರೆಯ ಮುಂದುವರಿಯುವಿಕೆಗೆ ಉಪಯುಕ್ತವಾದ ರೀತಿಯಲ್ಲಿ ಕಳೆಯಲು ಸಹಾಯವಾಗುತ್ತದೆ.

ಇತ್ತೀಚೆಗೆ ಚಂದಪ್ಪನನ್ನು ಹೊಯ್ಯುವಂತಹ ಬಹು ಉಪಯುಕ್ತ ಕಾರ್ಯವುಳ್ಳ ಸಂಪ್ರದಾಯ, ಕಾಲಾನಿಪುಣತೆ ನಶಿಸಿಹೋಗುತ್ತಿದೆ. ಇದಕ್ಕೆ ಅನೇಕ ಕಾರಣಗಳಿದ್ದು ಇವುಗಳಲ್ಲಿ ಗ್ರಾಮೀಣ ಜೀವನದ ಮೇಲೆ ಆಧುನಿಕತೆಯ ಹಾಗೂ ಹೊರಗಿನ ಪ್ರಭಾವ ಬಂದಿರುವದು ಮುಖ್ಯ ಕಾರಣ. ವಿದ್ಯುಚ್ಛಕ್ತಿ ಸೌಕರ್ಯ ಬಂದಿರುವುದರಿಂದಾಗಿ ರೇಡಿಯೋ, ದೂರದರ್ಶನ, ಮುದ್ರಿತ ಸಂಗೀತ, ಸಿನಿಮಾ, ನಾಟಕ, ವೃತ್ತಪತ್ರಿಕೆ, ವಾರ ಹಾಗೂ ಮಾಸಪತ್ರಿಕೆಗಳು, ಕತೆ, ಕಾದಂಬರಿ ಮುಂತಾದವು ಗ್ರಾಮಸ್ಥರಿಗೆ ಮನೋರಂಜನೆ, ಕಾಲಕ್ಷೇಪಕ್ಕೆ ಮಾರ್ಗ ನೀಡಿದೆ.ಎರಡನೆಯದಾಗಿ ಭಾರಿ ನೀರಾವರಿಯ ಯೋಜನೆಗಳು ಬಂದಿದ್ದು, ನೀರಾವರಿ ಕಾಲುವೆಗಳು ಹಳ್ಳಿಗಳನ್ನು ಮುಟ್ಟಿದ್ದರಿಂದ ಗ್ರಾಮ ಜೀವನದಲ್ಲಿ ಮಹತ್ತರವಾದ ಬದಲಾವಣೆ ತಂದಿವೆ. ಹಿಂದಿನ ಕಾಲಕ್ಕೆ ವ್ಯವಸಾಯ ಕೆಲಸ ಮಳೆಯ ಆಧಾರದ ಮೇಲೆ ಮಾತ್ರ ನಡೆಯುತ್ತಿದ್ದಾಗ ಬಿತ್ತನೆ, ಕೊಯಿಲು ಮತ್ತು ಕಣ ಸುಗ್ಗಿ ವರ್ಷದಲ್ಲಿ ಒಮ್ಮೆ ಮಾತ್ರ ಬರುತ್ತಿದ್ದವು. ನೀರಾವರಿ ಕಾಲುವೆ ಬಂದನಂತರ ರೈತರು ಎರಡು ಮತ್ತು ಮೂರು ಫೈರು ತೆಗೆಯಲು ಪ್ರಾರಂಭಿಸಿದಾಗ ಗ್ರಾಮಸ್ಥರಿಗೆ ವಿರಾಮವೇ ಇಲ್ಲವಾಯಿತು. ಅಲ್ಲದೆ, ಹಳೆಯ

ವ್ಯವಸಾಯ ಪದ್ಧತಿಯಲ್ಲಿ ಎತ್ತು, ಗೊಬ್ಬರ, ಬೀಜ ಹಾಗೂ ಶ್ರಮ ಎಲ್ಲವೂ ಮನೆಯದೇ ಆಗಿರುತ್ತಿತ್ತು. ರೈತರು ತಾವು ಬೆಳೆದ ಎಲ್ಲಾ ದವಸಧಾನ್ಯವನ್ನು ತಮ್ಮ ಬಳಕೆಗೇ ಇಟ್ಟುಕೊಳ್ಳುತ್ತಿದ್ದರಾದ್ದರಿಂದ ಅವುಗಳನ್ನು ಮಾರುವುದು ಎಂಬುದಿರಲಿಲ್ಲ. ಮಾರುವುದು ಏನಾದರೂ ಇದ್ದರೆ ವರ್ಷದಲ್ಲಿ ಒಮ್ಮೆ ಮಾತ್ರ. ಇಂದು ಅಧಿಕ ಬೆಳೆಯ ಬೀಜವನ್ನು ಪೇಟೆಯಿಂದ ಕೊಂಡು ತರಬೇಕು. ಇವನ್ನು ತರಲು ಬೇಕಾದ ಹಣ ಜೋಡಿಸಲು, ಇಂದು ಗ್ರಾಮಸ್ಥರು ನಗರಕ್ಕೆ ಅಲೆದಾಡುವಂತಾಗಿದ್ದು, ತಮ್ಮ ಬಹುಪಾಲು ಕಾಲವನ್ನು ಪೇಟೆಗೆ ಹೋಗಿಬರಲು ಕಳೆಯುತ್ತಾರೆ. ಅಲ್ಲದೆ, ಹಿಂದಕ್ಕೆ ರೈತರು ಅನೇಕ ತರಹದ, ನಮೂನೆಯ ಪೈರು ಬೆಳೆಯುತ್ತಿದ್ದಾಗ ತಮ್ಮ ಊಟ ಉಪಚಾರಗಳಲ್ಲಿ ಹೆಚ್ಚಿನ ವೈಪರೀತ್ಯದಿಂದಾಗಿ, ಸದೃಢರಾಗಿದ್ದರು. ಇಂದು ನೀರಾವರಿ ವ್ಯವಸಾಯದಿಂದಾಗಿ, ಲಾಭದ ದೆಸೆಯಿಂದ ಅಥವಾ ತಾವು ವ್ಯವಸಾಯದ ಮೇಲೆ ಹಾಕಿದ ಬಂಡವಾಳವನ್ನು ಹಿಂದಕ್ಕೆ ಪಡೆಯಲು, ಕೇವಲ ಒಂದೆರಡು ಅಧಿಕ ಬೆಳೆಯ ಅಥವಾ ಪೇಟೆಯಲ್ಲಿ ಬೇಡಿಕೆ ಇರುವ ಬೆಳೆಗಳಾದ ಭತ್ತ, ಕಬ್ಬು ಹತ್ತಿ, ಸೇಂಗಾ, ಎಣ್ಣೆ ಕಾಳುಗಳನ್ನು ಮಾತ್ರ ಬೆಳೆಯುತ್ತಾರೆ. ಇದರಿಂದಾಗಿ ಅವರ ಊಟ ಉಪಚಾರಗಳು ಅಷ್ಟು ಉತ್ತಮವಾಗಿಲ್ಲ. ಅಲ್ಲದೆ ನೀರಾವರಿ ಬೇಸಾಯ ಸದಾ ಕೆಸರಿನಲ್ಲಿ ಮಾಡುವಂತದ್ದು ಇದ್ದು, ದಿನವಿಡೀ ತೇವದಲ್ಲಿ ನಿಂತು, ಓಡಾಡಿ ಜನಸಾಮಾನ್ಯರೂ ಗ್ರಾಮಸ್ಥರು ಎಲ್ಲಿ ಕುಳಿತರೂ, ಮಲಗಿದರೂ ಈ ಸೊಳ್ಳೆಗಳಿಂದ ಮುಕ್ತಿ ಇಲ್ಲ. ಇದು ಅವರ ವಿಶ್ರಾಂತಿಯನ್ನು, ನಿದ್ರೆಯನ್ನು ಮಾತ್ರವಲ್ಲ, ಆರೋಗ್ಯವನ್ನೂ ಹಾನಿ ಮಾಡಿದೆ. ಹೀಗೆ ಸದಾ ತಮ್ಮ ವ್ಯವಸಾಯದಲ್ಲಿ ತೊಡಗಿರುವ, ಸೂಕ್ತ ಆಹಾರ ತಿನ್ನದ, ರೋಗಗ್ರಸ್ತರಾದ ರೈತರಿಗೆ ವಿರಾಮ, ಮನಃಶಾಂತಿಯೇ ಇಲ್ಲವಾಗಿದೆ. ಆದ್ದರಿಂದ ಇತರೆ ಜನಪದ ಕಲೆ ಅಥವಾ ಚಟುವಟಿಕೆಗಳಂತೆ, ಚಂದಪ್ಪನನ್ನು ಹೊಯ್ಯುವುದೂ ನಿಂತುಹೋಗಿದೆ. ಇದರಿಂದಾಗಿ ಸಮಾಜಕ್ಕೆ ತನ್ನ ಸಂಸ್ಕೃತಿಯನ್ನು ಕಾಪಾಡಿಟ್ಟುಕೊಳ್ಳಲು ಇದ್ದೊಂದು ಮಾರ್ಗವೂ ಇಂದು ಇಲ್ಲವಾಗುತ್ತಿದೆ.

□□

ಅನಂತಮೂರ್ತಿ ಅವರ

ಅಜ್ಜನ ಹೆಗಲ ಸುಕ್ಕುಗಳುಃ ಒಂದು ಅವಲೋಕನ*

• ವೀರಣ್ಣ ರಾಜೂರ

ಡಾ. ಯು.ಆರ್. ಅನಂತಮೂರ್ತಿ ತಮ್ಮ ಅರ್ಥಪೂರ್ಣ ಸಾಹಿತ್ಯ ನಿರ್ಮಿತಿ ಮತ್ತು ಗಾಢವಾದ ಸಾಂಸ್ಕೃತಿಕ ಕಾಳಜಿಗಳಿಂದ ಸಮಕಾಲೀವ ಕನ್ನಡ ಸಾಹಿತ್ಯದ ಅಗ್ರಮಾನ್ಯ ಲೇಖಕರಲ್ಲಿ ಪ್ರಮುಖರೆನಿಸಿದ್ದಾರೆ. ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ಬದುಕಿನ ಸೂಕ್ಷ್ಮ ನಿರೀಕ್ಷಣೆ ಹಾಗೂ ಪ್ರಖರವಾದ ವೈಚಾರಿಕ ಪ್ರಜ್ಞೆಗಳಿಂದ ಸಮೃದ್ಧಗೊಂಡ ಅವರ ಅನುಭವದ ಆಳ–ಅಗಲಗಳು ಅವರ ಕೃತಿಗಳಲ್ಲಿ ಸಾರ್ಥಕ ಅಭಿವ್ಯಕ್ತಿ ಪಡೆದು ಅಪೂರ್ವತೆಯನ್ನು ಮೆರೆದಿವೆ.

ಆಧುನಿಕ ಗದ್ಯಲೇಖಕರಲ್ಲಿ ಗಣ್ಯರೆಂದು ಗಣಿಸಲ್ಪಡುವ ಅನಂತಮೂರ್ತಿ ಅವರು ಮೂಲತಃ ಕವಿಗಳು. ಅವರ ಕವಿಪ್ರತಿಭೆ ಯಾವುದೇ ಕತೆ–ಕಾದಂಬರಿ–ವೈಚಾರಿಕ ಬರಹಗಳಲ್ಲಿ ಕಣ್ತೆರೆದು ನಿಂತಿರುವುದು ಇದಕ್ಕೆ ನಿದರ್ಶನ. ಅವರು ಕವಿಗಳೆಂಬುದನ್ನು ಇನ್ನಷ್ಟು ಖಚಿತವಾಗಿ ಸಾಬೀತು ಪಡಿಸುವ ಕೃತಿಗಳೆಂದರೆ '೧೫ ಪದ್ಯಗಳು' ಮತ್ತು 'ಅಜ್ಜನ ಹೆಗಲ ಸುಕ್ಕುಗಳು'.

'ಅಜ್ಜನ ಹೆಗಲ ಸುಕ್ಕುಗಳು' ಅನಂತಮೂರ್ತಿ ಅವರ ದ್ವಿತೀಯ ಕವನ ಸಂಕಲನ. ೧೯೮೯ರಲ್ಲಿ ಪ್ರಕಟವಾದ ಇದರಲ್ಲಿ ೩೬ ಕವನಗಳಿವೆ. ೧೯೮೫, ೧೯೮೮ ಮತ್ತು ೧೯೮೯ ಈ ಮೂರು ವರ್ಷಗಳಲ್ಲಿ ಬರೆದ ವಿಭಿನ್ನ ವಸ್ತು–ಘಟನೆ, ಸಂಗತಿ–ಸಮಸ್ಯೆಗಳನ್ನು ಅಳವಡಿಸಿಕೊಂಡ ಇವು ಸಮಕಾಲೀನ ಬದುಕಿನ ಪ್ರತಿಬಿಂಬಗಳೆನಿಸಿವೆ. ಈ ಸಂಕಲನದ 'ಮೊದಲ ಮಾತಿ'ನಲ್ಲಿ ಅನಂತಮೂರ್ತಿ ಅವರು ತಮಗೂ ಕಾವ್ಯಕ್ಕೂ ಇರುವ ನಂಟು ಹಾಗೂ ತಮ್ಮ ಈ ಕವಿತೆಗಳ ಅಭಿವ್ಯಕ್ತಿಸಹಜತೆ–ಸಾಧ್ಯತೆಗಳನ್ನು ಕುರಿತು ಹೀಗೆ ಹೇಳಿದ್ದಾರೆಃ

"ಕವಿತೆ ನನ್ನ ಪಾಲಿಗೆ ಕೆಲವು ಕಾಲ ಹಿಡಿದಿದ್ದು, ಬಿಟ್ಟು, ಮತ್ತೆ ಬರಬಹುದಾದ್ದು. ಐವತ್ತರ ದಶಕದಲ್ಲಿ ಕವಿತೆಯ ಗುಂಗಿನಲ್ಲಿದ್ದವ ಕಥೆಗಾರನಾದೆ. ಆದರೆ ಕಥೆಗಳಲ್ಲೂ, ಕಾದಂಬರಿಯಲ್ಲೂ ಕವಿತೆಯನ್ನೇ ಬರೆದೆ. ನನ್ನ ಚಿಂತನೆಗಳೂ ಶಾಸ್ತ್ರದ ಶಿಸ್ತಿನವನದಲ್ಲ–ಕಾವ್ಯಕ್ಕೆ ಒಲಿದ ಮನಸ್ಸಿನವನದು. ಇದು ಹೆಚ್ಚುಗಾರಿಕೆಯ ಮಾತೂ ಅಲ್ಲ. ಹಿಂಜರಿಕೆಯದೂ ಅಲ್ಲ–ಇದು ನಾನಿರುವ ಅವಸ್ಥೆಯೆಂದು ನನ್ನ ಓದುಗರಿಗೆ ನಿವೇದಿಸುತ್ತಿದ್ದೇನೆ. ಹೀಗೆ ಕಾವ್ಯ ನನ್ನ ಭಾವವನ್ನು, ವಿಚಾರವನ್ನು ಸದಾ ನಿರ್ದೇಶಿಸುತ್ತಿದ್ದು ತನ್ನ ಶುದ್ಧ ಸ್ವರೂಪದಲ್ಲಿ ನನ್ನಿಂದ ಆಗೀಗ

---

* ಅಜ್ಜನ ಹೆಗಲ ಸುಕ್ಕುಗಳು ಃ ಯು. ಆರ್ ಅನಂತಮೂರ್ತಿ ; ಋಜುವಾತು ಪ್ರಕಾಶ, ಮೈಸೂರು (ಪ್ರ.ಮು. ೧೯೮೯) ; ಬೆಲೆ–೨೫ ; ಪು. XXIV + 76

ಬರೆಯಿಸಿಕೊಳ್ಳುವದಿದೆ. ಅಯೋವಾದಲ್ಲಿದ್ದಾಗ ಕೆಲವು ದಿನ, ಕೊಟ್ಟಾಯಂನಲ್ಲಿ ಸುಮಾರು ಮೂರುತಿಂಗಳ ಕಾಲ ಪ್ರತಿ ದಿನ ನನ್ನನ್ನು ಹಿಡಿದಿಟ್ಟ ಕೆಲವು ರಚನೆಗಳು ಇಲ್ಲಿವೆ. ಈ ಎಲ್ಲ ರಚನೆಗಳು ಶುದ್ಧವಾದ ಕವಿತೆಗಳು ಎನ್ನುವುದು ನನ್ನ ಮಟ್ಟಿಗೆ ಅಷ್ಟು ಪ್ರಸ್ತುತವಲ್ಲ. ನನ್ನನ್ನು ಆಳುವ ಎಲ್ಲ ಭಾವನೆ, ಎಲ್ಲ ವಿಚಾರಗಳು ನನ್ನ ಶಕ್ತ್ಯಾನುಸಾರ ಮೂಡಿದಷ್ಟು ಇಲ್ಲಿ ಮಾತುಪಡೆದಿವೆ.''

ಹೀಗೆ ತೀವ್ರವಾದ ಸಂವೇದನೆಯಿಂದ ರೂಪಪಡೆದ ಈ ಕವಿತೆಗಳಲ್ಲಿ ಅನಂತಮೂರ್ತಿ ಅವರ ಸ್ವಂತಿಕೆ ಹಾಗೂ ಪ್ರಯೋಗಶೀಲತೆಗಳು ಪ್ರಕಾಶಗೊಂಡು ನವ್ಯದ ನಂತರದ ಹೊಸ ಸಾಧ್ಯತೆಯೊಂದನ್ನು ಕನ್ನಡ ಕಾವ್ಯಮಾರ್ಗದಲ್ಲಿ ಹುಟ್ಟುಹಾಕುವ ಹವಣಿಕೆಯನ್ನು ತೋರುತ್ತಿವೆ.

ಈ ಸಂಕಲನದ ಒಟ್ಟು ಕವಿತೆಗಳು ವಸ್ತು–ಸ್ವರೂಪ ಹಾಗೂ ನಿರೂಪಣೆಯ ದೃಷ್ಟಿಯಿಂದ ಮುಖ್ಯವಾದ ಎರಡು ಗುಂಪುಗಳಲ್ಲಿ ಒಡೆಮುಕೊಳ್ಳುತ್ತವೆ. ಮುಕ್ತಸ್ಥಿತಿಯ ನಿರ್ಭಿಡೆಯ ನಿರಂಕುಶಮತಿಯಿಂದ ಸೃಷ್ಟಿಗೊಂಡ ನೂತನ ಗೀತೆಗಳದು ಒಂದು ಗುಂಪಾದರೆ, ಸಾಂಪ್ರಾದಾಯಿಕ ಸಿದ್ಧಮಾರ್ಗದಲ್ಲಿ ರಚನೆಗೊಂಡ ಗೇಯಾತ್ಮಕ, ಕಥನಾತ್ಮಕ, ಪ್ರಸಂಗಾತ್ಮಕ ಮತ್ತು ಚಿತ್ರಾತ್ಮಕ ಕವಿತೆಗಳದು ಮತ್ತೊಂದು ಗುಂಪು. ಮೊದಲ ಗುಂಪಿನ ಕವಿತೆಗಳಲ್ಲಿ ತತ್ವ ಮತ್ತು ಅನುಭವಗಳ ಮಧ್ಯದ ತಿಕ್ಕಾಟ ಹಾಗೂ ಸಮನ್ವಯಗಳು ಎದ್ದು ತೋರಿದರೆ, ಎರಡನೆಯ ಗುಂಪಿನ ಕವಿತೆಗಳಲ್ಲಿ ಪ್ರೀತಿ–ವಿನಯ–ಕಾಲಚಕ್ರ–ಜೀವನಮೌಲ್ಯ– ದಾಂಪತ್ಯಧರ್ಮ ಸಂಸಾರ–ಮಾತಿನಸೂತಕ–ಹೊಟ್ಟೆ–ಬಡವ–ಧನಿಕ–ಹೆಣ್ಣು–ದೇವರು–ಯೋಗಿ–ವ್ಯಭಿಚಾರಿ ಇವೇ ಮೊದಲಾದ ವಿಷಯಗಳು ಎಡೆಪಡೆದು, ಮೇಲುನೋಟಕ್ಕೆ ಸಾಂಪ್ರದಾಯಿಕ ಎನಿಸಿದರೂ ಎಲ್ಲವೂ ಪ್ರಸ್ತುತ ಆಧುನಿಕತೆಯ ಗಾಢಸ್ಪರ್ಶವನ್ನು ಅನಿವಾರ್ಯವಾಗಿ ಪಡೆದುಕೊಂಡು ಹೊಸ ಅರ್ಥವಂತಿಕೆಯಿಂದ ಕಳಕಳಿಸುತ್ತವೆ. ರಾಜಕೀಯಚಿಂತನೆ, ಸಾಹಿತ್ಯತತ್ವ, ಜೀವನ ಜಿಜ್ಞಾಸೆ, ಮಾರ್ಕ್ಸ್, ಲೋಹಿಯಾ, ಗಾಂಧಿ, ಉಪನಿಷತ್ತು, ಲೋಕಾಯತ ಈ ಯಾವುದೇ ವಾದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಒಂದು ತಾತ್ವಿಕ ನೆಲಗಟ್ಟಿನಮೇಲೆ ಮೂಡಿಬಂದ ಮೊದಲ ಗುಂಪಿನ ಕವಿತೆಗಳು ಹೆಚ್ಚು ದೀರ್ಘವಾಗಿ, ಗದ್ಯಾತ್ಮಕ ಗುಣವನ್ನು ಅಳವಡಿಸಿಕೊಂಡು ವೈಚಾರಿಕ ಹಾಸು–ಬೀಸುಗಳಿಂದ ಬೀಗಿನಿಂತಿದ್ದರೆ, ಎರಡನೆಯ ಗುಂಪಿನ ಕವಿತೆಗಳು ಚುಟುಕಾಗಿದ್ದು ಗೇಯತೆಯನ್ನು ಆತ್ಮೀಯತೆಯನ್ನು ಅಳವಡಿಸಿಕೊಂಡು ಆಪ್ಯಾಯಮಾನವೆನಿಸಿವೆ. ಕಾವ್ಯ ಮತ್ತು ಕಾವ್ಯಚಿಂತನೆಗಳನ್ನು ತುಂಬ ಗಂಭೀರವಾಗಿ ಪರಿಗಣಿಸಿದ ಅನಂತಮೂರ್ತಿ ಅವರು ಈ ಎರಡು ಬಗೆಯ ಕವಿತೆಗಳಲ್ಲಿಯೂ ಹೊಸವರ ಹುಡುಕಾಟ ನಡೆಸಿದ್ದಾರೆ; ಹೊಸ ಕಾವ್ಯಮಾರ್ಗವೊಂದನ್ನು ಜಾರಿಗೊಳಿಸಬೇಕೆಂಬ ತವಕವನ್ನು ತೋರಿದ್ದಾರೆ.

ಕನ್ನಡ ಕಾವ್ಯಪರಂಪರೆಯಲ್ಲಿ ಆರಂಭಕಾಲದಿಂದಲೂ ಎರಡು ವಿಭಿನ್ನ ಮಾರ್ಗಗಳು ಹುಟ್ಟಿಕೊಂಡು ತಮ್ಮ ಗೊತ್ತುಗುರಿಗಳನ್ನು ಪ್ರಕಟಿಸುತ್ತ, ಕಾಲಕಾಲಕ್ಕೆ ಏಳುಬೀಳುಗಳನ್ನು ಸಾಧಿಸುತ್ತ–ಸಹಿಸುತ್ತ ನಡೆದುಬಂದಿವೆ. ಅವುಗಳಲ್ಲಿ ಒಂದು ಪರಿಶ್ರಮದ ಫಲವಾಗಿ ನಿರ್ಮಿತವಾದ ಪಾಂಡಿತ್ಯಪೂರ್ಣ ಕವಿತಾಮಾರ್ಗ. ಮತ್ತೊಂದು ಸಹಜ ಚಿಮುಕಿಸಿದ

ಹೊರಹೊಮ್ಮಿದ ಸರಳ–ನೈಜ ಕವಿತಾಮಾರ್ಗ. ಪಂಪ–ರನ್ನಾದಿಗಳು ಮೊದಲ ಮಾರ್ಗದ ಪ್ರವರ್ತಕರೆನಿಸಿದರೆ, ವಚನಕಾರರು, ಹರಿದಾಸರು, ಸರ್ವಜ್ಞ ಮೊದಲಾದವರು ಎರಡನೆಯ ಮಾರ್ಗದ ನಿರ್ಮಾಪಕರೆನಿಸಿದ್ದಾರೆ. ಈ ಎರಡರಲ್ಲಿ ಯಾವುದು ಚೆನ್ನ ಎಂಬುದರ ಬಗೆಗೆ ಅನಂತಮೂರ್ತಿ ಅವರು ಈಚಿನ ದಿನಗಳಲ್ಲಿ ತುಂಬ ತೀವ್ರವಾಗಿ ಚಿಂತನೆಗೈದು, ಅದರ ಪ್ರತಿಕ್ರಿಯೆಯೇನೋ ಎನ್ನುವಂತೆ ಈ ಸಂಕಲನದ ಹಲವು ಕವಿತೆಗಳಲ್ಲಿ ಜಿಜ್ಞಾಸೆ ನಡೆಸಿ, ತಮ್ಮ ಒಲವು ಸಹಜತೆಯಿಂದ ಕೂಡಿದ ಸರಳಮಾರ್ಗದತ್ತ ಎಂಬುದನ್ನು ಪ್ರಕಟಪಡಿಸಿದ್ದಾರೆ. ಮತ್ಸ್ಯಾವತಾರ, ರಾಮನೋ ಕೃಷ್ಣನೊ, ಭಕ್ತಿ–ವಿಭಕ್ತಿ ಎಂಬ ಕವಿತೆಗಳಲ್ಲಿ ಈ ಎರಡೂ ಧೋರಣೆಗಳು ಮುಖಾಮುಖಿಯಾಗಿ ನಿಂತು ಮೂರ್ತಿಯವರ ಅಂತರಂಗದ ಅಭೀಪ್ಸೆಯನ್ನು ಬಿಚ್ಚಿತೋರಿಸುತ್ತವೆ. 'ಮತ್ಸ್ಯಾವತಾರ' ಎಂಬ ಕವಿತೆಯಲ್ಲಿ, ಕಾವ್ಯಾಭಿವ್ಯಕ್ತಿಯ ಎರಡು ವಿಭಿನ್ನ ನೆಲೆಗಳು ಮಂಡಿತವಾಗಿವೆ. ಈ ಎರಡು ಕಾವ್ಯಮಾದರಿಗಳಿಗೆ ಗಾಣಿಗಜಾತಿಯ ಕವಿ ಎಡುತಚ್ಚನ್ ಮತ್ತು ಸಂಸ್ಕೃತ ಕವಿ ಭಟ್ಟತಿರಿ ಪ್ರತೀಕಗಳಾಗಿದ್ದಾರೆ. ಮಲೆಯಾಳಿ ಭಾಷೆಯಲ್ಲಿ ಬರೆಯುವ ಎಡುತಚ್ಚನ್‌ಗೆ ಕಾವ್ಯ ಸಹಜವಾದ ಬದುಕಿನ ಉತ್ಪನ್ನವಾದರೆ, ಸಂಸ್ಕೃತ ಕವಿ ಭಟ್ಟತಿರಿಗೆ ಕಾವ್ಯ ಪಾಂಡಿತ್ಯ ಮತ್ತು ಶ್ರದ್ಧೆಯ ಫಲವಾಗಿದೆ.

> "ತೈಲಧಾರೆಯಂತೆ ಶ್ರೀಹರಿಯಲ್ಲಿ ಮನಸ್ಸು ಪಡೆದ
> ಗಾಣಿಗಜಾತಿ ಕವಿ ಎಡುತಚ್ಚನ್‌ಗೆ ಭಕ್ತಿ ಎಂದರೆ
> ತೆಂಗಿನೆಣ್ಣೆ ಬೆರಸಿದ ಬಿಸಿ ಬಿಸಿ ಗಂಜಿಯೂಟ, ಕಾವ್ಯ ಎಂದರೆ
> ನಂಜಿಕೊಳ್ಳಕ್ಕೆ ರುಚಿ ರುಚಿ ಹುರಿದ ಮೀನು, ಭಗವಂತ ಎಂದರೆ
> ದುಡಿಮೇಲಿ, ದಣಿವಾರಿಸಿಕೊಳ್ಳೊ ನಿದ್ದೇಲಿ
> ಮನಸ್ಸಲ್ಲಿ, ಕನಸಿನಲ್ಲಿ
> ಮಣ್ಣಿನ ಮರ್ತ್ಯ ಹಣತೇಲಿ, ಸತತ ಉರಿಯೋ ದೀಪ."

ಇದು ತನ್ನ ಕ್ರಿಯಾಶೀಲತೆಯನ್ನೆಲ್ಲಾ ನಿತ್ಯ ವ್ಯಾಪಾರದ ದೈನಿಕದಲ್ಲೇ, ಕಾಯಕವಲ್ಲೇ ಸಾಕ್ಷಾತ್ಕರಿಸಿಕೊಂಡ ಗಾಣಿಗ ಕವಿ ಎಡುತಚ್ಚನ್ ಚಿತ್ರ.

ಇನ್ನು ಕಾವ್ಯ ನಿರ್ಮಿತಿಯನ್ನೇ ತನ್ನ ನಿತ್ಯಕರ್ಮವನ್ನಾಗಿಸಿಕೊಂಡ ಭಟ್ಟತಿರಿ–

> "ವಿಭಾವಕ್ಕೆ ತಕ್ಕ ಭಾವ, ಭಾವಕ್ಕೆ ತಕ್ಕ ವ್ಯಂಜನ,
> ವ್ಯಂಜನಕ್ಕೆ ತಕ್ಕ ವ್ಯಾಕರಣ, ವ್ಯಾಕರಣಕ್ಕೆ ತಕ್ಕ ಉತ್ಸಾಹ,
> ಉತ್ಸಾಹಕ್ಕೆ ತಕ್ಕ ಲಯ, ಲಯಕ್ಕೆ ತಕ್ಕ ಅಲಂಕಾರ,
> ಅಲಂಕಾರದ ಔಚಿತ್ಯ ಹಾಗೂ ಅನೌಚಿತ್ಯ,
> ಅವನ ಕೃಪಾಕಟಾಕ್ಷಕ್ಕೆ ತಕ್ಕ ವಕ್ರೋಕ್ತಿ,
> ಸರಳ ಸೌಲಭ್ಯಕ್ಕೆ ತಕ್ಕ ಸ್ವಭಾವೋಕ್ತಿ
> ಹೀಗೆ ಒಟ್ಟಿನಲ್ಲಿ ಕಾವ್ಯ ಕಗ್ಗಂಟಾಗಿ
> ರುಚಿ ಕೆಡಿಸಿಕೊಂಡು ಅರೋಚಿಯಾಗಿ
> ಎಲ್ಲಿ ಹೇಗೆ ಶುರು ಮಾಡೋದು ತಿಳಿಯದೆ

ಬಿಡಿಸೋದೆ ಇನ್ನಷ್ಟು ಬ್ರಹ್ಮಗಂಟುಗಳಾಗಿ
ಪದ್ಮಾಸನ ಹಾಕಿ, ಪಟ್ಟೆ ಮಡಿಯುಟ್ಟು
ಶ್ರದ್ಧಾವಂತ ವ್ರತದಲ್ಲಿ ಬರೀತ ಹೊಡೀತ ಕೂತಿದ್ದ ಶುದ್ಧ ಶಾಖಾಹಾರಿ ಘನಕವಿ.''

'ರಾಮನೊ ಕೃಷ್ಣನೊ' ಎಂಬ ಇನ್ನೊಂದು ಕವಿತೆಯಲ್ಲಿ ವ್ಯಾಸ–ವಾಲ್ಮೀಕಿಯರನ್ನು ಹೀಗೆ, ಪ್ರತೀಕಗಳನ್ನಾಗಿ ಬಳಸಿಕೊಳ್ಳಲಾಗಿದೆ.

"ಹುತ್ತದೊಳಗಿದ್ದ ವ್ರತಿ ಬರೆವದ್ದು ರಾಮಾಯಣವಾದರೆ
ಸದ್ಯೋಜಾತ ವ್ಯಾಸ ಬರೆದದ್ದು ಭಾರತ''

ಹುತ್ತುಗಟ್ಟದೆ ಸೃಷ್ಟಿಸುವಂತಿಲ್ಲ ಎಂದು ನಂಬಿ ವಾಲ್ಮೀಕಿ ವ್ರತದ ನೆಲೆಯಲ್ಲಿ ಸೃಷ್ಟಿಸಿದ್ದು ರಾಮಾಯಣ; ಸದ್ಯೋಜಾತ ವ್ಯಾಸ ಕಟುವಾಸ್ತವದ ನೆಲೆಯಲ್ಲಿ ನಿರ್ಮಿಸಿದ್ದು ಸಹಜೋತ್ಪನ್ನ ಮಹಾಭಾರತ.

'ಭಕ್ತಿ–ವಿಭಕ್ತಿ' ಎಂಬ ಕವಿತೆಯಲ್ಲಿಯೂ ಹೀಗೇ ಭಟ್ಟತಿರಿ ಮತ್ತು ಪುಂತಾನಮ್ ಎಂಬ ಗುರುವಾಯುರ್ ಅಪ್ಪನ್‌ರ ಇಬ್ಬರು ಭಕ್ತಕವಿಗಳನ್ನು ಉದಾಹರಣೆಯಾಗಿ ಎತ್ತಿಕೊಂಡು, ಒಬ್ಬನು ಸಲ್ಲಿಸಿದ ಸಹಜ ಭಕ್ತಿಕಾವ್ಯ, ಮತ್ತೊಬ್ಬ ರಚಿಸಿದ ಕೃತಕ ವಿಭಕ್ತಿಕಾವ್ಯಗಳ ಮಧ್ಯ ದೇವರ ಒಲುಮೆ ಯಾವುದಕ್ಕೆ ಸಲ್ಲಿತು ಎಂಬುದನ್ನು ಹೇಳುವಲ್ಲಿ ಈ ಎರಡು ಕಾವ್ಯಮಾರ್ಗಗಳ ಸತ್ವ ಶ್ರೀಮಂತಿಕೆಗಳನ್ನು ತೂಗಿನೋಡಲಾಗಿದೆ.

'ಗುರುರಾಯ' ಎಂಬುದು ಈ ಸಂಕಲನದಲ್ಲಿಯೇ ತುಂಬ ನಿಡಿದಾದ ಕವಿತೆ. ೧೬೦ ಪಂಕ್ತಿ ಹಾಗೂ ೮ ಉಪ ವಿಭಾಗಗಳಲ್ಲಿ ಹಬ್ಬಿಕೊಂಡಿರುವ ಇದು ಎಂ. ಎನ್. ರಾಯ್ ಅವರ ವ್ಯಕ್ತಿತ್ವವನ್ನು ಕೇಂದ್ರವಾಗಿರಿಸಿಕೊಂಡು ಅವರ ಸುತ್ತ ಅನೇಕ ಸಂಗತಿ ಸಮಸ್ಯೆಗಳನ್ನು ಚಿಂತನೆ ಗೈಯ್ಯುತ್ತದೆ. ಎಂ. ಎನ್. ರಾಯ್ ವ್ಯಕ್ತಿತ್ವ–ಜೀವನಸಿದ್ಧಾಂತ– ಅವು ಸೃಷ್ಟಿಸುವ ತಾತ್ವಿಕತೆ. ಅದಕ್ಕೆ ಎದುರಾಗುವ ಗಾಂಧೀತತ್ವ, ರಾಯ್ ಅವರ ಹಿಂದೆ ಮುಂದೆ ನಿಂತವರು ಆ ತತ್ವವನ್ನು ಜಾಗರಿಸುವ ಕ್ರಮ ಗಾಂಧಿತತ್ವದ ಶಕ್ತಿ ಮತ್ತು ದೌರ್ಬಲ್ಯ, ನೆಹರೂಮಾರ್ಗ, ಗಾಂಧಿ–ನೆಹರೂಮಾರ್ಗದಲ್ಲೇ ಬೇರೆಲ್ಲ ವಾದಗಳು ತಮ್ಮನ್ನು ಯಾವುದೋ ನೆಲೆಯಲ್ಲಿ ಗುರುತಿಸಿಕೊಳ್ಳುವ ರೀತಿ, ತತ್ವ ಮತ್ತು ವೈಯಕ್ತಿಕತೆಯ ದ್ವಂದ್ವ, ಈ ಹಿನ್ನೆಲೆಯಲ್ಲಿ ಬದುಕಿನ ವಿರೋಧಾಭಾಸಗಳು ಇವೆ ಮೊದಲಾದ ಅಂಶಗಳನ್ನು ಒಳಗೊಂಡು ರಾಯ್ ಅವರ ಜೀವನ, ಚಿಂತನೆಗಳ ಬಗ್ಗೆ ಹೆಚ್ಚು ಖಚಿತವಾಗಿ ಹೇಳುವುದರ ಮೂಲಕ ಅವರನ್ನು ಒಂದು ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ನಿಲ್ಲಿಸುತ್ತದೆ.

ಇನ್ನು ಸಿದ್ಧಮಾರ್ಗದಲ್ಲಿ ರಚಿಸಿದ ಕವಿತೆಗಳಲ್ಲಿ ಈ ನಮ್ಮ ವಿನಯ, ಮೊದಲಸಲವಲ್ಲ, ಹಾಡು, ಕಲಿಯಬೇಕಿನ್ನು, ಐರ್ಲೆಂಡಿನ ಚ್ಯವನ ಋಷಿಗೆ ಎಂಬ ಕವಿತೆಗಳು ಗೀತಾತ್ಮಕವಾಗಿ ತಮ್ಮ ಗೇಯಗುಣಗಳಿಂದ ಆಕರ್ಷಿಸಿದರೆ, ಭಕ್ತಿ ವಿಭಕ್ತಿ, ಮತ್ಸ್ಯಾವತಾರ, ಪ್ರೀತಿ ಮತ್ತು ಕರ್ತವ್ಯದಂಥಪ್ರಸಂಗಾತ್ಮಕ ಕವಿತೆಗಳು ತಮ್ಮ ಸಹಜ ವ್ಯಂಗ್ಯಗುಣಗಳಿಂದ ಮನೋಹರವೆನಿಸಿವೆ. ವಾಸನಾ, ತುಳಸಿಯಂಥ ಪೌರಾಣಿಕ ಘಟನೆಗಳನ್ನು ಒಳಗೊಂಡ ಕಥನಾತ್ಮಕ ಕವಿತೆಗಳು

ಪೌರಾಣಿಕ ಘಟನೆ ಪಾತ್ರಗಳಿಗೆ ಹೊಸ ಅರ್ಥ–ಸಂಕೇತಗಳನ್ನು ಆರೋಪಿಸಿಕೊಂಡು ನೂತನ ಕಲ್ಪಕತೆಯನ್ನು ಧ್ವನಿಸುತ್ತವೆ. ಪ್ರೀತಿ, ಕೊಟ್ಟಾಯಂನಲ್ಲಿ ಕ್ರಿಸ್‌ಮಸ್, ಅಲ್ಲಿ ಎಲ್ಲರಿಗೂ ನಾಲ್ಕು ಕೈಗಳೇ, ಮೂಗು ಮುಂತಾದ ಭಾವಚಿತ್ರಾತ್ಮಕ ಕವಿತೆಗಳು ಚುಟುಕಾಗಿ ತಮ್ಮ ಭಾವದ ಚುರುಕನ್ನು ಮುಟ್ಟಿಸುತ್ತ, ರಚನೆಯ ಸಾರ್ಥಕತೆಯನ್ನು ತೋರುತ್ತವೆ.

ಹೀಗೆ ಮುಕ್ತ ಶೈಲಿಯ ಕವಿತೆಗಳಿರಲಿ, ಗೀತಾತ್ಮಕ ರಚನೆಗಳಿರಲಿ, ಕಥಾನಕಗಳಿರಲಿ, ಪ್ರಸಂಗಚಿತ್ರಗಳಿರಲಿ– ಎಲ್ಲದರಲ್ಲಿಯೂ ಅನಂತಮೂರ್ತಿ ಅವರ ಆಧುನಿಕತೆ– ವೈಚಾರಿಕತೆಯ ಮುದ್ರೆ, ಮೌಲ್ಯಗಳ ಮೇಲಿನ ಕಾಳಜಿ ಎದ್ದುಕಾಣುತ್ತವೆ.

ವಿನಯ ಮತ್ತು ಘನತೆ–ಈ ಮೌಲ್ಯ–ಪ್ರತಿಮೌಲ್ಯಗಳ ಬಗೆಗೆ ಮೂರ್ತಿ ಅವರಿಗೆ ಎಲ್ಲಿಲ್ಲದ ಪ್ರೀತಿ. ಈ ನಿಮ್ಮ ವಿನಯ, ಪ್ರೀತಿ, ಭಕ್ತಿ ವಿಭಕ್ತಿ ಎಂಬ ನಾಲ್ಕು ಕವಿತೆಗಳಲ್ಲಿ ಇವುಗಳ ಬಗೆಗೆ ಮತ್ತೆ ಮತ್ತೆ ಎತ್ತಿ ಹೇಳಿ ನಿಜವಾದ ಮೌಲ್ಯವನ್ನು ಅಳವಡಿಸಿಕೊಳ್ಳುವುದು ಮಾನವನ ಕರ್ತವ್ಯ ಎಂದು ಪರ್ಯಾಯವಾಗಿ ಹೇಳಲು ಪ್ರಯತ್ನಿಸಿದ್ದಾರೆ.

‘ಪಾರಿಜಾತದ ಮಧುರ ಈ ನಿಮ್ಮ ವಿನಯ’
‘ಸರಳ ಬಲು ಸರಳ ಪ್ರಭು ಈ ನಿಮ್ಮ ವಿನಯ’
‘ನಿನ್ನದು ವಿಭಕ್ತಿ– ಅವನದು ಭಕ್ತಿ’
‘ಮಾನವ ಸಹಜವಾದ ಘನತೆ ಗಾಂಭೀರ್ಯ ಕಳಚಿ
ಸಮಸುಖದಲ್ಲಿ
ಚತುಷ್ಪಾದಿಯಾದಾಗ ಮಾತ್ರ
ನಾವು ಚತುರ್ಭುಜರು’
‘ಹಾಲು ಕೆನೆಕಟ್ಟಿದಂತೆ ಮನುಷ್ಯ ವಿನಯವಂತನಾಗೋದು’

ಕಾಯಾ ವಾಚಾ ಮನಸಾ, ಸಂಸಾರ, ವಾಸನಾ, ಯೋಗಿ ಮತ್ತು ವ್ಯಭಿಚಾರಿ, ಹಾಡು, ಶ್ರೀತುಳಸಿ ಮೊದಲಾದ ಕವಿತೆಗಳಲ್ಲಿ ದಾಂಪತ್ಯಧರ್ಮದ ಚಿಂತನೆ ಇದೆ. ‘ಗೃಹಸ್ಥ ಧರ್ಮದ ಗಂಧ’ ತನ್ನ ಪರಿಮಳವನ್ನು ಎಲ್ಲೆಡೆಯೂ ಬೀರಬೇಕೆಂಬುದು ಅನಂತಮೂರ್ತಿಯವರ ಬಯಕೆ.

ಜೀವಚಕ್ರ, ಋತುಕ್ರಾಂತಿ, ಜೀವವರ್ತುಲ, ಸಿಂಬೆಸುತ್ತಿದಕಾಲ, ಕಾಲದಸುರಳಿ– ಎಂಬ ಕವಿತೆಗಳಲ್ಲಿ ಕಾಲಚಕ್ರದ ಸ್ಥಿತಿಗತಿಗಳ ಬಗೆಗೆ ಯೋಚಿಸಿದ್ದಾರೆ.

ಸಂಕಲನದ ಶೀರ್ಷಿಕೆಯ ‘ಅಜ್ಜನ ಹೆಗಲ ಸುಕ್ಕುಗಳು’ ಕವಿತೆಯಲ್ಲಿ ‘ಭೂತ ನಮ್ಮ ಬೆನ್ನು ಹತ್ತಿದ ಎಂಬ ರೂಢಿಗತ ಅರಿವಿಗೆ ವಿರುದ್ಧವಾದ ವಿಚಾರ ಅಡಕವಾಗಿದೆ. ವಾಸ್ತವವಾಗಿ ಭೂತ. ವರ್ತಮಾನವನ್ನು ತನ್ನ ಹೆಗಲಮೇಲೆ ಹೊತ್ತು ಭವಿಷ್ಯಕ್ಕೆ ನಡೆಸುತ್ತಿದೆ. ಭೂತ ಇಲ್ಲಿ [illegible] ಆಗಿರುವುದರಿಂದಲೇ ಪರಂಪರೆಗೆ ಹೊಸ ಅರ್ಥ ಪ್ರಾಪ್ತವಾಗಿದೆ. ಸವೆತ ಮತ್ತು ಸುಕ್ಕುಗಳು ಎರಡೂ ಇಲ್ಲಿ ಪರಂಪರೆಗೆ ಆರೋಪಿತವಾಗಿರುವುದರಿಂದ ಧೋರಣೆ [illegible]ವಾಗಿಯೇ ಸಂಕೀರ್ಣತೆಯನ್ನು ಪಡೆಯುತ್ತದೆ’.

ಒಟ್ಟಿನಲ್ಲಿ ಎಚ್. ಎಸ್. ವೆಂಕಟೇಶಮೂರ್ತಿ ಅವರು ಹೇಳುವಂತೆ "ಅನಂತಮೂರ್ತಿ ಅವರ ಈ ಹೊಸ ಸಂಗ್ರಹದ ಸಫಲ ಕವಿತೆಗಳು ಸಮಕಾಲೀನ ಕನ್ನಡ ತೇಜಸ್ಸಿಗೆ ನಿಸ್ಸಂದೇಹವಾಗಿ ಕೆಲವು ಹೊಸ ಕಳೆಗಳನ್ನು ಸೇರಿಸಿವೆ. ವ್ಯಂಗ್ಯದೂರವಾದ ಸಿನಿಕತನವಿಲ್ಲದ, ಬದುಕಿನ ಬಗ್ಗೆ ಪ್ರೀತಿ ಗೌರವವುಳ್ಳ, ಆದರೆ ಭೋಳೆಯಾಗದ ಮನಸೊಂದು ಇಲ್ಲಿ ಕ್ರಿಯಾಶೀಲವಾಗಿದೆ. ಅನೇಕ ಬಗೆಯ ಅನುಭವದ ಹುಳಿ–ಸೀಯಿಂದ ಸಂಪನ್ನವಾದ ಮನೋಧರ್ಮ ಈ ಕವಿತೆಗಳ ಹಿಂದೆ ಇರುವ ಕಾರಣ ಸಹಜವಾಗಿಯೇ ಇಲ್ಲಿಯ ಕವಿತೆಗಳಿಗೆ ಕಾಂತಿಯೂ, ಕಾಂತತ್ವವೂ ಪ್ರಾಪ್ತವಾಗಿದೆ. ಓದುಗರ ಭಾವಕೋಶವನ್ನೂ, ವಿಚಾರವಲಯವನ್ನೂ ಒಂದೇ ಪಟ್ಟಿನಲ್ಲಿ ಹಿಗ್ಗಲಿಸಬಲ್ಲ ಈ ಕವಿತಾ ಸಂಗ್ರಹ ನಿಜಕ್ಕೂ ಸ್ವಾಗತಾರ್ಹ".*

□ □

* ಈ ಸಂಕಲನದ ಆರಂಭದಲ್ಲಿರುವ ಎಚ್. ಎಸ್. ವೆಂಕಟೇಶಮೂರ್ತಿ ಅವರ 'ಪ್ರವೇಶ'ಕ್ಕೆ ಹೆಚ್ಚುಮಟ್ಟಿಗೆ ಋಣಿಯಾಗಿದ್ದೇನೆ.

ಕಳೆದುಕೊಂಡದ್ದು

• ಗುಂಡಣ್ಣ ಕಲಬುರ್ಗಿ

ಸಾವಿನ ಪ್ರಜ್ಞೆಯ ಸುತ್ತ
ಕಾಲ ಬಾರಿಸುವ
ಆಜ್ಞೆಯಂತೆ–ನಿಮಿಷ ನಿಮಿಷವೂ
ನನ್ನ ಅಸ್ತಿತ್ವದ ಬಿಂದುವನ್ನು,
ಹೃದಯ ಸಿಂಧುವಿನ
ಕೇಂದ್ರ ಮರ್ಮವನ್ನು,
ಕೀಳಿ ಕೇಳುತ್ತದೆ;ಒಳಗನ್ನು
ಸೀಳುತ್ತದೆ; ನನ್ನದೇ ಅದು
ಉರಮಂಡಲ ಪ್ರಶ್ನೆ.

• •

ಅನಿವಾರ್ಯಗಳು, ಸೋಲುಗಳು
ಜೋಲುಮುಖದ ಒಪ್ಪಂದಗಳು
ನನಗೆ–
ಸರಳವಾಗಿ ಉರುಳುವ ಹೊರಳು ದಾರಿಗಳಲ್ಲ;
ಬದುಕಬೇಕೆನ್ನುವ ಅರವಟ್ಟಿಗೆಯ
ಅದೊಂದು ಪಲಾಯನವಲ್ಲ; ಬದಲಾಗಿ
ಕ್ಷಣ ಕ್ಷಣವೂ ಹಿಸುಕಿದಂತೆ,
ಆ ಒಂದು ಥರದ ನಿಲುವಿನ
ಕೊನೆ ಘಳಿಗೆಯ, ಕ್ಷೀಣದನಿಯ.....
ಉರುಲಿನ ಅನುಭವ!

• •

ಬದುಕುವ–ಬದುಕಿಸುವ
ಆಸೆ, ಆದರ್ಶ, ಕನಸುಗಳೆಲ್ಲ
ಗರ್ಭಪಾತವಾಗುವುದರ, ಅಂಥ
ಓಕುಳಿಯಲ್ಲಿ; ಈ ಕೆಟ್ಟ

ವಾಸನೆಯ ಹಿಂಸೆಯಲ್ಲಿ–ನಾನೂ
ತಿಳುವಾಗಿ ಹರಿದು ಹೋಗುತ್ತ.......
ಹುಡಿಯಾಗುತ್ತಿದ್ದೇನಲ್ಲ ಈ
ನೆಲ–ಗಾಳಿಯೊಳಗೆ?

• •

ಕಳೆದುಕೊಂಡದ್ದು ಎಷ್ಟು?
ಉಳಿದದ್ದು ಏನು?
ನಿತ್ಯ–ಪ್ರತಿನಿತ್ಯ ಎತ್ತರಕ್ಕೇರುವ
ಹಂಬಲದ ಮಧ್ಯೆ– ಹೀಗೆ
ಸಂಕೀರ್ಣವನ್ನು ಕಳಚಿ
ಒಂದೊಂದು ಸಲ ಕಿವುಚಿ
ಮುರಿದ ಮೌನ ಮಾತಾಡುತ್ತದೆ;
ಮೆತ್ತಗಾಗಿ ಸಾಯುತ್ತಲೇ
ಸವಾಲು ಹಾಕುತ್ತದೆ!

• •

ಪ್ರಶ್ನೆಗಳು ಕಾಡಿ– ಮೂಡಿಕೊಂಡಷ್ಟು
ಭಾವನೆಗಳು ಮುರಿದು–ಮುದ್ದೆಯಾದಷ್ಟು
ಗರಿಗೆದರಿದ ಬೆಳವಣಿಗೆ, ಜೀವನೋತ್ಸಾಹ
ಪೊಳ್ಳಾಗುತ್ತಿದೆ, ಸುಳ್ಳಾಗುತ್ತಿದೆ,
ಸೊಳ್ಳಾಗಿ ಹಾರಿ ಹೋಗುವ ತಯಾರಿ ಹೂಡುತ್ತಿದೆ.

ಎದ್ದು, ಗುದ್ದಿ ಸಾವರಿಸಿಕೊಂಡು
ನೆಲದೊಳಗೆ ಲಾವಾರಸವಾಗಿ ಅಪ್ಪಳಿಸಿ
ಸ್ಫೋಟಿಸದೇ ವರ್ತಮಾನದ ದವಡೆಗೆ,
'ದ್ರವ್ಯ'ದ ಲಾಲಾರಸವಾಗಿ ಕರಗುತ್ತಿದ್ದೇನೆ;
ಅನಿವಾರ್ಯಗಳು ನನ್ನನ್ನು ಆಳುತ್ತಿವೆ;
ಸೋಲುಗಳು ನನ್ನನ್ನು ತುಳಿಯುತ್ತಿವೆ.

□ □

ಬೇಸಿಗೆಯ ಚಿತ್ರಗಳು

• ಸಿದ್ಧರಾಜ ಪೂಜಾರಿ

ಇದೋ ಬಂತು ಬೇಸಿಗೆ.
ನಿಗಿನಿಗಿ ಬಿಸಿಲು ಬೇಗೆ. ಕೆರೆಯ ತಣ್ಣೀರೆಲ್ಲ
ಕುಡಿದ ಸೂರ್ಯ. ಈಗ ಉಳಿದದ್ದು ಬರೀ ಕೆಸರು,
ತಳದ ರಾಡಿ ನೀರು. ವಿಲವಿಲ ಒದ್ದಾಡುತಿವೆ
ಮೀನು. ಕೊಕ್ಕರೆಗಳಿಗೆ ಹಬ್ಬದೂಟ. ವಟವಟ
ಶಪಿಸುವ ಕಪ್ಪೆಗಳು. ಕೆಸರಿನಲ್ಲಿ ಹೊರಳಾಡುವ
ದನಕರುಗಳಿಗೆ ಪ್ರಕೃತಿ ಚಿಕಿತ್ಸೆ. ರಪರಪರೆಕ್ಕೆ
ಬಡಿದು ಕುಣಿಚೆ ನೀರಲಿ ಗುಬ್ಬಿ ಜಳಕ, ಹಚ್ಚಗೆ
ಹಬ್ಬಿದ ಜೊಂಡು; ಕಾಲ್ತೊಡಕುವ ಬಳ್ಳಿಯ ಸರ್ಪ–
ಗಾವಲು: ನಡುವೆ ಕಣ್ಣು ತೆರೆದಿವೆ ಕಮಲ, ಸೂಸುವ
ಸದುವಿನಯ; ತಂಪು ಎದೆಯೊಳಗೆ ಅಮೃತಕಲಶ.
ಅನುನಯದಿ ಸವಿಯುತಿವೆ ದುಂಬಿ ತನ್ಮಯವಾಗಿ.
ಅತ್ತ ಗಿಡಗಂಟಿಗಳ ಪೊದರಿನಲಿ ಬಚ್ಚಿಟ್ಟ
ಜೇನುಗೂಡು, ರಂಗುರಂಗಿನ ರೇಶಿಮೆ ಬಟ್ಟೆ
ತೊಟ್ಟ ಚಿಟ್ಟೆಗಳ ಗಾಳಿ–ನರ್ತನ, ಕಣ್ಣೆದುರು
ಬಿಸಿಲು ಪರದೆಯ ಮೇಲೆ ಚೈತ್ರ ಬರೆಯುವ ಚಿತ್ರ;
ಕರಗಿ ಹೋಗುವ ಕನಸುಗಳ ಹಾಗೆ.

ದೂರದಲಿ
ತೂಗುಡುವ [illegible] ಧಗ ಧಗ ಉರಿವ ಬಿಸಿಲು
ಬಿರುಕುಗಟ್ಟಿದ ಭೂಮಿ. [illegible]ಗಳ ಜೊತೆಗೆ
[illegible] ನೆಲದಲಿ ಕಿಚ್ಚು ಸಾಯುತ ಉಳುವ ರೈತ,
ಬೆನ್ನಮೇಲೆ [illegible] ಬಾರುಕೋಲು, [illegible]
ಬಾಸುಂಡೆ, ಒಡೆಯನ ಏರುದನಿಗೆ ಹೌಹಾರಿ
[illegible]–

ದಾರ, ವಸವಸ ತೇಕುವ ಮೂಕ ಜೀವ. ಕೆಳಗೆ
ನೊರೆ ನೊರೆಯಾಗಿ ಸುರಿವ ಜೊಲ್ಲು, ಹನಿ ಹನಿಯಾಗಿ
ಇಳಿವ ಬೆವರು.(ನಿಮಗಿಂತ ಬೇರುಂಟೆ ದೇವರು?)
ಉಸಿರು ತುಸು ಬಿಗಿಹಿಡಿದು ಹೆಜ್ಜೆ ಹಾಕುವ ಗಾಳಿ
ಸನಿಹದಲಿ ತಳಿರ್ವೊಡೆದ ಮಾಮರಗಳ ತೋಪು.
ಟೊಂಗೆಟೊಂಗೆಗೆ ಸುರಿದ ಹೂ–ಹೊಗರು, ಮಿಡಿಗಾಯಿ.
ಒಳಗೆ ಕೋಗಿಲೆಯ ಸಂಗೀತ ಸಭೆ, ಚಪ್ಪಾಳೆ
ತಟ್ಟುವ ಮರದೆಲೆಗಳು, ಕೆಳಗೆ ಹಾಸಿದ ನೆರಳು.
ದಣಿದವರಿಗಿದು ವಿಶ್ರಾಂತಿ–ಧಾಮ. ಪ್ರೀತಿಯಲಿ
ಮಡದಿ ಕಳಿಸಿದ ಬುತ್ತಿ, ತತ್ರಾಣಿಯಲಿ ತಂಪು
ನೀರು. ಉಂಡು ಮಲಗಿದರೆ ತಕ್ಷಣವೇ ಜೊಂಪು.
ಸಿಗದ ಮೃಗಜಲದಂತೆ ಉಳಿದ ಹಳ್ಳಿಯ ನೆನಪು.
ಹರಿವ ಮನಸು.

ಇಲ್ಲಿ ನಗರದ ಬೀದಿಗಳಲ್ಲಿ
ಉರಿ ಉರಿ ಬಿಸಿಲಿಗೆ ಅರಳುವ ಕೊಡೆಗಳು. ಎಲ್ಲೆಡೆ
ಕಲ್ಲಂಗಡಿಗಳ ರಾಶಿ. ಕಚಕಚ ಎಳನೀರು ಕೊಚ್ಚುವ
ಹುಡುಗರ ಸ್ಪರ್ಧೆ, ಬಿದಿರು ಚಪ್ಪರದೊಳಗೆ ಕಬ್ಬು
ಅರೆಯುವ ಯಂತ್ರ. ಬದಿಗೆ ಬೀರು–ಬಾರು. ಗಟಗಟ
ಹೀರುವ ಗಿರಾಕಿಗಳು, ಉರಿವ ಕಣ್ಣುಗಳಲ್ಲಿ
ಸಿಗರೇಟು ಹೊಗೆ, ಗೂಡುಗಟ್ಟಿದ ಕೆಮ್ಮು.

ಸಂಜೆ–
ಹೋಟೆಲು ತುಂಬ ಮಾತಾಡುವ ಕಣ್ಣುಗಳು,
ಹಗಾದ ಛತ್ರಿಯ ಕೆಳಗೆ ಬಣ್ಣ ಬಣ್ಣದ ಹುಡುಗ
ಹುಡುಗಿಯರು. ಕಾಲಿಗೆ ಕಾಲು ತಾಕಿಸಿ ಆಡುವ
ಪಿಸು ಪಿಸು ಮಾತು. ಬೆಡಗಿನ ಮುಗುಳು ನಗೆ. ಎದುರಿಗೆ
ಐಸ್‌ಕ್ರೀಮು ಬಟ್ಟಲು. ಗುರಿ ಮುಟ್ಟಲು ಉಳಿದಿದೆ
ಒಂದೇ ಮೆಟ್ಟಿಲು. ಮುತ್ತೇರಿಸುವ ಪಾಶ್ಚಾತ್ಯ
ಸಂಗೀತ. ಚಿತ್ರಗೀತೆಗಳ ಗುಂಗು. ಇವರಿಗೆ
ಕೋಗಿಲೆಯ ಹಾಡು ಕೇಳುವುದಿಲ್ಲ. ಅವರಿಗ

ಕಣ್ಣು ತಪ್ಪಿಸಿ, ಯಾರಿಗೋ ಮನಸ್ಸು ಒಪ್ಪಿಸಿ
ಮನೆಗೆ ಮರಳಿದ ಮೇಲೆ ಪುಸ್ತಕದ ಒಳಗೆಲ್ಲ
ವಿರಹಗೀತೆ. ಹೊಸ ಅಧ್ಯಾಯ.

ರಾತ್ರಿಯಾಯಿತೊ

ಬೇರೆ ಕತೆ. ಕಾಯ್ದ ಸಿಮೆಂಟು ಗೋಡೆಗಳ ನಡುವೆ
ಕುದಿಸುವ ಅರೆಗಾವು. ಕಟ ಕಟ ಕಚ್ಚುವ ಸೊಳ್ಳೆ,
ಮುಖ ಮರೆಸಿಕೊಂಡ ಗಾಳಿ, ಮೈ ಪರಚಿಕೊಳ್ಳುವ
ಸೆಕೆ–ಬೆವರು, ಫ್ಯಾನು ಇದೆ. ಕರೆಂಟು ಇಲ್ಲ. ನಾಳೆ
ನೀರು ಬರುವುದಿಲ್ಲ, ನೆನೆದರೆ ಬರುವುದೆ ನಿದ್ದೆ?
ಹೆಂಡತಿಯ ತೊರೆದು ಹೊರಗೆ ಮಲಗಿದರೆ ವಸಂತ
ಋತುವಿಗೇ ಅವಮಾನ. ಹೇಗಿದೆ ನೋಡಿ ನಗರ
ಜೀವನ? ಯಾವ ಋತುವಾದರೇನು? ಇಲ್ಲಿದೆಯೆ
ಒಂದಿಷ್ಟು ಹೊಸತನ? ಎದೆ ಅರಳಿಸುವ ಚೇತನ?

❑ ❑

ಸುಪ್ರಸಿದ್ಧ ವರ್ತನಮನೋವಿಜ್ಞಾನಿ ಬಿ. ಎಫ್. ಸ್ಕಿನ್ನರ್

• ಎ. ಎಸ್. ಧರಣೇಂದ್ರಯ್ಯ

೧೯೯೦ ನೇ ಅಗಸ್ಟ್ ೨೦ರ ರಾತ್ರಿ ಭಾರತೀಯ ದೂರದರ್ಶನವು ಹೆಸರಾಂತ ಮನೋವಿಜ್ಞಾನಿ ಬಿ.ಎಫ್. ಸ್ಕಿನ್ನರನ ಮರಣವಾರ್ತೆಯನ್ನು ಪ್ರಸಾರ ಮಾಡಿತು. ಮಾರನೆಯ ದಿನ 'ಹಿಂದೂ' 'ಟೈಂಸ್ ಆಫ್ ಇಂಡಿಯಾ' ಮುಂತಾದ ಪ್ರಮುಖ ದಿನಪತ್ರಿಕೆಗಳು ಸ್ಕಿನ್ನರನ ನಿಧನದ ಸುದ್ದಿಯನ್ನು ಕೆಲವು ವಿವರಗಳೊಂದಿಗೆ ಪ್ರಕಟಿಸಿದವು. "ಉತ್ತಮ ಜಗತ್ತನ್ನು ನಿರ್ಮಿಸಲು ಮಾನವ ವರ್ತನೆಯನ್ನು ರೂಪಿಸಬಹುದು ಎಂದು ನಂಬಿ ವ್ಯವಹರಿಸಿದ ಪ್ರಸಿದ್ಧ ಮನೋವಿಜ್ಞಾನಿ ಬಿ.ಎಫ್.ಸ್ಕಿನ್ನರ್ ರಕ್ತಕ್ಯಾನ್ಸರಿನಿಂದ ಮೆಸಾಚುಸೆಟ್ಸ್‌ನ ವಿದ್ಯಾನಗರು, ಕೇಂಬ್ರಿಡ್ಜ್‌ನಲ್ಲಿ ಕಳೆದ ಶನಿವಾರ ಮೃತನಾದ ಆತನಿಗೆ ೮೬ ವರ್ಷ ವಯಸ್ಸಾಗಿತ್ತು.

"........ವರ್ತನವಾದವೆಂದು ಹೆಸರಾದ ವಿಚಾರಪಂಥದ ಅನುಯಾಯಿಯಾಗಿದ್ದ ಸ್ಕಿನ್ನರ್ 'ಸ್ಕಿನ್ನರ್ ಪೆಟ್ಟಿಗೆ' ಎಂದೇ ಕರೆಯಲಾದ ಒಂದು ವಿಶಿಷ್ಟ ಪ್ರಯೋಗಪರಿಕರದ ರೂವಾರಿ. 'ಬಹುಮಾನಿತ ವರ್ತನೆಯ ಪುನರಾವರ್ತನೆಯಾಗುತ್ತದೆ' ಎಂಬ ತನ್ನ ಸಿದ್ಧಾಂತವನ್ನು ಸ್ಪಷ್ಟಪಡಿಸಲು ಆತ ಈ ಪ್ರಯೋಗಪರಿಕರವನ್ನು ರೂಪಿಸಿದ. ಪಿಂಗ್‌ಪಾಂಗ್ ಆಟವಾಡಲು ಮತ್ತು ಕ್ಷಿಪಣಿಗಳಿಗೆ ಮಾರ್ಗದರ್ಶನ ನೀಡಲು ಪಾರಿವಾಳಗಳಿಗೆ ಸ್ಕಿನರ್ ತರಬೇತಿ ಕೊಟ್ಟ . ಆತನ 'ವಾಲ್ಡನ್ ಟೂ' ಎಂಬ ಕಾದಂಬರಿಯು ೧೯೬೦ ಮತ್ತು ೭೦ ರ ದಶಕಗಳಲ್ಲಿ ಕಾಲೇಜು ವಿದ್ಯಾರ್ಥಿ ಸಮುದಾಯವನ್ನೇ ಆಕರ್ಷಿಸಿತ್ತು........ ಇಂತಹ ಕಾದಂಬರಿಯ ಕರ್ತೃವೆಂದು ಅನೇಕರು ಆತನನ್ನು ಜ್ಞಾಪಿಸಿಕೊಂಡರೆ, ತನ್ನ ಸ್ನೇಹಿತರಿಗೆ ಸ್ಕಿನ್ನರ್ 'ಫ್ರೆಡ್' ಮತ್ತು ಪ್ರಪಂಚಕ್ಕೆ 'ಬಿಎಫ್' ಆಗಿದ್ದ...........ತನ್ನ ಉದ್ಯೋಗ ಜೀವನದ ಬಹುಕಾಲವನ್ನು ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿ ಕಳೆದ ಸ್ಕಿನ್ನರ್, ಅಲ್ಲಿ ತನ್ನ ಅಧ್ಯಯನಗಳಿಂದ ಪ್ರಾಣಿವರ್ತನೆಯ ಬಗ್ಗೆ ತಾನು ಕಂಡುಕೊಂಡ ಸತ್ಯವನ್ನು ಮಾನವವರ್ತನೆಯ ಅಭಿಪ್ರೇರಣೆ ಮತ್ತು ನಿಯಂತ್ರಣಗಳಿಗಾಗಿ ಬಳಸಿದ.......... 'ಸ್ವಯಂಪ್ರೇರಿತವೆಂಬಂತೆ ತೋರುವ ವ್ಯಕ್ತಿಕ್ರಿಯೆಗಳನ್ನು ಮೆಚ್ಚು ಮತ್ತು ಚುಚ್ಚು(rewards and punishments)ಗಳ ಮೂಲಕ ಕ್ರಮಪಡಿಸಲು ಸಾಧ್ಯ'; 'ಜನರು ಜಗತ್ತನ್ನು ರೂಪಿಸುವುದಿಲ್ಲ, ಜಗತ್ತು ಅವರನ್ನು ರೂಪಿಸುತ್ತದೆ' ಮುಂತಾದ ಆತನ ವಿಚಾರಗಳಿಗೆ ಆತನ 'ಕ್ರಿಯಾಪ್ರಸೂತ ಅನುಬಂಧನ'(operant conditioning) ಸಿದ್ಧಾಂತವೇ ಆಧಾರ. ಜಗತ್ತಿನಾದ್ಯಂತ ವಿವಾದದ ಅಲೆಗಳನ್ನೆಬ್ಬಿಸಿದ ತನ್ನ ವಿಚಾರಗಳ ಸಮರ್ಥನೆಗೆಂದು ಒಂದು ಲೇಖನವನ್ನು ಕೆಲವು ತಿಂಗಳುಗಳಿಂದ ಸಿದ್ಧಪಡಿಸುತ್ತಿದ್ದೇನೆ ಎಂದು ಸ್ಕಿನ್ನರ್ ತಾನು ಸಾಯುವುದಕ್ಕೆ ಮುಂಚೆ ಒಂದು ಸಂದರ್ಶನದಲ್ಲಿ ತಿಳಿಸಿದ್ದ. ಆ ಪ್ರಬಂಧದಲ್ಲಿ ಮನೋವಿಜ್ಞಾನದ

ಇತಿ–ಮಿತಿ ಮತ್ತು ಸಂಜ್ಞಾನ ಮನೋವಿಜ್ಞಾನಿಗಳ ನಿರರ್ಥಕತೆಗಳ ಬಗ್ಗೆ ಪ್ರಧಾನವಾಗಿ ಪ್ರಸ್ತಾಪಿಸುವುದಾಗಿ ಆತ ತಿಳಿಸಿದ್ದ. "ಸಂಜ್ಞಾನ ಮನೋವಿಜ್ಞಾನಿಗಳು ಅದನ್ನು ಇಷ್ಟಪಡರು, ಆದರೆ ಅದರಿಂದ ನನಗೆ ಕಿಂಚಿತ್ತು ವ್ಯಥೆಯಿಲ್ಲ" ಎಂದೂ "ನಾನು ಇನ್ನು ಕೆಲವು ತಿಂಗಳುಗಳಲ್ಲಿ ಸಾಯುತ್ತೇನೆ" ಎಂದೂ ನಗುತ್ತಾ ಹೇಳಿ, "ಆದರೆ ಅದು ನನಗೆ ಸ್ವಲ್ಪವೂ ಆತಂಕ ಅಥವಾ ಚಿಂತೆ ಅಥವಾ ಮತ್ತೇನನ್ನೂ ಉಂಟುಮಾಡಿಲ್ಲ"ವೆಂದೂ "ನಾನು ಸಾಯುತ್ತೇನೆಂಬುದು ಸದಾ ನನಗೆ ಗೊತ್ತಿತ್ತು" ಎಂದೂ ಸ್ಕಿನ್ನರ್ ಆ ಸಂದರ್ಶನದಲ್ಲಿ ಹೇಳಿದ್ದ. ಒಂದು ರಾಸಾಯನಿಕ ಪ್ರತಿಕ್ರಿಯೆಯಂತೆಯೂ ಮಾನವವರ್ತನೆಯ ಭವಿಷ್ಯವನ್ನು ಹೇಳಬಹುದು ಎಂಬುದು ಸ್ಕಿನ್ನರನ ನಂಬಿಕೆಯಾಗಿತ್ತು." ಇವೇ ಮುಂತಾದ ಅಭಿಪ್ರಾಯಗಳನ್ನು ಪತ್ರಿಕೆಗಳು ಪ್ರಕಟಿಸಿದವು.

ಬಿ.ಎಫ್. ಸ್ಕಿನ್ನರನ ಮರಣವಾರ್ತೆಯೊಂದಿಗೆ ಆತನ ಜೀವನ ಮತ್ತು ಸಾಧನೆಗಳ ಬಗ್ಗೆ ಕೆಲವು ವಿವರಗಳನ್ನು ಜಗತ್ತಿನಾದ್ಯಂತ ಬೃಹತ್ ಸುದ್ದಿವಾಹಕಗಳು ಪ್ರಕಟಿಸಿದ್ದು ಆತನ ಕೀರ್ತಿಯ ದ್ಯೋತಕ.

ಅತಿ ಕಟ್ಟುನಿಟ್ಟಿನ ಮನೋವಿಜ್ಞಾನಿಯೆನಿಸಿದ್ದ ಬರ್ರಸ್ ಫ್ರೆಡರಿಕ್ ಸ್ಕಿನ್ನರ್ ಉಗ್ರಗಾಮಿ. ವರ್ತಮಾನದ ಪ್ರವರ್ತಕ. ವಿಸ್ತೃತ ಹಾಗೂ ವಿಶಿಷ್ಟ ಸಾಮಾಜಿಕ ಸಮಸ್ಯೆಗಳ ನಿವಾರಣೆಗಾಗಿ ತನ್ನ ಪಂಥದ ವಿಚಾರಗಳನ್ನು ಅನ್ವಯಿಸಲು ಯತ್ನಿಸಿದ ಆತ ಅತ್ಯಂತ ವಿವಾದಕ್ಕೊಳಗಾದ ಮನೋವಿಜ್ಞಾನಿಗಳಲ್ಲೊಬ್ಬನೆನಿಸಿದ್ದ. ಕೆಲವರು ಆತನನ್ನು 'ಇಲಿ ಮನೋವಿಜ್ಞಾನಿ' ಎಂದು ಕರೆದದ್ದೂ ಉಂಟು. ಆದರೆ ಭಾಷಾಶಾಸ್ತ್ರ, ಶಿಕ್ಷಣ, ಮನೋರೋಗ ಚಿಕಿತ್ಸೆ, ಸಾಮಾಜಿಕ ಮನೋವಿಜ್ಞಾನ ಮುಂತಾದ ಹಲವು ವೈವಿಧ್ಯಪೂರ್ಣ ಕ್ಷೇತ್ರಗಳಲ್ಲಿ ಅಭಿರುಚಿಯಿಂದ ಕೂಡಿ ಸುಮಾರು–ಅರ್ಧ ಶತಮಾನದ ದೀರ್ಘಕಾಲ ಸಕ್ರಿಯ ಚಿಂತನೆ, ಸಂಶೋಧನೆ ಮತ್ತು ಕಾರ್ಯ ಸಾಧನೆಗಳಿಂದ ತನ್ನ ವ್ಯಕ್ತಿತ್ವವನ್ನು ಹಿರಿದಾಗಿಸಿಕೊಂಡ ಸ್ಕಿನ್ನರ್ ೧೯೭೪ ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಿವೃತ್ತರಾದರೂ, ಅದೇ ವಿಶ್ವವಿದ್ಯಾಲಯದಲ್ಲಿ ತಾನು ಸಾಯುವವರೆಗೆ 'ಪ್ರೊಫೆಸರ್ ಎಮೆರಿಟಸ್' ಸ್ಥಾನಮಾನದಿಂದ ಕೂಡಿದ್ದು ಆತನ ಹಿರಿತನದ ಸ್ಪಷ್ಟ ಪುರಾವೆ ಎನ್ನಬಹುದು. ೧೯೫೮ ರಷ್ಟು ಹಿಂದೆಯೇ ಅಮೇರಿಕೆಯ ಮನೋವಿಜ್ಞಾನ ಸಂಘವು ಶ್ರೇಷ್ಠ ವೈಜ್ಞಾನಿಕ ಕೊಡುಗೆಗಾಗಿ, ಸ್ಕಿನ್ನರನಿಗೆ ಕೊಟ್ಟ ಬಹುಮಾನದ ಪ್ರಶಸ್ತಿ ಪತ್ರದಲ್ಲಿ" ಕಲ್ಪನಾಶೀಲ ಹಾಗೂ ಸೃಜನಶೀಲ ವಿಜ್ಞಾನಿ; ವೈಜ್ಞಾನಿಕ ವಿಚಾರಗಳಲ್ಲಿ ಅತ್ಯುತ್ಕೃಷ್ಟ ವಸ್ತುನಿಷ್ಠತೆ ಮತ್ತು ವೈಯಕ್ತಿಕ ಸಂಬಂಧಗಳಲ್ಲಿ ಆತ್ಮೀಯತೆ ಮತ್ತು ಉತ್ಸಾಹಶೀಲತೆಗಳು ಆತನ ಪ್ರಮುಖ ಗುಣಗಳಾಗಿವೆ" ಎಂದು ಪ್ರಶಂಸಿಸಲಾಗಿದೆ.

ಮನುಷ್ಯನು ತನ್ನ ಗುರಿಯನ್ನು ತಾನೇ ರೂಪಿಸಿಕೊಳ್ಳಲು ಸಾಧ್ಯವೆಂಬುದು ಸ್ಕಿನ್ನರನ ದೃಢನಂಬಿಕೆಯಾಗಿತ್ತು. ಯಾಕೆಂದರೆ 'ಏನನ್ನು ಮಾಡಲೇಬೇಕು ಮತ್ತು ಅದನ್ನು ಹೇಗೆ ಮಾಡಬೇಕು ಎಂಬುದು ಆತನಿಗೆ ಗೊತ್ತು' ಎಂಬುದು ಸ್ಕಿನ್ನರನ ಅಭಿಮತ.

ಉತ್ತರ ಅಮೇರಿಕೆಯ ಪೆನ್ಸಿಲ್ವೇನಿಯಾದ ಸಸ್ಕ್ವೆಹನ್ನ ಎಂಬ ಸಣ್ಣ ಪಟ್ಟಣದಲ್ಲಿ,

೧೯೦೪ ನೇ ಮಾರ್ಚ ೨೦ ರಂದು ಬಿ.ಎಫ್. ಸ್ಕಿನ್ನರ್ ಜನ್ಮತಾಳಿದ. ರಾಜಕೀಯ ಮಹದಾಸೆಗಳು ಈಡೇರದೆ ನಿರಾಶನಾದ ಆತನ ತಂದೆ ವಿಲಿಯಂ ಆರ್ಥರ್ ಸ್ಕಿನ್ನರ್ ಒಬ್ಬ ನ್ಯಾಯವಾದಿ. ಆತನ ತಾಯಿಗ್ರೇಸ್ ಮಾಡ್ಗೆ (ಬರ್ರಸ್) ಸ್ಕಿನ್ನರ್. ತನ್ನ ಒಬ್ಬನೇ ತಮ್ಮನನ್ನು ಸ್ಕಿನ್ನರ್ ಚಿಕ್ಕದಿನಲ್ಲಿಯೇ ಕಳೆದುಕೊಂಡ. ಆತನ ಬಾಲ್ಯಜೀವನ ಸುಖಸಂತೋಷಗಳಿಂದಲೇ ಕಳೆಯಿತು. ಜೊತೆಜೊತೆಗೆ ಹಲವು ಸಾಮಾಜಿಕ ನಿಯಂತ್ರಣಗಳು ಹಾಗೂ ನಿರೋಧಗಳಿಗೂ ಆತ ಒಳಗಾಗಿದ್ದ. ಬಾಲಕ ಸ್ಕಿನ್ನರನ ಅಚ್ಚುಮೆಚ್ಚಿನ ಹವ್ಯಾಸವೆಂದರೆ ಸಾಧನ ಸಲಕರಣೆಗಳ ರೂಪಣೆ. ಉದಾಹರಣೆಗೆ ಹೊಸೆದ ರಬ್ಬರ್‌ಬ್ಯಾಂಡ್‌ಗಳಿಂದ ಚಲಿಸುತಿದ್ದ ಮಾದರಿ ವಿಮಾನಗಳು, ಪೆಟ್ಟಿಗೆ ಗಾಳಿಪಟಗಳು ಇತ್ಯಾದಿಗಳನ್ನು ಆತ ನಿರ್ಮಿಸಿದ್ದ. 'ನಾನೇ ಹಾರಲು ಸಾಧ್ಯವಾಗಬಹುದಾದ ಒಂದು ಎಂಜಿನ್ನಿಲ್ಲದ ಫಲಕವಿಮಾನ (glider) ವನ್ನು ನಿರ್ಮಿಸಲು ಪದೇಪದೇ ಪ್ರಯತ್ನಿಸಿದ್ದೆ' ಎಂದು ಆತನೇ ಹೇಳಿಕೊಂಡಿದ್ದಾನೆ.

ಸ್ಕಿನ್ನರನ ಪ್ರೌಢಶಾಲಾವ್ಯಾಸಂಗ ಸಸ್ಕ್ವೆಹನ್ನಾದಲ್ಲೆ ೧೯೨೨ ರಲ್ಲಿ ಮುಗಿಯಿತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಆತನು ನ್ಯೂಯಾರ್ಕಿನ ಕ್ಲೀಟನ್ನಿನಲ್ಲಿ ಹ್ಯಾಮಿಲ್‌ಟನ್ ಕಾಲೇಜು ಸೇರಿದ. ತನ್ನ ಅಧ್ಯಯನಕ್ಕೆ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯವನ್ನು ಪ್ರಧಾನ ವಿಷಯವನ್ನಾಗಿಯೂ ಶಾಸ್ತ್ರೀಯ ಮತ್ತು ಭಾವಶೀಲ ಭಾಷೆಗಳನ್ನು ಉಪವಿಷಯಗಳನ್ನಾಗಿಯೂ ಅಭ್ಯಾಸಮಾಡಿದ. ಹೀಗಾಗಿ ಮೊದಮೊದಲು ಆತನು ಸಾಹಿತ್ಯಕ ಚಟುವಟಿಕೆಗಳಲ್ಲಿ ಗಮನಹರಿಸಿದ್ದು ಕಂಡುಬರುತ್ತದೆ. ಹ್ಯಾಮಿಲ್‌ಟನ್ ಕಾಲೇಜಿನ ಸಾಹಿತ್ಯಕ ಮತ್ತು ವಿನೋದ ಸಂಕೀರ್ಣ ಪತ್ರಿಕೆಗಳಿಗೆ ಕವನಗಳು ಮತ್ತು ಲೇಖನಗಳನ್ನು ಬರೆಯುತ್ತಿದ್ದ. ಆ ಕಾಲೇಜಿನಲ್ಲಿದ್ದಾಗಲೇ, ಸ್ಕಿನ್ನರ್ ವರ್ಮೌಂಟಿನ ಮಿಡಲ್ಬರಿ ಸಮೀಪವಿದ್ದ ಬ್ರೆಡ್‌ಲೋಫ್‌ನಲ್ಲಿ ನಡೆಯುತ್ತಿದ್ದ ಬೇಸಿಗೆ ಇಂಗ್ಲಿಷ್ ಶಾಲೆಯಲ್ಲೂ ಕಲಿತ. ಅಲ್ಲಿ ರಾಬರ್ಟ್ ಫ್ರಾಸ್ಟ್‌ನ ಸಂಪರ್ಕವಾದುದರ ಜೊತಗೆ ಸ್ಕಿನ್ನರನ ಸಾಹಿತ್ಯಕ ಆಶಯಗಳಿಗೂ ಆತನಿಗೆ ಪ್ರೋತ್ಸಾಹ ಸಿಕ್ಕಿತು. ಪ್ರಸಿದ್ಧ phi Beta Kappa ಸಂಘಕ್ಕೆ ಸ್ಕಿನ್ನರ್ ಚುನಾಯಿತನಾದ ಹಾಗೂ ಆತನಿಗೆ ಹಾಲ್ವೆ ಗ್ರೀಕ್ ಬಹುಮಾನ ಸಿಕ್ಕಿತು. ೧೯೨೬ ರಲ್ಲಿ ಆತ ಎ.ಬಿ. ಪಧವೀದರನಾದ. ಆ ಪದವಿ ದೊರೆತನಂತರವೂ ಒಂದು ವರ್ಷದವರೆಗೆ, ಪೆನ್ಸಿಲ್ವೇನಿಯಾದ ಸ್ಕ್ರಾನ್‌ಟನ್‌ನಲ್ಲಿ ತನ್ನ ತಂದೆತಾಯಿಗಳ ಮನೆಯಲ್ಲಿ ಕಲ್ಪಿತ ಕಥೆಗಳನ್ನು ಅದರಲ್ಲಿಯೂ ಹೆಚ್ಚಾಗಿ ಸಣ್ಣಕತೆಗಳನ್ನು ಸ್ಕಿನ್ನರ ಬರೆದ. ಇದಕ್ಕೆ ಫ್ರಾಸ್ಟನ್ ಪ್ರಭಾವವೇ ಕಾರಣ.

ಸ್ಕಿನ್ನರನ ಸಾಹಿತ್ಯಾಸಕ್ತಿ ಬಹುದಿನ ಉಳಿಯಲಿಲ್ಲ. "ನಾನು ಹೇಳುವುದು ಏನೂ ಇಲ್ಲ ಎಂಬ ಅಪ್ರಿಯ ಸತ್ಯವನ್ನು ನಾನು ಕಂಡು ಕೊಂಡೆ" ಎಂದು ಸ್ಕಿನ್ನರನೇ ಹೇಳಿದ್ದಾನೆ. ಆದರೂ ಸಾಹಿತ್ಯಾಭ್ಯಾಸ ಮತ್ತು ಸಾಹಿತ್ಯಕ ಬರೆಹಗಳು ಮಾನವ ವರ್ತನೆಯತ್ತ ಅವನ ಮನಸ್ಸನ್ನು ಸೆಳೆದುವೆಂದೇ ಹೇಳಬೇಕು. ಅಲ್ಲದೇ ಅಂದು ಪ್ರಚಲಿತವಿದ್ದ ವರ್ತವಾದದ ಬಗ್ಗೆ ಬರ್ಟ್ರಂಡ್ ರಸೆಲ್ ಬರೆದ ಲೇಖನಗಳು, ಜೆ.ಬಿ.ವಾಟ್ಸನ್ನನ ಬರೆಹಗಳೂ ಆತನ ಮೇಲೆ ಪ್ರಭಾವಬೀರಿದವು. ಹೀಗಾಗಿ ೧೯೭೮ ರಲ್ಲಿ ಸ್ಕಿನ್ನರ್ ಹಾರ್ವರ್ಡ್ ವಿಶ್ವವಿದ್ಯಾಲಯವನ್ನು ಸೇರಿ ಮನೋವಿಜ್ಞಾನ ಎಂ. ಎ. ಪದವಿಯನ್ನು ೧೯೩೦ ರಲ್ಲಿಪಡೆದು ಮರುವರ್ಷವೇ ಪಿಎಚ್.ಡಿ. ಪದವಿಯನ್ನು

ಪಡೆದ. ಮುಂದೆ ತನ್ನ ಜೀವಿತಾದ್ಯಂತ ಮನೋವಿಜ್ಞಾನ ಕ್ಷೇತ್ರದಲ್ಲೇ ದುಡಿದು ಅಪೂರ್ವ ಕೊಡುಗೆಗಳನ್ನು ಸ್ಕಿನ್ನರ್ ಕೊಟ್ಟಿದ್ದಾನೆ.

ತಾನೊಬ್ಬ ವೈಜ್ಞಾನಿಕ ಮನೋವಿಜ್ಞಾನಿಯಾಗಬೇಕೆಂಬುದು ಸ್ಕಿನ್ನರನ ದೃಢನಿರ್ಧಾರವಾಗಿತ್ತು. ಇದಕ್ಕೆ ಜೆ.ಬಿ. ವ್ಯಾಟ್ಸನ್ನನೇ ಪ್ರೇರಕಶಕ್ತಿ. ಅವಲೋಕನ ಸಾಧ್ಯ ವರ್ತನೆಯೇ ಮನೋವಿಜ್ಞಾನದ ಅಧ್ಯಯನವಸ್ತುವೆಂಬುವದಾಗಿ ವ್ಯಾಟ್ಸನ್ನನಂತೆ ಸ್ಕಿನ್ನರನೂ ನಂಬಿ ವ್ಯವಹರಿಸಿದ. ವರ್ತನೆಯನ್ನು ವಿವರಿಸಲು ಅವಲೋಕನ ಸಾಧ್ಯ ವಿಷಯಗಳ ಅಧ್ಯಯನಗಳಿಗೆ ತನ್ನ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಿದ.

ಡಾಕ್ಟರೇಟ್ ಪದವಿ ಪಡೆದನಂತರ ಐದು ವರ್ಷಗಳ ಕಾಲ ಸ್ಕಿನ್ನರ ಸಂಶೋಧನಾ ವಿದ್ಯಾರ್ಥಿಯಾಗಿ ಹಾರ್ವರ್ಡ್‌ನಲ್ಲೇ ಉಳಿದದ್ದರಿಂದ ಆತನ ಪ್ರಾಯೋಗಿಕ ಆಸಕ್ತಿ ಮತ್ತು ಕ್ರಿಯೆಗಳು ಬಲಗೊಂಡವು ಎಂದು ಹೇಳಬಹುದು.

ಪ್ರಾಯೋಗಿಕ ವಿಧಾನದಲ್ಲಿ ಸ್ಕಿನ್ನರನಿಗೆ ತುಂಬಾ ನಿಷ್ಠೆ. ಈ ನಿಷ್ಠೆಯನ್ನು ಸಾಕಾರಗೊಳಿಸಲು ಆತನು ಹಾರ್ವರ್ಡ್ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಯಂತ್ರಾಗಾರವನ್ನೇ ತನ್ನ ಸಕ್ರಿಯ ಕಾರ್ಯಾಗಾರವನ್ನಾಗಿ ಮಾಡಿಕೊಂಡ. ತನ್ನ ಪ್ರಸಿದ್ಧ 'ಸ್ಕಿನ್ನರ್ ಪೆಟ್ಟಿಗೆ' ಯನ್ನು ಸ್ಕಿನ್ನರ್ ರೂಪಿಸಿದ್ದು ಇಲ್ಲಿಯೇ. ಜೀವಿಯ ವರ್ತನಾ ವಿನ್ಯಾಸಗಳನ್ನು ಅವಲೋಕಿಸಿ ದಾಖಲು ಮಾಡಲು ಒಂದು ನಿಯಂತ್ರಿತ ಪ್ರತ್ಯಾವರಣ ಈ ಪೆಟ್ಟಿಗೆ. ಇದರಲ್ಲಿ ಎರಡು ವಿಭಾಗಗಳಿರುತ್ತವೆ.

*ಒಂದು ವಿಭಾಗ ಜೀವಿಗಾಗಿ ಮೀಸಲಾಗಿದ್ದರೆ, ಮತ್ತೊಂದು ವಿಭಾಗದಲ್ಲಿ ಒಂದು ಉಪಕರಣವನ್ನು ಜೋಡಿಸಲಾಗಿರುತ್ತದೆ. ಈ ಉಪಕರಣದಲ್ಲಿ ಎರಡು ಯಾಂತ್ರಿಕ ರಚನೆಗಳಿರುತ್ತವೆ. ಜೀವಿ ಸನ್ನೆಯನ್ನು ಅದುಮಿದಾಗ ಒಂದು ಚೂರು ಆಹಾರ ತಾನಾಗಿಯೆ ಒದಗುವುದು ಒಂದು ಯಾಂತ್ರಿಕ ವ್ಯವಸ್ಥೆಯಾದರೆ, ಅನುಕ್ರಿಯೆಯ ವೇಗವನ್ನು ದಾಖಲು ಮಾಡಿಕೊಳ್ಳಲು ಯಾಂತ್ರಿಕವಾಗಿ ಚಲಿಸುತ್ತಿರುವ ಟೇಪು ಮತ್ತೊಂದು ವ್ಯವಸ್ಥೆಯಾಗಿರುತ್ತದೆ .ಈ ಪೆಟ್ಟಿಗೆಯನ್ನು ನಾನಾರೀತಿಯಲ್ಲಿ ಮಾರ್ಪಡಿಸಿಕೊಂಡು, ವಿವಿಧ ರೀತಿಯ ಅನುಕ್ರಿಯೆಗಳ ಅಧ್ಯಯನಕ್ಕಾಗಿ ಬೇರೆ ಬೇರೆ ಸಂಶೋಧಕರು ಬಳಸಿಕೊಂಡಿದ್ದರೆ ಅವರು ಮಾಡಿಕೊಂಡ ಬದಲಾವಣೆಗಳು ಮುಖ್ಯವಾಗಿ ಪುನರ್ಬಲನ, ಆಂತರಿಕ ಶಾರೀರಿಕ ಸ್ಥಿತಿಗತಿಗಳು ಮತ್ತು ಮಸ್ತಿಷ್ಕ ಸಂಕ್ಷೋಭೆಗಳ ಬದಲಾವಣೆಗೆ ಸಂಬಂಧಿಸಿವೆ.

ಹೀಗೆ ಸರಳವೆನಿಸಿದರೂ ಬಹುಉಪಯುಕ್ತವೆನಿಸಿದ ಈ ಪ್ರಯೋಗ ಪರಿಕರವನ್ನು ಬಳಸಿಕೊಂಡು ಸ್ಕಿನ್ನರ್ ಹಲವು ಪ್ರಯೋಗಗಳನ್ನು ನಡೆಸಿ ತನ್ನ ಪ್ರಸಿದ್ಧ 'ಕ್ರಿಯಾಪ್ರಸೂತ ಅನುಬಂಧನ' ಸಿದ್ಧಾಂತವನ್ನು ರೂಪಿಸಿದ. ಕ್ರಿಯಾಪ್ರಸೂತ ಅನುಬಂಧನ ಮನೋವಿಜ್ಞಾನಕ್ಕೆ ಸ್ಕಿನ್ನರ್ ಕೊಟ್ಟ ಒಂದು ಅಪೂರ್ವ ಪ್ರಾಯೋಗಿಕ ವಿಧಾನವೂ ಹೌದು. ಒಂದು ಜೀವಿಯು ತನ್ನ ಪ್ರತ್ಯಾವರಣದೊಂದಿಗೆ ಹೇಗೆ ವ್ಯವಹರಿಸುತ್ತದೆ ಎಂಬುದನ್ನು ವಿಶ್ಲೇಶಿಸಲು ಈ ವಿಧಾನ ತುಂಬಾ ಉಪಯುಕ್ತವೆನಿಸಿತು.

ಮನೋವಿಜ್ಞಾನ ಪ್ರಯೋಗ ಕಾರ್ಯದಲ್ಲಿ ಸ್ಕಿನ್ನರ್ ತೋರಿಸಿದ ನವೀನತೆ ಆತನಿಗೆ ಮಾನ್ಯತೆ ತಂದುಕೊಟ್ಟದ್ದರಲ್ಲಿ ಸಂಶಯವಿಲ್ಲ. ಮುಂದೆ ಆತನು ಹಾರ್ವರ್ಡ್‌ನಿಂದ ಮಿನೆಸೋಟಾ ವಿಶ್ವವಿದ್ಯಾಲಯಕ್ಕೆ ಹೋದ. ಅಲ್ಲಿ ೧೯೩೬–೩೭ ರ ವರೆಗೆ ಶಿಕ್ಷಕನಾಗಿಯೂ ೧೯೩೭ ರಿಂದ ೩೯ ರ ವರೆಗೆ ಸಹಾಯಕ ಪ್ರಾಧ್ಯಾಪಕನಾಗಿಯೂ ಮತ್ತು ೧೯೩೯ ರಿಂದ ೪೫ ರವರೆಗೆ ಸಹಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. ಇಲ್ಲಿರುವಾಗಲೇ ಕೆಲವು ಸಂಶೋಧನಾ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಆತನಿಗೆ ಅವಕಾಶ ಸಿಕ್ಕಿತು. ಆತನು ಕೈಗೊಂಡ ಯೋಜನೆಗಳಲ್ಲಿ ಮುಖ್ಯವಾಗಿ ಎರಡು ಗಮನಾರ್ಹ. ಮೊದಲನೆಯದಾಗಿ, ಮಾತಿನಲ್ಲಿ (ಶಾಬ್ದಿಕ ವರ್ತನೆಯಲ್ಲಿ) ಸಾಪೇಕ್ಷವಾಗಿ ಹಿಂದುಳಿದವರ ಬಗ್ಗೆ ಸಂಶೋಧನೆಯನ್ನು ಆತ ನಡೆಸಿದ್ದು, ಇದಕ್ಕಾಗಿ ಆತನಿಗೆ ಗಗ್ಗನ್‌ಹೀಮ್ ಸಂಶೋಧನಾ ವೇತನ ೧೯೪೪–೪೫ ನೇ ಶೈಕ್ಷಣಿಕ ವರ್ಷಕ್ಕೆ ಸಿಕ್ಕಿತು. ಮಾತನಾಡಲು ವ್ಯಕ್ತಿಯು ತೋರುವ ನಿಜವಾದ ಕ್ರಿಯೆಯೇ ಶಾಬ್ದಿಕ ವರ್ತನೆ ಎಂಬುದನ್ನು ಸ್ಕಿನ್ನರ್ ಈ ಸಂಶೋಧನೆಯಿಂದ ಮನಗಂಡ.

ತನ್ನ ಕ್ರಿಯಾ ಪ್ರಸೂತ ಅನುಬಂಧನ ಸಿದ್ಧಾಂತದ ಅನ್ವಯಕ್ಕೆ ಸ್ಕಿನ್ನರನಿಗೆ ದೊರೆತ ಸದವಕಾಶವೆಂದರೆ ಆತನ 'ಪಾರಿವಾಳ ಯೋಜನೆ' (Pigeon Project), ಎರಡನೇ ಜಾಗತಿಕ ಯುದ್ಧದಲ್ಲಿ ೧೯೪೦ ರಲ್ಲಿ ನಾಜಿಗಳು ವಾರ್ಸಾಮೇಲೆ ಹಾಕಿದ ಬಾಂಬುಗಳ ನೆನಪು ಸ್ಕಿನ್ನರನನ್ನು ಕಾರ್ಯಪ್ರವೃತ್ತನಾಗಿಸಿತು,.ಕ್ಷಿಪಣಿಗಳ ನೆಲೆ ನಿರ್ದೇಶನ ಮಾಡಲು ಪಾರಿವಾಳಗಳಿಗೆ ತರಬೇತಿ ಕೊಡಲು ಸಾಧ್ಯವೆಂದು ಅರಿತು ಆ ದಿಸೆಯಲ್ಲಿ ಪ್ರಯೋಗಗಳನ್ನು ಸ್ಕಿನ್ನರ ನಡೆಸಿದ. ಈ ಯೋಜನೆಗೆ ೧೯೪೩ ರಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಅಭಿವೃದ್ಧಿ ಕಚೇರಿಯಿಂದ ಆತನಿಗೆ ಅನುದಾನ ಸಿಕ್ಕಿತು. ಕ್ಷಿಪಣಿಗಳ ನೆಲೆನಿರ್ದೇಶನಕ್ಕಾಗಿ ಪಾರಿವಾಳಗಳಿಗೆ ತರಬೇತಿ ಕೊಡಲು ಸ್ಕಿನ್ನರ್ ಸಮರ್ಥನಾದ. ಆದರೆ ಅಂತಹ ತರಬೇತಿಯನ್ನು ವಾಸ್ತವವಾಗಿ ಬಳಸುವ ಸಮಯ ಒದಗದ್ದರಿಂದ ಆ ಯೋಜನೆ ಒಂದು ರೀತಿ ಅಪೂರ್ಣವಾಗಿಯೇ ಉಳಿಯಿತು ಎಂದು ಹೇಳಬಹುದು.

ಬ್ಲೂಮಿಂಗ್ಟನ್ನಿನ ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ೧೯೪೫ ರಿಂದ ೪೮ರ ವರೆಗೆ ಸ್ಕಿನ್ನರ್ ಮನೋವಿಜ್ಞಾನ ಪ್ರಾಧ್ಯಾಪಕನಾಗಿಯೂ ಮನೋವಿಜ್ಞಾನ ವಿಭಾಗದ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ. ಆತನಿಗೆ ಆಡಳಿತದ ಹೊಣೆಗಾರಿಕೆಯು ಹೆಚ್ಚಿದ್ದ ಕಾರಣ, ಒಂದು ರೀತಿಯಲ್ಲಿ ಈ ಅವಧಿಯು ಹೆಚ್ಚು ಉತ್ಪಾದಕವಾಗಿತ್ತು. ತನ್ನ ಪ್ರಾಯೋಗಿಕ ಕಾರ್ಯವನ್ನವಲಂಬಿಸಿದ ವರ್ತನವಾದದ ಆಂದೋಲನವು ಪ್ರಾರಂಭವಾದುದನ್ನು ಸ್ಕಿನ್ನರ್ ಗಮನಿಸಿದ. ೧೯೪೬ ರಲ್ಲಿ ವರ್ತನ ವಿಶ್ಲೇಷಣೆಗೆ ಸಂಬಂಧಿಸಿದಂತೆ ಮೊಟ್ಟಮೊದಲಿಗೆ ಒಂದು ಸಮ್ಮೇಳನವನ್ನು ನಡೆಸಿದ. ಅಂದಿನಿಂದ ಆ ಸಮ್ಮೇಳನವು ವಾರ್ಷಿಕ ಘಟನೆಯಾಯಿತಲ್ಲದೆ ಮುಂದೆ ಸ್ವಲ್ಪಕಾಲದಲ್ಲಿಯೇ ಅದು ಅಮೇರಿಕೆಯ ಮನೋವಿಜ್ಞಾನ ಸಂಘದ ಒಂದು ವಿಭಾಗವಾಗಿ ಪರಿಣಮಿಸಿತು. ಅಲ್ಲದೆ ಮುಂದೆ ೧೯೫೮ ರಲ್ಲಿ ವರ್ತನೆಯ ಪ್ರಾಯೋಗಿಕ ವಿಶ್ಲೇಷಣ ನಿಯತಕಾಲಿಕ (The Journal of the Experimental Analysis of Behaviour) ಪ್ರಾರಂಭವಾಗಲು ಇದು ಮೂಲವಾಯಿತು.

ಸ್ಕಿನ್ನರ್ ನಿರ್ಮಿಸಿದ 'ಗಾಳಿ–ತೊಟ್ಟಿಲ' (Air Crib) ೧೯೪೫ರಲ್ಲಿ ಸಾರ್ವಜನಿಕರ ಅದರಲ್ಲಿಯೂ ತಾಯಂದಿರ ಗಮನ ಸೆಳೆಯಿತು. ತನ್ನ ಎರಡನೇ ಮಗಳ ಬೆಳವಣಿಗೆಗಾಗಿ ಸ್ಕಿನ್ನರ ಈ ತೊಟ್ಟಿಲನ್ನು ನಿರ್ಮಿಸಿದ್ದ. ಸಾಮಾನ್ಯ ತೊಟ್ಟಿಲು ಗಾತ್ರದ ಈ ಸಲಕರಣೆ ಒಂದು ಪೆಟ್ಟಿಗೆಯ ರೂಪದಲ್ಲಿದ್ದು, ಹವಾ–ನಿಯಂತ್ರಣ ಮತ್ತು ಶಬ್ದ–ನಿಯಂತ್ರಣಗಳಿಂದ ಕೂಡಿರುತ್ತದೆ. ಅಲ್ಲದೆ ಅದರಲ್ಲಿ ಅದಕ್ಕೆ ಸುರಕ್ಷಿತ ಗಾಜಿನಿಂದ ಮಾಡಿದ ಜಾರುವ ಕಿಟಕಿ ಇರುತ್ತದೆ. ಈ ತೊಟ್ಟಿಲು ಬೆಳೆಯುವ ಮಗುವಿಗೆ ನಿರ್ಮಿಸಲಾದ ಒಂದು ಹಿತಕರ ಪ್ರತ್ಯುಪಕರಣ. ಮಗುವು ಬಟ್ಟೆಗಳಿಲ್ಲದೆ ಅಥವಾ ಹೊದಿಕೆಗಳಿಲ್ಲದೆ ಈ ತೊಟ್ಟಿಲಲ್ಲಿ ನಿದ್ರಿಸಲು ಅಥವಾ ಆಟವಾಡಲು ಸಾಧ್ಯವಿರುತ್ತದೆ. ಅದರಲ್ಲಿ ಮಗುವಿಗೆ ಸ್ಪರ್ಶ ಹಾಗೂ ದೃಷ್ಟಿ ಪ್ರಚೋದನೆಗಳನ್ನು ಒದಗಿಸಬಲ್ಲಂತಹ ನಾನಾ ರೀತಿಯ ಪದಾರ್ಥಗಳನ್ನು ಇಳಿಬಿಟ್ಟಿರಲಾಗುತ್ತದೆ. ಒಂದು ರೀತಿಯಲ್ಲಿ ಮಗುವಿಗೆ ಸುಖಕರವಾದ ಮತ್ತು ಪ್ರಚೋದನಕಾರಿಯಾದ ಪ್ರತ್ಯಾವರಣವನ್ನು ಒದಗಿಸುವುದೇ ಇಂತಹ ತೊಟ್ಟಿಲದ ಪ್ರಮುಖ ಉದ್ದೇಶ. ಈ ಸಲಕರಣೆಯು ಸಾಕಷ್ಟು ಸಾರ್ವಜನಿಕ ಆಸಕ್ತಿಯನ್ನು ಕೆರಳಿಸಿತಾದರೂ, ಹಲವು ಪ್ರಮುಖ ಮಕ್ಕಳ ವೈದ್ಯರೂ ಮಕ್ಕಳ ಮನೋವಿಜ್ಞಾನಿಗಳೂ ಅದರ ಉಪಯುಕ್ತತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಒಂದು ರೀತಿಯಲ್ಲಿ ಅದು ಒಂದು ವಿಶೇಷರೀತಿಯ ತೊಟ್ಟಿಲೆಂಬುದು ಅದರ ಆಶಿತ ಮೌಲ್ಯವನ್ನು ಕಡಿಮೆಮಾಡಿತೆಂದು ಹೇಳಬಹುದು.

ವಿಲಿಯಂ ಜೇಮ್ಸ ಅಧ್ಯಾಪಕನಾಗಿ ಸ್ಕಿನ್ನರ್ ೧೯೪೭ ರಲ್ಲಿ ಹಾರ್ವರ್ಡ್‌ಗೆ ವಾಪಸಾದ ಮರುವರ್ಷವೇ ಆತ ಪ್ರಾಧ್ಯಾಪಕನಾದ. ಆ ವರ್ಷವೇ ಆತನ 'ವಾಲ್ಡನ್ ಟೂ' ಎಂಬ ಕಾದಂಬರಿ ಪ್ರಕಟವಾಗಿ ವಿವಾದಗಳ ಅಲೆ ಎಬ್ಬಿಸಿತು. ಕ್ರಿಯಾಪ್ರಸೂತ ಅನುಬಂಧನ ತತ್ತ್ವದ ಆಧಾರದಮೇಲೆ ರೂಪುಗೊಳ್ಳುವ ಒಂದು ಆದರ್ಶ ಮಾನವ ಸಮಾಜದ ಚಿತ್ರ ವಾಲ್ಡನ್ ಟೂ. ೧೯೬೦ ಮತ್ತು ೭೦ ರ ದಶಕಗಳ ಕಾಲೇಜು ವಿದ್ಯಾರ್ಥಿಗಳನ್ನು ಈ ಕಾದಂಬರಿ ಆಕರ್ಷಿಸಿತು. ಅದರ ಹಲವು ಆವೃತ್ತಿಗಳು ಪ್ರಕಟವಾದವು. ಪರ–ವಿರೋಧಿ ವಿಮರ್ಶಕರು ಕಾಣಿಸಿಕೊಂಡರು. ಕೆಲವರು ಸ್ಕಿನ್ನರನ ಪ್ರಯತ್ನವನ್ನು ಹೊಗಳಿದರೆ, ಹಲವರು ಕಟುವಾಗಿ ಟೀಕಿಸಿದರು. 'ಪರಿಪೂರ್ಣ ಮಾನವಕುಲವನ್ನು ರೂಪಿಸುವ ನೆಪದಲ್ಲಿ, ಅಭ್ಯಾಸ ಮತ್ತು ಪೂರ್ವಗ್ರಹಗಳನ್ನು ಬಿಟ್ಟು ಮತ್ತೇನನ್ನೂ ಮಾಡಲು ಅಸಮರ್ಥರಾದ ವ್ಯಕ್ತಿಗಳನ್ನು ರೂಪಿಸುವ ಹವಣಿಕೆ' ಎಂದೂ ಜರೆದಿದ್ದಾರೆ. ಆದರೂ ಸ್ಕಿನ್ನರನ ಕಾದಂಬರಿಯಿಂದ ಪ್ರೇರಿತನಾಗಿ ರೂಪಗೊಂಡ ವರ್ಜಿನಿಯಾದ 'ಟ್ವಿನ್ ಓಕ್ಸ್' ಮತ್ತು ಮಿಸ್ಸೋರಿಯ 'ಈಸ್ಟ್‌ವಿಂಡ್' ಎಂಬ ಸಮಾಜಗಳು ಲೋಕದ ಗಮನವನ್ನು ಹೊರನೋಟಕ್ಕೆ ಸೆಳೆಯುವಂತೆ ಇದ್ದರೂ ಸ್ಕಿನ್ನರನೇ ಒಪ್ಪಿಕೊಳ್ಳುವಂತೆ ಆ ಸಮಾಜಗಳಲ್ಲಿರುವವರು ಒಳ್ಳೆಯ ವರ್ತನವಾದಿಗಳಲ್ಲ. ಅಲ್ಲಿ ಇದ್ದು ಹೋಗುವವರ ಸಂಖ್ಯೆಯೇ ಹೆಚ್ಚು ಎಂಬುದು ಗಮನಾರ್ಹ. ಆದರೂ 'ವಾಲ್ಡನ್ ಟೂ' ಕಾದಂಬರಿಯನ್ನು ಬರೆದ ನಂತರ, 'ಮಾನವ ವರ್ತನೆಯ ನಿಯಂತ್ರನದಲ್ಲಿ ಅಂತರ್ಗತವಾಗಿರುವ ಸಮಸ್ಯೆಗಳನ್ನು ನಾನು ಬಿಡಿಸಿದ್ದೇನೆ. ಎಂಬ ಸಂತೃಪ್ತಿ ನನಗಿದೆ' ಎಂದು ಸ್ಕಿನ್ನರ್ ಹೇಳಿಕೊಂಡಿದ್ದಾನೆ. ವಿಶ್ಲೇಷಣೆಗಳ ಜೊತೆಗೆ, ತನ್ನ ಸಂಶೋಧನೆಗಳನ್ನು ಆಧರಿಸಿದ ಕೃತಿಗಳ ರಚನೆಯಲ್ಲಿ ಸ್ಕಿನ್ನರ್ ದಶಕಗಳ ಕಾಲ ನಿರತನಾಗಿದ್ದು ಕಂಡುಬರುತ್ತದೆ.

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ 'ಮಾನವ ವರ್ತನೆ' ಎಂಬ ಪಠ್ಯ ವಿಷಯವನ್ನು ಬೋಧಿಸುವ ಹೊಣೆಗಾರಿಕೆ ಸ್ಕಿನ್ನರ ಮೇಲೆ ಬಿದ್ದಾಗ, ಆ ವಿಷಯಕ್ಕೆ ಅನುಗುಣವಾದ ಪಠ್ಯಪುಸ್ತಕ ವಿಲ್ಲದ್ದು ಆತನ ಗಮನಕ್ಕೆ ಬಂತು. ಆ ಕೊರತೆಯನ್ನು ನೀಗಿಸಲು ಆತನು 'ವಿಜ್ಞಾನ ಮತ್ತು ಮಾನವ ವರ್ತನೆ' (Science and human Behaviour) ಎಂಬ ಕೃತಿಯನ್ನು ೧೯೫೩ರಲ್ಲಿ ರಚಿಸಿದ. ಹೆಚ್ಚು ಜಟಿಲ ಜೀವಿಯಾದ ಮಾನವ ಮತ್ತು ಆತನ ಪ್ರತ್ಯಾವರಣದ ಅಧ್ಯಯನಕ್ಕೆ ವರ್ತನ ವಿಜ್ಞಾನದ ತತ್ತ್ವಗಳು ಮತ್ತು ಸಿದ್ಧಾಂತಗಳನ್ನು ಅಳವಡಿಸಿರುವುದಲ್ಲದೆ, ವ್ಯಕ್ತಿ ಮತ್ತು ಸಮೂಹ ವರ್ತನೆಗಳನ್ನು ಪರಿಗಣಿಸಿ ಅವುಗಳಲ್ಲಿ ಸರ್ಕಾರ ಮತ್ತು ಮತಧರ್ಮಗಳಂತಹ ನಿಯಂತ್ರಕ ನಿಯೋಗಗಳ ಪಾತ್ರಗಳೇನೆಂಬುದನ್ನು ಪ್ರಸ್ತಾಪಿಸಿದ್ದಾನೆ. ಹಲವರ ಪ್ರಶಂಸೆಗೆ ಪಾತ್ರವಾದ ಈ ಕೃತಿ ಮಾನವ ವರ್ತನೆಯ ನೈಸರ್ಗಿಕ ವಿಜ್ಞಾನದ ಅಗತ್ಯವನ್ನು ಪ್ರತಿಪಾದಿಸುತ್ತದೆ.

ಸ್ಕಿನ್ನರನ ಕಾರ್ಯದ ವಿಸ್ತೃತ ಅನ್ವಯವನ್ನು ನಾವು ಕಾಣುವುದು ವಿಶೇಷವಾಗಿ ಭಾಷಾಶಾಸ್ತ್ರ, ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ. ಮಾನವನ ಮಾತಿನ ರಚನೆ ಮತ್ತು ಸ್ವಭಾವಗಳು ಸ್ಕಿನ್ನರನನ್ನು ಬಹುವಾಗಿ ಆಕರ್ಷಿಸಿದವು. ಆತನು ಸಾಹಿತ್ಯ, ಮನೋವಿಜ್ಞಾನ ಎಂಬ ಪಾಠ ವಿಷಯವನ್ನು ಬೋಧಿಸಿದ್ದುಂಟು. 'ಶಾಬ್ದಿಕ ವರ್ತನೆ' ಎಂಬ ತನ್ನ ಕೃತಿಯನ್ನು ೧೯೫೭ರಲ್ಲಿ ಪ್ರಕಟಿಸಿದ. ಪ್ರಾಣಿಗಳ ವರ್ತನೆಯ ಅಧ್ಯಯನದ ಮೂಲಕ ಆತನು ಪ್ರತಿಪಾದಿಸಿದ ಕ್ರಿಯಾಪ್ರಸೂತ ಅನುಬಂಧನ ನಿಯಮಗಳು ಶಾಬ್ದಿಕ ವರ್ತನೆಯಲ್ಲಿ ಕ್ರಿಯಾಶೀಲವಾಗಿರುವುದನ್ನು ಸ್ಕಿನ್ನರ್ ಈ ಪುಸ್ತಕದಲ್ಲಿ ಸ್ಪಷ್ಟಪಡಿಸಿದ್ದಾನೆ. ಸ್ಕಿನ್ನರನ ಈ ಅಭಿಮತಕ್ಕೆ ವಿರೋಧಗಳು ವ್ಯಕ್ತವಾದರೂ, ಕೆಲವರು ಆ ಅಭಿಪ್ರಾಯವನ್ನು ಪುಷ್ಟೀಕರಿಸಿ, ಕಲ್ಪನಾತ್ಮಕ ಅಥವಾ ಸುತ್ತುಬಳಸಿನ ವಿವರಣೆಗಳನ್ನು ಖಂಡಿಸುವಲ್ಲಿ ಸ್ಕಿನ್ನರ್ ಯಶಸ್ವಿಯಾಗಿದ್ದಾನೆ ಎಂದು ಪ್ರಶಂಸಿದ್ದು ಉಂಟು.

ಶೈಕ್ಷಣಿಕ ತಂತ್ರಜ್ಞಾನಕ್ಕೆ ಸ್ಕಿನ್ನರನ ಕೊಡುಗೆ ವಿಶಿಷ್ಟವಾದುದು. ವರ್ತನ ತಂತ್ರಗಳನ್ನು ಈ ಕ್ಷೇತ್ರದಲ್ಲಿ ಆತ ಸಮರ್ಥವಾಗಿ ಬಳಸಿದ್ದು ಕಂಡುಬರುತ್ತದೆ. ಬೋಧನಾ ಯಂತ್ರಗಳನ್ನು ಮತ್ತು 'ಕಾರ್ಯಕ್ರಮಿತ ಶಿಕ್ಷಣ' (Programmed instruction) ಗಳ ಬಗ್ಗೆ ಸಂಶೋಧನೆ ನಡೆಸಿ ಜಯಶಾಲಿಯಾದ. ಪಿಂಗ್ ಪಾಂಗ್ ಆಟವನ್ನು ಕಲಿಸುವಲ್ಲಿ ಪಾರಿವಾಳಗಳ ಪ್ರತಿಯೊಂದು ಸರಿಯಾದ ಚಲನೆಯನ್ನು ಬಹುಮಾನದ ಮೂಲಕ ಪುನರ್ಬಲನ ಗೊಳಿಸುವಂತೆಯೇ ಮಾನವ ಕಲಿಕೆಯಲ್ಲಿಯೂ ಸರಿಯಾದ ವರ್ತನೆಯನ್ನು ಪುನರ್ಬಲನಗೊಳಿಸುವುದು ಸಾಧ್ಯವೆಂಬುದನ್ನು ಮನಗಂಡು, ಅದನ್ನು ಕಾರ್ಯರೂಪಕ್ಕೆ ಸ್ಕಿನ್ನರ್ ತಂದ. ಇಲ್ಲಿ ಸಮಸ್ಯೆಗೆ ಸರಿಯಾದ ಉತ್ತರವೇ, ಬಹುಮಾನ. ಅನೇಕ ಸ್ಥಳೀಯ ಶಾಲೆಗಳಲ್ಲಿ ಕಾರ್ಯಕ್ರಮಿತ ಕಲಿಕೆಯನ್ನು ಪ್ರಾರಂಭಿಸಿದ. ಸಾಂಪ್ರದಾಯಿಕ ತರಗತಿ ವಿಧಾನಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿಯೂ ವೇಗವಾಗಿಯೂ, ಕಾರ್ಯಕ್ರಮಿತಕಲಿಕಾ ವಿಧಾನದಿಂದ ವಿದ್ಯಾರ್ಥಿಗಳು ಕಲಿಯುವುದು ಕಂಡುಬಂದಿತು. ಶಿಕ್ಷಣಕ್ಕೆ ವರ್ತಮಾನವನ್ನು ಅನ್ವಯಿಸುವುದನ್ನು ಸ್ಕಿನ್ನರ್,

'ವರ್ತನೆಯ ವಿಶ್ಲೇಷಣೆ; ಸ್ವಯಂ ಕಲಿಕೆಗೆ ಒಂದು ಕಾರ್ಯಕ್ರಮ' (The Analysis of Behaviour: A programme for Self Instruction) ಮತ್ತು 'ಬೋಧನೆಯ ತಂತ್ರಜ್ಞಾನ' (The Technology of Teaching) ಎಂಬ ಕೃತಿಗಳಲ್ಲಿ ಚರ್ಚಿಸಿದ್ದಾನೆ. ವರ್ತನೆಯ ಶಿಲ್ಪ (Behaviour Engineering) ಕ್ಕೆ ಮೂಲತಃ ಸ್ಕಿನ್ನರನೇ ಕಾರಣನೆಂಬುದು ಹಲವು ಶಿಕ್ಷಣ ಮತ್ತು ಸಾಮಾಜಿಕ ಮನೋವಿಜ್ಞಾನಿಗಳ ಅಭಿಮತ.

ಎಡ್ವಿನ್ ಜೆ. ಬೋರಿಂಗ ನಿವೃತ್ತನಾದ ಮೇಲೆ, ೧೯೫೮ ರಲ್ಲಿ ಸ್ಕಿನ್ನರ್ ಹಾರ್ವರ್ಡ್ ವಿಶ್ವವಿದ್ಯಾಲಯದ ಎಡ್ಗಾರ್ ಪಿಯರ್ಸ್ ಮನೋವಿಜ್ಞಾನ ಪ್ರಾಧ್ಯಾಪಕನಾಗಿ, ಆ ಹುದ್ದೆಯಲ್ಲಿ ೧೯೭೪ ರಲ್ಲಿ ನಿವೃತ್ತನಾಗುವವರೆಗೂ ಉಳಿದ. ಈ ಅವಧಿಯಲ್ಲಿ ಹಲವು ಸಂದರ್ಶಕ ಪ್ರಾಧ್ಯಾಪಕ ಹುದ್ದೆಗಳನ್ನು ಹೊಂದಿದ್ದಲ್ಲದೆ. Beyond freedom and Dignity ಮತ್ತು About Behaviourism, ದಂತಹ ಕೃತಿಗಳನ್ನು ರಚಿಸಿದ. ಇವುಗಳಲ್ಲಿ ಮೊದಲನೆಯದು ಅತ್ಯಂತ ಜನಪ್ರಿಯವೂ ವಿವಾದಗ್ರಸ್ತವೂ ಆದ ಕೃತಿ. ಏನೇ ಆದರೂ 'ಸ್ವಾತಂತ್ರ್ಯ' ವೆಂಬುದು ಭ್ರಮಾತ್ಮಕ. ಯಾಕೆಂದರೆ, ಸೂಕ್ಷ್ಮತರವೂ, ಜಟಿಲವೂ ಆದ ಸಾಂಸ್ಕೃತಿಕ ಮತ್ತು ಪರ್ಯಾವರಣಾತ್ಮಕ ಮೆಚ್ಚು ಮತ್ತು ಚುಚ್ಚುಗಳಿಗೆ ಪ್ರತಿಯೊಬ್ಬನೂ ಒಳಗಾಗಿರುತ್ತಾನೆಂದು ಸ್ಕಿನ್ನರ್ ಹೇಳುತ್ತಾನೆ. ಆದ್ದರಿಂದ ಮಾನವ ಪ್ರತ್ಯಾವರಣವನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸಿದರೆ ಮತ್ತು ವ್ಯವಸ್ಥೆಗೊಳಿಸದರೆ, 'ಸ್ವಾತಂತ್ರ್ಯ' ಅಥವಾ 'ಘನತೆ' ಎಂದೆನ್ನುವ ಸಂಕಲ್ಪನೆಗಳಿಗೆ ಸ್ಥಳವೇ ಇರದು ಎಂಬುದು ಆತನ ಅಭಿಮತ. ಸ್ಕಿನ್ನರನು ಪ್ರತಿಪಾದಿಸುವ ಸಾಮಾಜಿಕ ಶಿಲ್ಪ (Social Engineering) ಕ್ಕೆ ವಿರೋಧವೇ ಹೆಚ್ಚು.

ನಿವೃತ್ತಿಯಾದ ನಂತರ ೧೯೭೫ ರಿಂದ ತನ್ನ ಮರಣದ ವರೆಗೆ ಹಾರ್ವರ್ಡಿನಲ್ಲಿ 'ಪ್ರೊಪೆಸರ್ ಎಮಿರಿಟಸ್' ಆಗಿದ್ದ ಸ್ಕಿನ್ನರನಿಗೆ ಸಂದ ಸನ್ಮಾನಗಳು ಮತ್ತು ಪಾರಿತೋಷಕಗಳು ಹಲವು. ಆತನು ರಾಯಲ್ ಸೊಸೈಟಿ ಆಫ್ ಆರ್ಟ್ಸ್ ಮತ್ತು ಸೈನ್ಸಸ್‌ನ ಫೆಲೋ ಆಗಿದ್ದ. ಅಮೆರಿಕನ್ ಸೈಕಾಲಾಜಿಕಲ್ ಅಸೋಸಿಯೇಷನ್, ಅಮೆರಿಕನ್ ಫಿಲಾಸಫಿಕಲ್ ಸೊಸೈಟಿ, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್, ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಹಾಗೂ ವಿದೇಶಗಳಲ್ಲಿನ ಪ್ರೊಫೆಷನಲ್ ಸೈಕಾಲಜಿಕಲ್ ಸೊಸೈಟಿಗಳ ಸದಸ್ಯನಾಗಿದ್ದ. ಆತನ ವ್ಯಕ್ತಿ ವೃತ್ತಾಂತವು ದಿ ಇಂಟರ್‌ನ್ಯಾಷನಲ್ ಹೂ ಈಸ್ ಹೂ, ಹೂ ಈಸ್ ಹೂ ಇನ್ ಅಮೆರಿಕಾ, ಕರೆಂಟ್ ಬಯಾಗ್ರಫಿ ಮುಂತಾದ ಸುಪ್ರಸಿದ್ಧ ದಾಖಲೆಗಳಲ್ಲಿ ಪ್ರಕಟವಾಗಿದೆ.

ಸ್ಕಿನ್ನರನ ಸಾಧನೆಗೆ ಸಂದ ಬಹುಮಾನಗಳು, ಪಾರಿತೋಷಕಗಳಲ್ಲಿ ಪ್ರಮುಖವಾದವು ನ್ಯಾಷನಲ್ ಮೆಡಲ್ ಆಫ್‌ಸೈನ್ಸ (೧೯೬೮); ದಿ ಗೋಲ್ಡ್ ಮೆಡಲ್ ಆಫ್ ದಿ ಅಮೆರಿಕನ್ ಸೈಕಾಲಾಜಿಕಲ್ ಅಸೋಸಿಯೇಷನ್ (೧೯೭೧); ದಿ ಜೋಸೆಫ್ ಕೆನಡಿ ಜೂ, ಫೌಂಡೇಷನ್ ಅವಾರ್ಡ್ (೧೯೭೧). ಅಲ್ಲದೆ ದೇಶ ವಿದೇಶಗಳ ವಿಶ್ವವಿದ್ಯಾಲಯಗಳಿಂದ ಆತನಿಗೆ ಬಂದ ಗೌರವ ಡಾಕ್ಟರೇಟ್‌ಗಳು ಹಲವು.

ಬಿ.ಎಫ್. ಸ್ಕಿನ್ನರನ ಸುದೀರ್ಘ ಹಾಗೂ ಸಾರ್ಥಕ ಶೈಕ್ಷಣಿಕ ಮತ್ತು ಸಾಮಾಜಿಕ

ಜೀವನದಲ್ಲಿ ಆತನ ಸಹಧರ್ಮಿಣಿ ಯುವೋನೆ ("Eve") ಬ್ಲೂ ಅವರ ಪಾತ್ರ ಹಿರಿದು. ೧೯೩೬ರ ನವೆಂಬರ್ ೧ ರಂದು ಅವರ ಮದುವೆಯಾಗಿದ್ದಿತು. ಅವರ ಇಬ್ಬರು ಹೆಣ್ಣು ಮಕ್ಕಳು ಜೂಲಿ (Mrs Earnest Vargas) ಮನೋವಿಜ್ಞಾನಿ; ಮತ್ತು ದೆಬೋರ್ಗ್ಹಾ(Mrs Barry Buzan) ಕಲಾವಿದೆ. ಸಂತೃಪ್ತ ಕುಟುಂಬ ಜೀವನವನ್ನು ಕಂಡುಂಡ ಸ್ಕಿನ್ನರ್ ಐದು ಅಡಿ ಹತ್ತು ಅಂಗುಲ ಎತ್ತರದ ೧೫೫ ಪೌಂಡು ತೂಕದ, ನೀಲಿ ಕಣ್ಣಿನ ಮತ್ತು ಬಿಳಿತಲೆಕೂದಲದ ಘನತೆವೆತ್ತ ವ್ಯಕ್ತಿ. ತನ್ನ ಇಳಿ ವಯಸ್ಸಿನಲ್ಲಿ ಆತನಿಗೆ ಪ್ರಿಯವಾಗಿದ್ದ ಮನರಂಜನಾ ಚಟುವಟಿಕೆಗಳೆಂದರೆ, ಒಳಾಂಗಣ ಕೈತೋಟದ ಕೆಲಸ, ದೂರದರ್ಶನದಲ್ಲಿ ಹಳೆಯ ಚಲನಚಿತ್ರಗಳನ್ನು ನೋಡುವದು ಮತ್ತು ಅಗಾಥಾ ಕ್ರಿಸ್ಟಿಯ ನಿಗೂಢ ಕಥೆಗಳನ್ನು ಓದುವುದು. ತಾನು ರೂಪಿಸಿದ ಕ್ರಿಯಾಪ್ರಸೂತ ಅನುಬಂಧನದ ನಿಯಮಗಳನ್ನು ಸ್ಕಿನ್ನರ್ ತನಗೇ ಅನ್ವಯಿಸಿಕೊಂಡದ್ದೂ ಉಂಟು. ವಿಜ್ಞಾನವನ್ನು ಅಧಿಕಾರಶಾಹಿಗಳು ದುರುಪಯೋಗಿಸಿಕೊಳ್ಳುವುದಕ್ಕಿಂತ, ತೋರಿಕೆಯ ಪ್ರಜಾಪ್ರಭುತ್ವ ತತ್ವಗಳು, ಮಾನವೀಯ ಗುರಿಗಳನ್ನು ಸಾಧಿಸುವಲ್ಲಿ ವಿಜ್ಞಾನವನ್ನು ಬಳಸಿಕೊಳ್ಳುವುದನ್ನು ತಪ್ಪಿಸುತ್ತವೆ ಎಂಬುದು ಸ್ಕಿನ್ನರನ ಖಚಿತ ಅಭಿಪ್ರಾಯವಾಗಿತ್ತು.

ಬಿ.ಎಫ್. ಸ್ಕಿನ್ನರನ ವಿಚಾರಗಳ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳುಂಟು. ಆದರೂ ಆತನ ವ್ಯಕ್ತಿತ್ವದ ಹಿರಿಮೆಯ ಬಗ್ಗೆ ಅಪಸ್ವರ ಕಂಡುಬಂದಿಲ್ಲ.

ದೇಶ ವಿದೇಶಗಳ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಸಂಶೋಧನಾ ಪ್ರಬಂಧಗಳಲ್ಲದೆ ಸ್ಕಿನ್ನರನು ರಚಿಸಿದ ಹಲವು ಕೃತಿಗಳಲ್ಲಿ ಪ್ರಮುಖವಾದವುಗಳು:

Behaviour of orpanisms (new Yark; Appletion-century crofts, 1938)

walden two (New Yark: Macmillan, 1948)

Science and Human Behaviour (New Yark; Macmillan, 1953)

Verbal Behaviour (New Yark: Appletion-Century Crofts, 1957)

Schedules of Reinforcement (1957)

Cumulative Record (New Yark: Appletion-century Crofts, 1969)

Particulars of my Life(New Yark: Knopt, 1970)

Beyond freedom and Dignity (New Yark: Knopt, 1971)

About Behaviorism (New Yark: Knopt, 1974)

ಆಧಾರ ಸಾಮಗ್ರಿಗಳು

1. Skinner, B(urrhus) F(rederic): Current Biogaphy 1979 pp 361-365

2. Skinner, B(urrhus) F(rederic): Who is Who in America 37th edn. 1972-73 Vol.2 P.2928.

3. Skinner, B(urrhus) F(rederic): The International Who is Who 1988-89

4. Skinner, B(urrhus) F(rederic): International Encyclopedia of psychiatry, Psychology, Psycho analysis and Neurology No. 10 (SA-ST) 1977.

5. ಕ್ರಿಯಾಪ್ರಸೂತ ಅನುಬಂಧನ ವಿಕಾಸ ಮನೋವಿಜ್ಞಾನ (ಎ.ಎಸ್. ಧರಣೇಂದ್ರಯ್ಯ) ಮೈಸೂರು ವಿ.ವಿ. ೧೯೭೪ ಪು. ೧೭೯–೧೮೪

6. B.F. Skinner – The Hindu & Times of India 21.8.1990

❑ ❑

ಕನ್ನಡ ಹಸ್ತಪ್ರತಿ ಸೂಚಿಗಳು

• ಎಂ. ಎಂ. ಕಲಬುರ್ಗಿ

ಗ್ರಂಥಗಳ ಪ್ರಯೋಜನವನ್ನು ಸಾರ್ಥಕಗೊಳಿಸುವ ಸಲುವಾಗಿ ವಿದ್ವಾಂಸರು ತಾತ್ವಿಕ ಮತ್ತು ಆನ್ವಯಿಕ ನೆಲೆಗಳಲ್ಲಿ ಅನೇಕ ಪ್ರಯೋಗ–ಪ್ರಯತ್ನಗಳನ್ನು ಮಾಡುತ್ತ ಬಂದ ಕಾರಣ, 'ಗ್ರಂಥಾಲಯ ವಿಜ್ಞಾನ' ಹೆಸರಿನ ಹೊಸ ಜ್ಞಾನಶಾಖೆ ಅಸ್ತಿತ್ವಕ್ಕೆ ಬಂದು, ಸಾಲದೆಂಬಂತೆ ಅದು ಹೊಸ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಬೆಳೆಯುತ್ತಲಿದೆ. ದುರ್ದೈವದ ಸಂಗತಿಯೆಂದರೆ ಯಾವುದೇ ರೂಪದ ಗ್ರಂಥ ಸಮುದಾಯವನ್ನು ತನ್ನ ತೆಕ್ಕೆಯಲ್ಲಿ ಅಳವಡಿಸಿಕೊಳ್ಳಬೇಕಾದ ಈ ಕ್ಷೇತ್ರ, ಯಂತ್ರಪ್ರತಿ ಗ್ರಂಥಭಾಂಡಾರದ ಮೇಲೆ ಹೆಚ್ಚು ಒತ್ತು ಕೊಟ್ಟು, ಹಸ್ತಪ್ರತಿ ಗ್ರಂಥಭಾಂಡಾರವನ್ನು ಕಡೆಗಣಿಸಿದೆ. ಈ ದುರವಸ್ಥೆಯನ್ನು ಗ್ರಂಥಾಲಯ ವಿಜ್ಞಾನವಾಗಲೀ, ಗ್ರಂಥಾಲಯ ವಿಜ್ಞಾನಿಗಳಾಗಲೀ ನಿವಾರಿಸಿ, ಹಸ್ತಪ್ರತಿ ಗ್ರಂಥಭಾಂಡಾರಕ್ಕೆ ನ್ಯಾಯ ಒದಗಿಸಲಾರರೆಂದೇ ಕಾಣುತ್ತದೆ. ಏಕೆಂದರೆ ಒಂದು ಭಂಡಾರಕ್ಕೆ ಅವಶ್ಯವೆನಿಸುವ ತಜ್ಞತೆ ಇನ್ನೊಂದು ಭಂಡಾರಕ್ಕೆ ಅವಶ್ಯವೆನಿಸುವುದಿಲ್ಲವೆಂದೇ ಹೇಳಬೇಕು. ಆದುದರಿಂದ 'ಮ್ಯಾನ್ಯುಸ್ಕ್ರಿಪ್ಟಾಲಜಿ' ಹೆಸರಿನ ಹೊಸದೊಂದು ಶೈಕ್ಷಣಿಕ ಶಿಸ್ತು ತಾತ್ವಿಕ–ಆನ್ವಯಿಕ ನೆಲೆಗಳಲ್ಲಿ ಬೆಳೆದುಬರಬೇಕಾಗಿದೆ. ಈ ಶಿಸ್ತಿನ ಒಂದು ಭಾಗ "ಹಸ್ತಪ್ರತಿಸೂಚಿ".

ಒಂದು ಗ್ರಂಥದ ಸರ್ವಸಮಗ್ರ ಪರಿಚಯವನ್ನು ವಿವರಿಸುವುದೇ ಸೂಚೀಕರಣ. ಈ ವಿವರಗಳನ್ನೊಳಗೊಂಡುದೇ ಸೂಚಿ. ಯಂತ್ರಪ್ರತಿ ಒಂದು ಕ್ರಮಬದ್ಧಗ್ರಂಥ. ಹಸ್ತಪ್ರತಿ–ಇಷ್ಟರ ಮಟ್ಟಿಗೆ ಕ್ರಮಬದ್ಧ ಗ್ರಂಥವಾಗಿರುವುದಿಲ್ಲ. ಆದುದರಿಂದ ಯಂತ್ರಪ್ರತಿಯ ಸೂಚೀಕರಣಕ್ಕಿಂತ ಹಸ್ತಪ್ರತಿಯ ಸೂಚೀಕರಣ ಜಟಿಲವೆಂದೇ ಹೇಳಬೇಕು. ಹಸ್ತಪ್ರತಿಗಳಿಗೆ ಸೂಚಿ ರಚಿಸುವ ಕ್ರಿಯೆ ಭಾರತದಲ್ಲಿ ಸರ್ ವಿಲಿಯಂ ಜೋನ್ಸ್ ಅವರಿಂದ ಪ್ರಾರಂಭವಾಯಿತು (೧೮೦೭). ಕನ್ನಡಕ್ಕೆ ಬಂದರೆ ೧೮೨೮ರಲ್ಲಿ ಪ್ರಕಟವಾದ "ಮೆಕೆಂಜಿ ಕಲೆಕ್ಷನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಮ್ಯಾನುಸ್ಕ್ರಿಪ್ಟ್ಸ್" ಎಂಬುದೇ ಪ್ರಥಮ ಸೂಚಿಯಾಗಿದೆ. ಆಮೇಲೆ ಮದ್ರಾಸ, ಮೈಸೂರು, ಧಾರವಾಡಗಳಲ್ಲಿಯ ಸರಕಾರಿ ಸಂಸ್ಥೆಗಳು, ಮೈಸೂರು–ಧಾರವಾಡ–ಬೆಂಗಳೂರು–[illegible] ವಿಶ್ವವಿದ್ಯಾಲಯಗಳು, [illegible] ಸಂಸ್ಥೆಗಳು ಹಸ್ತಪ್ರತಿಸೂಚಿಗಳನ್ನು ಪ್ರಕಟಿಸಿವೆ. ಇವುಗಳನ್ನು [illegible] ಗ್ರಂಥ [illegible] ಸೂಚಿ–[illegible]. ಇವುಗಳಲ್ಲಿ ವರ್ಣನಾತ್ಮಕ ಸೂಚಿಗೆ ವಿಶೇಷ ಸ್ಥಾನವಿದೆ.

ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ವಿವರಣಾತ್ಮಕ ಹಸ್ತಪ್ರತಿಸೂಚಿಗಳು ಪ್ರಕಟವಾಗಿದ್ದು, ಅಲ್ಲಿ [illegible] ವಿವರ (Items)ಗಳಲ್ಲಿ [illegible]. ಆದುದರಿಂದ ಒಂದು [illegible] ಸೂಚಿ, [illegible]

ಯಾವುದೇ ಹಸ್ತಪ್ರತಿಯಲ್ಲಿ ಎರಡು ಘಟಕಗಳಿರುತ್ತವೆ. ಒಂದು: ಕವಿಯ ಕೃತಿ, ಇನ್ನೊಂದು: ಲಿಪಿಕಾರನ ಪ್ರತಿ. ಆದುದರಿಂದ ಹಸ್ತಪ್ರತಿಸೂಚಿ ರಚನೆಯ ಸಂದರ್ಭದಲ್ಲಿ ಕೃತಿಪರಿಚಯ, ಪ್ರತಿಪರಿಚಯ ಎಂದು ಎರಡು ಪ್ರತ್ಯೇಕ ಸ್ತರಗಳನ್ನೇ ಮಾಡಿಕೊಳ್ಳುವುದು, ಆಯಾ ಸ್ತರಗಳಿಗೆ ಸಂಬಂಧಿಸಿದ ಪರಿಚಯ ವಿವರಗಳನ್ನು ಅಲ್ಲಲ್ಲಿ ಅಳವಡಿಸುವುದು ಸೂಕ್ತವಾಗಿದೆ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಹಸ್ತಪ್ರತಿ ವಿವರಣಾತ್ಮಕ ಸೂಚೀ ನಮೂನೆಯನ್ನು ಹೀಗೆ ರೂಪಿಸಬಹುದು.

ಕೃತಿಪರಿಚಯ

೧. ಕೃತಿನಾಮ ೨. ಕವಿನಾಮ—ಕಾಲ

೩. ಕೃತಿಭಾಷೆ ೪. ಕೃತಿಪ್ರಕಾರ

೫. ಕೃತಿವಿಷಯ:..

೬. ವಿಶೇಷ:..

....

*

ಪ್ರತಿಪರಿಚಯ

೭. ಕ್ರಮಾಂಕ ೮. ವಸ್ತು

೯. ಆಕಾರ ೧೦. ಹಸ್ತಪ್ರತಿಸ್ವರೂಪ

೧೧. ಗರಿ/ಪುಟ ೧೨. ಲಿಪಿಸ್ವರೂಪ

೧೩. ಮಿತಿ ೧೪. ಭಾಷಾಸ್ವರೂಪ

೧೫. ಆದಿ:...

....

೧೬ ಅಂತ್ಯ:...

....

೧೭. ವಿಶೇಷ:..

....

೧೮. ಈ ಕಟ್ಟಿನಲ್ಲಿರುವ ಕೃತಿಗಳು: 1.......................... 2..........................
3.......................... 4..........................
5.......................... 6..........................

ಈ ನಮೂನೆಯ ಬಗ್ಗೆ ಕೆಲವು ಸ್ಪಷ್ಟನೆಗಳು ಅವಶ್ಯವೆಂದು ತೋರುತ್ತದೆ.

(೧) ಈ ನಮೂನೆಯನ್ನು ಪ್ರಸ್ತಾವನೆಯಲ್ಲಿ ಮುದ್ರಿಸಿದರೆ ಸಾಕು. ಗ್ರಂಥದ ಒಳಗೆ ಪ್ರತಿಯೊಂದು ಪ್ರತಿಯನ್ನು ಪರಿಚಯಿಸುವಾಗ ಇದನ್ನು ಮುದ್ರಿಸಬಾರದು. ಇಲ್ಲಿಯ ಸೂಕ್ತ ಶೀರ್ಷಿಕೆಗಳ ಸ್ಥಾನದಲ್ಲಿ ಉತ್ತರರೂಪದ ವಿವರಗಳನ್ನು ಮಾತ್ರ ಮುದ್ರಿಸಬೇಕು, ಅಷ್ಟೇ.

.(೨) 'ಕೃತಿವಿಷಯ' ಎಂಬ ಶೀರ್ಷಿಕೆಯನ್ನು ಮುದ್ರಿಸಿ, ಅಲ್ಲಿ ಆ ಕೃತಿಯ ವಿಷಯವನ್ನು ಸಾರವತ್ತಾಗಿ ಹೇಳಬೇಕು. (3) ಎರಡೂ ವಿಭಾಗಗಳಲ್ಲಿ ವಿಶೇಷತೆ ಇದ್ದರೆ ಮಾತ್ರ 'ವಿಶೇಷ' ಎಂಬ ಪದವನ್ನು ಮುದ್ರಿಸಿ, ಅದರ ಮುಂದೆ ಆ ವಿಶೇಷತೆ ಏನೆಂಬುದನ್ನು ನಮೂದಿಸಬೇಕು (೪) ಎರಡನೆಯ ವಿಭಾಗದಲ್ಲಿ ಆದಿ, ಅಂತ್ಯ ಎಂಬ ಪದಗಳನ್ನು ಮುದ್ರಿಸಿ, ಅಲ್ಲಲ್ಲಿ ಪ್ರತಿಯ ಆದಿಪಾಠ, ಅಂತ್ಯಪಾಠಗಳನ್ನು ಉದ್ಧರಿಸಬೇಕು. (೫) ಒಂದು ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚಿಗೆ ಕೃತಿಗಳಿದ್ದರೆ 'ಈ ಕಟ್ಟಿನಲ್ಲಿರುವ ಕೃತಿಗಳು' ಎಂಬ ಶೀರ್ಷಿಕೆಯನ್ನು ಮುದ್ರಿಸಿ, ಮೊದಲನೆಯ ಕೃತಿಯನ್ನು ಪರಿಚಯಿಸುವ ಸಂದರ್ಭದಲ್ಲಿ ಮಾತ್ರ ಎಲ್ಲ ಕೃತಿಗಳ ಯಾದಿಯನ್ನು ಕೊಡಬೇಕು. ಆ ಕಟ್ಟಿನ ಇತರ ಕೃತಿಗಳನ್ನು ಪರಿಚಯಿಸುವಾಗ 'ಈ ಕಟ್ಟಿನಲ್ಲಿರುವ ಕೃತಿಗಳು' ಎಂಬ ಶೀರ್ಷಿಕೆಯನ್ನು ಮಾತ್ರ ಮುದ್ರಿಸಿ, ಅದರ ಮುಂದೆ ಮೊದಲನೆಯ ಕೃತಿಯ ನಂಬರು, ಹೆಸರುಗಳನ್ನು ಸೂಚಿಸಿ, ಅಲ್ಲಿಯ 'ಈ ಕಟ್ಟಿನಲ್ಲಿರುವ ಕೃತಿಗಳು ಕಾಲಂ ನೋಡಿರಿ' ಎಂದು ಸೂಚಿಸಬೇಕು.

ಕನ್ನಡ ಅಧ್ಯಯನಪೀಠದ 4375ನೆಯ ನಂಬರಿನ ಕಟ್ಟನ್ನು ಉದಾಹರಣೆಯಾಗಿ ಕೊಟ್ಟು, ಈ ವಿಷಯವನ್ನು ಸ್ಪಷ್ಟಪಡಿಸಬಹುದು.

೧

ಶ್ರೀಕೃಷ್ಣ ಪಾರಿಜಾತ — ಅಪರಾಳ ತಮ್ಮಣ್ಣ, ೧೮ನೆಯ ಶತಮಾನ
ಕನ್ನಡ — ಬಯಲಾಟ

ಕೃತಿವಿಷಯ: ಪಾರಿಜಾತಪುಷ್ಪಕ್ಕಾಗಿ ಸತ್ಯಭಾಮೆ–ರುಕ್ಮಿಣಿಯರಲ್ಲಾದ ಮನಸ್ತಾಪವನ್ನು ಶ್ರೀಕೃಷ್ಣ ಪರಿಹರಿಸಿದುದು.

ವಿಶೇಷ : ಈ ಕೃತಿಯ ಪೂರ್ವಾರ್ಧವನ್ನು ಅಪರಾಳ ತಮ್ಮಣ್ಣ, ಉತ್ತರಾರ್ಧವನ್ನು ಶಿರಗುಪ್ಪಿ ಸದಾಶಿವಯ್ಯ ರಚಿಸಿರುವರೆಂಬ ಸೂಚನೆ ಇಲ್ಲಿದೆ.

•

4375/1 — ವಿದೇಶಿ ಕಾಗದ
8" x 6" — ಜೀರ್ಣಪ್ರತಿ
1-35 — ಅಕ್ಷರ ಸ್ಪಷ್ಟ
ಶಾಲಿವಾಹನ ಶಕೆ ೧೭೨೯, ಪ್ರಭವ.............. — ಶುದ್ಧಭಾಷೆ

ಆದಿ : ಶ್ರೀ ವಿರೂಪಾಕ್ಷಲಿಂಗಾಯ ನಮಃ । ಶ್ರೀ ನುಹ್ಗೊರಳ ಸಂಗಮೇಶ್ವರಾಯ ನಮಃ। ಶ್ರೀ ಗಣಾಧಿಪತೇ ನಮಃ । ರಾಯಚೂರ ಅಪರಾಲ ತಂಮುಂಣನು ಮಾಡಿದ ಪಾರಿಜಾತ ಬರವುದಕ್ಕೆ ಶುಭಮಸ್ತು । ಶೋಭನಮಸ್ತು । ಆಯುರಾರೋಗ್ಯ ಐಶ್ವರ್ಯಮಸ್ತು । ರಾಗ ನಾಟಿ । ಜಂಪೆ ತಾಳ।

ಅಂತ್ಯ : ಯೀ ಪುಸ್ತಕ ಆರದುಯಂದಡೆ । ತಾಳಿಕೋಟಿ । ಸಜ್ಜನ ಗಾಣಿಗೇರ ಲಿಂಗಪ್ಪನಾ

। ಗರ್ಭದಲ್ಲಿ ಹುಟ್ಟಿದ ಮಲ್ಲಪ್ಪನು ಪೋದ್ಯಾಡಿಕೊಳಬೇಕೆಂದು ಮನೋಪ್ರೀತಿಯಿಂದ ಬರಸಿದನು । ಶ್ರೀ । ದೀರ್ಘ। ರಸ್ವ । ಬಿಂದು । ವಿಸರ್ಗ । ದ್ವಿತ್ತು । ಯಿಷ್ಟರಲ್ಲಿ । ವಿಶ್ಮೃ ಆದರೂ । ಬಲ್ಲಂತ ಗ್ನಾನಿಗಳು ತಿದ್ದಿಕೊಂಬುವದು । ಇತಿ ಮಂಗಳ ಮಹಾಶ್ರೀ...................

ವಿಶೇಷ : ಈ ವರೆಗೆ ಲಭ್ಯವಾದ ಶ್ರೀ ಕೃಷ್ಣ ಪಾರಿಜಾತದ ಹಸ್ತಪ್ರತಿಗಳಲ್ಲಿಯೇ ಇದು ಕವಿಪ್ರತಿಗೆ ಹತ್ತಿರವಾಗಿರುವ ಪ್ರತಿಯಾಗಿದೆ.

ಈ ಕಟ್ಟಿನಲ್ಲಿರುವ ಕೃತಿಗಳು : 1. ಶ್ರೀ ಕೃಷ್ಣ ಪಾರಿಜಾತ (1–35ಬಿ), 2.ಒಂದು ಶೃಂಗಾರ ಪದ, 3. ದೇವನಾಗರಿಲಿಪಿಯಲ್ಲಿ ಬರೆದ ಕೆಲವು ಆರ್ಯಾವೃತ್ತಗಳು, 4. ಒಂದು ಪದ.

ಕೆಲವು ವೇಳೆ ಇಲ್ಲಿ ತುಂಬಲು ಉತ್ತರವಿಲ್ಲದಿದ್ದರೆ ಒಂದು ಗೆರೆ (ಡ್ಯಾಶ್) ಹಾಕಬೇಕು. ಎರಡೂ ವಿಭಾಗಗಳನ್ನು ಪ್ರತ್ಯೇಕಿಸಿ ತೋರಿಸಲು ನಡುವೆ ಸೂಕ್ತ ಚಿಹ್ನೆ ಬಳಸಬೇಕು. ಇಲ್ಲವೆ ಒಂದಿಷ್ಟು ಹೆಚ್ಚು ಸ್ಥಳ ಬಿಡಬೇಕು. ಒಂದು ವೇಳೆ ಅನೇಕರು ಸೇರಿ ಒಂದು ಸೂಚಿಗ್ರಂಥವನ್ನು ಸಿದ್ಧಪಡಿಸಿದ್ದರೆ ಅವರವರ ಕೃತಿಸೂಚಿಯ ಕೊನೆಯಲ್ಲಿ ಅವರವರ ಸಂಕ್ಷಪ್ತನಾಮವನ್ನು ಸಣ್ಣ ಅಕ್ಷರದಲ್ಲಿ ಮುದ್ರಿಸಬೇಕು. ಪ್ರಸ್ತಾವನೆಯಲ್ಲಿ ಈ ಸಂಕ್ಷಿಪ್ತ ನಾಮಗಳಿಗೆ ವಿವರ ಒದಗಿಸಬೇಕು.

ಇಷ್ಟು ಹಿನ್ನೆಲೆಯೊಂದಿಗೆ ಈ ವರೆಗೆ ಕನ್ನಡ ಹಸ್ತಪ್ರತಿಗಳನ್ನು ಕುರಿತು ಪ್ರಕಟವಾಗಿರುವ ವಿವರಣಾತ್ಮಕ ಸೂಚಿಗ್ರಂಥ, ಯಾದಿರೂಪದ ಸೂಚಿಗ್ರಂಥ ಮತ್ತು ಸೂಚಿಲೇಖನಗಳನ್ನು ಇಲ್ಲಿ ಕೊಡಲಾಗಿದೆ.

ಕನ್ನಡ ಹಸ್ತಪ್ರತಿಸೂಚಿಗಳು

೧. ಮದ್ರಾಸ ಹಸ್ತಪ್ರತಿಸೂಚಿಗಳು

೧. * ಮೆಕೆಂಝಿ ಕಲೆಕ್ಶನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ ಆಫ್ ದಿ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ– ಸಂ. ಎಚ್. ಎಚ್. ವಿಲ್ಸನ್ ; (೧೮೨೮) ಪ್ರತಿ ೧೫೨.

೨. ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಮ್ಯಾನ್ಯುಸ್ಕ್ರಿಪ್ಟ ಇನ್ ದಿ ಗವ್ಹರ್ನಮೆಂಟ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂ. – (೧೮೮೩) ಪ್ರತಿ.

೩. ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಕೆನರೀಸ್ ಮಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿ; (೧೯೨೯), ಪ್ರತಿ ೧೫೪೦.

೪. ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಕನ್ನಡ ಮಾನ್ಯುಸ್ಕ್ರಿಪ್ಟ್ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂ. ಟಿ. ಚಂದ್ರಶೇಖರನ್; (೧೯೫೨), ಪ್ರತಿ ೧೮೨೯.

೫. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–1 ಸಂ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿ; (೧೯೩೪), ಪ್ರತಿ ೧೩೮.

* ಇದರಲ್ಲಿ ಪು. 304–346 ವರೆಗಿನ ಭಾಗದಲ್ಲಿ ಕನ್ನಡ ಹಸ್ತ ಪ್ರತಿಗಳು ವಿವರವಿದ.

೬. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–2 ಸಂ. ಎಸ್.ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಪಿ.ಪಿ. ಎಸ್. ಶಾಸ್ತ್ರಿ; (೧೯೩೭), ಪ್ರತಿ ೨೭೮.

೭. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–3 ಸಂ. ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಪಿ.ಪಿ. ಎಸ್. ಶಾಸ್ತ್ರಿ; (೧೯೩೯), ಪ್ರತಿ ೧೫೮.

೮. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–4 ಸಂ. ಎ. ಶಂಕರನ್; (೧೯೪೬), ಪ್ರತಿ ೩೪೮.

೯. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–5 ಸಂ. ಟಿ. ಚಂದ್ರಶೇಖರನ್; (೧೯೫೧), ಪ್ರತಿ ೨೧೩.

೧೦. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–6 ಸಂ. ಟಿ. ಚಂದ್ರಶೇಖರನ್ (೧೯೫೨), ಪ್ರತಿ ೨೩೩

೧೧. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್–ಸಂಪುಟ–7 ಸಂ. ಟಿ.ಚಂದ್ರಶೇಖರನ್; (೧೯೫೮), ಪ್ರತಿ ೧೪೪.

೧೨. Mackenzie manuscripts, summeries of the histrorical manuscripts in the mackenzic collection Vol. II (Telugu, Kannada, Marathi) T. V. Machingam (1976)

ಮೈಸೂರು ಹಸ್ತಪ್ರತಿಸೂಚಿಗಳು

೧೩. ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರಹದ ಪುಸ್ತಕಗಳ ಪಟ್ಟಿ (೧೯೨೧) ಪ್ರತಿ ೧೫೧೧

೧೪. ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿ ೧೯೨೨ ರಿಂದ ೧೯೨೯ ರ ವರೆಗಿನಅವಧಿಯಲ್ಲಿ ಸಂಗ್ರಹಿಸಿದ ಅಚ್ಚಿನ ಮತ್ತು ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ (೧೯೩೦) ಪ್ರ. ೧೬೪.

೧೫. ಮೈಸೂರ ಯುನಿವರ್ಸಿಟಿ ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟದಲ್ಲಿ ೧೯೪೧ರಿಂದ ೧೯೫೪ ರ ವರೆಗಿನ ಸಂಗ್ರಹಿಸಿರುವ ಕೈಬರಹದ ಪುಸ್ತಕಗಳ ಪಟ್ಟಿ (೧೯೫೫) ಪ್ರತಿ ೧೪೪

೧೬. ಮೈಸೂರು ಪ್ರಾಚ್ಯವಿದ್ಯಾಸಂಶೋಧನ ಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚನೀ (೧೮೯೧ ರಿಂದ ೧೯೫೧ರ ವರೆಗೆ). (೧೯೫೫) ಪ್ರತಿ ೧೮೨೭

೧೭. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತ ಕೃತಿಗಳ ವರ್ಣನಾತ್ಮಕ ಸೂಚೀ—ಸಂಪುಟ—೧ : ಸಂ. ಬಿ.ಎಸ್. ಸಣ್ಣಯ್ಯ; (೧೯೬೨), ಪ್ರತಿ ೪೯೭

೧೮. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ—ಸಂಪುಟ—೨ : ಸಂ. ಬಿ.ಎಸ್. ಸಣ್ಣಯ್ಯ; (೧೯೬೨) ಪ್ರತಿ ೫೧೪.

೧೯ ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ—ಸಂಪುಟ—೩ : ಸಂ. ಬಿ.ಎಸ್. ಸಣ್ಣಯ್ಯ; (೧೯೬೩) ಪ್ರತಿ ೫೧೪.

೨೦. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತ ಕೃತಿಗಳ ವರ್ಣನಾತ್ಮಕ ಸೂಚೀ—ಸಂಪುಟ—೪ : ಸಂ. ಬಿ.ಎಸ್. ಸಣ್ಣಯ್ಯ; (೧೯೬೩) ಪ್ರತಿ ೫೪೮.

೨೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ—ಸಂಪುಟ—೫ : ಬಿ.ಎಸ್.ಸಣ್ಣಯ್ಯ; (೧೯೮೦), ಪ್ರತಿ ೭೩೫.

೨೨. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ—ಸಂಪುಟ—೬ : ಬಿ.ಎಸ್.ಸಣ್ಣಯ್ಯ; (೧೯೮೦), ಪ್ರತಿ ೭೪೪

೨೩. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ—ಸಂಪುಟ—೭ ಬಿ.ಎಸ್.ಸಣ್ಣಯ್ಯ; (೧೯೮೦), ಪ್ರತಿ ೮೦೨.

೨೪. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ—ಸಂಪುಟ—೮ ಬಿ.ಎಸ್.ಸಣ್ಣಯ್ಯ; (೧೯೮೦), ಪ್ರತಿ ೬೨೬.

೨೫. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ—ಸಂಪುಟ—೯ ಬಿ.ಎಸ್.ಸಣ್ಣಯ್ಯ; (೧೯೮೧) ಪ್ರತಿ ೩೨೮+೧೩೮.

೨೬. ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲ್ಮಸೂಚಿ : ಬಿ.ಎಸ್. ಸಣ್ಣಯ್ಯ (೧೯೮೮), ಪ್ರತಿ ೧೩೨೪

ಧಾರವಾಡ ಹಸ್ತಪ್ರತಿಸೂಚಿಗಳು

೨೭. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)—ಸಂಪುಟ—೧ : ಆರ್.ಎಸ್. ಪಂಚಮುಖಿ; (೧೯೫೩), ಪ್ರತಿ ೫೭

೨೮. ಪ್ರಾಚೀನ ಹಸ್ತ ಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)—ಸಂಪುಟ—೨ : ಎಸ್.ಎಸ್. ಮಾಳವಾಡ ಮತ್ತು ಬಿ.ಎಸ್. ಕುಲಕರ್ಣಿ; (೧೯೫೫), ಪ್ರತಿ ೪೪

೨೯. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)—ಸಂಪುಟ—೩ : ಬಿ.ಎಸ್. ಕುಲಕರ್ಣಿ; (೧೯೫೭) ಪ್ರತಿ ೪೮

೩೦. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)—ಸಂಪುಟ—೪ : ಎಸ್.ಎಂ. ಅಣ್ಣಿಗೇರಿ ಮತ್ತು ಎಸ್.ಬಿ. ಪುರೋಹಿತ; (೧೯೬೧), ಪ್ರತಿ ೮೫.

೩೧. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೫ ಃ ಬಿ.ಎಸ್. ಕುಲಕರ್ಣಿ; (೧೯೬೪), ಪ್ರತಿ ೮೦

೩೨. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೬ ಃ ಬಿ.ಎಸ್. ಕುಲಕರ್ಣಿ; (೧೯೬೫), ಪ್ರತಿ ೮೫.

೩೩. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೭ ಃ ಬಿ.ಎಸ್. ಕುಲಕರ್ಣಿ ಮತ್ತು ಎಸ್.ಬಿ. ಪುರೋಹಿತ; (೧೯೬೭), ಪ್ರತಿ ೮೩.

೩೪. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೮ ಃ ಬಿ.ಎಸ್. ಕುಲಕರ್ಣಿ ಮತ್ತು ಎಸ್.ಬಿ. ಪುರೋಹಿತ; (೧೯೬೮), ಪ್ರತಿ ೭೮

೩೫. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೯ ಃ ಬಿ.ಎಸ್.. ಕುಲಕರ್ಣಿ ಮತ್ತು ಎಸ್. ಬಿ. ಪುರೋಹಿತ; (೧೯೭೦), ಪ್ರತಿ ೭೨

೩೬. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೧೦ ಃ ಬಿ.ಎಸ್. ಕುಲಕರ್ಣಿ; (೧೯೭೬), ಪ್ರತಿ ೫೧.

೩೭. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೧೧ ಃ ಬಿ.ಎಸ್. ಕುಲಕರ್ಣಿ; (೧೯೮೨), ಪ್ರತಿ ೬೮.

೩೮. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೧೨ ಃ ಬಿ.ಎಸ್. ಕುಲಕರ್ಣಿ; (೧೯೮೩), ಪ್ರತಿ ೬೫.

೩೯. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)–ಸಂಪುಟ–೧೩ ಃ ಸಿ. ಬಿ. ಕಡಕೋಳ ಮತ್ತು ಕೆ. ಪಿ. ಈರಣ್ಣ; (೧೯೯೦), ಪ್ರತಿ ೮೨

೪೦. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೧ ಃಡಾ. ಬಿ.ಆರ್. ಹಿರೇಮಠ, (೧೯೯೨), ಕಟ್ಟು ೧ ರಿಂದ ೧೦೦ (೩೫೪ ಪ್ರತಿ)

೪೧. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೨ ಃ ಡಾ. ಬಿ.ಆರ್ ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೧೦೧–೨೦೦

೪೨. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೩ ಃ ಡಾ. ಬಿ.ಆರ್ ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೨೦೧–೩೦೦.

೪೩. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೪ ಃ ಡಾ. ಬಿ.ಆರ್ ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೩೦೧–೪೦೦.

೪೪. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೫ ಃ ಡಾ. ಬಿ.ಆರ್ ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೪೦೧–೫೦೦.

೪೫. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೬ ಃ ಡಾ. ವಿ.ಬಿ. ರಾಜೂರ, (೧೯೯೨), ಕಟ್ಟು ೫೦೧–೬೦೦ (೩೬೭ ಪ್ರತಿ).

೪೬. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ–ಸಂಪುಟ–೭ ಃ ಡಾ. ವಿ.ಬಿ. ರಾಜೂರ, (೧೯೯೨), ಕಟ್ಟು ೬೦೧–೭೦೦ (೩೦೬ಪ್ರತಿ)

೪೭. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ–ಸಂಪುಟ–೮ : ಡಾ. ವಿ.ಬಿ. ರಾಜೂರ, (೧೯೯೨), ಕಟ್ಟು ೭೦೧–೮೦೦ (೨೭೯ ಪ್ರತಿ)

೪೮. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೯ : ಡಾ. ವಿ.ಬಿ. ರಾಜೂರ, (೧೯೯೨), ಕಟ್ಟು ೮೦೧–೯೦೦ (೩೯೨ ಪ್ರತಿ)

೪೯. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಸೂಚಿ–ಸಂಪುಟ–೧೦ : ಡಾ. ವಿ.ಬಿ. ರಾಜೂರ, (೧೯೯೨), ಕಟ್ಟು ೯೦೧–೧೦೦೦ (೨೪೫ ಪ್ರತಿ)

ಬೆಂಗಳೂರು ಮತ್ತು ಹೈದ್ರಾಬಾದ ಹಸ್ತಪ್ರತಿಸೂಚಿಗಳು

೫೦. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ–ಸಂಪುಟ–೧ (ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರ) : ಎಸ್. ಶಿವಣ್ಣ (೧೯೮೨), ಪ್ರತಿ ೪೪೯.

೫೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಬಿ. ಎಂ ಶ್ರೀ ಪ್ರತಿಷ್ಠಾನ, ಬೆಂಗಳೂರು) ಸಂಪುಟ–1, ಕೆಳದಿ ಗುಂಡಾಜೋಯಿಸ ಮತ್ತು ನಾ. ಗೀತಾಚಾರ್ಯ (೧೯೮೭) ಪ್ರತಿ 96.

೫೨. ಎ ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ದಿ ಕನ್ನಡ ಮ್ಯಾನುಸ್ಕ್ರಿಪ್ಟ್ಸ್ ಇನ್ ದಿ ಉಸ್ಮಾನಿಯಾ ಯುನಿವರ್ಸಿಟಿ ಲೈಬ್ರರಿ, ಬಿ. ರಾಮಚಂದ್ರರಾವ್ ಮತ್ತು ಟಿ.ವಿ. ವೆಂಕಟಚಲಶಾಸ್ತ್ರಿ; (೧೯೬೬), ಪ್ರತಿ ೨೯೪.

ಇತರ ಸೂಚಿಗಳು

೫೩. ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ, ಕೆ. ಭುಜಬಲಶಾಸ್ತ್ರಿ; (೧೯೪೮), ಪ್ರತಿ ೩೫೩೮

೫೪. ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಗಳ ವಿವರ, ದೇವಕುಮಾರ ಶಾಸ್ತ್ರಿ; (೧೯೮೦), ಪ್ರತಿ ೪೪೮+೧೯.

೫೫. ಕೊಲ್ಲಾಪುರ ಲಕ್ಷ್ಮಿಸೇನ ಬಸದಿಯ ಹಸ್ತಪ್ರತಿ ಸೂಚಿ, (೧೯೦೦).

೫೬. ಕೊಲ್ಲಾಪುರ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಜೈನಬಸದಿಯ ಹಸ್ತಪ್ರತಿಸೂಚಿ, ಎಂ.ಎಂ. ಕಲಬುರ್ಗಿ–ಬಿ.ಆರ್. ಹಿರೇಮಠ ಮತ್ತು ಎಸ್. ವ್ಹಿ. ಅಯ್ಯನಗೌಡರ; (೧೯೮೮), ಪ್ರತಿ ೮೫೧

೫೭. ಗದುಗಿನ ತೋಂಟದಾರ್ಯಮಠದ ಹಸ್ತಪ್ರತಿ ಸೂಚಿ, ಎಸ್. ಶಿವಣ್ಣ; (೧೯೮೫), ಪ್ರತಿ ಕನ್ನಡ ೧೧೪೧, ಇತರ ೨೫೬.

೫೮. ವೀರಶೈವ ಅಪ್ರಕಟಿತ ಗ್ರಂಥಸೂಚಿ, ಎಸ್. ಶಿವಣ್ಣ; (೧೯೮೨), ಕೃತಿ ೧೭೧೨.

೫೯. ಎ ಕ್ಲಾಸಿಫೈಯ್ಡ ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಸರಸ್ವತೀ ಭಂಡಾರಮ್ (ಪ್ಯಾಲೇಸ್ ಸಂಸ್ಕೃತ ಲೈಬ್ರರಿ) ಆಫ್ ಎಚ್.ಎಚ್. ಮಹಾರಾಜಾ ಆಫ್ ಮೈಸೂರು ಕಲೆಕ್ಸನ್ ಆಫ್ (೧೯೦೦–೧೯೦೫), ಪ್ರತಿ ೩೦೦.

೬೦. ದಿ ಲಿಸ್ಟ್ ಆಫ್ ದಿ ಅನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ ಕನ್ನಡ ಮ್ಯಾನುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸರಸ್ವತಿ ಭಂಡಾರ (ಮಹಾರಾಜಾ ಸಂಸ್ಕೃತ ಕಾಲೇಜು ಮೈಸೂರು) (೧೯೪೩), ಪ್ರತಿ ೧೦೩

೬೧. ಎ ಕ್ಯಾಟಲಾಗ್ ಆಫ್ ಸಂಸ್ಕೃತ, ಪ್ರಾಕೃತ ಆ್ಯಂಡ್ ಹಿಂದಿ ವರ್ಕ್ಸ ಇನ್ ದಿ ಜೈನ ಸಿದ್ಧಾಂತ ಭವನ ಆರಾ. ಸುಪಾರ್ಶ್ವದಾಸ ಗುಪ್ತ ಮತ್ತು ಮೂಲಚಂದ್ರ ಜೈನ; (೧೯೧೯), ಪ್ರತಿ ೫೦೦

೬೨. ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ ಪ್ರಾಕೃತ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಸೆಂಟ್ರಲ್ ಪ್ರಾವಿನ್ಸಿಸ್ ಆ್ಯಂಡ್ ಬೆರಾರ್ (ಅನುಬಂಧ) ರಾವಬಹಾದ್ದೂರ ಹೀರಾಲಾಲ್; (೧೯೨೯), ಪ್ರತಿ ೪೩

೬೩. ದಿ ಅನ್‌ನೋನ್ ಪೇಜೀಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಸಿ. ಮಹಾದೇವಪ್ಪ; (೧೯೬೦), ಪ್ರತಿ ೧೩

೬೪. ಶ್ರೀ ಜಗದ್ಗುರು ಮೂರುಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ–ಕೆಳದಿ ಗುಂಡಾಜೋಯಿಸ್ (೧೯೮೯) ಪ್ರತಿ ೩೯೦

೬೫. ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ–ಶಿ. ಎಸ್. ಶಿವಣ್ಣ (೧೯೯೧) ಪ್ರತಿ ೪೬೬೧

೬೬. ಕೆಳದಿ ಸಂಗ್ರಹಾಲಯ ಮತ್ತು ಐತಿಹಾಸಿಕ ಸಂಶೋಧನ ಕೇಂದ್ರ ವರ್ಣನಾತ್ಮಕ ಹಸ್ತಪ್ರತಿಸೂಚಿ – ಎಸ್. ಆರ್. ರಾವ್ ಮತ್ತು ಕೆಳದಿ ಗುಂಡಾಜೋಯಿಸ

ಲೇಖನರೂಪದ ಸೂಚಿಗಳು

೬೭. ಅ) ಸ್ವಾದಿಯ ಜೈನಮಠದೊಳಗಿರುವ ಕನ್ನಡ ಗ್ರಂಥಗಳು ಪ್ರತಿ ೨೮

ಆ) ಧರಣೇಂದ್ರಪ್ಪ ಅಣ್ಣ ಆಲೂರ ಸಿರ್ಸಿ, ಇವರಲ್ಲಿಯ ತಾಡಪತ್ರ ಗ್ರಂಥಗಳು ಪ್ರತಿ ೮+೨

ಇ) ಇಸ್ಲೂರ ಮಠದಲ್ಲಿರುವ ವೀರಶೈವ ಗ್ರಂಥಗಳು–ಕೆ.ಜಿ. ಕುಂದಣಗಾರ ಜ.ಕ. ೭+೮ (೧೯೨೯) ಪ್ರತಿ ೨+೭.

೬೮. ಕೈಬರಹದ ಗ್ರಂಥಗಳ ಶೋಧನೆಯು, ಎಸ್.ಸಿ. ನಂದಿಮಠ; ಶಿ.ವಾ. ೭–೧ (೧೯೩೨) ಪ್ರತಿ ೨೧೫.

೬೯. ಹೈದರಾಬಾದು ಪ್ರಾಂತದಲ್ಲಿ ಕನ್ನಡ ಗ್ರಂಥಗಳ ಸಂಶೋಧನೆ, ಡಿ.ಕೆ. ಭೀಮಸೇನರಾವ್; ಕ.ಸಾ.ಪ. ೨೧–೩ (೧೯೩೬), ಪ್ರತಿ ೨೦

೭೦. ಐನೂಲಿ ಗುಂಡಯ್ಯನ ಮನೆಯ ಸಂಗ್ರಹ, ಕಪಟರಾಳ ಕೃಷ್ಣರಾಯ, ಶ. ಸಾ. ೪–೭, (೧೯೪೧) ಪ್ರತಿ ೮೩.

೭೧. ಹೊಂಬುಜ ಮಠದ ಗ್ರಂಥಗಳ ಪಟ್ಟಿ ಸಂಗ್ರಾಹಕ ? ಶ.ಸಾ. ೧೯೪೮. ಪ್ರತಿ

೭೨. ಕಂಚಗಲ್ಲ–ಬಿದರೆ ದೊಡ್ಡಮಠದಲ್ಲಿ ದೊರೆತ ತಾಡವೋಲೆ ಗ್ರಂಥಗಳು, ಜಿ.ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೪–೩, ೪–೯ (೧೯೫೪) ಪ್ರತಿ.

೭೩. ಗದಗ ತೋಂಟದಾರ್ಯಮಠದ ತಾಡವೋಲೆ, ಜಿ.ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೫–೩, (೧೯೫೪–೫೫) ಪ್ರತಿ.

೭೪. ಹಾವೇರಿ ಹುಕ್ಕೇರಿ ಮಠದ ಓಲೆ ಸಂಗ್ರಹ, ಜಿ.ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೫–೫, (೧೯೫೫) ಪ್ರತಿ.

೭೫. ಹಾರ್ನಹಳ್ಳಿ ಕೋಡಿಮಠದ ಓಲೆಗಳು, ಜಿ.ಎಂ. ಉಮಾಪತಿಶಾಸ್ತ್ರಿ, ಸುಕುಮಾರ, ೫–೮, ೯(೧೯೫೫).

೭೬. ಮದರಾಸು ಅಡಿಯಾರು ಪುಸ್ತಕಾಲಯದಲ್ಲಿರುವ ಕನ್ನಡ ಗ್ರಂಥಗಳು, ಶ.ಸಾ. ೨೦–೬, (೧೯೫೭). ಪ್ರತಿ ೫೬.

೭೭. ಬಳ್ಳಾರಿ ಹೊಸಪೇಟೆಯ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ' ಗ್ರಂಥಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿಗ್ರಂಥಗಳ ಸೂಚಿ , ಜಿ. ಎಂ. ಉಮಾಪತಿಶಾಸ್ತ್ರಿ ಹೇಮಕೂಟ ೧–೨, (೧೯೭೫), ೩೩ ಕಟ್ಟು ೧೧೬ ಪ್ರತಿ

೭೮. ಬಳ್ಳಾರಿ ಹೊಸಪೇಟೆಯ ಶ್ರೀ ಜಗದ್ಗುರು ಕೊಟ್ಟುರುಸ್ವಾಮಿ ಸಂಸ್ಥಾನಮಠದ ಗ್ರಂಥಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿ ಗ್ರಂಥಗಳ ಸೂಚಿ,ಎಸ್.ಎಸ್.ಹಿರೇಮಠ ಹೇಮಕೂಟ ೧–೧೧, (೧೯೭೬), ಪ್ರತಿ

೭೯. ಶ್ರೀ ಬಾಹುಬಲಿ ಬ್ರಹ್ಮಚರ್ಯಾಶ್ರಮದಲ್ಲಿ ಮೈಕ್ರೋಫಿಲ್ಮ್ ಮಾಡಿರುವ ಗ್ರಂಥಗಳು, ಬಿ.ಎಸ್.ಸಣ್ಣಯ್ಯ ಸನ್ಮತಿ, ೨೨–೧, (೧೯೭೮) ಪ್ರತಿ ೩೭

೮೦. ಶ್ರೀ ತಾತನವರ ಮಠದ ಗ್ರಂಥಭಂಡಾರ ಸೂಚಿ, ಜಿ.ಎಂ.ಉಮಾಪತಿಶಾಸ್ತ್ರಿ , ಹೇಮಕೂಟ ೪–೧೨ (೧೯೭೯), ಪ್ರತಿ ೧೪.

೮೧. ಇಂಗ್ಲೆಂಡಿನಲ್ಲಿರುವ ಕನ್ನಡ ಹಸ್ತಪ್ರತಿಗಳು, ಎಂ.ಎಂ.ಕಲಬುರ್ಗಿ ಮಾರ್ಗ–೧, ಪ್ರತಿ ೮೦

□□

ಕರ್ನಾಟಕ ಭಾರತಿ ಲೇಖನಸೂಚಿ

• ಹನುಮಾಕ್ಷಿ ಗೋಗಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

೨೩೨ ಪಾರಾಗಂಟಿ: ಒಂದು ಆಚರಣೆ (ಜಾನಪದ)
ಹಿರೇಮಠ (ಶೈಲಜಾ) ಸಂ.೧೯, ಸಂ:೪ ಪು:೬೩–೭೨, ಮೇ ೮೭

೨೩೩ ಪುರಂದರದಾಸ ನಾದೋಪಾಸಕ ಮತ್ತು ಸಂಗೀತಜ್ಞನಾಗಿ (ಸಾಹಿತ್ಯ ಚರಿತ್ರೆ): ನಾಗರಾಜರಾವ್ (ಹೆಚ್)
ಸಂ: ೧೫, ಸಂ: ೩–೪ ಪು: ೧೬–೨೭, ಜನೆವರಿ–ಮೇ ೮೩

೨೩೪ ಪೂರ್ಣತ್ವ: ಒಂದು ವಿಶ್ಲೇಷಣೆ (ಧರ್ಮತತ್ವ) ಹೆಗಡೆ (ಮೋಹನ): ಸಂ. ೧೫, ಸಂ. ೩–೪, ಪು: ೧೦೫–೧೧೩, ಜನವರಿ–ಮೇ ೮೩

೨೩೫ ಪೊನ್ನ ಕವಿಯ ಒಂದು ಪದ್ಯ (ವಿಮರ್ಶೆ): ನಾಗರಾಜಯ್ಯ (ಹಂಪ)
ಸಂ: ೧೪, ಸಂ:೩–೪ ಪು:೧೫–೨೧ ಜನೆವರಿ–ಮೇ ೮೨

೨೩೬ ಪಂಚ ಮಹಾಶಬ್ದ: ಒಂದು ಟಿಪ್ಪಣಿ (ಒರೆಗಲ್ಲು–ಶಾಸನ): ಕೊಪ್ಪ (ಎಸ್.ಕೆ) ಸಂ.೧೭, ಸಂ:೩,ಪು:೧೬೬–೧೬೭,ಜನವರಿ ೮೫

೨೩೭ ಪಂಪ ನನ್ನಯರಲ್ಲಿ ಪಾಂಡು–ಮಾದ್ರಿ ಪ್ರಸಂಗ (ವಿಮರ್ಶೆ) ಮಾಹುಂತಯ್ಯ (ಎಮ್.ಎಸ್) ಸಂ:೧೭, ಸಂ:೩, ಪು:೧–೧೫, ಜನವರಿ ೮೫

೨೩೮ ಪಂಪಯುಗದ ಪುನಃ ಪರಿಶೀಲನೆ (ಸಾಹಿತ್ಯ ಚರಿತ್ರೆ) ಮೋಳದಿ (ಶಶಿಕಲಾ) ಸಂ:೧೧, ಸಂ:೩ ಪು: ೧–೧೦, ಫೆಬ್ರವರಿ ೭೯

೨೩೯ ಪ್ರಕೃತಿಯೇ ಗುರು: ಬಿ.ಕೆ. ಕುಲಕರ್ಣಿ (ಪುಸ್ತಕ ವಿಮರ್ಶೆ) ಅಯ್ಯನಗೌಡರ (ಎಸ್.ವಿ.) ಸಂ:೨೦, ಸಂ:೩, ಪು. ೧೩೩, ಜನೆವರಿ ೮೮

೨೪೦ ಪ್ರಜ್ಞೆ (ಕವನ) ಅಬ್ಬಿಗೇರಿ (ಮೂರ್ತಿಗೌಡ) ಸಂ.:೧೯, ಸಂ: ೪, ಪು. ೮೭, ಮೇ ೮೭

೨೪೧ ಪ್ರಾಚೀನ ಕದಂಬ ವಿಷ್ಣುವರ್ಮ ಮತ್ತು ಸಿಂಹವರ್ಮನ ಮುದಿಗೆರೆಯ ತಾಮ್ರ ಶಾಸನಗಳ ಶೋಧನೆ (ಶಾಸನ) ಸುಂದರ (ಅ) ಸಂ: ೧೫, ಸಂ: ೩–೪, ಪು. ೨೩–೨೪, ಜನೆವರಿ–ಮೇ ೮೩

೨೪೨ ಪ್ರಾಚೀನ ಕಾವ್ಯಗಳಲ್ಲಿ ಶೈಶವದ ವರ್ಣನೆ (ವಿಮರ್ಶೆ) ಕಾಪಸೆ (ಗುರುಲಿಂಗ) ಸಂ: ೧೨, ಸಂ: ೧–೨, ಪು. ೯–೧೮, ಅಗಸ್ಟ–ನವ್ಹಂಬರ ೭೯

೨೪೩ ಪ್ರಾಚೀನ ಲೇಖನ ಸಾಮಗ್ರಿ (ಹಸ್ತಪ್ರತಿ ಶಾಸ್ತ್ರ) ಶಿವಣ್ಣ (ಎಸ್.) ಸಂ: ೧೬, ಸಂ: ೧–೨, ಪು. ೨೨–೩೩, ಆಗಸ್ಟ–ನವ್ಹಂಬರ ೮೩

೨೪೪ ಪ್ರಾದೇಶಿಕ ಕಾದಂಬರಿ ಪರಂಪರೆಯಲ್ಲಿ ಕುವೆಂಪು (ವಿಮರ್ಶೆ) ಕಣವಿ (ಮಹಾದೇವ) ಸಂ: ೧೩, ಸಂ: ೧–೨, ಪು. ೧೦೮–೧೨೪, ಆಗಸ್ಟ–ನವ್ಹಂಬರ ೮೦

೨೪೫ ಬದುಕು (ಕವನ) ಮಾಡಾವು (ಹರಿನಾರಾಯಣ) ಸಂ: ೧೪, ಸಂ:೧–೨, ಪು. ೧೫೩, ಆಗಸ್ಟ–ನವ್ಹಂಬರ ೮೧

೨೪೬ ಬನವಾಸಿ ಮಧುಕೇಶ್ವರಾಲಯದ ನವರಂಗ ಸ್ತಂಬದ ಮೇಲಿರುವ ವಿಭೂತಿ ಗೌರಯ್ಯನ ಶಾಸನ ಶಿಲ್ಪಿ (ಒರೆಗಲ್ಲು–ಇತಿಹಾಸ ಶಿಲ್ಪ) ರಘುನಾಥ ಭಟ್ (ಎಚ್. ಆರ್) ಸಂ: ೧೮ ಸಂ: ೧ ಪು. ೧೫೪–೫೬ ಆಗಸ್ಟ–೮೫

೨೪೭ ....ಬಲದೊಳ್ ಮದ್ರೇಶಂ (ವಿಮರ್ಶೆ) ಇಮ್ರಾಪೂರ (ಸೋಮಶೇಖರ) ಸಂ: ೧೭, ಸಂ: ೩,೪ ಪು. ೯೨–೧೦೦, ಜನೆವರಿ–ಮೇ ೮೧

೨೪೮ ಬಸವಣ್ಣನವರ ವಿಕಸನ ಸಿದ್ಧಾಂತ (ಧರ್ಮತತ್ವ) ಪಾಟೀಲ (ವಸಂತ) ಸಂ: ೧೭, ಸಂ: ೧, ಪು. ೬೧–೭೫, ಅಗಸ್ಟ ೮೪

೨೪೯ ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಥಮ ಹೊಯ್ಸಳ ತಾಮ್ರ ಶಾಸನ (ಶಾಸನ) ರಾಜಶೇಖರ (ಎಸ್) ಸಂ: ೧೨, ಸಂ: ೩, ಪು. ೯೮ ೧೦೨, ಜನವರಿ ೮೦

೨೫೦ ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಥಮ ಹೊಯ್ಸಳ ತಾಮ್ರ ಶಾಸನ (ಶಾಸನ) ರಾಜಶೇಖರ (ಎಸ್) ಸಂ: ೧೪, ಸಂ:೩–೪, ಪು. ೧೧–೧೪, ಜನವರಿ–ಮೇ ೮೨

೨೫೧ ಬದಾಮಿಯ ಅತ್ತಿಮಬ್ಬೆ ಜಕ್ಕಾವೆಯ ಶಾಸನ (ಶಾಸನ) ಪಾಡಿಗಾರ (ಶ್ರೀನಿವಾಸ) ಸಂ: ೨೦, ಸಂ: ೩, ಪು. ೮೮–೯೨, ಜನವರಿ ೮೮

೨೫೨ ಬದಾಮಿಯ 'ಕೋಪ್ಪರಾಯ' ಶಿಲಾ ವಿಗ್ರಹದ ಕುರಿತು (ಇತಿಹಾಸ–ಶಿಲ್ಪ) ಸುಂದರ (ಅ) ಸಂ: ೧೧, ಸಂ: ೩, ಪು. ೩೪–೪೧, ಫೆಬ್ರುವರಿ ೭೯

೨೫೩ ಬಾದುಬ್ಬೆ (ಜಾನಪದ) ಕಲಬುರ್ಗಿ (ಎಂ. ಎಂ.) ಸಂ: ೧೭, ಸಂ: ೧, ಪು. ೧೬೨–೧೬೭, ಅಗಸ್ಟ ೮

೨೫೪ ಬಾರೋಕ್ ವಾಸ್ತುಕಲೆ ಮತ್ತು ಶಿಲ್ಪಕಲೆ (ಇತಿಹಾಸ) ಪಾಟೀಲ (ಎಸ್.ಸಿ.) ಸಂ: ೧೮, ಸಂ: ೧ ಪು: ೧೧೫–೧೨೨, ಆಗಷ್ಟ ೮೫

೨೫೫ ಬಿಳಿಕೂದಲು (ಕವನ) ಮಾಡಾವು (ಹರಿನಾರಾಯಣ) ಸಂ: ೧೧, ಸಂ: ೧, ಪು. ೮೯ ಆಗಷ್ಟ ೭೮

೨೫೬ ಬೀದರ ಜಿಲ್ಲೆಯಲ್ಲಿ ಕೃಷಿ: ವಿಜಯಕುಮಾರ ಗಿಡ್ನವರ (ಪುಸ್ತಕ ವಿಮರ್ಶೆ) ಅಯ್ಯನ ಗೌಡರ (ಎಸ್. ವಿ.) ಸಂ: ೨೦, ಸಂ: ೨, ಪು. ೧೩೩–೧೩೪, ಜನವರಿ ೮೮

೨೫೭ ಬೀದರ ಜಿಲ್ಲೆಯ ಸಾಹಿತ್ಯ ಪರಂಪರೆ (ವಿಮರ್ಶೆ) ಸಬರದ (ಬಸವರಾಜ) ಸಂ: ೨೮, ಸಂ: ೨–೩, ಪು. ೬೭–೭೩, ನವೆಂಬರ ೮೫–ಜನವರಿ ೮೬

೨೫೮ ಬೇಡಗಿನ ವಚನಗಳು (ವಿಮರ್ಶೆ) ಮಲ್ಲಾಪೂರ (ಬಿ. ವ್ಹಿ.) ಸಂ: ೧೫, ಸಂ: ೧–೨, ಪು. ೧೭–೨೪, ಆಗಷ್ಟ –ನವೆಂಬರ ೮೨

೨೫೯ ಬೆನ್ನು ತುರಿಕೆ (ಕವನ) ಮಾದೇವ ಮಿತ್ರ ಸಂ: ೧೨, ಸಂ: ೪, ಪು. ೧೪೫–೧೪೭, ಮೇ ೮೦

೨೬೦ ಬೆಳಕಾಗೇತೆ (ಕವನ) ಕುರಕುರಿ (ಧರಣೇಂದ್ರ) ಸಂ: ೧೪, ಸಂ: ೩–೪, ಪು. ೭೧–೭೨, ಜನವರಿ–ಮೇ ೮೨

೨೬೧ ಬೈಲೊ ರಶ್ಯನ್ ಕಾದಂಬರಿಕಾರ: ಇವಾನ್ ಶಮ್ಯಾಕಿನ್ (ವಿಮರ್ಶೆ) ಹಿಂಗಮಿರೆ (ಬುದ್ದಣ್ಣ) ಸಂ: ೧೫, ಸಂ: ೧–೨, ಪು. ೨೫–೩೨, ಅಗಷ್ಟ–ನವಂಬರ ೮೨

೨೬೨ ಬ್ರೌನಿಂಗ್ ಕವಿಯ ನಾಟಕೀಯಾತ್ಮ ಗೀತ (ವಿಮರ್ಶೆ) ನಾಯ್ಕರ (ಬಸವರಾಜ) ಸಂ: ೧೨, ಸಂ: ೪, ಪು. ೩೯ ಮೇ ೮೦

೨೬೩ ಬಂಧುವರ್ಮ ಪೊನ್ನ: ಸಂತುಲನ (ವಿಮರ್ಶೆ) ನಾಗರಾಜಯ್ಯ (ಹಂಪ) ಸಂ: ೨೦, ಸಂ: ೪, ಪು. :೭–೪೮, ಮೇ ೮೮

೨೬೪ ಬೇಂದ್ರ ಕಾವ್ಯದಲ್ಲಿ ಸಾಂಸ್ಕೃತಿಕ ಕಾಳಜಿಗಳು: ಒಂದು ಟಿಪ್ಪಣಿ (ವಿಮರ್ಶೆ) ಹಕಾರಿ (ದೇವೇಂದ್ರ ಕುಮಾರ) ಸಂ: ೧೯, ಸಂ: ೨, ಪು: ೬–೧೮, ನವಂಬರ ೮೬

೨೬೫ ಭಗವದ್ಗೀತೆಯಲ್ಲಿ ಆತ್ಮನ ಸ್ವರೂಪ (ಧರ್ಮ ತತ್ವ) ಜೋಶಿ (ಮಹಾದೇವ. ಎನ್) ಸಂ: ೨೦, ಸಂ: ೪, ಪು. ೯೧–೧೦೪, ಮೇ ೮೮

೨೬೬ ಭರತ ಬಾಹುಬಲಿ ವ್ಯಾಯೋಗ (ವಿಮರ್ಶೆ) ವೀರಭದ್ರಯ್ಯ (ಸಿ. ಎಂ.) ಸಂ: ೧೯, ಸಂ: ೪, ಪು. ೧–೭, ಮೇ ೮೭

೨೬೭ ಭಾರತದಲ್ಲಿ ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದನೆ (ವಿಜ್ಞಾನ) ಪ್ರಭಾಕರ (ಬಿ. ಎಸ್.) ಸಂ: ೧೭, ಸಂ: ೨, ಪು. ೧–೬, ನವಂಬರ ೮೪

೨೬೮ ಭಾರತದಲ್ಲಿ ಶಿವಾಲಯಗಳು (ಇತಿಹಾಸ) ಹೆಬ್ಬಳ್ಳಿ (ವ್ಹಿ. ವ್ಹಿ.) ಸಂ: ೧೭, ಸಂ: ೧, ಪು: ೩೨–೪೩, ಅಗಷ್ಟ ೮೪

೨೬೯ ಭಾರತದ ಶಿಕ್ಷಣ–ಒಂದು ಸಮೀಕ್ಷೆ (ಶಿಕ್ಷಣ ಶಾಸ್ತ್ರ) ಮಾರಿಹಾಳ (ವ್ಹಿ. ಜಿ) ಸಂ: ೧೮, ಸಂ: ೪, ಪು. ೩೯–೪೭, ಮೇ ೮೬

೨೭೦ ಭಾರತೀಯರ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯರ ತಂತ್ರ ವಿಧಾನ, ಪ್ರತಿಕ್ರಿಯೆ (ಕಾವ್ಯ ಮೀಮಾಂಸೆ) ವೀರಭದ್ರಯ್ಯ (ಸಿ. ಎಂ.) ಸಂ: ೧೮, ಸಂ: ೨–೩, ಪು. ೧೨೩–೧೨೯, ನವಂಬರ ೮೫– ಜನವರಿ ೮೬

೨೭೧ ಭಾರತೀಯ ಸಾಹಿತ್ಯಕ್ಕೆ ಕನ್ನಡದ ಕೊಡುಗೆ (ಸಾಹಿತ್ಯ ಚರಿತ್ರೆ) ಹೆಗಡೆ (ಆರ್. ಪಿ.) ಸಂ: ೨೦, ಸಂ: ೨, ಪು. ೭–೨೬, ನವಂಬರ ೮೭

೨೭೨ ಭಾವಗೀತೆ (ಕವನ) ಕರಿಯವರ (ವಿರೂಪಾಕ್ಷಪ್ಪ) ಸಂ: ೨೦, ಸಂ: ೨, ಪು. ೧೦೫ ನವಂಬರ ೮೭

೨೭೩ ಭಾವನೆಗಳು (ಕವನ) ಅಬ್ಬಿಗೇರಿ (ಮೂರ್ತಿಗೌಡ) ಸಂ: ೧೯, ಸಂ: ೩, ಪು: ೨೧೮, ಜನವರಿ ೮೭

೨೭೪ ಭಾಷಾನಿರೂಪಕ (ಭಾಷಾ ವಿಜ್ಞಾನ) ಮಾಡ್ತ (ವಿಲ್ಯಂ) ಸಂ: ೨೦, ಸಂ: ೨, ಪು. ೭೩–೮೨, ನವಂಬರ ೮೭

೨೭೫ ಭಾಷಾ ಬಾಂಧವ್ಯಃ ವೈಜ್ಞಾನಿಕ ದೃಷ್ಟಿ (ಭಾಷಾ ವಿಜ್ಞಾನ) ಶಾಸ್ತ್ರಿ (ಕೆ. ಜಿ.) ಸಂಃ ೧೫, ಸಂಃ ೧–೨, ಪು. ೯೫–೧೦೦, ಅಗಷ್ಟ–ನವಂಬರ ೮೨

೨೭೬ ಭಾಷಾ ವಿಜ್ಞಾನ ಇತಿಹಾಸ– ಸಿಂಹಾವಲೋಕನ (ಭಾಷಾ ವಿಜ್ಞಾನ) ಮಾಡ್ತ (ವಿಲ್ಯಂ) ಸಂಃ ೧೮, ಸಂಃ ೨–೩, ಪು. ೪೮–೬೬, ನವಂಬರ ೮೫–ಜನವರಿ ೮೬

೨೭೭ ಭಾಷಾ ಸಂಪರ್ಕದ ಅಧ್ಯಯನ (ಭಾಷಾ ವಿಜ್ಞಾನ) ಗೋಪಾಲ ಕೃಷ್ಣ (ವಿ) ಸಂಃ ೧೧, ಸಂ: ೨, ಪು. ೧೩–೨೧, ನವಂಬರ ೭೮

೨೭೮ ಭಾಷೆ–ಅಕ್ಷರ–ವಾಚನ ಪದ್ಧತಿ (ಸಂಪಾದನ ಶಾಸ್ತ್ರ) ಬಸವಾರಾಧ್ಯ (ಎನ್) ಸಂಃ ೧೬, ಸಂಃ ೧–೨, ಪು. ೯೫–೧೦೬, ಅಗಷ್ಟ–ನವಂಬರ ೮೩

೨೭೯ ಭಾಷೆ ಮತ್ತು ಸಂಸ್ಕೃತಿ (ಭಾಷಾ ವಿಜ್ಞಾನ) ಮಾಡ್ತ (ವಿಲ್ಯಂ) ಸಂಃ ೧೭, ಸಂಃ ೩, ಪು. ೧೨೧–೧೨೬, ಜನವರಿ ೮೫

೨೮೦ ಭೀಮಕವಿಯ ಮೇಲೆ ಪಾಲ್ಕುರಿಕೆ ಸೋಮನಾಥನ ಪ್ರಭಾವಃ ಒಂದು ಅನಿಸಿಕೆ (ಸಾಹಿತ್ಯ ಚರಿತ್ರೆ) ವಿದ್ಯಾಶಂಕರ ಸಂಃ ೧೧, ಸಂಃ ೪, ಪು. ೧–೨೦, ಮೇ ೭೯

೨೮೧ ಭೈರಪ್ಪನವರ ಕಾದಂಬರಿಗಳಲ್ಲಿ ಪ್ರೇಮದ ಪರಿಕಲ್ಪನೆ (ವಿಮರ್ಶೆ) ಹೆಗಡೆ (ಜಿ. ಎಂ.) ಸಂಃ ೧೧, ಸಂಃ ೨, ಪು. ೮೬–೯೬, ನವಂಬರ ೭೮

೨೮೨ ಮಕ್ಕಳ ಸಾಹಿತ್ಯಕ್ಕೆ ಎಂ. ಎಸ್. ಪುಟ್ಟಣ್ಣನವರ ಕೊಡುಗೆ (ವಿಮರ್ಶೆ) ಹುಯಿಲಗೋಳ (ವರದರಾಜ) ಸಂಃ ೧೨, ಸಂಃ ೧–೨, ಪು. ೪೫–೫೧, ಅಗಷ್ಟ–ನವಂಬರ

೨೮೩ ಮಕ್ಕಳ ಸಾಹಿತ್ಯಕ್ಕೆ ಜಾ. ಜಿ. ಪಿ. ರಾಜರತ್ನಂ ಅವರ ಕೊಡುಗೆ (ವಿಮರ್ಶೆ) ವೃಷಭೇಂದ್ರ ಸ್ವಾಮಿ (ಎಸ್. ಎಂ.) ಸಂಃ ೧೨, ಸಂಃ ೧–೨, ಪು. ೭೮–೮೩, ಅಗಷ್ಟ–ನವಂಬರ ೭೯

೨೮೪ ಮಕ್ಕಳ ಸಾಹಿತ್ಯಕ್ಕೆ ಹೊಯಿಸಳರ ಕೊಡುಗೆ (ವಿಮರ್ಶೆ) ಬೇಂದ್ರೆ (ವಾ. ದ.) ಸಂಃ ೧೨, ಸಂಃ ೧–೨, ಪು. ೫೨–೫೮, ಅಗಷ್ಟ–ನವಂಬರ ೭೯

೨೮೫ ಮಗು ಮತ್ತು ಭಾಷಾ ಕಲಿಕೆ (Child and language learning) (ಭಾಷಾ ವಿಜ್ಞಾನ) ಮಹೇಶ್ವರಯ್ಯ (ಎಚ್. ಎಂ.) ಸಂಃ ೨೦, ಸಂಃ ೩, ಪು. ೧೦೧–೧೦೭, ಜನವರಿ ೮೮

೨೮೬ ಮಡಿವಾಳೇಶ್ವರ ಲಾವಣಿಃ ಸಂಪಾದನೆ (ಜಾನಪದ) ಕೊಪ್ಪಳ (ನಿಜಲಿಂಗಮ್ಮ) ಸಂಃ ೧೮, ಸಂಃ ೧, ಪು. ೧೧೦–೧೨೩, ಅಗಷ್ಟ ೭೮

೨೮೭ ಮದ್ಯಪಾನ ಮತ್ತು ಸಮಾಜ ಕಾರ್ಯ (ಸಮಾಜ ವಿಜ್ಞಾನ) ಶೋಭಾದೇವಿ (ವೈ. ಜಿಎ.) ಸಂಃ ೧೮, ಸಂಃ ೨–೩, ಪು. ೩೮–೪೭, ನವಂಬರ ೮೫–ಜನವರಿ ೮೬

೨೮೮ ಮಧುರ್ಕೈ ಕನ್ನಡದಲ್ಲಿ ಗಾದೆಗಳುಃ ಒಂದು ಅಭ್ಯಾಸ (ಭಾಷಾವಿಜ್ಞಾನ) ಕುಲಕರ್ಣಿ (ಪ್ರ. ವಿ.) ಸಂಃ ೧೮, ಸಂಃ ೨–೩, ಪು. ೯೮–೧೧೦, ನವಂಬರ ೮೫–ಜನವರಿ ೮೬

೨೮೯ ಮಲೆನಾಡಿನ ಕೃಷಿಕರ ವೃತ್ತಿ ಪದಕೋಶ (ಜಾನಪದ) ಮಹೇಶ್ವರಯ್ಯ (ಎಚ್. ಎಂ.) ಸಂಃ ೧೮, ಸಂಃ ೧, ಪು. ೧೨೩–೧೪೪, ಅಗಷ್ಟ ೮೫

೨೯೦ ಮಹರ್ಷಿ ವಾಲ್ಮೀಕಿ ಮತ್ತು ಮಹಾಕವಿ ಕುವೆಂಪು (ವಿಮರ್ಶೆ) ಕೃಷ್ಣಮೂರ್ತಿ (ಕೆ) ಸಂ: ೧೨, ಸಂ: ೧-೨, ಪು. ೧೬-೩೨, ಅಗಷ್ಟ-ನವಂಬರ ೮೦

೨೯೧ ಮಹಾ ಕಾದಂಬರಿ ನೋಸ್ಟ್ರೋಮೊ (ವಿಮರ್ಶೆ) ನಾಯ್ಕರ (ಬಸವರಾಜ) ಸಂ: ೧೪, ಸಂ: ೧-೨, ಪು. ೩೫-೪೯, ಅಗಷ್ಟ-ನವಂಬರ ೮೧

೨೯೨ ಮಹಾದೇವಿ ಅಕ್ಕನಿಗೆ ಮದುವೆಯಾಗಿತ್ತೆ? ಒಂದು ವಿವಾದ (ಸಂಕೀರ್ಣ ಚರಿತ್ರೆ) ವೀರಭದ್ರಯ್ಯ (ಸಿ. ಎಂ.) ಸಂ: ೧೨, ಸಂ: ೧, ಪು. ೧೨೩-೧೨೯, ಅಗಷ್ಟ ೮೪

೨೯೩ ಮಹಾಮಸ್ತಕಾಭಿಷೇಕ (ಕವನ) ಸಿದ್ಧಲಿಂಗಯ್ಯ (ಜಿ. ಎಸ್.) ಸಂ: ೧೫, ಸಂ: ೩-೪, ಪು. ೧೧೪, ಜನವರಿ-ಮೇ ೮೩

೨೯೪ ಮಹಾಸತಿ ವೀರದಿಮ್ಮವ್ವ (ಜಾನಪದ) ಹನೂರ (ಕೃಷ್ಣ ಮೂರ್ತಿ) ಸಂ: ೧೧, ಸಂ: ೨, ಪು. ೧೩೮-೧೭೪, ನವಂಬರ ೭೮

೨೯೫ ಮಹಿಳಾ ಕಾರ್ಮಿಕರ ಹಕ್ಕುಗಳು (ಸಮಾಜ ವಿಜ್ಞಾನ) ಪೈ (ವಿನೀತಾ ಬಿ.) ಸಂ: ೧೯, ಸಂ: ೩, ಪು. ೬೫-೭೪, ಜನವರಿ ೮೭

೨೯೬ ಮಾನಸೋಲ್ಲಾಸ ಗ್ರಂಥದಲ್ಲಿ ಸಾಮಾಜಿಕ ಸೇವಕನ ಸಾಮಾನ್ಯ ಗುಣಗಳು (ವಿಮರ್ಶೆ) ಜೋಶಿ (ಎಂ. ಎನ್.) ಸಂ: ೧೮, ಸಂ: ೧, ಪು. ೩೩-೪೨, ಅಗಷ್ಟ ೮೫

೨೯೭ ಮಾನಸೋಲ್ಲಾಸದಲ್ಲಿ ವನಮಹೋತ್ಸವ (ವಿಮರ್ಶೆ) ಜೋಶಿ (ಮಹಾದೇವ) ಸಂ: ೧೭, ಸಂ: ೩, ಪು. ೫೪-೬೧, ಜನವರಿ ೮೫

೨೯೮ ಮಾಳ: ಒಂದು ವಿವೇಚನೆ (ಜಾನಪದ) ಪಾಟೀಲ (ಸದಾನಂದ) ಸಂ: ೧೭, ಸಂ: ೧, ಪು. ೧೪೮-೧೫೭, ಅಗಷ್ಟ ೮೪

೨೯೯ ಮಿಲ್ಟನ್ ಮತ್ತು ಕುವೆಂಪು (ವಿಮರ್ಶೆ) ನಾರಾಯಣಾಚಾರ್ (ಕೆ. ಎಸ್.) ಸಂ: ೧೩, ಸಂ: ೧-೨, ಪು. ೪೭-೭೨, ಅಗಷ್ಟ-ನವಂಬರ ೮೦

೩೦೦ ಮುಕ್ತಾಯಕ್ಕಗಳ ಒಂದು ವಚನದ ವಿರಾಮ ಚಿಹ್ನ ಪರಿಶೀಲನೆ (ವಿಮರ್ಶೆ) ಕಂಬಿ (ವ್ಹಿ. ಎಸ್.) ಸಂ: ೧೫, ಸಂ: ೩-೪, ಪು. ೯೪-೧೦೪, ಜನವರಿ-ಮೇ ೮೩

೩೦೧ ಮುದನೂರು ಗ್ರಾಮದ ಶಾಸನಗಳು (ಶಾಸನ) ಹಿರೇಮಠ (ಬಿ. ಆರ್.) ಗೋಗಿ (ಹನುಮಾಕ್ಷಿ ಚಂದಪ್ಪ) ಸಂ: ೧೮, ಸಂ: ೧, ಪು. ೭೬-೧೧೪, ಅಗಷ್ಟ ೮೫

೩೦೨ ಮುಮ್ಮಡಿ ಚಿಕ್ಕಭೂಪಾಲ ಮತ್ತು ಹರದನಹಳ್ಳಿ ಬಸವಲಿಂಗ ಸ್ವಾಮಿಗಳು (ಸಂಶೋಧನೆ ಹಿರೇಮಠ (ಬಿ. ಆರ್.) ಸಂ: ೧೧, ಸಂ: ೪, ಪು. ೫೦-೫೪, ಮೇ ೭೯

೩೦೩ ಮೂಡಲಪಾಯ ಬಯಲಾಟದ ನವೀಕರಣ (ಜಾನಪದ) ಕೊಟ್ರಶೆಟ್ಟಿ (ಎಂ. ಬಿ.) ಸಂ: ೧೬೫, ಸಂ: ೩-೪, ಪು. ೧-೮, ಜನವರಿ-ಮೇ ೮೩

೩೦೪ ಮೈಲಾರಲಿಂಗ ಮತ್ತು ಪರಿವಾರ ದೇವತೆಗಳು (ಜಾನಪದ) ನೇಗಿನಹಾಳ (ಎಂ. ಬಿ.) ಸಂ: ೧೪, ಸಂ: ೩-೪, ಪು. ೮೨-೯೩, ಜನವರಿ-ಮೇ ೮೨

೩೦೫ ಮೋರಟಗಿ ಸಿದ್ಧಲಿಂಗಪ್ಪ ನಿರೂಪಿಸಿದ ದೇಶಿಕ ಶ್ರೇಷ್ಠನ ಸ್ತೋತ್ರ (ಸಂಪಾದನೆ) ಹಿರೇಮಠ (ಬಿ. ಆರ್.) ಸಂ: ೨೦, ಸಂ: ೨, ಪು. ೯೭-೧೦೪, ನವಂಬರ ೮೭

೩೦೬ ಯಡ್ರಾಮಿಯ ಶಾಸನಗಳು (ಶಾಸನ) ಹಿರೇಮಠ (ಬಿ. ಆರ್.) ಗೋಗಿ (ಹನುಮಾಕ್ಷಿ ಚಂದಪ್ಪ) ಸಂಃ ೧೮, ಸಂಃ ೪, ಪು. ೧೨೧–೧೫೪, ಮೇ ೮೬

೩೦೭ ಯಶವಂತ ಚಿತ್ತಾಲರೊಂದಿಗೆ ಸಂದರ್ಶನ (ಸಂಕೀರ್ಣ) ನಾಯ್ಕರ (ಬಸವರಾಜ) ಸಂಃ ೨೦, ಸಂಃ ೨, ಪು. ೧–೬, ನವಂಬರ ೮೭

೩೦೮ ಯಶೋಧರ ಚರಿತೆಃ ಧಾರ್ಮಿಕ ವಿಶ್ಲೇಷಣೆ (ವಿಮರ್ಶೆ) ದಿಬ್ಬದ (ಶಾಂತಿನಾಥ) ಸಂಃ ೧೭, ಸಂಃ ೧, ಪು. ೯೪–೧೦೨, ಅಗಷ್ಟ ೮೪

೩೦೯ ರತ್ನಾಕರನ ಹಾಡುಗಳು–ದಾಸರ ಕೀರ್ತನೆಗಳು (ವಿಮರ್ಶೆ) ಪಾಟೀಲ (ಎಸ್. ಪಿ.) ಸಂಃ ೨೦, ಸಂಃ ೨, ಪು. ೫೭–೭೨, ನವಂಬರ ೮೭

೩೧೦ ರತ್ನಾಕರವರ್ಣಿಃ ಒಂದು ಸಮಾಲೋಚನೆ (ವಿಮರ್ಶೆ) ಕುಲಕರ್ಣಿ (ಆರ್. ಪಿ.) ಸಂಃ ೧೫, ಸಂಃ ೧–೨, ಪು. ೪೯–೬೦, ಅಗಷ್ಟ ನವಂಬರ ೮೨

೩೧೧ ರಾಷ್ಟ್ರಕವಿ ಗೋವಿಂದ ಪೈಗಳ ಕಾವ್ಯ (ವಿಮರ್ಶೆ) ವೃಷಭೇಂದ್ರಸ್ವಾಮಿ (ಎಸ್. ಎಂ.) ಸಂಃ ೧೬, ಸಂಃ ೩–೪, ಪುಃ ೫೦–೬೨, ಜನವರಿ–ಮೇ ೮೪

೩೧೨ ರಾಷ್ಟ್ರೀಯ ಭಾವೈಕ್ಯ ಮತ್ತು ಇಸ್ಲಾಂ ಧರ್ಮ (ಧರ್ಮತತ್ವ) ಷರೀಫ್ (ಸೈಯದ ಜಮೀರುಲ್ಲಾ) ಸಂಃ ೨೦, ಸಂಃ ೧, ಪು. ೯೯–೧೧೪, ಅಗಷ್ಟ ೮೭

೩೧೩ ರಾಷ್ಟ್ರೀಯ ಭಾವೈಕ್ಯ ಮತ್ತು ಕ್ರೈಸ್ತ ಧರ್ಮ (ಧರ್ಮತತ್ವ) ಮಾಡ್ತ (ವಿಲ್ಯಂ) ಸಂಃ ೨೦, ಸಂಃ ೧, ಪು. ೮೨–೯೮, ಅಗಷ್ಟ ೮೭

೩೧೪ ರಾಷ್ಟ್ರೀಯ ಭಾವೈಕ್ಯ ಮತ್ತು ಜೈನ ಧರ್ಮ(ಧರ್ಮ ತತ್ವ) ಪಾಟೀಲ (ಎಸ್. ಪಿ.) ಸಂಃ ೨೦, ಸಂಃ ೧, ಪು. ೪೨–೬೩, ಅಗಷ್ಟ ೮೭

೩೧೫ ರಾಷ್ಟ್ರೀಯ ಭಾವೈಕ್ಯ ಮತ್ತು ಬೌದ್ಧ ಧರ್ಮ (ಧರ್ಮ ತತ್ವ) ತಾಳ್ತಜೆ (ವಸಂತ ಕುಮಾರ) ಸಂಃ ೨೦, ಸಂಃ ೧, ಪು. ೬೪–೮೧, ಅಗಷ್ಟ ೮೭

೩೧೬ ರಾಷ್ಟ್ರೀಯ ಭಾವೈಕ್ಯ ಮತ್ತು ವೀರಶೈವಧರ್ಮ (ಧರ್ಮತತ್ವ) ಜವಳಿ (ಬಿ. ಸಿ.) ಸಂಃ ೨೦, ಸಂಃ ೧, ಪು. ೨೨೫–೧೨೮, ಅಗಷ್ಟ ೮೭

೩೧೭ ರಾಷ್ಟ್ರೀಯ ಭಾವೈಕ್ಯ ಮತ್ತು ವೈದಿಕಧರ್ಮ (ಧರ್ಮತತ್ವ) ಶಾನಭಾಗ (ದಯಾನಂದ ನರಸಿಂಹ) ಸಂಃ ೨೦, ಸಂಃ ೧, ಪು. ೨೧–೪೧, ಅಗಷ್ಟ ೮೭

೩೧೮ ರಾಷ್ಟ್ರೀಯ ಭಾವೈಕ್ಯ ಮತ್ತು ಸಿಖ್ ಧರ್ಮಃ ಒಂದು ಟಿಪ್ಪಣೆ (ಧರ್ಮತತ್ವ) ರಘುನಾಥ ಭಟ್ (ಎಚ್. ಆರ್.) ಸಂಃ ೨೦, ಸಂಃ ೧, ಪು. ೧೨೯–೧೩೫, ಅಗಷ್ಟ ೮೭

೩೧೯ ರಾಷ್ಟ್ರೀಯ ವಯಸ್ಕರ ಶಿಕ್ಷಣ ಸಾಧನೆಃ ೧೯೭೯–೮೦ (ಸಮಾಜ ವಿಜ್ಞಾನ) ನಾಗಪ್ಪ (ಟಿ. ಆರ್.) ಸಂಃ ೧೨, ಸಂಃ ೩, ಪು. ೧೧೫–೧೨೪, ಜನವರಿ ೮೦

೩೨೦ ರಾಷ್ಟ್ರೀಯವಾದಿ ಡಾ. ಬಿ. ಆರ್. ಅಂಬೇಡ್ಕರರು (ಜೀವನ ಚರಿತ್ರೆ) ಪಾಟೀಲ (ಎನ್. ಎ.) ಸಂಃ ೧೮, ಸಂಃ ೨–೩, ಪು. ೧೧೭–೧೨೨, ನವಂಬರ ೮೫–ಜನವರಿ ೮೬

೩೨೧ ರೇಮಾನ್ಸ್ಃ ಒಂದು ಸಾಹಿತ್ಯ ಪ್ರಕಾರ (ವಿಮರ್ಶೆ) ನಾಯ್ಕರ (ಬಸವರಾಜ) ಸಂಃ ೧೫, ಸಂಃ ೩–೪, ಪು. ೯–೧೫, ಜನವರಿ–ಮೇ ೮೩

೩೨೨ ಲಕ್ಷ್ಮೀಶ ಕವಿಯ ಕಾಲಮಾನ (ಸಾಹಿತ್ಯ ಚರಿತ್ರೆ, ವೆಂಕಟರಾಯಾಚಾರ್ಯ (ಕೆ) ಸಂಃ ೧೪, ಸಂಃ ೩–೪, ಪು. ೧–೧೦, ಜನವರಿ–ಮೇ ೮೨

೩೨೩ ಲೆಕ್ಕ (ಕವನ), ಸನದಿ (ಬಿ. ಎ.) ಸಂಃ ೧೫, ಸಂಃ ೧–೨, ಪು. ೧೧೭, ಅಗಷ್ಟ–ನವಂಬರ ೮೨

೩೨೪ ಲೇಖನ ಸೂಚಿ (ಸೂಚಿ) ಗೋಗಿ (ಹನುಮಾಕ್ಷಿ ಚಂದಪ್ಪ) ಜೋಷಿ (ಚಿತ್ರಾ) ಸಂಃ ೧೨, ಸಂಃ ೧–೨, ಪು. ೧೩೬–೨೧೮, ಅಗಷ್ಟ–ನವಂಬರ ೭೯

೩೨೫ ಲೇಖನಾಭಿವೃದ್ಧಿ (ಹಸ್ತ ಪ್ರತಿ) ದೇವೀರಪ್ಪ (ಎಚ್) ಸಂಃ ೧೬, ಸಂಃ ೧–೨, ಪು. ೩೬–೫೨, ಅಗಷ್ಟ–ನವಂಬರ ೮೩

೩೨೬ ಲೇಸರದಿಂದ ನ್ಯೂಕ್ಲೀಯ ಸಂಯೋಗ ಶಕ್ತಿ (ವಿಜ್ಞಾನ) ದೀಕ್ಷಿತ್ (ಎಂ. ಎಸ್.) ಮತ್ತು ನಾಯಕ (ಆರ್. ಸಿ.) ಸಂಃ ೧೭, ಸಂಃ ೨, ಪುಃ ೪೦–೪೫, ನವಂಬರ ೮೪

೩೨೭ ಲಂಡನ್ನಿನ ವೆಲ್‌ಕಮ್ ಸಂಸ್ಥೆಯಲ್ಲಿರುವ ಔಷಧೀಯಚರಿತ್ರೆಗೆ ಸಂಬಂಧಿಸಿದ ಪೌರ್ವಾತ್ಯ ಹಸ್ತಪ್ರತಿಗಳ ಸಂಗ್ರಹ (ಅನುವಾದ) ಮೂಲಃ ನೈಜಲ್ ಅಲನ್, ಅನುಃ ಹಿರೇಮಠ (ಬಿ.ಕೆ.) ಸಂಃ ೧೫, ಸಂಃ ೩–೪, ಪು. ೪–೪೯, ಜನವರಿ–ಮೇ ೮೩

೩೨೮ ವಡಗಾಂವ–ಮಾಧವಪುರಃ ಇತರ ಕೆಲವು ಮುಖ್ಯ ಶೋಧನೆಗಳು (ಇತಿಹಾಸ) ಸುಂದರ (ಅ) ಸಂಃ ೧೧, ಸಂಃ ೧, ಪು. ೬೮–೮೮, ಅಗಷ್ಟ ೭೮

೩೨೯ ವಯಸ್ಕರ ಶಿಕ್ಷಣ ಮತ್ತು ಅಂದಿನ ಜಾಗೃತಿಃ ಪೌಲೋ ಫ್ರೇರೇಯವರ ವಿಚಾರ (ಶಿಕ್ಷಣ ಶಾಸ್ತ್ರ) ಕಿರಣ್ ಕಮಲಾ ಪ್ರಸಾದ (ಜೆಸ) ಸಂಃ ೧೮, ಸಂಃ ೨–೩, ಪು. ೭೪–೮೩, ನವಂಬರ ೮೫–ಜನೆವರಿ ೮೬

೩೩೦ ವರದ ಮೂಲದ ಗುಂಡಬ್ರಹ್ಮಯ್ಯಗಳ ವಿಗ್ರಹ (ಒರೆಗಲ್ಲು–ಸಂಶೋಧನೆ) ಎಲಿಗಾರ (ಚೆನ್ನಕ್ಕ) ಸಂಃ ೧೧, ಸಂಃ ೧, ಪು. ೧೪೮–೧೫೦, ಅಗಷ್ಟ ೭೮

೩೩೧ ವಿಗ್ರಹ ವೀರ (ಕವನ) ಹಿರೇಮಠ (ಪಂಚಾಕ್ಷರಿ ಗ.) ಸಂಃ ೧೩, ಸಂಃ ೨–೪, ಪು. ೫೪–೫೫, ಜನವರಿ–ಮೇ ೮೧

೩೩೨ ವಿಜಯನಗರ ಬುಕ್ಕರಾಯನ ಭಾವೀಕೇರಿ ಶಾಸನಃ ಒಂದು ಸಶೋಧನೆ (ಶಾಸನ) ರಘುನಾಥ ಭಟ್ (ಎಚ್. ಆರ್.) ಸಂಃ ೧೮, ಸಂಃ ೪, ಪು. ೭೫–೮೦, ಮೇ ೮೬

೩೩೩ ವಿರಾಮ ಮತ್ತು ಮನರಂಜನೆ (ಸಮಾಜ ವಿಜ್ಞಾನ) ಚರಂತಿಮಠ (ಎಂ. ಬಿ.) ಸಂಃ ೧೫, ಸಂಃ ೩–೪, ಪು. ೬೩–೭೧, ಜನವರಿ–ಮೇ ೮೩

೩೩೪ ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳುಃ ನಾರಾಯಣಸ್ವಾಮಿ (ಜ. ಹೋ.) (ಪುಸ್ತಕ ವಿಮರ್ಶೆ) ಹಿಂಗಮಿರೆ (ಬುದ್ದಣ್ಣ) ಸಂಃ ೨೦, ಸಂಃ ೧, ಪು. ೧೩೬–೧೩೮, ಅಗಷ್ಟ ೮೭

೩೩೫ ವೀರಶೈವ ಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯಃ ವಿವೇಚನೆ (ಧರ್ಮತತ್ವ) ಕಂಬಿ (ವ್ಹಿ. ಎಸ್.) ಸಂಃ ೧೧, ಸಂಃ ೧, ಪು. ೧೩೨–೧೪೩, ಅಗಷ್ಟ ೭೮

೩೩೬ ವೃತ್ತಿರಂಗಭೂಮಿಯ ಪರಂಪರೆ (ಜಾನಪದ) ಕೋತಿನ (ಎಸ್. ಎಸ್.) ಸಂಃ ೧೯, ಸಂಃ

೨, ಪು. ೧೯–೪೧, ನವಂಬರ ೮೬

೩೩೭ ಶಕ್ತಿಯ ಮಾಹಿತಿ ಸಂಪನ್ಮೂಲಗಳು–ಒಂದು ವಿವರಣೆ (ವಿಜ್ಞಾನ) ಕರಿಸಿದ್ಧಪ್ಪ (ಸಿ. ಆರ್.) ಸಂ೯ ೧೭, ಸಂ೯ ೨, ಪು. ೭೫–೮೨, ನವಂಬರ ೮೪

೩೩೮ ಶರಣರ ಕ್ರಾಂತಿಯ ಸಫಲತೆ–ವಿಫಲತೆ: ಒಂದು ವಿವೇಚನೆ (ಧರ್ಮತತ್ವ) ಸಬರದ (ಬಸವರಾಜ) ಸಂ೯ ೧೪, ಸಂ೯ ೩–೪, ಪು. ೨೨–೪೦, ಜನವರಿ–ಮೇ ೮೨

೩೩೯ ಶಾಸನಗಳಲ್ಲಿ ಸಂಗೀತಕಾರರು (ಶಾಸನ) ಇಸ್ಮಾಯಿಲ್ (ಡಿ) ಸಂ೯ ೨೦, ಸಂ೯ ೩, ಪು. ೯೩–೧೦೦, ಜನವರಿ ೮೮

೩೪೦ ಶಾಸನ ಪದಸೂಚಿ (ಶಾಸನ) ಎಲಿಗಾರ (ಚೆನ್ನಕ್ಕ) ಸಂ೯ ೧೧, ಸಂ೯ ೨, ಪು. ೧೨೦–೧೩೭, ನವಂಬರ ೭೮

೩೪೧ ಶಾಸನ ಪದಸೂಚಿ (ಶಾಸನ) ಎಲಿಗಾರ (ಚೆನ್ನಕ್ಕ) ಸಂ೯ ೧೧, ಸಂ೯ ೪, ಪು. ೮೯–೧೦೦, ಮೇ ೭೯

೩೪೨ ಶಿವಬಸೂನ ಕತೆ (ಜಾನಪದ) ಸಂ೯ ಪಾಟೀಲ (ಸದಾನಂದ) ಸಂ೯ ೧೧, ಸಂ೯ ೪, ಪು. ೮೫–೮೮,ಮೇ ೭೯

೩೪೩ ಶಿವಭಕ್ತಿ ಇಕ್ಕದ ಮಾರಯ್ಯ (ನಾಟಕ) ಪಾಟೀಲ (ಬಿ.ಪಿ.) ಸಂ೯ ೨೦, ಸಂ೯ ೪, ಪು. ೧೨೭–೧೩೮, ಮೇ ೮೮

೩೪೪ ಶಿವಮಹಿಮಾ ಸ್ತೋತ್ರದ ವಚನ (ಸಂಪಾದನೆ) ರಾಜೂರ (ವೀರಣ್ಣ) ಸಂ೯ ೧೭, ಸಂ೯ ೨, ಪು೯ ೧೧೪–೧೪೫, ನವಂಬರ ೮೬

೩೪೫ ಶಿಶು ಸಾಹಿತ್ಯಕ್ಕೆ ಶ್ರೀ ಕುವೆಂಪು ಅವರ ಕೊಡುಗೆ (ವಿಮರ್ಶೆ) ಭಾಗೋಜಿ (ಪ್ರಲ್ಹಾದ ಕುಮಾರ) ಸಂ೯ ೧೨, ಸಂ೯ ೧–೨, ಪು. ೫೯–೬೯, ಅಗಸ್ಟ–ನವಂಬರ ೭೯

೩೪೬ ಶಿಕ್ಷಕ ಸಮಾಜದಿಂದ ಕಲಿಯಬೇಕಾದುದೇನು? (ಸಮಾಜ–ವಿಜ್ಞಾನ) ತಿಗಡಿ (ಜಿ. ಎ.) ಸಂ೯ ೧೯, ಸಂ೯ ೪, ಪು. ೫೨–೫೬, ಮೇ ೮೭

೩೪೭ ಶಿಕ್ಷಣ ಮಹಾವಿದ್ಯಾಲಯಗಳಲ್ಲಿಯ ಹಣದ ವೆಚ್ಚ ಒಂದು ತುಲನಾತ್ಮಕ ಅಧ್ಯಯನ (ಸಂಕೀರ್ಣ) ಕಾಶೀನಾಥ (ಎಚ್. ಎಮ್.) ಸಂ೯ ೧೭, ಸಂ೯ ೧, ಪು. ೧೦೮–೧೧೯, ಅಗಸ್ಟ ೮೪

೩೪೮ ಶೂನ್ಯ ಸಂಪಾದನೆ (ವಿಮರ್ಶೆ) ವೃಷಭೇಂದ್ರಸ್ವಾಮಿ (ಎಸ್. ಎಂ.) ಸಂ೯ ೧೪, ಸಂ೯ ೩–೪, ಪು. ೬೧–೬೩, ಜನವರಿ–ಮೇ ೮೨

೩೪೯ ಶೆಟವಿ ಹಾಡು (ಜಾನಪದ) ಬಿರಾದಾರ (ಶಂಕರಗೌಡ) ಸಂ೯ ೧೧, ಸಂ೯ ೩, ಪು. ೧೧೭–೧೨೬, ಫೇಬ್ರವರಿ ೭೯

೩೫೦ ಶೈವಾಗಮ ಮತ್ತು ವಚನಸಾಹಿತ್ಯದಲ್ಲಿ ಷಟ್‌ಸ್ಥಲ–ಒಂದು ವಿವೇಚನೆ (ಧರ್ಮತತ್ವ) ಕಂಬಿ (ವ್ಹಿ. ಎಸ್.) ಸಂ೯ ೧೨, ಸಂ೯ ೪,ಪು. ೧೦೪–೧೨೦, ಮೇ ೮೦

೩೫೧ ಶಾಂತರಸನ ಕತೆಗಳಲ್ಲಿ ಸಾಮಾಜಿಕ–ಭಾಷಾಶೈಲಿ ಪ್ರಭೇದಗಳು (ವಿಮರ್ಶೆ) ಶಿವಾನಂದ (ವ್ಹಿ) ಸಂ೯ ೧೭, ಸಂ೯ ೩, ಪು. ೧೨೦–೧೩೭, ನವಂಬರ ೭೮

೩೫೨ ಶ್ರವಣ ಬೆಳ್ಗೊಳದ ಸ್ತಪ್ರತಿಲಿಪಿಕಾರರು (ಹಸ್ತ ಪ್ರತಿ) ಶಿರೂರ (ಬಿ. ವ್ಹಿ.) ಸಂ: ೧೯, ಸಂ: ೩, ಪು. ೧೫–೨೬, ಜನವರಿ ೮೭

೩೫೩ ಶ್ರೀ ಅನಂತರಾವ ಜೋಷಿ ಅವರೊಡನೆ ಸಂದರ್ಶನ (ಸಂಕೀರ್ಣ) ಕುಮಾರಸ್ವಾಮಿ (ಶಿ) ಸಂ: ೧೫, ಸಂ: ೧–೨, ಪು. ೮೨–೮೮ , ಅಗಷ್ಟ–ನವಂಬರ ೮೨

೩೫೪ ಶ್ರೀ ಬಸವಪ್ಪಶಾಸ್ತ್ರಿ ವಿರಚೀತ ತ್ರಿಷಷ್ಠಿ ಪುರಾತನ ಗಣಸ್ತವ (ವಿಮರ್ಶೆ) ಪರಡ್ಡಿ (ಮಲ್ಲಿಕಾರ್ಜುನ) ಸಂ: ೧೯, ಸಂ: ೩, ಪು. ೫೩, ೬೪, ಜನವರಿ ೮೭

೩೫೫ ಶ್ರೀಮತಿ: ಓರ್ವ ಜೈನ ಕವಿಯಿತ್ರಿ (ಸಾಹಿತ್ಯ ಚರಿತ್ರೆ) ಜಯಚಂದ್ರ (ಎಂ. ಎ.) ಸಂ: ೧೫, ಸಂ: ೧–೨, ಪು. ೮೯–೯೦, ಅಗಷ್ಟ–ನವಂಬರ ೮೨

೩೫೬ ಶ್ರೀಮತಿ ಲಲಿತಾದೇವಿಯ ಮೂಡಬಿದ್ರೆಯ ತಾಮ್ರಶಾಸನಗಳು (ಶಾಸನ) ಶೆಣೈ (ಉಮಾನಾಥ. ಶೈ.) ಸಂ: ೧೭, ಸಂ: ೩, ಪು: ೧೩೦–೧೩೯, ಜನವರಿ ೮೫

೩೫೭ 'ಶ್ರೀರಾಮಾಯಣ ದರ್ಶನ'ದಲ್ಲಿ ಧಾನ್ಯ ಮಾಲಿನಿ(ವಿಮರ್ಶೆ) ಮಧು ವೆಂಕಾರೆಡ್ಡಿ ಸಂ: ೧೯, ಸಂ: ೨, ಪು: ೬೦–೭೪, ನವಂಬರ ೮೬

೩೫೮ ಶ್ರೀ ಶಕ್ತಿ: ಪೌರ್ವಾತ್ಯ ಸಂಪ್ರದಾಯದ ಸ್ತ್ರೀ ದೇವತೆ: ಜಾನಪದ ವೈಜ್ಞಾನಿಕ ವಿವೇಚನೆ (ಜಾನಪದ) ಮಾತ್ತ (ವಿಲ್ಯಂ) ಸಂ: ೧೪, ಸಂ: ೩–೪, ಪು. ೧೦೨–೧೧೬, ಜನವರಿ–ಮೇ ೯೨

೩೫೯ ಸಖೀಗೀತ (ಕವನ) ಮಾವಿನ ಕುಳಿ (ಜಯ ಪ್ರಕಾಶ) ಸಂ: ೧೭, ಸಂ: ೧, ಪು. ೧೬೧, ಅಗಷ್ಟ ೮೪

೩೬೦ ಸತ್ಯ ಮತ್ತು ಕಲ್ಯಾಣ: ಮೌಲ್ಯ ವಿವೇಚನೆ (ಧರ್ಮತತ್ವ) ಅಕ್ಕೂರಮಠ (ಷಣ್ಮುಖಯ್ಯ) ಸಂ: ೧೧, ಸಂ: ೧, ಪು. ೧೬–೨೪, ಅಗಷ್ಟ ೭೮

೩೬೧ ಸದ್ಯದ ಹಾಗೂ ಭವಿಷ್ಯತ್ತಿನ ಶಕ್ತಿಯೋಜನೆ (ವಿಜ್ಞಾನ) ಚಿತ್ತಪಾಡಗಿ (ಬಿ. ಎಸ್.) ಸಂ: ೧೭,ಸಂ: ೨, ಪು. ೬೧–೬೨, ನವಂಬರ ೮೪

೩೬೨ ಸದಾನಂದ ಪಾಟೀಲರ ಪ್ರತಿಕ್ರಿಯೆಗೆ ಉತ್ತರ (ಭಾಷಾ ವಿಜ್ಞಾನ) ಮುರಿಗೆಪ್ಪ (ಎ) ಸಂ: ೧೯, ಸಂ: ೩, ಪು. ೭೮–೭೯, ಜನವರಿ ೮೭

೩೬೩ ಸನ್ನತಿಯ ೨೦೦೦ ವರ್ಷದ ಕೋಟೆ (ಇತಿಹಾಸ) ಜೋಶಿ (ಎಸ್. ಕೆ.) ಸಂ: ೧೮, ಸಂ: ೪, ಪು. ೮೧–೮೯, ಮೇ ೮೬

೩೬೪ ಸಮುಹ ಸಾಕ್ಷರತಾ ಕಾರ್ಯಕ್ರಮ ವಿಧಾನ (ಸಂಕೀರ್ಣ) ಕುಳ್ಳಿ (ಜಯವಂತ) ಸುಬ್ರಮಣ್ಯಂ (ವಿ. ಅಯ್.) ಸಂ: ೧೧, ಸಂ: ೩, ಪು. ೧೦೮–೧೧೬, ಫೆಬ್ರುವರಿ ೭೯

೩೬೫ ಸಮಂತಭದ್ರಾಚಾರ್ಯರು (ಸಾಹಿತ್ಯ ಚರಿತ್ರೆ) ಪಾಟೀಲ (ಎಸ್.ಪಿ.) ಸಂ.೧೧, ಸಂ.೧, ಪು. ೪೯–೫೬, ಅಗಸ್ಟ ೭೮

೩೬೬ ಸರ್ವಾಂತರ್ಯಾಮಿ (ಕವನ) ಸನದಿ (ಬಿ.ಎ.) ಸಂ: ೧೭, ಸಂ: ಪು. ೧೨೭–೧೨೯, ಜನವರಿ ೮೫

೩೬೭ ಸಾಸಿವೆಯೊಳಗೆ ಸಪ್ತಸಾಗರ (ಅನುವಾದ) ಗೋವಿಂದರೆಡ್ಡಿ (ಕೃ) ಸಂಃ ೧೪, ಸಂಃ ೧–೨, ಪು. ೯೨–೧೦೨, ಅಗಸ್ಟ–ನವ್ಹಂಬರ ೮೧

೩೬೮ ಸಾಹಿತ್ಯದಲ್ಲಿ ನಿರೂಪಿತ ಕನ್ನಡಿಗರ ಶೋಷಣೆಯ ಸ್ವರೂಪ (ವಿಮರ್ಶೆ) ಚವಲಾರ (ಸರೋಜನಿ.ಪಾ.) ಸಂಃ ೧೭, ಸಂಃ ೧, ಪು. ೧೩೨೦–೧೩೮ ಆಗಸ್ಟ ೮೪

೩೬೯ ಸಾಹಿತ್ಯಿಕ ಪರಿಸರದಲ್ಲಿ ರನ್ನ (ವಿಮರ್ಶೆ) ಕಮಲಾ ಹಂಪನಾ, ಸಂಃ ೧೩, ಸಂಃ ೩–೪ ಪು. ೧೩–೧೯ ಜನೆವರಿ–ಮೇ ೮೧

೩೭೦ ಸಿರದಗಾಳ–ಉರಿಯ ಉಯ್ಯಾಲೆ–ಮಾದಲೆಯ ಉಲಿ (ಸಂಶೋಧನೆ) ಕಲಬುರ್ಗಿ (ಎಂ.ಎಂ.) ಸಂಃ ೧೫, ಸಂಃ ೧–೩, ಪು. ೯೧–೯೪, ಅಗಸ್ಟ–ನವ್ಹಂಬರ ೮೨

೩೭೧ ಸಿರಿತನದ ಸಿಡಿಲು–ಡಿ. ವ್ಹಿ. ಪುರಾಣಿಕ (ಪುಸ್ತಕ ವಿಮರ್ಶೆ) ಕೋತಿನ (ಎಸ್.ಎಸ್.) ಸಂಃ ೧೯, ಸಂಃ ೩, ಪುಃ ೨೧೯–೨೨೨, ಜನವರಿ ೮೭

೩೭೨ ಸುಖವು ಬೇಕೆ, ನಿಮಗೆ ಸುಖವು? (ಕವನ) ಮರಿಗುದ್ದಿ (ಗುರುಪಾದ) ಸಂಃ ೧೮, ಸಂಃ ೧, ಪು. ೧೪೫, ಅಗಸ್ಟ ೮೫

೩೭೩ ಸೂಕ್ಷ್ಮ ಜೀವಿಗಳು ಹಾಗೂ ನಾವುಃ ವಾಯ್.ಎಸ್. ನೀಲಗುಂದ (ಪುಸ್ತಕ ವಿಮರ್ಶೆ) ಅಯ್ಯನಗೌಡರ (ಎಸ್. ವಿ.) ಸಂಃ ೨೦, ಸಂಃ ೩, ಪು. ೧೩೪–೧೩೫, ಜನೆವರಿ ೮೮

೩೭೪ ಸೇಟನ್–ಒಂದು ಲೋಕೋಚಿತ ಸೃಷ್ಟಿ (ವಿಮರ್ಶೆ) ಚಕ್ಕರೆ (ಶಿವಶಂಕರ) ಸಂಃ ೧೨, ಸಂಃ ೪, ಪು. ೧೩೦–೧೩೫, ಮೇ ೮೦

೩೭೫ ಸಂಪಿಗೆ ಮೊಗ್ಗು (ಕವನ) ಅನುಃ ಪಾಟೀಲ (ಎಸ್.ಪಿ.) ಸಂಃ ೧೫, ಸಂಃ ೧–೨, ಪು. ೧೧೮, ಅಗಸ್ಟ–ನವ್ಹಂಬರ ೮೨

೩೭೬ ಸಂಸ್ಕೃತ ನಾಟಕದಲ್ಲಿ ಮುಗ್ಧ ಮಕ್ಕಳು (ವಿಮರ್ಶೆ) ಶಾನಭಾಗ (ದ.ನಾ.) ಸಂಃ ೧೨, ಸಂಃ ೧–೨, ಪು. ೧೧೦–೧೧೬, ಅಗಸ್ಟ–ನವ್ಹಂಬರ ೭೯

೩೭೭ ಸಂಸ್ಕೃತ ಸಾಹಿತ್ಯದಲ್ಲಿ 'ಧರ್ಮ'ದ ಚಿಂತನೆ (ವಿಮರ್ಶೆ) ಶಾನಭಾಗ (ದಯಾನಂದ ನರಸಿಂಹ) ಸಂಃ ೧೯, ಸಂಃ ೨, ಪು. ೭೫–೯೯, ನವ್ಹಂಬರ ೮೬

೩೭೮ ಸಂಸ್ಕಾರಗಳು ಜ್ಞಾನದೀಕ್ಷೆ ಮತ್ತು ಇಷ್ಟಲಿಂಗ ಧಾರಣ: ತೌಲನಿಕ ಅಧ್ಯಯನ (ಧರ್ಮತತ್ವ) ಮಾಡ್ತ (ವಿಲ್ಯಂ) ಸಂಃ ೨೦, ಸಂಃ ೩, ಪು. ೧೦೮–೧೨೬, ಜನೆವರಿ ೮೮

೩೭೯ ಸಾಂಸ್ಕೃತಿಕ ಪರಿಸರದಲ್ಲಿ ಕವಿ ರನ್ನ (ವಿಮರ್ಶೆ) ಕುಲಕರ್ಣಿ (ಬಿ.ಎಸ್.) ಸಂಃ ೧೩, ಸಂಃ ೩–೪, ಪು. ೧–೧೨, ಜನೆವರಿ–ಮೇ ೮೧

೩೮೦ ಸೃಜನಾತ್ಮಕ ಸಾಹಿತ್ಯ ಹಾಗೂ ಸಮಾಜ ಕಾರ್ಯ: ಒಂದು ಅಂತರ ವಿಷಯ ವಿಧಾನ (ಸಮಾಜ ವಿಜ್ಞಾನ) ಪೂಜಾರ (ಶೇಖರ) ಸಂಃ ೨೦, ಸಂಃ ೪, ಪು. ೧೫೯–೧೮೦, ಮೇ ೮೮

೩೮೧ ಸ್ವಧರ್ಮ ಮತ್ತು ಪರಧರ್ಮ (ಧರ್ಮತತ್ವ) ಮಾಡ್ತ (ವಿಲ್ಯಂ)

ಸಂ: ೧೮, ಸಂ: ೪, ಪು. ೪೮–೫೨, ಮೇ ೮೬

೩೮೨ ಹಕ್ಕಿನೊಡೆಯರ ಹಾಡು ಮೇಘಮಿತ್ರ (ಪುಸ್ತಕ ವಿಮರ್ಶೆ) ಸಣ್ಣಕ್ಕಿ(ನಿಂಗಣ್ಣ) ಸಂ: ೧೧, ಸಂ: ೨, ಪು. ೧೮೧–೧೮೨, ನವ್ಹಂಬರ ೭೮

೩೮೩ ಹಕ್ಕಿಯ ಗೂಡು (ಕವನ) ಮಂಜುನಾಥಾಚಾರ (ಎಂ.ಬಿ.) ಸಂ: ೧೯, ಸಂ: ೪, ಪು. ೮೬, ಮೇ ೮೭

೩೮೪ ಹನಿಗಳು (ಕವನ), ಕೆಮ್ತೂರ (ರಘುಪತಿ) ಸಂ: ೧೧, ಸಂ: ೩, ಪು. ೭೩, ಫೆಬ್ರುವರಿ ೭೯

೩೮೫ ಹರ್ಮನ ಹೆಸ್ಸರ ಸಿದ್ದಾರ್ಥ (ವಿಮರ್ಶೆ) ಶಿಂತ್ರಿ (ಸರೋಜನಿ) ಸಂ: ೧೪, ಸಂ: ೧–೨, ಪು. ೨೫೦–೫೫, ಅಗಸ್ಟ–ನವ್ಹಂಬರ ೮೧

೩೮೬ ಹರಳಯ್ಯಗಳ ಪಾದ ಖಂಡನೆ (ಚೌಪದನ) ಕವಿ ಚನ್ನಮಲ್ಲನ ಮೇಲೆ ಒಂದು ಬೆಳಕು (ಸಂಪಾದನೆ) ಶಿವಾನಂದ (ವ್ಹಿ) ಸಂ: ೧೮, ಸಂ: ೪, ಪು. ೧೦೭–೧೧೬, ಮೇ: ೮೬

೩೮೭ ಹರಿಶ್ಚಂದ್ರ ಕಾವ್ಯದ ಹೊಲತಿಯರು–ಒಂದು ವಿವೇಚನೆ (ವಿಮರ್ಶೆ) ಸಬರದ (ವಿಜಯಶ್ರೀ) ಸಂ: ೨೦, ಸಂ: ೨, ಪು. ೪೯–೫೬, ನವ್ಹಂಬರ ೮೭

೩೮೮ ಹರಿಹರನ ಹಗಳೆಗಳ ಕಥಾನಾಯಕಿಯರು: ಒಂದು ಸಮೀಕ್ಷೆ (ಸಂಕೀರ್ಣ) ಶಾಲಿನಿ (ರಘುನಾಥ) ಸಂ: ೨೦, ಸಂ: ೪, ಪು. ೧೩೯–೨೫೨, ಮೇ ೮೮

೩೮೯ ಹಸ್ತಪ್ರತಿಗಳ ವಿನ್ಯಾಸ ಸೌಂದರ್ಯ (ಸಂಪಾದನೆ–ಹಸ್ತಪ್ರತಿ) ಹಿರೇಮಠ (ಬಿ.ಕೆ.) ಸಂ: ೧೬, ಸಂ: ೧–೨. ಪು. ೧೦೭–೧೨೭, ಅಗಸ್ಟ–ನವ್ಹಂಬರ ೮೩

೩೯೦ ಹಸ್ತಪ್ರತಿಗಳ ವಿಷಯವೈವಿಧ್ಯ (ಹಸ್ತಪ್ರತಿ) ರಾಜೂರ (ವೀರಣ್ಣ) ಸಂ: ೧೬, ಸಂ: ೧–೨, ಪು. ೭೭–೯೪, ಅಗಸ್ಟ–ನವ್ಹಂಬರ ೮೩

೩೯೧ ಹಸ್ತಪ್ರತಿಗಳ ರಕ್ಷಣೆ ಮತ್ತು ಪರಿಶೀಲನೆ (ಹಸ್ತಪ್ರತಿ) ಸಣ್ಣಯ್ಯ (ಬಿ.ಎಸ್.) ಸಂ: ೧೬, ಸಂ: ೧–೨, ಪು. ೧೩೯–೧೫೧, ಅಗಸ್ಟ–ನವ್ಹಂಬರ ೮೩

೩೯೨ ಹಸ್ತಪ್ರತಿಗಳ ವರ್ಗೀಕರಣ ಹಾಗೂ ಸೂಚೀಕರಣ (ಹಸ್ತಪ್ರತಿ) ದೇಶಪಾಂಡೆ (ಕೆ.ಎಸ್) ಸಂ: ೧೬, ಸಂ: ೧–೨, ಪು. ೧೫೨–೧೭೦, ಅಗಸ್ಟ–ನವ್ಹಂಬರ ೮೩

೩೯೩ ಹಸ್ತಪ್ರತಿಗಳು ಪ್ರತಿಕಾರರು, ಓದುಗರು–ಒಂದು ಸ್ಥೂಲ ಪರಿಚಯ (ಹಸ್ತಪ್ರತಿ) ಪಾಟೀಲ (ಸದಾನಂದ) ಸಂ: ೧೮, ಸಂ: ೨–೩, ಪು.. ೧೩೦–೧೩೨, ನವ್ಹಂಬರ ೮೫–ಜನೆವರಿ ೮೬

೩೯೪ ಹಸ್ತಪ್ರತಿ ಲಿಪಿಕಾರರು (ಹಸ್ತಪ್ರತಿ) ಹೀರೇಮಠ (ಬಿ.ಆರ್.) ಸಂ: ೧೬, ಸಂ: ೧–೨, ಪು. ೫೩–೭೬, ಅಗಸ್ಟ–ನವ್ಹಂಬರ ೮೩

೩೯೫ ಹಸ್ತಪ್ರತಿ ಕ್ಷೇತ್ರಕಾರ್ಯ ವಿಧಾನ–ಸಾಧನೆ (ಹಸ್ತಪ್ರತಿ) ಕಲಬುರ್ಗಿ (ಎಂ.ಎಂ.) ಸಂ: ೧೬, ಸಂ: ೧–೨, ಪು. ೧೨೮–೧೩೮, ಅಗಸ್ಟ–ನವ್ಗಂಬರ ೮೩

೩೯೬ ಹಳಗನ್ನಡ ಸಾಹಿತ್ಯದಲ್ಲಿಯ ಯುವ ಪಾತ್ರ ಚಿತ್ರಣ (ವಿಮರ್ಶೆ) ಮುರಿಗೆಪ್ಪ (ಎ) ಸಂ: ೨೦, ಸಂ: ೨, ಪು. ೮೯–೯೬, ನವ್ಹಂಬರ ೮೭

೩೯೭ ಹಸಿಮಾಂಸ ಮತ್ತು ಹದ್ದುಗಳು (ವಿಮರ್ಶೆ) ಸಬರದ (ವಿಜಯಶ್ರೀ)
ಸಂಃ ೧೯. ಸಂಃ ೪, ಪು. ೭೩–೭೭, ಮೇ ೮೭

೩೯೮ ಹಳ್ಳಿದೂರಿಗೆ ಪ್ಯಾಟಿದೂರಿಗೆ ಕದನ (ಜನಪದ) ವಡಗಾಂವಿ (ಜಿ.ಎಸ್.)
ಸಂಃ ೧೮, ಸಂಃ ೧,ಪು. ೭೩–೭೫, ಅಗಸ್ಟ ೮೫

೩೯೯ ಹಾಲತೊರೆಗೆ ಬೆಲ್ಲದ ಕೆಸರು–ಹ.ನಂ. ವಿಜಯಕುಮಾರ (ಪುಸ್ತಕ ವಿಮರ್ಶೆ)
ಭೂಸರೆಡ್ಡಿ (ಎಸ್.ಎಸ್.) ಸಂಃ ೧೧, ಸಂಃ ೪, ಪು. ೧೪೭–೧೪೯, ಮೇ ೭೯

೪೦೦ ಹೀಗಿದ್ದರು ಹಳಕಟ್ಟಿ (ಜೀವನ ಚರಿತ್ರೆ) ಮಾಳವಾಡ (ಸ.ಸ.)
ಸಂಃ ೧೬, ಸಂಃ ೧–೨, ಪು. ೧–೨೧, ಅಗಸ್ಟ–ನವ್ಹಂಬರ ೮೩

೪೦೧ ಹುಟ್ಟಿನ ಬೇರು (ಕವನ) ಹಕಾರಿ (ದೇವೇಂದ್ರ ಕುಮಾರ) ಸಂಃ ೧೧, ಸಂಃ ೧, ಪು.
೧–೨, ಅಗಸ್ಟ ೭೮

೪೦೨ ಹೆಣ್ಣು: ಅನು. ಪಾಟೀಲ (ಎಸ್. ಪಿ.) (ಪುಸ್ತಕ ನಿಮರ್ಶೆ) ಸಬರದ (ಬಸವರಾಜ)
ಸಂಃ ೧೧, ಸಂಃ ೪, ಪು. ೧೪೯–೧೫೧ ಮೇ ೭೯

೪೦೩ ಹೇಳಲಾರೆ, ಹೇಳದಿರಲಾರೆ (ಕವನ) ಮಾವಿನಕುಳಿ (ತಿರುಮಲ)
ಸಂಃ ೧೫, ಸಂಃ ೩–೪, ಪು. ೧೧೫, ಜನೆವರಿ–ಮೇ ೮೩

೪೦೪ ಹೋಗಿ ಬಾರ! ಗೌರಾ!! ಚೆನ್ನ ಬಿಸಿಲ ಕೋಲ (ಜಾನಪದ) ಕಂಬ್ಯಾಣಿ (ಶರಣಪ್ಪ)
ಸಂಃ ೨೦, ಸಂಃ ೨, ಪು. ೧೦೬–೧೦೯, ನವ್ಹಂಬರ ೮೭

೪೦೫ ಹಿಂದೀ ಭಾಷೆಯಲ್ಲಿ ಶಿಸುಸಾಹಿತ್ಯ (ವಿಮರ್ಶೆ) ರಾಮಚಂದ್ರ (ಎಸ್) ಸಂಃ ೧೨, ಸಂಃ
೧–೨, ಪು. ೧೧೭–೧೩೫, ಅಗಸ್ಟ–ವನ್ಹಂಬರ ೭೯

೪೦೬ ಹಿಂದೀ ಸಾಹಿತ್ಯದಲ್ಲಿ 'ಹಾಲಾ' ವಾದ (ವಿಮರ್ಶೆ) ಹೆಬ್ಬಳ್ಳಿ (ವಿ.ವಿ.)
ಸಂಃ ೧೯, ಸಂಃ ೪, ಪು. ೨೭–೩೨, ಮೇ ೮೭

೪೦೭ ೧೯೨೯ರ ಕನ್ನಡ ಕಾದಂಬರಿಗಳು (ವಿಮರ್ಶೆ) ಕುಷ್ಟಗಿ (ವಸಂತ)
ಸಂಃ ೧೨, ಸಂಃ ೩, ಪು. ೬೭–೭೯, ಜನವರಿ ೮೦

೪೦೮ ೧೯೮೩ರ ಕನ್ನಡ ಕಾವ್ಯ (ವಿಮರ್ಶೆ) ಸೊಪ್ಪಿಮರ (ಬಸವಲಿಂಗ)
ಸಂಃ ೧೭, ಸಂಃ ೪, ಪು. ೧–೨೪, ಎಪ್ರಿಲ್ ೮೫

೪೦೯ ೧೯೮೩ರ ಕಾದಂಬರಿಗಳು (ವಿಮರ್ಶೆ) ಬಿದರಕುಂದಿ (ಶಾಮಸುಂದರ)
ಸಂಃ ೧೭, ಸಂಃ ೪, ಪು. ೨೫–೪೬, ಎಪ್ರಿಲ್ ೮೫
೧೯೮೩ರ ಜಾನಪದ ಸಾಹಿತ್ಯ (ವಿಮರ್ಶೆ)

೪೧೦ ಹೊಸೂರ (ಜ್ಯೋತಿ) ಸಂಃ ೧೭, ಸಂಃ ೪, ಪು. ೧೫೦–೧೬೫, ಎಪ್ರಿಲ್ ೮೫

೪೧೧ ೧೯೮೩ರ ನಾಟಕ ಸಾಹಿತ್ಯ (ವಿಮರ್ಶೆ) ಸೀಗೀಹಳ್ಳಿ (ಬಾಳಣ್ಣ) ಸಂಃ ೧೭. ಸಂ ೪,
ಪು. ೬೩–೭೯ ಎಪ್ರಿಲ್ ೮೫

೪೧೨ ೧೯೮೩ರ ಪ್ರಬಂಧ ಸಾಹಿತ್ಯ (ವಿಮರ್ಶೆ) ಕುಲಕರ್ಣಿ (ಶ್ರೀನಿವಾಸ) ಸಂಃ ೧೭, ಸಂಃ ೪,
ಪು. ೮೦–೮೬ ಎಪ್ರಿಲ್ ೮೫

ಕರ್ನಾಟಕ ಭಾರತಿ

೪೧೩ ೧೯೮೩ರ ಶಾಸ್ತ್ರಕೃತಿಗಳು (ವಿಮರ್ಶೆ) ಹೆಗಡೆ (ಜಿ.ಎಂ.)
ಸಂ: ೧೭, ಸಂ: ೪, ಪು. ೧೩೮–೧೪೯,ಏಪ್ರಿಲ್ ೮೫

೪೧೪ ೧೯೮೩ರ ಸಣ್ಣಕಥೆ (ವಿಮರ್ಶೆ) ಚವಲಾರ (ಸರೋಜಿನಿ)
ಸಂ: ೧೭, ಸಂ: ೪, ಪು. ೪೭–೬೨, ಏಪ್ರಿಲ್ ೮೫

೪೧೫ ೧೯೮೩ರ ಸಾಹಿತ್ಯ ವಿಮರ್ಶೆ (ವಿಮರ್ಶೆ) ಅವಧಾನಿ (ಜಿ.ಎಸ್.)
ಸಂ:೧೭, ಸಂ:೪, ಪು. ೮೭–೯೫, ಏಪ್ರಿಲ್ ೮೫

೪೧೬ ೧೯೮೩ರ ಸಂಪಾದನ ಕೃತಿಗಳು ರಾಜೂರ (ವೀರಣ್ಣ)
ಸಂ:೧೭, ಸಂ:೪, ಪು. ೧೧೦–೧೩೭ ಏಪ್ರಿಲ್ ೮೫

೪೧೭ ೧೯೮೩ರ ಸಂಶೋಧನೆ (ವಿಮರ್ಶೆ) ನೇಗಿನಹಾಳ (ಎಂ.ಬಿ.)
ಸಂ.೧೭, ಸಂ:೪, ಪು. ೯೬–೧೦೬, ಏಪ್ರಿಲ್ ೮೫

೪೧೮ ಕ್ಷೇತ್ರ ಭಾಷಾವಿಜ್ಞಾನ: ಉದ್ದೇಶ ಮತ್ತು ವ್ಯಾಪ್ತಿ (ಭಾಷಾ ವಿಜ್ಞಾನ) ಮಾಡ್ತ (ವಿಲ್ಯಂ)
ಸಂ: ೧೯, ಸಂ: ೨, ಪು. ೪೨–೪೭, ನವ್ಹಂಬರ ೮೬

೪೧೯ ಕ್ಷೇತ್ರ ಭಾಷಾವಿಜ್ಞಾನಿ ಮತ್ತು ಭಾಷಾಕ್ಷೇತ್ರ (ಭಾಷಾ ವಿಜ್ಞಾನ) ಮಾಡ್ತ (ವಿಲ್ಯಂ)
ಸಂ: ೧೯, ಸಂ: ೩, ಪು. ೩೮–೪೭, ಜನೆವರಿ ೮೭

೪೨೦ ಜ್ಞಾನಪೀಠ ಪ್ರಶಸ್ತಿ ಕೃತಿ ಮಾಸ್ತಿಯವರ ಚಿಕವೀರ ರಾಜೇಂದ್ರ (ವಿಮರ್ಶೆ) ಮಾವಿನ
ಕುಳಿ (ಜಯಪ್ರಕಾಸ) ಸಂ: ೧೯, ಸಂ: ೩, ಪು. ೮–೧೪, ಜನೆವರಿ ೮೭

□ □

ಒರೆಗಲ್ಲು

ಕೆಲವು ಅಪ್ರಕಟಿತ ಸ್ವರವಚನಗಳು

೧

ಆದಿ ಮಲ್ಲನ ಮೂಲೆ........................ಬಸವೇಶ
ಪರಮಗುರುವಿನ ಚರಣಕಮಲವ ಬಿಡ[ದೆ] ನೀ ಪಿಡಿದಾಡೆಲೋ
ಪರಮ ಭಕ್ತನಾಗಿ ಸುಖದೊಳಿರುತಿರೆ ನೀ ನೋಡೆಲೋ ॥ಪಲ್ಲ॥

ಗಂಗೆ ಗೌರಿ ಯಮುನಾ ತೀರದ ಸಂಗಮೇಶ್ವರ ನೋಡೆಲೋ
ಅಂಗಸಂಗಭವಂಗವಾದ ಘನಲಿಂಗಪೂಜೆಯ ಮಾಡೆಲೋ ॥ ೧ ॥

ಆರು ನೆಲೆಗಳು ಮೂರು ಮಂತ್ರದ ಕಾರುಣಿಕ ನೋಡೆಲೋ
ಕಾರಣೀಕದ ಗುರುವಿನಂಘ್ರಿಯನೇರಿ ಸುಖದೊಳ್ಪಾಡೆಲೋ ॥ ೨ ॥

ವೇದ ನಾಲ್ಕನು ಪಾದವನು ಮಾಡಿ ಆದಿಮಲ್ಲನ ಮೂಲೆಲೋ
ಸೋಜಿಗದ ಬಸವೇಶನಾಂಘ್ರಿಯ ಪೂ[ಜಿಪ] ಭಕ್ತನಾಗೆಲೋ ॥ ೩ ॥

೨

ಬುಕ್ಕಾಂಬುಧಿ ಆರಾಧ್ಯ ಮಲ್ಲಿಕಾರ್ಜುನಾಂಕಿತದ ಸ್ವರವಚನ:

ಬಂದು ಬಂದು ಪೋದನಮ್ಮ ನಿಂದುದಿಲ್ಲ ಒಂದು ಗಳಿಗೆ–
ನಿಂದುಜೂಟ ಸಿದ್ಧಮಲ್ಲೇಶ
ಒಂದು ಕಣ್ಣು ಕಂಡಡೆ ಮತ್ತೊಂದು ಕಣ್ಣು ಕಾಣಲಿಲ್ಲ
ತಂದು ತೋರೆ ಪ್ರಾಣಕಾಂತನ ॥ಪಲ್ಲ॥

ಕಾಲ ರುಳಿಯ ಕೊರಳ ಕಂಠಮಾಲೆ ಮುತ್ತು ರನ್ನ ಪಚ್ಚೆ
ನೀಲಗಡುಕು ಕಿವಿಯೊಳೊಲೆವುತ

೧, ಆಕರ । (೬) ೭೮೨ (೫೨ ಮುಂ) ಬೃಹನ್ಮಠ ಚಿತ್ರದುರ್ಗ
। —। ಜೆ (ಮೂ)

ನೀಲುವಲ್ಲಿಯನು ಕಟಿ ಮೇಲೆ ಹೊದ್ದು ತಾವರೆಯ
ಕೋಲು ಕುಸುಮಗಳ ತಿರುಹುತ || ೧ ||
ಸಣ್ಣ ಹಾಗು ಶಿ'ಖೆ'ಗೊಳೊರ್ನ ಬಣ್ಣದೊಲ್ಲಿ ಕಸ್ತುರಿಯ
ತಿಣ್ಣ ಬೊಟ್ಟು ಫಣೆಯೊಳೆಸೆವುತ
ಚೆನ್ನಸರ ಚವುಕುಳಿಯ ಕನ್ನಡಿಯಿಂದಲಿ ನೋಡಿ
ಪನ್ನೆ ಮೀಸೆಗಳ ತಿದ್ದುತ
ಹೊನ್ನ ಹಾವುಗೆಯು ನಲಿವುತಲ್ಲಿ ಕಣ್ಣುಸನ್ನೆಯನು ಮಾಡಿ
ಮನ್ಮಥ ಮಲ್ಲಿಕಾರ್ಜುನ || ೨ ||

ಸುತ್ತಿದ ಚಿಮ್ಮರಿಮಾಲೆ ಮುತ್ತಿನ ಕುಚ್ಚು ಫಣೆಯೊಳು
ಕಸ್ತುರಿ ಲೇಪನ ಮೈಯ್ಯೊಳು
ಒತ್ತಿದ ಗಂಧವು ಗಲ್ಲ ಹಸ್ತದುಗುರು ದಂತ
ಹತ್ತಿ–ಪತ್ತಿಕೊಳುತ ವಿಲಾಸದಿಂದಲಿ
ಮತ್ತಯವ್ವನೆಯರು ಕಂಡು ಹತ್ತೆಗರೆದು ಹರುಷದಿಂದ
ವತ್ತಿಕೊಳ್ಳಲೆಂಬ ಸಮಯಕೆ
ಚಿತ್ತಜಾರಿಯರು ಬೆಂಬತ್ತಿ ಬಂದು ವತ್ತಿಕೊಳ್ಳೆ
ಚಿತ್ತಜಾರಿ ಜಗುಳು ನಗುತಲಿ || ೩ ||

ಮಲ್ಲಿಗೆ ಮಾಲೆಯ ತಲೆಯಲ್ಲಿ ಸುತ್ತಿ ಚುಂಗು ಫಣೆಯಲ್ಲಿ
ಭಸ್ಮರೇಖೆ ರಾಜಿಸೆ
ವಲ್ಲಿಯಂ ಕಂಕುಳೊಳಿಟ್ಟು ಮೆಲ್ಲಡಿವಿಡಿದು ಬಿಗಿವ
ಚೆಲ್ಲಣವ ತಿದ್ದಿಕೊಳ್ಳುತ
ಗಲ್ಲದ ವೀಳ್ಯವು ಹಸ್ತಪಲ್ಲವದ ಬಿಳಿಯೆಲೆ
ಚೆಲ್ಲೆಗಣ್ಣು ಕೆಂಪು ಬೊಂಬೆಯ ಉಲ್ಲಾಸದಿಂದಲಿ ಕರ
ಹಲ್ಲು ಹೊಗರ್ಮುಖವ ಚೆಲ್ವ ಚೆಲ್ವಕೊಳುತ ಮಲ್ಲಿಕಾರ್ಜುನ || ೪ ||

ಸಾರ ಸಾರಲಿಕೆ ಸೂಳೆಗೇರಿಗೆಯ್ದು ಮೂರುದಿನ
ವಾರನಾರಿಯರ ಕೂಡಿದ
ತೋರಕುಚದಪದೆಯ ಗಾಯ ಸಾರಗಂಧ ಕುಂಕುಮವ
ಸೂರೆಗೊಂಡನಂಗರಂಗವ
ಮಾರಕಲಹದಿಂದಲಿ ಮಾರುಕೊಂಡ ಮತ್ತ ಎನ್ನ

೩. ಆಕರ ೫ (ಓಲೆಪ್ರತಿ) ೭೮೮ (ಗಂ. 32 ಮುಂ) ಬೃಹನ್ಮಠ ಚಿತ್ರದುರ್ಗ
1–1 ಖಿ (ಮು)

ಸಾರ ಹೃದಯ ಮಲ್ಲಿಕಾರ್ಜುನ ಸೇರಿಕೊಳ್ಳಲಿ ಬಂದು
ಸಾರಿದ ಬುಕ್ಕಾಂಬುಧಿ ಆರಾಧ್ಯ ಮಲ್ಲಿಕಾರ್ಜುನ || ೫ ||

೩

ಪಾಲಿತ ಸುರಮುನಿ ಜಾಲ ಪರಾಕು
ನೀಲಕಂಧರ ಕಾಲಕಾಲ ಪರಾಕು
ಮೂಲ ಪಂಚಾಕ್ಷರಿ ಲೋಲ ಪರಾಕು
ಭೀಲ ಭೀಲ ಭೂಷಿತ ವ್ಯಾಲ ಶೀಲ ಪರಾಕೆಂದು
ನೀಲಾಳಕಿಯರು ಹಸೆಗೆ ಕರೆದಾರು ||ಪಲ್ಲ||

ಪದಃ ಪರತರ ಪರಮಗೌರೀಶ ಪರಾಕು
ಶರಣ ಹೃನ್ನಳಿನದೀಶ ಪರಾಕು
ಮರಣಾದಿರಹಿತ ಸರ್ವೇಶ ಪರಾಕು
ತರಣಿ ಶಾಂತ ಶರೀರ ಪರಾಕೆಂದು
ಹರಿಣಾಕ್ಷಿಯರು ಹಸೆಗೆ ಕರೆದಾರು || ೧ ||

ಕಮಲಸಂಭವನುತಿ ಮೋದ ಪರಾಕು
ಕಮಲಸಖವಾಹ ನುತವೇದ ಪರಾಕು
ಕಮಲವಾಹ ನುತವಿನೋದ ಪರಾಕು
ಕಮಲ ವಿರಾಜಿತ ಪಾದ ಪರಾಕೆಂದು
ಕಮಲಾಕ್ಷಿಯರು ಹಸೆಗೆ ಕರೆದಾರು || ೨ ||

ಕರುಣ ರಸಾಂಚಿತ ಪಾಂಗ ಪರಾಕು
ಪರಮತಭೇಕ ಭುಜಂಗ ಪರಾಕು
ಮುರಿಗೇಂದ್ರ ಕರಕಂಜ ತುಂಗಪರಾಕು
ಗುರುವರ ಮುದ್ವೀರಲಿಂಗ ಪರಾಕೆಂದು
ತರಳಾಕ್ಷಿಯರು ಹಸೆಗೆ ಕರೆದಾರು ಸೋಬನವೆ || ೩ ||

---

೩. ಆಕರ ಃ (ಓಲೆಪ್ರತಿ) ೭೯೨ (ಗಂ. 36 ಮುಂ+ಹಿಂ) ಬೃಹನ್ಮಠ ಚಿತ್ರದುರ್ಗ

೪

ಶಾಂತ ಸದ್ಗುರು ಸಿದ್ಧಲಿಂಗೇಶಾಂಕಿತದ
೯೩ ಸಕೀಲದ ಜೋಗುಳದ ಪದಃ

ಜೋ ಜೋ ಎನ್ನ ಇಷ್ಟಲಿಂಗೇಶ
ಜೋ ಜೋ ಎನ್ನ ಪ್ರಾಣಲಿಂಗೇಶ
ಜೋ ಜೋ ಎನ್ನ ಭಾವಲಿಂಗೇಶ ಮೂರು
ಕಾಯ ಸ್ವೀಯತ ಗುರುಸಿದ್ಧಲಿಂಗೇಶ ಜೋ ಜೋ || ೧ ||

ಜೋ ಜೋ ಎನ್ನಾಚಾರ ಗುರುವೆ
ಜೋ ಜೋ ಎನ್ನ ಶಿವಜಂಗಮದಿರವೆ
ಜೋ ಜೋ ಎನ್ನ ಪ್ರಸಾದ ಮಹದರುವೆ
ಜೋ ಜೋ ಎನ್ನ ವರದಿಷ್ಟ ಗುರುವೆ || ೨ ||

ವೃತ್ತವು ಕಟಿಯು ವರ್ತುಳವೆನಿಪ
ಮತ್ತೆ ಗೋಮುಖ ನಾಳ ಮಸ್ತಕವೆನಿಪ
ನಿತ್ಯ ನಿರ್ಮಲ ಷಡುಸ್ಥಾನಗಳೆನಿಪ ವೊಂದಿ
ದತ್ಯಂತ ಷಡ್ಬ್ರಹ್ಮ ಮಹದಿಷ್ಟಲಿಂಗ ಜೋ ಜೋ || ೩ ||

ತಾರಕ ದಂಡಕ ಕುಂಡಲಾಕೃತಿಯ
ತಾರೇಶ ದರ್ಪಣ ಜೋತಿರಾಕೃತಿಯ
ಸಾರ ಷಡಕ್ಷರ ಮಂತ್ರದ ನೆಲೆಯ ಕೂಡಿ
ಭೋರನೆಯೊಪ್ಪುವ ಮಹದಿಷ್ಟಲಿಂಗ ಜೋ ಜೋ || ೪ ||

ಚಕ್ರವಾಧಾರ ಸ್ವಾಧಿಷ್ಠ ಚಕ್ರ
ಚಕ್ರ ಮಣಿಪೂರಕನಾಹತ ಚಕ್ರ
ಚಕ್ರ ವಿಶುದ್ಧಾಜ್ಞೆ ವರ ಷಡುಚಕ್ರ ಇಂತೀ
ಚಕ್ರಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೫ ||

ಭಕ್ತ ಮಾಹೇಶ ಪ್ರಸಾದಿಗಳಂಗಮುಸುಲಿಂಗಿ
ಶರಣ್ಯೆಕ್ತ ಸಂಗ
ಪೃಥ್ವಿಜಲಾಗ್ನಿ ಮಾರುತವಿಯದಂಗ ಆತ್ಮ
ಗೊತ್ತುಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೬ ||

ಹಸ್ತ ಹಸ್ತ ಸುಚಿತ್ತ ಸುಬುದ್ಧಿಯು ಹಸ್ತ
ಹಸ್ತ ನಿರಹಂಕಾರ ಸುಮನ ಹಸ್ತ
ಹಸ್ತ ಸುಜ್ಞಾನ ಸದ್ಭಾವದ ಹಸ್ತ ಷಡು
ಹಸ್ತಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೭ ||

ಹಿಂಗದಾಚಾರಲಿಂಗ ಗುರುಲಿಂಗ
ಸಂಗ ಶಿವಲಿಂಗ ಜಂಗಮಲಿಂಗ
ಸಾಂಗ ಪ್ರಸಾದಲಿಂಗ ಮಹಲಿಂಗ ಷಡು
ಲಿಂಗಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೮ ||

ಮುಖಘ್ರಾಣ ಮುಖಜಿಹ್ವೆ ಮುಖನೇತ್ರ
ಮುಖ ತ್ವಕ್ಕು ಮುಖಶ್ರೋತ್ರ ಗೋಪ್ಯದ ಮುಖವ
ಸುಖಮಯ ಸಖ ಷಡುತೃಪ್ತಿಯನರಿವ ಷಡು
ಮುಖಗಳನೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೯ ||

ಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿಯ
ಶಕ್ತಿ ಇಚ್ಛಾಶಕ್ತ್ಯಾದಿ ಶಕ್ತಿಯ
ವ್ಯಕ್ತದ ಪರ ಚಿಚ್ಛಕ್ತಿಯ ನೆಲೆಯ ಷಡು
ಶಕ್ತಿಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೧೦ ||

ಭಕ್ತಿಯು ಶ್ರದ್ಧಾ ನೈಷ್ಠಿಕ ಭಕ್ತಿಯ
ಭಕ್ತಿಯು ಸಾವಧಾನ ಸುಭಾವ ಭಕ್ತಿಯು
ಭಕ್ತಿಯಾನಂದ ಸಮರಸಭಕ್ತಿಯು ಷಡು–
ಭಕ್ತಿಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೧೧ ||

ಸುಗಂಧ ಪದಾರ್ಥ ಸುರಸಪದಾರ್ಥ
ಸೊಗಯಿಪ ಸುರೂಪು ಸುಸ್ಪರ್ಶನ ಪದಾರ್ಥ
ಮಿಗಿಲಾದ ಸುಶಬ್ದ ಸುತೃಪ್ತಿ ಪದಾರ್ಥ ಷಡುಪದಾ
ರ್ಥಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ ॥ ೧೨ ॥

ಗಂಧ ಪ್ರಸಾದ ರಸಪ್ರಸಾದ
ಚಂದದ ರೂಪು ಸ್ಪರ್ಶನ ಪ್ರಸಾದ
ಬಂಧುರ ಶಬ್ದ ತೃಪ್ತಿಪ್ರಸಾದ ಷಡುಪ್ರ
ಸಾದಾರ್ಥಗಳೊಳಕೊಂಡ ಮಹದಿಷ್ಟಲಿಂಗ ಜೊ ಜೋ ॥ ೧೩ ॥

ಕಲೆಯು ನಿವೃತ್ತಿ ಕಲೆ ಪ್ರತಿಷ್ಠೆಯ–
ಕಲೆ ವಿದ್ಯಾಕಲೆ ಶಾಂತಿ ಶಾಂತತೀತೆಯ
ಒಲವಿನ ಕಲೆ ಶಾಂತತೀತೋತ್ತರಕಲೆಯ ಷಡು
ಕಲೆಗಳನೊಳಕೊಂಡ ಮಹದಿಷ್ಟಲಿಂಗ ಜೋ ಜೋ ॥ ೧೪ ॥

ಸಾದಾಖ್ಯ ಕರ್ಮ ಕರ್ತೃ ಸಾದಾಖ್ಯ
ಸಾದಾಖ್ಯ ಮೂರ್ತಿಯಮೂರ್ತಿ ಸಾದಾಖ್ಯ
ಸಾದಾಖ್ಯ ಶಿವ ಮಹಾಮಹಿತ ಸಾದಾಖ್ಯ ಷಡು–
ಸಾದಾಖ್ಯ[ಗಳ]ನೊಳಗೊಂಡ ಮಹದಿಷ್ಟಲಿಂಗ ಜೋ ಜೋ ॥ ೧೫ ॥

ಲಕ್ಷಣ ಸತ್ತು ಚಿತ್ತು ಲಕ್ಷಣವ
ಲಕ್ಷಣಾನಂದ ನಿತ್ಯ ಲಕ್ಷಣವ
ಲಕ್ಷಣ ಪರಿಪೂರ್ಣಾಖಂಡಲಕ್ಷಣವ ಷಡು–
ಲಕ್ಷಣವನೊಳಕೊಂಡ ಮಹದಿಷ್ಟಲಿಂಗ ಜೋ ಜೋ ॥ ೧೬ ॥

ಸಂಜ್ಞೆಯು ಪರವೆಂಬ ಗೂಢ ಸಂಜ್ಞೆಯ
ಸಂಜ್ಞೆ ಶರೀರ ಸುಲಿಂಗಕ್ಷೇತ್ರ ಸಂಜ್ಞೆಯು
ಸಂಜ್ಞೆಯನಾದಿವಸ್ತುಹದ ಸಂಜ್ಞೆಯ ಷಡು
ಸಂಜ್ಞೆಯನೊಳಕೊಂಡ ಮಹದಿಷ್ಟಲಿಂಗ ಜೋ ಜೋ ॥ ೧೭ ॥

ಬೋಧಿಪ ಋಗ್ವೇದಜುರ್ವೇದವ
ವೇದ ಸಾಮಥರ್ವಣೆನಿಪ ವೇದವ
ಸಾಧಿಪ ಅಜಪೆ ಗಾಯತ್ರಿವೇದವ ಷಡು
ವೇದಗಳೊಳಕೊಂಡ ಮಹದಿಷ್ಟಲಿಂಗ ಜೋ ಜೋ || ೧೮ ||

ಇಂತು ತೊಂಬತ್ತಾರು ಸಕೀಲವನೆಲ್ಲ
ಸಂತತ ಬೆರದು ಮೆರವುದ ಬಲ್ಲ
ಶಾಂತ ಸದ್ಗುರು ಸಿದ್ಧಲಿಂಗೇಶನಲ್ಲ ಎ–
ನ್ನಂತರಂಗದೊಳಿರ್ದವನಿಯ ರಕ್ಷಿಪುದೆಲ್ಲ ಜೋ ಜೋ || ೧೯ ||

ಜೋ ಜೋ ಗುರುಲಿಂಗ ನಿಜಾಂಗ
ಜೋ ಜೋ ಶಿವಲಿಂಗ ಚಿದಂಗ
ಜೋ ಜೋ ಚರಜಂಗಮಲಿಂಗ ನಿತ್ಯ
ಜೋ ಜೋ ಎನ್ನ ವರದಿಷ್ಟಲಿಂಗ ಜೋ ಜೋ || ೨೦ ||

ಜೋ ಜೋ ಗುರುಶಾಂತವೀರೇಶ
ಜೋ ಜೋ ಗುರುಚೆನ್ನಬಸವೇಶ
ಜೋ ಜೋ ಗುರುಮಹಂತದೇವೇಶ ನಿತ್ಯ
ಜೋ ಜೋ ಗುರುಶಾಂತಮಲ್ಲೇಶ ಜೋ ಜೋ || ೨೧ ||

ಗುರುಸಿದ್ಧಲಿಂಗನ ಕರುಣವ ಪಡದು
ಗುರುಲಿಂಗಜಂಗಮ ಭಕ್ತಿಯ ತಳೆದು
ಪರುಣಾಮಿಸುವ ಭಕ್ತ ಮಾಹೇಶ್ವರರೊಲಿದು ನಮ್ಮ
ಪೊರೆವುದು ಪರಿಭವಭವಗಳ ಹರಿದು ಜೋ ಜೋ || ೨೨ ||

ಇಂತು ತೊಂಬತ್ತಾರು ಸಕೀಲದ ಪದವ
ಸಂತತ ಬರದೋದಿ ಅರ್ಥೈಸಿ ಕೇಳುವ–
ರಂತರಂಗದೊಳಿರ್ದು ಚಿಂತೆಯ ಹರಿವ ನಮ್ಮ
ಶಾಂತ ಸದ್ಗುರು ಸಿದ್ಧಲಿಂಗೇಶದೇವ ಜೋ ಜೋ || ೨೩ ||

• ಎಸ್. ಶಿವಣ್ಣ

❑ ❑

೪. ಆಕರ: ಓಲೆ ಪ್ರತಿ ೭೯೨ (ಗರಿ–೪೪ ಮು. ೪೫ ಹಿಂ.) ಬೃಹನ್ಮಠ ಚಿತ್ರದುರ್ಗ.

ಗ್ರಂಥಾವಲೋಕನ

ತಿಂಥಿಣಿ ಮೋನಪ್ಪಯ್ಯ: ಒಂದು ಅಧ್ಯಯನ

ಲೇಖಕರು : ಡಾ. ಎಂ.ಎಂ. ಪಡಶೆಟ್ಟಿ

ಪ್ರಕಾಶಕರು : ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗ
1992 ಪುಟ–218+xvii ಬೆಲೆ–75=00

"ತಿಂಥಿಣಿ ಮೋನಪ್ಪಯ್ಯ: ಒಂದು ಅಧ್ಯಯನ" ಡಾ.ಎಂ.ಎಂ.ಪಡಶೆಟ್ಟಿ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ ಶರಣ–ಸಂತ, ದಾರ್ಶನಿಕ, ಕವಿ ಎನಿಸಿಕೊಂಡ ತಿಂಥಿಣಿ ಮೋನಪ್ಪಯ್ಯನ ಜೀವನ–ಸಾಹಿತ್ಯ–ಪ್ರಭಾವ–ಪ್ರೇರಣೆಗಳನ್ನು ಇದು ಒಳಗೊಂಡಿದೆ.

ತಿಂಥಿಣಿ ಮೋನಪ್ಪಯ್ಯ ತನ್ನ ವಿಶಿಷ್ಟ ವ್ಯಕ್ತಿತ್ವ ಹಾಗೂ ಸಾಹಿತ್ಯದ ಮೂಲಕ ಹಿಂದೂ ಮುಸ್ಲಿಂ ಭಾವೈಕ್ಯವನ್ನುಂಟುಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ ಮಹಾತ್ಮ. ಇವನನ್ನು ಕುರಿತು ಇಲ್ಲಿಯ ವರೆಗೆ ಸಮಗ್ರವಾದ ಅಧ್ಯಯನ ನಡೆದಿರಲಿಲ್ಲ. ಡಾ. ಪಡಶೆಟ್ಟಿಯವರು ಆ ಕೊರತೆಯನ್ನು ಈ ಪ್ರಬಂಧದ ಮೂಲಕ ತುಂಬಿಕೊಟ್ಟಿರುವದು ಶ್ಲಾಘನೀಯ ಕಾರ್ಯ. ಸಂಶೋಧಕರು ಈ ಅಧ್ಯಯನಕ್ಕಾಗಿ ಹಲವು ಮೂಲಗಳಿಂದ ಆಕರಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಮೋನಪ್ಪಯ್ಯನ ವಚನಗಳನ್ನು ಮೂಲ ಆಕರ ಸಾಮಗ್ರಿ (Primary Source) ಯನ್ನಾಗಿ ಸ್ವೀಕರಿಸಿದ್ದರೆ, ಇಲ್ಲಿಯ ವರೆಗೆ ಅವನನ್ನು ಕುರಿತು ಬಂದ ಸಾಹಿತ್ಯ ಕೃತಿ–ಲೇಖನಗಳನ್ನು ಪೂರಕ ಸಾಮಗ್ರಿ (Secondary Source) ಯನ್ನಾಗಿ ಬಳಸಿಕೊಂಡು, ಕ್ಷೇತ್ರ ಕಾರ್ಯ(field work) ದ ಮೂಲಕ ಆ ಆಕರಗಳನ್ನು ಒರಗೆ ಹಚ್ಚಿ ತಮ್ಮ ನಿರ್ಣಯಗಳನ್ನು ಎತ್ತಿ ತೋರಿದ್ದಾರೆ. ಪ್ರಬಂಧ ಒಟ್ಟು ಎಂಟು ಅಧ್ಯಾಯಗಳಲ್ಲಿ ವಿಸ್ತೃತಗೊಂಡಿವೆ.

'ಅಧ್ಯಯನದ ಉದ್ದೇಶ ಮತ್ತು ಆಕರಸಾಮಗ್ರಿ' ಎಂಬ ಮೊದಲ ಅಧ್ಯಾಯದಲ್ಲಿ ಸಂಶೋಧಕರು ಪ್ರಸ್ತುತ ಅಧ್ಯಯನದ ಉದ್ದೇಶವನ್ನು ಹೇಳುತ್ತಾ–'ಈಚೆಗೆ ಜನಪರ ವ್ಯಕ್ತಿಗಳು ಅಧ್ಯಯನದ ವಸ್ತುವಾಗುತ್ತಲಿದ್ದಾರೆ. ಇಂಥ ಅಭ್ಯಾಸವೇ ಒಂದು ನಾಡಿನ ಸಮಷ್ಟಿ ಅಭ್ಯಾಸದ ಭಾಗವೆನಿಸುತ್ತದೆ. ಹೀಗಾಗಿ ಉತ್ತರ ಕರ್ನಾಟಕದ ಶ್ರೀಸಾಮಾನ್ಯರ ಮನಸ್ಸನ್ನಾಳಿದ, ಆಳುತ್ತಿರುವ ಮೋನಪ್ಪಯ್ಯನ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ' ಎಂದು ತಿಳಿಸಿ, ಮೋನಪ್ಪಯ್ಯನನ್ನು ಕುರಿತು ಇಲ್ಲಿಯವರೆಗೂ ರಚನೆಗೊಂಡ ಲಿಖಿತ ಮತ್ತು ಅಲಿಖಿತ ಸಾಹಿತ್ಯದ ವಿವರವನ್ನು ಕೊಟ್ಟು ಜೊತೆಗೆ ಕ್ಷೇತ್ರಕಾರ್ಯದ ಮುಖಾಂತರ ಸಂಗ್ರಹಿಸಿದ ಮೋನಪ್ಪಯ್ಯನನ್ನು ಕುರಿತ

ಜನಪದ ಹಾಡು ಹಾಗೂ ಹಿರಿಯರಿಂದ ಕೇಳಿ–ತಿಳಿದ ಮಾಹಿತಿಗಳ ಹಿನ್ನೆಲೆಯಲ್ಲಿ ಈ ಪ್ರಬಂಧವನ್ನು ಸಿದ್ಧಪಡಿಸಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ಪ್ರಬಂಧಕಾರರು ಕ್ಷೇತ್ರಕಾರ್ಯದಲ್ಲಿ ಪಟ್ಟ ಪರಿಶ್ರಮವನ್ನು ಗುರುತಿಸಬಹುದು.

'ಯುಗಧರ್ಮ' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನು ಬಾಳಿದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಪರಿಸರವನ್ನು ಕುರಿತು ವಿವೇಚಿಸಿದ್ದಾರೆ. ೧೫–೧೬–೧೭ ನೆಯ ಶತಮಾನಗಳ ರಾಜಕೀಯ ಚರಿತ್ರೆಯೆಂದರೆ ಅದು ಭಾರತದ ತನ್ಮೂಲಕ ಕರ್ನಾಟಕದ ನೆಲದಲ್ಲಿ ನಡೆದ ಹಿಂದೂ–ಮುಸ್ಲಿಂ ರಾಜರುಗಳ ಏಳು–ಬೀಳಿನ ಚರಿತ್ರೆಯೇ ಆಗಿದೆ. ಧಾರ್ಮಿಕ ಕ್ಷೇತ್ರದಲ್ಲಿ ನಡೆದ ಸಂಘರ್ಷ–ಸಮನ್ವಯದ ಸಂದರ್ಭದಲ್ಲಿ ಮೋನಪ್ಪಯ್ಯನು 'ಹಿಂಡನಗಲಿದ ಗಜದಂತೆ' ದೇಶ ಪರ್ಯಟನ ಮಾಡಿ, ಸಮಾಜದಲ್ಲಿ ನೀತಿಪರವಾದ ತತ್ತ್ವಗಳನ್ನು ಬೋಧಿಸಿ ಸರ್ವರ ಮನಸ್ಸನ್ನು ಆಳಿದ್ದಾನೆ.

'ಜೀವನಚರಿತ್ರೆ' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನ ಸಮಗ್ರ ಜೀವನವನ್ನು ಕುರಿತು ಅಧ್ಯಯನಿಸಿದ್ದಾರೆ. ಮೋನಪ್ಪಯ್ಯನ ಕಾಲ–ದೇಶ–ತಂದೆತಾಯಿ–ಹೆಸರು–ಮತ ಮೊದಲಾದವುಗಳನ್ನು ಕೂಲಂಕಷವಾಗಿ ವಿವೇಚಿಸಿದ್ದಾರೆ. ಜೊತೆಗೆ ಆತನ ಮೇಲಾದ ಶಿವ–ಶರಣರ ಪ್ರಭಾವ–ಪ್ರೇರಣೆಗಳನ್ನು ಗುರುತಿಸಿ, ಮೋನಪ್ಪಯ್ಯನನ್ನು ಕುರಿತು ಬಂದ ಶಿಷ್ಟಪದ ಸಾಹಿತ್ಯ–ಜನಪದ ಸಾಹಿತ್ಯ ಮತ್ತು ಪವಾಡಗಳನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿದ್ದಾರೆ.

'ದೇಶ ಪರ್ಯಟನ ಮತ್ತು ಕ್ಷೇತ್ರದರ್ಶನ' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನು ಸಂದರ್ಶಿಸಿದ ಕ್ಷೇತ್ರಗಳನ್ನು ಕುರಿತು ವಿವೇಚಿಸಲಾಗಿದೆ. ಪ್ರಭುದೇವ–ಸರ್ವಜ್ಞರಂತೆ–ಈತನೂ ಲೋಕಸಂಚಾರಿಯಾಗಿ ನೀತಿಬೋಧೆ ಮಾಡಿದ್ದಾನೆ. ಮೋನಪ್ಪಯ್ಯನು ಹುಟ್ಟಿದ್ದು ಗೋನಾಳ, ಐಕ್ಯವಾದದ್ದು ತಿಂಥಿಣಿಯಾದರೂ ಈ ಮಧ್ಯೆ ಕೈಕೊಂಡ ಸಂಚಾರದಲ್ಲಿ ರಾಚೋಟಿ, ಕಾಶಿ, ವಿಜಾಪೂರ, ಶಿರಸಂಗಿ, ಲಕ್ಷ್ಮೇಶ್ವರ, ವರವಿ, ಲಿಂಗನಬಂಡಿ, ಹಂಪೆ, ದೇವದುರ್ಗ, ಮಾದರಾಯನಕೋಟೆ, ಕನಕಗಿರಿ, ಸಾಗರ, ಶಹಪುರ, ತಿಂಥಿಣಿ ಮೊದಲಾದ ಗ್ರಾಮಗಳಲ್ಲಿ ನೆಲೆಯೂರಿ ತನ್ನ ಪ್ರಭಾವವನ್ನು ಬೀರಿದ್ದಾನೆ. ಕೆಲವು ಗ್ರಾಮದಲ್ಲಿ ಇಂದಿಗೂ ಪ್ರಚಲಿತವಿರುವ ಮೋನಪ್ಪಯ್ಯನ ಮಂದಿರಗಳ ಛಾಯಾಚಿತ್ರವನ್ನು ಕೊಟ್ಟಿದ್ದಾರೆ.

'ವಚನಾಧ್ಯಯನ' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನ ವಚನಗಳ ಪರಂಪರೆ, ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಲಾಗಿದೆ. ವಚನಕಾರರ ಪರಂಪರೆಯಲ್ಲಿ ಮೋನಪ್ಪಯ್ಯ, ಸರ್ವಜ್ಞನ ಪರಂಪರೆಯಲ್ಲಿ ಮೋನಪ್ಪಯ್ಯ, ಕಾಲಜ್ಞಾನವಚನಗಳು, ವಚನಾಂಕಿತ, ವಚನರೂಪ, ವಚನಗಳಲ್ಲಿ ತತ್ವ ಹಾಗೂ ಸಮಾಜದರ್ಶನ ಎಂದು ವಿಭಾಗಿಸಿ ಸಮಗ್ರವಾಗಿ ವಿವೇಚಿಸಿದ್ದಾರೆ. ವಚನಗಳಲ್ಲಿ ಪ್ರತಿಪಾದನೆಗೊಂಡಿರುವ ಕಾಯಕ, ಸಮಾನತೆ, ಏಕದೇವೋಪಾಸನೆ, ಸರಳತೆ ಸದಾಚಾರ, ವೇದ, ಶಾಸ್ತ್ರ–ಪುರಾಣ, ಜಪ–ತಪ, ಶೀಲ, ಅರಸು–ಅರಸೊತ್ತಿಗೆ, ಮೂಢನಂಬಿಕೆಗಳ ಖಂಡನೆ, ಜಾತಿವ್ಯವಸ್ಥೆ, ನೀತಿಬೋಧೆ ಮೊದಲಾದವುಗಳನ್ನು ಪರಿಚಯಿಸಿದ್ದಾರೆ.

'ಜಾತ್ರೆ–ಆರಾಧನೆ ಮತ್ತು ಆಚರಣೆಗಳು' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನ ಹೆಸರಿನಲ್ಲಿ ನಡೆಯುವ ಜಾತ್ರೆ, ಆರಾಧನೆ, ಆಚಾರಗಳನ್ನು ಕುರಿತು ಪರಿಶೀಲಿಸಲಾಗಿದೆ. ತಿಂಥಿಣಿ, ಗೋನಾಳ, ವರವಿ, ಲಿಂಗನಬಂಡಿ ಗ್ರಾಮಗಳಲ್ಲಿ ಜರುಗುವ ಮಳೆ ದೇವರಪೂಜೆ, ಮೋಹರಂ ಆಚರಣೆ, ಬನ್ನಿ, ಆಯುಧಪೂಜೆ, ಛಟ್ಟಿಪೂಜೆ ಸಂಕ್ರಮಣದ ಆಚರಣೆಗಳನ್ನು ಸಂಶೋಧಕರು ಚಿತ್ರಿಸಿದ್ದಾರೆ. ತಿಂಥಿಣಿಯಲ್ಲಿ ಜರುಗುವ ೯ ದಿನಗಳ ಜಾತ್ರೆಯ ಆಚರಣೆ–ಆರಾಧನೆಯನ್ನು ಕ್ಷೇತ್ರಕಾರ್ಯದ ಮುಖಾಂತರ ನಿರೂಪಿಸಿದ್ದಾರೆ. ಇಲ್ಲಿ ಮೋನಪ್ಪಯ್ಯನು ಸಮಾಜದ ಮೇಲೆ ಬೀರಿದ ಧಾರ್ಮಿಕ–ಸಾಂಸ್ಕೃತಿಕ ಪ್ರಭಾವಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಇಂಥ ಆರಾಧನೆ–ಆಚರಣೆಗಳ ಮುಖಾಂತರ ಮೋನಪ್ಪಯ್ಯನ ವ್ಯಕ್ತಿತ್ವ ಮತ್ತು ಅವನು ಬೋಧಿಸಿದ ತತ್ವಗಳು ಜೀವಂತವಾಗಿರುವದನ್ನು, ಜನರು ಅವುಗಳನ್ನು ಮುನ್ನಡೆಸಿಕೊಂಡು ಬಂದಿರುವದನ್ನು ಇಲ್ಲಿ ಹೇಳಲಾಗಿದೆ.

'ಮಠ, ಮಂದಿರ ಮತ್ತು ವಾಸ್ತುಶಿಲ್ಪ' ಎಂಬ ಅಧ್ಯಾಯದಲ್ಲಿ ಮೋನಪ್ಪಯ್ಯನ ಹೆಸರಿನಲ್ಲಿರುವ ಮಠ–ಮಂದಿರ ಮತ್ತು ಅವುಗಳ ವಾಸ್ತುಶಿಲ್ಪ, ವಿನ್ಯಾಸವನ್ನು ಕುರಿತು ಡಾ. ಪಡರಟ್ಟಿಯುವರು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ತಿಂಥಿಣಿ ಮಂದಿರದ ಸ್ಥಾಪನೆಯ ಕಾಲ, ಅದರ ವಾಸ್ತುಶಿಲ್ಪಿ, ಅದು ಹಿಂದೂ–ಮುಸ್ಲಿಂರ ಸಮನ್ವಯದ ಪ್ರತೀಕವಾಗಿರುವದನ್ನು ಸ್ಪಷ್ಟಪಡಿಸಿದ್ದಾರೆ.

'ಪಂಥ ಮತ್ತು ಪ್ರಭಾವ' ಎಂಬ ಅಧ್ಯಾಯದಲ್ಲಿ ಶಿವಶರಣರ ತಾತ್ವಿಕ ಅಂಶಗಳನ್ನು, ಸೂಫಿಸಂತರ ತತ್ವಗಳನ್ನು ಮೋನಪ್ಪಯ್ಯ ಮೇಳವಿಸಿಕೊಂಡಿರುವದನ್ನು ಜನಪದ ಹಾಡು–ಪುರಾಣ–ಕಾವ್ಯ–ವಚನಗಳ ಮುಖಾಂತರ ವಿವರಿಸಿ, ಮೋನಪ್ಪಯ್ಯ–ತನ್ನದೇ ಆದ ಸಮನ್ವಯ ಪಂಥ' ವನ್ನು ರೂಪಿಸಿಕೊಂಡಿದ್ದಾನೆ ಎಂದು ಹೇಳಿದ್ದಾರೆ. ಅನುಬಂಧದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಗ್ರಂಥಗಳನ್ನು, ಜನಪದ ಹಾಡುಗಳನ್ನು ಹಾಡಿದವರ ಹೆಸರುಗಳನ್ನು ಸಂಗ್ರಹಿಸಿದ್ದಾರೆ.

ಸಂಶೋಧಕರ ವ್ಯಾಪಕ ಸಾಮಗ್ರಿ ಸಂಗ್ರಹ, ಆಳವಾದ ಅಧ್ಯಯನ, ಪರಿಶ್ರಮ, ಪ್ರಾಮಾಣಿಕ ನಿರೂಪಣೆ, ಸಂಶೋಧನ ನಿಷ್ಠೆ ಮೊದಲಾದವು– ಈ ಪ್ರಬಂಧದಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ಇಂಥ ಮೌಲಿಕ ಗ್ರಂಥವನ್ನು ಕನ್ನಡ ಸಾಹಿತ್ಯಲೋಕಕ್ಕೆ ಅರ್ಪಿಸಿದ ಡಾ.ಪಡಸಟ್ಟಿ ಅವರು, ಈ ಕೃತಿಯನ್ನು ಪ್ರಕಟಿಸಿದ ಗದುಗಿನ ವೀರಶೈವ ಅಧ್ಯಯನ ಸಂಸ್ಥೆಯವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

–ಎಫ್.ಟಿ. ಹಳ್ಳಿಕೇರಿ

ಶರಣರ ಬಂಡಾಯದ ವಚನಗಳು

ಸಂಪಾದಕರು : ಡಾ. ಬಸವರಾಜ ಸಬರದ

ಪ್ರಕಾಶಕರು : ಯುವ ಹಿರಿಯ ವಿದ್ಯಾರ್ಥಿ ಸಂಘ
ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ
ಸಿರಿಗೆರೆ. ೧೯೯೧, ಪು XIV + ೧೮–೧೮೬; ಬೆಲೆ : ೩೫ ರೂ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮೊದಲು ಬಂಡಾಯದ ಕಹಳೆಯನ್ನು ಊದಿದವರು ಹನ್ನೆರಡನೆಯ ಶತಮಾನದ ಶಿವಶರಣ ಶರಣೆಯರು. ಅವರ ಧ್ವನಿ ಇಂದಿಗೂ ಅಮರ; ಅಜರಾಮರ. ಸಮಕಾಲೀನ ಸಮಾಜದಲ್ಲಿ ನಡೆಯುವ ಸಾಮಾಜಿಕ ಅನ್ಯಾಯ ಅಸಮಾನತೆ, ಮೇಲು– ಕೀಳು ಮುಂತಾದ ಅಸಾಂಗತ್ಯಗಳ ವಿರುದ್ಧ ಪ್ರಥಮವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು ಸಮಾಜಸುಧಾರಣೆಯನ್ನು ತಮ್ಮ ಮೊದಲ ಕರ್ತವ್ಯವಾಗಿ ಸ್ವೀಕರಿಸಿದರು. ಆ ಕಾರಣದಿಂದ ಜನಪರ ನಿಲುವು ಸಾಹಿತ್ಯರಂಗವನ್ನು ಪ್ರವೇಶಿಸಿತು.

ಶಿವಶರಣರು ನೇರವಾಗಿ ತಾವು ಸಮಾಜದಲ್ಲಿಯ ಅಸಮಾನತೆ, ಅನ್ಯಾಯ, ಶೋಷಣೆ ಅಸ್ಪೃಶ್ಯತೆಯ ವಿರುದ್ಧ ಬಂಡಾಯ ಸಾಹಿತ್ಯವನ್ನು ನಿರ್ಮಿಸುತ್ತೇವೆ ಎಂದು ಎಲ್ಲಿಯೂ ಹೇಳಿದಂತಿಲ್ಲ. ಕಾಯಕದಲ್ಲಿ ನಿರತರಾಗಿ ಸಮಾಜದ ಆಗು–ಹೋಗುಗಳನ್ನು ಅರಿತು, ಅದರಲ್ಲಿ ಕಂಡುಬಂದ ಲೋಪ–ದೋಷಗಳ ನಿವಾರಣೆಗೆ ಅಗತ್ಯವಾದ ಅಸ್ತ್ರ ಮತ್ತು ಅದು ಪರಿಹಾರವಾಗಬೇಕಾದರೆ ಕೈಕೊಳ್ಳಬೇಕಾದ ಉಪಾಯಗಳನ್ನು ಕುರಿತು ಸೂಕ್ಷ್ಮವಾಗಿ ಅರಿತರು ,ಆಲೋಚಿಸಿದರು. ಅವರ ಅಂತರಂಗದ ಅನುಭವದ ಫಲವಾಗಿ ಸಮಾಜಸುಧಾರಣೆಯ ದೃಷ್ಟಿಯಿಂದ ಪ್ರತಿಕ್ರಿಯಿಸಿದ ನುಡಿಮುತ್ತುಗಳೆ ವಚನಗಳೆಂದು ಪ್ರಸಿದ್ಧಿಪಡೆದವು. ಅನೇಕ ವಚನಕಾರರ ನುಡಿಗಳಲ್ಲಿ ಬಂಡಾಯದ ಕಿಡಿಗಳು ಸಿಡಿದಿವೆ. ಇಂದಿನ ಬಂಡಾಯ ಸಾಹಿತ್ಯದ ಮೂಲವನ್ನು ನಾವು ಶರಣರ ಇಂಥ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಇದಕ್ಕೆ ಪ್ರಸ್ತುತ ಕೃತಿ ಸಾಕ್ಷಿ ನುಡಿಯುತ್ತದೆ.

"ಶರಣರ ಬಂಡಾಯದ ವಚನಗಳು" ಶಿವಶರಣರ ಬಂಡಾಯ ಮನೋಧರ್ಮದ ಸ್ವರೂಪವನ್ನು ತಿಳಿಯಪಡಿಸುವ ಒಂದು ಪ್ರಮುಖ ಕೃತಿಯಾಗಿದೆ. ೩೦ ಶಿವಶರಣರ–ಶರಣೆಯರ ಸು. ೩೨೦ ವಚನಗಳು ಇಲ್ಲಿ ಸಂಗ್ರಹವಾಗಿವೆ. ಈ ವಚನಗಳಲ್ಲಿ ಶರಣರ ನಿಲುವು, ಅವರ ವಿಚಾರಧಾರೆ, ಅವರ ಪ್ರಯೋಗಶೀಲ ಮನಸ್ಸುಗಳು ಪ್ರತಿಬಿಂಬಿತವಾಗಿವೆ. ದೇವರದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ ಹಾಗೂ ಅಕ್ಕಮಹಾದೇವಿಯವರ ವಚನಗಳಂತೂ ಸಮಾಜಕ್ಕೆ ಎಸೆದ ಸವಾಲಿನಂತಿವೆ. ಸಮಾಜದಲ್ಲಿ ಸರ್ವಸಮಾನತೆಯನ್ನು ಕಾಣುವುದು ವಚನಕಾರರ ಮೂಲಧ್ಯೇಯವಾಗಿತ್ತು. ಹೀಗಾಗಿ ಸಾಹಿತ್ಯವನ್ನು ಪಂಡಿತ ಮಾನ್ಯತೆಯಿಂದ ಕೆಳಗಿಳಿಸಿ ಜನಸಾಮಾನ್ಯರಿಗೆ ಮುಟ್ಟುವಂತೆ ಮಾಡಿ ಕ್ರಿಯಾಶೀಲತೆಯನ್ನು ಜನಮನದಲ್ಲಿ ಬಿಂಬಿಸಿದರು. ಉದಾಹರಣೆಗಾಗಿ ಕೆಲವು ವಚನಗಳನ್ನು ಗಮನಿಸಬಹುದು.

"ಕೀಳು ಡೋಹರಕಕ್ಕ, ಕೀಳು ಮಾದರ ಚೆನ್ನ,
ಕೀಳು ಓಹಿಲದೇವ, ಕೀಳು ಉದ್ಭಟಯ್ಯಾ,
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ"

ಎಂದು ಜೇಡರ ದಾಸಿಮಯ್ಯ ಅಂದಿನ ಸಮಾಜದಲ್ಲಿ ಬೇರುಬಿಟ್ಟದ್ದ ಮೇಲು–ಕೀಳು, ಉಚ್ಚ ನೀಚ ಎಂಬ ಸಮಸ್ಯೆಯನ್ನು ಎತ್ತಿಕೊಂಡು ದೇವಸೃಷ್ಟಿಯಲ್ಲಿ ಯಾವುದೂ ಕೀಳಲ್ಲ ಎಂದು ದೀನದಲಿತರನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದ್ದಾನೆ.

ಶಿವಶರಣರಲ್ಲಿಯೇ ವಿಶೇಷ ಗೌರವಕ್ಕೆ ಪಾತ್ರನಾದ ಅಲ್ಲಮಪ್ರಭುದೇವರ ದೃಷ್ಟಿ ಮಾನವ ಮೂಲತಃ ಆಶೆಯನ್ನು ತೊರೆಯಬೇಕು; ಹೆಣ್ಣು, ಮಣ್ಣು, ಹೊನ್ನುಗಳ ವ್ಯಾಮೋಹಕ್ಕೆ ಬಿಡಬೇಕು; ಅರಿಷಡ್ವರ್ಗಗಳಿಂದ ದೂರವಿದ್ದು ನಿರ್ಮಲವಾದ ಸಮಾಜವನ್ನು ರೂಪಿಸಿಕೊಂಡು ಸರ್ವಸಮಾನತೆಯ ಜೀವನ ನಡೆಸಬೇಕು ಎಂಬುದರ ಕಡೆಗಿದೆ.

ತನು ಬತ್ತಲೆಯಿದ್ದಡೇನೋ
ಮನ ಶುಚಿಯಾಗದನ್ನಕ್ಕರ?
ಮಂಡೆ ಬೋಳಾದಡೇನೋ
ಭಾವ ಬಯಲಾಗದನ್ನಕ್ಕರ?
ಭಸ್ಮವ ಪೂಸಿದಡೇನೋ
ಕರಣಾದಿ ಗುಣಂಗಳನೊತ್ತಿ, ಮೆಟ್ಟಿ ಸುಡದನ್ನಕ್ಕರ?
ಇಂತೀ ಆಶೆಯ–ವೇಷದ ಭಾಷೆಗೆ
ಗುಹೇಶ್ವರ, ನೀ ಸಾಕ್ಷಿಯಾಗಿ ಛೀಯೆಂಬೇನು.

ಪ್ರಭುವಿನ ಮೌಲ್ಯಾತ್ಮಕವಾದ ಈ ಮಾತುಗಳು ಅತ್ಯಂತ ಸರಳವಾಗಿವೆ. ಇಲ್ಲಿನ ವಿಚಾರಗಳು ಮೇಲ್ನೋಟಕ್ಕೆ ಸರಳವೆಂದು ಕಂಡರೂ ಅವುಗಳ ಅಂತರಾರ್ಥ ತುಂಬ ಗಹನವಾದುದು.

ತಮ್ಮ ಪ್ರಖರವಾದ ಕ್ರಾಂತಿಕಾರಕ ವಿಚಾರಧಾರೆಯಿಂದ ಜನಮನವನ್ನು ಗೆದ್ದವರು ಬಸವಣ್ಣನವರು. ಹನ್ನೆರಡನೆಯ ಶತಮಾನದ ಕ್ರಾಂತಿಯ ನೇತರನಾಗಿ, ಬಿಜ್ಜಳನ ಮಂತ್ರಿಯಾಗಿ, ಸಮಾಜದಲ್ಲಿ ನಡೆಯುವ ಅನ್ಯಾಯ,ಅತ್ಯಾಚಾರ, ಮೇಲು–ಕೀಳು ಜಾತಿಸಮಸ್ಯೆ ಇನ್ನೂ ಹಲವು ಹತ್ತು ವಿಷಯಗಳ ಬಗೆಗೆ ಆಳವಾಗಿ ಚಿಂತಿಸಿ ಸಮಾನತೆಯೇ ಸರ್ವರ ಉದ್ಧಾರವೆಂದು ಬಗೆದು ಅದಕ್ಕಾಗಿ ಕಂಕಣಬದ್ಧರಾಗಿ ನಿಂತರು.

ಕುದುರೆ ಸತ್ತಿಗೆಯವರ ಕಂಡಡೆ ಹೊರಳಿ ಬಿದ್ದು ಕಾಲ ಹಿಡಿವರು
ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸನ್ನಿಯೆಂಬರು.
ಎನ್ನೊಡೆಯ ಕೂಡಲಸಂಗವಯ್ಯನವರ
ಕಡುಗೆಡಹಿ ಮೂಗು ಕೊಯ್ಯದೆ ಮಾಣ್ಬನೆ?

ಈ ವಚನ ಅಂದು ಸಮಾಜದಲ್ಲಿ ಭೂತಾಕಾರ ತಾಳಿ ನಿಂತಿದ್ದ ಮೇಲು–ಕೀಳು, ಉಚ್ಚ–ನೀಚ ಎಂಬ ಜಾತಿಭೇದವನ್ನು ಬೇರುಸಹಿತ ಕಿತ್ತೆಸೆದ ಪ್ರತೀಕವಾಗಿದೆ. ಅವರು ನೆರವೇರಿಸಿದ ಅಂತರ್ ಜಾತೀಯ ವಿವಾಹವಂತೂ ಬಹುದೊಡ್ಡ ಘಟನೆಯಾಗಿದೆ.

"ದಾಸೀ ಪುತ್ರನಾಗಲೀ ವೇಶ್ಯಾಪುತ್ರನಾಗಲೀ
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ"

ಎಂಬಂತಹ ಮಾತುಗಳಂತೂ ಬಸವಣ್ಣನವರ ವಿಶಾಲಮನೋಭಾವ, ಸಮತಾ ದೃಷ್ಟಿಯ ದ್ಯೋತಕವಾಗಿದೆ.

ಇವರಂತೆ ಚೆನ್ನಬಸವಣ್ಣನವರೂ ಜಾತಿಸಮಸ್ಯೆಯ ವಿರುದ್ಧ ಬಂಡೆದ್ದ ರೀತಿ ಕೆಳಗಿನ ವಚನದಲ್ಲಿ ಮೂಡಿನಿಂತಿದೆ:

"ಬ್ರಾಹ್ಮಣ ಭಕ್ತನಾದಡೇನಯ್ಯಾ, ಸೂತಕ ಪಾತಕಂಗಳ ಬಿಡದನ್ನಕ್ಕ?
ಕ್ಷತ್ರಿಯ ಭಕ್ತನಾದಡೇನಯ್ಯಾ, ಕ್ರೋಧ ಹಿಂಸೆಯ ಬಿಡದನ್ನಕ್ಕ?
ವೈಶ್ಯ ಭಕ್ತನಾದಡೇನಯ್ಯಾ, ಕಪಟ, ಸುಳ್ಳು ಬಿಡದನ್ನಕ್ಕ?
ಶೂದ್ರ ಭಕ್ಕನಾದಡೇನಯ್ಯಾ, ಸ್ವಜಾತಿಯೆಂಬುದು ಬಿಡದನ್ನಕ್ಕ?
ಇಂತೀ ಜಾತಿ ಡಂಭಕರ ಮೆಚ್ಚುವನೇ
ಕೂಡಲಚೆನ್ನಸಂಗಮದೇವ?

ಹೀಗೆ ಸಮಕಾಲಿನ ವಿಚಾರಕ್ಕೆ ಒತ್ತು ನೀಡಿದ ಚೆನ್ನಬಸವಣ್ಣನವರು ಸಮಾಜದ ಆವಿಷ್ಕಾರಕ್ಕೆ ಪ್ರಯತ್ನಿಸಿದರು. ಕಾಯಕಯೋಗಿ ಸಿದ್ಧರಾಮ–

"ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೊ,
ಕುಲವೇ ವ್ಯಾಸನು? ಕುಲವೇ ದುರ್ವಾಸನು?
ಕುಲವೇ ವಾಲ್ಮೀಕನು? ಕುಲವೇ ಕೌಂಡಿಲ್ಯನು?
ಕುಲವ ನೋಳ್ಪಡೆ ಹುರುಳಿಲ್ಲ,
ಅವರ ನಡೆ–ನೋಳ್ಪಡೆ ನಡೆಯುವವರು ತ್ರಿಲೋಕದಲ್ಲಿಲ್ಲ
ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ....."
"ಸಮದೃಷ್ಟಿಯಾಗದವನ ಭಕ್ತನೆಂತೆಂಬೆ?
ವಿಷಯಂಗಳಳಿಯದವನ ಮಹೇಶನೆಂತೆಂಬೆ?......"

ಎಂದು ಹೇಳುವುದರ ಮೂಲಕ ಬಂಡಾಯದ ಕಹಳೆಯನ್ನು ಊದಿ ಸಮಾಜದಲ್ಲಿ ಸಮಾನತೆಯ ಪ್ರಜ್ಞೆ ಮೂಡಿಸಲು ಶ್ರಮಿಸಿದವರಲ್ಲಿ ತಾನೂ ಒಬ್ಬನೆನಿಸಿದ್ದಾನೆ.

ಅಂಬಿಗರ ಚೌಡಯ್ಯನ ವಚನಗಳಂತೂ ಹರಿತವಾದ ಖಡ್ಗಸಮಾನವಾದವು. ಅವನ ಒಂದೊಂದು ಮಾತುಗಳು ಸಮಾಜಕ್ಕೆ ಕೊಟ್ಟ ಚಾಟಿ ಏಟುಗಳಾಗಿವೆ. ಕಲ್ಲು ಮಣ್ಣು ಮರಗಳನ್ನು ದೇವರೆಂದು ಆರಾಧಿಸುವವರನ್ನು ಆತ ಟೀಕಿಸುವ ರೀತಿ ಹೀಗಿದೆ:

"ಕಲ್ಲದೇವರ ಪೂಜೆಯ ಮಾಡಿ
ಕಲಿಯುಗದ ಕತ್ತೆಗಳಾಗಿ ಹುಟ್ಟಿದರು.
ಮಣ್ಣದೇವರ ಪೂಜಿಸಿ–ಮಾನಹೀನರಾದರು.
ದೇವರ ಪೂಜಿಸಿ ಸ್ವರ್ಗಕ್ಕೆಂದೇ ಹೋದರು.
ಜಗದ್ಭರಿತನಾದ ಪರಶಿವನೊಳಗೆ ಕಿಂಕರನಾದ
ಶಿವಭಕ್ತನೇ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ."

ಸ್ತ್ರೀಕುಲದ ಪ್ರತಿನಿಧಿ ಎನಿಸಿದ ವೀರ–ವೀರಾಗಿಣಿ, ಕನ್ನಡದ ಪ್ರಥಮ ಕವಯಿತ್ರಿ ಅಕ್ಕಮಹಾದೇವಿ ಸಂಸಾರ, ಸಮಾಜದ ಬಗೆಗೆ ಎತ್ತಿದ ಬಂಡಾಯದ ಧ್ವನಿ ಪುರುಷರಿಗಿಂತ ಮಿಗಿಲಾದುದು. ಅರಿಷಡ್ವರ್ಗಗಳಿಗೆ ಈಡಾಗಿ ಶೀಲವೆಂದು ನುಡಿವವರನ್ನು ವಿಡಂಬಿಸಿದ ರೀತಿ ತುಂಬ ಮಾರ್ಮಿಕವಾಗಿದೆ:

ಶೀಲಶೀಲವೆಂಬಿರಯ್ಯಾ;
ಶೀಲದ ನೆಲೆಯ ಬಲ್ಲಡೆ ಹೇಳಿರೋ, ಅರಿಯದಿದ್ದಡೆ ಕೇಳಿರೊ.
ಕಾಮ ಒಂದನೆಯಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮತ್ಸರ ಆರನೆಯ ಭವಿ,
ಆಮಿಷ ಏಳನೆಯ ಭವಿ.
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು
ಲಿಂಗವಿಲ್ಲದವರ ಭವಿ ಭವಿ ಎಂಬಿರಿ
ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯ ಪ್ರಸಾದಿಗಳೆಂದು
ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ
ಹಗಲುಗಳ್ಳರ ಮೆಚ್ಚುವನೆ ಚನ್ನಮಲ್ಲಿಕಾರ್ಜುನ?

ಹೀಗೆ ಬಸವಣ್ಣ, ಪ್ರಭುದೇವ, ಸಿದ್ಧರಾಮ ಮುಂತಾದ ಪ್ರಮುಖರಂತೆ ಕೋಲಶಾಂತಯ್ಯ, ನುಲಿಯ ಚಂದಯ್ಯ, ಆದಯ್ಯ, ಗುಪ್ತಮಂಚಣ್ಣ, ನಗೆಯ ಮಾರಿತಂದೆ, ಸೊಡ್ಡಳ ಬಾಚರಸ, ಹಾವಿನಾಳ ಕಲ್ಲಯ್ಯ, ಮಡಿವಾಳ ಮಾಚಿದೇವ, ಹೆಂಡದ ಮಾರಯ್ಯ, ಮಾದಾರಚೆನ್ನಯ್ಯ, ಲಿಂಗಮ್ಮ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಅಕ್ಕಮ್ಮ, ಅಮುಗೆರಾಯಮ್ಮ ಮುಂತಾದ ಅಸಂಖ್ಯಾತ ಶಿವಶರಣ ಶರಣೆಯರು ಸಮಾಜದ ಒಳಿತಿಗಾಗಿ ಕೈಕೊಂಡ ಬಂಡಾಯ ಅಪೂರ್ವವಾದುದು. ಆ ಬಂಡಾಯದ ಕಿಡಿಗಳೆನಿಸಿದ ವಚನಗಳ ಸಂಗ್ರಹವೇ ಈ ಕೃತಿಯಾಗಿದೆ. ಶರಣರ ವಿಚಾರಗಳು ಸೀಮಿತವಾದ ಕ್ಷೇತ್ರಕ್ಕೆ ಸಂಬಂಧಿಸದೆ ಸಾರ್ವಕಾಲಿಕ ಮೌಲ್ಯವನ್ನು ಪ್ರತಿಬಿಂಬಿಸುತ್ತವೆ. ಕಾರಣ ಅವು ಇಂದಿಗೂ ನವೀನತೆಯಿಂದ ಕೂಡಿವೆ. ಈ ಕಾರಣದಿಂದ ಹನ್ನೆರಡನೆಯ ಶತಮಾನದ ಶಿವಶರಣರು ನೀಡಿದ ಕಾಣಿಕೆಯು ವಿಶ್ವಸಾಹಿತ್ಯ ಸಮುದಾಯಕ್ಕೆ ಒಂದು ಅಮೂಲ್ಯ ವರವಾಗಿ

ಪರಿಣಮಿಸಿದೆ. ಸಮಕಾಲೀನತೆಯೊಂದಿಗೆ ಸಾರ್ವಕಾಲಿಕವಾಗಿ ಬಾಳಬಲ್ಲ ಇಂಥ ಶರಣರ ಬಂಡಾಯದ ನುಡಿಗಳನ್ನು ಒಂದೆಡೆ ಸಂಗ್ರಹಿಸಿ ತುಂಬ ಬೆಲೆಯುಳ್ಳ ಕಾರ್ಯವನ್ನು ಮಾಡಿದ ಡಾ. ಬಸವರಾಜ ಸಬರದ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

–ಡಾ. ಬಿ. ವ್ಹಿ. ಯಕ್ಕುಂಡಿಮಠ

□ □

ಪ್ರಸ್ತುತ

೧೯೯೨ 'ಕರ್ನಾಟಕ ಭಾರತಿ' ಯ ರಜತೋತ್ಸವ ವರ್ಷ. ಈ ಶುಭ ಸಂದರ್ಭದಲ್ಲಿ ಈ ವರ್ಷದ ಪ್ರಥಮ ಸಂಚಿಕೆಯನ್ನು ಮಾಸ್ತಿ ಅವರ ಜನ್ಮ ಶತಮಾನೋತ್ಸವ ವಿಶೇಷಾಂಕವಾಗಿ ಹೊರತರಲು ನಮಗೆ ಹೆಮ್ಮೆಯೆನಿಸುತ್ತದೆ. 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ತಮ್ಮ ಉಜ್ವಲ ಪ್ರತಿಭೆ, ಉನ್ನತ ವಿದ್ವತ್ತು, ವಿಶಿಷ್ಟ ವ್ಯಕ್ತಿತ್ವ, ಮೌಲಿಕ ಸಾಹಿತ್ಯ ಸೃಷ್ಟಿಯಿಂದ ಕನ್ನಡದ ಅಪೂರ್ವ ಸಾಂಸ್ಕೃತಿಕ ಆಸ್ತಿ ಎನಿಸಿದ್ದಾರೆ. ಅವರ ಅಮೂಲ್ಯವಾದ ಕನ್ನಡ ನಾಡು-ನುಡಿ-ಸಂಸ್ಕೃತಿಗಳ ಸೇವೆಯನ್ನು ಗಮನಿಸಿ ಕನ್ನಡಿಗರು ಉನ್ನತ ಪ್ರಶಸ್ತಿ–ಪದವಿಗಳನ್ನು ಇತ್ತು ಗೌರವಿಸಿದ್ದಾರೆ. ಭಾರತೀಯ ಜ್ಞಾನಪೀಠ ಪ್ರಶಸ್ತಿ ಅವರಿಗೆ ಸಂದ ಅಗ್ರಮಾನ್ಯ ಪುರಸ್ಕಾರವೆನಿಸಿದೆ. ಇಂಥ ಕನ್ನಡದ ಸತ್ಪುತ್ರನಿಗೆ ೧೯೫೬ ರಲ್ಲಿ ಗೌರವ ಡಿಲಿಟ್. ಪದವಿಯಿತ್ತು ಸನ್ಮಾನಿಸಿದ ಕರ್ನಾಟಕ ವಿಶ್ವವಿದ್ಯಾಲಯ, ಇಂದು ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅವರ ಜೀವನ, ಸಾಹಿತ್ಯ ವಿಮರ್ಶೆ-ಯನ್ನೊಳಗೊಂಡ ವಿಶೇಷಾಂಕವೊಂದನ್ನು ಹೊರತರುತ್ತಿರುವುದು ಅವರ ಬಗೆಗಿನ ಅಭಿಮಾನದ ದ್ಯೋತಕವೆನಿಸಿದೆ.

ಅಭಿನಂದನೆ

ಮಹಾಮೇಧಾವಿಗಳೂ, ಉಜ್ವಲ ರಾಷ್ಟ್ರಭಕ್ತರೂ, ರಾಜಕೀಯ ಮುತ್ಸದ್ದಿಗಳೂ ಆದ ಡಾ. ಶಂಕರ ದಯಾಳ ಶರ್ಮಾ ಅವರು ಭಾರತದ ಒಂಬತ್ತನೆಯ ರಾಷ್ಟ್ರ-ಪತಿಯಾಗಿ ಆಯ್ಕೆಯಾದುದಕ್ಕೆ (೧೬-೭-೧೯೯೨) 'ಭಾರತಿ' ಹಾರ್ದಿಕ ಅಭಿನಂದನೆ ಸಲ್ಲಿಸುವುದರ ಜೊತೆಗೆ ಇವರ ಅಧಿಕಾರಾವಧಿಯಲ್ಲಿ ರಾಷ್ಟ್ರದ ಜ್ವಲಂತ ಸಮಸ್ಯೆಗಳಿಗೆಲ್ಲ ಯೋಗ್ಯ ಪರಿಹಾರ ದೊರೆತು ಸತ್ಯ–ಶಾಂತಿ–ಸೌಹಾರ್ದಗಳು ನಾಡಿನಲ್ಲಿ ನೆಲೆಸುವಂತಾಗಲಿ ಎಂಬ ಸದಾಶಯವನ್ನು ವ್ಯಕ್ತಪಡಿಸುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ

ಕನ್ನಡಿಗರ ಬಹುದಿನಗಳ ಕನಸಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯ ೨೬-೬-೯೨ ರಂದು ಅಸ್ತಿತ್ವಕ್ಕೆ ಬಂದುದು ಸಂತೋಷದ ಸಂಗತಿ. ಕನ್ನಡ–ನಾಡು–ನುಡಿ–ಸಂಸ್ಕೃತಿಗಳ ಸಂಶೋಧನೆ–ಅಧ್ಯಯನಗಳ ಸರ್ವಾಂಗೀಣ ಪ್ರಗತಿಯ ಘನವಾದ ಉದ್ದೇಶವನ್ನಿಟ್ಟುಕೊಂಡು ಹುಟ್ಟಿದ ಇದು ಅರ್ಥಪೂರ್ಣ ಯೋಜನೆ-ಗಳನ್ನು ಹಮ್ಮಿಕೊಂಡು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸುವುದರ ಮೂಲಕ ತನ್ನ ಕಾರ್ಯಕ್ಷಮತೆಯನ್ನು ಪ್ರಕಟಿಸಿ ದೇಶದಲ್ಲಿಯೇ ಒಂದು ಮಾದರಿಯ ವಿಶ್ವವಿದ್ಯಾಲಯ-ವೆನಿಸುವಂತಾಗಲಿ ಎಂದು ಬಯಸುತ್ತ, ಇದರ ಪ್ರಥಮ ಕುಲಪತಿಗಳಾಗಿ ನೇಮಕಗೊಂಡ ಕನ್ನಡದ ಶ್ರೇಷ್ಠ ಕವಿ–ನಾಟಕಕಾರ–ಜಾನಪದ ವಿದ್ವಾಂಸ ಡಾ. ಚಂದ್ರಶೇಖರ ಕಂಬಾರ ಅವರನ್ನು 'ಭಾರತಿ' ಅಭಿಮಾನಪೂರ್ವಕವಾಗಿ ಅಭಿನಂದಿಸುತ್ತದೆ.

ಕಂಬನಿ

ಕನ್ನಡ ಅಧ್ಯಯನಪೀಠದ ರೂವಾರಿಗಳಲ್ಲಿ ಒಬ್ಬರೂ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜಾನಪದ ಅಧ್ಯಯನ, ಅಧ್ಯಾಪನ ಸಂಶೋಧನ ಹಾಗೂ ಪ್ರಕಟಣೆಗಳನ್ನು ಹುಟ್ಟುಹಾಕಿದ ಖ್ಯಾತ ಜಾನಪದ ವಿದ್ವಾಂಸರೂ ತಮ್ಮ ಹಾಸ್ಯ ಬರಹ ಭಾಷಣಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಹಾಸ್ಯಪ್ರಜ್ಞೆಯನ್ನು ಬೆಳೆಸಿದ ರಸಿಕರೂ, ಉತ್ತಮ ಪ್ರಾಧ್ಯಾಪಕರೂ, ಸಾತ್ವಿಕ ಸಹೃದಯಿಗಳೂ ಆದ ಡಾ.ಎಂ.ಎಸ್. ಸುಂಕಾಪುರ ಅವರ ೩೦-೬-೧೯೮೨ ರಂದು ಲಿಂಗೈಕ್ಯರಾದುದು ಕನ್ನಡ ಸಾರಸ್ವತ ಪ್ರಪಂಚಕ್ಕೆ, ಅಪಾರವಾದ ಬಂಧುಬಳಗ, ಶಿಷ್ಯ ಕೋಟಿಗೆ ತುಂಬಿಬಾರದ ಹಾನಿಯನ್ನೆಸಗಿದೆ. 'ಕರ್ನಾಟಕಭಾರತಿ'ಯ ಬೆಳವಣಿಗೆಗೆ ಕಾರಣವಾಗಿ, ಅನೇಕ ವರ್ಷ ಪ್ರಧಾನಸಂಪಾದಕರಾಗಿ ಪ್ರಮುಖಪಾತ್ರ ವಹಿಸಿದ ಡಾ. ಸುಂಕಾಪುರ ಅವರಿಗೆ 'ಭಾರತಿ' ಅಶ್ರುತುಂಬಿದ ಕಂಗಳಿಂದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಈ ಸಂಚಿಕೆಯಲ್ಲಿ ಡಾ. ಮಾಸ್ತಿ ಅವರ ಜೀವನ, ಸಾಹಿತ್ಯವನ್ನು ಕುರಿತ ಲೇಖನಗಳ ಜೊತೆಗೆ ಸಾಹಿತ್ಯ, ಸಂಶೋಧನೆ, ಶಾಸನ, ವ್ಯಾಕರಣ, ಭಾಷಾವಿಜ್ಞಾನ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಇತರ ಲೇಖನಗಳೂ ಸಮಾವೇಶಗೊಂಡಿವೆ ಈ ಲೇಖನಗಳನ್ನು ಬರೆದು ಕೊಟ್ಟ ಲೇಖಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

–ಸಂಪಾದಕರು

ಲೇಖಕರ ವಿಳಾಸ

* ಡಾ. ಜಿ. ಎಂ. ಹೆಗಡೆ
ಕನ್ನಡ ಅಧ್ಯಾಪಕರು
ಕಿಟಲ್ ಕಾಲೇಜು, ಧಾರವಾಡ

* ಡಾ. ಗಿರಡ್ಡಿ ಗೋವಿಂದರಾಜ
ಪ್ರವಾಚಕರು, ಇಂಗ್ಲಿಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಪ್ರೊ. ಕೀರ್ತಿನಾಥ ಕುರ್ತಕೋಟಿ
ನಿವೃತ್ತ ಇಂಗ್ಲಿಷ ಪ್ರಾಧ್ಯಾಪಕರು
ದೇಸಾಯಿ ಕಾಲನಿ, ಶ್ರೀನಗರ, ಧಾರವಾಡ

* ಡಾ. ಶಾಲಿನಿ ರಘುನಾಥ
ಅಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

* ಪ್ರೊ. ಅಶೋಕ ಶೆಟ್ಟರ
ಅಧ್ಯಾಪಕರು ,ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ
ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

* ಡಾ. ಎಚ್ .ಎಸ್. ಸುಜಾತಾ
೫೩, ಸುಹಾಸ, ೬ನೇ ಬ್ಲಾಕ್,
ಕುವೆಂಪುನಗರ, ಮೈಸೂರು

* ಪ್ರೊ. ಶಾಮಸುಂದರ ಬಿದರಕುಂದಿ
ಕನ್ನಡ ಅಧ್ಯಾಪಕರು,
ಕಾಮರ್ಸ ಕಾಲೇಜು, ಗದಗ

* ವೈಷ್ಣವಚರಣ ಮೈಸೂರ

* ಡಾ. ನಿಜಲಿಂಗಮ್ಮ ಕೊಪ್ಪಳ
ಪ್ರವಾಚಕರು, ಸಂಸ್ಕೃತ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಡಾ. ಎಸ್. ಪಿ. ಪಾಟೀಲ
ಪ್ರವಾಚಕರು, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಶ್ರೀಮತಿ ವಸಂತಕುಮಾರಿ
ಪ್ರವಾಚಕರು, ಇತಿಹಾಸ ವಿಭಾಗ,
ಮಹಾರಾಣಿ ಕಾಲೇಜು, ಮೈಸೂರು

* ಡಾ. ಎ. ಜಿ. ಗುರುಮೂರ್ತಿ
ಮುಖ್ಯಸ್ಥರು, ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಡಾ. ವೀರಣ್ಣ ರಾಜೂರು
ಪ್ರವಾಚಕರು, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಪ್ರೊ. ಗುಂಡಣ್ಣ ಕಲಬುರ್ಗಿ
ಕನ್ನಡ ಅಧ್ಯಾಪಕರು
ಪ್ರಥಮದರ್ಜೆ ಕಾಲೇಜು, ಮೂಡಲಗಿ

* ಸಿದ್ದರಾಜ ಪೂಜಾರಿ
'ವೈಶಾಲಿ' ಪಿ. ಜಿ. ಯಾದಪ್ಪನವರ
ಸಾರಸ್ವತಪುರ, ಧಾರವಾಡ-೩

* ಡಾ. ಎಸ್. ಧರಣೇಂದ್ರಯ್ಯ
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಮನೋವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಡಾ. ಎಂ.ಎಂ ಕಲಬುರ್ಗಿ
ಪ್ರಾಧ್ಯಾಪಕರು ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಶ್ರೀಮತಿ ಹನುಮಾಕ್ಷಿ ಗೋಗಿ
ಸಹಾಯಕ ನಿಬಂಧಕರು
ಸಹಕಾರಿ ಸಂಘಗಳ ಕಾರ್ಯಾಲಯ, ಹಾವೇರಿ,
ಜಿ. ಧಾರವಾಡ

* ಎಸ್.ಶಿವ ಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನ ಕೇಂದ್ರ 'ಜ್ಞಾನ ಭಾರತಿ'
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

* ಎಫ್. ಟಿ. ಹಳ್ಳಿಕೇರಿ
ಸಂಶೋಧನ ಸಹಾಯಕ, ಕನ್ನಡ
ವಿಶ್ವವಿದ್ಯಾಲಯ, ಹಂಪಿ-೫೮೩ ೨೦೧

* ಡಾ. ಬಿ. ವಿ. ಯಕ್ಕುಂಡಿಮಠ
ಅಧ್ಯಾಪಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

........o........

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಅಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ರೂ. ೪-೦೦

ಹಣವನ್ನು **ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ